॥ ಶ್ರೀಃ ॥

ತಿರುಪ್ಪಾವೈ ಹೃದಯಂ

(ಪ್ರಸಿದ್ಧ ಏಳು ವ್ಯಾಖ್ಯಾನಗಳ ಸಾರ ಮತ್ತು ಶ್ರೀಮದಾಂಡವನ್
ಅನುಗ್ರಹಿಸಿದ ವಿಶೇಷಾರ್ಥಗಳನ್ನೊಳಗೊಂಡ ತಿರುಪ್ಪಾವೈ
ಮೂವತ್ತು ಪದ್ಯಗಳ ಸಾರತಮಾರ್ಥ)

ಗ್ರಂಥಕರ್ತಾ :

ಎಸ್. ಸಂಪತ್ತೈಯ್ಯಂಗಾರ್, ಎಂ.ಎ.

(Retd. Principal, Sree Siddalingeswara Sanskrit College)

ಮುದ್ರಕರು :

ನವಭಾರತ್ ಪ್ರೆಸ್

ಶೇಷಾದ್ರಿಪುರಂ, ಬೆಂಗಳೂರು-20.

1-5-1967

Copy Right

ಬೆಲೆ : ೫ ರೂ

॥ ಶ್ರೀಃ ॥

ತಿರುಪ್ಪಾವೈ ಹೃದಯಂ

(ಪ್ರಸಿದ್ಧ ಏಳು ವ್ಯಾಖ್ಯಾನಗಳ ಸಾರ ಮತ್ತು ಶ್ರೀಮದಾಂಡವರ್ ಅನುಗ್ರಹಿಸಿದ ವಿಶೇಷಾರ್ಥಗಳನ್ನೊಳಗೊಂಡ ತಿರುಪ್ಪಾವೈ ಮೂವತ್ತು ಪದ್ಯಗಳ ಸಾರತಮಾರ್ಥ)

★

ಗ್ರಂಥಕರ್ತಾ :

ಎಸ್. ಸಂಪತ್ತೈಯ್ಯಂಗಾರ್, ಎಂ.ಎ.

(Retd. Principal, Sree Siddalingeswara Sanskrit College)

★

ಮುದ್ರಕರು :

ನವಭಾರತ್ ಪ್ರೆಸ್

ಶೇಷಾದ್ರಿಪುರಂ, ಬೆಂಗಳೂರು-20.

1-5-1967

ಬೆಲೆ : ೫ ರೂ.

ಸಮಸ್ತ ಹಕ್ಕನ್ನೂ ಕಾದಿಡಲಾಗಿದೆ

ಪುಸ್ತಕ ದೊರೆಯುವ ಸ್ಥಳ :

ಬೆಂಗಳೂರು

1) ಎಸ್. ಸಂಪತ್ತೈಯ್ಯಂಗಾರ್, ಎಂ.ಎ.
6, ಚಾಮರಾಜಪೇಟೆ, 6 ನೇ ರಸ್ತೆ, ಬೆಂಗಳೂರು–18

2) ಶ್ರೀ ಓ. ಸುದರ್ಶನಂ ಅಂಡ್ ಕೋ.
ಅವೆನ್ಯೂ ರೋಡ್, ಬೆಂಗಳೂರು–2

ಮೈಸೂರು

ವಿದ್ವಾ ಹೆಚ್. ಗೋಪಾಲಾಚಾರ್
1004, ಕಾಳಿದಾಸ್ ರೋಡ್
ವಾಣೀವಿಲಾಸ ಮೊಹಲ್ಲಾ
ಮೈಸೂರು

ಹಾಸನ

ವಿದ್ವಾ ಜಿ. ಆರ್. ಶ್ರೀನಿವಾಸ ದೇಶಿಕಾಚಾರ್
1490, ಪಾರ್ಕ್ ರೋಡ್, ಹಾಸನ

ಶಿವಮೊಗ್ಗ

ಹೆಚ್. ಕೆ. ಎನ್. ಆಚಾರ್ಯ, ಬಿ.ಎ., ಎಲ್ಎಲ್.ಬಿ.
ಅಡ್ವೊಕೇಟ್, ದುರ್ಗಿ ಗುಡಿ ಎಕ್ಸ್ಟೆನ್ಷನ್
ಶಿವಮೊಗ್ಗ

ಅರ್ಪಣೆ

ಆಸ್ತಿಕರೂ ವಿಶಿಷ್ಟಾದ್ವೈತ
ಸಿದ್ಧಾಂತಾನುಯಾಯಿಗಳೂ
ಮತ್ತು ಆ ಸಿದ್ಧಾಂತದ
ಅಭಿಮಾನಿಗಳೂ ಆದ ಭಾಗವ
ತರಿಗೆ ಅರ್ಪಿಸಲಾಗಿದೆ

ವಿಷಯ ಸೂಚಿಕೆ

ಸಂ.		ಪುಟ
1.	ಮುನ್ನುಡಿ	i–iv
2.	ಶ್ರೀಮತ್ ಶ್ರೀರಂಗಂ ಆಂಡವ್ವ ಅವರ ಪ್ರಶಸ್ತಿ ...	v–vi
3.	ಪ್ರಮಾಣಾಕರ	vii–ix
4.	ಪೀಠಿಕೆ	x–xli
5.	ಧ್ಯಾನ ಶ್ಲೋಕಗಳು	xli–xlvii
6.	ಮಂಗಳ ಪದ್ಯಗಳು	x–lviii
7.	ಗೋದಾ ಪದ್ಯ ವ್ಯಾಖ್ಯಾನ	
	i) ಮೊದಲಿನ 5 ಪದ್ಯಗಳು	1– 68
	ii) ಎರಡನೇ ,, ...	69–112
	iii) ಮೂರನೇ ,, ...	113–159
	iv) ನಾಲ್ಕನೇ ,, ...	160–209
	v) ಐದನೇ ,, ...	210–225
	iv) ಆರನೇ ,, ...	253–298
8.	ಟಪ್ಪಣಿ ,, ...	299–310

ಮುನ್ನುಡಿ

ಇದು ಧನುರ್ಮಾಸದಲ್ಲಿ ಗೋದೆಯು ದಿನವೊಂದಕ್ಕೆ ಒಂದರಂತೆ ಹೃದಯ ತುಂಬಿ ಹಾಡಿದ 30 ಪದ್ಯಗಳ ಹೃದಯ. ಹಾಡಿರುವಳವಳು ನಲಿದ ನೆನವಿನ ತುಟ್ಟತುದಿಯಲ್ಲಿ ಕೂತು. ಹಾಡಿದ್ದರಾಗಲೇ ಆರುಮುನಿಗಳು ಹೃದಯ ಗೀತವನು. ಕೂಡಿದ್ದರವರೊಡನೆ ಇವಳ ತಂದೆ ವಿಷ್ಣುಚಿತ್ತರು. ಅವರ ಹಿಂಬದಿಯಲ್ಲಿ ಹಾಡಿರುವುದಾದರೂ ಮುಂದೆ ನಿಂತಿರುವ ಪದ್ಯಗಳಿವು. ಕಂಡರಿದನು ರಾಮಾನುಜರು. ಕೂಡಿದವರಿಗೆ ಬಿಚ್ಚಿದರರ್ಥವನ್ನು. ಬೆಳೆದುಬಂತದು ಗುರುಗಳಲ್ಲಿ. ವೇದವೇದಾಂತ ತಿರಳು ಸೂಸುವ ಪುಟ್ಟಮಾತಾಗಿ ದಿಟ್ಟತನದಲಿ ನಿಂತಿದೆಯೀಗ. ಉಪನಿಷತ್ತುಗಳ ಜ್ಞಾನ ಬೆಳಕು ಪ್ರೇಮದಲಿ ನೆನೆದು ಭಾವಗೀತೆಯಾಗಿ ನಿಂತಿದೆ. ಅರಿವಾಳಿಗಳಿಗೆ ಅಕ್ಷಮಪಾತ್ರೆಯಿದು. ಒಬ್ಬರ ಸೊತ್ತಲವಿದು. ಸೂತ್ತಲೂ ನೋಡಲು ಸುಪ್ರಭಾತವಿದು. ಕಟ್ಟಹಾಕಲುಬಂದಿರುವೆವೀಗ ಮುಟ್ಟಿಮುಟ್ಟಿ ಮನವಟ್ಟಿನಿಂತ ಬೆಳಕಿನಲಿ.

ತಮಿಳು ದೇವಭಾಷೆಯಲಿ ಬೆಳಕು ಹತ್ತಿಸಿರುವರು ಆಚಾರ್ಯರು. ಮುಖ್ಯವಾಗಿ ಏಳು ವಾಖ್ಯಾನಗಳಿವೆ. ಅವುಗಳಿಂದ ದೀಪವನ್ನು ಹಚ್ಚುತ್ತಲೇ ಇರುವರನೇಕ ವಿದ್ವಾಂಸರು. ಕನ್ನಡಿಗರಿಗೆ ನಾವು ಕೊಟ್ಟಿರುವ ಇದೂ ಅಂತಹದೊಂದು. ವ್ಯಾಖ್ಯಾನವೋದಲು ಸಮರ್ಥರು ಓದಿ ತಮಗೆ ತಿಳಿದಂತೆ ಉಪನ್ಯಾಸವಾಗಿ ವರ್ಷವರ್ಷವೂ ಹೇಳುತ್ತಿರುವರು. ಕಿವಿಗೆ ಇಂಪಾಗುತ್ತದೆ. ಆದರೆ ಮನಸ್ಸಿನಲ್ಲಿ ತಂಪು ನಿಲ್ಲುತ್ತಿಲ್ಲ. ಮತ್ತೆ ಕೇಳಬೇಕೆನ್ನಿಸುತ್ತಿರುವುದೇ ಹೊರತು ಭಾವವು ಜೀವನದಲ್ಲಿ ಇಳಿದು ಬರುತ್ತಿಲ್ಲ. ವ್ಯಾಖ್ಯಾನಗಳು ಸುಲಭವಲ್ಲ. ಕೇಳುವರಿಗೆ ಇಂಪು ಬೇಕು. ಹೇಳುವವರಿಗೆ ಪ್ರಯೋಜನಬೇಕು. ಆ ದಾರಿಯಲ್ಲಿಲ್ಲ ಈ ನನ್ನ ಹೃದಯ ಬಿಚ್ಚು-ಏಳು ವ್ಯಾಖ್ಯಾನಗಳು ಕನಿತು ಹಣ್ಣಾದ ಭಾವತೋರುವ ಸಾಹಸ ಮಾಡಿರುವೆವಿಲ್ಲಿ ಎಲ್ಲವನು ಕಲಸಿ. ಕೂಡಿಸಿರುವೆವಿಲ್ಲಿ ಆಂಡಾರ್ವವೇದಾಂತ ರಾಮಾನುಜ ಮಹಾದೇಶಿಕ್ರ್-ಅವರ ಹೃದಯ ತುಂಬಿ ಬಂದಭಾವವನು. 1965 ಧನುರ್ಮಾಸದಲ್ಲಿ ಅವರು ತುಂಬಿ ಕೊಟ್ಟದುದನ್ನ ಇಟ್ಟಿರುವೆವಿಲ್ಲಿ ಅಲ್ಲಲ್ಲಿ. ಅವರು ಹಾಡಿದ ಆಳ್ವಾರುಗಳ ಹಾಡೆಲ್ಲವನ್ನೂ ಇಟ್ಟಿಲ್ಲ. ಅದು ಆಗದ ವಿಷಯ. ಆದರೆ ಭಾವ ಬಿಟ್ಟಿಲ್ಲ.

ಇದನ್ನು ಮೊದಲು ಬರೆದೆವು ಶಾಸ್ತ್ರಮರ್ಯಾದೆಯಲಿ. ಬಿಗಿ ಎನಿಸಿತೆಮಗೆ. ಮತ್ತೆ ಬರೆದವು ಮುತ್ತುಮಣಿಗಳನಾಯ್ದು. ಭಾವಬಂದರೂ ಮಾತು ಹಿತ

ವಾದಂತೆ ತೋರಲಿಲ್ಲ. ಭಾವಸುರಿಯುವ ಭವ್ಯತೆಬೇಕು ಮಾತಿನಲಿ ಎನಿಸಿತೆಮಗೆ. ಮತ್ತೆ ಬರೆದೆವು. ಹಿತವಾಗಿ ಕಂಡಿತು. ಇಟ್ಟರುವೆವೀಗ ಮೂರು ಪದರು ಹಾಯ್ದು ಬಂದ ಭಾವಗೀತೆಯನು.

ಇಲ್ಲಿ ಕೊಟ್ಟರುವುದು ವೇದಾಂತ ಜೀವನ ಬಾಳಿಗೆ ಸಾಕೆನಿಸಿದೆ. ಆದರೆ ಕೊಟ್ಟರುವಷ್ಟೇಭಾವವಿದೆ ಗೋದೆಯ ಹಾಡಿನಲಿ ಎಂದಲ್ಲ. ನಮಗೇ ತೃಪ್ತಿಯಿಲ್ಲ. ಆದರೂ ಮುಖ್ಯಭಾವ ಬಿಟ್ಟಲ್ಲವೆನ್ನುವ ಸಂತೋಷವಿದೆ.

ಇಲ್ಲಿ ಐದು ವಿಧದಲ್ಲಿ ಭಾಷೆಯನ್ನು ಬಳಸಿರುವೆವು, ಪೀಠಿಕೆಯು ಚರಿತ್ರೆ ಭಾಷೆಯಲ್ಲಿದೆ. 1-5 ಪದ್ಯಗಳು ಕಬ್ಬಿಗಳ ಕಾವ್ಯ ಭಾಷೆಯಲ್ಲಿದೆ. ಕಠಿಣವೆಂದೇ ಹೇಳಬೇಕು. ಆದರೆ ಕೊನೆಯಲ್ಲಿ ಕೊಟ್ಟರುವ ಟಿಪ್ಪಣಿ ಓದಿದ ಮೇಲೆ ಸುಲಭ ಕಾಣುವುದು. 6-20 ಪದ್ಯಗಳು ಭಾವ ತುಂಬುವ ಭಾಷೆಯಲ್ಲಿದೆ. 21-25 ಪದ್ಯಗಳು ಸಂಗೀತ ಸಾಹಿತ್ಯ ಕೂಡಿಸಿವೆ. 26-30 ಪದ್ಯಗಳು ಭಕ್ತಿಯಲಿ ತೋಯ್ದುವ್ಯದುವಾಗಿವೆ. ಎಲ್ಲೂ ಕಾಡುವ ಕಪಟವಿಲ್ಲ. ಗಂಭೀರ ನಡೆಸಾಗಿದೆ. ಮುಂದು ಮುಂದೆ ಹೋದಾಗ ಭಾವತುಂಬಿಬಂದು ಕೊನೆಗೆ ಕಣ್ಣಿನಲಿ ಕಂಬನಿ ತುಂಬುವಂತಾಗುವುದು ನಮಗೇ ಎನಿಸಿದೆ. ಮನ ಕುಗ್ಗಿನಲಿ ಮುಗ್ಗರಿಸದಿರಲು ಕಗ್ಗವನು ಹಾಡದೆ ಕೊಟ್ಟರುವೆವು ವೇದಾಂತವನು ಕಥೆಯಂತೆ. ಅದು ಸಾಕೆಮಗೆ ಮನದ ಹಿಗ್ಗಿಗಾಗಿ.

ಇಲ್ಲಿ ಕೊಟ್ಟರುವ ಪ್ರಮಾಣ ಶ್ಲೋಕ ಮತ್ತು ವೇದವಾಕ್ಯಗಳೆಲ್ಲಕ್ಕೂ ಅರ್ಥ ಕೊಟ್ಟಲ್ಲ. ಅದಿಲ್ಲದೆ ಪುಸ್ತಕ ದೊಡ್ಡದಾಗಿದೆ. ಓದುಗರು ಇಷ್ಟಪಟ್ಟರೆ ಎರಡನೇ ಮುದ್ರಣದಲ್ಲಿ ಅದನ್ನು ಕೊಡುವೆವು.

"ತಿರುಪ್ಪಾವೈ"ಯ 6–15 ಪೂರ್ತಿ 10 ಆಳ್ವಾರ್ಗಳನ್ನು ಎಬ್ಬಿಸುವಂತೆ ಗೋದೆಯು ಸೂಚಿಸಿರುವಳೆಂದು ವ್ಯಾಖ್ಯಾನ ಮಾಡುವುದೂ ಉಂಟು. ಇದರಲ್ಲಿ ಭಿನ್ನಾಭಿಪ್ರಾಯವಿರುವುದರಿಂದ ಅದನ್ನು ಇಲ್ಲಿ ಬಿಡಲಾಗಿದೆ.

ಈ ಪುಸ್ತಕವನ್ನು ಓದಿ ಅರ್ಥವೆಲ್ಲವನ್ನೂ ಮನಸ್ಸಿಗೆ ಇಳಿಸಿಕೊಂಡ ಮೇಲೆ ವೇದಾಂತ ಭಾವನೆಯು ರಸಮಯವಾಗಿ ಹೇಗೆ ಹರಿದು ಜೀವನವೇ ಒಂದು ಗಾನವಾಗಿ ನಿಲ್ಲುವುದೆನ್ನುವುದನ್ನು ನಮ್ಮ ಅನುಭವದಿಂದ ತಿಳಿಸುವುದಕ್ಕಾಗಿ ಕೆಲವು ಕೀರ್ತನೆ ಮತ್ತು ದೇವರನಾಮಗಳನ್ನು ಬರೆದಿರುವೆವು. ಸಾಹಿತ್ಯ ನಮ್ಮದು. ಭಾವಕ್ಕೆ ಸರಿಹೋಗುವ ರಾಗಗಳನ್ನೇ ಆ ಸಾಹಿತ್ಯಕ್ಕೆ ಜೋಡಿಸಲಾಗಿದೆ. ಕೂಡಿಸಿ ಹಾಡಿದವರು ನಮ್ಮ ಹೆಣ್ಣುಮಕ್ಕಳು ಶ್ರೀಮತಿ ಪದ್ಮಾಸಿನೀ ಮತ್ತು ಶ್ರೀಮತಿ ಕಮಲ. ಇವರಿಬ್ಬರಿಂದ ಹಾಡಿಸಿ ಕೇಳಿ ತೃಪ್ತಿಪಟ್ಟರುವೆವು. ಸಂಗೀತ ಪರಿಚಯ

ವಿರುವವರಿಗೆ ಇದರಿಂದ ನಿತ್ಯಾನುಸಂಧಾನಕ್ಕೆ ಬಹು ಅನುಕೂಲವಾಗುವುದೆನ್ನುವ ಅಭಿವ್ರಾಯದಿಂದ ಬೇರೆ ಪುಸ್ತಕವಾಗಿ ಅಚ್ಚುಹಾಕಿಸಲಾಗುತ್ತದೆ.

ಈ "ತಿರುಪ್ಪಾವೈ ಹೃದಯ"ದ ಮುದ್ರಣಕ್ಕಾಗಿ ಈ ಕೆಳಕಂಡ ಮಹನೀಯರು ಮತ್ತು ಸಂಸ್ಥೆಯವರು ಧನಸಹಾಯ ಮಾಡಿರುವರು ಮತ್ತು ಮಾಡಿವೆ.

1.	ಶ್ರೀಮಾ T.S. ರಾಜಂ, ಪ್ರೆಸಿಡೆಂಡ್ T. V. S. ಬೆಂಗಳೂರು.	250	00
2.	ಹೆಬ್ಬಾರ್ ಶ್ರೀ ವೈಷ್ಣವ ಸಂಘ, ... ಬೆಂಗಳೂರು.	250	00
3.	ಉಭಯ ವೇದಾಂತ ಸಭಾ, ... ಬೆಂಗಳೂರು.	100	00
4.	ಶ್ರೀಮಾ H. K. N. ಆಚಾರ್ಯ, ... ಅಡ್ವೊಕೇಟ್, ಶಿವಮೊಗ್ಗ	100	00
5.	ಶ್ರೀಮಾ, ಯೋಗಾನರಸಿಂಹ್ಮ, ... ಯೋಗಾನಂದಾ, ಸಾ ಮಿಲ್ಸ್, ಶಿವಮೊಗ್ಗ ...	50	00
6.	ಶ್ರೀಮಾ ಅನಂತರಾಮ್ಮ. ... ... ಜಮಿನ್ದಾರ್, ಶಿವಮೊಗ್ಗ	50	00
7.	ಶ್ರೀಮಾ ವೆಂಕಟರಂಗಂ, ... ಅಡ್ವೊಕೇಟ್, ಬೆಂಗಳೂರು	25	00
8.	ಶ್ರೀಮಾ ರಾಜಗೋಪಾಲ್, ... ಬೆಂಗಳೂರು	25	00
9.	ಶ್ರೀಮಾ ಓ. ಸುದರ್ಶನಂ	25	00

ಇವರೆಲ್ಲರಿಗೂ ಗ್ರಂಥಕರ್ತೃವು ಚಿರಋಣಿಯಾಗಿರುವರು. ಅಲ್ಲದೆ ನವಭಾರತ್ ಪ್ರಿಂಟಿಂಗ್‌ಪ್ರೆಸ್ಸಿನ ಮಾಲೀಕರಾದ ಶ್ರೀಮಾ ಓ. ಸುದರ್ಶನಂ ಅವರು ತಮ್ಮ ಅನಂತ ವ್ಯವಹಾರಗೌರವದಲ್ಲಿ ಸ್ವಲ್ಪ ಅವಕಾಶಕೊಟ್ಟು ಈ ಗ್ರಂಥ ಮುದ್ರಣವನ್ನು ಸರಿಯಾದಕಾಲಕ್ಕೆ ಒದಗಿಸಿಕೊಟ್ಟರುವರು. ಅವರಿಗೂ ಚಿರಋಣಿಯಾಗಿರುವರು.

ಈ ಪುಸ್ತಕವನ್ನು ಓದಿಯಾದಮೇಲೆ ಓದಿದವರು ತಮ್ಮ ಅಭಿಪ್ರಾಯವನ್ನು ಗ್ರಂಥಕರ್ತೃವಿಗೆ ತಿಳಿಸಿದರೆ ಎರಡನೇ ಮುದ್ರಣಕ್ಕೆ ಬಹು ಅನುಕೂಲವಾಗುವುದು.

ಅನಿವಾರ್ಯವಾಗಿ ಮುದ್ರಣದಲ್ಲಿ ಕೆಲವುತಪ್ಪುಗಳು ತಲೆದೋರಿವೆ. ಅಭಾಸವಾಗದಂತೆ ಇರಲು ಕೊನೆಯಲ್ಲಿ ಶುದ್ಧಾಶುದ್ಧವನ್ನು ಕೊಟ್ಟಿರುವೆವು. ಈ ಗ್ರಂಥವನ್ನು ಓದುವುದಕ್ಕೆ ಮೊದಲು ಅವನ್ನು ಸರಿಪಡಿಸಿಕೊಂಡು ಓದುವುದು ಒಳ್ಳೆಯದು.

ಯಸ್. ಸಂಪತ್ತೈಯ್ಯಂಗಾರ್
ಗ್ರಂಥಕರ್ತಾ

ಶ್ರೀಮತ್ ಶ್ರೀರಂಗಂ ಆಂಡವರ್ಸನ್ನಿಧಿ—ಶ್ರೀರಂಗಂ

ಶ್ರೀಮದಿತ್ಯಾಧಿಬಿರುದಾಂಕಿತೈಃ ಪರಮಹಂಸಪರಿವ್ರಾಜಿಕೈಃ ಶ್ರೀರಂಗಂ ತಿರುಕ್ಕುಡಂದೈ ಆಂಡವನ್ ಶ್ರೀಮದ್ವೇದಾಂತ ರಾಮಾನುಜ ಮಹಾದೇಶಿಕೈಃ ನಾರಾಯಣಸ್ಮರಣಪೂರ್ವಕಂ ಕಲ್ಯಾಣಪುರವಾಸಿಭ್ಯಃ ವಿದ್ವದ್ಭ್ಯಃ ಯಸ್. ಸಂಪತ್ತೈಯ್ಯಂಗಾರೇಭ್ಯಃ ಅನುಗೃಹೀತಾ ಪ್ರಶಂಸನಾ ಪತ್ರಿಕಾ.

"ತಿರುಪ್ಪಾವೈ" ಇತಿ ವಿಖ್ಯಾತಾಯಾಃ ಶ್ರೀ ಗೋದಾದೇವಿ ಸೂಕ್ತೇಃ ಬಹ್ವ್ಯಃ ದ್ರಾವಿಡಾಯಾಃ ಅನ್ಯಭಾಷಾಕೃತಾಶ್ಚ ವ್ಯಾಖ್ಯಾಸ್ಸಂತಿ. ಪಂಡಿತೈಃ ಏತೈಃ ನ ಕೇವಲಂ ಪೂರ್ವಾಚಾರ್ಯರಚಿತ ವ್ಯಾಖ್ಯಾಸರಣಿಮೇವ ಅಪಿತು ಕಲ್ಯಾಣಪುರೇ ಅಸ್ಮಾಭಿಃ ಪ್ರಾಕ್ ಪ್ರಚಲಿತೇ ತತ್ಪ್ರಬಂಧಪ್ರವಚನೇ ಬಹುಧಾಶ್ರುತಃ ವಿಷಯ ಸಂಗ್ರಹಃ ಏತದ್ವಿದ್ವದ್ರಚಿತೇ "ತಿರುಪ್ಪಾವೈ ಹೃದಯಂ" ನಾಮಕೇ ಗ್ರಂಥೇ ಸಮ್ಯಗುಲ್ಲಿಖಿತಃ. ಈದೃಶ ಪಂಡಿತಪ್ರಕಾಂಡೈಃ ಪ್ರಕಟೀಕೃತಃ ಗ್ರಂಥೋಯಂ ತದ್ದೇಶವಾಸಿನಾಂ ಅತೀವಾ ಮೋದಂ ಜನಯತೀತಿ ಪ್ರಮೋದಾಮಹೆ. ಸಕಲರಸಿಕಾಃ ಸಾದರ ಗ್ರಾಹಕಾಃ ಭವೇಯುಃ. ಏತೇ ಚ ವಿದ್ವನ್ಮಣಯಃ ಏವಮೇವ ಪ್ರಾಕ್ತನ ಗ್ರಂಥರತ್ನಾನಿ ಸಂಸ್ಕೃತ ದ್ರಾವಿಡೋಭಯ ಭಾಷಾವಿರಾಜಿತಾನಿ ಪ್ರಕಾಶಯೇರನ್ನಿತಿ ಚ ಆಶಾಸ್ಮಹೆ—

20–4–67.

ಮೇಲಿನ ಪ್ರಶಸ್ತಿಯ ಕನ್ನಡಾನುವಾದ

ಶ್ರೀಮದಿತ್ಯಾದಿ ಬಿರುದಾಂಕಿತರಾದ ಪರಮಹಂಸಪರಿವ್ರಾಜಕ ಶ್ರೀರಂಗಂ ತಿರುಕ್ಕುಡಂದೈ ಆಂಡವನ್ ಶ್ರೀಮದ್ವೇದಾಂತರಾಮಾನುಜ ಮಹಾದೇಶಿಕರಿಂದ ನಾರಾಯಣಸ್ಮರಣಪೂರ್ವಕವಾಗಿ ಕಲ್ಯಾಣಪುರ(ಬೆಂಗಳೂರು) ವಾಸಿ ವಿದ್ವಾನ್ ಯಸ್. ಸಂಪತ್ತೈಯಂಗಾರ್ಯರಿಗೆ ಅನುಗ್ರಹಿಸಿದ ಪ್ರಶಂಸನಾಪತ್ರ.

"ತಿರುಪ್ಪಾವೈ" ಎಂದು ಪ್ರಸಿದ್ಧವಾದ ಶ್ರೀ ಗೋದಾದೇವಿಯ ಸೂಕ್ತಿಗೆ ತಮಿಳು ಮತ್ತು ಬೇರೇ ಭಾಷೆಗಳಲ್ಲಿ ಅನೇಕ ವ್ಯಾಖ್ಯಾನಗಳಿವೆ. ಪಂಡಿತರಾದ ಇವರಿಂದ ಪೂರ್ವಾಚಾರ್ಯರಿಂದ ರಚಿತವಾದ ವ್ಯಾಖ್ಯಾನಸರಣಿಯಲ್ಲದೆ, ಇದೇ ಬೆಂಗಳೂರಿನಲ್ಲಿ ನಮ್ಮಿಂದ ಹಿಂದೆ ಪ್ರಚಲಿತವಾದ ಈ ಪ್ರಬಂಧ ಪ್ರವಚನದಿಂದ ಬಹುವಾಗಿ ಕೇಳಿದ ವಿಷಯ ಸಂಗ್ರಹವೂ, ಇವರಿಂದ ವಿರಚಿಸಲ್ಪಟ್ಟಿರುವ "ತಿರು

ಪ್ಪಾವೈ ಹೃದಯಂ" ಎಂದು ಹೆಸರು ಇಡಲ್ಪಟ್ಟ ಗ್ರಂಥದಲ್ಲಿ ಉಲ್ಲಿಖಿತವಾಗಿದೆ. ಇಂತಹ ಪಂಡಿತರಿಂದ ಪ್ರಕಟಿತವಾದ ಈ ಗ್ರಂಥವು ಆ (ಕನ್ನಡ) ದೇಶವಾಸಿಗಳಿಗೆ ಬಹು ಸಂತೋಷ ಮತ್ತು ಆನಂದವನ್ನು ಉಂಟುಮಾಡುವುದೆಂದು ಸಂತೋಷ ಪಡುತ್ತೇವೆ. (ಆ ದೇಶದ) ಎಲ್ಲಾ ರಸಿಕರೂ ಅದರಿಂದ ಇದನ್ನು ಗ್ರಹಿಸುವರೆಂದು ನಂಬಿರುವೆವು. ಈ ವಿದ್ವನ್ಮಣಿಗಳು ಹೀಗೆಯೇ ಪ್ರಾಚೀನಗಳಾದ ಸಂಸ್ಕೃತ ಮತ್ತು ದ್ರಾವಿಡಭಾಷೆಗಳಲ್ಲಿರುವ ಗ್ರಂಥಗಳನ್ನು ಪ್ರಕಾಶಪಡಿಸುವರೆಂದು ಆಶಿಸುತ್ತೇವೆ.

ಇತಿ

ಶ್ರೀಮದಾಂಡವ್ಯ

ಪ್ರಮಾಣಕರ

೧.	ಅ—ಶಿ	...	...	...	ಅಥರ್ವಶಿಖೋಪನಿಷತ್ತು
೨.	ಅ—ಭು	...	...	...	ಅಷ್ಟಭೂಜಾಷ್ಟಕಂ
೩.	ಅ—ಸಂ	...	...	...	ಅಹಿರ್ಬುಧ್ನ್ಯ ಸಂಹಿತೆ
೪.	ಅಂ—ವೈ	...	...	...	ಅಂಜಲಿ ವೈಭವಂ
೫.	ಇ—ಇ	...	...		ಇಯರ್ಪಾ–ಇರಂಡಾಂ ತಿರುವಂದಾದಿ
೬.	ಇ—ಮು	...	...		ಇಯರ್ಪಾ–ಮುದಲ್ ತಿರುವಂದಾದಿ
೭.	ಇ—ಮೂ	...	...		ಇಯರ್ಪಾ–ಮೂನ್ರಾಂ ತಿರುವಂದಾದಿ
೮.	ಇ—ಸ	...	...	...	ಇತಿಹಾಸ ಸಮುಚ್ಚಯ
೯.	ಈ—ಉ	...	...	...	ಈಶಾವಾಸ್ಯೋಪನಿಷತ್
೧೦.	ಉ—ಕು	...	...		ಉದಯನರ ಕುಸುಮಾಂಜಲಿ
೧೧.	ಉ—ರ—ಮಾ		...	...	ಉಪದೇಶ ರತ್ನಮಾಲೈ
೧೨.	ಋ—ಸಂ	...	...	...	ಋಗ್ವೇದ ಸಂಹಿತೆ
೧೩.	ಋ—ವೆ	...	...	...	ಋಗ್ವೇದ
೧೪.	ಕ—ಉ	...	...	...	ಕಠೋಪನಿಷತ್ತು
೧೫.	ಕೃ—ಕರ್ಣ	...	...	...	ಕೃಷ್ಣ ಕರ್ಣಾಮೃತ
೧೬.	ಕಂ—ಶಿ	...	...	...	ಕಣ್ಣಿನುಣ್ ಶಿರತ್ತಾಂಬು
೧೭.	ಗೀ—ಗೋ	...	...	...	ಗೀತ ಗೋವಿಂದ
೧೮.	ಗೋ—ವಿಂ	...	...	...	ಗೋಪಾಲ ವಿಂಶತಿ
೧೯.	ಗೋ—ಸ್ತು	...	...	...	ಗೋದಾಸ್ತುತಿ
೨೦.	ಚಂ—ಆ	...	...	...	ಚಂದ್ರಾಲೋಕ
೨೧.	ಛಾ—ಉ	...	...	...	ಛಾಂದೋಗ್ಯೋಪನಿಷತ್ತು
೨೨.	ಜ—ಸಂ	...	...	...	ಜಯಾಖ್ಯ ಸಂಹಿತೆ
೨೩.	ತತ್ವ—ಕಲಾ	...	...	...	ತತ್ವಮುಕ್ತಾ ಕಲಾಪ
೨೪.	ತ—ಶ್ಲೋ	...	...	...	ತನಿಶ್ಲೋಕೀ
೨೫.	ತಿ—ನೆ—ತಾಂ		...	...	ತಿರುನೆಡುಂ ತಾಂಡಕಂ
೨೬.	ತಿರು—ಮೊ		...	...	ತಿರುವಾಯ್ ಮೊಳಿ
೨೭.	ತಿ—ಮೊ	...	...	...	ತಿರುಮೊಳಿ
೨೮.	ತೈ—ಉ	...	...	...	ತೈತ್ತಿರೀಯೋಪನಿಷತ್ತು
೨೯.	ತೈತ್ತಿ—ಆ	...	...	...	ತೈತ್ತಿರೀಯ ಆನಂದವಲ್ಲಿ
೩೦.	ತೈತ್ತಿ—ಶಿ	...	...	...	ತೈತ್ತಿರೀಯ ಶಿಕ್ಷಾವಲ್ಲಿ
೩೧.	ತೈತ್ತಿ—ಆ	...	...	...	ತೈತ್ತಿರೀಯ ಆರಣ್ಯಕ

೩೨.	ತೈ—ಯಾ—ಉ	ತೈತ್ತರೀಯ ಯಾಜ್ಞಿಕೀ ಉಪನಿಷತ್ (ಅಂಭಸಿ)
೩೩.	ದ—ಸ್ತೋ ...	... ... ದಶಾವತಾರಸ್ತೋತ್ರ
೩೪.	ದ—ಶ ...	... ... ದಯಾಶತಕಂ
೩೫.	ದ್ರ—ಉ—ತಾ	... ದ್ರವಿಡೋಪನಿಷತ್ ತಾತ್ಪರ್ಯ ರತ್ನಾವಳಿ
೩೬.	ದೇ—ಪಂ ...	... ... ದೇವನಾಯಕ ಪಂಚಾಶತ್
೩೭.	ದೇ—ಸ್ತು ...	... ... ದೇಹಳೀಶಸ್ತುತಿ
೩೮.	ನಾ—ತಿ ...	... ... ನಾಚ್ಚಿಯಾರ್ ತಿರುಮೊಳಿ
೩೯.	ನ್ಯಾ—ವಿಂ	... ... ನ್ಯಾಸವಿಂಶತಿ
೪೦.	ನ್ಯಾ—ತಿ ...	... ... ನ್ಯಾಸ ತಿಲಕಂ
೪೧.	ನಾ—ಸ್ಮೃ	... ... ನಾರದೀಯ ಸ್ಮೃತಿ
೪೨.	ನಾ—ಉ ...	... ... ನಾರಾಯಣೋಪನಿಷತ್
೪೩.	ಪ್ರ—ಸಾ ...	... ... ಪ್ರಬಂಧಸಾರಂ
೪೪.	ಪ್ರ—ಶ ...	... ... ಪ್ರಧಾನ ಶತಕಂ
೪೫.	ಪಾ—ಸ ...	... ... ಪಾದುಕಾ ಸಹಸ್ರಂ
೪೬.	ಪಾ—ಉ ...	... ... ಪಾದ್ಮೋತ್ತರ ಪುರಾಣ
೪೭.	ಪೆ—ತಿ ಪೆರಿ—ತೀರು	... ... ಪೆರಿಯ ತಿರುಮೊಳಿ
೪೮.	ಭ—ಗೀ ...	... . ಭಗವದ್ಗೀತೆ
೪೯.	ಬೃ—ಉ ...	... ... ಬೃಹದಾರಣ್ಯಕೋಪನಿಷತ್
೫೦.	ಭಾಗ ...	... ... ಭಾಗವತಂ
೫೧.	ಭೂ—ಸೂ	... ... ಭೂ ಸೂಕ್ತಂ
೫೨.	ಭಾ—ಅ ...	... ... ಭಾರತ–ಅಶ್ವಮೇಧಪರ್ವ
೫೩.	ಭಾ—ಚಂ	... ... ಭಾರತ ಚಂಪು
೫೪.	ಬಾ—ಸ್ಮೃ	... ... ಬಾರ್ಹಸ್ಪತ್ಯಸ್ಮೃತಿ
೫೫.	ಮು—ಪ ...	... ... ಮುಮುಕ್ಷುಪ್ಪಡಿ
೫೬.	ಮುಂ—ಉ	... ... ಮುಂಡಕೋಪನಿಷತ್ತು
೫೭.	ಮಾಂ—ಉ	... ... ಮಾಂಡೂಕ್ಯೋಪನಿಷತ್ತು
೫೮.	ಯಾ—ಅ ...	... ... ಯಾದವಾಭ್ಯುದಯ
೫೯.	ಯತಿ—ಸಪ್ತ	... . ಯತಿರಾಜಸಪ್ತತಿ
೬೦.	ಯೋ—ಸೂ	... ... ಯೋಗಸೂತ್ರ
೬೧.	ರಾ—ಯು	... ... ರಾಮಾಯಣ ಯುದ್ಧಕಾಂಡ

೬೨.	ರ—ಸಾ ...	... ರಹಸ್ಯತ್ರಯಸಾರ–ಸ್ವ–ಅ=ಸ್ವನಿಷ್ಠಾ
	...	.... ಭಿಜ್ಞಾನಾಧಿಕಾರ; ತತ್ವ=ತತ್ವತ್ರ
	...	... ಯಾಧಿಕಾರ; ಕೃ–ಕೃ=ಕೃತ ಕೃತ್ಯಾಧಿಕಾರ
೬೩.	ರ—ರ ...	... ... ರಹಸ್ಯರತ್ನಾವಳಿ
೬೪.	ರಂ—ರಾ—ಸ್ತ	... ... ರಂಗರಾಜಸ್ತವ
೬೫.	ಲ—ತಂ ...	... ... ಲಕ್ಷ್ಮೀತಂತ್ರ
೬೬.	ವ—ಪು ...	... ... ವರಾಹಪುರಾಣ
೬೭.	ವೇ—ಸಂ ...	... ... ವೇದಾರ್ಥಸಂಗ್ರಹ
೬೮.	ವೈ—ಗ ...	... ... ವೈಕುಂಠಗದ್ಯ
೬೯.	ವಿ—ಪು ...	... ... ವಿಷ್ಣುಪುರಾಣ
೭೦.	ವ—ಪಂ ...	... ... ವರದರಾಜಪಂಚಾಶತ್
೭೧.	ವಿ—ಸ ...	... ... ವಿಷ್ಣುಸಹಸ್ರನಾಮ
೭೨.	ವಿ—ತ ...	... ... ವಿಷ್ಣುತತ್ವ
೭೩.	ವಿ—ಧ ...	... ... ವಿಷ್ಣುಧರ್ಮೋತ್ತರ
೭೪.	ವೈ—ಧ ...	... ... ವೈಷ್ಣವಧರ್ಮ
೭೫.	ವಿ—ಗು ...	.... ವಿಶ್ವಗುಣಾದರ್ಶ
೭೬.	ಶ್ವೇ—ಉ	... ... ಶ್ವೇತಾಶ್ವತರ ಉಪನಿಷತ್ತು
೭೭.	ಶಾಂ—ಸ್ಮೃ	... ... ಶಾಂಡಿಲ್ಯಸ್ಮೃತಿ
೭೮.	ಶ—ಗ ...	... ... ಶರಣಾಗತಿಗದ್ಯ
೭೯.	ಶ್ರೀ— ...	... ... ಶ್ರೀಭಾಷ್ಯ
೮೦.	ಸಾ—ದ ...	... ... ಸಾಹಿತ್ಯದರ್ಪಣ
೮೧.	ಸ್ತೋ—ರ	... ... ಸ್ತೋತ್ರರತ್ನ
೮೨.	ಸುಂ—ಬಾ	... ... ಸುಂದರಬಾಹುಸ್ತವ
೮೩.	ಸಾ—ಸಾ	... ... ಸಾರಸಾರ
೮೪.	ಸಂ—ಸೂ	... ... ಸಂಕಲ್ಪ ಸೂರ್ಯೋದಯ
೮೫.	ಸ—ಸಿ ...	... ... ಸರ್ವಾರ್ಥಸಿದ್ಧಿ–
೮೬.	ಸು—ಉ	... ... ಸುಬಾಲೋಪನಿಷತ್ತು
೮೭.	ಹ—ವಂ	... ... ಹರಿವಂಶ
೮೮.	ಹಾ—ಸಂ	... ... ಹಾರೀತಸಂಹಿತೆ
೮೯.	ಹಂ—ಸಂ	... ... ಹಂಸಸಂದೇಶ–

ಅವಸರದಲ್ಲಿ ಆಕರ ಕೊಡದಿರುವ ಅನೇಕ ಪ್ರಮಾಣ ಶ್ಲೋಕಗಳಿವೆ.



ಪೀಠಿಕೆ

ಶ್ರೀವೈಷ್ಣವವೇದಾಂತ ಸಂಪ್ರದಾಯದಲ್ಲಿ ಭಕ್ತರು **ಆಳ್ವಾರ್** ಆಚಾರ್ಯರೆಂದು ಇರು ಬಗೆಯಲ್ಲಿರುವರು. ಪರಮಾತ್ಮನ ಗುಣಾನುಭವ, ಸಂದರ್ಶನ, ಆಲಾಪನ, ಸಂಭಾಷಣೆ ಮತ್ತು **ಆಲಿಂಗನಾದಿಗಳಿಂದ** ತಲ್ಲೀನರಾಗಿದ್ದವರು "**ಆಳ್ವಾರ್**" ಎನ್ನುವರು. ಇವರಲ್ಲಿ **ಮಧುರಕವಿಯನ್ನು** ಬಿಟ್ಟು ಹತ್ತು ಜನ ಗಂಡಸರು ಒಬ್ಬಳು **ಕನ್ಯೆ**. ಇವರು ತಮ್ಮ ಭಗವದನುಭವವನ್ನು ತಮಿಳು ಭಾಷೆಯಲ್ಲಿ ಪದ್ಯಗಳ ರೂಪದಲ್ಲಿ ಕೊಟ್ಟಿರುವರು. ಇವುಗಳಿಗೆ "**ಪ್ರಬಂಧ**"ಗಳೆಂದು ಸಾಂಪ್ರದಾಯಕ ವ್ಯವಹಾರ. **ಮುಂದೆ ಈ ಶ್ರೀವೈಷ್ಣವ ಸಿದ್ಧಾಂತವನ್ನು** ಮೀಮಾಂಸಾ ಮತ್ತು ತರ್ಕಬಲದಿಂದ **ಸ್ಥಾಪಿಸಿದ** ಭಗವದ್ರಾಮಾನುಜರ ಮೇಲೆ, ಅವರ ಕಾಲದಲ್ಲೇ **ಅವರ ಅನುಜ್ಞೆ**ಯನ್ನು ಪಡೆದು ಅವರ ಸಹಸ್ರಾರು ಶಿಷ್ಯರಿಂದ ಪರಿಗೃಹೀತವಾದ "**ರಾಮಾನುಜ ಸ್ತೋತ್ರಂದಾದಿ**" ಎನ್ನುವ ಒಂದು ನೂರೆಂಟು ಪದ್ಯಗಳನ್ನು **ಅವರ ಪ್ರಶಿಷ್ಯರಾದ** "**ಅಮುದನಾರ್**" ಎನ್ನುವರು **ರಚಿಸಿದರು**. ಈ ಹನ್ನೊಂದು **ಆಳ್ವಾರ್**ಗಳು, "**ಅಮುದನಾರ್**" ಅವರು ಮತ್ತು ಮಧುರ ಕವಿಗಳು ಒಟ್ಟು ಕೊಟ್ಟಿರುವ ಪದ್ಯಗಳು **4000**ಗಳಾಗಿವೆ. ತಮಿಳಿನ**ಪ್ರಬಂಧ**ವೆಂದರೆ **ಈ 4000** ಪದ್ಯಗಳು. ಇವುಗಳಲ್ಲಿ "**ಗೋದಾ**" ಎನ್ನುವ **ಕನ್ಯೆ**ಯು ಕೊಟ್ಟಿರುವ "**ನಾಚ್ಚಿಯಾರ್ ತಿರುಮೋಳಿ**" ಎನ್ನುವ **145** ಪದ್ಯಗಳೂ "**ತಿರುಪ್ಪಾವೈ**" ಎನ್ನುವ **30** ಪದ್ಯಗಳೂ ಸೇರಿವೆ.

ಈ ತಿರುಪ್ಪಾವೈ ಗ್ರಂಥಕ್ಕೆ ವಿಶೇಷ ಸ್ಥಾನವು ಲಭಿಸಿದೆ. ಸಕಲ ವೇದಾರ್ಥಗಳು **ಈ 30** ಪದ್ಯಗಳಲ್ಲಿ ಅಡಗಿರುವುದನ್ನು ರಾಮಾನುಜರಿಗೆ ನೂರಾರು ವರ್ಷಗಳ ಹಿಂದೆಯೇ ಪೂರ್ವಾಚಾರ್ಯರು ಕಂಡಿದ್ದರು. ಆದ್ದರಿಂದ ರಾಮಾನುಜರಿಗೆ ಈ ಗ್ರಂಥವು ಜೀವನಾಡಿಯಾಯಿತು. **ವಿಶೇಷ**ವಾಗಿ ಅವರ ಕಾಲದಿಂದ ಇಲ್ಲಿಯವರಿಗೂ ಈಗಲೂ ಈ **30** ಪದ್ಯಗಳನ್ನು **ಮಾರ್ಗಶೀರ್ಷ**ಮಾಸದ **30** ದಿನಗಳಲ್ಲಿ ಪ್ರತಿದಿನ ಒಂದರಂತೆ ಅನುಸಂಧಾನಮಾಡಿ ಪರಮಾತ್ಮನಿಗೆ ಅರ್ಪಿಸುವ ಸಂಪ್ರದಾಯವು ಬಂದಿರುತ್ತದೆ.

ಮೈಸೂರು ದೇಶದ ಶಿವಮೊಗ್ಗ ನಗರದ ಶ್ರೀವೈಷ್ಣವರ **ಅಪೇಕ್ಷೆ**ಯಂತೆ ಜಯ ಸಂವತ್ಸರ ಮತ್ತು ವಿಜಯ ಸಂವತ್ಸರದ ಮಾರ್ಗಶೀರ್ಷ ಮಾಸಗಳಲ್ಲಿ ಕಾಲಕ್ಷೇಪ ಹೇಳುವ ಯೋಗವುಲಭಿಸಿತು, ಆ ಆಸ್ತಿಕರ ಅಪೇಕ್ಷೆಯಂತೆ ಆಸಮಯದಲ್ಲೇ ಗೋದಾದೇವಿಯ ವಿಷಯದಲ್ಲಿ ಶ್ರೀ ನಿಗಮಾಂತ ದೇಶಿಕರು ಬರೆದಿರುವ "ಗೋದಾ

ಸ್ತುತಿ" ಎನ್ನುವ ಸ್ತೋತ್ರಗ್ರಂಥಕ್ಕೆ ಪ್ರತಿಪದಾರ್ಥ, ತಾತ್ಪರ್ಯ ಮತ್ತು ವಿಶೇಷಾರ್ಥವೆಂಬ ಮೂರು ಕ್ರಮದಲ್ಲಿ ಪ್ರತಿಯೊಂದು ಶ್ಲೋಕವನ್ನೂ ವಿವರಿಸುವ ಗ್ರಂಥವನ್ನು ಬರೆದಿಡಲಾಯಿತು. ಕಾರಣಾಂತರದಿಂದ ಅದನ್ನು ಮುದ್ರಿಸಲಾಗಲಿಲ್ಲ.

ಇದಾದಮೇಲೆ ಬಹುವರ್ಷಗಳಕಾಲ **ಈ** "**ತಿರುಪ್ಪಾವೈ**" ಗ್ರಂಥವನ್ನು ಅನುಸಂಧಾನ ಮಾಡಿಸುವ ಪ್ರಸಂಗಗಳು ಬಂದುವು. ನನಗೂ ವೇದಾಂತಗ್ರಂಥಗಳ ಕಾಲಕ್ಷೇಪ ಮಾಡಿಸುವುದರಲ್ಲಿ ವಿರಾಮಸಿಗದೆ **ಈ** "**ತಿರುಪ್ಪಾವೈ**" ಗ್ರಂಥದ ಹಿರಿಮೆಯನ್ನು ಕನ್ನಡಿಗ ಶ್ರೀವೈಷ್ಣವರಿಗೆ ಕೊಡುವ ಸುಯೋಗವು ವಿಲಂಬಿತವಾಯಿತು. ಇದೇ ವಿಶ್ವಾವಸು ವರ್ಷದ ಮಾರ್ಗಶೀರ್ಷದಲ್ಲಿ ಇದಕ್ಕೆ ದೈವಿಕವಾಗಿ ಅವಕಾಶ ಸಿಕ್ಕಿರುವುದರಿಂದ, ಈ ಬಯಕೆಯನ್ನು ಪೂರ್ತಿಮಾಡಿರುವೆನು.

ಈ ತಿರುಪ್ಪಾವೈ ಗ್ರಂಥವು ಈಗೀಗ ಬೆಂಗಳೂರು ನಗರದಲ್ಲಿ **ವಿಶೇಷ** ಪ್ರಚಾರಕ್ಕೆ ಬಂದಿರುತ್ತದೆ. ಮದ್ರಾಸು ಮೊದಲಾದ ತಮಿಳು ದೇಶದವರನೇಕರು ಬೆಂಗಳೂರಿಗೆ ಬಂದು ಇದೊಂದು ವೃತ್ತಿಯನ್ನಾಗಿ ಮಾಡಿಕೊಂಡಿರುವಂತಿದೆ. ಕನ್ನಡ ದೇಶದ ತಮಿಳರಿಗೆ ತಮಿಳಿನ ಪರಿಚಯವು ಅಷ್ಟಾಗಿಲ್ಲದಿರುವುದರಿಂದ **ಈ** ತಿರುಪ್ಪಾವೈ ಗ್ರಂಥದ ಪೂರ್ಣಸ್ವಾರಸ್ಯವನ್ನು ಅನುಭವಿಸಲು ಸಹಾಯ ಸಂಪತ್ತಿಲ್ಲದಾಗಿದೆ. ಪ್ರತಿವರ್ಷವೂ ಕಾಲಕ್ಷೇಪವನ್ನು ಕೇಳುತ್ತಿದ್ದರೂ ಈ ತಿರುಪ್ಪಾವೈ ಗ್ರಂಥದ ತಿರಳೇನೆನ್ನುವುದು ತಿಳಿಯದಂತಿದೆ. ಅದಕ್ಕಾಗಿ ಶಾಸ್ತ್ರೀಯ ಕ್ರಮದಲ್ಲಿ ಸಾಮಾನ್ಯನಿಗೂ ಅದರ ಮಹತ್ವವು ತಿಳಿಯಲೆಂದು **ಈ** "**ತಿರುಪ್ಪಾವೈ ಹೃದಯ**"ವೆನ್ನುವ ಗ್ರಂಥವು ಅಣಿಯಾಗಿದೆ.

ಇಂತಹ ಪ್ರಸಿದ್ಧ ಗ್ರಂಥವನ್ನು ಕೊಟ್ಟಿರುವ ಗೋದಾದೇವಿಯ ವಿಷಯದಲ್ಲಿ ನಮಗೆ ಚಾರಿತ್ರಕವಾಗಿ ಚೆನ್ನಾಗಿ ತಿಳಿದಿಲ್ಲ. ಪ್ರಪನ್ನಾಮೃತವೆನ್ನುವ ಗ್ರಂಥದಲ್ಲಿ ಇವಳ ಚರಿತ್ರೆಯು ಕೊಡಲ್ಪಟ್ಟಿದೆ. ಅನೇಕ ವಿಮರ್ಶಕರು ಇವಳ ವಿಷಯದಲ್ಲಿ ಗ್ರಂಥಗಳನ್ನು ಬರೆದಿರುವರು. ಅವೆಲ್ಲವನ್ನೂ ಕ್ರೋಡೀಕರಿಸಿ ನೋಡಿದರೆ ಸತ್ಯಾಂಶವು ಇಷ್ಟೆಂದು ಹೇಳಬಹುದು.

ಐಶ್ವರ್ಯದಲ್ಲಿಯೂ ಧಾರ್ಮಿಕ ಜೀವನದಲ್ಲಿಯೂ ಪ್ರಸಿದ್ಧವಾಗಿದ್ದ ಪಾಂಡ್ಯ ದೇಶದ **18** ಪುಣ್ಯಕ್ಷೇತ್ರಗಳಲ್ಲಿ 8ನೇಯದು ಶ್ರೀವಿಲ್ಲಿಪುತ್ತೂರ್. ಇದಕ್ಕೆ ವರಾಹಕ್ಷೇತ್ರವೆಂದೂ ಹೆಸರುಂಟು. ಮಲ್ಲಿನಾಡೆಂದು ಕರೆಯುವ ವಾಡಿಕೆಯೂ ಇದೆ. "**ಮಲ್ಲಿ**" ಎಂಬ ರಾಣಿಯಿಂದ ಆಳಲ್ಪಟ್ಟಿದ್ದರಿಂದ ಇದಕ್ಕೆ **ಈ ಹೆಸರು** ಬಂತು. ಇವಳಿಗೆ "**ವಿಲ್ಲಿ**" "**ಕಂರ್ಡ**" ಎಂಬ ಇಬ್ಬರು ಮಕ್ಕಳಿದ್ದರು. ಮೊದಲನೇಯವನು "**ವಟೇಶಪುರಂ**" ಎನ್ನುವ ಪುರಾತನ ನಗರವನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ

ಶ್ರೀವಿಲ್ಲಿ ಪುತ್ತೂರ್ " ಎಂದು ಹೆಸರಿಟ್ಟನು. ಈ ಪಟ್ಟಣಕ್ಕೆ " ವುದುವೈ " ಎನ್ನುವ ಹೆಸರೂ ಪ್ರಸಿದ್ಧವಾಗಿದೆ. ಕವಿಗಳು " ತಂದೆ ಶ್ರೀವಿಷ್ಣು ಚಿತ್ತರು, ಗೋದಾ ಮತ್ತು ಅರ್ಚಾಮೂರ್ತಿ ಪಟಪತ್ರಶಾಯಿ " ಈ ಮೂವರು ಚಿನ್ನ, ಮುತ್ತು ಮತ್ತು ಮಾಣಿಕ್ಯದಿಂದ ರಚಿತವಾದ ಕುಂಡಲದಂತೆ ಪಾಂಡ್ಯದೇಶಕ್ಕೆ ಆಭರಣದಂತಿದ್ದರು " ಎಂದು ವರ್ಣಿಸಿರುವರು. ಶ್ರೀ ನಿಗಮಾಂತದೇಶಿಕರೂ ಪ್ರಬಂಧಸಾರದ 9ನೇ ಪದ್ಯದಲ್ಲಿ " ಪೇರಣಿಂದವಿಲ್ಲಿ ಪುತ್ತೂರ್ " ಎಂದೂ, 10ನೇ ಪದ್ಯದಲ್ಲಿ " ವೇಯರ್‌ಪು ಕೞ್ವಿಲ್ಲಿಪುತ್ತೂರ್ "ಎಂದೂ ವರ್ಣಿಸಿರುವರು.

ಈ ಊರಿನಲ್ಲಿ ಮಿಥುನಮಾಸ (ಜೂನ್–ಜುಲೈ) ಸ್ವಾತೀನಕ್ಷತ್ರದಲ್ಲಿ ಪುರ ಶ್ಶ್ಟಡರ (ವೇಯರ್‌ಕುಲಂ) ವಂಶದಲ್ಲಿ ವಿಷ್ಣುಚಿತ್ತರೆಂಬ ಹೆಸರಿನ ಆೞ್ವಾರ್ರು ಅವತರಿಸಿದರು. ಇವರು " ವಡಪೆರುಂ ಕೋಯಿಲುಡೈಯ್ನಾ " (ವಟಪತ್ರಶಾಯಿ) ಅರ್ಚಾಸನ್ನಿಧಿಯಲ್ಲಿ ಪೂಮಾಲೇ ಪೈಂಕರ್ಯವನ್ನು ತಮ್ಮ ಜೀವನದ ಗುರಿಯಾಗಿಟ್ಟುಕೊಂಡು ಅದಕ್ಕಾಗಿ ಸ್ವರ್ಗಲೋಕದ ನಂದನವನದಂತೆ ಅತಿ ಸುಂದರವಾದ ಒಂದು ಉದ್ಯಾನವನದಲ್ಲಿ ತಾವೇ ಪುಷ್ಪಲತೆಗಳನ್ನು ಬೆಳೆಯಿಸಿ, ತುಲಸೀವನವನ್ನು ಕಲ್ಪಿಸಿ ವಟಪತ್ರಶಾಯಿಗೆ ಮಾಲಾ ಕೈಂಕರ್ಯಮಾಡುತ್ತಿರುವ ಕಾಲದಲ್ಲಿ ಒಂದು ಸಮಯ ಲತೆಗಳಿಗೆ ಪಾತಿ (ಆಲವಾಲ) ಮಾಡುವಾಗ ನೇಗಿಲಿನ ಹಳ್ಳದಲ್ಲಿ ಒಂದು ಹೆಣ್ಣು ಶಿಶುವು ಸಿಕ್ಕಿದ್ದನ್ನು ತಮ್ಮ ಸೇವಾಫಲವೆಂದು ನೆನೆದು ಆ ಮಗುವನ್ನು ಬಹಳ ಪ್ರೀತಿಯಿಂದ ಬೆಳೆಯಿಸಿದರು. ಇವಳು ಭೂಮಿಯ ಗರ್ಭದಲ್ಲಿ ಸಿಕ್ಕಿದ್ದರಿಂದ ಇವಳಿಗೆ" ಗೊದಾ " ಎಂದು ಹೆಸರಿಟ್ಟರು. ಭೂದೇವಿಯ ಅವತಾರವೆಂದು ನೆನೆದರು. ಮುಂದೆ ಇವಳು ಪ್ರಸಿದ್ಧಳಾದ ಮೇಲೆ ಶ್ರೀದೇವಿಯ ಅವತಾರವೆಂದೂ ತಿಳಿದರು. ಇವಳು ಶ್ರೀವಿಷ್ಣುಚಿತ್ತರಿಗೆ ತೋರ್ಪಡಿಸಿಕೊಂಡದಿನ ಕರ್ಕಾಟಕಮಾಸ ಪೂರ್ವ ಫಲ್ಗುನೀನಕ್ಷತ್ರ (ಜುಲೈ–ಆಗಸ್ಟ್–ಪುಬ್ಬಾ.) ಈ ದಿನವನ್ನು ಶ್ರೀವೈಷ್ಣವರು ಮಂಗಳದಿನವೆಂದು ಪರಿಗಣಿಸಿ ತಿರುವಾಡಿಪ್ಪೂರಂ ಎಂದರೆ ಕರ್ಕಾಟಕಮಾಸದ ಪವಿತ್ರವಾದ ಪೂರ್ವಫಲ್ಗುನೀನಕ್ಷತ್ರಯುಕ್ತವಾದದಿನವೆಂಬ ಹೆಸರಿನಿಂದ ಸಂಭ್ರಮದ ಹಬ್ಬವನ್ನಾಚರಿಸುವರು.

ಈ ಕಾಲದಲ್ಲಿ ಪಾಂಡ್ಯದೇಶದ ರಾಜಧಾನಿಯಾದ ಮಧುರೆಯನ್ನು ವಲ್ಲಭದೇವನೆನ್ನುವ ರಾಜನು ಆಳುತ್ತಿದ್ದನು. ಇವನನ್ನು ಶ್ರೀವಿಷ್ಣುಚಿತ್ತರು " ಅಲ್ವೞಕ್ಕ ಮೊನ್ರು ಮಿಲ್ಲಾವಣಿ ಕೋಟ್ಟೈಯರ್ ಕೋ ಶೆಲ್ವ " ಎಂದಿರುವರು. ಶಿಲಾ ಶಾಸನಗಳ ಆಧಾರದ ಮೇಲೆ ಇವನ ಕಾಲವು ಕ್ರಿ. ಶ. 780 ಎಂದು ನಿಶ್ಚಯಿಸಿರುತ್ತಾರೆ. ಅಂದರೆ 1185 ವರ್ಷಗಳ ಹಿಂದಿದ್ದವರು ಶ್ರೀ ವಿಷ್ಣುಚಿತ್ತರು— ಎಂದು ತಿಳಿಯಬೇಕಾಗುತ್ತದೆ. ವಲ್ಲಭದೇವನ ಕಾಲವೇ ಪೆರಿಯಾೞ್ವಾರ್ ಕಾಲ

ವೆನ್ನುವುದು ನಂಬಲರ್ಹವೆಂದು ಕಾಣುತ್ತದೆ. ಶ್ರೀವೈಷ್ಣವಸಿದ್ಧಾಂತದಲ್ಲಿ ಆಚಾರ್ಯ ಸಂತತಿಯು ನಾಥ ಮುನಿಗಳಿಂದ ಪ್ರಾರಂಭವಾಗುತ್ತದೆ. ಇವರಕಾಲ ಕ್ರಿ. ಶ. 583–916 ಎಂದು ವಿಮರ್ಶಕರು ನಿಶ್ಚಯಿಸಿರುವರು. ಇವರು ಯೋಗಿಗಳಾದುದರಿಂದ 333 ವರ್ಷಗಳಕಾಲ ಬದುಕಿದ್ದರೆಂದು ನಂಬಬಹುದು. ಇವರು ಅವತಾರ ಮಾಡಿದ್ದೇ ಕ್ರಿ. ಶ. 583. ಅದಕ್ಕೆ ಕೊನೆಯಪಕ್ಷ 100 ವರ್ಷ ಹಿಂದಾದರೂ ಕೊನೆಯ ಆೞ್ವಾರ್ರಾದ ತಿರುಮಂಗೈಯವರ ಅವತಾರವಾಗಿರಬೇಕು. ಅಂದರೆ ತಿರುಮಂಗೈ ಆೞ್ವಾರ್ರ ಕಾಲವೇ ಕ್ರಿ. ಶ. 483 ಆದರೆ ಪೆರಿಯಾೞ್ವಾರ್ರ್ಕಾಲವು ಅದಕ್ಕೂ 200 ವರ್ಷಗಳಾದರೂ ಹಿಂದಿದ್ದಿರಬೇಕು. ಅಂದರೆ ಇವರ ಕಾಲ ಕಡೆಯ ಪಕ್ಷ ಕ್ರಿ. ಶ. 200 ಆಗಿರಬೇಕು. ಹಾಗಿಲ್ಲದಿದ್ದರೆ ನಾಥಮುನಿಗಳ ಕಾಲದಲ್ಲಿ ಎಲ್ಲಾ ಪ್ರಬಂಧಗಳೂ ಅವರಿಗೆ ದೊರಕಿ, ಗುಡಿಗಳಲ್ಲಿ ಅಧ್ಯಯನೋತ್ಸವವು ಪ್ರಾರಂಭವಾಯಿತೆಂದು ಹೇಳುವುದು ತಪ್ಪಾಗುತ್ತದೆ. ಸಂಪ್ರದಾಯದ ರೀತಿಯಲ್ಲಿ ಇವರ ಕಾಲ ಕಲಿಯುಗ 98 ಅಂದರೆ 4969 ವರ್ಷಗಳ ಹಿಂದೆ. ಇವರ ಕಾಲದಲ್ಲೇ ಗೋದಾದೇವಿಯು ಪರಮ ಭಕ್ತಳಾಗಿ ಪರಮಾತ್ಮನಲ್ಲಿ ಲೀನಳಾದಳೆಂದು ವಿಷ್ಣುಚಿತ್ತರೇ ಹಾಡಿರುವುದರಿಂದ ಇವಳ ಕಾಲವೂ ಅವರದೇ ಆಗಿರಬೇಕು.

ಹುಟ್ಟಿನಿಂದ ಗೋದಾದೇವಿಯ ರೀತಿನೀತಿಗಳು ವಿಜಾತಿಯಗಳಾಗಿದ್ದುವು. ಇವಳಲ್ಲಿದ್ದ ಅನುಪಮ ದೈವೀಸಂಪತ್ತನ್ನು ಕಂಡು ಇವಳ ಮೊದಲನೇ ವರ್ಷದಿಂದಲೇ ಇವಳಿಗೆ ಶ್ರೀಮದ್ಭಾಗವತವನ್ನು ಹೇಳಲು ಪ್ರಾರಂಭಿಸಿದರು. ಮುದ್ದಾಗಿ ಬೆಳೆಸಿದರು. ಇವಳ ಗ್ರಹಣ ಧಾರಣ ಶಕ್ತಿಯನ್ನು ಕಂಡು ಚಕಿತರಾಗಿ ವೇದಾಂತ ಸಾರವನ್ನು ಚಿಕ್ಕಂದಿನಿಂದಲೇ ಹೇಳಲು ಪ್ರಾರಂಭಿಸಿದರು. ಆಗಿನ ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳಿಗೆ 8 ನೇ ವರ್ಷದಲ್ಲೇ ಮದುವೆಮಾಡುವ ಪದ್ಧತಿಯಿದ್ದಿತು. ಆದಕ್ಕೆ ಮುಂಚೆಯೇ ಆ ಮಕ್ಕಳಿಗೆ ಗಂಡನು ಬರುವನೆಂಬ ಭಾವವು ಬೆಳೆಯುತ್ತಿತ್ತು. ಗೋದೆಯೂ ಕೂಡ ಆ ಮಾನವ ಸ್ವಭಾವಕ್ಕೆ ಹೊರತಾಗಿರಲಿಲ್ಲ. ತನ್ನ ಅನುಪಮ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿಕೊಂಡು ತನಗೆ ಪತಿಯಾಗಲು ಶ್ರೀಕೃಷ್ಣನೊಬ್ಬನೇ ಯೋಗ್ಯನೆನ್ನುವ ಭಾವವನ್ನು ಬೆಳೆಸಿಕೊಂಡಳು. ಅದರಲ್ಲೇ ಬೆಳೆಯುತ್ತಾ ಬಂದಳು. ತನ್ನ ತಂದೆಯು ಅಲ್ಲಿನ ಅರ್ಚಾಮೂರ್ತಿ ವಟಪತ್ರಶಾಯಿಗಾಗಿ ಕಟ್ಟಿಟ್ಟಿದ್ದ ಹೂಮಾಲೆಯನ್ನು ಅವರಿಲ್ಲದ ವೇಳೆ ತಾನು ಮುಡಿಸಿಕೊಂಡು, ನಿಲುಗನ್ನಡಿಯಲ್ಲಿ ನೋಡಿಕೊಂಡು ಸಂತೋಷಪಟ್ಟು ನಂತರ ಅದರ ಜಾಗದಲ್ಲಿಡುತ್ತಿದ್ದಳು. ಹೀಗೆ ಅನೇಕ ದಿನಗಳಾದ ಮೇಲೆ ಒಂದು ದಿನ ಈ ಸಂಗತಿಯು ರಟ್ಟಾಯಿತು. ತಂದೆಯು ಮಗಳ ಈ ಕೃತ್ಯಕ್ಕೆ ಕೊರಗಿ ಅಂದು ಆ ಮಾಲೆಯನ್ನು ಪರಮಾತ್ಮನಿಗೆ ಅರ್ಪಿಸಲಿಲ್ಲ. ಆದರೆ ಆ ರಾತ್ರಿ ಇವರ ಕನಸಿನಲ್ಲಿ ಪರಮಾತ್ಮನು ಬಂದು " ಭಕ್ತ, ಗೋದೆಯು ನೀ ಹೆತ್ತ

ಮಗಳೇನು? ಅವಳು ಮುಡಿಸಿಕೊಡುವುದು ನನಗೆ ಪ್ರಿಯವಾಗಿರುವಾಗ ನೀನೇಕೆ ಹೀಗೆ ಮಾಡಿದೆ" ಎಂದನು. ಗೋದೆಯು ತಾನು ಹೂವನ್ನು ಮೊದಲು ಮುಡಿಸಿ ಕೊಂಡು ಪರಮಾತ್ಮನಿಗೆ ಕೊಡುವುದು ಪರಮಾತ್ಮನ ಆಜ್ಞೆ ಎಂದು ಭಾವಿಸಿ ಹಾಗೆಯೇ ಮಾಡುತ್ತಾ ಬಂದರು. ಮಗಳಲ್ಲಿ ಅನ್ಯಾದೃಶ ಗೌರವವನ್ನು ತಾಳಿದರು. ಅಂದಿನಿಂದ ಇವಳು. "ಶೂಡಿಕ್ಕೊಡುತ್ತ ನಾಚ್ಚಿಯಾರ್" ಆದಳು. ತನ್ನನ್ನೂ ಪರಮಾತ್ಮನನ್ನೂ ಇವಳು ವಶಪಡಿಸಿಕೊಂಡಳಾದುದರಿಂದ ವಿಷ್ಣು ಚಿತ್ತರು ಇವಳನ್ನು "ಆಂಡಾಳ್" ಎಂದು ಕರೆಯಲು ಪ್ರಾರಂಭಿಸಿದರು.

ಈ ಪ್ರಸಂಗವು ಅವಳಲ್ಲಿ ಮತ್ತೂ ದೈವೀಸ್ವಭಾವವು ಬೆಳೆಯುವಂತೆ ಮಾಡಿತು. ಪರಮಾತ್ಮನೊಬ್ಬನೇ ತನಗೆ ಪತಿಯಾಗಲು ಯೋಗ್ಯನೆಂದು ನಿಶ್ಚಯಿಸಿಕೊಂಡಳು. ಆಗ ವಿಷ್ಣುಚಿತ್ತರು ಶ್ರೀವೈಷ್ಣವ 108 ದಿವ್ಯ ದೇಶಗಳಲ್ಲಿರುವ ಪರಮಾತ್ಮನ ದಿವ್ಯ ಮಂಗಳ ರೂಪಗಳನ್ನು ವರ್ಣಿಸಿದರು. ಅವುಗಳನ್ನು ಕೇಳಿ ಆಕೆಯು ಶ್ರೀರಂಗದ ಶ್ರೀರಂಗನಾಥನಲ್ಲಿ ಪ್ರೇಮ ಭರಿತಳಾದಳು. ತನ್ನ ಪ್ರತಿಭೆಯಿಂದ ತನ್ನ ಮನೋ ಭಾವವನ್ನು ಪದ್ಯರೂಪದಲ್ಲಿ ಹಾಡಲು ಪ್ರಾರಂಭಿಸಿದಳು. "ತೈಯೊರು ತಿಂಗಳ್" ಎಂದು ಪ್ರಾರಂಭವಾಗುವ "ನಾಚ್ಚಿಯಾರ್ ತಿರುಮೊಳಿ" ಎನ್ನುವ 143 ಪದ್ಯ ಗಳಲ್ಲಿ ತನ್ನ ಮನವನ್ನು ಬಿಚ್ಚಿನುಡಿದಳು. ಇವಳ ವಿಜಾತೀಯ ವರ್ತನೆಗಳನ್ನು ಕಂಡು ತಂದೆಯು ಇವಳ ಮದುವೆಗೆ ಪ್ರಯತ್ನವನ್ನು ಪ್ರಾರಂಭಿಸಿದರು. ಇದನ್ನು ಕಂಡು ಇವಳು ತನ್ನ ಹೃದಯವನ್ನು

ವಾನಿಡೈ ವಾೞ್ವಂ ಅವ್ವಾನವರ್ಕು
ಮಱೈಯವರ್ ವೇಳ್ವಿಯಿಲ್ ವಹುತ್ತ ವಾವಿ
ಕಾನಿಡೈ ತ್ತಿರಿವದೋರ್ ನರಿ ಪುಕುಂದು
ಕಡಪ್ಪದುಂ ಮೋಪ್ಪದುಂ ಶೆಯ್ವದೊಪ್ಪ
ಊನಿಡೈ ಯಾೞಿ ಶೆಂಗು ಉತ್ತಮುರ್ಕಿನ್ರು
ಉನ್ನಿಡತ್ತೆೞುಂದ ಎಕ ತಡ ಮುಲೈಕಳ್
ಮಾನಿಡವರ್ಕ್ಕನ್ರು ಪೇಚ್ಚಪ್ಪಡಿಲ್
ವಾೞ್ಕಿಲ್ಲೇ ಕಂಡಾಯ್ ಮನ್ಮಥನೇ (ನಾ–ತಿ 1–5)

ಎನ್ನುವ ಪದ್ಯದ ಮುಖೇನ ತಿಳಿಸಿದಳು. ತಂದೆಗೆ ಇದು ಬಿಡಿಸಲಾರದ ಒಗಟಿ ಯಾಯಿತು. ಒಂದ ಕಡೆ ಇವಳ ಅನ್ಯಾದೃಶ ಸೌಂದರ್ಯ, ಪ್ರತಿಭೆ, ಭಗವತ್ಪ್ರಾವಣ್ಯ ಮತ್ತು ಹಠ, ಮತ್ತೊಂದೆಡೆ ಸಮಾಜದ ಕಟ್ಟು ಪಾಡು. ಏನೂ ತೋಚದೆ ಮಗಳನ್ನು ಕರೆದು "ಮಗು, ನಿನಗೆ ಭಾಗವತವನ್ನು ಹೇಳಿರುವೆನು; ಗೋಪಿಯರು

ಶ್ರೀಕೃಷ್ಣನನ್ನು ಹೊಂದಲು ಕಾತ್ಯಾಯನೀ ವ್ರತವನ್ನು ಮಾಡಿದಂತೆ ನೀನೂ ವ್ರತ ಮಾಡಿ, ಅದರಿಂದ ಶ್ರೀಕೃಷ್ಣನನ್ನು ಒಲಿಸಿಕೊ; ಇಲ್ಲವೇ ಸಮಾಜದ ಕಟ್ಟುಪಾಡಿಗೆ ವಶಳಾಗಬೇಕು" ಎಂದರು. ಪರಮೈಕಾಂತಿಗಳ ಭಾವದಲ್ಲಿ ಬೆಳೆದ ಇವಳ ಮನಸ್ಸು ಕಾತ್ಯಾಯನೀ ವ್ರತಮಾಡಲು ಅವಕಾಶ ಕೊಡಲಿಲ್ಲ. ಅವಳ ಸ್ಥಾನದಲ್ಲಿ ಕೃಷ್ಣನನ್ನೇ ಇಟ್ಟುಕೊಂಡು ಮಾನಸಿಕ ವ್ರತವನ್ನು ತಾಳಿದಳು. ಮಾರ್ಗಶೀರ್ಷ ಮಾಸದ 30 ದಿನಗಳಲ್ಲಿ ದಿನಕ್ಕೆ ಒಂದರಂತೆ ಹಾಡನ್ನು ಹಾಡುತ್ತಾ ಬಂದಳು. ತನ್ನ ನಾಚ್ಚಿಯಾರ್ ತಿರುಮೊಳಿಯಲ್ಲಿ ತೋರಿಸಿದಂತೆ ಪರಮಾತ್ಮನು ಕನಸಿನಲ್ಲಿ ತನ್ನನ್ನು ಮದುವೆ ಮಾಡಿಕೊಂಡಂತೆ ಜಾಗೃದವಸ್ಥೆಯಲ್ಲೂ ಮದುವೆ ಮಾಡಿಕೊಳ್ಳುವೆನೆಂದು ಪೂರ್ಣ ವಿಶ್ವಾಸವಿಟ್ಟಳು; ಈ ಸಂದರ್ಭದಲ್ಲಿ ಬರೆದ 30 ಪದ್ಯಗಳೇ ಪ್ರಸಿದ್ಧವಾದ "ತಿರುಪ್ಪಾವೈ".

ಮನದಲ್ಲಿ ಭಾವವಿಶೇಷ ತುಂಬಿತು. ತಾನೇ ಶ್ರೀರಂಗಕ್ಕೆ ಹೋಗಿ ಪರಮಾತ್ಮನೊಡನೆ ಸೇರಬೇಕೆಂದೆನಿಸಿತು ಇವಳಿಗೆ. ಅಲ್ಲಿಗೆ ಕರೆದೊಯ್ಯುವಂತೆ ತಂದೆಯನ್ನು ನಿರ್ಬಂಧಿಸಿದಳು. ಭಗವತ್ಪ್ರೇರಿತನಾದ ದೊರೆ ವಲ್ಲಭದೇವನು ಕಳುಹಿಸಿಕೊಟ್ಟ ಪಲ್ಲಕ್ಕಿ ಮೊದಲಾದ ಸಕಲ ರಾಜಮರ್ಯಾದೆಯೊಡನೆ ಶ್ರೀರಂಗವನ್ನು ಸೇರಿ ಅಲ್ಲಿ ಶ್ರೀ ರಂಗನಾಥನ ಶೇಷಶಯ್ಯೆಯನ್ನು ಹತ್ತಿ ಮಾಯವಾದಳು. ಇದನ್ನು ಶ್ರೀ ವಿಷ್ಣುಚಿತ್ತರೇ ಹೇಳಿರುವರು.

ಒರು ಮುಕಿಳ್ ತನ್ನೈ ಉಡೈಯೇ
ಉಲಕಂ ನಿರೈಂದ ಪುಕೞ್ನಲ್
ತಿರುಮುಕಿಳ್ ಪೋಲ್ ವಳರ್ತ್ತೇ
ಶೆಂಕಣ್ಮಾಲ್ ತಾ ಕೊಂಡುಪೋನಾ
ತಿ. ಮೊ. (III, 8, 4)

ಎನ್ನುವ ಅವರ ಪದ್ಯದಲ್ಲಿ ಇದನ್ನು ಕಾಣಬಹುದು.

ಇದು ಲೋಕದೃಷ್ಟಿಯಲ್ಲಿ ಅಸಂಭವವೆಂದು ತೋರಬಹುದು. ಆದರೆ "ಗೋದಾ" ಎನ್ನುವಳು ಯಾರು ಎಂದು ತಿಳಿದವರಿಗೆ ಇದೆಲ್ಲವೂ ಸತ್ಯವೆಂದು ಕಾಣದಿರದು. ಇವಳ ಅನುಪಮ ಪ್ರತಿಭೆಯಿಂದಲೂ 8ನೇ ವರ್ಷದಲ್ಲೇ ಪ್ರಫುಲ್ಲಿತವಾದ ಕವಿತಾ ಶಕ್ತಿಯಿಂದಲೂ, ಪರಮ ಯೋಗಿಗಳಿಂದಲೂ ಬಿಡಿಸಲಾರದ ವೇದಾಂತದ ತಿರುಳನ್ನು ಸುಲಭವಾಗಿ ಹಾಡಿಕೊಟ್ಟಿರುವ ಪದ್ಯಗಳಿಂದಲೂ, ಜನನ ಕ್ರಮದಿಂದಲೂ ಕೂಡ ಇವಳು ಭೂದೇವಿಯ ಅವತಾರವೆಂದೂ ಲಕ್ಷ್ಮೀದೇವಿಯ ಆವೇಶಾವತಾರವೆಂದೂ ತಿಳಿದರೆ ಅದು ಅತಿಶಯೋಕ್ತಿಯಾಗಲಾರದು. ಪೂರ್ವಾಚಾರ್ಯರು ಅವಳನ್ನು ನಾನಾ ನಾಮಗಳಿಂದ ಅನುಸಂಧಾನಮಾಡಿರುವರು.

ಕುಲದೃಷ್ಟಿಯಿಂದ

1) ವೇಯರ್‌ಕುಲವಿಳಕ್ಕು
2) ತೆಪುದುವೈವೇಯರ್‌ವಯಂದವಿಳಕ್ಕು
8) ಪಟ್ಟರಭಿರ್ಯಾ ಮುದಲ್ವಿ

ದೇಶಕ್ಕೇ ಅಲಂಕಾರಪ್ರಾಯಳೆನ್ನುವ ದೃಷ್ಟಿಯಿಂದ

4) ಮಲ್ಲಿನಾಡಾಂಡ ಮಡಮಯಿಲ್
5) ತೆ ತಿರುಮಲ್ಲಿ ನಾಡಿ
6) ಪುದುವೈನಗರ್ ಆಂಡಾಳ್
7) ಅನ್ನವಯಲ್ ಪುದುವೈ ಆಂಡಾಳ್

ಭಕ್ತಿಯ ಹಿರಿಮೆಯಿಂದ

8) ಶೂಡಿಕ್ಕೊಡುತ್ತನಾಚ್ಚಿಯಾರ್
9) ಅಲ್ಲಿನಾಳ್ ತಾಮರೈಮೇಲ್ ಅರಣಂಗರ್ನಿ ತುಣೈವಿ
10) ಮೇಲ್ಲಿಯಲಾಳ್
11) ಆಯರ್‌ಕುಲವೇಂದನಾಕತ್ತಾಳ್
12) ಕೋಲಚ್ಚುರಿಶಂಗೈಮಾರ್ಯ ಶೆವ್ವಾರ್ಯ ಗುಣಂ ವಿನವುಂ ಶೀನನತ್ತಾಳ್
13) ಶೆಙ್ಗುಂಕುಳಲ್ ಮೇಲ್ ಮಾಲೈತ್ತೊಡೈ ತೆನ್ನರಂಗರ್ ಅರುಕಿಯುಂ ಮದಿಪ್ಪುಡೈಯ ಶೋಲೈಕ್ಕಿಳಿ.
14) ಅರಂಗರ್‌ಮೌಳಿ ಶೂಳ್‌ಕಿನ್ರಮಾಲೈಯೈ ಶೂಡಿಕ್ಕೊಡುತ್ತವಳ್

ಸೌಂದರ್ಯದಲ್ಲಿ

15) ಶುರುಂಬಾರ್‌ಕುಳಲ್‌ಗೋದೈ

ಆಚಾರ್ಯಳಾಗಿ

16) ತಿರುಪ್ಪಾವೈಪಾಡಿಯ ಶೆಲ್ವಿ

ಇವಳ ಹೆಸರು ಗೋದಾ. ಈ ಪದವು ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳಲ್ಲಿ ಪ್ರಸಿದ್ಧವಾಗಿದೆ.

ಸಂಸ್ಕೃತದಲ್ಲಿ "ಗೋ" ಶಬ್ದವು "ದಾ" ಎನ್ನುವ ಕ್ರಿಯಾಪದನಿಷ್ಪನ್ನಶಬ್ದದೊಡನೆ ಸೇರಿ "ಗೋದಾ" ಆಗಿದೆ.

ಗೌರಾದಿತ್ಯೇ ಬಲೀವರ್ದೇ ಕೃತುಭೇದರ್ಷಿ ಭೇವಯೋಃ ।
ಸ್ತ್ರೀ ತು ಸ್ಯಾತ್ ದಿಶಿ ಭಾರತ್ಯಾಂ ಭೂಮೌ ಚ ಸುರಭಾವಪಿ ।
ಪುಂ ಸ್ತ್ರಿಯೋಃ ಸ್ವರ್ಗವಜ್ರಾಂಬುರಶ್ಮಿದೃಕ್‌ಬಾಣಲೋಮಸು ॥

ಎಂದು ನಿಘಂಟುವಿದೆ. ಸ್ತ್ರೀಲಿಂಗದಲ್ಲಿ ದಿಗ್ವಾಚಕವಾಗಿಯೂ, ಭಾಷಾವಾಚಕವಾಗಿಯೂ, ಭೂಮಿವಾಚಕವಾಗಿಯೂ, ಪುಷ್ಪವಾಚಕವಾಗಿಯೂ, "ಗೋ" ಶಬ್ದವು ಪ್ರಯೋಗದಲ್ಲಿದೆ. "ಗಾಂ ದದಾತಿ" ವಾಕ್ಚಾತುರ್ಯವನ್ನು (ಭಾರತೀ,) ಪರಮಗತಿಯನ್ನೂ (ದಿಕ್ಕು) ಪುಷ್ಪಮಾಲೆಯನ್ನೂ ಕೊಡುವವಳು ಗೋದಾ. "ಆತೋಽನುಪಸರ್ಗೇ ಕಃ" ಎನ್ನುವ ಪಾಣಿನಿಯ ಸೂತ್ರದ ಪ್ರಕಾರ (III,2,3) ನಿಷ್ಪನ್ನರೂಪವಿದು. (2) "ಗವಾ ದೀಯತೇ—ಗೋದಾ; ಭೂದೇವಿಯಿಂದ ಕೊಡಲ್ಪಟ್ಟವಳು; (3) ಗಾಂ-ದ್ಯತಿ-ಗೋದಾ-ಭೂಮಿಯನ್ನು ಸೀಳಿಕೊಂಡು ಬಂದವಳು. ಸೀತಾದೇವಿಗೂ ಈ ಹೆಸರು ಸಲ್ಲುತ್ತದೆ. ಭೂದೇವಿಯವಾಚಕವೂ ಆಗುತ್ತದೆ. ಗೋದಾದೇವಿಯಲ್ಲಿ ಭೂ—ಮತ್ತು ಶ್ರೀ—ದೇವಿಯರ ಅಂಶವಿದೆ. ಈ ಇಬ್ಬರು ದೇವಿಯರೂ ಪರಮಾತ್ಮನ ಪತ್ನಿಯರೆಂದು ಪುರುಷ ಸೂಕ್ತವು "ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ" ಎಂದು ಉದ್ಘೋಷಿಸುತ್ತಿದೆ. "ಹ್ರೀ" ಎಂದರೆ ಭೂದೇವಿ. ಇಲ್ಲಿ ಎರಡು "ಚ" ಕಾರಗಳಿರುವುದರಿಂದ ಪರಮಾತ್ಮನ ರಕ್ಷಕತ್ವದಲ್ಲಿ ಇಬ್ಬರು ದೇವಿಯರ ಪಾತ್ರವೂ ಇದೆ. ಶ್ರುತಿ ಮತ್ತು ಸ್ಮೃತಿಯ ಆಧಾರದ ಮೇಲೆ ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ "ಶ್ರೀ" ದೇವಿಯು ಪುರುಷಕಾರ ದೇವತೆ. "ಪುರುಷಕಾರ" ಎಂದರೆ ಶಿಫಾರಸು ಮಾಡುವ ಚೈತನ್ಯ ವಿಶೇಷ. ಅವಳಲ್ಲಿ ಶರಣುಹೋಗದೆ ಪರಮಾತ್ಮನಲ್ಲಿ ನಾವು ಮಾಡುವ ಪ್ರಪದನವು ಸಫಲವಾಗುವುದಿಲ್ಲ. ಪುರಾಣದಲ್ಲಿ

ಸರ್ವಜ್ಞೋಪಿ ಹಿ ದೇವೇಶಃ ಸದಾ ಕಾರುಣಿಕೋಪಿ ಸನ್ ।
ಸಂಸಾರತಂತ್ರವಾಹಿತ್ವಾತ್ ರಕ್ಷಾಪೇಕ್ಷಾಮಪೇಕ್ಷತೇ ॥

ಲ—ತ 17, 18

ಎಂದು ಹೇಳಿದೆ. ಪರಮಾತ್ಮನು ನಮಗೆ ಪ್ರಭು ಮತ್ತು ತಂದೆ. ಪ್ರಭುವಾಗಿ ನಿಷ್ಪಕ್ಷಪಾತದಿಂದ ಕರ್ಮಫಲವನ್ನು ಕೊಡುತ್ತಾನೆ. ನನ್ನನ್ನು ರಕ್ಷಿಸು—ಎನ್ನುವ ಮೊರೆಗೆ ಅಣಿಯವನು. ಹೀಗೆ ಮೊರೆಯಿಡಲು ಮನೋಧರ್ಮ ಬರುವುದು ಭೂದೇವಿಯಿಂದ. ಮನಃಪೂರ್ತಿಯಿಂದ ಈ ಮೊರೆಯನ್ನು ಲಕ್ಷ್ಮೀದ್ವಾರ ಸಲ್ಲಿಸಿದರೆ ಆಗ ಪರಮಾತ್ಮನು ಪಕ್ಷಪಾತವಿಲ್ಲದವನಾಗಿ ನಮ್ಮ ಇಷ್ಟಾರ್ಥವನ್ನು ಕೊಡುವನು. ಇದಕ್ಕೆ ವೇದದ ಆಧಾರವಿದೆ. ಬಾದರಾಯಣರು "ವೈಷಮ್ಯ ನೈರ್ಘೃಣ್ಯೇ, ನ.....(II, 1, 34) ಎನ್ನುವ ಸೂತ್ರದಲ್ಲಿ ಇದನ್ನು ಸಮರ್ಥಿಸಿರುವರು. ಸ್ಮೃತಿಯಲ್ಲಿ ಪುಷ್ಕಳ ಪ್ರಮಾಣವಿದೆ. ಶ್ರೀರಾಮನು

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ ॥

ರಾ—ಯು 18—38

ಎಂದೂ, ಶ್ರೀಕೃಷ್ಣನು

ಸರ್ವಧರ್ಮಾ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಭ–ಗೀ XVIII, 66.

ಎಂದೂ ಹೇಳಿರುವುದರಲ್ಲಿ ವಿಶ್ವಾಸವಿಟ್ಟವರಿಗೆ ಗೋದಾದೇವಿಯ 30 ಪದ್ಯಗಳ ಸವಿಯು ತಗುಲೀತು. "ಗಾಂ (ಬಾರತೀಂ) ದದಾತಿ" ಎನ್ನುವ ಅರ್ಥದಲ್ಲಿ ಅವಳು ವಿದ್ಯಾಸ್ವರೂಪಳು ಮತ್ತು ವೇದಸ್ವರೂಪಳು. ವೇದದಲ್ಲಿ "ಗೋ" ಶಬ್ದವು ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದರ್ಥ ಕೊಡುತ್ತದೆ. ಅದಕ್ಕಾಗಿಯೇ ನಿಗಮಾಂತ ದೇಶಿಕರು

ಗೋರೂಪತಾಂ ವೇದಗಿರೋ ಭಜಂತಿ

ಯಾ–ಅ IV, 70.

ಎಂದಿರುವರು. ಗೋದೆಯು ತನ್ನ ತಿರುಪ್ಪಾವೈ 30 ನೇ ಪದ್ಯದಲ್ಲಿ "ಶೆಲ್ವತ್ತಿರು ಮಾಲಾಲ್ ಎಂಗುಂ ತಿರುವರುಳ್ ಪೆತ್ತು ಇನ್ಬುರುವರ್" ಎಂದಿರುವವರ್ಥವನ್ನು ವೇದದಲ್ಲೂ ನೋಡಬಹುದು. ಋ–ದೇ I, 4, 2 ರಲ್ಲಿ

ಉಪ ನಃ ಸವನಾಗಹಿ ಸೋಮಸ್ಯ ಸೋಮಪಾ ಪಿಬ ।
ಗೋದಾ ಇತ್ ರೇವತೋ ಮದಃ ॥

ಎನ್ನುವ ಮಂತ್ರವಿದೆ. ರೇವತಃ–ಐಶ್ವರ್ಯದಿಂದ ಕೂಡಿರುವ ನಿನ್ನ, ಮದ–ಮಹಿಮೆಯು, ಗೋದಾ ಇತ್–ಗೋವುಗಳನ್ನು (ಜ್ಞಾನವನ್ನೂ, ಭಕ್ತಿಯನ್ನೂ, ವೈರಾಗ್ಯವನ್ನೂ ಇವುಗಳೇ ಆತ್ಮಗುಣಗಳಾದ ಐಶ್ವರ್ಯವನ್ನು) ಕೊಟ್ಟು, ನಃ–ನಮ್ಮ, ಸವನಾಃ–ವ್ರತಗಳನ್ನು ಸಾದ್ಗುವುಳ್ಳವುಗಳನ್ನಾಗಿ ಮಾಡಲು, ಉಪ–ಆ–ಗಹಿ–ದಯ ಮಾಡಬೇಕು; ಸೋಮಸ್ಯಪಿಬ–ಸೋಮವನ್ನು ಸೇವಿಸು–ಎಂದು ಸ್ವಾಪದೇಶಾರ್ಥವಾಗಿ ಹೇಳಿರುವಂತೆ ಗೋದಾದೇವಿಯು 30ನೇ ಪದ್ಯದಲ್ಲಿ ಅದನ್ನೇ ಫಲವಾಗಿ ಹೇಳಿರುವಳು.

ದ್ರಾವಿಡಪದವಾಗಿ "ಗೋದೈ ತೊಂಗಲ್ ಕೊಂಡೈ ಮಾಲೈ" "ಮಾಲೆಯುಂ ಮಾದರಂ ಕೈತ್ತೋಕಟ್ಟಿಯುಂ ಉಡಂಬುಂ ಕೞಲುಂ ಕಾತ್ತುಂ ಶೇರನುಂ ಒೞಂಗು ವಿಯಮುಂ ಗೋದೈ ಎನ್ಬ" ಎಂದು ತಮಿಳು ನಿಘಂಟುಗಳಲ್ಲಿ ಕಂಡುಬರುತ್ತದೆ. ಈ ಅರ್ಥಗಳನ್ನೆಲ್ಲಾ ಕ್ರೋಢೀಕರಿಸಿ ಗೋದಾದೇವಿಯನ್ನು "ಶೂಡಿಕ್ಕೊಡುತ್ತನಾಚ್ಚಿಯಾರ್" ಎಂದು ಕರೆಯುವುದರಲ್ಲಿ ಒಂದು ಅತಿಶಯವು ಕಂಡುಬರುತ್ತದೆ. ಮೊದಲನೇ ತಮಿಳು ಮುಖ ಪದ್ಯದಲ್ಲಿ (ತನಿರ್ಯ) ಹೇಳಿರುವಂತೆ

ನಮಕ್ಕೇ ಪಾಮಾಲೈ ಪಾಡಿ ಕೂಡುತ್ತಾಳ್ ತನಕ್ಕಾಹ
ಮಣಿವಣ್ಣನುಕ್ಕು ಪೂಮಾಲೈ ಶೂಡಿ ಕೊಡುತ್ತಾಳ್

ಅಂದರೆ ನಮ್ಮನ್ನು ಅನುಗ್ರಹಿಸುವುದಕ್ಕಾಗಿ ತಾನು ಬರೆದ ಮೂವತ್ತು ಹಾಡುಗಳನ್ನುಕೊಟ್ಟು ತನಗಾಗಿ ಪುಷ್ಪಮಾಲೆಯನ್ನು ತಾನು ಮೊದಲು ಮುಡಿಸಿಕೊಂಡು ಪರಮಾತ್ಮನಿಗೆಕೊಟ್ಟಳು ಗೋದಾದೇವಿ.

ಗೋದಾದೇವಿಯು ತನ್ನ ಅವತಾರ ಕೃತ್ಯವನ್ನು ತಿರುಪ್ಪಾವೈಯಲ್ಲಿ ಪೂರ್ತಿಗೊಳಿಸಿ ಮತ್ತೆ ಪರಮಾತ್ಮನೊಡನೆ ಸೇರಲು ವಿಳಂಬವಿಲ್ಲದೇ ಮಾರ್ಗಶೀರ್ಷಮಾಸದ ಮುಂದಿನ ತಿಂಗಳಲ್ಲೇ (ತೈಮಾಸಂ) ತನ್ನ ಆರ್ತಿಯನ್ನು "ತೈ ಯೊರು ತಿಂಗಳುಂ" ಎಂದು ಪ್ರಾರಂಭವಾಗುವ ನಾಚ್ಚಿಯಾರ್ ತಿರುಮೊೞಿಯಲ್ಲಿ ತೋಡಿಕೊಂಡು ಪರಮಾತ್ಮನಲ್ಲಿ ಕೂಡಿಕೊಂಡಳು.

ತಿರುಪ್ಪಾವೈಯನ್ನು ಸೂಕ್ಷ್ಮದೃಷ್ಟಿಯಿಂದ ಅಧ್ಯಯನ ಮಾಡಿದರೆ ಅದರ ಅರ್ಥವು ಉಪನಿಷತ್ತುಗಳ ಸಾರವೆಂದು ಕಾಣದಿರದು. ಉಪನಿಷತ್ತುಗಳ ಸಾರವು ಇಷ್ಟೇ. ಪರಮಾತ್ಮನು ಹೇಗೆ ಕರ್ಮಾಧ್ಯಕ್ಷನೋ (ಶ್ವೇ–ಉ VI, 11) ಹಾಗೆಯೇ ಮೋಕ್ಷಕೊಡುವವನೂ (ಕ ಉ II, 23) ಮತ್ತು ಮುಕ್ತಿಪ್ರಾಪ್ಯನೂ (ತೈ ಉ II) ಆಗಿರುವನು. ಕರ್ಮಾಧ್ಯಕ್ಷನಾಗಿ ನಿಷ್ಪಕ್ಷಪಾತಿಸ್ವಾಮಿಯಾಗಿರುವನು. ಮೋಕ್ಷಪ್ರದನಾಗಿ ರಕ್ಷಕನಾದ ತಂದೆಯಾಗಿರುವನು. ಮುಕ್ತಿಪ್ರಾಪ್ಯನಾಗಿ ನಿಧಿಯಾಗಿರುವನು. ಲೋಕದ ಸ್ವಾಮಿಯಾಗಿದ್ದು ಅದರ ರಕ್ಷಕನಾಗಬೇಕಾದರೆ ಅವನು ಹೇಗೆ ನಿಷ್ಪಕ್ಷಪಾತಿಯೆಂದು ತಿಳಿಯುವುದಕ್ಕೆ ಮಾತ್ರ ನಮಗೆ ತರ್ಕದ ಆವಶ್ಯಕತೆಯಿದೆ. ಛಾಂದೋಗ್ಯೋಪನಿಷತ್ತಿನಲ್ಲಿ ಅವನು ಅಮಲನು ಮತ್ತು ಕಲ್ಯಾಣಗುಣ ವಿಶಿಷ್ಟನು (VIII) ಎಂದು ಸಾರಲ್ಪಟ್ಟಿದೆ. ಆದ್ದರಿಂದ ಅವನು ಸ್ವಾಮಿಯಾಗಿ ಪಕ್ಷಪಾತವಹಿಸದೇ ರಕ್ಷಕನಾಗಬೇಕಾದರೆ ನಮ್ಮ ಬುದ್ಧಿಯನ್ನನು ಸರಿಸಿ, ನಮ್ಮನ್ನು ಪರಿಷ್ಕರಿಸಿ ನಮ್ಮನ್ನು ಪರಮಾತ್ಮನಿಗೆ ಪ್ರಿಯವಾಗುವಂತೆ ಮಾಡಬಲ್ಲ ತತ್ವವೊಂದು ನಮ್ಮಿಬ್ಬರ ನಡುವೆ ಇರಲೇಬೇಕು. ಇದಕ್ಕೆ **ಪುರುಷಕಾರವೆಂದು** ಹೆಸರು. ಆ ಪುರುಷಕಾರವೇ "ಶ್ರೀ"

ಶೃಣಾತಿ ನಿಖಿಲಾ ದೋಷಾ ಶ್ರೀಣಾತಿ ಚ ಗುಣೈ ರ್ಜಗತ್ ।
ಶ್ರೀಮತೇ ಚಾಖಿಲೈ ರ್ನಿತ್ಯಂ ಶ್ರಯತೇ ಚ ಪರಂ ಪದಂ ।
ಶೃಣೋತಿ ಶ್ರಾವಯತ್ಯೇಷಾ ತಸ್ಮಾಚ್ಛ್ರೀರಿತಿ ಕಥ್ಯತೇ ॥

ಅ. ಸಂ–

ಎನ್ನುವ ಸ್ಮೃತಿವಾಕ್ಯಗಳಿಂದ "ಶ್ರೀ" ಎಂದರೆ (1) ನಮ್ಮ ದೋಷಗಳನ್ನು

ಹೋಗಲಾಡಿಸಿ (2) ನಾವು ಸದ್ಗುಣವುಳ್ಳವರಾಗುವಂತೆಮಾಡಿ (3) ತನ್ನನ್ನು ಆಶ್ರಯಿಸುವಂತೆಮಾಡಿ (4) ಮುಕ್ತಿಸ್ಥಾನದಲ್ಲಿ ಪರಮಾತ್ಮನೊಡನಿದ್ದು (5) ನಮ್ಮ ಪ್ರಾರ್ಥನೆಯನ್ನು ಮನ್ನಿಸಿ (6) ಪರಮಾತ್ಮನು ನಮ್ಮಲ್ಲಿ ಒಲಿಯುವಂತೆ ಮಾಡಬಲ್ಲ ತತ್ವವೆನ್ನುವ ಅರ್ಥವು ಅವಳಲ್ಲಿ ಅನ್ವರ್ಥವಾಗಿದೆ. ಈ ತತ್ವವು ಜೀವ ತತ್ವವಾದರೆ, ಜೀವರಾಶಿಯಲ್ಲಿ ಇವಳನ್ನು ಮಾತ್ರ ತನಗೆ ಸಹಾಯಕ ದೈವವಾಗಿ ಸ್ವೀಕರಿಸುವುದು ಪಕ್ಷಪಾತವಾದೀತು ಮತ್ತು ಪರಮಾತ್ಮನ ಪೂರ್ಣತ್ವಕ್ಕೆ ಹಾನಿ ಬಂದೀತು. ಆದ್ದರಿಂದ ಇದು ನಮ್ಮ ದೃಷ್ಟಿಯಿಂದ ಪರತತ್ವವೇ ಆಗಿರಬೇಕು ಎಂದು ವಡಗಲೆ ಸಂಪ್ರದಾಯದಲ್ಲಿ ಹೇಳಲಾಗಿದೆ. ತೆಂಕಲೆ ಸಂಪ್ರದಾಯಸ್ಥರು ಇವಳು ಜೀವಕೋಟಿಗೆ ಸೇರಿದ್ದರೂ ಪರಮಾತ್ಮನಿಗೆ ಪಕ್ಷಪಾತಿತ್ವದೋಷವು ಬರುವುದಿಲ್ಲವೆಂದು ಹೇಳುವರು. ಹೇಗಿದ್ದರೂ "ಶ್ರೀ" ತತ್ವವು ಪುರುಷಕಾರವೆನ್ನುವುದರಲ್ಲಿ ಅಭಿಪ್ರಾಯ ಭೇದವಿಲ್ಲ. ಶ್ರುತಿಯಲ್ಲಿ ಬ್ರಹ್ಮಶಬ್ದವಾಚ್ಯವಾದ ಪರತತ್ವವು "ಏಕಮೇವಾದ್ವಿತೀಯಂ" ಎಂದು ಸಾರಲ್ಪಟ್ಟರೂ ಆ ಪರತತ್ವವು ದಂಪತಿಯಾಗಿರಲು ಯಾವ ಅಭ್ಯಂತರವೂ ಇಲ್ಲವೆಂದು ಸಿದ್ಧಾಂತ ಗ್ರಂಥಗಳಲ್ಲಿ ನಿಶ್ಚಯಿಸಲ್ಪಟ್ಟಿದೆ.

ಭಗವಂತನು ಜಗತ್ತಿಗೆ ನಿಮಿತ್ತ ಕಾರಣ ಮಾತ್ರವಲ್ಲ. ಉಪಾದಾನ ಕಾರಣನೂ ಆಗಿರುವನು. ಮಣ್ಣು ಉಪಾದಾನ ಕಾರಣವಾಗಿ ಮಡಕೆ ಮೊದಲಾದವುಗಳು ಉಪಾದೇಯವಾಗಿರುವಂತೆ ಪರಮಾತ್ಮನು ಉಪಾದಾನ, ಜೀವ ಉಪಾದೇಯ. ಮಡಕೆಯಲ್ಲಿ ಆಕಾರ ಭೇದವಿದ್ದರೂ ಅಣುರೇಣುವಿನಲ್ಲಿರುವುದು ಮಣ್ಣೇ. ಹಾಗೆ ಜೀವನು ತನ್ನ ಪ್ರತ್ಯಕ್ ಜ್ಞಾನದಿಂದ "ಅಹಮಸ್ಮಿ" ಎಂದು ಸತ್ತಾಜ್ಞಾನವುಳ್ಳವನಾದರೂ ಪರಮಾತ್ಮನಿಂದ, ಹಾಲಿನಲ್ಲಿ ಸಕ್ಕರೆಯಂತೆ, ವ್ಯಾಪ್ತನಾಗಿರುವನು. ಇದನ್ನು ಶಾಸ್ತ್ರದಲ್ಲಿ

ಸಪ್ರತಿಘುಮಂತರಾ ತದ್ವ್ಯಾಪ್ಯದೇಶವ್ಯಾಪ್ತಿಮತ್ವಂ

ಎಂದು ಹೇಳಲಾಗಿದೆ.

ಕ–ಉ, ತೈ–ಉ,—

ಅಣೋರಣೀಯಾ೯ ಮಹತೋಮಹೀಯಾ೯
ಆತ್ಮಾಸ್ಯ ಜಂತೋ೯ ನಿ೯ಹಿತೋ ಗುಹಾಯಾಂ

ಎನ್ನುವ ಮಂತ್ರದಿಂದ ಇದನ್ನೇ ತಿಳಿಸಿದೆ. ಇದಕ್ಕೆ ಪರಮಾತ್ಮನ ಸ್ವರೂಪ ವ್ಯಾಪ್ತಿ ಎಂದು ಹೆಸರು. ಇದಲ್ಲದೇ ಪರಮಾತ್ಮನ ಮತ್ತೆರಡು ವ್ಯಾಪಕತ್ವವಿವೆ. ವಿದ್ಯುತ್ ಶಕ್ತಿಯಿಂದ ದೂರದಲ್ಲಿರುವ ವಸ್ತುವನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಲು ಸಮರ್ಥ

ರಾಗುವಂತೆ ಪರಮಾತ್ಮನು ತನ್ನ ಸಂಕಲ್ಪದಿಂದ ತ್ರಿಮೂರ್ತಿಗಳಲ್ಲಿ ವಿಷ್ಣುವಾಗಿದ್ದು ಪ್ರಪಂಚದ ಪ್ರಭುವಾಗಿ, ಕರ್ಮಾಧ್ಯಕ್ಷನಾಗಿ ಲೋಕನಿಯತಿಯನ್ನು ಕೊಟ್ಟು ಪಾಲಿಸುತ್ತಿರುವನು. ಇದು ಅವನ ಸಂಕಲ್ಪವ್ಯಾಪ್ತಿ. ಇದಲ್ಲದೆ ಅವನು ಯೋಗಿಗಳಿಗೆ ಅಂತರ್ಹೃದಯದಲ್ಲಿ ಪ್ರತ್ಯಕ್ಷವಾಗಲು ಮತ್ತು ಭಕ್ತರಿಗೆ "ಪ್ರತಿಭಾ" ಮತ್ತು "ಮೇಧಾ" ಶಕ್ತಿಗಳನ್ನು ಕೊಡಲು ನಮ್ಮ ಹೃದಯದಲ್ಲಿ ದಿವ್ಯಮಂಗಳ ವಿಗ್ರಹದಿಂದ ಇರುವನು. ಇದಕ್ಕೆ ದಿವ್ಯಮಂಗಳ ವಿಗ್ರಹವ್ಯಾಪ್ತಿ ಎಂದು ಹೆಸರು.

ಈ ಮೂರರಲ್ಲಿ ಅಮೂರ್ತರೂಪದಲ್ಲಿರುವ ಅಂದರೆ ನಿರಾಕಾರದಲ್ಲಿರುವ ಸ್ವರೂಪವ್ಯಾಪ್ತಿಯನ್ನು ಮಾತ್ರ "ಅಂತರ್ಯಾಮಿ" ಎಂದು ತಿಳಿದು ಉಪದೇಶ ಕೊಟ್ಟು ಅದ್ವೈತ ಸಂಪ್ರದಾಯವು ತನ್ನ ಮತವನ್ನು ರೂಪಿಸಿಕೊಂಡಿದೆ. ಬಾಹ್ಯ ಸಂಪ್ರದಾಯಗಳಲ್ಲಿ ಮತ್ತು ದ್ವೈತಸಂಪ್ರದಾಯದಲ್ಲಿ ಈ ಸ್ವರೂಪವ್ಯಾಪ್ತಿಯನ್ನು ಉಪೇಕ್ಷಿಸಿ ಸಂಕಲ್ಪವ್ಯಾಪ್ತಿಯನ್ನೇ ಪ್ರಧಾನವಾಗಿ ತಿಳಿದು ನಿತ್ಯ ಲೋಕವಾಸಿ ದೇವನಲ್ಲಿ ಭಕ್ತಿಯನ್ನು ತೋರಿ ನಮ್ಮನ್ನು ಅರ್ಪಿಸಿಕೊಳ್ಳಬೇಕು ಎನ್ನುತ್ತಿರುವರು. ವಿಶಿಷ್ಟಾದ್ವೈತ ಬಿಟ್ಟು ಮಿಕ್ಕ ಯಾವ ವೇದಾಂತ ಸಂಪ್ರದಾಯದಲ್ಲೂ ದಿವ್ಯಮಂಗಳ ವಿಗ್ರಹವ್ಯಾಪ್ತಿ ಸ್ವರೂಪವನ್ನು ಚೆನ್ನಾಗಿ ವಿಮರ್ಶಿಸಿಲ್ಲ. ಒಂದರಲ್ಲೇ ಮೂರುವಿಧ ಈಶ್ವರ ಕೃತ್ಯವನ್ನು ಕಾಣುವುದು ಮತ್ತು ಸಮರ್ಥಿಸುವುದು ವೇದಾಂತ ಜ್ಞಾನದಲ್ಲಿ ಒಂದು ನ್ಯೂನತೆಯನ್ನು ತೋರಿಸುತ್ತದೆ. ತನ್ನ ಸ್ವರೂಪವ್ಯಾಪ್ತಿಯಿಂದ ಚೇತನಾಚೇತನ ವಿಶಿಷ್ಟ ಪ್ರಪಂಚಕ್ಕೆ ಆಧಾರನೂ, ಸಂಕಲ್ಪವ್ಯಾಪ್ತಿಯಿಂದ ಕರ್ಮಾಧ್ಯಕ್ಷನೂ ನಿಯಂತಾವೂ, ದಿವ್ಯಮಂಗಳವಿಗ್ರಹವ್ಯಾಪ್ತಿಯಿಂದ ಶೇಷಿಯೂ ರಕ್ಷಕನೂ ಆಗಿರುವನು. ಅಂದರೆ ಜೀವವು ಪರಮಾತ್ಮನಿಗೆ ಆಧೇಯವೂ, ವಿಧೇಯವೂ, ಮತ್ತು ಶೇಷವೂ ಆಗಿದೆ. ಯಾವುದು ತಾನು ಪರಮಾತ್ಮನಿಗೆ ಆಧೇಯವೂ, ವಿಧೇಯವೂ, ಶೇಷವೂ ಆಗಿರುವೆನೆಂದು ತಿಳಿಯುತ್ತದೆಯೋ ಅದು ಪರಮಾತ್ಮನಿಗೆ ತಾನು ಶರೀರವೆಂದು ತಿಳಿಯುತ್ತದೆ. ನಾವು ನಮ್ಮ ಶರೀರಕ್ಕೆ ಇರುವಂತೆ, ನಾವು ಪರಮಾತ್ಮನಿಗೆ ಶರೀರವಾಗಿ ಅವನು ಶರೀರಿಯಾಗಿರುವನು. ಇದನ್ನು ಶ್ರುತಿಯು (ಬೃ–ಉ)

ಯ ಆತ್ಮನಿ ತಿಷ್ಠ೯ ಆತ್ಮನೋಂತರಃ
ಯಸ್ಯಾತ್ಮಾ ಶರೀರಂ ಯಮಾತ್ಮಾ ನ ವೇದ
ಯ ಆತ್ಮಾನಮಂತರೋ ಯಮಯತಿ
ಸ ತ ಆತ್ಮಾಂತರ್ಯಾಮ್ಯಮೃತಃ

—V, 7,22

ಎನ್ನುವ ಮಂತ್ರದಿಂದ ತಿಳಿಸಿದೆ. ಶಠಗೋಪರು ತಿರುವಾಯ್‌ಮೊಳಿಯಲ್ಲಿ

ಉರ್ದಮಿಶೈ ಉಯಿರಿನ ಕ್ಕರಂದು ಎಂಗುಂ ಪರಂದುಳ್ಳ
ಶುಡರ್‌ಮಿಕು ಶುರುದಿಯುಳ್ ಇವೈ ಯುಂಡ ಶುರನೇ

—I,1, 7

ಎನ್ನುವ ಪಾಶುರದಲ್ಲಿ ಸ್ವಾನುಭವದಿಂದ ತಿಳಿಸಿರುವುದೂ ಈ ಅರ್ಥವೇ. ಈ ವಿಷಯದಲ್ಲಿ ಇನ್ನೂ ವಿಶೇಷಾರ್ಥವನ್ನು ನಮ್ಮ "Hypostasis in Vedanta" ಎನ್ನುವ ಆಂಗ್ಲಗ್ರಂಥದಲ್ಲೂ "ಅಂತರ್ಯಾಮಿ ವೈಭವಂ" ಎನ್ನುವ ಸಂಸ್ಕೃತ ಶ್ಲೋಕ ಗ್ರಂಥದಲ್ಲೂ ನೋಡಬಹುದು.

ಅಜ್ಞಾನದಲ್ಲಿ ತೊಳಲುತ್ತಿರುವ ನಾವು ಎಂದಿಗೂ ತಪ್ಪುಮಾಡುವುದೇ ಸ್ವಭಾವವುಳ್ಳವರಾಗಿರುವೆವು. ಧರ್ಮವನ್ನು ಅಧರ್ಮವೆಂದೋ ಅಧರ್ಮವನ್ನು ಧರ್ಮವೆಂದೋ ತಿಳಿಯುವರಾಗಿರುವೆವು. ಪರಮಾತ್ಮನು ಕೇವಲ ಕರ್ಮಾಧ್ಯಕ್ಷನಾಗಿದ್ದರೆ ನಮಗೆ ಯಾವತ್ತಿಗೂ ಉದ್ಧಾರವಾಗುವ ಮಾರ್ಗವೇ ಇಲ್ಲ. ಜೀವನನ್ನು ಅಂತಃಕರಣಾವಚ್ಛಿನ್ನ ನಿತ್ಯ ಶುದ್ಧ ಮುಕ್ತ ಚೈತನ್ಯವೆಂದೂ, ನಿತ್ಯ ಶುದ್ಧ ಮುಕ್ತ ಚೈತನ್ಯವೇ ಅಂತರ್ಯಾಮಿಯೆಂದೂ, ಹೀಗಿರುವುದರಿಂದಲೇ ನಮ್ಮಲ್ಲಿ ನಮ್ಮನ್ನು ರಕ್ಷಿಸಿಕೊಳ್ಳುವ ಸ್ವಾತಂತ್ರ್ಯವು ಅಡಗಿದೆ ಎಂದೂ ತಿಳಿದವರಿಗೆ ಪರಮಾತ್ಮನ ಕರ್ಮಾಧ್ಯಕ್ಷತ್ವವು ಗೋಚರವಾಗದು ಮತ್ತು ಪರಮಾತ್ಮನ ಸ್ವರೂಪವ್ಯಾಪ್ತಿಯು ವಿಪರೀತವಾಗಿಯೂ ತೋರುವುದು. ಇದರಿಂದ ನಮಗೆ ಮತ್ತೊಂದು ಪ್ರಮಾದವೂ ಆಗುತ್ತಿದೆ. ನಮ್ಮ ಸಕಲಾನುಭವಕ್ಕೆ ಕಾರಣವಾದ ಜ್ಞಾನವು ಕೇವಲ ಐಂದ್ರಿಯಿಕ ಮತ್ತು ಮಾನಸಿಕ ಪ್ರಕಾಶವಾಗಿ ಮುಕ್ತಿಯಲ್ಲಿ ಅನುಭವವೇ ಇಲ್ಲದೆ ಪರಮಪುರುಷಾರ್ಥವು ಪಾಷಾಣ ಕಲ್ಪವಾಗಿ ನಿಲ್ಲುವುದು. ಹೀಗಾದರೆ "ಆನಂದೋ ಬ್ರಹ್ಮ," "ಆನಂದೀ ಭವತಿ" ಇತ್ಯಾದಿ ಶ್ರುತಿ ವಾಕ್ಯಗಳು ನಿರರ್ಥಕವಾಗುವವು. ಶಾಂತಿಗೂ ಆನಂದಕ್ಕೂ ವ್ಯತ್ಯಾಸವಿದೆ. ದುಃಖವಿಲ್ಲದೆ ಅಲೆ ಇಲ್ಲದೆ ಇರುವ ಮಾನಸಿಕಸ್ಥಿತಿಯೇ ಶಾಂತಿ. ಆನಂದವು ಒಂದು ಅನುಭವ. ಮುಕ್ತಿಯಲ್ಲಿ ಅನುಭವವಿರಬೇಕಾದರೆ ನಮ್ಮ ಜ್ಞಾನವು ಶಾಶ್ವತವಾದ ವಸ್ತುವಾಗಿರಬೇಕು.

ಆ ಜ್ಞಾನವು ನಮ್ಮ ಸ್ವರೂಪ ಜ್ಞಾನಕ್ಕಿಂತಲೂ ಬಿನ್ನವಾದುದು. ಅಂದರೆ ನಮ್ಮನ್ನು ನಾವು "ಇರುವೆವು" ಎಂದು ಮಾತ್ರ ತಿಳಿದಿರುವುದು ಸ್ವರೂಪ ಜ್ಞಾನ ಅಥವಾ ಧರ್ಮಿಜ್ಞಾನ. ಇದು ಅನುಭವವಲ್ಲ. ಇದಕ್ಕೆ ಅಪರೋಕ್ಷ್ಯವೆಂದು ಹೆಸರು. ನಾವು ಸಾಮಾನ್ಯವಾಗಿ ವ್ಯವಹರಿಸುವ ಜ್ಞಾನ ಧರ್ಮಭೂತಜ್ಞಾನ. ಇದರಿಂದಲೇ ನಮಗೆ ಸಕಲ ವಿಧಾನುಭವವು ಬರುವುದು. ಮುಕ್ತಿಯಲ್ಲೂ ಈ ಜ್ಞಾನವಿದ್ದರೇನೇ "ಆನಂದೀಭವತಿ" ಎನ್ನುವ ಶ್ರುತಿ ವಾಕ್ಯವು ಅರ್ಥವಾಗುವುದು. ಆದ್ದರಿಂದ ಜೀವನು ನಿತ್ಯನೂ, ಜ್ಞಾನಾಕಾರನೂ

ಧರ್ಮಭೂತಜ್ಞಾನ ವಿಶಿಷ್ಟನೂ ಆಗಿರಬೇಕು. ಇದು ಹೇಗೆ ಎಂದು ಮತ್ತೂ ವಿಶದವಾಗಿ ತಿಳಿಯಬೇಕಾದರೆ ಕಾಲಕ್ಷೇಪಕಾಲದಲ್ಲಿ ಆಚಾರ್ಯರಿಂದ ಕೇಳಬೇಕು. ಜೀವನು ವಿಭುವಲ್ಲ. ಅಣುಸ್ವರೂಪನು. ಆವನ ಜ್ಞಾನವು ವಿಭುವಾಗಿರುವುದು. ನಮ್ಮ ಶರೀರದಲ್ಲಿ ನಾವು ಅಂಗಾಗಗಳಲ್ಲಿ ಚೈತನ್ಯ ವಿಶಿಷ್ಟರಾಗಿರುವುದು ಸ್ವರೂಪ ಜ್ಞಾನದಿಂದಲ್ಲ. ಸ್ವಭಾವ ಜ್ಞಾನದಿಂದಲೇ ನಮಗೆ ಎಲ್ಲಾ ವಿಧಾನುಭವಗಳು ಬರುತ್ತವೆ. ನಮ್ಮ ಸಿದ್ಧಾಂತದಲ್ಲಿ ನಮ್ಮ ಸ್ವರೂಪಕ್ಕೆ ಉಪಾದಾನ ಕಾರಣವಾಗಿರುವವನು ನಾರಾಯಣ. ನಮ್ಮ ಸ್ವಭಾವಕ್ಕೆ ಉಪಾದಾನ ಕಾರಣವಾಗಿರುವಳು ಶ್ರೀ. ಶ್ರೀದೇವಿಯು ನಾರಾಯಣನಿಗೆ ಪತ್ನಿಯಾಗಿರುವುದರಿಂದ ಅವಳೂ ನಾರಾಯಣನಿಗೆ ಶೇಷಭೂತಳು. ಶ್ರುತಿ ಪ್ರತಿಪಾದಿತದೈವವು ಬ್ರಹ್ಮವೆಂದೂ ಒಂದೇ ಎಂದೂ ಸಿದ್ಧವಾದರೂ ಸಕಲ ಚೇತನರ ದೃಷ್ಟಿಯಿಂದ ಶ್ರೀಮನ್ನಾರಾಯಣನೇ ಪರತತ್ವ; ನಾರಾಯಣನು ನಿಗ್ರಹ ಮತು ಅನುಗ್ರಹ ಸಂಕಲ್ಪವುಳ್ಳವನು, ಶ್ರೀತತ್ವವು ಕೇವಲ ಅನುಗ್ರಹ ಸಂಕಲ್ಪವುಳ್ಳದ್ದು. **ನಮ್ಮ ಸ್ವರೂಪವು ಪರಮಾತ್ಮಾಧೀನ. ನಮ್ಮ ದೇಹಯಾತ್ರೆಯು ಕರ್ಮಾ ಧೀನವಾಗಿದ್ದರೂ** ಅದರಲ್ಲಿ ಧರ್ಮಭೂತ ಜ್ಞಾನದ ಸವಿಯು ಮುಂದೆ ಮುಂದೆ ಹೋಗಿ ಶ್ರೀ ತತ್ವವನ್ನು ಸೇರುವ ಅವಕಾಶವನ್ನು ಹೊಂದಿದೆ. ಇವಳು ನಾರಾಯಣನನ್ನು ಬಿಟ್ಟು ಒಂದು ಕ್ಷಣವೂ ಇರುವುದಿಲ್ಲವೆಂದು ಶ್ರುತಿ ಮತ್ತು ಸ್ಮೃತಿಯಲ್ಲಿ ವಿಶದವಾಗಿದೆ. ಅಂದರೆ ಪರಮಾತ್ಮನ ಅವತಾರವಾಗುವಾಗಲೆಲ್ಲಾ ಇವಳು ಅವನೊಡನೇ ಅವತಾರಮಾಡುವಳು ಇಲ್ಲವೇ ಅವನಲ್ಲೇ ಸೇರಿರುವಳು. **ಇವಳು ಸ್ವತಂತ್ರವಾಗಿ ಯಾವಾಗಲೂ ಅವತಾರ ಮಾಡುವುದಿಲ್ಲ.** ಪರಮಾತ್ಮನು ತನ್ನ ಮೂರುವಿಧವ್ಯಾಪ್ತಿಯಲ್ಲಿರುವಂತೆ ಇವಳೂ ಇರುವಳು. ವಿಷವೂ ಕೆಲವುವೇಳೆ ಪ್ರಯೋಗ ಚಾತುರ್ಯದಿಂದ ಅಮೃತವಾಗಿರುವಂತೆ ಪರಮಾತ್ಮನ ಕರ್ಮಾಧ್ಯಕ್ಷತ್ವದ ಬಲದಿಂದ ತೋರುವ ನಿಗ್ರಹ ಸಂಕಲ್ಪವೂ ಅನುಗ್ರಹವಾಗಿ ತೋರುವಂತೆ ಮಾಡುವವಳು "ಶ್ರೀ." ಪರಮಾತ್ಮನು ದೋಷರಹಿತನೆಂದು ತೋರಿಸುವವಳು "ಶ್ರೀ." ಅಂತಹಭಾವವು ನಮ್ಮಲ್ಲಿ ಮಾಡುವಂತೆ ಮಾಡಲು ಶ್ರೀದೇವಿಯು ಭೂದೇವಿಯ ದ್ವಾರಾ ಕೆಲಸ ಮಾಡುವಳು. ಪರಮಾತ್ಮನ ಅನುಭವವನ್ನು ನೀಳಾದೇವಿಯ ದ್ವಾರಾ ಕೊಡುವಳು. ಈ ಪರಮಾರ್ಥವು ಶ್ರುತಿಗೆ ಸರಿಹೋಗುತ್ತದೆ.

ತೈತ್ತರೀಯೋಪನಿಷತ್ತಿನಲ್ಲಿ ಮೊದಲು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಪರಮಾತ್ಮನ ಲಕ್ಷಣಕೊಟ್ಟು ವಿಕಾರರಹಿತನೂ ಜ್ಞಾನಸ್ವರೂಪನೂ ಅನಂತನೂ ಆಗಿರುವುದರಿಂದಲೇ "ಆನಂದಮಯಃ" ಎಂದು ವಿಸ್ತರಿಸಿ "ಆನಂದಂ ಬ್ರಹ್ಮಣೋ ವಿದ್ವಾ ನಬಿಭೇತಿ ಕದಾಚನ" ಎಂದು ಆಶ್ವಾಸನಕೊಟ್ಟು "ರಸೋವೈಸಃ ರಸಂಹ್ಯೇವಾಯಂ ಲಬ್ಧ್ವಾsನಂದೀಭವತಿ" ಎಂದು ಹೇಳಿ ತನ್ನ ನಿರ್ಧಾರವನ್ನು ತಿಳಿಸಿದೆ. ಪರಮಾತ್ಮನು ರಸಮಯನಾದರೆ ಪ್ರೇಮದಸಾರವೇ ಅವನಾಯಿತು.

ಎರಡು ವಸ್ತುವಿನ ಹೊಂದಾಣಿಕೆ ಒಂದಾಗಿರುವಿಕೆ, ಒಂದಂತೆ ಕಾಣುವಿಕೆಯೇ ಪ್ರೇಮದ ಗುಟ್ಟು; ಪ್ರೇಮದಸ್ವರೂಪ ಮತ್ತು ಸ್ವಭಾವವನ್ನು ಅಲಂಕಾರ ಶಾಸ್ತ್ರದಿಂದ ತಿಳಿದವರಿಗೆ ಇದು ಒಂದು ಅನ್ಯಾದೃಶಶಕ್ತಿ ವಿಶೇಷವೆಂದು ಕಾಣದಿರದು. ವಿಶ್ವವು ಪರಮಾತ್ಮ ಭಿನ್ನವಾದರೂ, ಅವನು ತನ್ನ ಸ್ವರೂಪ ವ್ಯಾಪ್ತಿಯಿಂದ ವಿಶ್ವವೇ ಆಗಿರುವನು. ಪ್ರಕೃತಿಯನ್ನೂ ಜೀವರಾಶಿಯನ್ನೂ ವ್ಯಾಪಿಸಿರುವನು. ಹಾಗೆಯೇ ಶ್ರೀದೇವಿಯೂ ವ್ಯಾಪಿಸಿರುವಳು. ಆದರೆ ಜೀವರಾದ ನಮ್ಮ ಯೋಗಕ್ಷೇಮವನ್ನು ಇಬ್ಬರೂ ಸೇರಿ ನಿರ್ವಹಿಸುವರು. ನಮ್ಮ ಸ್ವರೂಪವು ಅವನಿಗೆ ಸೇರಿದ್ದು. ನಮ್ಮ ಸ್ವಭಾವವನ್ನು ಪರಿಷ್ಕರಿಸುವವಳು ಶ್ರೀದೇವಿ. ಪ್ರೇಮದ ಎರಡು ಆಕಾರವಾಗಿ ಇವರಿಬ್ಬರೂ ನಮ್ಮ ಚಿಲುಮೆ. ಕರ್ಮಾಧ್ಯಕ್ಷನಾಗಿ ನಾರಾಯಣನು ನಮ್ಮ ಆಗು ಹೋಗುಗಳನ್ನು ಕಲ್ಪಿಸಿ ನಮ್ಮ ಸುಖದುಃಖಗಳಿಗೆ ಹೇತುವಾದರೆ, ಆ ಸುಖ ದುಃಖಾನುಭವವು ಅವನ ಲೀಲೆಯೆಂದು ತೋರಿಸುವ ಜ್ಞಾನಪ್ರಕಾಶವನ್ನು ಕೊಟ್ಟು ಅನುಗ್ರಹಿಸುವಳು ಶ್ರೀದೇವಿ. ಪರಮಾತ್ಮನ ಕರುಣೆಯು ಇವಳ ಮೂಲಕ ಕಾರ್ಯ ಕಾರಿಯಾಗುತ್ತದೆ. ಅದಕ್ಕಾಗಿಯೇ ಇವಳಲ್ಲಿ ಶರಣುಹೋಗುವಾಗ

ಸಮಸ್ತಜನನೀಂ ವಂದೇ ಚೈತನ್ಯ ಸ್ತನ್ಯದಾಯಿನೀಂ।
ಶ್ರೇಯಸೀಂ ಶ್ರೀನಿವಾಸಸ್ಯ ಕರುಣಾಮಿವ ರೂಪಿಣೀಂ॥

ದ–ಶ–7

ಎಂದು ಹೇಳಿಕೊಂಡು ನಮಿಸಬೇಕು. ಪ್ರಪಂಚದಲ್ಲಿ ವೈಷಮ್ಯವನ್ನು ಹೋಗಲಾಡಿಸಿ ನೈಘೃಣ್ಯವನ್ನು ನಿರ್ಮೂಲನಮಾಡುವ ಶಕ್ತಿಯೇ ಪ್ರೇಮ. ಅದೇ ಪರಮಾತ್ಮನ ಸ್ವರೂಪ ಮತ್ತು ಸ್ವಭಾವ. ಸರ್ವಜ್ಞನು ಅಲ್ಪಜ್ಞನ ಅಪರಾಧಗಳನ್ನು ಸಹಿಸುವುದೇ ಅವನ ಕರುಣೆ. ಸಹಿಷ್ಣುತೆಯೇ ಪ್ರೇಮದ ಮೊದಲಹಂತ. ಅದನ್ನು ಪ್ರತಿಬಿಂಬಿಸುವವಳೇ ಭೂದೇವಿ. ನಮ್ಮ ದೇಹ, ಇಂದ್ರಿಯ, ಮನಸ್ಸು, ಪ್ರಾಣ–ಇವೆಲ್ಲವೂ ಪರಮಾತ್ಮದತ್ತ, ಪರಮಾತ್ಮ ವ್ಯಾಪ್ತವಾದರೂ ಅವನ ಕರ್ಮಾಧ್ಯಕ್ಷತೆಯಲ್ಲಿ ತೋರುವ ಕಾಠಿಣ್ಯವನ್ನು ಸಹಿಸಿಕೊಳ್ಳುವಂತೆ ಮಾಡುವವಳು ಭೂದೇವಿ. ಅವಳಲ್ಲಿ ಶರಣುಹೋಗದೆ ನಮಗೆ ಶ್ರೀಪ್ರಪದನವು ಸಾರ್ಥಕವಾಗದು. ಅವಳನ್ನು

ವಂದೇ ವೃಷಗಿರೀಶಸ್ಯ ಮಹಿಷೀಂ ವಿಶ್ವದಾರಿಣೀಂ।
ತತ್ಕೃಪಾಪ್ರತಿಘಾತಾನಾಂ ಕ್ಷಮಯಾ ವಾರಣಂ ಯಯಾ॥

ದ–ಶ–8

ಎಂದು ಶರಣು ಹೋಗಬೇಕು. ಆದ್ದರಿಂದ ಇವಳೂ **ಪುರುಷಕಾರಳು.**

ಭೂಪ್ರಪತ್ತಿರಿಯಂ ತಾವತ್ವ್ಯಪದೇಶೈರನುಷ್ಠಿತಾ।
ಶ್ರೀಪ್ರಪತ್ಯಧಿಕಾರಾರ್ಥಾ ನಾನರ್ಥಕ್ಯಂ ಹಿ ಕುತ್ರಚಿತ್॥

ಎನ್ನುವುದೇ ಇದಕ್ಕೆ ಪ್ರಮಾಣ. **ಪುರುಷಕಾರ**ವೆನ್ನುವುದಕ್ಕೆ ಶ್ರುತಿಯಲ್ಲಿ **ಪತ್ನೀ** ಶಬ್ದ ಪ್ರಯೋಗವಿದೆ. ಪತಿಗೆ ಸಹಾಯ ಚೇತನ ವಸ್ತುವನ್ನು ಹೇಳುವಾಗ "ನ್" ಎನ್ನುವ ಪ್ರತ್ಯಯವನ್ನು ಸೇರಿಸಬೇಕೆಂದು

ಪತ್ಯುರ್ನೋ ಯಜ್ಞಸಂಯೋಗೇ—ಪಾ–ಸೂ IV, 1, 33

ಎನ್ನುವ ಸೂತ್ರದಲ್ಲಿ ಪಾಣಿನಿ ತಿಳಿಸಿರುವರು. (ಪತಿ ಶಬ್ದಸ್ಯ ನಕಾರಾದೇಶಃಸ್ಯಾತ್ ಯಜ್ಞೇನ ಸಂಬಂಧೇ). ಈ ಅರ್ಥದಲ್ಲೇ ಪುರುಷಸೂಕ್ತದಲ್ಲಿ

ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ

ಎನ್ನುವ ಮಂತ್ರವಿದೆ. "ಹ್ರೀ" ಎಂದರೆ ಭೂದೇವಿ. ಲಕ್ಷ್ಮೀ ಎಂದರೆ ಶ್ರೀದೇವಿ. ತನ್ನಲ್ಲಿ ಎಲ್ಲರೂ ಶರಣು ಹೊಂದಲು ದಾರಿ ತೋರಿಸಿಕೊಡುವುದಕ್ಕಾಗಿಯೇ ಭೂದೇವಿಯು ಗೋದೆಯಾಗಿ ಅವತಾರಮಾಡಿ ತಿರುಪ್ಪಾವೈ ಕೊಟ್ಟಿರುವಳು.

ಈ ತಿರುಪ್ಪಾವೈ ಮಹಿಮೆಯನ್ನು ತಿಳಿಯ ಬೇಕಾದರೆ ಶಾಸ್ತ್ರಮರ್ಯಾದೆಯನ್ನು ನಾವು ಅರಿಯಬೇಕು. ಶಾಸ್ತ್ರವೆಂದರೆ ಪ್ರಧಾನವಾಗಿ ಶ್ರುತಿ. ಇದರ ಅರ್ಥವನ್ನು ತಿಳಿಯುವುದು ಸುಲಭಸಾಧ್ಯವಲ್ಲವೆಂದು ತಿಳಿದು ಋಷಿಗಳು ಪರಮಾತ್ಮನ ಅವತಾರ ಮಹಿಮೆಯನ್ನು ತೋರಿಸುವ ವ್ಯಾಜದಿಂದ ವೇದಾಂತಾರ್ಥವನ್ನು ವಿಶದಮಾಡಿರುವರು. ಆ ಗ್ರಂಥಗಳಿಗೆ ಇತಿಹಾಸ ಪುರಾಣವೆಂದು ಹೆಸರು. ಇದನ್ನು ಪರಾಶರರು

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹ್ಮಯೇತ್
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರತರಿಷ್ಯತಿ

ಎನ್ನುವ ಶ್ಲೋಕದಿಂದ ತಿಳಿಸಿರುವರು. ಇತಿಹಾಸವು ಪುರಾಣಗಳಲ್ಲಿ ಕಥಾಭಾಗವು ಹಿತವಾಗಿದ್ದರೂ ಆ ಕಥೆಗಳಿಂದ ವೇದಾರ್ಥವನ್ನು ಬಿಡಿಸಬಲ್ಲವರೇ ಇತಿಹಾಸ ಪುರಾಣ ಹೇಳಲು ಸಮರ್ಥರು. ಇಂತಹ ಅಧಿಕಾರಿಗಳನ್ನು ಹುಡುಕುವುದು ಕಷ್ಟವೆಂದು ತಿಳಿದು ಭೂದೇವಿಯು ಗೋದಾದೇವಿಯಾಗಿ ಅವತರಿಸಿ ತಿರುಪ್ಪಾವೈ 30 ಪದ್ಯಗಳಲ್ಲೇ ಇತಿಹಾಸ ಪುರಾಣಗಳ ಕಥೆಗಳನ್ನು ಜ್ವಾಲಿಸಿ ವೇದಾರ್ಥವನ್ನು ವಿಶದಮಾಡಿರುವಳು. ಈ ತಿರುಪ್ಪಾವೈಯನ್ನು ಕಾಲಕ್ಷೇಪಮಾಡಿದರೆ ಸಕಲ ಶಾಸ್ತ್ರಾರ್ಥವೂ ತಿಳಿಯುವುದೆಂದು ರಾಮಾನುಜರು ಇದಕ್ಕೆ ಪ್ರಥಮಸ್ಥಾನ ಕೊಟ್ಟಿರುವರು. ಯತಿಗಳು ಯಾವಾಗಲೂ ಉಪನಿಷತ್ತನ್ನು ಅನುಸಂಧಾನ ಮಾಡುತ್ತಿರಬೇಕೆನ್ನುವ ನಿಯಮವಿದೆ. ರಾಮಾನುಜರು ಈ ತಿರುಪ್ಪಾವೈಯನ್ನು ಸಕಲ ವೇದಾರ್ಥವೆಂದು ತಿಳಿದು ಯಾವಾಗಲೂ ಅನುಸಂಧಾನ ಮಾಡುತ್ತಿದ್ದರು. ಅದಕ್ಕಾಗಿ ಅವರಿಗೆ "ತಿರುಪ್ಪಾವೈ ಜೀಯರ್" ಎನ್ನುವ ಹೆಸರು ರೂಢವಾಗಿದೆ.

ಈ ತಿರುಪ್ಪಾವೈ ಕ್ರಮವನ್ನು ಪರಿಶೀಲಿಸಿದರೆ ಇಷ್ಟು ಗೋಚರವಾಗುತ್ತದೆ. ಪರಮಾತ್ಮನನ್ನು ನಾವು ಜಗತ್ತಿನ ಅಭಿನ್ನ ನಿಮಿತ್ತೋಪಾದಾನಕಾರಣನೂ ರಕ್ಷಕನೂ ಎಂದು ಮನಗಂಡು ಶರಣು ಹೋಗಬೇಕು(1–5 ಪಾಶುರಗಳು;) ಪ್ರಪನ್ನನಾದ ಮೇಲೆ ಅವನ ಮಹಿಮೆಯನ್ನು ಮತ್ತೂ ವಿಶದವಾಗಿ ತಿಳಿದು ಅವನ ಸೇವೆಮಾಡಲು ಅವನಲ್ಲಿ ಭಕ್ತಿ ಅಂದರೆ ಪ್ರೇಮವನ್ನು ಬೆಳೆಸಿಕೊಳ್ಳಬೇಕು (6–15); ಅದಾದ ಮೇಲೆ ಪುರುಷಕಾರಮೂಲಕ ಹೋಗಿ ನೀಳಾದೇವಿಯ ಅನುಗ್ರಹದಿಂದ ದೇವನನ್ನು ಕಾಣಬೇಕು (16–20); ತನ್ನ ಸೇವೆಯನ್ನು ನಮಗೆ ಅನುಗ್ರಹಿಸಬೇಕೆಂದು ಅವನನ್ನು ಪ್ರಾರ್ಥಿಸಿಕೊಳ್ಳಬೇಕು (21–25); ಕೊನೆಯದಾಗಿ ಇಹಪರ ಸಕಲ ಸೌಖ್ಯ, ಆನಂದ, ಕೈಂಕರ್ಯವನ್ನು ಅವನಲ್ಲಿ ಪ್ರಾರ್ಥಿಸಿಕೊಳ್ಳಬೇಕು (26–30). ಈ ಕೊನೆಯ ಪ್ರಾರ್ಥನೆಯನ್ನೇ ರಾಮಾನುಜರು

ಪರಭಕ್ತಿ–ಪರಜ್ಞಾನ–ಪರಮಭಕ್ತಿಕೃತ–ಪರಿಪೂರ್ಣಾನವರತ
ನಿತ್ಯವಿಶದತಮಾನುಭವ ಜನಿತ–ಅನವಧಿಕಾತಿಶಯ
ಪ್ರೀತಿಕಾರಿತ–ಅಶೇಷಾವಸ್ಥೋಚಿತ–
ಅಶೇಷಶೇಷತೈಕರತಿರೂಪ–ನಿತ್ಯಕಿಂಕರೋ ಭವಾನಿ (ವೈ ಗ)

ಎಂದಿರುವರು. (ಇದರ ವಿವರಣೆ 29ನೇ ಪದ್ಯದಲ್ಲಿದೆ)

ಗೋದಾದೇವಿಯು ಹೇಳಿರುವ ರೀತಿಯಲ್ಲಿ ನಾವು ಮೋಕ್ಷವನ್ನು ಹೊಂದಬೇಕಾದರೆ ಪ್ರಪತ್ತಿಯೊಂದೇ ಸಾಧನವೆಂದೂ ಅದಾದಮೇಲೆ ನಾವು ಪರಮಾತ್ಮನಲ್ಲಿ ವಿಶೇಷ ಪ್ರೇಮವನ್ನು ತಾಳಿ ಅವನ ಆನಂದ ಕೈಂಕರ್ಯದಲ್ಲೇ ಮಿಕ್ಕ ಜೀವಮಾನವನ್ನು ಕಳೆದು ದೇಹಬಿಟ್ಟಮೇಲೆ ಅವನ ನಿತ್ಯ ಕೈಂಕರ್ಯಕ್ಕೆ ಅಣಿಯಾಗಬೇಕು– ಎನ್ನುವ ಅರ್ಥವು ಗೋಚರವಾಗುತ್ತದೆ.

ಇಂತಹ ಪ್ರಪತ್ತಿ ವಿಷಯದಲ್ಲಿ ಅನೇಕರಿಗೆ ಸಂಶಯವಿದೆ. ಅದರಲ್ಲಿ ವಿಶ್ವಾಸವಿಟ್ಟಿರುವವರಲ್ಲಿಯೂ ಪ್ರಪತ್ತಿಗೂ ಭಕ್ತಿಗೂ ಸಂಬಂಧವು ಅನೇಕರಿಗೆ ತಿಳಿದಿಲ್ಲವೆಂದು ಅನುಷ್ಠಾನ ವೈಷಮ್ಯದಿಂದಲೇ ಕಾಣಬಹುದು. ಮತ್ತೂ ಕೆಲವರಿಗೆ ಪ್ರಪತ್ತಿಯೇ ಬೇರೆ ಭಕ್ತಿಯೇ ಬೇರೆ ಎನ್ನುವ ಸಂಶಯವು ಪೀಡಿಸುತ್ತಿದೆ. ಇನ್ನೂ ಕೆಲವರಿಗೆ ಭಕ್ತಿಯೇ ಪ್ರಪತ್ತಿ; ಪ್ರಪತ್ತಿಯೇ ಭಕ್ತಿ ಎನ್ನುವ ಭಾವವಿದೆ. ಈ ವಿಷಯದಲ್ಲಿ ಶಾಸ್ತ್ರವೂ ಕೂಡ ಸಂಶಯವುಂಟುಮಾಡುವರೀತಿಯಲ್ಲಿದೆ. ವೇದವು

ತಮೇವಂ ವಿದ್ವಾ ಅಮೃತ ಇಹ ಭವತಿ— ಪು–ಸೂ

ಮುಂತಾದ ಮಂತ್ರಗಳಿಂದ ಮೋಕ್ಷಕ್ಕೆ ಜ್ಞಾನವೊಂದೇ ಸಾಧನವೆಂದು ಹೇಳುತ್ತಿದೆ. ಸ್ಮೃತಿಯಲ್ಲಿ

1) **ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ**
ಭ. ಗೀ. VIII

2) **ಭಕ್ತ್ಯಾತ್ವನನ್ಯಯಾ ಶಕ್ಯ ಅಹಂ** —ಭ. ಗೀ. XI

3) **ಭಕ್ತ್ಯೈಕಲಭ್ಯಃ ಪುರುಷೋತ್ತಮೋಸೌ** — ಭಾಗವತ

ಇವೇ ಮೊದಲಾದ ವಾಕ್ಯಗಳಿಂದ ಭಕ್ತಿಯೊಂದೇ ಮೋಕ್ಷಕ್ಕೆ ಹಾದಿಯೆಂದು ಹೇಳಿಯೂ

1) **ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ
ಭ–ಗೀ–XVIII–66

2) **ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೆ।**
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥
ರಾ–ಮು 18–33

ಇವೇ ಮೊದಲಾದ ವಾಕ್ಯಗಳಿಂದ ಮೋಕ್ಷಕ್ಕೆ ಪ್ರಪತ್ತಿಯು ಸಾಧನವೆಂದು ಹೇಳಿರುತ್ತದೆ. ಆದ್ದರಿಂದ ಜ್ಞಾನಕ್ಕೂ ಪ್ರಪತ್ತಿಗೂ ಭಕ್ತಿಗೂ ಏನು ಸಂಬಂಧವೆಂದು ಅರಿಯಲೇ ಬೇಕು.

ರಸೋ ವೈ ಸಃ ರಸಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ

ಎನ್ನುವ ಮಂತ್ರದಿಂದ ಪರಮಾತ್ಮನು ರಸಮಯನು. ರಸವೆಂದರೆ ನಾಲಿಗೆಗೆ ತೋರುವ ಪ್ರಾಕೃತಿಕ ರಸವಲ್ಲ. ಇದು ಆತ್ಮದಲ್ಲಿರುವ ಸ್ನೇಹವಿಶೇಷ. ಭಗವಂತನು ಉಪಾದಾನಕಾರಣನಾಗಿ ಪ್ರಪಂಚವು ಉಪಾದೇಯವಾಗಿರುವುದರಿಂದ ಅವನಿಗೆ ಇದರಲ್ಲಿ ನೈಜಿಕ ಸ್ನೇಹವಿದೆ. ಉಪಾದೇಯವು ಉಪಾದಾನದ ಅಂಶ, ಪ್ರಕಾರ ಮತ್ತು ಶರೀರವಾಗಿರುವುದರಿಂದ ಇದರಲ್ಲಿ ಅವನ ಸ್ನೇಹವು ಕರುಣಾಮಯವಾಗಿ ದೋಷರಹಿತವಾಗಿದೆ. ಸರ್ವಜ್ಞನಾದ ಇವನಿಗೆ ಇದು ಭೂಷಣವೇ ಆಗಿದೆ. ಉಪಾದೇಯವಾದ ನಮ್ಮಲ್ಲಿಯೂ ಅವನ ದಾಯವಾಗಿ ಸ್ನೇಹವು ನೈಜಿಕವಾಗಿದೆ. ಆದರೆ ಈ ಸ್ನೇಹಕ್ಕೆ ವಿಷಯವು ಪರಮಾತ್ಮನಾಗಲು ಸಾಧ್ಯವಿಲ್ಲದ್ದರಿಂದ ಪ್ರಕೃತಿ ಸಂಸರ್ಗದಿಂದ ಅದು ದುಷ್ಟವಾಗಿದೆ. ಆಗ ಇದಕ್ಕೆ ಹೆಸರು ಕಾಮ. ನಮ್ಮ ಸವಿಯನ್ನು ಕಾಣದ ನಾವು ಪ್ರಕೃತಿಯ ಮೋಹವನ್ನು ನೈಜಿಕವಾಗಿ ಹೊಂದುತ್ತೇವೆ. ಅದರೊಡನೆ ಕಲೆತು ಬಾಳಲು ಹಂಬಲಿಸುತ್ತೇವೆ. ಚಂಚಲವಾದ ದುಃಖವಿಶ್ರಿತ ಸುಖಕ್ಕೆ ಮರುಳಾಗುತ್ತೇವೆ. ಇದನ್ನೇ ಶಾಸ್ತ್ರದಲ್ಲಿ "ಅನಾದಿ ಕರ್ಮವಾಸನೆ" ಯೆಂದು ಋಷಿಗಳು ಹೇಳುತ್ತಿರುವರು. **ನಿಜವಾಗಿ ನೋಡಿದರೆ ಇದು ಕರ್ಮ ವಾಸನೆಯಲ್ಲ ಇದು ಜ್ಞಾನದುರ್ಗಂಧ;** ಪ್ರಕೃತಿ ಸಂಗದಿಂದ ಜ್ಞಾನಕ್ಕೆ ತಗುಲಿದ

ರೋಗ; ಅದಕ್ಕೆ ಅಂಟಿದ ಜಾಡ್ಯ. "ನಾನು" ಎನ್ನುವ ಸಿದ್ಧವಸ್ತುವಿಗೆ ದೇಹ ಸಂಬಂಧದಿಂದ ಬಂದವ್ಯಾಧಿ "ನನ್ನದು" ಎನ್ನುವ ಅಭಿಮಾನ. "ನಾನು" ಎನ್ನುವುದು ಒಂದೇ ಪ್ರತ್ಯಕ್ ಭಾವನೆಯಾಗಿದ್ದು "ನನ್ನದು" ಎನ್ನುವುದು ಮಹಾವ್ಯಾಧಿ ಯೆಂದು ಕಂಡು, "ನಾನು" ಪರಮಾತ್ಮನಿಗೆ ಉಪಾದೇಯನೆಂದು ಮನಗಂಡರೆ "ನನ್ನದು" ಎನ್ನುವುದೇ ಇಲ್ಲದಾಗಿ, ಇದೆಲ್ಲವೂ ಅವನದಾಗಿರುವುದೆಂದು ತೋರಿ, ಅವನನ್ನು ಬಿಟ್ಟು "ನಾನು" ಇರಲಾರನೆನ್ನುವ ಮೊದಲು ಭಾವನೆಯೇ ನಮ್ಮಲ್ಲಡ ಗಿರುವ ನೈಜಸ್ನೇಹಕ್ಕೆ ಆರೋಗ್ಯ ಬುನಾದಿ. ಪರಮಾತ್ಮ ವಿಷಯಕವಾದ ಈ ಭಾವವು ಬಲಿಯುತ್ತಾ ಬಂದರೆ ಸ್ನೇಹವು ವಿಶ್ವಾಸ, ಮಹಾವಿಶ್ವಾಸ, ಭಕ್ತಿ, ಮಧುರ ಭಾವವಾಗಿ ಪರಿಣಮಿಸುತ್ತದೆ. ಹೀಗೆ ನಮ್ಮ ನೈಜಸ್ನೇಹವು ಬೆಳೆಯಲೆಂದೇ ಪರ ಮಾತ್ಮನು ನಮಗೆ ವೇದವೆನ್ನುವ ಶಾಸ್ತ್ರವನ್ನು ಕೊಟ್ಟು, ನಮ್ಮ ದೇಹ ಸಂಬಂಧ ದಿಂದ ವಿಮರ್ಶನಾಶಕ್ತಿಯು ಬೆಳೆಯಲೆಂದೇ ಪ್ರಪಂಚವನ್ನು ಸೃಷ್ಟಿಸಿ, ಅದನ್ನು ಒಂದು ನಿಯತಿಯಲ್ಲಿ ಕಾಪಾಡಿ, ತಾನು ಸಂಕಲ್ಪಿಸಿದ ಕಾಲವು ಮುಗಿದ ಮೇಲೆ ತನ್ನಲ್ಲೇ ಸೇರಿಸಿಕೊಳ್ಳುವನು. ಇದೇ ಅವನ ನಿರ್ಹೇತುಕ ಕರುಣೆ. ಇದನ್ನು ತಿಳಿದರೆ ನಮ್ಮ ನೈಜ ಸ್ನೇಹವು ಭಕ್ತಿಯಾಗಿ ಪರಿಣಮಿಸುವುದು.

ಈ ಭಕ್ತಿಯು ಮುಖ್ಯಾರ್ಥ ಪರಮಾತ್ಮ ವಿಷಯಕವಾದರೆ ಮಾತ್ರ ಭಕ್ತಿ ಯೆನಿಸಿಕೊಳ್ಳುತ್ತದೆ. ವಿಶ್ವವನ್ನೇ ವಿಷಯವಾಗಿಸಿಕೊಂಡರೆ ಅದು ಕೇವಲ ಜ್ಞಾನ. ಈ ಶುಷ್ಕ ಜ್ಞಾನಾಭಿಮಾನಿಗಳಿಗೆ ಭಕ್ತಿಯು ರಾಗವಾಗಿ ಕಾಣುವುದು ಸಹಜ. ಶಾಸ್ತ್ರ ಮರ್ಯಾದೆಯಿಂದ ನೋಡಿದರೆ ಈ ಭಕ್ತಿಯು ಒಂದು ಅಲೌಕಿಕ ಶಕ್ತಿವಿಶೇಷ, ಜ್ಞಾನದ ನಿತ್ಯಶಕ್ತಿ, ಆನಂದಮಯ ನಂದಾದೀಪ. ವೇದವು ನಾವೇ ಕಲ್ಪಿಸಿಕೊಂಡ ಗ್ರಂಥವೆನ್ನುವವರಿಗೆ ಇದು ಎಂದಿಗೂ ಅರ್ಥವಾಗುವುದಿಲ್ಲ.

ಇಷ್ಟು ಮೂಲಭಾವನೆಯಿಂದ ಭಕ್ತಿಸ್ವರೂಪವನ್ನು ವಿಮರ್ಶಿಸಿ ಋಷಿಗಳು "ಭಕ್ತಿಯೊಂದೇ ಮೋಕ್ಷಕ್ಕೆ ಹಾದಿ" ಎಂದಿರುವರು. ಶ್ರೀಕೃಷ್ಣನೂ ಗೀತೆಯಲ್ಲಿ ಅದನ್ನೇ ಹೇಳಿರುವನು. ಇದು "ರಾಜವಿದ್ಯಾ, ರಾಜಗುಹ್ಯ, ಪವಿತ್ರ, ಉತ್ತಮ, ಧರ್ಮ್ಯ, ಅವ್ಯಯ" ವೆಂದಿರುವನು. (IX–2) ಇದು ಮೂರು ಪರ್ವದಲ್ಲಿ ಕಾರ್ಯ ಕಾರಿಯಾಗುವುದು. 1) ಉಪಕ್ರಾಂತಭಕ್ತಿ 2) ಜೀವಾಳ ಭಕ್ತಿ ಮತ್ತು 3) ನಿಷ್ಪನ್ನಭಕ್ತಿ–ಎಂದು. ಮೋಕ್ಷಕ್ಕೆ ಹಂಬಲಿಸುವವರ ಬಾಳಿನ ಗ್ಹೋಳ್ಗೇ ಭಕುತಿ ಯಾದ ಮೇಲೆ, ಆತ್ಮಯಾತ್ರೆಯೇ ಭಕ್ತಿಯ ಗಿಣ್ಣುಗಳು. ಆತ್ಮದೃಷ್ಟಿಗೆ ಬೇಕಾದ ಉಪದೇಶದಿಂದ ಪ್ರಾರಂಭವುಳ್ಳ ಬುದ್ಧಿಯೋಗವೇ ಈ ಭಕ್ತಿಯ ಸಸಿ. ಇದರಿಂದ ಪರಮಾತ್ಮನ ವಿಷಯದಲ್ಲಿ ಸ್ವಾಮಿತ್ವಭಾವನೆಯು ಬೆಳೆದು ಶಾಸ್ತ್ರವಿಶ್ವಾಸದಿಂದ 1) ಅವನ ಕೈಂಕರ್ಯರೂಪದಲ್ಲಿ ಶಾಸ್ತ್ರಚೋದಿತ ಕರ್ಮಗಳನ್ನು ಮಾಡುವುದೂ

2) ಶಾಸ್ತ್ರನಿಷಿದ್ಧ ಕರ್ಮಗಳನ್ನು ಬಿಡುವುದೂ 3) ಆ ಪರಮಾತ್ಮನೇ ರಕ್ಷಕನೆಂದು ನಂಬುವುದೂ 4) ಆ ನಂಬಿಕೆಯು ಬೆಳೆದು ಅವನನ್ನೇ ಆಶ್ರಯಿಸುವುದೂ 5) ಹೀಗೆ ತಿಳಿದು ನಡೆದು ಮನಸ್ಸಿನಲ್ಲಿ ಒಂದು ದೈನ್ಯಭಾವವನ್ನು ತಾಳುವುದೂ ಹೀಗೆ ಇವೆಲ್ಲವೂ ಒಟ್ಟುಗೂಡಿ ನಮ್ಮಲ್ಲಿ ಒಂದು ಮಹಾವಿಶ್ವಾಸವು ಬೆಳೆಯುತ್ತದೆ. ಪರ ಮಾತ್ಮನಿಗೆ ನಾವು ಸರ್ವವಿಧದಲ್ಲಿಯೂ ಶೇಷಭೂತರೆನ್ನುವ ಭಾವವು ರೂಪಗೊಳ್ಳು ತ್ತದೆ. ಈ ಭಾವಕ್ಕೇ ಉಪಕ್ರಾಂತ ಭಕ್ತಿಯೆಂದು ಹೆಸರು. ಉಪಕ್ರಾಂತ ಭಕ್ತಿ ಯನ್ನೇ ವಸ್ತ್ರಘಾಯಮಾಡಿ ನುಣುಪುಮಾಡಿದರೆ ಅಥವಾ ಸಾರತಮವಾಗಿ ಬಟ್ಟಿ ಇಳಿಸಿದರೆ ಅದೇ ಶೇಷತ್ವಜ್ಞಾನ. ಶೇಷತ್ವಜ್ಞಾನವೆಂದರೇನೆಂದು ಮೊದಲನೇ ಪದ್ಯದಲ್ಲಿ ತಿಳಿಸಲಾಗಿದೆ.

ಭಕ್ತಿಯು ಜ್ಞಾನದವಾಸನೆಯೆಂದು ತಿಳಿದರೆ ಶೇಷತ್ವಜ್ಞಾನವು ಉಪ ಕ್ರಾಂತ ಭಕ್ತಿಯ ಸಾಮೂಹಿಕರೂಪವಿಶೇಷವೆಂದು ತೋರುತ್ತದೆ. ಇದು ವಿವೇಕ ದಿಂದ ಸಸಿಯಾಗಿ ನಿರ್ವೇದದಲ್ಲಿ ನೆನೆದು, ವಿರಕ್ತಿಯಿಂದ ಸಾರಹೊಂದಿ (ಗೊಬ್ಬರ) ಸಾತ್ವಿಕಭಕ್ತಿಯಿಂದ ಅಂದರೆ "ಲೋಕಕ್ಷೇಮವೇ ಪರಮಾತ್ಮನ ಸಂಕಲ್ಪ ಮತ್ತು ಆಜ್ಞೆಯೆಂದು ನಿಶ್ಚಯಿಸಿಕೊಂಡು ಅದರ ಹೊಣೆ ಹೊರಲು ಜಾಗೃತನಾಗಿರುವು ದರಿಂದ" ಪುಷ್ಪವಾಗುತ್ತದೆ. ಆಗ ಮೋಕ್ಷಹೊಂದಲು ತಾನು ಅಸಮರ್ಥನೆನ್ನುವ ಭಾವವು ತಲೆಯೆತ್ತಿ ಪರಮಾತ್ಮನಲ್ಲೇ ತನ್ನ ಸಕಲ ಹೊರೆಯನ್ನೂ ಅಂದರೆ(1) ನಾನು ಸ್ವತಂತ್ರ (2)ನಾನು ನನ್ನನ್ನು ನಾನೇ ರಕ್ಷಿಸಿಕೊಳ್ಳುವೆನು ಮತ್ತು(3) ಹಾಗೆ ರಕ್ಷಿಸಿಕೊಳ್ಳುವುದರಿಂದ ಬರುವ ಫಲವು ನನ್ನದು–ಎನ್ನುವ ಮೂರು ಹೊರೆ ಯನ್ನು ಅರ್ಪಿಸಲು ಮನ ಮಾಡುವನು. ಅದಕ್ಕೆ ಶಾಸ್ತ್ರಾಧಾರವನ್ನು ಹುಡುಕು ವನು. ಹಾಗೆ ಅರ್ಪಣೆಮಾಡುವುದೇ ಪ್ರಪತ್ತಿಯೆಂದು ತಿಳಿದು ಅದನ್ನು ಪೂರ್ತಿ ಗೊಳಿಸುವನು. ಈ ಪ್ರಪತ್ತಿಯನ್ನೇ, ಶರಣಾಗತಿ, ಆತ್ಮನಿಕ್ಷೇಪ, ಭರನ್ಯಾಸ,ನ್ಯಾಸ, ಅದೃಷ್ಟಾಂಶವೆಂದು ಕರೆಯುವ ವಾಡಿಕೆಯಿದೆ. ಉಪಕ್ರಾಂತ ಭಕ್ತಿಯ ಪರ್ಯಾಪ್ತ ಬುದ್ಧಿವಿಶೇಷವೇ ಶೇಷತ್ವಜ್ಞಾನವಾಗಿ ಪ್ರಪತ್ತಿಯ ಅನುಷ್ಠಾನದಲ್ಲಿ ಪೂರ್ತಿಗೊಳ್ಳು ತ್ತದೆ. ಇದು ಎಲ್ಲರಿಗೂ ಮೋಕ್ಷಕ್ಕಾಗಿ ವಿಹಿತಕರ್ಮ.

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ
ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂ ದೇವಮಾತ್ಮಬುದ್ಧಿ ಪ್ರಸಾದಂ ಮುಮುಕ್ಷು
ರ್ವೈ ಶರಣಮಹಂ ಪ್ರಪದ್ಯೇ ॥

ಎಂದು ಶ್ವೆ– ಉ– ಇದನ್ನು ವಿಧಿಸಿದೆ. ಇದರ ಮಹಿಮೆಯನ್ನು ತಿಳಿಸಿ ಅನುಷ್ಠಾನ ಕ್ರಮವನ್ನು ತೈತ್ತರೀಯ ಯಾಜ್ಞಿಕೀ ಉಪನಿಷತ್ತು

ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತ
ಮಾಹುಃ ; ವಸುರಣ್ಯೋ ವಿಭೂರಸಿ ; ಪ್ರಾಣೇ
ತ್ವಮಸಿ ಸಂಧಾತಾ ; ಬ್ರಹ್ಮ ತ್ವಮಸಿ
ವಿಶ್ವಸೃಕ್ ; ತೇಜೋದಾಸ್ತ್ವಮಸ್ಯಗ್ನೇಃ ;
ವರ್ಚೋದಾಸ್ತ್ವಮಸಿ ಸೂರ್ಯಸ್ಯ ; ದ್ಯುಮ್ನೋ
ದಾಸ್ತ್ವಮಸಿ ಚಂದ್ರಮಸಃ ; ಉಪೆಯಾಮ ;
ಗೃಹೀತೋಸಿ ; ಬ್ರಹ್ಮಣೇ ; ತ್ವಾ ಮಹಸ
ಓಮ್ ಇತ್ಯಾತ್ಮಾನಂ ಯುಂಜೀತ

ಎಂದು ವಿಧಿಸಿದೆ.

ಪರಮಾತ್ಮನಲ್ಲಿ ಶರಣು ಹೋಗದೆ ಮೋಕ್ಷಕ್ಕೆ ಮಾರ್ಗವೇ ಇಲ್ಲವೆಂದು ವೇದವು ಹೇಳಿರುತ್ತದೆ. ಹಾಗೆ ಅದನ್ನು ಅನುಸ್ಮಿಸುವರಲ್ಲಿ ಎರಡುವಿದ. ಕೆಲವರಿಗೆ "ಪರಮಾತ್ಮನು ಪೂರ್ಣ ಸಹಕಾರ ಕೊಡುವನು; ನಾವು ಯಮನಿಯಮಾದಿ ಯೋಗ ಸಾಧನಗಳಿಂದ ಅವನನ್ನು ಪ್ರತ್ಯಕ್ಷವಾಗಿ ಕಂಡು, ಅವನನ್ನು ಪ್ರವೇಶಿಸಿ ಅವನ ಕೈಂಕರ್ಯದಲ್ಲಿ ನಿಲ್ಲಬೇಕು; ಅದಕ್ಕಾಗಿ ನಮ್ಮಲ್ಲಿ ಎಲ್ಲಾ ಅನುಕೂಲ್ಯಗಳೂ ಇವೆ" ಎನ್ನುವ ಭಾವ ಮತ್ತು ಆತ್ಮವಿಶ್ವಾಸವು ಇರುತ್ತದೆ. ಅಂತಹವರು ಪ್ರಪತ್ತಿಯನ್ನು ಅಂಗವಾಗಿ ಅನುಷ್ಠಿಸಿ ಯೋಗಮಾರ್ಗದಲ್ಲಿ ನಡೆದು, ಪರಮಾತ್ಮನನ್ನು ಕಂಡು, ಪ್ರವೇಶಿಸಿ, ಆವನ ಆನಂದಾನುಭವವು ಎಲ್ಲಿ ಕಳಚಿ ಬೀಳುವುದೋ ಎಂದು ಅಂಜಿ ಮತ್ತೆ ಮತ್ತೆ ಬೇರೆ ಬೇರೆ ಪರಮಾತ್ಮನ ದಿವ್ಯ ಮಂಗಳ ವಿಗ್ರಹದ ಸವಿಸಹ ವಾಸಾದಿಗಳಿಂದ ಆನಂದಾನುಭವಿಗಳಾಗುವರು. ಇಂತಹ ಅಧಿಕಾರಿಗಳು ಯೋಗ ಮಾರ್ಗದಲ್ಲಿ ನಡೆದರೂ ಪರಮಾತ್ಮನ ಸಾಕ್ಷಾತ್ಕಾರದಿಂದ ಹಿಗ್ಗಿ, ಅವನ ಸೌಂದರ್ಯಾದಿಗಳಿಗೆ ಮನಸೋತು ಅವನನ್ನು ಶಾಶ್ವತವಾಗಿ ಅನುಭವಿಸಲು ಹಾತೊರೆಯುತ್ತಿರುವರು. ಇದೇ ನಿಷ್ಪನ್ನ ಭಕ್ತಿ. ಇಂತಹ ನಿಷ್ಪನ್ನ ಭಕ್ತಿಯನ್ನು ಸಾಧಿಸಲು ಒಂದು ಜನ್ಮ ಸಾಲದು. ಅದನ್ನೇ ಶ್ರೀ ಕೃಷ್ಣನು

ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
ಅನೇಕಜನ್ಮಸಂಸಿದ್ಧಃ ತತೋ ಯಾತಿ ಪರಾಂ ಗತಿಂ ॥

ಭ. ಗೀ. VI, 45

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವ ಸ್ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥

ಭ. ಗೀ. VII–19

ಎಂದಿರುವನು.

ಹೀಗೆ ಬಲಹೀನರಿಗೆ ಉಪಕ್ರಾಂತ ಭಕ್ತಿಯಿಂದ ಪ್ರಪತ್ತಿಯೋಗ; ಶಕ್ತರಿಗೆ ಧ್ಯಾನಯೋಗದಿಂದ ಪೂರ್ತಿಗೊಳ್ಳುವ ಭಕ್ತಿಯೋಗ ಎಂದು ಮೋಕ್ಷಸಾಧನವು ಎರಡು ಬಗೆಯಾಗಿದೆ. ಇದಕ್ಕೆ ಸ್ಮೃತಿಗ್ರಂಥಗಳಲ್ಲಿ ಹೇರಳ ಪ್ರಮಾಣಗಳಿವೆ. ಪ್ರಪತ್ತಿಯೋಗವು ಅರ್ಚಾಮೂರ್ತಿಯಲ್ಲಿ ಫಲಕಾರಿಯಾಗುವುದು. ಭಕ್ತಿಯೋಗವು ಯೋಗಸಾಕ್ಷಾತ್ಕೃತ ಪರಮಾತ್ಮನಲ್ಲಿ ಫಲಕಾರಿಯಾಗುವುದು. ಪ್ರಪತ್ತಿಯೋಗವು ಶೀಘ್ರಫಲಕಾರಿ; ಭಕ್ತಿಯೋಗವು ವಿಲಂಬಿತ ಫಲಕಾರಿ. ಪ್ರಪತ್ತಿಯೋಗವನ್ನೇ ನಂಬಿರುವವರು **ಅಂಗಿಪ್ರಪತ್ತಿ** ವಿಶ್ವಾಸಶಾಲಿಗಳು ಮತ್ತು ಸಂಸಾರಿಗಳಾಗಿಯೇ ಹೆಂಡತಿ ಮಕ್ಕಳೊಡನಿದ್ದು ಮನಶ್ಶಾಂತಿಯನ್ನು ಹೊಂದಿ ಪರಮಾತ್ಮನ ಅನುಭವಕ್ಕೆ ಅವನನ್ನೇ ಪ್ರಾರ್ಥಿಸಿಕೊಳ್ಳುವರು ಮತ್ತು ಅವನನ್ನೇ ನೆನೆದು ನೆನೆದು ದ್ರವೀಭೂತರಾಗುವರು. ಪ್ರಪನ್ನರಿಗೆ ಭಕ್ತಿಯೇ ಜೀವಾಳ. ಭಕ್ತಿಯೋಗಿಗಳಿಗೆ ಭಕ್ತಿಯು ಯೋಗ ನಿಷ್ಪನ್ನವಾಗಿ ಸಾಧನವಾಗುತ್ತದೆ. ಪ್ರಪನ್ನರಿಗೆ ಭಕ್ತಿಯು ಸಾಧ್ಯ; ಭಕ್ತಿಯೋಗಿಗಳಿಗೆ ಅದು ಸಾಧನ. ಪ್ರಪನ್ನರಿಗೆ ಉಪಕ್ರಾಂತ ಭಕ್ತಿಯು ಬೇರಾದರೂ, ತ್ಯಾಗಾತ್ಮಮ ಭಕ್ತಿಯು ಜೀವಾಳವಾಗುತ್ತದೆ. ಭಕ್ತಿಯು ಫಲರೂಪದಲ್ಲಿ ಆನಂದಾನುಭವವೇ; ಸಾಧನರೂಪದಲ್ಲಿ ಅಭ್ಯಾಸ ಸಾಧ್ಯವಾಗುತ್ತದೆ. ಪ್ರಪನ್ನರಿಗೆ ಮಹಾವಿಶ್ವಾಸವು ಪ್ರಪತ್ತಿಯಿಂದ ಮತ್ತೂ ಬಲಗೊಂಡು ಜೀವಂತವಾಗಿರುವಾಗಲೇ ಮೋಕ್ಷಾನುಭವದಿಂದ ಫಲ ಭಕ್ತಿಯಾಗಿ ಇಲ್ಲೇ ಅಂಕುರಿಸಿ ಸಾವನ್ನು

ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಂ

ಇ–ಸ 7–38

ಎನ್ನುವಂತೆ, ಅಪ್ಪಿಕೊಳ್ಳುವಂತೆ ಮಾಡುತ್ತದೆ. ಪ್ರಪನ್ನನಿಗೆ ಕೃತಕೃತ್ಯಭಾವವು ಬಂದು ಅವನು ಕೃತಾರ್ಥಭಾವದಲ್ಲಿ ಬೆಳೆಯುವನು. ಭಕ್ತಿಯೋಗಿಗೆ ಕೃತಕೃತ್ಯ ಭಾವವು ಬರುವುದೇ ಕಷ್ಟ. ಕೃತಾರ್ಥಭಾವವು ಮರೀಚಿಕೆಯಾಗಲೂಬಹುದು.

ಒಟ್ಟಿನಲ್ಲಿ ಪ್ರಪತ್ತಿಯೋಗ ಮತ್ತು ಭಕ್ತಿಯೋಗ ಇವೆರಡೂ ಭಕ್ತಿಮಾರ್ಗದಲ್ಲಿ ಕಾಣುವ ಎರಡು ಮೈಲಿಗಲ್ಲುಗಳು. ಪ್ರಪತ್ತಿಯೋಗವೆನ್ನುವ ಮೈಲಿಕಲ್ಲಿನಿಂದ ದಾರಿಯು ಕವಲೊಡೆದು ಪರಮಾತ್ಮನಿರುವೆಡೆಗೆ ಬಹಳ ಹತ್ತಿರದಾರಿಯಲ್ಲಿ ನಾವು ಹೋಗುವೆವು. ಇದೇ ವೇದದ ರಹಸ್ಯ. ಶ್ರೀಕೃಷ್ಣ ಹೇಳುವಂತೆ "ಸರ್ವಗುಹ್ಯತಮ" (ಗೀ XVIII, 64). ಭಕ್ತಿಯೋಗ ಮೈಲಿಕಲ್ಲಿನಿಂದ ಬಹಳ ದೂರ ನಡೆಯಬೇಕು. ಅಷ್ಟು ಪ್ರಯಾಸಪಟ್ಟುಹೋಗಿ ಭಕ್ತಿಯೋಗಿಗಳು ಕಾಣುವುದೇನು? ಅದೇ ಪ್ರಪತ್ತಿಗಲ್ಲು. ಭಕ್ತಿಯಸಾರವೇ ಅರ್ಪಣ. ಅರ್ಪಣವಿಲ್ಲದೇ ಭಕ್ತಿಯು ಪೂರ್ಣಗೊಳ್ಳುವುದಿಲ್ಲ. ತ್ಯಾಗವೇ ಭಕ್ತಿಯ ತಿರಳು. ಇದನ್ನು ಉಪಕ್ರಾಂತ ಭಕ್ತಿ ಪರ್ವದಲ್ಲೇ ಅರಿತು ಪ್ರಸನ್ನರಾಗುವುದು ಪರಮಹಿತ. ಭಕ್ತಿಹಾದಿಯಲ್ಲಿ

ಎಲ್ಲರೂ ನಡೆಯಲೇಬೇಕು. ಸ್ವಲ್ಪದೂರ ನಡೆದು ಪ್ರಪತ್ತಿಯನ್ನು ಅನುಷ್ಠಿಸಿದರೆ ಪರಮಾತ್ಮನೇ ನಮಗೆ ತ್ಯಾಗಾತ್ಮಕ ಬುದ್ಧಿಯನ್ನು ಕೊಟ್ಟು ತನ್ನಲ್ಲಿ ಸೇರಿಸಿಕೊಳ್ಳುವನು. ಭಕ್ತಿಯೋಗಿಯಾದರೂ ಕೊನೆಗೆ ಆ ಭಕ್ತಿಯನ್ನು ತ್ಯಾಗಾತ್ಮಕವಾಗಿ ತಾನೇ ಮಾಡಿಕೊಳ್ಳಬೇಕು. ಪ್ರಪನ್ನನಾಗಿ ತ್ಯಾಗಾತ್ಮಕ ಬುದ್ಧಿಯನ್ನು ಹೊಂದಿ ಆನಂದಾನುಭವವನ್ನು ಜೀವಿಸಿರುವಾಗಲೇ ಹೊಂದಲು ಪರಮಾತ್ಮನಲ್ಲಿ ನಾವು ತಾಳಬೇಕಾದ ಭಕ್ತಿ ವಿಶೇಷವೇ ಜೀವಾಳ ಭಕ್ತಿ. ಈ ಜೀವಾಳ ಭಕ್ತಿಯನ್ನೇ ಗೋದಾದೇವಿಯ 6 ರಿಂದ 15 ಪಾಶುರಪೂರ್ತಿಯಾಗಿ ವಿಸ್ತರಿಸುವಳು.

ಗೋದಾದೇವಿಯು ತಿರುಪ್ಪಾವೈಯಲ್ಲಿ ಪ್ರಪತ್ತಿ ಮಾರ್ಗ ಮತ್ತು ಜೀವಾಳ ಭಕ್ತಿಯನ್ನು ತೋರಿಕೊಟ್ಟು ತನ್ನೊಡನೆ ಕರೆದೊಯ್ದು, ಶ್ರೀಮನ್ನಾರಾಯಣನೇ ಶ್ರೀ ಕೃಷ್ಣನಾಗಿರುವನೆಂದು ನಮಗೆ ಬುದ್ಧಿ ಹೇಳಿ, ನಮ್ಮ ಪರವಾಗಿ ಶ್ರೀ ಕೃಷ್ಣನ ಅನುಬಂಧಿಗಳಾದ ಪುರುಷಕಾರರನ್ನು ಪ್ರಾರ್ಥಿಸಿಕೊಂಡು ತ್ಯಾಗಾತ್ಮಕ ಭಕ್ತಿಯಿಂದ ತೃಪ್ತಳಾದ ನೀಳಾದೇವಿಯ ಪ್ರೇಮ ವಿಶೇಷದಿಂದ ಪರಮಾತ್ಮನು ತನ್ನ ಪ್ರಭುತ್ವೋಪಯೋಗಿ ನಿಷ್ಪಕ್ಷಪಾತಿತ್ವವನ್ನು ಮರೆತು ನಮ್ಮ ದೋಷಗಳನ್ನು ನೋಡದಂತೆ ಅವನನ್ನು ಮರುಳು ಗೊಳಿಸಿ, ಅವನ ಪರತ್ವವನ್ನು ಕೊಂಡಾಡಿ, ಅವನಲ್ಲಿ ನಮ್ಮ ಪರವಾಗಿ ದಿವ್ಯಕೈಂಕರ್ಯವನ್ನು ಪ್ರಾರ್ಥಿಸಿಕೊಂಡಿರುವಳು. ಮುಂದಿನ ನಾಚ್ಚಿಯಾರ್ ತಿರುಮೊழியಲ್ಲಿ ಜೀವಾಳ ಭಕ್ತಿಯ ಪರ್ವಗಳನ್ನು ತಾನು ಅನುಭವಿಸಿದಂತೆ ತೋರಿಕೊಟ್ಟು ಪರಮಾತ್ಮನಲ್ಲಿ ಐಕ್ಯವಾದಳು. ಆದ್ದರಿಂದ ಶಾಸ್ತ್ರಾರ್ಥವನ್ನು ತಿರುಪ್ಪಾವೈಯಲ್ಲೂ ಪರಮಾತ್ಮಾನುಭವವನ್ನು ನಾಚ್ಚಿಯಾರ್ ತಿರುಮೊழியಲ್ಲೂ ನಾವು ದಿನವೂ ಅನುಸಂಧಾನ ಮಾಡಬಹುದು.

ಇಂತಹ ಮಹಿಮೆಯುಳ್ಳ ತಿರುಪ್ಪಾವೈ ಗ್ರಂಥಕ್ಕೆ ಅನೇಕ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಪ್ರಸಿದ್ಧವಾದುವು ಇವು.

1. ಮೇಲುಕೋಟಿ ಐನ್ನ ಆಚಾರ್ಯರ ಈರಾಯಿರಪ್ಪಡಿ
2. ಮತ್ತು ಅವರದೇ ನಾಲಾಯಿರಪ್ಪಡಿ.
3. ಪೆರಿಯವಾಚ್ಚಾಪಿಳ್ಳೈಯವರ ಮೂವಾಯಿರಪ್ಪಡಿ,
4. ಅழகಿಯ ಮಣವಾಳಪ್ಪೆರುಮಾಳವರ ಆರಾಯಿಪ್ಪಡಿ.
5. ರಂಗರಾಮಾನುಜರ ಸಂಸ್ಕೃತ ವ್ಯಾಖ್ಯಾನ.
6. ಪೆರಿಯ ಪರಕಾಲ ಸ್ವಾಮಿಯವರ ಮಣಿ ಪ್ರವಾಳ ವ್ಯಾಖ್ಯಾನ.

ಇವು ಪ್ರಾಚೀನವಾದುವು. ಇವುಗಳ ಆಧಾರದ ಮೇಲೆ ಕೆಲವು ನವೀನ ಪಂಡಿತರು ಪಾಂಡಿತ್ಯ ಬಲದಿಂದ ಸಂಸ್ಕೃತ ಮತ್ತು ತಮಿಳು ವ್ಯಾಖ್ಯಾನಗಳನ್ನು ಕೊಟ್ಟಿರುವರು. ಅವುಗಳಲ್ಲಿ ಮುಖ್ಯವಾದುವು ಪ್ರತಿವಾದಿ ಭಯಂಕರಂ

ಅಣ್ಣಂಗರಾಚಾರ್ಯರ ವ್ಯಾಖ್ಯಾನ ಮತ್ತು ಉತ್ತಮೂರ್ ತಿ. ವೀರರಾಘವಾಚಾರ್ಯರ ವ್ಯಾಖ್ಯಾನ.

ವೇದಾಂತ ಜ್ಞಾನವು ಸುಲಭವಲ್ಲ. ಶ್ರುತಿಯನ್ನು ಅರ್ಥಮಾಡಿಕೊಳ್ಳುವ ಜ್ಞಾನಪಾಕಬೇಕು. ಸ್ಮೃತಿ ಗ್ರಂಥಗಳನ್ನು ಪರಿಶೀಲಿಸಿ ಶ್ರುತಿಯಲ್ಲಿ ತೋರುವ ವಿರುದ್ಧಾರ್ಥಗಳನ್ನು ಸರಿಪಡಿಸಿಕೊಳ್ಳಬೇಕು. ಯೋಗದಿಂದ ಮನಶ್ಶುದ್ಧಿಯನ್ನು ಹೊಂದಿ ಧ್ಯಾನಬಲದಿಂದ ಶ್ರುತಿಲಬ್ಧ ತತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು; ಹಾಗೆ ಸಾಕ್ಷಾತ್ಕರಿಸಿಕೊಂಡು ಮೋಕ್ಷಕ್ಕೆ ಸುಲಭ ಹಾದಿಯನ್ನು ಉಪದೇಶಮಾಡುವಂತಾಗಬೇಕು. ಮತ್ತು ಎಲ್ಲರಿಗೂ ಸುಲಭನಾಗಿರಬೇಕು. ಅಂದರೆ ಶಿಕ್ಷಾ, ವ್ಯಾಕರಣ, ತರ್ಕ ಮೊದಲಾದ ವೇದಾಂಗಗಳ ಜ್ಞಾನಬಲದಿಂದ ವೇದದ ಒಂದು ಸಾಮೂಹಿಕ ಅರ್ಥವನ್ನು ಸ್ವತಂತ್ರವಾಗಿ ಮೊದಲೇ ನಿಶ್ಚಯಿಸಿಕೊಂಡು ನಿಲ್ಲಬೇಕು. ಹೀಗೆ ಅರ್ಥಮಾಡಿಕೊಳ್ಳುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಅಂದರೆ ಪ್ರಮೇಯ ಸೌಲಭ್ಯವಿಲ್ಲ. ಪ್ರಮೇಯವನ್ನು ತಿಳಿಸಬಲ್ಲ ಪ್ರಮಾತೃ ಸೌಲಭ್ಯವೂ ಇಲ್ಲ. ಶ್ರುತಿಯು ಎಲ್ಲರ ಅಧಿಕಾರಕ್ಕೂ ಸೇರಿಲ್ಲದಿರುವುದರಿಂದ ಪ್ರಮಾಣ ಸೌಲಭ್ಯವಂತೂ ಇಲ್ಲವೇ ಇಲ್ಲ. ಆದ್ದರಿಂದಲೇ ಪ್ರಪಂಚದಲ್ಲಿ ಅಹಂಕಾರ ಮಮಕಾರ ವಿಲಾಸದಲ್ಲಿ ಭಿನ್ನಭಿನ್ನರುಚಿಯು ತೋರಿ ಮತಗಳು ಬೆಳೆದು ದ್ವೇಷಾಸೂಯೆಗೆ ಎಡೆಕೊಟ್ಟಿದೆ. ಜ್ಞಾನಕ್ಕೆ ಶಾಶ್ವತವಾಗಿ ನಿಲ್ಲುವ ವಸತಿಯೇ ಇಲ್ಲ. ಪಾಶ್ಚಾತ್ಯ ವೇದಾಂತಗಳ ಗತಿಯು ನಮಗೂ ಬಂದು ವೇದಾಂತ ಭಾವನೆಗೂ ನಿತ್ಯ ಜೀವನಕ್ಕೂ ಸಂಬಂಧವಿಲ್ಲದೆ, ವೇದಾಂತವು ಕಾವ್ಯ ನಾಟಕಗಳಂತೆ ಕೇವಲ ಮನರಂಜನೆಗಾಗಿ ಆಗುತ್ತದೆ. ಮನಶ್ಶಾಂತಿಯು ಎಂದಿಗೂ ಲಭಿಸದು.

ಎಲ್ಲಾ ಮತಗಳೂ ಒಂದೇ ತತ್ವವನ್ನು ಹೇಳುತ್ತಿವೆ ಎನ್ನುವುದು ಎಲ್ಲಾ ಬುದ್ಧಿಯೂ ಒಂದೇ ಮಟ್ಟದಲ್ಲಿದೆ ಎನ್ನುವಂತಾಗುತ್ತದೆ. ಮತ ಭೇದವಿದೆ ಎಂದರೆ ದ್ವೇಷಕ್ಕೆ ಎಡೆಕೊಡುತ್ತದೆ ಎಂದರ್ಥವಲ್ಲ. ವೇದವನ್ನು ಪ್ರಮಾಣವನ್ನಾಗಿ ಹೇಳುವವರಲ್ಲಿಯೂ ಮತ ಭೇದವಿದೆ. ಒಂದೇ ಮತದಲ್ಲಿ ಅಭಿಪ್ರಾಯ ಬೇದಗಳಿವೆ. ಹೀಗಿದ್ದರೂ ಎಲ್ಲಾ ಬುದ್ಧಿಗೂ ಅರ್ಥವಾಗಿ ಹಿತವಾಗುವ ಮೋಕ್ಷ ಸಾಧನೆ ಶರಣಾಗತಿಯೆಂದು ಒಪ್ಪಿಕೆ ಇರುವಲ್ಲಿ ಆ ಶರಣಾಗತಿಯನ್ನು ವೇದಸಾರವೆಂದು ಕೂಲಂಕಷವಾಗಿ ವಿಮರ್ಶಿಸಿರುವುದು ಎಲ್ಲರೂ ಒಪ್ಪುವಂತಹದು. ಶರಣಾಗತಿಯನ್ನು ಶಾಸ್ತ್ರೀಯವಾಗಿ ಮಾಡಿದ ಮೇಲೆ ಬುದ್ಧಿಯು ಕ್ರಮೇಣ ಬೆಳೆದು ಬಂದು ಯೋಗಜಪ್ರತ್ಯಕ್ಷದಲ್ಲಿ ಕೊನೆಗಾಣುವುದೆಂದು ಕೆಲವರು ಹೇಳುವರು. ಮತ್ತೆ ಕೆಲವರು "ಪ್ರಪತ್ತಿಯೊಂದೇ ಸಾಕು; ಇದು ಪರಮಾತ್ಮನ ಪೂರ್ಣಾನುಗ್ರಹಕ್ಕೆ ಸಾಧನವಾಗಿ ಪರಮಾತ್ಮನೇ ಸಕಲ ಸೌಭಾಗ್ಯವನ್ನೂ ಮೋಕ್ಷವನ್ನೂ ಕೊಡುವನು" ಎನ್ನುತ್ತಿರುವರು.

ಹೀಗೆ ತತ್ವ ಬೇರೆ, ಸಾಧನ ಬೇರೆ ಮತ್ತು ಪುರುಷಾರ್ಥ ಬೇರೆ ಎನ್ನುವರಿಗಿಂತ ತತ್ವವೂ ಹಿತವೂ ಪುರುಷಾರ್ಥವೂ ಪರಮಾತ್ಮನೇ; ಅವನು ಚಿದಚಿದಾತ್ಮಕ ಪ್ರಪಂಚಕ್ಕೆ ಅಭಿನ್ನನಿಮಿತ್ತೋಪಾದಾನ ಕಾರಣನಾಗಿರುವುದರಿಂದ ಈ ಅರ್ಥವು ಸಿದ್ಧಿಸುತ್ತದೆ ಎನ್ನುವವರು ಪಾರಮಾರ್ಥಿಕದಲ್ಲಿ ಅಶೆಯುಳ್ಳವರೆನ್ನಬೇಕು. ಇಂತಹವರಿಗೆ ಪ್ರಪತ್ತಿಯೊಂದೇ ಮೋಕ್ಷ ಸಾಧನವಾಗುತ್ತದೆ. ಅದರ ಅನುಷ್ಠಾನದಿಂದ ಅವರಿಗೆ ಕೃತಕೃತ್ಯಭಾವವು ಬಂದು, ಶಾಂತಿಯು ನೆಲೆಸಿ, ಕೃತಾರ್ಥರಾಗುವುದಕ್ಕೆ ಜೀವಾಳ ಭಕ್ತಿಯನ್ನು ಬದುಕಿರುವಾಗಲೇ ಬೆಳಿಸಿಕೊಂಡು ತ್ಯಾಗಾತ್ಮಕ ದೃಷ್ಟಿಯಿಂದ ಯಥಾಶಕ್ತಿ ದೇಶಸೇವೆಯನ್ನೋ ಭಾಗವತ ಸೇವೆಯನ್ನೋ ಜೀವನದ ಗುರಿಯಾಗಿಟ್ಟುಕೊಂಡು ಪ್ರಪಂಚಕ್ಕೆ ಆದರ್ಶವ್ಯಕ್ತಿಗಳಾಗಿ ಮಹಾತ್ಮರೆನಿಸಿಕೊಂಡು ಶಾಂತಿಯಿಂದ ದೇಹತೊರೆದು ಮುಕ್ತಿಹೊಂದುವರು. ಹೀಗಿರದೆ ದೇಶಸೇವೆ ಮತ್ತು ಭಗವತ್ಸೇವೆಯನ್ನು ಸಾಧನವನ್ನಾಗಿ ಮಾಡಲು ಉದ್ದೇಶಿಸಿದರೆ ಅದು ದಂಭದಲ್ಲಿಯೂ ಥರ್ಪದಲ್ಲಿಯೂ ಕೊನೆಗಾಣುತ್ತದೆ. ಶಾಂತಿಯು ಎಂದಿಗೂ ದೊರಕುವುದಿಲ್ಲ. **ಕೃತಕೃತ್ಯಭಾವದಿಂದ ಮಾಡುವ ಭಗವತ್ಸೇವೆಗೂ ಸಾಧನ ದೃಷ್ಟಿಯಿಂದ ಮಾಡುವ ಭಗವತ್ಸೇವೆಗೂ ಬೇಧವಿದೆ.** ಕೃತಕೃತ್ಯ ಭಾವದಿಂದ ಮಾಡುವವನು ಪ್ರಪನ್ನನು. ಅವನ ಉಜ್ಜೀವನದ ಹೊರೆಯನ್ನು ಪರಮಾತ್ಮನೇ ವಹಿಸುವನು. ಇದಕ್ಕೆ ಪ್ರಮಾಣ "ಅನನ್ಯಾಶ್ಚಿಂತಯಂತೋ ಮಾಂ– ಗೀ IX : ಸರ್ವಧರ್ಮಾನ್ ಪರಿತ್ಯಜ್ಯ . . . ಗೀ XVIII– 66" ಎನ್ನುವ ಶ್ರೀಕೃಷ್ಣನ ಮಾತುಗಳೇ.– ಸಾಧನ ದೃಷ್ಟಿಯಿಂದ ಸೇವೆಮಾಡುವವನಿಗೆ ಉಜ್ಜೀವಿಸುವ ಹೊಣೆ ಅವನದೇಯಾಗಿ, ಆಯುಸ್ಸೆಲ್ಲಾ ತಪಸ್ಸಾಗಿ; ಶಾಂತಿಗೆ ಅವಕಾಶವೇ ಸಿಗುವುದಿಲ್ಲ. ಇದೇ ವೇದಾಂತದ ರಹಸ್ಯ. ಭಗವದ್ಗೀತೆಯಲ್ಲಿ ಹೇಳಿರುವುದೂ ಇದೆ. ಇದನ್ನು ಸುಲಭವಾಗಿ ವಿಶದವಾಗಿ 30 ಹಾಡುಗಳಲ್ಲೀ ಅನುಸಂಧಾನ ಮಾಡಲು ಸುಖಮಯವಾಗಿರುವಂತೆ ಹಾಡಿರುವಳು ಗೋದೆ. ಅದೇ ತಿರುವ್ವಾಯ್ಮೈ. **ಇದರಲ್ಲಿ ಪ್ರಮೇಯ, ಪ್ರಮಾಣ ಮತ್ತು ಪ್ರಮಾತೃ ಸೌಲಭ್ಯವಿದೆ.** ಪರಮಾತ್ಮನೊಬ್ಬನೇ ತಿಳಿಯಬೇಕಾದ ತತ್ವ; ಅವನೇ ಮೋಕ್ಷಕ್ಕೆ ಉಪಾಯ ಮತ್ತು ಅವನೇ ಪುರುಷಾರ್ಥವೆಂದು ತಿಳಿದವರಿಗೆ ಪ್ರಮೇಯನಾದ ಅವನು ಅತಿ ಸುಲಭನೆಂದು ಕಾಣುವುದು. ಅವನು ಸುಲಭನೆಂದು ಕಂಡಮೇಲೆ ಅವನ ಸೌಶೀಲ್ಯವು ತೋರುವುದು. ಉನ್ನತ ಮಟ್ಟದಲ್ಲಿರುವನು ಕೆಳಮಟ್ಟದವರೊಡನೆ ಸೇರುವ ಸ್ವಭಾವವೇ ಸೌಶೀಲ್ಯ. ತಂದೆ ತನ್ನ ಮಕ್ಕಳನ್ನು ಕಾಣುವಂತೆ ಪರಮಾತ್ಮನು ತನ್ನ ಉಪಾದೇಯರಾದ ನಮ್ಮನ್ನು ಸೌಶೀಲ್ಯ ಗುಣದಿಂದ ನೋಡುವುದು ಅವನ ನೈಜ ಸ್ವಭಾವ. ಇದರ ಅನುಭವವು ನಮಗೆ ಬರುವುದಕ್ಕೆ ಮುಂಚೆ ಅವನ ಸೌಲಭ್ಯದಲ್ಲಿ ನಾವು ಬೆಳೆದಿರಬೇಕು. ಇದನ್ನೇ ಜ್ಞಾನಿಗಳು ಪ್ರಮೇಯ ಸೌಲಭ್ಯವೆನ್ನುವರು. ಇದನ್ನು ಗೋದೆಯು "ನಾರಾಯಣ್ (1) ಪರಮನ್ (2) ಉತ್ತಮ್ (3) ಮಾರ್ಯ್(4)

ಮೊದಲಾದ ಭಾವಗರ್ಭಿತ ಪದಗಳಿಂದ ತಿಳಿಸುತ್ತಾಳೆ. ತತ್ವದ ಸ್ವರೂಪ ಸ್ವಭಾವವನ್ನು ಹೀಗೆ ತಿಳಿಸಿ ಅದೇ ಉಪಾಯವೆಂದು "ಪುಳ್ಳರೈಯ್ (6) ದೇವಾದಿದೇವ್ (7) ಉನ್ನತನ್ನೈಪಿರವಿಯುಂತನ್ನೈ ಪುಣ್ಣಿಯಂಯಾಮುಂಡೈಯೋಂ" (28) ಮೊದಲಾದ ಪದಗಳಿಂದ ತಿಳಿಸಿರುತ್ತಾಳೆ. ಹಾಗೆ "ಉನತನ್ನೋಡು ಉರವೇಲ್ ನಮಕ್ಕಿಂಗೆ ಒಕ್ಕ ಒಕ್ಕಯಾದು" ಎನ್ನುವುದರಿಂದ ಅವನೇ ಪುರುಷಾರ್ಥವೆಂದು ತಿಳಿಸಿರುವಳು.

ಶ್ರುತಿ ಮತ್ತು ಸ್ಮೃತಿಗಳ ಅಧ್ಯಯನ ಮತ್ತು ಸಮನ್ವಯದಿಂದ ಬರುವ ಅರ್ಥವನ್ನು ಸುಲಭವಾದ ಇಂಪಾದ 30 ತಮಿಳುಪಾಶುರಗಳಲ್ಲಿ ಕೊಟ್ಟು ಪ್ರಮಾಣ ಸೌಲಭ್ಯವನ್ನೂ ಕೊಟ್ಟಿರುವಳು.

ವರಾಹಾವತಾರದಲ್ಲಿ ಹಿರಣ್ಯಾಕ್ಷನು ಮಡಿದಮೇಲೆ ಭೂದೇವಿಯು ಸಂಸಾರಿಗಳ ವಿಷಯದಲ್ಲಿ ಕೃಪಾನ್ವಿತಳಾಗಿ ವರಾಹಸ್ವಾಮಿಯನ್ನು ಕುರಿತು

ಅಹಂ ಶಿಷ್ಯಾ ಚ ದಾಸೀ ಚ ಭಕ್ತಾ ಚ ತ್ವಯಿ ಮಾಧವ
ಮತ್ಕೃತೇ ಸರ್ವಭೂತಾನಾಂ ಲಘೂಪಾಯಂ ವದ ಪ್ರಭೋ ॥

ಎಂದು ಪ್ರಾರ್ಥಿಸಲು ಪರಮಾತ್ಮನು "ನಾಮಸಂಕೀರ್ತನ ಪುಷ್ಪಾರ್ಚನ ಮತ್ತು ಶರಣಾಗತಿ–ಇವೇ ಮೋಕ್ಷಕ್ಕೆ ಸಾಕು.

ಸ್ಥಿತೇ ಮನಸಿ ಸುಸ್ವಸ್ಥೇ ಶರೀರೇ ಸತಿ ಯೋ ನರಃ
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ॥
ತಮೇವಂ ಪ್ರಿಯಮಾಣಂ ತು ಕಾಷ್ಠಪಾಷಾಣಸನ್ನಿಭಂ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ ॥

ಎಂದು ಉಪದೇಶಿಸಿದನು. ಅದರಂತೆ ಭೂದೇವಿಯು ತಾನೇ ಗೋದೆಯಾಗಿ ಅವತರಿಸಿ ಅನುಷ್ಠಿಸಿ ತೋರಿಸಿಕೊಟ್ಟಿರುವುದರಿಂದ ಪ್ರಮಾತೃ ಸೌಲಭ್ಯವೂ ಇದೆ. ಇದನ್ನು ಭೂಸೂಕ್ತವೆನ್ನುವ ವೇದಭಾಗದಲ್ಲಿ ಕಾಣಬಹುದು (ಸ್ವಾಪದೇಶಾರ್ಥದಲ್ಲಿ).

ತ್ರಿಂಶದ್ಧಾಮ ವಿರಾಜತಿ ವಾಕ್ ಪತಂಗಾಯ
ಶಿಶ್ರಯೆ; ಪ್ರತ್ಯಸ್ಯ ವಹ ದ್ಯುಭಿಃ।

ಅಂದರೆ "ಭೂದೇವಿಯೇ, ನಿನ್ನ ಅನುಗ್ರಹದಿಂದ ಮೂವತ್ತು ತೇಜಸ್ಥಾನಗಳು ಬೆಳಗುವವು; (ವೇದದ ಸಮಷ್ಟಿರೂಪದಲ್ಲಿದ್ದು ನಿತ್ಯಶಬ್ದವಾದ) ಪ್ರಣವವು (ಯೋಗಿಯು) ಇನ್ನೂ ಮೇಲು ಮೇಲೆ ಹಾರಿ ಹೋಗುವಂತೆ ಮಾಡುವುದಕ್ಕಾಗಿ (ಪತಂ

ಗಾಯ) ಅವನನ್ನು ಆಶ್ರಯಿಸುತ್ತದೆ; ಇವನ ಮಧ್ಯೆ ತೋರುವ ತೊಂದರೆಗಳನ್ನು (ಪ್ರತಿ) ನಿನ್ನ ಬೆಳಕುಗಳಿಂದ (ದ್ಯುಭಿಃ) ಹೋಗಲಾಡಿಸು (ವಹ)

ಯತ್ತೇ ಮನ್ಯುಪರೋಪ್ತಸ್ಯ ಪೃಥಿವೀಮನುದಧ್ವಸೇ

ಬದ್ಧ ಜೀತನರ ಅಪರಾಧದಿಂದ ಹುಟ್ಟಿದ ಪರಮಾತ್ಮನ ಕೋಪದಿಂದ ಬಿಟ್ಟ ತೇಜಸ್ಸು ಅಂದರೆ ಅವನ ನಿಗ್ರಹ ಸಂಕಲ್ಪವು ಭೂದೇವಿಯನ್ನು ನೋಡಿ ಹೆದರಿತು".

ಈ ಕಾರಣದಿಂದಲೇ ಈ ಗ್ರಂಥಕ್ಕೆ "ತಿರುಪ್ಪಾವೈ" ಎನ್ನುವ ಹೆಸರು ಬಂದಿದೆ. "ತಿರು" ಅಂದರೆ ಮೋಕ್ಷೈಶ್ವರ್ಯ; ಅದನ್ನು ಕೊಡುವ "ಪಾವೈ" ವ್ರತ ಅಂದರೆ ಮೋಕ್ಷೋಪಯೋಗಿ ವ್ರತಕ್ಕೆ ಬೇಕಾದ ಪಾಶುರಗಳಾದುದರಿಂದ ಇವು ತಿರುಪ್ಪಾವೈ. ಅಥವಾ "ಪಾವೈ" ಎಂದರೆ ಹೆಣ್ಣು. ಹೆಣ್ಣೆಂದರೆ ಪಾರತಂತ್ರ್ಯವಸ್ತು. "ತಿರು" ಅಂದರೆ ಲಕ್ಷ್ಮೀ. ಲಕ್ಷ್ಮಿ ಹೇಗೆ ಪರಮಾತ್ಮನಿಗೆ ಭೋಗ್ಯವೋ ಹಾಗೆಯೇ ಪರ ತಂತ್ರನಾದ ಜೀವನು ಪರಮಾತ್ಮನಿಗೆ ಭೋಗ್ಯವಾಗುವಂತೆ ಮಾಡುವ ಪಾಶುರ ಗಳಿವು. ಪೆರಿಯ ಪರಕಾಲಸ್ವಾಮಿಗಳು ಪ್ರತಿಯೊಂದು ಪಾಶುರದ ಕೊನೆಯಲ್ಲಿ ಬರುವ "ಎಪ್ಪಾವಾಯ್" ಎನ್ನುವುದಕ್ಕೆ "ನನ್ನ ಲಕ್ಷ್ಮೀದೇವಿಯೇ" ಎಂದು ಅರ್ಥಮಾಡಿರುವರು.

ಈ ತಿರುಪ್ಪಾವೈ 30 ಪಾಶುರಗಳನ್ನು ಧನುರ್ಮಾಸದಲ್ಲಿ ದಿನಕ್ಕೆ ಒಂದರಂತೆ "ಶಾತ್ತುಮುರೈ" ಕಾಲದಲ್ಲಿ ಅಂದರೆ ಭಗವದಾರಾಧನೆಯಲ್ಲಿ ನಿವೇದನವಾಗಿ ಮಂಗಳಾರತಿಯಾದಮೇಲೆ ಮಂಗಳಾಶಾಸನ ಮಾಡುವಕಾಲದಲ್ಲಿ ಹೇಳುತ್ತಾ ಬಂದರೆ ಅದೇ ನಮಗೆ ಮೋಕ್ಷವನ್ನು ಕೊಡುವುದೆಂದು ಪೂರ್ವಾಚಾರ್ಯರು ಹೇಳಿರು ವರು. ಇದನ್ನು ಹೇಳುವಾಗ ಆಚಾರ್ಯರು "ನಲ್‌ಕನ್ರುಕ್ಕು ಇರಂಗುಂ ಥೇನು ತೋಲ್ ಕನ್ರುಕ್ಕುಂ ಇರಂಗು ಮಾಪ್ಪೋಲೆ" ಎಂದಿರುವರು. ಅಂದರೆ ಕರೆಯುವ ಹಸುವು ತನ್ನ ಕರುವಿಗೆ ಹಾಲನ್ನು ಸುರಿಸುವಂತೆ ತನ್ನ ಕರುವಿನ ಚರ್ಮದಿಂದ ಅದೇ ಆಕಾರದಲ್ಲಿ ನೋಡಿದರೂ ಸುರಿಸುತ್ತದೆ. ದಕ್ಷಿಣ ದೇಶದಲ್ಲಿ ಒಂದು ಹಸುವಿನ ಕರುವು ಸತ್ತುಹೋದರೆ ಅದರ ಚರ್ಮವನ್ನು ಸುಲಿದು ಹುಲ್ಲುಮೊದಲಾದುವುಗಳಿಂದ ಅದೇ ಕರುವಿನ ಆಕಾರದಲ್ಲಿ ಹಸುವಿನ ಮುಂದೆ ಹಾಲು ಕರೆಯುವಾಗ ಇಡುವರು. ಹಸುವು ಇದು ತನ್ನ ಕರುವಿನ ಚರ್ಮವಲ್ಲಾ ಎನ್ನುವ ಅಭಿಮಾನದಿಂದ ಹಾಲು ಸುರಿಸುವುದು. ಹಾಗೆ ಅರ್ಥದೊಡನೆ ತಿರುಪ್ಪಾವೈಯನ್ನು ಅನುಸಂಧಾನ ಮಾಡ ದಿದ್ದರೂ ಕೇವಲ ಪಠನದಿಂದ ಪರಮಾತ್ಮನು ಸಂತುಷ್ಟನಾಗುತ್ತಾನೆ.

ಒಂದು ವರುಷ ಹನ್ನೆರಡುತಿಂಗಳಲ್ಲಿ ಧನುರ್ಮಾಸವು ಸತ್ವಪ್ರಧಾನವಾದ ತಿಂಗಳೆಂದು ಐತಿಹ್ಯವಿದೆ. ಶ್ರೀಕೃಷ್ಣನು ಗೀತೆಯಲ್ಲಿ "ಮಾಸಾನಾಂ ಮಾರ್ಗ

ಶೀರ್ಷೋಸ್ಮಿ" ಎಂದಿರುವನು. ಈ ಧನುರ್ಮಾಸದ ಮಹಾತ್ಮ್ಯವು ಸ್ಕಾಂದ ಪುರಾಣದಲ್ಲಿ ವರ್ಣಿತವಾಗಿದೆ.

(1) ಈ ತಿಂಗಳಲ್ಲಿ ಸ್ನಾನ, ದಾನ, ಪೂಜೆ, ಧ್ಯಾನ, ಮೌನ, ಜಪ ಮೊದ ಲಾದುವುಗಳಿಂದ ಪರಮಾತ್ಮನು ವಿಶೇಷವಾಗಿ ತೃಪ್ತನಾಗಿ ಹಾಗೆ ಮಾಡುವವರಿಗೆ ಪ್ರಸನ್ನನಾಗುತ್ತಾನೆ;

(2) ವೈಷ್ಣವಸಂಪ್ರದಾಯದಂತೆ ಪಂಚ ಪಂಚ ಉಷಃಕಾಲದಲ್ಲಿ ಸ್ನಾನ ಮಾಡಿ ಊರ್ಧ್ವಪುಂಡ್ರವನ್ನು ಧರಿಸಿ ಪರಮಾತ್ಮನ ದಿವ್ಯಾಯುಧಗಳು, ತುಲಸೀ ಮಾಲೆ, ತಾಮರೆಮಣಿಮಾಲೆ–ಇವುಗಳನ್ನು ಧರಿಸಿ ಘಂಟಾನಾದದೊಡನೆ ಪೂಜೆ ಮಾಡಿದರೆ ಮೋಕ್ಷವುಂಟು;

(3) ಶಂಖಧ್ವನಿಯೊಡನೆ ಪರಮಾತ್ಮನಿಗೆ ತಿರುಮಂಜನ ಅಂದರೆ ಅಭಿಷೇಕ ಮಾಡಿದರೆ ಪಿತೃಗಳಿಗೆ ಸ್ವರ್ಗಪ್ರಾಪ್ತಿ;

(4)ಧನುರ್ಮಾಸದ ಪೌರ್ಣಮಿಯಲ್ಲಿ ಉತ್ಸವ, ಗೋದಾನ, ಭೂದಾನ ಮೊದ ಲಾದುವು ಪರಮಾತ್ಮನಿಗೆ ಪ್ರೀತಿಯುಂಟುಮಾಡುವವು;

ಬಾರ್ಹಸ್ಪತ್ಯ ಮಾನದಲ್ಲಿ ಪೌರ್ಣಮಿಯೇ ಕೊನೆಯಾಗಿರುವ ಮಾಸವಿದೆ. ಹಾಗೆಯೆಇಲ್ಲಿಯೂ ಧನುರ್ಮಾಸವು ಪೌರ್ಣಮಿಗೆ ಮುಗಿದಿದೆ.

ಪ್ರಪಂಚದಲ್ಲಿ ಎಲ್ಲಾ ಪ್ರಾಕೃತಿಕ ವಸ್ತುಗಳೂ ಸತ್ವ ರಜಸ್ಸು ಮತ್ತು ತಮಸ್ಸಿ ನಿಂದ ಕೂಡಿರುವುದೆಂದೂ ಹೀಗೆ ಅನ್ಯೋನ್ಯ ಸಂಕೀರ್ಣಗುಣತ್ರಯ ಪ್ರಚುರರಾದ ನಮಗೆ ರಾತ್ರಿಯ 4ನೇ ಯಾಮ ಅಂದರೆ $3\frac{1}{2}$–$6\frac{1}{2}$ ವರೆಗಿನ ಕಾಲವು ಸತ್ವಪ್ರಧಾನ ವಾಗಿದೆಯೆಂದೂ ಆ ಕಾಲದಲ್ಲಿ ನಮಗೆ ಸತ್ವಪ್ರಾಚುರ್ಯವು ಬೇಗನೆ ಉಂಟಾಗುವು ದೆಂದೂ ಗೀತಾದಿಶಾಸ್ತ್ರಗಳಿಂದ ತಿಳಿಯ ಬಹುದು. ಇದಕ್ಕೆ ಬ್ರಾಹ್ಮೀಮುಹೂರ್ತ ಅಂದರೆ ಬ್ರಹ್ಮಪ್ರಾಪಿಕ ಮುಹೂರ್ತವೆಂದು ಅನಾದಿಕಾಲದಿಂದ ಹೆಸರಿದೆ. ಒಂದು ದಿನದಲ್ಲಿ ಬ್ರಾಹ್ಮ ಮುಹೂರ್ತವಿರುವಂತೆ ಒಂದು ವರುಷದಲ್ಲಿ ಮಾರ್ಗಶೀರ್ಷ ಮಾಸವು ಬ್ರಾಹ್ಮ ಮುಹೂರ್ತ. ಕಾಲಮಾನದಲ್ಲಿ ನಮಗೆ ಒಂದು ವರುಷ ದೇವತೆ ಗಳಿಗೆ ಒಂದು ದಿನ. ಆ ದೇವದಿನದ ಬ್ರಾಹ್ಮ ಮುಹೂರ್ತವು ಮಾರ್ಗಶೀರ್ಷಮಾಸ. ಆಗ ನಮ್ಮ ತಪಸ್ಸು ಮತ್ತು ಧ್ಯಾನಾದಿಗಳಿಗೆ ದೇವತೆಗಳಿಂದ ಪ್ರತಿಬಂಧಕವಿಲ್ಲ. ಈ ತಿಂಗಳಿನ ಬ್ರಾಹ್ಮ ಮುಹೂರ್ತವು ಮತ್ತೂ ಸತ್ವಪ್ರಧಾನವಾದುದು. ಆ ಕಾಲ ದಲ್ಲಿ ಗೋಪಬಾಲಿಕೆಯರು ಕಾತ್ಯಾಯನೀ ವ್ರತವನ್ನು ಆಶ್ರಯಿಸಿ ಶ್ರೀಕೃಷ್ಣನನ್ನು ಹೊಂದಿದರೆಂದು ಶ್ರೀಭಾಗವತದಲ್ಲಿ ಹೇಳಿದೆ. ಅಲ್ಲಿ (X–22 ಅಧ್ಯಾಯ)

ಹೇಮಂತೇ ಪ್ರಥಮೇ ಮಾಸಿ ನಂದವ್ರಜಕುಮಾರಿಕಾಃ; ।
ಚೇರುರ್ಹವಿಷ್ಯಂ ಭುಂಜಾನಾಃ ಕಾತ್ಯಾಯನ್ಯರ್ಚನವ್ರತಮ್ ॥ ೧ ॥

ಆಪ್ಲುತ್ಯಾಂಭಸಿ ಕಾಳಿಂದ್ಯಾಃ ಜಲಾಂತೇ ಚೋದಿತೇಽರುಣೇ ।
ಕೃತ್ವಾ ಪ್ರತಿಕೃತಿಂ ದೇವೀಂ ಆನರ್ಚು ರ್ನೃಪ ಸೈಕತೀಂ ॥ ೩ ॥

ಏವಂ ಮಾಸಂ ವ್ರತಂ ಚೇರುಃ ಕುಮಾರ್ಯಃ ಕೃಷ್ಣಚೇತಸಃ ।
ಭದ್ರಕಾಳೀಂ ಸಮಾನರ್ಚುಃ ಭೂಯಾನ್ನಂದಸುತಃ ಪತಿಃ ॥ ೫ ॥

ಉಷಸ್ಯುತ್ಥಾಯ ಗೋತ್ರೈಸ್ತ್ರೈಃ ಅನ್ಯೋನ್ಯಾಬದ್ಧಬಾಹವಃ ।
ಕೃಷ್ಣಮುಚ್ಚೈ ರ್ಜಗು ರ್ಯಾಂತ್ಯಃ ಕಾಳಿಂದ್ಯಾಂ ಸ್ನಾತುಮನ್ವಹಂ ॥ ೬ ॥

ಹೀಗೆ ಒಂದು ತಿಂಗಳು ವ್ರತವನ್ನು ಆಚರಿಸಿದಮೇಲೆ ಗೋಪಿಕೆಯರು ಸ್ನಾನಮಾಡುತ್ತಿರುವಲ್ಲಿ

ಭಗವಾಂಸ್ತದಭಿಪ್ರೇತ್ಯ ಕೃಷ್ಣೋ ಯೋಗೇಶ್ವರೇಶ್ವರಃ ।
ವಯಸ್ಯೈರಾವೃತ ಸ್ತತ್ರ ಗತಾ ಸ್ತತ್ಕರ್ಮಸಿದ್ಧಯೇ ॥ ೯ ॥

ಎಂದು ಹೇಳಿರುವಂತೆ ಅಲ್ಲಿಗೆ ಬಂದು ಗೋಪಿಯರ ವಸ್ತ್ರಗಳನ್ನೆಲ್ಲಾ ಅಪಹರಿಸಿ ನೀಪವೃಷ್ಣವನ್ನು ಹತ್ತಿಕುಳಿತು "ನೀವು ಯಾಚಿಸಿದರೆ ಕೊಡುವೆನು" ಎಂದನು. (**ಅತ್ಯಾಗತ್ಯಾಬಲಾಃ ಕಾಮಂ ಸ್ವಂ ಸ್ವಂ ವಾಸಂ ಪ್ರಗೃಹ್ಯತಾಂ,**) ಅವರು "ಕೃಷ್ಣ ನಿನ್ನ ದಾಸರು ನಾವು" ಎಂದಾಗ

ಭವತೋ ಯದಿ ದಾಸ್ಯೋ ನೇ ಮಯೋಕ್ತಂ ವಾ ಕರಿಷ್ಯಥ ।
ಅತ್ರಾಗತ್ಯ ಸ್ವವಾಸಾಂಸಿ ಪ್ರತೀಚ್ಛಂತು ಶುಚಿಸ್ಮಿತಾಃ ॥

ಎಂದು ಕೃಷ್ಣನು ಹೇಳಿದನು. ಗೋಪಿಯರೂ ಹಾಗೆಯೇ ಮಾಡಿದರು, ಈ ಕಾಲದಲ್ಲಿ ಶ್ರೀ ಕೃಷ್ಣನು ಬೀರಿದ ಪ್ರೇಮ ಭರಿತ ಮುಗುಳ್ನಗೆಗೆ ಮನಸೋತು ನಿಗಮಾಂತ ದೇಶಿಕರು "ಅಂತಹ ಕೃಷ್ಣನಿಗೆ ಮಂಗಳವಾಗಲಿ" ಎಂದು ಮಂಗಳಾಶಾಸನ ಮಾಡಿ ತನ್ನ "ಗೋಪಾಲವಿಂಶತಿ" ಎನ್ನುವ ಸ್ತೋತ್ರವನ್ನು ಮುಗಿಸಿರುವರು. ಈ ಶ್ಲೋಕವು ಹೀಗಿದೆ.

ವಾಸೋಹೃತ್ವಾ ದಿನಕರಸುತಾಸನ್ನಿಧೌ ವಲ್ಲವೀನಾಂ
ಲೀಲಾಸ್ಮೇರೋ ಜಯತಿ ಲಲಿತಾಮಾಸ್ಥಿತಃ ಕುಂದಶಾಖಾಂ ।
ಸವ್ರೀಡಾಭಿ ಸ್ತದನು ವಸನೇ ತಾಭಿರಭ್ಯರ್ಥ್ಯಮಾನೇ
ಕಾಮೀ ಕಶ್ಚಿತ್ಕರಕಮಲಯೋರಂಜಲಿಂ ಯಾಚಮಾನಃ ॥

ಗೋಪಿಯರು ಆಶ್ರಯಿಸಿದ ಕಾತ್ಯಾಯನೀವ್ರತಕ್ಕೂ ಗೋದೆಯು ತೋರಿ ಕೊಟ್ಟ ರುವ ವ್ರತಕ್ಕೂ ಬಹಳ ಅಂತರವಿದೆ. ಕಾತ್ಯಾಯ ನೀವ್ರತದಲ್ಲಿ ಗೋಪಿಯರು

"ಭೂಯಾನ್ನಂದಸುತಃ ಪತಿಃ" ಎಂದು ಪ್ರಾರ್ಥಿಸಿದರು. ತಿರುಪ್ಪಾವೈಯಲ್ಲಿ "ಉತನ್ನೋಡುತ್ತೋಮೇಯಾವೊಂ ಉನಕ್ಕೇನಾವಾಳ್ಚೆಯ್ವೋಂ" ಎಂದು ಫಲವುಕೋರಲ್ಪಟ್ಟಿದೆ. ಪ್ರಕೃತಕ್ಕೆ ಅನುಗುಣವಾಗಿ ಮಳೆಗಾಗಿಯೂ ಇಲ್ಲಿ ವ್ರತವು ಆಚರಿಸಲ್ಪಟ್ಟಿದೆ. ಭಾಗವತದಲ್ಲಿ ಅದಿಲ್ಲ. ಅಲ್ಲಿ ಕಾತ್ಯಾಯನಿಯಲ್ಲಿ ಶರಣು ಹೋದರು ಗೋಪಿಯರು. ಇಲ್ಲಿ ಶ್ರೀ ಕೃಷ್ಣನೇ ಶರಣ್ಯವಸ್ತು. ಶೈವಸಂಪ್ರದಾಯದಲ್ಲಿ "ತಿರುವೆಂಬಾವಾಯ್" ಎನ್ನುವ 20 ಪದ್ಯಗಳು ಧನುರ್ಮಾಸದಲ್ಲಿ ಪಠನಕ್ಕಾಗಿ ಮಾಣಿಕ್ಯವಾಚಕರಿಂದ ಕೊಡಲ್ಪಟ್ಟರೂ ಅವು ದಿನವೊಂದಕ್ಕೆ ಒಂದರಂತೆ 30 ದಿನಗಳೂ ಹೇಳುವಂತಿಲ್ಲ. ಇದರ ಸಾದೃಶ್ಯದಿಂದ ತಿರುಪ್ಪಾವೈ ಪ್ರತಿಪದ್ಯದ ಕೊನೆಯಲ್ಲಿರುವ "ಎಂಪಾವಾಯ್" ಎನ್ನುವುದಕ್ಕೆ "ಪಾರ್ವತೀದೇವಿಯೇ" ಎನ್ನುವ ಅರ್ಥವು ಸರಿಹೋಗುವುದಿಲ್ಲ, ತೊಳಸೀಗಿಡದಂತೆ ಹುಟ್ಟಿನಿಂದ ವೈಷ್ಣವ ರಸವೊಂದನ್ನೇ ಸೂಸಿದ ಗೋದೆಯ ವ್ರತದಲ್ಲಿ ಶೈವ ಸಂಬಂಧ ಲೇಶವೂ ಇಲ್ಲ. **ಭಾಗವತದಲ್ಲೂ ಕಾತ್ಯಾಯನೀ ವ್ರತದಿಂದ ಹೆರಮಾತ್ಮನು ಲಭಿಸಲಿಲ್ಲ.** "ಭೂಯಾನ್ನಂದಸುತಃಪತಿಃ" ಎಂದು ವ್ರತವು ಆಚರಿಸಲ್ಪಟ್ಟಮೇಲೆ "ಭಗವಾನಾಗತಸ್ತತ್ಕರ್ಮ ಸಿದ್ಧಯೇ" ಎಂದು ಭಾಗವತವು ಹೇಳಿದರೂ ಮುಂದಿನ ಪ್ರಕರಣದಲ್ಲಿ ಗೋಪಿಯರು ಮಾಡಿದ ವ್ರತವು ಅವರು ಅಂಜಲಿ ಮಾಡುವುದಕ್ಕೆ ಅಂಗವಾದದ್ದು ಕಂಡುಬರುತ್ತದೆ. "ನೀರಿನಿಂದ ಮೇಲೆ ಬಂದು ನಿಮ್ಮ ಬಟ್ಟೆಗಳನ್ನು ತೆಗೆದುಕೊಳ್ಳಿ" ಎಂದು ಶ್ರೀ ಕೃಷ್ಣನು ಹೇಳುವಾಗ

ಯೂಯಂ ವಿವಸ್ತ್ರಾ ಯದಪೋ ಧೃಢವ್ರತಾಃ
ವ್ಯಗಾಹತೈತ್ತದು ದೇವಹೇಳನಂ ।
ಭದ್ವಾಂಜಲಿಂ ಮೂರ್ಧ್ನ್ಯ ಪನುತ್ತಯೇಂಽಹಸಃ
ಕೃತ್ವಾ ನಮೋಧೋ ವಸನಂ ಪ್ರಗೃಹ್ಯತಾಂ ॥

ಗೋಪಿಯರೆ! ನೀರಿನಲ್ಲಿ ವಸ್ತ್ರವಿಲ್ಲದೇ ಸ್ನಾನಮಾಡಿದ್ದು ಅಧರ್ಮ. ಅದನ್ನು ತಿಳಿಸಲೇ ನಾನು ಬಂದೆ. ಈಗ ಶಿರಸ್ಸಿನಲ್ಲಿ ಅಂಜಲಿಬದ್ಧರಾಗಿ ನಿಲ್ಲಿ; ಆ ಮೇಲೆ ನಿಮ್ಮ ನಿಮ್ಮ ಬಟ್ಟೆಗಳನ್ನು ತೆಗೆದುಕೊಳ್ಳಿ" ಎಂದ. ಅವರು ಹಾಗೆ ಮಾಡಿದ ಮೇಲೆ ಅವನು ಪ್ರಸನ್ನನಾದನು ಮತ್ತು ಹೇಳಿದೆನು

ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।
ಭರ್ಜಿತಾ ಕ್ವಥಿತಾ ಧಾನಾ ಪ್ರಾಯೋ ಬೀಜಾಯ ನೇಷ್ಯತೇ ॥

ಯಾತಾಽಬಲಾ ವ್ರಜಂ ಸಿದ್ಧಾ ಮಯೇಮಾರಂಸ್ಯಥ ಕ್ಷಪಾಃ ।
ಯದುದ್ದಿಶ್ಯ ವ್ರತಮಿದಂ ಚೇರುರಾರ್ಯಾರ್ಚನಂ ಸತೀಃ ॥

" ನನ್ನಲ್ಲಿ ಆವೇಶಗೊಂಡ ಬುದ್ಧಿಯುಳ್ಳವರಿಗೆ ಅವರಲ್ಲಿರುವ ನೈಜಕಾಮವು ಕಾಮ ಭೋಗಕ್ಕಲ್ಲ. ಸುಡಲ್ಪಟ್ಟ ಕುದಿಸಲ್ಪಟ್ಟ ಕಾಳು ಬೀಜವಾಗಲಾರದಲ್ಲವೇ ? ಆದ್ದರಿಂದ ಗೋಪಿಯರೇ, ಹೋಗಿ ಬನ್ನಿ ; ಮುಂದಿನ ರಾತ್ರಿ ನಿಮ್ಮ ಇಷ್ಟಾರ್ಥವು ಸಿದ್ಧಿಸುತ್ತದೆ. ಯಾವ ಉದ್ದೇಶದಿಂದ ಆರ್ಯಳಾದ ಕಾತ್ಯಾಯನೀ ವ್ರತವನ್ನು ನೀವು ಅನುಷ್ಠಿಸಿದಿರೋ ಅದಕ್ಕೆ ಈಗ ನಿಮಗೆ ಫಲಸಿಕ್ಕಿದೆ " ಎಂದನು. ಕೃಷ್ಣನಲ್ಲಿ ಕಾಮಭೋಗಕ್ಕಾಗಿ ಕಾತ್ಯಾಯನೀ ವ್ರತವು ಆಚರಿಸಲ್ಪಟ್ಟಿತು. ಅವಳ ಅನುಗ್ರಹದಿಂದ ಶ್ರೀ ಕೃಷ್ಣನಲ್ಲಿ " ಶಿರಸ್ಯಂಜಲಿ ಮಾದಾಯ " ಎಂದಿರುವಂತೆ ಆತ್ಮಾರ್ಪಣೆಯಾದ ಮೇಲೆ ಪರಮಾತ್ಮಸಂಗವು ಲಭಿಸಿತು.

ಭಾಗವತದಲ್ಲಿ ಪ್ರತಿಬಂಧ ನಿವೃತ್ತಿಗಾಗಿ ಕಾತ್ಯಾಯನೀವ್ರತವು ಆಚರಿಸಿದಂತಾಯಿತು. ಇಲ್ಲಿ ತಿರುಪ್ಪಾವೈಯಲ್ಲಿ ಅನುಷಂಗಿಕ ಮತ್ತು ಮುಖ್ಯ ಮೋಕ್ಷ ಫಲವು ಪರಮಾತ್ಮನಲ್ಲಿ ಶರಣುಹೋಗುವುದರಿಂದಲೇ ಲಭಿಸುವುದೆಂದು 5 ನೇ ಪದ್ಯದಲ್ಲಿ ವಿಶದಮಾಡಿರುವಳು. ಅದಕ್ಕಾಗಿಯೇ ಪೂರ್ವಾಚಾರ್ಯರು

ಪಾತಕಂಗಳ್ ತೀರ್ಕುಂ, ಪರಮನಡಿಕಾಟ್ಟುಂ,
ವೇದಮನೈತ್ತುಕ್ಕುಂ ವಿತ್ತಾಂ, ಗೋದೈತಮಿಳ್
ಐಯ್ಯೈಂದುಂ ಐಂದುಂ ಅರಿಯಾದ ಮಾನಿ
ಡರೈ ವೈಯ್ಯಂ ಶುಮೈಪ್ಪದುಂ ವಂಬು

ಎಂದಿರುವರು.

ರಾಘವತ್ವೇ ಽಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।

ಎಂದಿರುವಂತೆ ಶ್ರೀದೇವಿಯು ಸೀತೆಯಾಗಿಯೂ ರುಕ್ಮಿಣಿಯಾಗಿಯೂ ಅವತಾರ ಮಾಡಿ ಪರಮಾತ್ಮನ ಪರತ್ವವನ್ನು ಸ್ಥಿರಪಡಿಸಿದಳು. ಗೋದೆಯಂತೆ ಪರಮಾತ್ಮನೇ ತತ್ವ, ಅವನೇ ಹಿತ ಮತ್ತು ಅವನೇ ಪುರುಷಾರ್ಥವೆನ್ನುವ ಶಾಸ್ತ್ರಾರ್ಥವನ್ನು ಪದೇಶ ಮಾಡಲಿಲ್ಲ. ಆದ್ದರಿಂದ ಅವರು ಅಲ್ಲಲ್ಲಿ ಹೇಳಿದ ಮಾತುಗಳಿಗಿಂತಲೂ ಗೋದೆಯ ಈ ಪದ್ಯಗಳು ಶಾಸ್ತ್ರವಾಗಿವೆ. ಅದಕ್ಕಾಗಿಯೇ ಉಯ್ಯಕೊಂಡಾರ್ (ಪುಂಡರೀಕಾಕ್ಷ) ಎನ್ನುವ ನಾಥಮುನಿಯ ಪ್ರಧಾನ ಶಿಷ್ಯರು "ತಿರುಪ್ಪಾವೈ"ಯನ್ನು "ತೊಲ್ ಪಾವೈ" ಅನಾದಿಯಾದ ಪ್ರಬಂಧವೆಂದಿರುವರು. ಇವರು ತಿರುಪ್ಪಾವೈಯನ್ನು ಅನುಸಂಧಾನ ಮಾಡುವುದಕ್ಕೆ ಮುಂಚಿ ಧ್ಯಾನಶ್ಲೋಕಗಳನ್ನು ಎರಡುಪದ್ಯಗಳಲ್ಲಿ ಕೊಟ್ಟಿರುವರು. ರಾಮಾನುಜರು ಯಾವ ಆೞ್ವಾರ್ ಪ್ರಬಂಧಸೇವೆ ಮಾಡುವಾಗಲೂ ಪ್ರಾರಂಭ ಮತ್ತು ಕೊನೆಯಲ್ಲಿ ತಿರುಪ್ಪಾವೈಯನ್ನು ಹೇಳಿಯೇ ತೀರಬೇಕೆಂದಿರುವರು. ಇವರ ಜ್ಞಾನಪುತ್ರರೂ ರಾಮಾನುಜರಾದಮೇಲೆ ಅವರ ಪೀಠವನ್ನು ಅಲಂಕರಿಸಿದವರೂ ಆದ ಪರಾಶರರು ಇವಳಲ್ಲಿ ಪೂರ್ಣ ಭಕ್ತಿಯುಳ್ಳವರಾಗಿದ್ದರು. ಶ್ರೀ

ವಿಲ್ಲಿ ಪುತ್ತೂರಿನಲ್ಲಿ ಆಂಡಾಳ್ ಉತ್ಸವಕಾಲದಲ್ಲಿ ಇವಳಲ್ಲೇ ತಲ್ಲೀನರಾಗಿದ್ದ ಇವರನ್ನು ಅವರ ಶಿಷ್ಯರು ಗೋದೆಯ ತಿರುಪ್ಪಾವೈ ಸಾರವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಲಾಗಿ ಆಗ ಒಂದು ಮಂಗಳಶ್ಲೋಕವನ್ನು ರಚಿಸಿದರು. ಇದು ಮತ್ತು ಪುಂಡರೀಕಾಕ್ಷರು ಕೊಟ್ಟಿರುವ ಎರಡು ಪದ್ಯಗಳೂ ತಿರುಪ್ಪಾವೈಗೆ ಮೊದಲು " ತನಿರ್ಯ " ಎಂದರೆ ಧ್ಯಾನಶ್ಲೋಕಗಳಾಗಿ ಹೇಳುವ ವಾಡಿಕೆಯಿದೆ.

ಧ್ಯಾನ ಶ್ಲೋಕಗಳು (ತನಿಯರ್ನ)

ನೀಳಾತುಂಗಸ್ತನಗಿರಿತಟೀಸುಪ್ತಮುದ್ಬೋಧ್ಯ ಕೃಷ್ಣಂ
ಪಾರಾರ್ಥ್ಯಂ ಸ್ವಂ ಶ್ರುತಿಶತಶಿರಸ್ಸಿದ್ಧಮಧ್ಯಾಪಯಂತೀ।
ಸ್ವೋಚ್ಛಿಷ್ಟಾಯಾಂ ಸ್ರಜಿ ನಿಗಳಿತಂ ಯಾ ಬಲಾತ್ಕೃತ್ಯ ಭುಂಕ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತು ಭೂಯಃ

ಇದು ಪರಾಶರ ಭಟ್ಟರು ಅನುಗ್ರಹಿಸಿದ ಮಂಗಳಶ್ಲೋಕ. ನೀಳಾ–ತುಂಗ ಸ್ತನ–ಗಿರಿ–ತಟೀ–ಸುಪ್ತಂ—ನೀಳಾದೇವಿಯ ಉನ್ನತ ಕುಚವೆಂಬ ಪರ್ವತದ ಸಾಲು ಪ್ರದೇಶದಲ್ಲಿ ನಿದ್ರಿಸುವ, ಕೃಷ್ಣಂ–ಕೃಷ್ಣನನ್ನು, ಉದ್ಬೋಧ್ಯ–ಎಬ್ಬಿಸಿ, ಸ್ವಂ–ತನ್ನದಾದ, ಪಾರಾರ್ಥ್ಯಂ–ಅವನಿಗಾಗಿಯೇ ಇರುವೆವು ಎನ್ನುವ, ಶ್ರುತಿಶತಶಿರ ಸ್ಸಿದ್ಧಂ–ನೂರಾರು ವೇದದ ಕೊನೆಯ ಭಾಗವಾದ ಉಪನಿಷತ್ತುಗಳಲ್ಲಿ ಸಿದ್ಧವಾದ ಅರ್ಥವನ್ನು (ಅವನಿಗೆ) ಉಪದೇಶಿಸುವಳಾಗಿ, ಯಾ ಗೋದಾ–ಯಾವಗೋದೆಯು, ಸ್ವೋಚ್ಚಿಷ್ಟಾಯಾಂ–ತಾನು ಮುಡಿಸಿಕೊಂಡು ಎಂಜಲಾಗಿ ಕೊಡಲ್ಪಟ್ಟ, ಸ್ರಜಿ–ಹೂಮಾಲೆಯಲ್ಲಿ, ನಿಗಳಿತಂ–ಬದ್ಧಾದರನಾದ ಶ್ರೀಕೃಷ್ಣನನ್ನು, ಬಲಾತ್ಕೃತ್ಯ–ತನ್ನ ವಶಪಡಿಸಿಕೊಂಡು, ಭುಂಕ್ತೇ–ಅನುಭವಿಸುತ್ತಾಳೋ, ತಸ್ಯೈ–ಅವಳಿಗೆ, ನಮಇದಮಿದಂ–ಈ ಅನಂತನಮಸ್ಕಾರಗಳು, ಭೂಯಏವಭೂಯಃ–ಮತ್ತೆ ಮತ್ತೆ, ಅಸ್ತು–ಆಗಲಿ.

ಸಕಲ ಉಪನಿಷತ್ತುಗಳ ಸಾರವನ್ನು ತೆಗೆದರೆ ಅದು "ಜೀವನು ಯಾವ ದೆಶೆಯಲ್ಲೂ ಪರತಂತ್ರನು ಮತ್ತು ಪರಮಾತ್ಮನಿಗಾಗಿಯೇ ಇರುವನು" ಎನ್ನುವ ಅರ್ಥದಲ್ಲೇ ಪರ್ಯವಸಾನಗೊಳ್ಳುತ್ತದೆ. ಆ ಪರವಸ್ತುವೇ ಶ್ರೀಕೃಷ್ಣ. ಈ ಅರ್ಥವನ್ನುಕೊಡುವ ಅನಂತ ಪ್ರಮಾಣಗಳು ಸ್ಮೃತಿಯಲ್ಲಿವೆ. ಇವೆಲ್ಲವನ್ನೂ ಸಂಗ್ರಹಿಸಿ ಶ್ರೀನಿಗಮಾಂತದೇಶಿಕರು "ರಹಸ್ಯ ರತ್ನಾವಳೀಹೃದಯಂ" ಎನ್ನುವ ರಹಸ್ಯ ಗ್ರಂಥದಲ್ಲಿ ಕೊಟ್ಟಿರುವರು. ಇವೆಲ್ಲಾ ಅರ್ಥವನ್ನೂ ಆವರೇ ಸಂಗ್ರಹಿಸಿ ಕೊಟ್ಟಿರುವ ಶ್ಲೋಕವಿದು.

ಅಪ್ರಾಪ್ತಿತಃ ಪರಿಹರ್ತ ಸ್ವಪರೈ ಸ್ವರಕ್ಷ್ಯಾಂ
ತಾದರ್ಥ್ಯಧೀಪರಿಹೃತಸ್ವಪರಾರ್ಥಭಾವಃ
ಅನ್ಯೋಪಭೋಗವಿರಹಾದನಘಃ ಪ್ರಪನ್ನಃ
ಭುಂಕ್ತೇ ಸ್ವಭೋಗಮಖಿಲಂ ಪತಿಭೋಗಶೇಷಂ

ರ–ಸಾ–ದಯಾಧಿಕಾರ

ನೀಳಾತತ್ವದ ಸ್ವರೂಪ ಮತ್ತು ಸ್ವಭಾವವು ತಿರುಪ್ಪಾವೈ 18, 19 ಮತ್ತು 20 ನೇ ಪದ್ಯಗಳಲ್ಲಿ ಹೇಳಲ್ಪಟ್ಟಿವೆ. ಅವುಗಳಲ್ಲಿ ಇವಳೊಡನೆ ಪರಮಾತ್ಮನನ್ನು "ನಪ್ಪಿನ್ನೈ ಕೊಂಗೈಮೇಲ್ವೈತ್ತುಕ್ಕಿಡಂದಮಲರ್‌ಮಾರ್ಬಾ" (19) ಎಂದಿರುವುದನ್ನು ಈ ಮಂಗಳ ಶ್ಲೋಕದಲ್ಲಿ "ನೀಳಾತುಂಗಸ್ತನಗಿರಿತಟೀಸುಪ್ತಂ" ಎನ್ನುವ ವಾಕ್ಯದಿಂದ ಪರಾಶರರು ಹೇಳಿರುವರು.

ಪರಮಾತ್ಮನ ಗುಣಗಳನ್ನು ಚಿಂತಿಸುವಾಗ, ಜ್ಞಾನ, ಬಲ, ಐಶ್ವರ್ಯ, ವೀರ್ಯ ಶಕ್ತಿ ಮತ್ತು ತೇಜಸ್ಸು ಎನ್ನುವ ಷಾಡ್ಗುಣ್ಯ ಮತ್ತು ಶ್ರೀವಿಶಿಷ್ಟತ್ವ–ಇವು ಪರಮಾತ್ಮನ ಮುಖ್ಯ ಧರ್ಮಗಳೆಂದೂ, ಇವೆಲ್ಲರ ದಯೋನ್ಮುಖತ್ವವು ವಿಶೇಷವೆಂದೂ ಶ್ರೀರಾಮಾನುಜರು ನಿರೂಪಿಸಿರುವರು. ಪರಮಾತ್ಮನು ದಯಾಮಯನಾದರೂ, ಆನಂದಮಯನಾದುದರಿಂದ ಪುರುಷಕಾರಾಧೀನನಾಗಿರುವನು. ಶ್ರೀದೇವಿಯು ಪ್ರಧಾನ ಪುರುಷಕಾರ ಳಾಗಿದ್ದರೂ ಅವಳ ಪುರುಷಕಾರತ್ವವನ್ನು ಕಾರ್ಯಗತ ಮಾಡುವವರು ಭೂದೇವಿ ಮತ್ತು ನೀಳಾದೇವಿ. ದಯಾಸ್ವರೂಪಿಣಿಯಾದ ಶ್ರೀದೇವಿಯಿಂದಲೇ ಪರಮಾತ್ಮನು ಚೇತನರ ಉದ್ದೇಶಕ್ಕಾಗಿ ಪ್ರಪಂಚದ ಸೃಷ್ಟಿ ಸ್ಥಿತಿಲಯಗಳನ್ನು ಮಾಡುವನು. ಇದು ಅವನ ನಿರ್ಹೇತುಕ ಕರುಣೆ. ಸಿದ್ಧಾಂತದಲ್ಲಿ ಇದಕ್ಕೆ ಸಾಮಾನ್ಯ ಕಟಾಕ್ಷವೆಂದು ಹೆಸರು. ಇದು ಸ್ವಾಭಾವಿಕವಾಗಿ ವಿಳಂಬದಿಂದ ಚೇತನರ ಉಜ್ಜೀವನಕ್ಕೆ ಕಾರಣವಾಗಿದೆ. ಇದನ್ನೇ ನಿಗಮಾಂತ ದೇಶಿಕರು

ಕರ್ಮಾವಿದ್ಯಾದಿ ಚಕ್ರೇ ಪ್ರತಿಪುರುಷಮಿಹಾ
ನಾದಿಚಿತ್ತ ಪ್ರವಾಹೇ, ಶತ್ತತ್ಕಾಲೇ ವಿಪಕ್ತಿ
ರ್ಭವತಿ ಹಿ ವಿವಿದಾ ಸರ್ವಸಿದ್ಧಾಂತ ಸಿದ್ಧಾ—

ರ–ಸಾ–

ಎಂದಿರುವರು. ವಿವೇಕಿಗಳಾಗಿ ವಿಳಂಬವನ್ನು ಸಹಿಸಲಾರದವರು ಭೂದೇವಿಯನ್ನು ಶರಣು ಹೊಂದಿದರೆ ಅತಿ ಶೀಘ್ರದಲ್ಲಿಯೇ ಪರಮಾತ್ಮನ ಸಾಮಾನ್ಯ ಕಟಾಕ್ಷವು ಫಲಕೊಡುವುದು. ಇದರಿಂದ ನಮಗೆ ಪಾರಾರ್ಥ್ಯ ಜ್ಞಾನವು ದೃಢವಾಗುವುದು.

ನಮ್ಮ ಪರವಾಗಿ ಭೂದೇವಿಯೇ ಗೋದೆಯಾಗಿ ಈ ಪಾರಾರ್ಥ್ಯವನ್ನು ಪರಮಾತ್ಮನಿಗೆ ನಿವೇದನೆಮಾಡುವುದಕ್ಕೆ ಬದಲಾಗಿ, ಎಬ್ಬಿಸಿ ಉಪದೇಶಕೊಡುವಳು. ನೀಳಾ ತುಂಗಸ್ತನಗಿರಿತಟೀಸುಪ್ತನಾದ ಪರಮಾತ್ಮನನ್ನು ಎಬ್ಬಿಸಿ ಉಪದೇಶಿಸುವಳು ಎನ್ನುವದರಲ್ಲಿ ವಿಶೇಷಾರ್ಥವಿದೆ. ನೀಳಾದೇವಿಯು ಪ್ರೇಮ ಸ್ವರೂಪಿಣಿಯೆಂದು ತಿಳಿಸುವುದಕ್ಕಾಗಿಯೇ ಇವಳ ಸ್ತನವು ತುಂಗವೂ ಗಿರಿಪ್ರಾಯವೂ ಆಗಿದೆಯೆಂದು ವರ್ಣಿತವಾಗಿದೆ. ಸ್ತನವು ಪ್ರೇಮದ ಗುರುತು. ತಾಯಿಯು ಮಕ್ಕಳನ್ನು ನೆನೆದರೆ

ಹಾಲುತೊಟ್ಟಿಕ್ಕುವುದು. ಹಾಲೇ ಪ್ರೇಮ. ಹಾಲಿನಕಡಲಿನಲ್ಲಿ ಮಲಗಿ ಅವಹಿತನಾಗಿರುವುದನ್ನು ಇಲ್ಲಿ "ಸುಪ್ತಂ" ಎಂದು ಹೇಳಲಾಗಿದೆ. ಪ್ರೇಮದ ಕಡಲಿನಲ್ಲಿದ್ದು ಆನಂದವನ್ನನುಭವಿಸುತ್ತಿರುವ ಪರಮಾತ್ಮನಿಗೆ ಪಾರಾರ್ಥ್ಯವನ್ನು ತಿಳಿಸಲು ಭೂದೇವಿಯು ಅವನನ್ನು ಎಬ್ಬಿಸುವಳು. ಪ್ರೇಮವು ಜ್ಞಾನದೊಡನೆ ಅನಂತವಾಗಿ ಮಕ್ಕಳ ನನಸಿನಿಂದ ತೊಟ್ಟಿಕ್ಕಿ ಸಮುದ್ರವಾಗಿರುವ ಹಾಲಿನ ಪಾತ್ರವು ಜಾಸ್ತಿಯಾಗಿರುವುದರಿಂದ ಸ್ತನವು "ತುಂಗಗಿರಿ" ಯಾಗಿ ಹೇಳಲಾಗಿದೆ. ಅದರ ತಟದಲ್ಲಿ ಆನಂದಾನುಭವದಿಂದ ಸುಪ್ತನಾದ ಪರಮಾತ್ಮನನ್ನು ಎಬ್ಬಿಸಿ ಉಪದೇಶಕೊಡುವ ಅಧಿಕಾರವು ಪತ್ನಿಯಾದ ಗೋದೆಗಿದೆ. ಶಾಸ್ತ್ರದಲ್ಲಿ ಪತ್ನಿಯಾಗಿರುವಳು ಗಂಡನರಕ್ಷಣ ವಿಷಯದಲ್ಲಿ ತಾಯಿಯಾಗಿರಬೇಕೆಂದು ಶಾಸ್ತ್ರವಿದೆ. ಅದರಂತೆ ಪರಮಾತ್ಮನ ಪರಮಾತ್ಮತ್ವವನ್ನು ಉಪದೇಶಮಾಡಿಯೇ ರಕ್ಷಿಸಬೇಕು. ಇದರಿಂದ ಅವಳು ನಮಗೆ ಪುರುಷಕಾರಳಾಗಿ ನಿಂತಿರುವಳು.

"ನೀಳಾ . . . ಅಧ್ಯಾಪಯಂತೀ—ಎನ್ನುವ ಶ್ಲೋಕದ ಪೂರ್ವಾರ್ಧದಿಂದ ಪರಾಶರರು ಒಂದು ಶಬ್ದಚಿತ್ರವನ್ನೇ ಕಲ್ಪಿಸಿರುವರು. ಹೇರಳೈಶ್ವರ್ಯ, ಭೂಮಿ ಮತ್ತು ಪ್ರಭುತ್ವವಿರುವ ಒಬ್ಬರಾಜನಿಗೆ ತನಗೆ ಇಷ್ಟು ಐಶ್ವರ್ಯವಿದೆಯೆಂದು ತಿಳಿಯದಿರುವಾಗ, ಅವನಿಗೆ ಅನುರೂಪಳಾದ ಪತ್ನಿಯು ದೊರಕಿ, ಅವನ ಪ್ರೇಮಕ್ಕೆ ಪಾತ್ರಳಾದಮೇಲೆ ಅವನ ಐಶ್ವರ್ಯವು ಇಷ್ಟೆಂದು ತೋರಿಸಿಕೊಡುವಂತೆ ಭೂದೇವಿಯು ಗೋದೆಯಾಗಿ ಅವತರಿಸಿ ಶ್ರೀರಂಗನಾಥನ ಪತ್ನಿಯಾಗಿ, ಎಲ್ಲಾ ಜೀವಗಳು ನಿಮ್ಮ ಸೊತ್ತು ಎಂದು ಅವನಿಗೆ ಹೇಳಿಕೊಟ್ಟಂತಿದೆ. ಇವಳ ಮಾತಿನಲ್ಲಿ ಪೂರ್ಣ ವಿಶ್ವಾಸ ವಿಡಲು ಕಾರಣವು ಶ್ಲೋಕದ ಉತ್ತರಾರ್ಧದಲ್ಲಿದೆ.

ಸ್ವೋಚ್ಛಿಷ್ಟಾಯಾಂ...ಭುಂಕ್ತೇ—ಎನ್ನುವಾಗ ಗೋದೆಯು ಮುಡಿಸಿಕೊಟ್ಟ ಹೂ ಮಾಲೆಯು ಉಚ್ಛಿಷ್ಟ ಅಂದರೆ ಎಂಜಲಾದರೂ, ಅವಳು ಗುರುಸ್ಥಾನದಲ್ಲಿದ್ದು ಪಾರಾರ್ಥ್ಯವನ್ನು ಶ್ರೀಕೃಷ್ಣನಿಗೆ ಉಪದೇಶಿಸಿದ್ದರಿಂದ ದೋಷವಿಲ್ಲ. ಮೊದಲೇ ತುಲಸಿಯಿಂದ ಸುವಾಸಿತವಾದ ಹೂ ಮಾಲೆಯು ಗೋದೆಯು ಮುಡಿಸಿ ಕೊಟ್ಟದ್ದರಿಂದ ಸುವಾಸನೆಯು ಮತ್ತೂ ಹೆಚ್ಚಿತು. ಇವಳು ಭೂದೇವಿಯಾದ್ದರಿಂದ "ಗಂಧವತೀ ಪೃಥಿವೀ" ಎನ್ನುವಲಕ್ಷಣದಿಂದ, ಇವಳ ಗಂಧವೂ ಹೂ ಮಾಲೆಯಲ್ಲಿ ಸೇರಿತು ಎಂದು ತಿಳಿದುಕೊಳ್ಳಬೇಕು.

"ಸ್ರಜಿನಿಗಳಿತಂ ಕೃಷ್ಣಂ" ಎನ್ನುವುದರಲ್ಲಿ ಅಡಗಿರುವ ವಿಶೇಷಾರ್ಥವು ಉಯ್ಯಕ್ಕೊಂಡಾರಾ (ಪುಂಡರೀಕಾಕ್ಷ) ತಮಿಳು ಪಾಶುರದಲ್ಲಿದೆ. ಆದ್ದರಿಂದ ಪರಾಶರರಿಗಿಂತ ಇವರು ಪ್ರಾಚೀನರಾದರೂ ಇವರ ಎರಡು ಪದ್ಯಗಳು ಪರಾಶರರ ಪದ್ಯಗಳಾದಮೇಲೆ ಅನುಸಂಧಾನ ಮಾಡಲ್ಪಡುತ್ತಿವೆ.

ಅನ್ನವಯಲ್ ಪುದುವೈ ಯಾಂಡಾಳ್ ಅರಂಗರ್ಕು
ಪನ್ನು ತಿರುಪ್ಪಾವೈ ಪಲ್ಪದಿಕಂ ಇನ್ನಿಶೈಯಾಲ್
ಪಾಡಿಕ್ಕೊಡುತ್ತಾಳ್ ನಲ್ ಪಾಮಾಲೈ ಪೂಮಾಲೈ
ಶೂಡಿಕ್ಕೊಡುತ್ತಾಳೈ ಶ್ಶೊಲ್—

ಅನ್ನವಯಲ್ ಪುದುವೈ—ಹಂಸಗಳಿಂದ ಕೂಡಿರುವ ಗದ್ದೆಗಳುಳ್ಳ ಶ್ರೀವಿಲ್ಲಿಪುತ್ತೂರಿಗೆ ನಾಯಕಿಯಾದ, ಆಂಡಾಳ್—ಗೋದಾದೇವಿಯು, ಅರಂಗರ್ಕು—ಶ್ರೀರಂಗನಾಥನಿಗೆ, ಪಲ್ಪದಿಕಂ—ಅನೇಕ ಅಂದರೆ ೩೦ ಪದ್ಯಗಳುಳ್ಳ, ತಿರುಪ್ಪಾವೈ—ತಿರುಪ್ಪಾವೈಯನ್ನು, ಪನ್ನು—ರಚಿಸಿ, ಇನ್ನಿಶೈಯಾಲ್—ರಮ್ಯಗಾನದೊಡನೆಕೂಡಿದ ನಲ್ಪಾಮಾಲೈ—ಒಳ್ಳೇ ಪದ್ಯಮಾಲೆಯನ್ನು, ಪಾಡಿಕ್ಕೊಡುತ್ತಾಳ್—ಹಾಡಿಕೊಟ್ಟಳು. ಇವಳನ್ನು, ಹೇ ಮನಸ್ಸೇ ಯಾವಾಗಲೂ ಶೊಲ್—ಸ್ತುತಿಸು.

ಹಾಡಿನಮಾಲೆ ನಮಗಾಗಿ ಹೂವಿನಮಾಲೆ ತನಗಾಗಿ ಎನ್ನುವ ಎರಡು ಅರ್ಥವನ್ನೂ ತಿರುಪ್ಪಾವೈಯಲ್ಲಿ ನಾವು ನೋಡಬೇಕೆನ್ನುವುದೇ ಪುಂಡರೀಕಾಕ್ಷರ ಹೃದಯ. ಗೋಪಿಕೆಯರ ಭಾವತಾಳಿ ನಂದಗೋಕುಲದ ಒಂದು ಚಿತ್ರವೇ ಕಣ್ಣುಮುಂದೆ ಬರುವಂತೆ ಹಾಡಿರುವುದು ಪರಮಾತ್ಮನಲ್ಲಿ ಅವಳಿಗಿರುವ **ಅನ್ಯಾದೃಶಪ್ರೇಮ**. ಇದು ವಾಚ್ಯಾರ್ಥ. ಇದನ್ನು **ಆನ್ಯಾಪದೇಶವೆನ್ನುವುದುಂಟು.** ಪರಮಾತ್ಮ ಭೋಧಕ ಪದಗಳೆಲ್ಲವೂ ಆಚಾರ್ಯಪರವಾಗಿ **ಅರ್ಥವಾಗುವಂತೆ** ಜೋಡಿಸಿಕೊಟ್ಟು ಶಿಷ್ಯನು ಆಚಾರ್ಯಸ್ತುತಿಯನ್ನು ಮಾಡುವಂತೆ ತೋರಿಸಿಕೊಟ್ಟಿರುವುದು ಎರಡನೇ ಅರ್ಥ. ಇದಕ್ಕೆ **ಸ್ವಾಪದೇಶ**ವೆಂದು ಹೆಸರು.

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಶ್ವೆ—ಉ

ಎನ್ನುವುದೇ ಇದಕ್ಕೆ ಪ್ರಮಾಣ. "ಅನ್ನವಯಲ್ ಪುದುವೈ" ಅಂದರೆ ಹಂಸಪಕ್ಷಿಗಳಿಂದಕೂಡಿದ ಗದ್ದೆಗಳುಳ್ಳ ಶ್ರೀ ವಿಲ್ಲಿಪುತ್ತೂರ್" ಎಂದು ಹೇಳಿರುವುದು ಅತಿಶಯೋಕ್ತಿ ಅಲಂಕಾರದಿಂದ. ಇದಕ್ಕೆ ಬೇರೇ ಅರ್ಥವನ್ನೂ ಮಾಡಬಹುದು. ಪರಮಾತ್ಮಾನುಭವದಲ್ಲಿ ನೆನೆದವರು ಭಾಗವತರು. ಅವರನ್ನು "ಪರಮಹಂಸ" ಎಂದು ಕರೆಯವವಾಡಿಕೆ ಇದೆ. ಅವರನ್ನು ತಮಿಳಿನಲ್ಲಿ "**ಆೞ್ವಾರ್**" ಎಂದು ಕರೆಯುತ್ತೇವೆ. ಆೞ್ವಾರ್ರುಗಳಲ್ಲಿ ಗೋದಾದೇವಿಯ ತಂದೆ ಶ್ರೀ ವಿಷ್ಣುಚಿತ್ತರನ್ನು "ಪೆರಿಯಾೞ್ವಾರ್" ಎಂದು ನಾವು ಅನುಸಂಧಾನ ಮಾಡುತ್ತೇವೆ. ಅವರು ಜನಿಸಿದ ಭೂಮಿ ಶ್ರೀ ವಿಲ್ಲಿಪುತ್ತೂರ್.

ಆಂಡಾಳ್ ದೇವಿಯ ಈ 30 ಪದ್ಯಗಳು ಶಾಸ್ತ್ರವೂ ಆಗಿದೆ, ಹಾಡಿನ ಸಾಹಿತ್ಯವೂ ಆಗಿದೆ. ಮಿಗಿಲಾಗಿ ಒಂದು ಮಹಾ ಕಾವ್ಯವಾಗಿಯೂ ಆಗಿದೆ. ತಮಿಳು ಭಾಷಾಧ್ಯಯನಮಾಡಿರುವವರಿಗೆ ಇದು ಚೆನ್ನಾಗಿ ಗೋಚರವಾಗುತ್ತದೆ. ಶಾಸ್ತ್ರವಾಗಿ ವೇದದ ಸಾರಾರ್ಥವನ್ನೊಳಗೊಂಡಿದೆ. ಇದರ ಸಾಹಿತ್ಯವು ಸಂಗೀತಕ್ಕೆ ಅಳವಡಿಸಿ ಹಾಡುವಂತಿದೆ. ನಾಟ್ಯಕ್ಕೂ ಉಪಯುಕ್ತವಾಗಿದೆ. ಒಂದು ಕಾವ್ಯವಾಗಿ ಗಂಭೀರಾರ್ಥವುಳ್ಳದ್ದಾಗಿದೆ. ಅಲಂಕಾರ ಶಾಸ್ತ್ರದಲ್ಲಿ ಕಾವ್ಯಲಕ್ಷಣವು ಹೀಗಿದೆ.

1) ಗುಣಾಲಂಕಾರಯುಕ್ತಾ ಶಬ್ದಾರ್ಥೌ ಕಾವ್ಯಂ—ವಾಮನ
2) ನಿರ್ದೋಷಗುಣಾಲಂಕಾರರಸವತ್ ವಾಕ್ಯಂ—ಭೋಜ
3) ಗುಣಾಲಂಕಾರರೀತಿ ರಸೋಪೇತಃ ಸಂದರ್ಭಃ—ವಾಗ್ಭಟ
4) ರಮಣೀಯಾರ್ಥಪ್ರತಿಪಾದಕ ಶಬ್ದಃ—ಪಂಡಿತರಾಜ
5) ಧ್ವನ್ಯಾತ್ಮಕಂ ಕಾವ್ಯಂ—ಮಹಿಮ ಭಟ್ಟ
6) ವಾಕ್ಯಂ ರಸಾತ್ಮಕಂ—ವಿಶ್ವನಾಥ

ಉತ್ತಮಕಾವ್ಯದಲ್ಲಿ ವಾಚ್ಯಾರ್ಥ ಬೇರೇ ವ್ಯಂಗ್ಯ ಅಥವಾ ಧ್ವನ್ಯಾರ್ಥ ಬೇರೆಯಾಗಿರುತ್ತದೆ. ವ್ಯಂಗ್ಯಾರ್ಥವನ್ನು ಹೇಳುವಾಗ ಅದಕ್ಕೆ ನಾಲ್ಕು ಅಲಂಕಾರ ಸ್ವರೂಪವನ್ನು ಹೇಳಲಾಗಿದೆ. (ಚಂದ್ರಾಲೋಕ):—

1) ರೂಪಕಾತಿಶಯೋಕ್ತಿ—ರೂಪಕಾತಿಶಯೋಕ್ತಿಃ ಸ್ಯಾತ್ ನಿಗೀರ್ಯಾಧ್ಯವಸಾನತಃ, ಪಶ್ಯನೀಲೋತ್ಪಲದ್ವಂದ್ವಾತ್ ನಿಸ್ಸರಂತಿ ಶಿತಾ ಶರಾಃ

2) ಆಪ್ರಸ್ತುತಪ್ರಶಂಸಾಸ್ಯಾತ್ ಸಾ ಯತ್ರ ಪ್ರಸ್ತುತಾಶ್ರಯಾ | ಏಕಃ ಕೃತೀ ಶಕುಂತೇಷು ಯೋನ್ಯಂಶಕ್ರಾನ್ನ ಯಾಚತೇ

3) ಪ್ರಸ್ತುತೇನ ಪ್ರಸ್ತುತಸ್ಯ ದ್ಯೋತನೇ **ಪ್ರಸ್ತುತಾಂಕುರಃ** | ಕಿಂ, ಭೃಂಗ. ಸತ್ಯಾಂ ಮಾಲತ್ಯಾಂ ಕೇತಕ್ಯಾ ಕಂಟಕೇ ತ್ವಯಾ

4) ಸಮಾಸೋಕ್ತಿಃ ಪರಿಸ್ಫೂರ್ತಿಃ ಪ್ರಸ್ತುತೇsಪ್ರಸ್ತುತಸ್ಯ ಚ | ಅಯಮೈಂದ್ರೀಮುಖಂ ಪಶ್ಯ ರಕ್ತಶ್ಚುಂಬತಿ ಚಂದ್ರಮಾಃ

ಇಲ್ಲಿ ಪ್ರಸ್ತುತವಾದದ್ದು ಗೋಪಿಕಾಭಾವ; ಅಪ್ರಸ್ತುತವಾದದ್ದು ಆಚಾರ್ಯಭಾವ. ಎರಡೂ ಪ್ರಸ್ತುತವಾಗಬಹುದು; ಪ್ರಸ್ತುತದಲ್ಲಿ ಅಪ್ರಸ್ತುತದ ಪರಿಸ್ಫೂರ್ತಿಯೂ ಸರಿಹೋಗುತ್ತದೆ. ರೂಪಕಾತಿಶಯೋಕ್ತಿಯಾಗಿ ಅತಿ ರಮ್ಯವಾಗಿಯೂ ಇದೆ. ಅದಕ್ಕಾಗಿಯೇ ಪುಂಡರೀಕಾಕ್ಷರು ಈ 30 ಪದ್ಯಗಳನ್ನು "ನಲ್ಪಾಮಾಲೈ" ಎಂದಿರುವರು.

ಹೀಗೆ ತಮ್ಮ ಮನಸ್ಸನ್ನು ಪ್ರೇರೇಪಿಸಿ ಎಲ್ಲರೂ ಹೀಗೆ ಅನುಸಂಧಾನ ಮಾಡಲೆಂದು ಹೇಳಿಕೊಟ್ಟಮೇಲೆ ಅವಳಲ್ಲಿ ಏನನ್ನು ಪ್ರಾರ್ಥಿಸಬೇಕೆಂದು ಒಂದು ಪದ್ಯದಲ್ಲಿ ತಿಳಿಸುವರು.

ಶೂಡಿ ಕ್ಕೊಡುತ್ತ ಶುಡರ್ ಕೊಡಿಯೇ ತೊಲ್ ಪಾವೈ
ಪಾಡಿ ಯರುಳವಲ್ಲ ಪಲ್ವಳೈಯಾಯ್ ನಾಡಿ ನೀ
ವೇಂಗಡವರ್ಕು ಎನ್ನೈ ವಿಧಿ ಎನ್ನವಿಮ್ಮಾತ್ತಂ
ನ್ನಾ ಕಡವಾ ವಣ್ಣಮೇ ನಲ್ಕು.

ಶೂಡಿಕ್ಕೊಡುತ್ತ—(ಹೂ ಮಾಲೆಯನ್ನು ತಾನು) ಮುಡಿಸಿಕೊಂಡು (ನಂತರ ಸ್ವಾಮಿಗೆ) ಕೊಟ್ಟ; ಶುಡರ್‌ಕೊಡಿಯೇ—ತೇಜೋಮಯ ಲತೆಯೇ, ಲತೆಯಂತೆ ಇರುವ ಗೋದಾದೇವಿಯೇ; ತೊಲ್‌ಪಾವೈ—ಅನಾದಿಯಾದ ತಿರುಪ್ಪಾವೈಯನ್ನು; ಪಾಡಿ—ಹಾಡಿ; ಅರುಳವಲ್ಲ—ಕೃಪೆಮಾಡಬಲ್ಲ; ಪಲ್‌ವಳೈಯಾಯ್—ಅನೇಕ ಹಸ್ತಾಭರಣವುಳ್ಳವಳೇ—ಇದರಿಂದ ಇವಳು ಸ್ತ್ರೀಯಾದರೂ ಸ್ತ್ರೀತ್ವಪೂರ್ಣವುಳ್ಳವಳೆಂದು ಅರ್ಥಬರುತ್ತದೆ; ನಾಡಿ—ಪೂರ್ಣ ಸಂಕಲ್ಪದಿಂದ; ನೀ—ನೀನು; ವೇಂಗಡವರ್ಕು—ಶ್ರೀನಿವಾಸನಿಗೆ;ನ್ನೈ—ನನ್ನನ್ನು; ವಿಧಿಎನ್ನ—ಪತ್ನಿಯನ್ನಾಗಿ ಮಾಡಿರೆಂದು ತಂದೆಗೆ ಹೇಳಿದ, ಇಮ್ಮಾತ್ತಂ—ಈ ಮಾತನ್ನು; ನಾಂ—ನಾವು, ಕಡವಾವಣ್ಣಮೇ—ಅನಾದರಿಸದಂತೆ; ನಲ್ಕು—ಅನುಗ್ರಹಿಸು.

ಇವಳಿಗೆ ಸ್ತ್ರೀ ಭಾವವು ಸಹಜವಾಗಿದ್ದರೂ ಅದರ ಪೂರ್ಣತ್ವದಿಂದ "ಮಾನಿಡವರ್ಕು ಎನ್ರು ಪೇಚ್ಚುಪ್ಪಡಿಲ್ ವಾೞ್ಕೈಪ್ಪಟ್ಪೇ ಕಂಡಾಯ್ ಮನ್ನಥನೇ" ಎಂದು ಹೇಳಿರುವುದರಿಂದ ಪರಮಾತ್ಮನಲ್ಲಿ ತನ್ನ ಸ್ತ್ರೀತ್ವವನ್ನು ಅರ್ಪಿಸಿರುವಳು. ಸ್ತ್ರೀತ್ವವೆಂದರೆ ಪರಮಾತ್ಮನಲ್ಲಿ 1) ತದನನ್ಯಾರ್ಹ ಶೇಷತ್ವ 2) ತತ್ಪಾರತಂತ್ರ್ಯ 3) ತದೇಕಭೋಗತ್ವ ಮತ್ತು 4) ತದ್ವಿರಹಾಸಹತ್ವ ಎಂದು ಅರ್ಥವು ಹೇಳಲ್ಪಟ್ಟಿದೆ. ಇಂತಹ ಭಾವ ವಿಶೇಷವು ನಮ್ಮಲ್ಲಿ ಶಾಶ್ವತವಾಗಿ ಉಳಿಯಲಿ ಎಂದಿರುವುದರಿಂದ ಇದು ಮುಕ್ತಿದಶೆಯಲ್ಲಿಯೂ ಉಳಿಯುವ ಭಾವವೆಂದು ತೋರಿಕೊಟ್ಟಂತಾಗಿದೆ. ಈ ಅರ್ಥವೇ ತಿರುಪ್ಪಾವೈ ಕೊನೆಯಲ್ಲಿ ನಿಲ್ಲುವ ಭಾವ. 29ನೇ ಪದ್ಯನೋಡಿ. ಇದೇ ವೇದದ ಸಾರಾರ್ಥ. ಅದಕ್ಕಾಗಿಯೇ ನಿಗಮಾಂತದೇಶಿಕರು—

"ಪೊಯಗೈಮುನಿ, ಪೂತತ್ತಾರ್, ಪೇಯ್‌ಯಾೞ್ವಾರ್ ತಂಪೊರುನಲ್‌ವರುಂ ಕುರುಕೇಶ, ವಿಟ್ಟು ಚಿತ್ತ, ತುಯ್ಯಕುಲಶೇಖರ, ನಂಪಾಣನಾರ್ದ, ತೊಂಡರಡಿಪ್ಪೊಡಿ,ಮೞಿಶೈವಂದಶೋದಿ,ವೈಯಮೆಲ್ಲಾಂ ಮರೈವಿಳಂಗ,ವಾೞ್‌ವೇಲ್ ಏಂದುಂ, ಮಂಗಯರ್‌ಕೋ, ಎನ್ರು ಇವರ್‌ಗಳ್ ಮುಗಿೞ್‌ಂದು ಪಾಡುಂ ಶೆಯ್ಯ ತಮಿೞ್ ಮಾಲೈಗಳ್ ನಾಂ ತೆಳಿಯವೋದಿ ತೆಳಿಯಾದಮರೈ ನಿಲಂಗಳ್ ತಿಳಿಗಿನ್ರೋ ಮೇ" ಎಂದು ರಹಸ್ಯತ್ರಯಸಾರದ ಮಂಗಳ ಪದ್ಯದಲ್ಲಿ ಹೇಳಿರುವರು. "ತೆಳಿಯಾದಮರೈ" ಎನ್ನುವ ಪದದಿಂದ "ತಿರುಪ್ಪಾವೈ" ಎಂದು ವ್ಯಪದೇಶ್ಯರು ಅರ್ಥಮಾಡಿರುವರು.

ಮಂಗಳ ಪದ್ಯಗಳು

ಶ್ರೀವಿಷ್ಣು ಚಿತ್ತಕುಲನಂದನ ಕಲ್ಪವಲ್ಲೀಂ
ಶ್ರೀರಂಗರಾಜ ಹರಿಚಂದನ ಯೋಗದೃಶ್ಯಾಂ
ಸಾಕ್ಷಾತ್ಕೃನಾಂ ಕರುಣಯಾ ಕಮಲಾಮಿವಾನ್ಯಾಂ
ಗೋದಾಮನನ್ಯ ಶರಣಃ ಶರಣಂ ಪ್ರಪದ್ಯೇ

ಗೋ–ಸ್ತು

ವೇಯರ್ ಪುಕಳ್ ವಿಲ್ಲಿಪುತ್ತೂರ್ ಆಡಿಪ್ಪೂರಂ
ವೇಲ್ ವೇಲುಂ ವಿಕ ವಿಳಂಗ ವಿಟ್ಟುಚಿತ್ತರ್
ತೂಯ ತಿರುವುಗಳಾಯ್ ವಂದು ಅರಂಗನಾರ್ಕ್ಕು
ತುಳಸಿಯ್ ಮಾಲೈ ಮುಡಿಶೂಡಿಕೊಡುತ್ತ ನಾದೇ
ನೇಯಮುರ್ದ ತಿರುಪ್ಪಾವೈ ಪಾಟ್ಟಾರೈಂದುಂ
ವೀಯುರೈತ್ತ ಕೈಯೊರು ತಿಂಗಳ್ ಪಾವಾಲೈ
ಯಾಯ ಪುಕಳ್ವನೂರುರ್ದ ನಾನ್ಮತ್ತುಮೂನ್ರುಂ
ಅನ್ಪುಡನೇ ಯಡಿನೇನುಕ್ಕು ಯರುಳ್ ಶೇಯ್ ನೀಯೇ

ಪ್ರ. ಸಾ.

ಇನ್ರೋ ತಿರವಾಡಿಪ್ಪೂರಂ ಎನುಕ್ಕಾಕ
ವನ್ರೋಇಂಗಾಂಡಾಳವನರಿತ್ತಾಳ್–ಕುನ್ರಾದ
ವಾಳ್ವಾನ ವೈಕುಂದವ್ವಾ ಪೋಕಂ ತನ್ನೈಯಿಕಳ್ಳಂದು
ಆಳ್ವಾರ್ ತಿರುಮುಕಳಾರಾಯ್

ಉ–ರ–ಮಾ–22

॥ ಶ್ರೀಃ ॥

ಮಾರ್ಗಳ್ಳಿತ್ತಿಂಗಳ್ ಮದಿನಿರ್ಕ್ಕಿಂದ ನನ್ನಾಳಾಲ್
ನೀರಾಡಪೋದುವೀರ್ ಪೋದುಮಿನೋ ನೇರಿಳೈಯಿರ್
ಶೀರ್ಮಲ್ಲುಮಾಯಿಪ್ಪಾಡಿಚ್ಚೆಲ್ವಚ್ಚಿರುಮಿರ್ಕಾಳ್
ಕೂರ್ವೇಲ್ಕೊಡುಂತೊಳಿರ್ಲ ನಂದಗೋಪ್ಪಕುಮರ್ಕ
ಏರಾರ್ನ್ದ ಕಣ್ಣಿಯಶೋದೈಯಿಳಂಶಿಂಗಂ
ಕಾರ್ಮೇನಿಚ್ಚೆಂಗಣ್ ಕದಿರ್ಮದಿಯಂಪೋಲ್ ಮುಕತ್ತಾ
ನಾರಾಯಣನೇ ನಮುಕ್ಕೇ ಪರೈತರುರ್ವಾ
ಪಾರೋರ್ಪುಕಳ್ಪಡಿಂದೇಲೋರೆಂಪಾವಾಯ್ ॥ ೧ ॥

ಅನ್ಯಾಪದೇಶ

ಮಾರ್ಗಳ್ಳಿತ್ತಿಂಗಳ್ — ಶಾಸ್ತ್ರವನ್ನು ಪ್ರಾರಂಭಿಸಬೇಕಾದರೆ ಮಂಗಳ ದೊಡನೆ ಪ್ರಾರಂಭಿಸಬೇಕು.

ಮಂಗಳಾಧೀನಿ ಮಂಗಳಮಧ್ಯಾನಿ ಮಂಗಳಾಂತಾನಿ —ಸಾ–ದ.
ಎಂದಿರುವಂತೆ "ಮಾರ್ಗಳ್ಳಿತಿಂಗಳ್" ಎನ್ನುವ ಪದದಿಂದ ಮಂಗಳವು ಆಚರಿಸ ಲ್ಪಟ್ಟಿದೆ. ಗೀತೆಯಲ್ಲಿ (x).

ಮಾಸಾನಾಂಮಾರ್ಗಶೀರ್ಷೋಽಸ್ಮಿ ---ಭ. ಗೀ (x–35)
ಎಂದು ಹೇಳಿ ಮಾಸಗಳಲ್ಲಿ ತಾನು ಮಾರ್ಗಶೀರ್ಷ ಮಾಸವೆಂದು ಶ್ರೀಕೃಷ್ಣನು ಹೇಳಿರುವುದರಿಂದ ಪರಮಾತ್ಮವಾಚಕಶಬ್ದದಿಂದ ಪದ್ಯವು ಪ್ರಾರಂಭಿಸಲ್ಪಟ್ಟಿದೆ.

ಈ ತಿಂಗಳು ಬಾರ್ಹಸ್ಪತ್ಯ ಮಾಸದಲ್ಲಿ ಮೊದಲನೇ ತಿಂಗಳು. ಶ್ರೀಕೃಷ್ಣನ ಅವತಾರ ಉತ್ತರ ಮಧುರೆಯಲ್ಲಿ; ಆ ದೇಶದ ಗೋಪಿಯರ ಭಾವ ಬಂಧದಲ್ಲಿರುವ ಗೋದೆಗೆ ಈತಿಂಗಳು ಮೊದಲನೇ ದಿನ ಉಗಾದಿಯಾಗಿ ಕಂಡುಬಂದಿದೆ. ಈ ತಿಂಗಳಿಗೆ ಅಧಿದೇವತೆ ವ್ಯೂಹದ ಕೇಶವ. "ಮಾ" ಎನ್ನುವ ವಾಚಕಾಕ್ಷರವು ಮೊದಲಲ್ಲಿದೆ. ರಾಮಾಯಣದಲ್ಲಿ (ಅ. 16–4)

ಅಯಂ ಸಕಾಲಃ ಸಂಪ್ರಾಪ್ತಃ ಪ್ರಿಯೋಯಸ್ತೇ ಪರಂತಪ।
ಅಲಂಕೃತ ಇವಾಭಾತಿ ಯೇನ ಸಂವತ್ಸರಃ ಶುಭಃ ॥

ಎಂದು ರಾಮನನ್ನು ಕುರಿತು ಲಕ್ಷ್ಮಣನು ಹೇಳಿರುವುದರಲ್ಲಿ ಈ ತಿಂಗಳು ಶುಭ ತಿಂಗಳು. ಈ ತಿಂಗಳಲ್ಲಿ ಮೇಘಗಳು ಗರ್ಭ ಧರಿಸುತ್ತವೆ.

ಮದಿನಿರ್ಮಂದನನ್ನಾಳ್ 1) " ಮತಿ " ಎಂದರೆ ಬುದ್ಧಿ ಮತ್ತು ಚಂದ್ರ; ಪೂರ್ಣ ಚಂದ್ರನಿರುವುದರಿಂದ ಗೋಪಿಯರಾದ ನಾವು ಶ್ರೀಕೃಷ್ಣನನ್ನು ಚೆನ್ನಾಗಿ ನೋಡಬಹುದು.

2) ಯಾವತ್ತು ನಾವು ಶ್ರೀ ಕೃಷ್ಣನನ್ನು ಕೂಡಲು ಹೊರಟಿರುವೆವೋ ಅಂದೇ ಶುಭ ದಿನ;

3) ಎಂದು ಈಶ್ವರನಾದ ಶ್ರೀ ಕೃಷ್ಣನು ನಾವು ಅವನೊಡನೆ ಸೇರಬೇಕೆಂದು ಸಂಕಲ್ಪಿಸಿ ಅವಸರವನ್ನು ಕೊಟ್ಟನೋ ಅಂದೇ ಶುಭ ದಿನ.

4) ಗೋಪರು ನಮ್ಮನ್ನು ಶ್ರೀ ಕೃಷ್ಣನಿಂದ ಬೇರೆ ಮಾಡಿದರು; ಇಂದು ಅವರೇ ಅವನೊಡನೆ ಕೂಡಲು ಪ್ರೇರೇಪಿಸಿರುವರು—ಇದೇ ಶುಭದಿನ.

ಆಲ್ ನಾವು ಇಷ್ಟು ದಿನಗಳೂ ಆಸೆಪಟ್ಟದ್ದೂ ಇದೇ.

ನೀರಾಡಪ್ಪೋದುವೀರ್ ಪೋದುಮಿನೋ 1) ಬರೀ ಸ್ನಾನಕ್ಕಾಗಿ ಹೊರಟಿದ್ದರೆ " ನೀರಾಡ ಪ್ಪೋದುರ್ಮಿ " ಎಂದಿರಬೇಕಿತ್ತು. ಹೀಗೆ ಹೇಳಿರುವುದರಿಂದ " ಮುಂದೆ ಶ್ರೀಕೃಷ್ಣನೊಡನೆ ಜಲಕ್ರೀಡೆಯಾಡಲು ಅಪೇಕ್ಷೆಯುಳ್ಳವರು ಬನ್ನಿ " ಎಂದು ಅರ್ಥ ಬರುವಂತೆ ಹೇಳಿರುವಳು.

2) **" ಏಷ ಬ್ರಹ್ಮಪ್ರವಿಷ್ಟೋಸ್ಮಿಗ್ರೀಷ್ಮೇ ಶೀತಮಿವ ಹ್ರದಂ "** ಅಂದರೆ " ಹೀಗೆ ಪರಮಾತ್ಮಧ್ಯಾನದಲ್ಲಿದ್ದ ನಾನು ಗ್ರೀಷ್ಮಕಾಲದಲ್ಲಿ ಶೀತಲ ಜಲಾಶಯವನ್ನು ಪ್ರವೇಶಿಸಿ ಆನಂದಿಸುವಂತೆ ಬ್ರಹ್ಮವಸ್ತುವನ್ನು ಪ್ರವೇಶಿಸಿರುವೆನು." ಎಂದು ಹೇಳಿರುವಂತೆ " ಬ್ರಹ್ಮವಾದ ಶ್ರೀಕೃಷ್ಣನೆನ್ನುವ ತಟಾಕದಲ್ಲಿ ಸ್ನಾನ ಮಾಡಲಪೇಕ್ಷೆಯುಳ್ಳವರಾದರೆ ಬನ್ನಿ "

ಶೀರ್ ಮುಲ್ಗುಮಾಯಿಪ್ಪಾಡಿ ಚ್ಚೆಲ್ವಚ್ಚಿರುಮೀರಗಾಳ್
ಐಶ್ವರ್ಯದಿಂದ ತುಂಬಿ ತುಳುಕುವ ಗೋಕುಲದ ಏಶ್ವರ್ಯವಂತ ಕನ್ನಿಕೆಯರೇ.

ನೇರಿಳೈಯಿರ್ 1) ಶ್ಲಾಘ್ಯವಾದ ಆಭರಣವುಳ್ಳವರೇ; ಇಲ್ಲಿ ಹಣವಂತ ಕನ್ಯೆಯರನ್ನೇ ಕರೆಯುತ್ತಾಳೆ ಗೋದೆ; ಶ್ರೀಕೃಷ್ಣನು ನಂದ ಗೋಕುಲದಲ್ಲಿ ಕಾಲಿಟ್ಟ ದಿನದಿಂದ ಅಲ್ಲಿ ಐಶ್ವರ್ಯವು ತುಂಬಿತುಳುಕುತ್ತಿತ್ತೆಂದು ಭಾಗವತದಲ್ಲಿ ವರ್ಣಿತವಾಗಿದೆ.

2) ಇಲ್ಲಿ ಆಭರಣವೆನ್ನುವುದಕ್ಕೆ ಆತ್ಮಗುಣಪೂರ್ತಿಯೆಂದು ಅರ್ಥಮಾಡಬಹುದು; ಆಗ " ಪರಮಾತ್ಮನನ್ನು ಸೇರಬೇಕೆನ್ನುವ ಭಕ್ತಿಪರವಶತೆ ಇರುವರೇ ಬನ್ನಿ.

3) ಶೇಷತ್ವ ಜ್ಞಾನವುಳ್ಳವರೇಬನ್ನಿ; ವಿಶಿಷ್ಟಾದ್ವೈತದಲ್ಲಿ ಈ ಜ್ಞಾನವೇ ಮೋಕ್ಷ ಹೊಂದಲಪೇಕ್ಷಿಸುವವರಿಗೆ ಇರಬೇಕಾದ ಜ್ಞಾನವಿಶೇಷ; ಇದರ ಲಕ್ಷಣವನ್ನು ರಾಮಾನುಜರು.

ಪರಗತ-ಅತಿಶಯ-ಆಧಾನೇಚ್ಛಯಾ ಉಪಾದೇಯತ್ವಂಯಸ್ಯಸ್ವರೂಪಂ ಸಃಶೇಷಃ
—ವೇ—ಸಂ

ಅಂದರೆ, " ಪರಮಾತ್ಮನಲ್ಲಿ ಯಾವ ಅತಿಶಯವುಂಟೋ ಅದನ್ನು ತಾನು ಧರಿಸಿ ಪ್ರಕಾಶಪಡಿಸುವ ಇಚ್ಛೆಯಿಂದ ಪರಮಾತ್ಮನು ಮಡಕೆಗೆ ಮಣ್ಣಿನಂತೆ ಉಪಾದಾನ ಕ್ಕಾರಣನಾದರೂ, ಯಾವ ಕೊರೆತೆಯೂ ಇಲ್ಲದೆ ಉಳಿಯುವ ಅನಂತವಸ್ತು, ತಾನು ನಾಮ ರೂಪದಲ್ಲಿ ಮಡಕೆಯಂತೆ ಅವನಿಗಿಂತ ಭಿನ್ನನಾದರೂ ಅವನ ಅಂಶವೇ ಎನ್ನುವ ಭಾವವು ಯಾವನ ಸ್ವರೂಪಗತವಾಗಿರುವುದೋ ಅವನು ಶೇಷವಸ್ತು ಈ ಜ್ಞಾನವೇ ಶೇಷತ್ವಜ್ಞಾನ." ಇದರ ವಿಸ್ತಾರವು ಮುಂದೆ ಬರುತ್ತದೆ (5ನೇ ಪದ್ಯ). ಜೀವನ ಎಲ್ಲಾ ಆತ್ಮಗುಣಗಳ ಒಂದು ಆಕಾರವೇ ಈಶೇಷತ್ವಜ್ಞಾನ.

ಪರಮಾತ್ಮನು ಜಗತ್ತಿಗೆ ಉಪಾದಾನ ಕಾರಣನಾಗಿ ಸರ್ವಜ್ಞನಾಗಿ ಸರ್ವ ಶಕ್ತನಾದುದರಿಂದ ಉಪಾದೇಯವಾದ ಈ ಪ್ರಪಂಚದಲ್ಲಿ ಮತ್ತು ನಮ್ಮಲ್ಲಿ ಪ್ರೇಮ ಇಟ್ಟಿರುವನು. ಇದನ್ನು ರಕ್ಷಿಸುವ ಭಾರವೂ ಅವನದೇ. ಅದಕ್ಕಾಗಿಯೇ ಅವನು ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ—ಎನ್ನುವ ಐದು ರೂಪಗಳನ್ನು ತೆಗೆದುಕೊಂಡಿರುವನು (ಟಿಪ್ಪಣಿ 1). ಅವುಗಳಲ್ಲಿ ಪರತ್ವವನ್ನು ಮುಂದಿನ ಐದು ವಿಶೇಷಣಗಳಿಂದ ತಿಳಿಸುತ್ತಾಳೆ.

1) **ಕೂರ್ವೇಲ್ . . . ಕುಮರ್**—ಚೂಪಾದ ವೇಲಾಯುಧವನ್ನು ಧರಿಸಿ ಭಯಂಕರ ಕಾರ್ಯಕಾರಿಯಾಗಿರುವ ನಂದಗೋಪನಿಗೆ ವಶನಾಗಿರುವನೂ;

2) **ಏರಾರ್ನ್ದ . . . ಶಿಂಗಂ**—ತನ್ನ ಪ್ರೇಮಾತಿಶಯದಿಂದ ಕಣ್ಣು ಎವೆಯಿಕ್ಕದೆ ಇರುವ ಯಶೋದೆಗೆ ಸಿಂಹದ ಮರಿಯಂತಿರುವನೂ;

3) **ಕಾರ್ಮೇನಿಚ್ಚೆಂಗಣ್**—ನೀಲಮೇಘಶ್ಯಾಮನಾಗಿ ತಾವರೆ ಹೂವಿನಂತೆ ಇರುವ ಕಣ್ಣುಳ್ಳವನೂ;

4) **ಕದಿರ್ಮತಿಯಂಪೋಲ್ ಮುಕತ್ತ್ತಾ**— ಸೂರ್ಯನಂತೆಯೂ, ಚಂದ್ರನಂತೆಯೂ ಮುಖವುಳ್ಳವನೂ;

5) **ನಾರಾಯಣನೇ**—ಶ್ರಿಯಃಪತಿಯೂ, ಜಗತ್ತಿಗೆ ಕಾರಣನೂ, ರಕ್ಷಕನೂ, ಲಯಕರ್ತನೂ ಆದ ದೈವವೇ ಈಗ ಶ್ರೀಕೃಷ್ಣನಾಗಿ ನಿಂತಿರುವವನೇ

ನಮುಕ್ಕೇ—ಬೇರೇಗತಿಯಿಲ್ಲದ, ಅವನ ಪಾದಾರವಿಂದವನ್ನೇ ಆಶ್ರಯಿಸಿರುವ ನಮಗೇನೇ

ಪರೈ—ವ್ರತಸಾಧನವನ್ನು

ತರುವಾರ್—ಕೊಡುವನು

ಪಾರೋರ್ಪುಗಳ್ಪೆಡಿಂದೇಲ್—ಈ ಲೋಕದವರೆಲ್ಲಾ ಸ್ತೋತ್ರಮಾಡುವಂತೆ ಅವಧಾನದಿಂದಿದ್ದರೆ

ಓರ್ ಎಂಪಾವಾಯ್—ನಮ್ಮ ವ್ರತವು ಅದ್ವಿತೀಯವಾಗುವುದು—ಇದು ಸಾಮಾನ್ಯಾರ್ಥ.

ಇಲ್ಲಿ ಪರಮಾತ್ಮನಿಗೆ ಕೊಟ್ಟಿರುವ ವಿಶೇಷಣಗಳು ಪರತ್ವಸೂಚಕಗಳಾಗಿವೆ. ಪರತ್ವವನ್ನು ಶ್ರುತಿಯು ಹೇಳುವಾಗ.

೦) ಸತ್ಯಂ ಜ್ಞಾನಮನಂತಂಬ್ರಹ್ಮ; ಆನಂದೋಬ್ರಹ್ಮ (ತೈ–ಉ)

೨) ಸ ಆತ್ಮಾ ಅಪಹತಪಾಪ್ಮಾವಿರಜೋ ವಿಮೃತ್ಯುಃ ವಿಶೋಕಃ ವಿಜಿಘತ್ಸಃ, ಅಪಿಪಾಸಃ, ಸತ್ಯಕಾಮಃ, ಸತ್ಯಸಂಕಲ್ಪಃ (ಛಾಂ–ಉ)

೩) ಯಸ್ಸರ್ವಜ್ಞಃ ಸರ್ವವಿತ್ ಯಸ್ಯಜ್ಞಾನಮಯಂತಪಃ (ಮು–ಉ)

೪) ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲ ಕ್ರಿಯಾಚ (ಶ್ವೇ–ಉ)

೫) ಸರ್ವಂಖಲ್ವಿದಂಬ್ರಹ್ಮ ತಜ್ಜಲಾ೯ (ಛಾಂ)

೬) ಅಂತಃ ಪ್ರವಿಷ್ಟಶ್ಶಾಸ್ತಾಜನಾನಾಂ ಸರ್ವಾತ್ಮಾ (ತೈ–ಆರ್)

೭) ಮಾತಾ ಪಿತಾ ಭ್ರಾತಾ ನಿವಾಸಃ ಶರಣಂ ಸುಹೃತ್‌ಗತಿಃ ನಾರಾಯಣಃ (ಸು–ಉ)

೮) ಏಷ ಸರ್ವೇಶ್ವರಃ, ಏಷ ಸರ್ವಜ್ಞಃ, ಏಷೋಂತರ್ಯಾಮಿಾ; ಏಷಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಂ (ಮಾಂ–ಉ)

೯) ವೃಕ್ಷ ಇವಸ್ತಬ್ಧೋದಿವಿ ತಿಷ್ಠತ್ಯೇಕಃ ತೇನೇದಂ ಪೂರ್ಣಂ, ತೈಯಾಜ್ಞಕೀ ಮತ್ತು **ಮುಂಡಕ**

ಇವೇ ಮೊದಲಾದ ಮಂತ್ರಗಳಿಂದ ವರ್ಣಿಸಿರುತ್ತದೆ. ಇವೆಲ್ಲದರ **ಅರ್ಥ**ವನ್ನು ಒಟ್ಟುಗೂಡಿಸಿ ಗೋದೆಯು ಇಲ್ಲಿ ಸುಲಭವಾಗಿ ಹೇಳಿರುವಳು.

1) **ಕೂರ್ವೇಲ್ . . . ಕುಮರ್ಕ** ಮಲಗುವಾಗಲೂ ವೇಲಾಯುಧವನ್ನು ಹಿಡಿದುಕೊಂಡೇ ಇರುತ್ತಿದ್ದನು ನಂದಗೋಪ. ಅವನಿಗೆ ಕೃಷ್ಣನಲ್ಲಿ ಅಷ್ಟು ವಾತ್ಸಲ್ಯ; ತಾಯಿಯಾಗಿ ಬಂದು ಪೂತನೀ ತೊಂದರೆ ಕೊಟ್ಟಳು; ಶಕಟಾಸುರನು ಶತ್ರುವಾಗಿ ಪೀಡಿಸಿದನು; ಎಲ್ಲೆಲ್ಲೂ ಶ್ರೀಕೃಷ್ಣನಿಗೆ ಶತ್ರುಗಳೇ; ಅವನನ್ನು ರಕ್ಷಿಸುವ ಹೊಣೆ ತನದೆನ್ನುವ ಭ್ರಮೆ ಇತ್ತು ಇವನಿಗೆ; ಮಹಾಭಾರತದ ವನಪರ್ವದಲ್ಲಿ ಒಂದು ಕತೆಯಿದೆ; ಸೋಮಕನೆಂಬ ಮಹಾರಾಜ; ಅವನಿಗೆ ನೂರುಜನ ಹೆಂಡಂದಿರು; ಎಲ್ಲರಿಗೂ ಸೇರಿ ಒಬ್ಬನೇ ಮಗ; ಒಂದು ದಿನ ಅದನ್ನು ಒಂದು ನೊಣ **ಕಚ್ಚಿ ಅತ್ತಾಗ** ಎಲ್ಲರೂ ಅತ್ತರಂತೆ; ಅಂತಹ ಪ್ರೇಮ ನಂದಗೋಪನದು; ಪೂತನೀ **ಮೊದಲಾದ** ವರು ಸತ್ತ ಕ್ರಮವನ್ನು ನೋಡಿಯೂ ಪ್ರೇಮಂಧನಾಗಿ ಅತಿಶಯ **ಆದರ**ವನ್ನು ವಹಿಸಿದ್ದನು ನಂದಗೋಪ; ಇದರಿಂದ ಶ್ರೀಕೃಷ್ಣನ ಸೌಂದರ್ಯವು **ಎಷ್ಟಿದ್ದರ**ಬೇಕೆಂದು ಊಹಿಸಲೂ ಸಾಧ್ಯವಿಲ್ಲ.

" ಗುಣಾದ್ರೂಪ ಗುಣಾಚ್ಚಾಪಿ ಪ್ರೀತಿರ್ಭೂಯೋನ್ಯವರ್ಧತ " ಎನ್ನುವಂತೆ ಪರಮಾತ್ಮನ **ಸ್ವರೂಪ ನಿರೂಪಕಗಳಿಗೂ ನಿರೂಪಿತಗಳಾದ ಈ ಗುಣಗಳ** (ಟಿಪ್ಪಣಿ 2) ಪರೀವಾಹವಾಗಿ ತೋರಿದ ದಯಾ ಮುದಲಾದ ಗುಣಗಳೂ

ಇವನು ದಿವ್ಯಮಂಗಳ ವಿಗ್ರಹವನ್ನು ಧರಿಸುವಂತೆ ಮಾಡಿರುತ್ತವೆ. ಇಲ್ಲಿ ಸ್ವರೂಪ ನಿರೂಪಕ ಗುಣಗಳೆಂದರೆ **ಸ್ವಸತ್ತಾ ಸಮಕಾಲೀನ ಗುಣಗಳು.** ಅಂತಹ ರೂಪವನ್ನು ವರ್ಣಿಸುವಾಗ ರಾಮಾನುಜರು

ನಿತ್ಯ ನಿರವದ್ಯ ನಿರತಿಶಯ ಸುಗಂಧ ನಿರತಿಶಯ ಸುಖಸ್ಪರ್ಶ ನಿರತಿಶಯೌ ಜ್ವಲ್ಯ (ವೈ–ಗ)

ಎಂದು ಹೇಳಿ **" ಅಪರಿಚ್ಛೆದ್ಯ ಸ್ವರೂಪ ಸ್ವಭಾವ "** ಎಂದಿರುವರು. ಗೋದೆಯು ಇನ್ನೂ ಸುಲಭವಾಗಿ ತಿಳಿಯುವಂತೆ ಹೇಳಿರುವಳು. ಅಮೂರ್ತ ರೂಪದಲ್ಲಿ ಅಡಗಿರುವ ಸಕಲ ಗುಣಗಳನ್ನೂ ಪ್ರಕಾಶಪಡಿಸುವ ದಿವ್ಯಮಂಗಳ ವಿಗ್ರಹ ಪರಮಾತ್ಮನದು. ಅವನೇ ಈಗ ಕೃಷ್ಣನಾಗಿ ನಂದಗೋಪನಿಗೆ ವಶ್ಯನಾಗಿರುವನೆಂದರೆ ಅವನ **ಸೌಲಭ್ಯ** ಮತ್ತು **ಸೌಶೀಲ್ಯ**ವೆಂತಹದೆಂದು ಮನದಲ್ಲೇ ನೆನೆದು ಪ್ರೇಮಾತಿಶಯದಿಂದ **ಉಕ್ಕಿ** ಬಂದ ಮಾತು " ನಂದಗೋಪ್ಕ ಕುಮರ್ಕ " (ಟಿಪ್ಪಣಿ 3).

ಏರಾರ್ನ್ದ . . . ಶಿಂಗಂ ಎಲ್ಲಾ ಗೋಪರೂ ಕೃಷ್ಣನ ಮೇಲೆ ದೂರು ಹೇಳಿ ಗೋಪಿಯರಾದ ನಮ್ಮೊಡನೆ ಸೇರದಂತೆ ಮಾಡಿದರಲ್ಲಾ ಎಂದಿದ್ದ ಯಶೋದೆಗೆ ಈಗ ನಮ್ಮೊಡನೆ ಸೇರುವಂತಾಗಿ ಕೃಷ್ಣನ ಮೇಲಿದ್ದ ದೂರುಗಳೆಲ್ಲಾ ಮಾಯವಾದವಲ್ಲಾ ಎಂದು ಎವೆ ಇಕ್ಕದೆ ಕೃಷ್ಣನನ್ನೇ ನೋಡಿ ಹಿಗ್ಗಿ ತನ್ನ ಮಗನು " ಸಿಂಹದ ಮರಿ " ಎಂದು ಕಂಡಿತು. ನನ್ನ ಮಗನು ಏನನ್ನು ತಾನೆ ಸಾಧಿಸಲಾರನೆನ್ನುವ ಅಭಿಮಾನ ಯಶೋದೆಗೆ.

ಭಕ್ತರಲ್ಲಿ ಪುರುಷ ಭಾವವಿರುವವರಿಗೆ ಪರಮಾತ್ಮನು ತನ್ನವನೆಂಬ ಹೆಮ್ಮೆಯಿರುತ್ತದೆ. ಹಾಗೆ ನಂದಗೋಪನ ಪ್ರೇಮ. ಅವನಿಗೆ ಕೃಷ್ಣನು " ಕುಮಾರ್ಕ " ಅಧೀನನಾದ ಮಗ. ತರ್ಕಶಾಸ್ತ್ರದಲ್ಲಿ ಉದಯನಾಚಾರ್ಯರೆನ್ನುವರು ಶ್ರೀರಂಗನಾಥನ ದರ್ಶನಸಿಗದಿದ್ದಾಗ

ಐಶ್ವರ್ಯ ಮದಮತ್ತೋಸಿ ಮಾಮವಜ್ಞಾಯ ತಿಷ್ಠಸೇ ।
ಪರೈರಭಿಭವೇ ಪ್ರಾಪ್ತೇ ಮದಧೀನಾ ತವ ಸ್ಥಿತಿಃ ॥ (ಎ–ಕು)

ಎಂದರಂತೆ. ಪರಮಾತ್ಮನು ಐಶ್ವರ್ಯಾದಿ ಷಾಡ್ಗುಣ್ಯ ಪರಿಪೂರ್ಣನಾದರೂ (ಟಿಪ್ಪಣಿ 4) ಎಲ್ಲರಿಗೂ ಗೋಚರನಲ್ಲವನಾದುದರಿಂದ ಅವನನ್ನು ತರ್ಕದಿಂದಲೇ ಸಾಧಿಸಬೇಕು. ದೇವರಿಲ್ಲವೆನ್ನುವರನ್ನು ತರ್ಕದಿಂದಲೇ ಸಾಧಿಸಬೇಕು. ಈ ಅರ್ಥವನ್ನು ಉದಯನಾಚಾರ್ಯರು ಇಲ್ಲಿ ನಿಂದಾಸ್ತುತಿ (ಟಿಪ್ಪಣಿ 5) ಯನ್ನಾಗಿ ಹೇಳಿರುವರು. ಸ್ತ್ರೀ ಹೃದಯವು ಹೀಗಿಲ್ಲ. ಪರಮಾತ್ಮನ ವಿರಹಾಸಹತ್ವದಿಂದ ಕೃಶವಾಗುವ ಮನೋಧರ್ಮ ಅವರದು. ಇಲ್ಲಿ ಆಚಾರ್ಯರಲ್ಲಿ ಸ್ತ್ರೀಭಾವವಿರುವವರು ಸ್ವಾಪದೇಶದಲ್ಲಿ ಬರುವರಾದುದರಿಂದ ತ್ಯಾಗಾತ್ಮಕ ಭಕ್ತಿಯು ತಲೆದೋರಿ ಪರಮಾತ್ಮನ ಸಂಗಮದಿಂದ ವಾತ್ಸಲ್ಯ ರೂಪದಲ್ಲಿ ಪರತ್ವವನ್ನು ಅನುಭವಿಸುವ ಮನೋಧರ್ಮಕ್ಕೆ " ಇಳಂಶಿಂಗಂ " ಆಗಿ ಪರಮಾತ್ಮನು ತೋರುವದು ರಕ್ಷಕತ್ವ ದೃಷ್ಟಿಯಿಂದ (ಟಿಪ್ಪಣಿ 6).

" ನಂದಗೋಪರ್ಕ ಕುಮರ್ಕ " ಎನ್ನುವುದರಿಂದ ಭಕ್ತಿ ಪ್ರಾಪ್ಯನೆಂದೂ ಯಶೋದ್ಯೆ ಇಳಂ ಶಿಂಗಂ " ಎನ್ನುವುದರಿಂದ ಪ್ರಪತ್ತಿಪ್ರಾಪ್ಯನೆಂದೂ ಅರ್ಥವು ಬರುತ್ತದೆ. ಎರಡು ವಿಧ ಭಕ್ತರ ದೈವವೆಂದೂ ಈ ಎರಡು ವಿಶೇಷಣಗಳಿಂದ ತಿಳಿಸಿ ಮೂರನೇ ವಿಶೇಷಣದಿಂದ ಪರಮಾತ್ಮನು ದಿವ್ಯಮಂಗಳ ವಿಗ್ರಹ ವಿಶಿಷ್ಟನೂ, ನೀಲ ಮೇಘ ಶ್ಯಾಮನೂ ಮತ್ತು ಕಮಲ ದಳಾಯಿತ ಲೋಚನನೂ ಎಂದೂ ಹೇಳಿ ಶ್ರುತಿ ಸಮನ್ವಯಕೊಟ್ಟಿರುವಳು. ತೈತ್ತರೀಯ ಯಾಜ್ಞಿಕೀ ಉಪನಿಷತ್ತಿನಲ್ಲಿ

ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ (ತೈ–ಮಾ)

ಎನ್ನುವ ಮಂತ್ರದಿಂದ ಪರಮಾತ್ಮನ ಅನಂತತ್ವವನ್ನು ಸ್ಥಿರಪಡಿಸುವ ನೀಲಮೇಘ ಶ್ಯಾಮಲತ್ವವು ಭಕ್ತಿಗೆ ಪರವಶವಾಗಿ ಯೋಗಿಗಳ ಹೃದಯದಲ್ಲಿ ಪಂಕಜದಳಾಯಿತ ಲೋಚನತ್ವವಾಗಿ ಕಾಣುವುದೆಂದು ಅಂತರಾದಿತ್ಯ ವಿದ್ಯೆಯಲ್ಲಿ (ವಾಂ I, 6, 6) ಹೇಳಿದೆ. ಸ್ವತಃ ನೀಲಮೇಘ ಶ್ಯಾಮನಾಗಿ ಭಕ್ತರಿಗೆ ಪಂಕಜದಳಾಯಿತಲೋಚನನಾಗಿರುವನೆಂದು ತಿಳಿದರೆ ಆಗಲೇ ವೇದಸಾರವು ತಿಳಿದಂತಾಗುವುದು–ಎಂದು ಗೋದೆಯು ತಿಳಿಸಿರುವಳು.

ಶ್ರೀವೈಷ್ಣವ ವಿಕ್ಕ ಆಳ್ವಾರ್ರ ಅನುಭವವೂ ಹೀಗೆಯೇ ಇದೆ. ಪ್ಪೊಯ್ಗೈಮುನಿ ಎನ್ನುವ ಮೊದಲಿಗರು (ಇ–ಮು)

" ವೈಯ್ಯಂತಕಳಿಯಾ ಆರ್ಕಡಲೇ ನೆಯ್ಯಾಕ "

ಎಂದು ತನ್ನ ಯೋಗಾನುಭವವನ್ನು ಹಾಡಲು ಹೊರಟು ಬಾಹ್ಯಾಂಧಕಾರವನ್ನು ತನ್ನ ಯೋಗಶಕ್ತಿಯಿಂದ ಹೋಗಲಾಡಿಸಿದಮೇಲೆ, ಎರಡನೇ ಆಳ್ವಾರ್ರು ಭೂತ ಮುನಿಗಳು

" ಅನ್ಬೇತಗಳಿಯಾ ಆರ್ವಮೇ ನೆಯ್ಯಾಕ " (ಇ–ಇ)

ಎಂದು ಹಾಡಿರುವಂತೆ ತನ್ನ ಯೋಗಶಕ್ತಿಯಿಂದ ಆಂತರ ಅಂದರೆ ಮನಸ್ಸಿನ ತಮಸ್ಸನ್ನು ಪ್ರೇಮವೆನ್ನುವ ಬೆಳಕಿನಿಂದ ಹೋಗಲಾಡಿಸಿದರು. ಇಂತಹ ಅನ್ಯಾದೃಶ ದೈವಿಕ ಬೆಳಕಿನಲ್ಲಿ ಮೂರನೇ ಆಳ್ವಾರ್ " ಪೇಯ್ಯಾಳ್ವಾರ್ " ಎನ್ನುವರು

ತಿರುಕ್ಕಂಡೇ ಪ್ಪೊ ಮೇನಿಕ್ಕಂಡೇ (ಇ–ಮಾ)

ಎಂದು ಆನಂದಪರವಶರಾಗಿ ಹಾಡಿದರು. ಇಲ್ಲಿ "ಪ್ಪೊವೇನಿಕ್ಕಂಡೇ" ಎನ್ನುವುದನ್ನು ಉಪನಿಷತ್ತಿನ "ಕಪ್ಯಾಸಂ ಪುಂಡರೀಕಮೇವಮಕ್ಷಿಣೀ" ಎನ್ನುವ ಅಂತರಾದಿತ್ಯ ವಿದ್ಯಾ ಮಂತ್ರದೊಡನೆ ಹೋಲಿಸಿದರೆ ಮೊದಲಿನ ಮೂರು ಆಳ್ವಾರ್ರ ಅನುಭವವು ಅಂತರಾದಿತ್ಯ ವಿದ್ಯೆಯಲ್ಲಿ ಯೋಗಿಗಳು ಅನುಭವಿಸುವ ಸಾಕ್ಷಾತ್ಕಾರವೆಂದು ತೋರದಿರದು. ಪರಮಾತ್ಮನನ್ನು " ಸತ್ಯಂಜ್ಞಾನಮನಂತಂ ಬ್ರಹ್ಮ " ಎಂದು ಶ್ರುತಿಯು ಹೇಳಿ, ಅವನು " ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ " ಎಂದು ಪರಿಷ್ಕರಿಸಿ ಯೋಗಿಗಳ ಹೃದಯದಲ್ಲಿ ನೀಲಮೆಘ ಶ್ಯಾಮನಾಗಿ ಕಾಣುವನು–ಎಂದಿದೆ. ಅವನಲ್ಲಿ ಯೋಗಿಗಳಿಗೆ ಭಕ್ತಿಯು ಉಕ್ಕಿಬಂದರೆ ಆಗ ಅವನು ಲೋಕಕ್ಕೆ ದ್ವಾರ ಮತ್ತು

ಹೃದಯ ಸ್ಥಾನನಾದ ಆದಿತ್ಯನಲ್ಲಿ ಪುಂಡರೀಕಾಕ್ಷನಾಗಿ ಕಾಣುವನು. ಇದರ ತತ್ಪಾರ್ಥವನ್ನು ಯೋಚಿಸಿದರೆ ಪರತ್ವವು ಸ್ವಾಭಾವಿಕವಾಗಿ ಸ್ವಾಮಿತ್ವವಾಗಿದ್ದರೂ ಭಕ್ತನ ವಿಷಯದಲ್ಲಿ ಅದು ರಕ್ಷಕತ್ವವಾಗಿ ಪರಿಣಮಿಸುವುದೆಂದು ಅರ್ಥವಾಗುತ್ತದೆ. (ಸ್ವಾಭಾವಿಕತ್ವಂ–ಅನನ್ಯಾಧೀನತ್ವಂ).

ಸರ್ವಜ್ಞನೂ ಸರ್ವಶಕ್ತನೂ ಆದ ದೇವನು ಪ್ರೇಮಮಯನೆಂದರೆ ಹೇಗೆ ಎನ್ನುವುದನ್ನು ತಿಳಿಸುವುದಕ್ಕಾಗಿ **ಕದಿರ್ಮದಿಯಂಪೋಲ್ ಮುಕತ್ತಾ**— ಎಂದಿರುವಳು. ಭಕ್ತರಲ್ಲದವರಿಗೆ ಸೂರ್ಯನಂತೆ ತಾಪವನ್ನುಂಟುಮಾಡುವವನು; ಭಕ್ತರಿಗೆ ಚಂದ್ರನಂತೆ ಹಿತಕರನಾಗಿರುವನು (ಕೂಡಾರೈ ಅಳಿಪ್ಪ, ಕೂಡೂಮವರೈ ಅಳಿಪ್ಪ ದೈವಂ). **ಮುಂಡಕೋಪನಿಷತ್ತಿನ ಅಕ್ಷರ ವಿದ್ಯೆಯಲ್ಲಿ ಇದರ ಗುಹ್ಯಾರ್ಥವನ್ನು ಕಾಣಬಹುದು.**

ಇಂತಹ ದೈವವು ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಯಾವದು ಎನ್ನುವುದಕ್ಕೆ ಉತ್ತರ " ನಾರಾಯಣನೇ " ಎಂದು.

ಸಾಕ್ಷಾನ್ನಾರಾಯಣೋ ದೇವಃ ಕೃತ್ವಾಮರ್ತ್ಯಮಯೀಂ ತನುಂ ।
ಮಗ್ನಾನುದ್ಧರತೇಲೋಕಾ ಕಾರುಣ್ಯಾಚ್ಛಾಸ್ತ್ರಪಾಣಿನಾ ॥

—ಜಯಾಖ್ಯಸಂಹಿತೆ

ಎನ್ನುವ ಪ್ರಮಾಣವನ್ನು ಮನಸ್ಸಿನಲ್ಲಿಟ್ಟು ಗೀತೋಪದೇಶಮಾಡಿದ **ಶ್ರೀಕೃಷ್ಣನೇ** ನಾರಾಯಣನೆಂದು ತಿಳಿಸಿರುವಳು. ಈ ನಾರಾಯಣ ಶಬ್ದವು **ಯೋಗರೂಢಿ** (ಟಪ್ಪಣಿ 7) ಯಿಂದ ಪರತ್ವಸೂಚಕವೆಲ್ಲಾ ಅರ್ಥವನ್ನೂ ಕೊಡಬಲ್ಲದು. ಇದನು ಕಾಲಕ್ಷೇಪದಲ್ಲಿ ತಿಳಿಯಬೇಕು.

ಇಂತಹ ಪರತತ್ವವನ್ನು ಕೂಡಲು ಅಧಿಕಾರವುಳ್ಳವರು ನಾವೇ ಎಂದು ಹೇಳಿರುವಳು. ಗೋಪರು ಬೇರೇ ಸ್ತ್ರೀಯರಿಂದ ಈ ವ್ರತವನ್ನು ಮಾಡಿಸುವರೆಂದು ನೆನೆಯಬೇಡಿ. ನಾವೇ ಈ ವ್ರತಕ್ಕೆ ಸರಿಯಾದವರು. ಶ್ರೀಕೃಷ್ಣನೂ ಹಾಗೆಯೇ ಹೇಳಿದ್ದನು (ಮಾರ್ಯಮಣಿವಣ್ಣ ನೆನ್ನೆಲೇ ವಾಯ್ನೆರ್ನ್ದಾರ್–16 ಪಾಶುರ) ವ್ರತಸಾದ್ಗುಣ್ಯವು (ಟಪ್ಪಣಿ 8) ನಮ್ಮಿಂದಲೇ ಆಗಬೇಕು—ಎಂದಿರುವಳು.

ಪದ್ಯದ ಕೊನೆಯಲ್ಲಿರುವ " ಏಲ್ ಓರ್ ಎಂಪಾವಾಯ್ " ಎನ್ನುವುದಕ್ಕೆ ಅರ್ಥ ವಿಲ್ಲವೆನ್ನುವರು ಕೆಲವರು. ವಿಶೇಷಾರ್ಥವಿದೆ ಎನ್ನುವರು ಕೆಲವರು. 30ನೇ ಪದ್ಯದಲ್ಲಿ " ಏಲ್–ಓರ್ " ಎನ್ನುವ ಎರಡು ಪದಗಳಿಲ್ಲ. ಕೆಲವರು " ಏಲ್ " ಎನ್ನುವುದನ್ನು ಹಿಂದಿನ ಪದದೊಡನೆ ಸೇರಿಸಿ " ನಾವು ಹೀಗೆ ಮಾಡಿದರೆ " ಎಂದು ಪ್ರತಿಯೊಂದು ಪದ್ಯದಲ್ಲೂ ಅರ್ಥಮಾಡಿಕೊಂಡರೆ ಆಗ " ಎಂಪಾವಾಯ್ " ನನ್ನ ವ್ರತವು, ಓರ್ ಅದ್ವಿತೀಯವಾಗುವುದು " ಎಂಬ ಅರ್ಥ ಬರುವುದು ಎನ್ನುವರು. ಮತ್ತೆ ಕೆಲವರು " ಏಲ್–ಸ್ವೀಕರಿಸು; ಓರ್–ಅರ್ಥಮಾಡಿಕೊ, ಎಂಪಾವಾಯ್–ನನ್ನ ಸ್ನೇಹತಿಯೆ" ಎನ್ನುವರು. ಕಾವ್ಯ ದೃಷ್ಟಿಯಿಂದ ಕೆಲವರು " ನಾಚ್ಚಿಯಾರ್ ತಿರು

ಮೊಗ್ಗಿಯಲ್ಲಿ ಕಾಮದೇವನನ್ನು ಪ್ರಾರ್ಥಿಸಿರುವುದರಿಂದ ಈ ತಿರುಪ್ಪಾವೈಯಲ್ಲಿ ರತಿ ದೇವಿಯನ್ನು "ಪಾವಾಯ್" ಎಂದಿರುವಳು ಎಂದು ಹೇಳುವರು. ಇದು ಸರ್ವಥಾ ಅನುಚಿತವಾದರ್ಥ. ಪರಮೈಕಾಂತಿಗಳಿಗೆ ದೇವತಾಂತರ ಪ್ರಾರ್ಥನೆಯು ಸಲ್ಲದು. ಮನ್ಮಥನೆಂದರೆ "ಸಾಕ್ಷಾನ್ಮನ್ಮಥ ಮನ್ಮಥಃ" ಎನ್ನುವಂತೆ ಪರಮಾತ್ಮನೇ. ಈ ದೃಷ್ಟಿಯಿಂದಲೇ ಪೆರಿಯ ಪರಕಾಲಸ್ವಾಮಿಗಳು "ಪಾವಾಯ್" ಎನ್ನುವುದಕ್ಕೆ "ಲಕ್ಷ್ಮೀ ದೇವಿಯೇ" ಎಂದಿರುವರು. ಆದರೆ ಗೋದೆಯ ಹೃದಯವನ್ನು ಅರಿತವರಿಗೆ "ಪಾವಾಯ್–ನನ್ನ ಸಖಿಯೇ" ಎಂದೇ ಸರಿ ಹೋಗುವುದು. ಇವಳು ನಾಚ್ಚಿಯಾರ್ ತಿರುಮೊಗ್ಗಿಯಲ್ಲಿ "ಕನಾಕ್ಕಂಡೇನ್ ತೋಗ್ಗಿನಾನ್" ಎಂದೇ ಹೇಳಿರುವಳು. ಅದಕ್ಕಾಗಿಯೇ ಫಲಶ್ರುತಿಯನ್ನು ಹೇಳುವ 30 ನೇ ಪದ್ಯದಲ್ಲಿ "ಏಲ್–ಓರ್" ಎನ್ನುವ ಎರಡು ಪದಗಳಿಲ್ಲ. "ಏಲ್–ಅರ್ಥಮಾಡಿಕೊ, ಓರ್–ಸ್ವೀಕರಿಸು" ಎನ್ನುವುದು ಸರಿ ಹೋಗುತ್ತದೆ.

ಸ್ವಾಪದೇಶ

ಮಾರ್ಗಳಿತ್ತಿಂಗಳ್—ಸಂಸ್ಕೃತದಲ್ಲಿ ಈ ಮಾಸಕ್ಕೆ ಧನುರ್ಮಾಸ ಎಂದು ಹೆಸರು. ಇದಕ್ಕೆ "ಮಾರ್ಗಶೀರ್ಷ" ಎನ್ನುವುದು ಮತ್ತೊಂದು ಹೆಸರು. ಮೋಕ್ಷ ಮಾರ್ಗಕ್ಕೆ ಶೀರ್ಷಪ್ರಾಯವಾದ ಆಚಾರ್ಯನಿಷ್ಠೆಗೆ ಯೋಗ್ಯವಾದ ಕಾಲವಿದು.

ಸಿದ್ಧಿರ್ಭವತಿವಾನೇತಿ ಸಂಶಯೋಚ್ಯುತಸೇವಿನಾಂ ।
ನ ಸಂಶಯೋಸ್ತಿ ತದ್ಭಕ್ತ ಪರಿಚರ್ಯಾರತಾತ್ಮನಾಂ ॥
(ಶಾಂ–ಸ್ಮೃ 1–75)

ಎಂದಿರುವಂತೆ ಭಾಗವತರ ಮತ್ತು ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗುವುದು ಮೋಕ್ಷಕ್ಕೆ ಸುಲಭವಾದ ದಾರಿ. ಶ್ರೀಕೃಷ್ಣನು ಆಚಾರ್ಯರಿಗೆ ಸುಲಭನು. ಆಚಾರ್ಯರು ಪುರುಷಕಾರ ಸ್ಥಾನದಲ್ಲಿದ್ದು ಶಿಷ್ಯನನ್ನು ಪರಿಷ್ಕರಿಸಿ ಪರಮಾತ್ಮನು ಒಪ್ಪುವಂತೆ ಮಾಡುವ ದೇವತೆ. ಶ್ರುತಿಯು

೧) **ಆಚಾರ್ಯವಾ ಪುರುಷೋವೇದ** —(ವಾಂ–vi)
೨) **ಆಚಾರ್ಯಾದೇವ ವಿದ್ಯಾವಿದಿತಾ ಸಾಧಿಷ್ಠಂ ಪ್ರಾಪತ್**
—(ಛಾಂ–ಉ–iv, 9, 3,)

ಎಂದು ಹೇಳಿರುತ್ತದೆ. ಜಗತ್ಪ್ರಭುವಾದವನು ಪುರುಷಕಾರ (ಟಿಪ್ಪಣಿ 9) ವಿಲ್ಲದೆ ರಕ್ಷಕನಾಗಿರಲಾರನು. ಸಾಕ್ಷಾತ್ತಾಗಿ ರಕ್ಷಕನಾದರೆ ಆಗ ನಮಗೆ ಯಾವ ಹೊಣೆಯೂ ಇಲ್ಲದೇ ಹೋಗುವುದು ಇಲ್ಲವೇ ಪಕ್ಷಪಾತ ದೋಷವು ಅವನಿಗೆ ಬರುವುದು. ಈ ಅರ್ಥವನ್ನೇ ಮನಸ್ಸಿನಲ್ಲಿಟ್ಟು ಶ್ರೀಕೃಷ್ಣನು ದ್ರೌಪದಿಯೊಡನೆ ಮಾತನಾಡುವಾಗ

ದ್ಯೌಃಪತೇತ್ ಪೃಥಿವೀ ಶೀರ್ಯೇತ್ ಹಿಮವಾರ್ ಶಕಲೀ ಭವೇತ್ ।
ಶುಷ್ಯೇತ್ತೋಯ ನಿಧಿಃ ಕೃಷ್ಣೆ! ನ ಮೇ ಮೋಘಂ ವಚೊ ಭವೇತ್ ॥
ಭಾರತ

ಎಂದಿರುವನು. ಭಗವಂತನು ಸ್ವಾಮಿಯಾಗಿ ಚೇತನರ ಕರ್ಮಾನುಸಾರವಾಗಿ ಫಲ ಕೊಡುವನು. ಆದರೆ

ಅನನ್ಯಚೇತಾಸ್ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥
(ಭ–ಗೀ VIII–14)

ಅನನ್ಯಾಶ್ಚಿಂತ ಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿ ಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥
(ಭ–ಗೀ IX–22)

ಎಂದು ಹೇಳಿರುವಂತೆ ಪರಮಾತ್ಮನನ್ನು ಯಾವಾಗಲೂ ನೆನೆಸುವವರಿಗೆ ಸುಲಭನಾಗಿ ಅಂದರೆ ಯಾವುದನ್ನು ಮಾಡುತ್ತಿದ್ದರೂ ಪರಮಾತ್ಮನ ಅಸ್ತಿತ್ವ ಜ್ಞಾನವು ಸದಾ ಜಾಗೃತವಾಗಿರುವಂತೆ ಮಾಡುವುದಲ್ಲದೆ, ಅವರ ಯೋಗಕ್ಷೇಮವನ್ನು ತಾನೇ ವಹಿಸಿಕೊಳ್ಳುವನು ಪರಮಾತ್ಮ. ಪರಮಾತ್ಮನನ್ನು ಯಾವಾಗಲೂ ನೆನಸುವಂತಾಗ ಬೇಕಾದರೂ ಅವನಲ್ಲಿ ಪ್ರೀತಿಯು ಬೆಳೆಯಬೇಕು. ಆ ಪ್ರೀತಿಯು ಹುಟ್ಟಬೇಕಾದರೆ ಅವನಲ್ಲಿ ಪೂರ್ಣನಂಬಿಕೆ ಬರಬೇಕು. ಆ ನಂಬಿಕೆಯನ್ನು ಕೊಡಬಲ್ಲವರು ಆಚಾರ್ಯರು.

ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನ ಕಾರಣಂ ।
ಉಪದೇಶಾದ್ಧರಿಂ ಬುದ್ಧ್ವಾವಿರಮೇತ್ಸರ್ವ ಕರ್ಮಸು ॥ (ರ–ಸಾ–ತತ್ವ)

ಎನ್ನುವುದು ಇದಕ್ಕೆ ಪ್ರಮಾಣ. ಅವರಿಲ್ಲದೆ ಐಹಿಕ ಮತ್ತು ಆಮುಷ್ಮಿಕ ಸುಖವು ಸಿಗಲಾರದು.

ಅಂತಹ ಆಚಾರ್ಯನನ್ನು ಸೇರಲು ಯೋಗ್ಯವಾದ ಕಾಲವಿದು—ಎಂದು ಒಬ್ಬ ಪ್ರಧಾನ ಶಿಷ್ಯನು ವಿಕ್ಕ್ನವರನ್ನು ಕರೆಯವಾಗ ಹೇಳಿದ ಮಾತಿದು.

ಮತಿನಿರ್ಮಿಂದನನ್ನಾಳ್—ಭಗವಂತನು ನಿಸ್ಸಮಾಭ್ಯಧಿಕನು; ನಾವು ಅವನಿಗೆ ಶೇಷಭೂತರು ಎಂದು ತಿಳಿವು ತುಂಬಿದ ಒಳ್ಳೆಯದಿನ; ಆಳ್ವಾರ್ರೂ ಕೂಡ

ಶೆನ್ರನಾಳ್ ಶೆಲ್ಲಾದ ಶೆಂಗಣ್ ಮಾಲ್
ಎಂಗಳ್ ಮಾಲ್ ಎನ್ರನಾಳ್ ಎನ್ನಾಳುಂ ನಾಳಾಹುಂ

ಎಂದು ಅನುಭವಿಸುವರು.

ನೀರಾಡಪೋದುವೀರ್ ಪೋದುಮಿನೋ—ಭಗವಂತನಿಗೂ ತಟಾಕಕ್ಕೂ ಅನೇಕವಿಧದಲ್ಲಿ ಸಾಮ್ಯವಿದೆ. ಬ್ರಹ್ಮವೇ ತಟಾಕ; ಅವನ ಅನುಭವವೇ "ನೀರಾಟ್ಟಂ" ನಮ್ಮಾಳ್ವಾರ್ರು.

೧) ತಾಮರೈನೀರ್‌ವಾಶತ್ತಟಂ
೨) ದಯರತ್ನ ಪೆತ್ತ ಮುರಕತ ಮಣಿತ್ತಟಂ

ಎಂದು ಪರಮಾತ್ಮನನ್ನು ತಟಾಕವಾಗಿ ಅನುಭವಿಸಿರುವರು. ಈ ಅನುಭವವನ್ನು ಋಷಿಗಳು

" ಏಷಬ್ರಹ್ಮಪ್ರವಿಷ್ಟೋಸ್ಮಿ ಗ್ರೀಷ್ಮೇಶೀತಮಿವಹ್ರದಂ "

ಎಂದು ಹೇಳಿರುವರು.

ನೇರಿಳೈಯಾರ್—ಇಲ್ಲಿ ಶಾಂತಿ ಮೊದಲಾದ ಆತ್ಮ ಗುಣವೇ ಆಭರಣ. ಆತ್ಮಗುಣವುಳ್ಳವರೇ

ಶೀಳ್ . . . ಗಾಳ್—ನಾವು ಪಶುಗಳು; ಸಂಸಾರಮಂಡಲವೇ ನಂದ ಗೋಕುಲ; ಇಲ್ಲಿ ಗುರುಗಳಿರುವರು; ಶಿಷ್ಯರು ಗ್ರಹಣ ಧಾರಣ ಪೋಷಣ ಸಮರ್ಥರು; ಗೋಪಿಕಾಬಾಲಕಿಯರಂತೆ ಮುಗ್ಧರು.

ತಸ್ಮಾತ್ ಬ್ರಾಹ್ಮಣಃ ಬಾಲ್ಯೇನ ತಿಷ್ಠಾಸೇತ್;
ಬಾಲ್ಯಂ ಚ ಪಾಂಡಿತ್ಯಂ ಚ ನಿರ್ವಿದ್ಯ ಅಥ ಮುನಿಃ;
ಮೌನಂಚಾಮೌನಂಚ ನಿರ್ವಿದ್ಯ ಅಥ ಬ್ರಾಹ್ಮಣಃ

ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿರುವಂತೆ ಆತ್ಮಗುಣ ಪೂರ್ತಿಯುಳ್ಳ ಶಿಷ್ಯರೇ, ಬನ್ನಿ. ನಾವು ನಮ್ಮಗುರುಗಳಲ್ಲಿಗೆ ಹೋಗೋಣ—ಅವರು ಎಂತಹವರೆಂದರೆ—

ಕೂರ್ವೇರ್ . . . ಗೋಪರ್ ಚೂಪಾದ ವೇಲಾಯುಧದಂತೆ ಭಗವದ್ವಿಮುಖರನ್ನು ಪರಾಭವಗೊಳಿಸುವ (ಕೂರ್ವೇರ್‌ಕೊಂಡು ತೊಳಿರ್ಲ) ಬ್ರಹ್ಮಸಿಷ್ಠನೂ (ನಂದತೀತಿನಂದ:) ಶ್ರೋತಿಯನೂ (ಗೋಪತೀತಿಗೋಪ:) ಆದ ಆಚಾರ್ಯ; ಇವನಿಗೆ ಪ್ರಿಯವಾದ ಮಗನಂತಿರುವನು (ಕುಮರ್ಲ) ಪರಮಾತ್ಮ. ಇಲ್ಲಿ ಗೋದೆಯು ಹೃದಯದಲ್ಲಿರುವ ಆಚಾರ್ಯನೆಂದರೆ ಅವಳ ತಂದೆ ಪೆರಿಯಾಳ್ವಾರ್. ಇವರು ಶ್ರೀಕೃಷ್ಣನನ್ನು ಮಗನೆಂದು ಭಾವಿಸಿ ತಾನು ತಾಯಿಯ ಸ್ಥಾನದಲ್ಲಿ ನಿಂತು ಪಲ್ಲಾಂಡು, ನೀರಾಟ್ಟಂ, ಪೂಚ್ಚೂಟ್ಟಲ್, ಕಾಪ್ಪಿಡಲ್ ಮೊದಲಾದ ಭಗವದನು ಭವವನ್ನು ಹೊರಗಿಟ್ಟಿರುವರು.

ಏರಾರ್ನ್ದ . . . ಶಿಂಗಂ ನಂದಗೋಪರಾದುದರಿಂದಲೇ ಆಚಾರ್ಯನು "ಏರಾರ್ನ್ದಕಣ್ಣಿಯ ಶೋದೈ."—ಪರಮಾತ್ಮನನ್ನು ಎಡಬಿಡದೇ ಎಲ್ಲೂ ಯಾವಾಗಲೂ ನೋಡಬಲ್ಲ ಯಶೋದೆ; " ಯಶಃದದಾತಿ—ಇತಿ ಯಶೋದಾ " ಪರಮಾತ್ಮನನ್ನು ಹೊರಗೂ ಒಳಗೂ ನೋಡಬಲ್ಲವರಾದುದರಿಂದ ತನ್ನ ಶಿಷ್ಯರಿಗೆ ಆಚಾರ್ಯತ್ವವೆನ್ನುವ ಯಶಸ್ಸನ್ನು ಕೊಡಬಲ್ಲವರು. ಅಂತಹ ಆಚಾರ್ಯನಿಗೆ " ಇಳಂ ಶಿಂಗಂ " ಕಂಠೀರವ; ಹುಟ್ಟಿನಿಂದಲೇ ಪ್ರಭುತ್ವವನ್ನು ಹೊಂದಿರುವ ಸಿಂಹದ ಮರಿಯಂತೆ ಪರಮಾತ್ಮ ಆಚಾರ್ಯನಿಗೆ.

ಕಾರ್ಮೇನಿ . . . ಮುಕತ್ತಾ ನಾರಾಯಣನೇ—ಅನ್ಯಾಪದೇಶದ ಅರ್ಥವೇ—
ನಮಕ್ಕೇ ಶಿಷ್ಯರಾಗಿ ಆಚಾರ್ಯನನ್ನೇ ನಂಬಿರುವ ನಮಗೇನೇ—
ಪರೈತರುವಾ . . . ಎಂಪಾವಾಯ್ ಅನ್ಯಾಪದೇಶಾರ್ಥವೇ.

ಈ ಪದ್ಯದಲ್ಲಿ ಶಾಸ್ತ್ರಾರ್ಥವೆಲ್ಲವೂ ಸಂಗ್ರಹವಾಗಿ ಹೇಳಲ್ಪಟ್ಟಿದೆ. ಇದನ್ನು ಸಂಪ್ರದಾಯದಲ್ಲಿ ಅರ್ಥ ಪಂಚಕವೆನ್ನುವರು.

೧) ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ೨) ಪ್ರಾಪ್ತುಶ್ಚ ಪ್ರತ್ಯಗಾತ್ಮನಃ
೩) ಪ್ರಾಪ್ತ್ಯುಪಾಯಂ ಫಲಂಚೈವ ೪) ತಥಾಪ್ರಾಪ್ತಿ ವಿರೋಧಿ ಚ ॥
(ಟಿಪ್ಪಣಿ 18) (ಹಾ–ಸಂ)

1) **ಕೂರ್ವೇರ್ . . . ನಾರಾಯಣ** ಎನ್ನುವುದರಿಂದ ಪ್ರಾಪ್ಯವಾದ ಪರಮಾತ್ಮ ಸ್ವರೂಪವೂ; 2) **" ನಮಕ್ಕೇ "** ಎನ್ನುವುದರಿಂದ ಮೋಕ್ಷವನ್ನು ಹೊಂದುವ ಅಂದರೆ ಪ್ರಾಪ್ತಾವಾದ ಜೀವಾತ್ಮ ಸ್ವರೂಪವೂ; 3) **ಪೋದುವೀರ್** ಎನ್ನುವುದರಿಂದ ಮೋಕ್ಷೋಪಾಯವೂ; 4) **ಪರೈತರುವಾ** ಎನ್ನುವುದರಿಂದ ಫಲವೂ ಮತ್ತು ಆರ್ಥವಾಗಿ ವಿರೋಧನಿರಸನವೂ ಹೇಳಲ್ಪಟ್ಟಿದೆ. ಇದರವಿಸ್ತಾರವನ್ನು ನಿಗಮಾಂತ ದೇಶಿಕರ " ಅರ್ಥಪಂಚಕಾಧಿಕಾರ " ದಲ್ಲಿ ನೋಡಬಹುದು.

ವೈಯತ್ತುವಾೞ್ವೀರ್‌ಕಾಳ್ ನಾಮುಂ ನಮ್ಪಾವೈಕ್ಕು
ಶೆಯ್ಯುಂ ಕಿರಿಶೈಗಳ್ ಕೇಳಿರೋ ಪಾರ್ಕಡಲುಳ್
ಪ್ಪಯತ್ತುಯಿನ್ರ ಪರಮನಡಿಪಾಡಿ
ನೈಯ್ಯುಣ್ಣೋಂ ಪಾಲುಣ್ಣೋಂ ನಾಟ್ಕಾಲೇ ನೀರಾಡಿ
ಮೈಯಿಟ್ಟೆೞುದೋಂ ಮಲರಿಟ್ಟು ನಾ ಮುಡಿಯೋಂ
ಶೆಯ್ಯಾದನ ಶೆಯ್ಯೋಂ ತೀಕ್ಕುರಳೈ ಶೆನ್ರೋದೋಂ
ಐಯಮುಂ ಪಿಚ್ಚೈಯುಮಾಂದನೈಯುಂ ಕೈಕಾಟ್ಟಿ
ಉಯ್ಯುಮಾರೆಣ್ಣಿ ಯುಕಂದೇಲೋರೆಂಪಾವಾಯ್ ॥ ೨ ॥

ಮೊದಲನೇ ಪದ್ಯದಲ್ಲಿ ಪರತ್ವವನ್ನು ತಿಳಿಸಿ ಇಲ್ಲಿ ಅವನ ವ್ಯೂಹರೂಪಗಳಲ್ಲಿ ಪ್ರಧಾನವಾದ "ಅನಿರುದ್ಧ" ರೂಪವನ್ನು ವರ್ಣಿಸಿ ನಮಗೆ ಕೃತ್ಯಾಕೃತ್ಯ ವಿವೇಕವನ್ನು ಕೊಡುತ್ತಾಳೆ. ಗೋಪಿಯರು ಪ್ರಾರಂಭಿಸಿದ ವ್ರತದ ಸಾದ್ಗುಣ್ಯಕ್ಕಾಗಿ ಈ ವಿವೇಕವು ಆವಶ್ಯಕವೆಂದು ಅದನ್ನು ತಿಳಿಸುವಾಗ ತ್ರಿಮೂರ್ತಿಗಳಲ್ಲಿ ಬ್ರಹ್ಮರುದ್ರರಿಗೆ ಸಮನಾಗಿ ಕ್ಷೀರಾಬ್ಧಿಯಲ್ಲಿ ಶಯನಮಾಡಿರುವ ಪರಮಾತ್ಮನ ಮಹಿಮೆಯನ್ನು ತಿಳಿಸುವಳು.

ವೈಯತ್ತುವಾೞ್‌ವೀರ್‌ಕಾಳ್— " ವೈಯ್ಯಂ " ಎಂದರೆ ಪ್ರಪಂಚ. ಶಂಗಂತಮಿಳಿನಲ್ಲಿ ಇದರರ್ಥ ಗಾಡಿ. ಈ ಎರಡರ್ಥವನ್ನೂ ಕೂಡಿಸಿಕೊಳ್ಳಬೇಕು.

ಆಗಲೇ ಪೂರ್ಣಾರ್ಥವು ಸಿಗುವುದು. ಪ್ರಪಂಚದಲ್ಲಿ ಶರೀರವೆನ್ನುವ ಗಾಡಿಯಲ್ಲಿ ವಾಸಿಸುವರೇ.—ಕಠೋಪನಿಷತ್ತಿನಲ್ಲಿ

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ ।
ಬುದ್ಧಿಂತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವಚ ॥
ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರ್ಯಾ—

ಎನ್ನುವ ಮಂತ್ರದಲ್ಲಿ ಶರೀರವು ರಥಕ್ಕೆ ಹೋಲಿಸಲ್ಪಟ್ಟಿದೆ. ಶ್ರೀಕೃಷ್ಣನು ಗೀತೆಯಲ್ಲಿ ಅರ್ಜುನನಿಗೆ ಮೊದಲು ಆತ್ಮ ವಿವೇಕವನ್ನು ಕೊಡುವಾಗ

ದೇಹಿನೋಸ್ಮಿನ್ ಯಥಾದೇಹೇ ಕೌಮಾರಂ ಯೌವನಂಜರಾ
ತಥಾದೇಹಾಂತರಪ್ರಾಪ್ತಿಃ ಧೀರಸ್ತತ್ರನಮುಹ್ಯತಿ (ಗೀ II–13)
ದೇಹೀ ನಿತ್ಯಮವಧ್ಯೋಯಂ ದೇಹೇ ಸರ್ವಸ್ಯ ಭಾರತ
ತಸ್ಮಾತ್ಸರ್ವಾಣಿ ಭೂತಾನಿ ನತ್ವಂ ಶೋಚಿತುಮರ್ಹಸಿ (II–30)

ಎನ್ನುವ ಎರಡು ಶ್ಲೋಕಗಳಲ್ಲಿ ಜೀವಾತ್ಮನು "ದೇಹೀ" ಅಂದರೆ ದೇಹದೊಡನೆ ನೀರಂದ್ರ ಸಂಶ್ಲೇಷದಲ್ಲಿರುವವನು—ಎಂದಿರುವನು. ಹೂವಿನಲ್ಲಿ ಬಣ್ಣವಿರುವಂತೆ ಅವಕಾಶಬಿಡದೇ ಶರೀರದೊಡನಿರುವನು ಜೀವ.

ಭೂಮ—ಪ್ರಶಂಸಾ ನಿತ್ಯಯೋಗಾದಿಭ್ಯಃ (ಇನಿಃ)

ಎನ್ನುವ ಉಣಾದಿ (ವ್ಯಾಕರಣ) ಸೂತ್ರದಿಂದ ನಿತ್ಯಯೋಗಾರ್ಥದಲ್ಲಿ ದೇಹ ಶಬ್ದಕ್ಕೆ "ಇನಿ" ಪ್ರತ್ಯಯವು ಸೇರಿ "ದೇಹೀ" ಪದವಾಗಿದೆ. ಜೀವನಿಗೆ ತನ್ನ ಸ್ವಾತಂತ್ರ್ಯದಿಂದ ದೇಹವನ್ನು ಬಿಟ್ಟಿರಲು ಸಾಧ್ಯವಿಲ್ಲ. ಆದುದರಿಂದಲೇ ದೇಹದ ಅವಸ್ಥೆಗಳನ್ನೆಲ್ಲಾ ಜೀವನು ತನ್ನದಾಗಿ ಅನುಭವಿಸುತ್ತಿರುವನು. ಅದಕ್ಕಾಗಿಯೇ ಶ್ರೀಕೃಷ್ಣನು ಮುಂದೆ

ಕಾರ್ಯಕಾರಣ ಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಭೋಕ್ತೃತ್ವೇ ಹೇತುರುಚ್ಯತೇ ॥
(ಭ–ಗೀ XIII–20)

ಅಂದರೆ ಶರೀರ ಮತ್ತು ಇಂದ್ರಿಯಗಳಿಂದ ನಾವು ಮಾಡುವ ಎಲ್ಲಾ ಕರ್ಮಗಳಿಗೂ ಪ್ರಕೃತಿಯೇ ಕಾರಣ; ಆ ಕರ್ಮಗಳಿಂದ ಬರುವ ಸುಖದುಃಖಾದಿಗಳ ಅನುಭವಕ್ಕೆ ಜೀವನೇ ಕಾರಣ. ಅದಕ್ಕಾಗಿಯೇ ಭಗವಾ ರಾಮಾನುಜರು

ತಿಲ ತೈಲವತ್ ದಾರುವಹ್ನಿವತ್ ದುರ್ವಿವೇಕ
ತ್ರಿಗುಣಕ್ಷಣಕ್ಷರಣ ಸ್ವಭಾವ–ಅಚೇತನಪ್ರ
ಕೃತಿವ್ಯಾಪ್ತಿರೂಪದುರತ್ಯಯ ಭಗವನ್ಮಾ
ಯಾತಿರೋಹಿತ ಸ್ವಪ್ರಕಾಶಃ (ಶ–ಗ)

ಎಂದು ಬದ್ಧಜೀವ ಸ್ವಭಾವವನ್ನು ಹೇಳಿರುವರು. ತಿಲದಲ್ಲಿ ತೈಲವನ್ನು, ದಾರು ಅಂದರೆ ಯಜ್ಞ ಕಟ್ಟಿಗೆಯಲ್ಲಿ ಬೆಂಕಿಯನ್ನೂ ತೆಗೆಯಬೇಕಾದರೆ ಬೇರೊಬ್ಬರ

ಸಹಾಯ ಬೇಕಾಗುವಂತೆ ಜೀವನನ್ನು ಶರೀರದಿಂದ ಬೇರೆ ಮಾಡಬೇಕಾದರೆ ಬೇರೆ ಜೀವರಿಂದ ಸಾಧ್ಯವಿಲ್ಲದುದರಿಂದ ಪರಮಾತ್ಮನೇ ಸಹಾಯಮಾಡಬೇಕು. ಗೀತೆಯಲ್ಲೂ ದೇಹಿಯಾಗಿರಲು ರಾಜಸಕಾಮವೇಕಾರಣವೆಂದು

ಧೂಮೇನಾ ವ್ರಿಯತೇ ವಹ್ನಿಃ ಯಥಾದರ್ಶೋ ಮಲೇನ ಚ ।
ಯಥೋಲ್ಬೇನಾವೃತೋಗರ್ಭಃ ತಥಾತೇನೇದಮಾವೃತಂ ॥
(ಭ–ಗೀ III–38)

ಎನ್ನುವ ಶ್ಲೋಕದಿಂದ ತಿಳಿಸಿರುವನು ಶ್ರೀಕೃಷ್ಣ. ಅಗ್ನಿಗೆ ಹೊಗೆಯಂತೆ ಸ್ವಾಭಾವಿಕವೂ, ಕನ್ನಡಿಯ ಮೇಲೆ ಕೊಳೆಯಂತೆ ಉಜ್ಜಿ ಸ್ವಲ್ಪಕಾಲದ ಮೇಲೆ ಮತ್ತೆ ಸೇರುತ್ತಲೂ ಉಲ್ಬವೆನ್ನುವ ನರವು ಗರ್ಭದಲ್ಲಿ ಶಿಶುವನ್ನು ಮುತ್ತಿರುವಂತೆಯೂ ಇರುವುದು ರಾಜಸಕಾಮ. ಹುಟ್ಟುವ ಮಗುವನ್ನು ತಾಯಿಯಿಂದ ಬೇರೆ ಮಾಡಬೇಕಾದರೆ ದಾದಿಯು ಬೇಕಾಗುವಂತೆ ಪರಮಾತ್ಮನಿಂದಲೇ ನಮ್ಮ ಶರೀರ ಸಂಬಂಧವು ನಮಗೆ ಹೋಗಬೇಕು.

ಪಶವಃ ಪಾಶಿತಾಃ ಪೂರ್ವಂ ಹರಮೇಣ ಸ್ವಲೀಲ ಯಾ ।
ತೇನೈವ ಮೋಚನೀಯಾ ಸ್ತೇ ನಾನ್ಯೈರ್ಮೋಚಯಿತುಂಕ್ಷಮಾಃ ॥

ಎಂದು ವಿಷ್ಣುಪುರಾಣವು ಇದನ್ನು ಸ್ಪಷ್ಟವಾಗಿ ಹೇಳಿದೆ. ಒಬ್ಬ ಜೀವನು ಮತ್ತೊಬ್ಬ ಜೀವನನ್ನು ಸಂಸಾರ ಬಂಧನದಿಂದ ಬಿಡಿಸಲಾರನೆಂದು ನಿಗಮಾಂತ ದೇಶಿಕರು ತಮ್ಮ "ರಹಸ್ಯ ರತ್ನಾವಳೀ ಹೃದಯ"ವೆನ್ನುವ ಗ್ರಂಥದಲ್ಲಿ "ವಿ–ಪುಂ"—ಪ್ರಮಾಣ ಕೊಟ್ಟಿರುವರು, ವಿಷ್ಣುಪುರಾಣ ಶ್ಲೋಕದಲ್ಲಿರುವ "ಪರಮ" ಪದವನ್ನು ಗೋದೆಯು ತನ್ನಪಾಶುರದಲ್ಲಿ ಸಂಗ್ರಹಿಸಿ ಮೇಲೆ ಹೇಳಿದ ಅರ್ಥವೆಲ್ಲವನ್ನೂ ಸೂಚಿಸಿರುವಳು.

"ದೇಹಿನಃ" ಎನ್ನುವುದಕ್ಕೆ ಬದಲು "ವೈಯತ್ತುವಾழ್ವೀರ್ಕಾಳ್" ಎಂದು ಗೋದೆಯು ಹೇಳಿರುವುದರಲ್ಲಿ ವಿಶೇಷಾರ್ಥವಿದೆ. "ಎಲೈ ಜೀವಿಗಳೇ, ನೀವು ದೇಹಿಗಳು ಮಾತ್ರವಲ್ಲ; ಪ್ರಪಂಚದಲ್ಲಿ ಬಾಳುತ್ತಿರುವರು; ಹೀಗೆ ನಿಮ್ಮನ್ನು ಬಾಳುವಂತೆ ಮಾಡಿ ತಾನೂ ನಿಮ್ಮನ್ನು ಬಿಡದೆ ಪ್ರೇಮಾತಿಶಯದಿಂದ ನಮ್ಮನ್ನು ಕೂಡಲು ಆತುರಪಡುತ್ತಿರುವನು. ಇದು ನಮ್ಮ ಭಾಗ್ಯವಿಶೇಷ; ಅವನೊಡನೆ ನಾವು ಬಾಳುವುದೇ ಬಾಳು; ಅವನೊಡನಿದ್ದು ನಮಗೆ ಬರುವ ಆನಂದವು ವೈಕುಂಠದಲ್ಲೂ ಇಲ್ಲ. ಎಲ್ಲಿ ನೆನೆದರೆ ಅಲ್ಲಿ ಬರುವ ಗುಣವವನದು; ನಾವು ಅವನನ್ನು ನೆನೆದು ಪ್ರೇಮಾತಿಶಯದಿಂದ ಹಾಡುವಂತಾಗಬೇಕು. ಆಂಜನೇಯನು ರಾಮನನ್ನೇ ನೆನೆದು ನೆನೆದು ಪರಮಾತ್ಮನ ಮಿಕ್ಕ ಆಕಾರಗಳಲ್ಲಿ ಆಸೆ ಇಡಲಿಲ್ಲ. "ಭಾವೋನಾನ್ಯತ್ರಗಚ್ಛತಿ" ಎಂದನು. ಹಾಗೆ ನಾವು ಶ್ರೀಕೃಷ್ಣನನ್ನು ಬಿಟ್ಟಿರಲಾರೆವು; ನಮ್ಮ ಬಾಳೇ ಅವನು; ನಮ್ಮாழ್ವಾರ್ರು.

ಅಚ್ಚುವೈ ಪೆರಿನುಂ ವೆಂಡೇ೯

ಎಂದು ತನಗೆ ಪ್ರಿಯವಾದ ಮೂರ್ತಿಯ ಸೌಂದರ್ಯವು ವೈಕುಂಠವಾಸಿಗೂ ಇಲ್ಲ ವೆಂದು ಸೂಚಿಸಿರುವರು. ನಿಗಮಾಂತ ದೇಶಿಕರು ತನಗೆ ಪ್ರಿಯನಾದ ವರದರಾಜನ ವಿಷಯದಲ್ಲಿ ಹಾಗೆಯೇ ಹೇಳಿರುವರು.

ನಿರಂತರಂ ನಿರ್ವಿಶತಸ್ತ್ವದೀಯಂ
ಅಸ್ಪೃಷ್ಟ ಚಿಂತಾಪದಮಾಭಿರೂಪ್ಯಂ ।
ಸತ್ಯಂ ಶಪೇ ವಾರಣಶೈಲನಾಥ
ವೈಕುಂಠವಾಸೇಪಿ ನ ಮೇಭಿಲಾಷಃ ॥ —ವ-ಪಂ-49

ಎಂದು ತನ್ನ ಮನವನ್ನು ತೋಡಿಕೊಂಡಿರುವರು. ವೈಕುಂಠದಲ್ಲೂ ಸಿಗಲಾರದ ಅನುಭವವನ್ನು ಹೊಂದುವ ಭಾಗ್ಯವು ನಮಗೆ ಈ ಕರ್ಮಭೂಮಿಯಲ್ಲಿ ಶ್ರೀಕೃಷ್ಣನು ಕಲ್ಪಿಸಿರುವನು; ಅವನನ್ನು ಹೊಂದಲು ನಾವು ವ್ರತವನ್ನು ಅನುಷ್ಠಿಸಬೇಡವೇ ? ಬನ್ನಿ ; ವ್ರತವನ್ನು ಹೇಗೆ ಅನುಷ್ಠಿಸಬೇಕೆನ್ನುವುದನ್ನು ಕೇಳಿ;

ನಾಮುಂ ನಂ . . . ಕೇಳೀರೋ—ನಾವು ನಮ್ಮವ್ರತಕ್ಕಾಗಿ ಮಾಡಬೇಕಾದ ಕಾರ್ಯಗಳನ್ನು ಕೇಳಿ. ನಾವು ಸ್ತ್ರೀಯರು; ಶಾಸ್ತ್ರದಲ್ಲಿ ನಮಗೆ ಸ್ವತಂತ್ರವಾದ ವ್ರತಗಳಿಲ್ಲ. ಋಷಿಗಳು ಶ್ರೀಕೃಷ್ಣನ ಸೌಂದರ್ಯವನ್ನು ಕಂಡು ಸ್ತ್ರೀ ಭಾವವನ್ನು ಹೊಂದಿದಂತೆ ನಾವು ಶ್ರೀಕೃಷ್ಣನನ್ನು ನೆನೆಸಿಕೊಂಡರೆ ಅವನನ್ನು ಅನುಭವಿಸಲು ನಮಗೆ ಪುರುಷಭಾವವು ಬರುವುದು. ದ್ರೌಪದಿಯ ಸೌಂದರ್ಯವನ್ನು ಕಂಡು ಅವಳೊಡನಿದ್ದ ಸ್ತ್ರೀಯರಿಗೆ ಪುರುಷ ಭಾವ ಬಂದಂತೆ ನಮ್ಮ ಸ್ಥಿತಿ.

ಪಾಂಚಾಲ್ಯಾಃ ಪದ್ಮಪತ್ರಾಕ್ಷ್ಯಾಃ ಸ್ನಾಯಂತ್ಯಾಃ
ಜಘನಂ ಘನಂ । ಯಾಃ ಸ್ತ್ರಿಯಃ ದೃಷ್ಟವತ್ಯ
ಸ್ತಾಃ ಪುಂ ಭಾವಂ ಮನಸಾ ಯಯೌ ॥ —ಭಾರತ

ಎಂದು ವ್ಯಾಸರು ಹೇಳಿಲ್ಲವೇ ? ಋಷಿಗಳು

ಏಕೀಭವದ್ಭಿರಮುತೈರಪಿಮುನ್ಮಥಾನಾಂ
ಮುತ್ಕಾಂತಿಸಿಂಧು ಪೃಷತಾನು ಕೃತಿರ್ನಶಕ್ಯಾ
ಸಂಪ್ರೇಕ್ಷ್ಯತಂ ಯದುಪತಿಂ ಯಮಿನೋಪಿನೂನಂ
ಸ್ತ್ರೀಭಾವಮೇವ ಮನಸಾ ಬಿಭರಾಂ ಬಭೂವುಃ —ಮಾ–ಅ.

ಎಂದು ನಿಗಮಾಂತ ದೇಶಿಕರು ಹೇಳಿರುವಂತೆ ಸ್ತ್ರೀ ಭಾವವನ್ನು ಹೊಂದಿ ತಮ್ಮ ಕರ್ತವ್ಯವನ್ನು ಮರೆತರು. ನಾವು ಪುರುಷ ಭಾವವನ್ನು ಹೊಂದಿರುವುದರಿಂದ ವ್ರತವನ್ನು ಆಚರಿಸಲು ಅಧಿಕಾರಿಗಳಾಗಿರುವೆವು. ಪುರುಷರ ಸ್ತ್ರೀ ಭಾವಕ್ಕಿಂತಲೂ ಸ್ತ್ರೀಯರ ಪುರುಷಭಾವವೇ ಪರಮಾತ್ಮಾನುಭವದ್ಯೋತಕದಲಿ ಹಿರಿದು; ಇದನ್ನು ಬೃ-ಉ.

ಯಥಾ ಸ್ತ್ರೀಯ ಯಾ ಸಂಪರಿಷ್ವಕ್ತಃ ನ ಭಾಹ್ಯಂ
ಕಂಚನ ವೇದ ನಾಂತರಂ ; ಏವಮೇವಾಯಂ
ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ
ನ ಬಾಹ್ಯಂ ಕಂಚನ ವೇದ ನಾಂತರಂ (VI 3–21)

ಎನ್ನುವ ಮಂತ್ರದಿಂದ ತಿಳಿಸಿರುತ್ತದೆ. ಪ್ರಾಜ್ಞನಾದ ಪರಮಾತ್ಮನನ್ನು ಸ್ತ್ರೀಗೆ ಹೋಲಿಸಿರುವುದು ಪರಮಾತ್ಮಾನುಭವದ ಪಾರಮ್ಯವನ್ನು ತಿಳಿಸುವುದಕ್ಕಾಗಿ. ಶ್ರುತಿಯು ಈ ಮಂತ್ರವನ್ನು ಸುಷುಪ್ತಿ ಪ್ರಕರಣದಲ್ಲಿ ಹೇಳಿದೆ. ನಮ್ಮ ನಿದ್ದೆಯಲ್ಲಿ ಪರಮಾತ್ಮನು ನಮ್ಮನ್ನು ಆಲಿಂಗಿಸುವನು. ಅಹಂಕಾರ ಮಮಕಾರಗಳಿಂದ ಬದ್ಧ ಜೀವರಲ್ಲಿ ಪುರುಷಭಾವವೇ ಇರುವುದರಿಂದ ಪರಮಾತ್ಮನು ಸ್ತ್ರೀಭಾವವನ್ನು ತಾಳಿ ನಮ್ಮನ್ನು ಅನುಭವಿಸುವನು. ಇದು ಅವನ ಪ್ರೇಮ ಸ್ವರೂಪದ ಗುರುತು. ಈ **ಜೀವ ಪರಿಷ್ವಂಗವನ್ನು** ವಾಂಡೋಗ್ಯೋಪನಿಷತ್ತು (VI) **"ಸತ್ಸಂಪತ್ತಿ"** ಎಂದು ಕರೆದಿರುತ್ತದೆ. ಭಕ್ತಿ ದೃಷ್ಟ್ಯಾ ಪರಿಷ್ವಂಗ ಜ್ಞಾನದೃಷ್ಟ್ಯಾ ಸತ್ಸಂಪತ್ತಿ; ಭಕ್ತನಲ್ಲದವನಿಗೆಪರಮಾತ್ಮಾನುಭವವು ಸಮಾಧಿಯಲ್ಲಿ ಪರ್ಯವಸಾನ ಹೊಂದುತ್ತದೆ ಮತ್ತು ನಿರ್ಗುಣಬ್ರಹ್ಮವಾದದಲ್ಲಿ ಅವನ ಮನಸ್ಸು ನಿಲ್ಲುವಂತೆ ಮಾಡುತ್ತದೆ. ಭಕ್ತಿ ರೂಪಾಪನ್ನ ನಿತ್ಯ ಜ್ಞಾನೀ ಪರಮ ಭಕ್ತ; ಇವನಿಗೆ ಭಕ್ತಿ ಶಾಶ್ವತ ಮುಕ್ತಿ ಭೋಗ್ಯ ಮನೋರ್ಥವರ್ಮ; ಅಂತಹವನಿಗೆ ಪರಮಾತ್ಮನು ತನ್ನ ಕಾಮುಕೀ ಭಾವವನ್ನು ತೋರಿಸುವುದಿಲ್ಲ. ಭಕ್ತನ ಸ್ತ್ರೀಭಾವಕ್ಕೆ ಪರಮಾತ್ಮನ ಪುರುಷಭಾವವು ಆ ಭಕ್ತನನ್ನು ಸಮಾಧಿಯಲ್ಲಿ ಆಸೆ ಪಡದಂತೆ ಮಾಡುತ್ತದೆ. ಭಕ್ತನಿಗೆ ಪರಮಾತ್ಮನು ಯಾವತ್ತೂ ಪುರುಷನೇ ; ಆದರೆ ಪರಮಾತ್ಮನು ಜೀವ ವಿಷಯದಲ್ಲಿ ಯಾವತ್ತಿಗೂ ಸ್ತ್ರೀಭಾವವನ್ನೇ ತಾಳಿರುವನು. ಇದರ ರಹಸ್ಯವನ್ನು ತಿಳಿದವರೇ ನಿಜವಾದ ವೇದಾಂತಿಗಳು. ನಿಗಮಾಂತ ದೇಶಿಕರು ಅಷ್ಟಭುಜಾಷ್ಟಕದಲ್ಲಿ

ಸ್ವರೂಪರೂಪಾಸ್ತ್ರವಿಭೂಷಣಾದ್ಯೈಃ
ಪರತ್ವಚಿಂತಾಂತ್ವಯಿದುರ್ನಿವಾರಾಂ ।
ಭೋಗೇ ಮೃದೂಪಕ್ರಮತಾಮಭೀಪ್ಸ್ಯ
ಶೀಲಾದಿಭಿರ್ವಾರಯಸೀವ ಪುಂಸಾಂ ॥

ಎಂದಿರುವರು. ಇದನ್ನು ವ್ಯಾಖ್ಯಾನಮಾಡುವಾಗ ಆಚಾರ್ಯರು "ಸ್ತ್ರೀಸದೃಶಃ ಪರಮಾತ್ಮಾ; ಸ್ವಸ್ಮಿನ್ ಜಾತಂ ಕಾಮುಕೀಭಾವಂ ಭೋಗೇ ಮೃದೂಪಕ್ರಮತಾಮ ಭೀಪ್ಸ್ಯ, ತತ್ತತ್ಕಾಲೋಚಿತ ಪ್ರತಿಕ್ಷೇಪ–ಅಕ್ಷರವಚನ–ಪರಿವರ್ತನಾದಿಭಿಃ ಶಿಥಿಲಯತಿ" ಎಂದಿರುವರು. ಇದನ್ನೇ ಶ್ರೀಕೃಷ್ಣನು ಗೋಪಿಯರಿಗೆ ಹೇಳುವಾಗ

ನಾಹಂ ತು ಸಖ್ಯೋ ಭಜತೋಪಿನೂನಂ
ಭಜಾಮ್ಯಮೀಷಾಮನುವೃತ್ತಿಸಿದ್ಧಯೇ ।

ಯಥಾಽದನೋ ಲಬ್ಧಧನೇ ವಿನಷ್ಟೇ
ತಚ್ಚಿಂತಯಾನ್ಯಾನ್ನಿಭೃತಂನವೇದ ॥

(ಭಾಗ x–32–20)

ಎಂದಿರುವನು. ಪರಮಾತ್ಮ ವಿಷಯದಲ್ಲಿ ಭಕ್ತರಿಗೆ ಸ್ತ್ರೀಭಾವವೂ, ಸ್ತ್ರೀಯರಿಗೆ ಪುರುಷಭಾವವೂ ಬರುವುದಾದರೂ, ಪುರುಷರಿಗೆ ಸ್ತ್ರೀಭಾವ ಬಂದು ಮತ್ತೆ ಪುರಷತ್ವ ದಲ್ಲಿ ನಿಲ್ಲುತ್ತದೆ. ಆಗಲೇ ಪಾರಮಾರ್ಥಿಕಾನುಭವವು ಪೂರ್ಣವಾಗುವುದು. ಸ್ತ್ರೀಯರಿಗೆ ಪುರುಷಭಾವವು ಬಂದರೂ ತಮ್ಮ ಸ್ತ್ರೀತ್ವವನ್ನು ಮತ್ತೆ ಹಾಗೆಯೇ ಹೊಂದುವರು. ಭಗವತ್ಕೈಂಕರ್ಯನಿಷ್ಠೆಯಲ್ಲಿ ಪುರುಷರಲ್ಲಿಯೂ, ಸ್ತ್ರೀಯರ ಲ್ಲಿಯೂ ಸ್ತ್ರೀತ್ವವೇ ಸಹಾಯಕವಾಗಿರುವುದರಿಂದ ಭಗವತ್ಕೈಂಕರ್ಯವೇ ಮುಕ್ತಿ ಯೆನ್ನುವ ಶ್ರೀವೈಷ್ಣವ ಸಿದ್ಧಾಂತಕ್ಕೆ "ಶುದ್ಧಾಂತಸಿದ್ಧಾಂತ" ವೆನ್ನುವ ಹೆಸರು ನಿಂತಿದೆ. ಶುದ್ಧಾಂತವೆಂದರೆ ರಾಣಿವಾಸಸ್ಥಾನ. ಅದರ ನೀತಿಯಂತೆ ಮುಕ್ತಾನುಭವ.

"ನಂಪಾವೈಕ್ಕು" ಎಂದಿರುವುದರಿಂದ ಗೋದೆಯು ಆಶ್ರಯಿಸಿರುವ ವ್ರತವು ಮಿಕ್ಕ ವ್ರತಗಳಂತಲ್ಲ. ಇಂದ್ರಜಿತ್ತುವಿನ ನಿಕುಂಭಿಳಾ ಯಾಗವು ರಾಮಲಕ್ಷ್ಮಣ ರನ್ನು ಕೊಲ್ಲುವದಕ್ಕಾದುದರಿಂದ ಅದು ಫಲಿಸಲಿಲ್ಲ. ಆಶ್ರಯಿಸಿದ ಕ್ರಮವೂ ದ್ವೇಷಾಸೂಯೆಗಳಿಂದ ಭರಿತವಾಗಿತ್ತು. ಇವಳು ಆಶ್ರಯಿಸಿರುವ ವ್ರತವು ಮೋಕ್ಷಕ್ಕೆ ಅಂದರೆ ಕೃಷ್ಣಸಂಗಮಕ್ಕೆ ಕಾರಣವಾದುದು. ಆದ್ದರಿಂದ ಸಾತ್ವಿಕವಾದದ್ದು. ನಿಜವಾಗಿಯೂ ಫಲಿಸುತ್ತದೆ. "ಆದ್ದರಿಂದ **ಈ** ವ್ರತಕ್ಕೆ ಅಂಗಗಳನ್ನು ಆಸ್ತಿಕ್ಯ ದಿಂದ, ಉತ್ಸಾಹದಿಂದ ಕೇಳಿರಿ" ಎನ್ನುತ್ತಾಳೆ.

ಶ್ರೀಕೃಷ್ಣನು ಮತ್ತಾರೂ ಅಲ್ಲ; ಅನಿರುದ್ಧನೇ ಇವನು. ವೈಕುಂಠವಾಸಿಯೇ ತಾನು ಸೃಷ್ಟಿಸಿದ ಜೀವರಾಶಿಗಳ ಉದ್ಧಾರಕ್ಕಾಗಿ ಅವರ ಪ್ರಾರ್ಥನೆಯನ್ನು ಲಾಲಿಸು ವುದಕ್ಕಾಗಿ ನಿದ್ದೆ ಮಾಡುವಂತೆ ಮಲಗಿರುವನು; ಕರುಣಾಮಯ; ಮುಕ್ತಿ ಭೋಗ್ಯ ವೈಕುಂಠವಾಸಿಗಿಂತಲೂ ಬದ್ಧಸೇವ್ಯ ಕ್ಷೀರಾಬ್ಧಿಶಾಯಿಯೇ **ಪರಮನು; ಅವನನ್ನು** ಹಾಡುವುದಕ್ಕಿಂತಲೂ ಅವನ ಪಾದಾರವಿಂದವನ್ನು ಹಾಡುವುದು ನಮಗೆ ಸ್ವರೂಪಕ್ಕೆ ಯೋಗ್ಯವಾದುದು ಮತ್ತು ಶ್ರೇಯಸ್ಸು. "ಬನ್ನಿ ಹಾಡೋಣ" ಎನ್ನುತ್ತಾಳೆ.

ಪಾರ್ಕಡಲುಳ್ ಪ್ಪಯತುಯಿನ್ರ ಪರಮ್ ಅಡಿಪಾಡಿ—ಕ್ಷೀರಾಬ್ಧಿಯಲ್ಲಿ ಮೆಲ್ಲಗೆ ಅವಧಾನದಿಂದ ಮಲಗಿರುವ ಪರಮನಾದ ಅನುರುದ್ಧನ ಪಾದವನ್ನು ಹಾಡಿ,

ನೆಯ್ಯುಣ್ಣೋಂ ಪಾಲುಣ್ಣೋಂ—ತುಪ್ಪ ಮತ್ತು ಹಾಲನ್ನು ತಿನ್ನುವುದಿಲ್ಲ; ಸ್ಮೃತಿಯಲ್ಲಿ ಹಾಲು ಮೊಸರು ತಿಂದರೂ ಉಪವಾಸ ಲೋಪವಿಲ್ಲವೆಂದು ಹೇಳಿದೆ. ಆ ತುಪ್ಪವನ್ನೂ, ಹಾಲನ್ನೂ ತಿನ್ನದೇ ಇರೋಣ;

೧) **ಆಯುರ್ವೈ ಘೃತಂ;**

೨) **ಘೃತಂ ಮಿಮಿಕ್ಷೆ ಘೃತಮಸ್ಯಯೋನಿಃ**
ಘೃತೇಶ್ರೀತೋಘೃತಮುವಸ್ಯಧಾಮ

ಎಂದು ಶ್ರುತಿಯು "ತುಪ್ಪ ಸೇವನೆಯು ಪರಮ ಉತ್ಕೃಷ್ಟಾಹಾರ "ವೆಂದು ಹೇಳಿ ದ್ದರೂ ನಾವು ಸೇವಿಸದೇ ಇರೋಣ; ನಾವು ಕೃಶರಾಗಿ ಅನುಕಂಪನೀಯರಾಗು ತ್ತೇವೆ. ಪ್ರೀತಿಯಿರುವರಲ್ಲಿ ಹೀಗೆ ನಡೆದರೆ ಅವರು ಪ್ರಸನ್ನರಾಗುವರು. ರಂಗದಲ್ಲಿ ಹೇಗೆ ನಟಿಸಬೇಕೆಂದು ಹೇಳಿಕೊಡುತ್ತಾಳೆ ಗೋದೆ; ರಂಗನಾಥನಲ್ಲವೇ ವಟಪತ್ರ ಶಾಯಿ; ವಿಶ್ವವೇ ರಂಗ; ನಾವೆಲ್ಲರೂ ನಟನಟಿಯರು; ನಿಗಮಾಂತ ದೇಶಿಕರು ದಶಾವತಾರ ಸ್ತೋತ್ರದ ಮೊದಲು ಪದ್ಯದಲ್ಲಿ

ದೇವೋ ನಃ ಶುಭಮಾತನೋತು ದಶಧಾ (ದ–ಸ್ತೋ)

ಎಂದು ಪ್ರಾರಂಭಿಸಿ **"ನಿರ್ವರ್ತ್ಯಭೂಮಿಕಾಂ ರಂಗೇಧಾವನಿ"** ಎಂದು ಹೇಳಿ ರಂಗನಾಥನು ವಿಶ್ವವೆನ್ನುವ ರಂಗಮಂಟಪದಲ್ಲಿ ನಾಯಕನೆಂದಿರುವರು.

"ನಾವು ಎಲ್ಲಾ ಭೋಗಗಳನ್ನೂ ಬಿಡೋಣ; ವೀತತೃಷ್ಣರಾಗೋಣ" ಎನ್ನುತ್ತಾಳೆ ಗೋದೆ.

ನಾಟ್ಕಾಲೇನೀರಾಡಿ—(1) "ಯಾವಜ್ಜೀವಂ ಪ್ರಭಾತೇ ಸ್ನಾತವ್ಯಂ" ಎಂದು ಶಾಸ್ತ್ರವಿದೆ. **ಈ** ಸ್ನಾನವಲ್ಲದೆ ವ್ರತಾಂಗ ಸ್ನಾನವನ್ನು ಮಾಡೋಣ;

(2) "ನಾಟ್ಕಾಲೇ" ಎಂದರೆ ರಾತ್ರಿಯ ಕೊನೆಯ ಯಾಮ, ಪಂಚಪಂಚ ಉಷಃಕಾಲ, ಬ್ರಾಹ್ಮಮುಹೂರ್ತದಲ್ಲಿ—

(3) ಛಳಿ ಇರುವಾಗ ಸ್ನಾನಮಾಡುವರಲ್ಲಾ ಅದೂ ತಣ್ಣೀರು ಎಂದು ಪರಮಾತ್ಮನು ಬೇಗ ಪ್ರಸನ್ನನಾಗಲೆಂದು ಹೀಗೆ ಹೇಳಿರುವಳು. **ಮುಯ್ಯಿಟ್ಟು ಎಳ್ದುದೋಂ ಮುಲರಿಟ್ಟು ನಾಮುಡಿಯೋಂ**—ದೃಷ್ಟಿ ತಾಗದಿರಲೆಂದು ಕಾಡಿಗೆ ಹಚ್ಚುವುದು ಪದ್ಧತಿ; ಅದಕ್ಕಾಗಿಯೇ ಮದುವೆಯಲ್ಲಿ ಮದುವಣಿಗನಿಗೆ ಅತ್ತೆಯಾ ಗುವವಳು ಕಾಡಿಗೆ ಹಚ್ಚುವುದುಂಟು; ಅದನ್ನೂ ನಾವು ಹಚ್ಚಬೇಡ; ನಮಗೆ ದೃಷ್ಟಿತಾಗುವುದಲ್ಲಾ ಎಂದು ಬೇಗಬರಲಿ ಕೃಷ್ಣ; ನಮಗೆ ಕೋಪಬಂದಿದೆಯೆಂದು ತಿಳಿಸಲು ನಾವು ಹೂವನ್ನೂ ಮುಡಿಯದಿರೋಣ.

ಶೆಯ್ಯಾದನಶೆಯ್ಯೋಂ—"ಅಸ್ವರ್ಗ್ಯಂ ಲೋಕವಿದ್ವಿಷ್ಟಂ ಧರ್ಮಮುತ್ಸೃಜ್ಯ ಚರೇನ್ನತು" ಎಂದಿರುವಂತೆ ಶಾಸ್ತ್ರವು ಯಾವುದನ್ನು ಮಾಡಕೂಡದೆಂದು ವಿಧಿಸಿರು ವುದೋ ಅದನ್ನು ಮಾಡದಿರೋಣ; ತೈತ್ತರೀಯ 2 ಕಾಂಡ 5 ನೇ ಪ್ರಪಾಠಕದಲ್ಲಿ

ತಸ್ಯೈತತ್ ವ್ರತಂ; ನಾನೃತಂ ವದೇತ್
ನಮೋಂಸಮುಶ್ನೀಯಾತ್

ಇವೇ ಮೊದಲಾದುವುಗಳನ್ನು ಹೇಳಿದ್ದರೂ ಪ್ರಧಾನ ತ್ಯಾಜ್ಯವನ್ನೇ ಹೇಳಿಲ್ಲ. ಹೇಳದಿರುವುದು ಖಿಲಶ್ರುತಿಯೆಂದು ತಿಳಿದು

ಶಿಷ್ಟಾಚಾರಾನುಮಿತ-ಶ್ರುತಿ-ಬೋಧಿತ-ಕರ್ತವ್ಯತಾಕಂ

ಎಂದಿರುವಂತೆ ಶಿಷ್ಟರು ಹೇಳಿರುವುದನ್ನು ಪಾಲಿಸೋಣ. ಶಾಸ್ತ್ರಕ್ಕೆ ಅಂದರೆ ಶ್ರುತಿಗೆ ವಿರೋಧವಿಲ್ಲದ ಶಿಷ್ಟಾಚಾರಕ್ಕೆ ಪ್ರಾಧಾನ್ಯತೆಯುಂಟು. ಅದನ್ನು ಶ್ರುತಿಯೇ

ಅಥ ಯದಿ ತೇ ಕರ್ಮವಿಚಿಕಿತ್ಸಾ ಧರ್ಮ
ವಿಚಿಕಿತ್ಸಾ ವಾ ಸ್ಯಾತ್ ; ಯೇ ತತ್ರ ಬ್ರಾಹ್ಮಣಾಃ
ಸಮ್ಮರ್ಶಿನಃ ; ಯುಕ್ತಾಅಯುಕ್ತಾಃ ; ಅಲೂ
ಕ್ಷಾ ಧರ್ಮಕಾಮಾಸ್ಯುಃ ಯಥಾ ತೇ ತತ್ರ ವ
ರ್ತೇರನ್ ; ತಥಾ ತತ್ರ ವರ್ತೇಥಾಃ– ತೈ–ಶಿಕ್ಷಾವಲ್ಲಿ

ಎಂದು ತಿಳಿಸಿದೆ. ಮೀಮಾಂಸಾ ಶಾಸ್ತ್ರದಲ್ಲಿ

ಶ್ರೋತ್ರಿಯಾಃ ಬ್ರಹ್ಮನಿಷ್ಠಾಃ ಶಿಷ್ಟಾಃ,
ತೇಷಾಮನುಷ್ಠಾನಮಾಚಾರಃ ಸ್ಮಾರ್ತಂ ;
ಅನುಕ್ತವಿಷಯೆ ಏವ ಆಚಾರಸ್ಯ ಶ್ರಾಬಲ್ಯಂ

ಎಂದು ಹೇಳಿದೆ. ಭೀಷ್ಮರು ಧರ್ಮರಾಯನಿಗೆ ಸಹಸ್ರನಾಮವನ್ನು ಉಪದೇಶ ಮಾಡಿದಮೇಲೆ

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪಿತಃ
ಆಚಾರಪ್ರಭವೋ ಧರ್ಮಃ ಧರ್ಮಸ್ಯ ಪ್ರಭುರಚ್ಯುತಃ

ಎಂದು ಹೇಳಿರುವರು. ಇದರ ವ್ಯಾಖ್ಯಾನವನ್ನು ಪರಾಶರ ಭಟ್ಟರು

ಸರ್ವಾಗಮಾನಾಂ ಸರ್ವಧರ್ಮಪ್ರಮಾಣಾನಾಂ
ಪ್ರಥಮಂ ಪರಿಕಲ್ಪಿತಃ ಪ್ರಥಮಪ್ರತಿಪಾದ್ಯ
ಧರ್ಮಃ ಆಚಾರಃ ಶೌಚಾದಿಃ ; ತದಂಗಃ ಶ್ರೌತೋ ಧರ್ಮಃ
ತಸ್ಯ ಆರಾಧ್ಯಃ ಫಲದಃ ಸಹಾಯಶ್ಚ ಅಚ್ಯುತಃ

ಎಂದು ಕೊಟ್ಟಿರುವರು. **"ನಾನೃತಂ ವದೇತ್"** ಎಂದು ವೇದವು ಹೇಳಿದೆ. ಶಿಷ್ಟರು ಆದನ್ನು ಪರಿಷ್ಕರಿಸಿ "ಪೈಶುನ್ಯ ಬಿಡಬೇಕು ಅಂದರೆ ಮರೆಯಲ್ಲಿ ದೂಷಿಸ ಕೂಡದು" ಎಂದಿರುವರು. ಹಾಗೆಯೇ ನಾವು **ತೀಕ್ಕುರಲೈ ಶೆನ್ರೋದೋಂ**–ನಾವು ಮರೆಯಲ್ಲಿ ದೂಷಿಸುವುದನ್ನು ಬಿಡುವುದಲ್ಲದೆ ದೂಷಣವನ್ನು ವೃತ್ತಿಯಾಗಿಟ್ಟು ಕೊಳ್ಳದಿರೋಣ ಅಂದರೆ ಹುಡುಕಿಕೊಂಡು ಹೋಗಿ ದೂಷಿಸದಿರೋಣ.

ಐಯ್ಯಮುಂ ಪಿಚ್ಚೈಯುಂ ಆಂದನ್ನೈಯುಂ ಕೈಕಾಟ್ಟಿ–ಜ್ಞಾನಿಗಳಿಗೂ ಒಳ್ಳೆಯವರಿಗೂ ಕೊಡುವ ದಾನ ಐಯ್ಯಂ ; ಯಾಚಕರಿಗೆ ಪಿಚ್ಚೈ–ಇವನ್ನು ಮುಕ್ತ ಹಸ್ತದಿಂದ ಕೊಟ್ಟು

ಉಯ್ಯುಂ ಆರೆಣ್ಣೆ ಉಹಂದು–ಉಜ್ಜೀವಿಸುವ ಆರನ್ನು ನೆನೆದು ಶಾಂತ ಚಿತ್ತರಾದರೆ–**ಏಲೋರೆಂಪಾವಾಯ್.** ಆ ಆರು ಯಾವುದೆಂದರೆ 1) ಪರ್ಮ ಅಡಿಪಾಡಿ, 2) ನೀರಾಡಿ 3) ಐಯ್ಯಂ ಕೈ ಕಾಟ್ಟಿ 4) ಪಿಚ್ಚೈಲ ಕೈ ಕಾಟ್ಟಿ 5) ಎಣ್ಣೆ 6) ಉಹಂದು–

ಇಲ್ಲಿ ಮೊದಲನೇ ವಿಧಿಗೆ ಪ್ರಥಮಸ್ಥಾನ; ಮಿಕ್ಕವು ಅದರ ಪರಿವಾಹವಾಗಿ ಸ್ವಾಭಾವಿಕವಾಗುತ್ತವೆ. ಹಾಡುವುದೆಂದರೆ ಹೃದಯವು ತುಂಬಿ ಕೋಡಿ ಹರಿದು

ದೀನಸ್ವರದೊಡನೆ ಮಾತುಗಳು ಯಾಚನಾರೂಪದಲ್ಲಿ ಹೊರಹೊಮ್ಮುವುದು. **ವೈಯತ್ತುವಾೞ್ವೀರ್ಕಾಳ್**—ಎನ್ನುವ ಸಂಬೋಧನದಲ್ಲಿ ಅಡಗಿರುವ ಅರ್ಥವು ಇದರಿಂದ ವ್ಯಕ್ತವಾಗುತ್ತದೆ. ಪ್ರಪಂಚದಲ್ಲಿ ಯಾರಿಂದ ನಮ್ಮ ಇಷ್ಟಾರ್ಥವು ಸಿದ್ಧಿಸುವುದೋ ಅವರನ್ನು ನೆನೆಯುವುದು ಧರ್ಮ ಮತ್ತು ಕರ್ತವ್ಯ. ಇಲ್ಲಿ ಶ್ರೀಕೃಷ್ಣನು ಗೋದೆಗೆ ಪ್ರಿಯನು. ಈ ರೂಪವು ಅನಿರುದ್ಧನಿಂದ ಬಂದುದು. ಅವನೇ ಇವನು. ಅವನದೇ ಮತ್ತೊಂದು ಆಕಾರ ಶ್ರೀಕೃಷ್ಣ. ಅನಿರುದ್ಧನನ್ನು ಹಾಡಿದರೆ ಶ್ರೀಕೃಷ್ಣನನ್ನು ಹಾಡಿದಂತೆಯೇ. ಅವನನ್ನು ಹಾಡಿದರೆ ಸ್ವಾರ್ಥವಾದೀತು. ಅವನ ಪಾದಾರವಿಂದವನ್ನು ಹಾಡುವುದು ನಮ್ಮ ಸ್ವರೂಪಕ್ಕೆ ಸರಿಯಾಗಿದೆ. ಬನ್ನಿ ಹಾಡೋಣ ಎನ್ನುತ್ತಾಳೆ.

ಪಾಲ್‌ಕಡಲುಳ್—

ಏಷ ನಾರಾಯಣಃ ಶ್ರೀಮಾ೯ ಕ್ಷೀರಾರ್ಣವನಿಕೇತನಃ ।
ನಾಗಪರ್ಯಂಕಮುತ್ಸೃಜ್ಯ ಹ್ಯಾಗತೋ ಮಧುರಾಂ ಪುರೀಂ ॥

ಹರಿವಂಶ 54–50.

ಎಂದು ಹೇಳಿರುವಂತೆ ಕ್ಷೀರಾಬ್ಧಿಶಾಯಿಯೇ ಶ್ರೀಕೃಷ್ಣ. ಅಲ್ಲದೇ ಮುಂದೆ 21 ನೇ ಪದ್ಯದಲ್ಲಿ (ಏತ್ತಕ್ಕಲಂಗಳ್) ನಂದಗೋಕುಲಕ್ಕೆ ಕ್ಷೀರಾಬ್ಧಿಯಿಂದು ಗೋಪಿಕೆಯರು ತಿಳಿದಿರುವಂತೆ ಸೂಚಿತವಾಗಿದೆ.

ಪ್ಪಯ್ಯ ತುಯಿನ್ರ—ಮೆಲ್ಲಗೆ ನಿದ್ರಿಸುತ್ತಿರುವ; ಸ್ವಲ್ಪ ಕೂಗಿದರೆ ಎಚ್ಚರವಾಗುವ ನಿದ್ದೆ; ಭಕ್ತರ ಪ್ರಾರ್ಥನೆಯನ್ನೇ ಎದಿರು ನೋಡಿಕೊಂಡು ನಿದ್ದೆ ಮಾಡುತ್ತಿರುವಂತಿರುವುದು ಕ್ಷೀರಾಬ್ಧಿಶಾಯಿಯ ಅನ್ಯಾದೃಶಸ್ವಭಾವ. ಸಹಸ್ರನಾಮಗಳಲ್ಲಿ ಇವನನ್ನು "ಶುಚಿಶ್ರವಾಃ" (119) ಎಂದು ಭೀಷ್ಮರು ಸ್ತೋತ್ರ ಮಾಡಿರುವರು. "ಭಕ್ತೋಕ್ತಾನಿ ಶೃಣೋತೀತಿ ಶುಚಿಶ್ರವಾಃ" ಎಂದು ಭಟ್ಟರು ವ್ಯಾಖ್ಯಾನಮಾಡಿರುವರು. ಮಹಾಭಾರತ ಶಾಂತಿಪರ್ವದಲ್ಲಿ (344–61)

ಶುಚೀನಿ ಶ್ರಾವಣೀಯಾನಿ ಶೃಣೋಮೀಹಾಹ ಧನಂಜಯ ।
ನ ಚ ಪಾಪಾನಿ ಗೃಹ್ಣಾಮಿ ತತೋಹಂ ವೈ ಶುಚಿಶ್ರವಾಃ ॥

ಎಂದು ಅರ್ಜುನನನ್ನು ಕುರಿತು ಶ್ರೀಕೃಷ್ಣನು ಹೇಳಿಕೊಂಡಿರುವನು. ಆದುದರಿಂದಲೇ ಅವನೇ ಇವನು.

ಪರರ್ಮ—"ಪರಃ ಮಾ ಅಸ್ಯ"–ಅಂದರೆ ಇವನಿಗೆ ಎಣೆಯಾದವರು ಯಾರೂ ಇಲ್ಲ; ಅಥವಾ "ಪರಾ ಮಾ ಅಸ್ಯ" ಅಂದರೆ ರಕ್ಷಕತ್ವದಲ್ಲಿ ಲಕ್ಷ್ಮಿಯನ್ನು ಮುಂದೆ ಬಿಟ್ಟುಕೊಂಡಿರುವವನು—ಲಕ್ಷ್ಮೀವಲ್ಲಭನು; ಮೊದಲಿನ ಅರ್ಥದಿಂದ (1) ಜಗತ್ಕಾರಣನೂ (2) ರಕ್ಷಕನೂ ಮತ್ತು (3) ಮುಕ್ತಿ ಭೋಗ್ಯನು. ಇದೆಲ್ಲವೂ ಇವನ ಶ್ರಿಯಃಪತಿತ್ವ ಮತ್ತು ಶ್ರೀವಲ್ಲಭತ್ವದಿಂದ ಸಿದ್ಧಿಸುತ್ತದೆಂದು ಎರಡನೇ ಅರ್ಥ. ಇದನ್ನೇ ಆಳವಂದಾರ್ರು (ಯಾಮುನಾಚಾರ್ಯರು) ಸ್ತೋತ್ರರತ್ನದಲ್ಲಿ

ಕಃ ಶ್ರೀಃ ಶ್ರೀಯಃ ಪರಮುಸತ್ವಸಮಾಶ್ರಯಃ ಕಃ
ಕಃ ಪುಂಡರೀಕನಯನಃ ಪುರುಷೋತ್ತಮಃ ಕಃ ।
ಯಸ್ಯಾಯುತಾಯುತ ಕಲಾಂಶಕಲಾಂಶಕಕಾಂಶೇ
ವಿಶ್ವಂ ವಿಚಿತ್ರಚಿದಚಿತ್ತ್ರವಿಭಾಗವೃತ್ತಂ –12

ಎಂದು ಹೇಳಿರುವರು. ಈ ಶ್ಲೋಕದ ಅರ್ಥ ಸ್ವಾರಸ್ಯವನ್ನು ನಿಗಮಾಂತ ದೇಶಿಕರ ವ್ಯಾಖ್ಯಾನದಿಂದ ತಿಳಿಯಬಹುದು. ಇದರ ಇಂಗಿತಾರ್ಥವನ್ನು ಅವರೇ ಬೇರೆಕಡೆ

ಸ್ವಶೇಷಾऽಶೇಷಾರ್ಥೋ ನಿರವಧಿಕನಿರ್ಬಾಧಮಹಿಮಾ ಫಲಾನಾಂ
ದಾತಾ ಯಃ ಫಲಮಪಿಚ ಶಾರೀರಕಮಿತಃ ।
ಶ್ರೀಯಂ ತತ್ಪದ್ರೀಚೀಂ ತದುಪಸದನತ್ರಾಸಶಮನೀಂ ॥

ಎಂದು ಹೇಳಿರುವರು. ಇಂತಹ ಪರಮನು ಪರಮಭೋಗ್ಯನಾದರೂ ಅವನು ಮಲಗಿರುವಾಗ ಕಾಣುವ ಸೌಂದರ್ಯವು ವರ್ಣನಾತೀತ. ಇವನ ನಿದ್ದೆ ತಮಸ್ಸಿನಿಂದ ಬಂದುದಲ್ಲ. ಶಾಂತಿ ಮತ್ತು ಆನಂದ ದ್ಯೋತಕವಿದು. ಅದಕ್ಕಾಗಿಯೇ ನಾವು ಭಗವದಾರಾಧನೆಯನ್ನು ಮುಗಿಸಿದ ಮೇಲೆ

ದೇವ ಸ್ವಾರ್ಮಿ ಜಗನ್ನಾಥ ಶ್ರೀಯಾ ಭೂಮ್ಯಾಜ ನೀಳಯಾ
ಜಗದ್ರಕ್ಷಣಜಾಗರ್ತಾ ಯೋಗನಿದ್ರಾಮುಪಾಶ್ರಯ

ಎಂದು ಪ್ರಾರ್ಥಿಸುವೆವು. ಪರಮಾತ್ಮನ ಸೌಂದರ್ಯವು ಮಲಗಿರುವಾಗ ಇಮ್ಮಡಿಸಿರುವುದು. ವಿಶ್ವಾಮಿತ್ರರು ಯಜ್ಞರಕ್ಷಣಕ್ಕಾಗಿ ರಾಮಲಕ್ಷ್ಮಣರನ್ನು ಕರೆದೊಯ್ದಾಗ ಅವರನ್ನು ಗಂಗಾತೀರದಲ್ಲಿ ಎಬ್ಬಿಸಲು ಬಂದು ರಾಮನ ಸೌಂದರ್ಯಕ್ಕೆ ಮರುಳಾಗಿ

ಕೌಸಲ್ಯಾಸುಪ್ರಜಾರಾಮ ಪೂರ್ವಾಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಂ ॥

ಎಂದರು. ಇದನ್ನು ವ್ಯಾಖ್ಯಾನಮಾಡುವಾಗ ನಂಪಿಳ್ಳೈ ಎನ್ನುವ ಆಚಾರ್ಯರು

ಉಣ್ಣಪುಕ್ಕು ವಾಯ್ಪೈ ಮರಪ್ಪಾರೈ ಪ್ಪೋಲೆ
ವಂದಕಾರಿಯತ್ತೈ ಮರಂದಾರ್ ಋಷಿ

ಎಂದಿರುವರು. ಈ ರಾಮಾಯಣ ಶ್ಲೋಕದ ಗೋವಿಂದರಾಜೀಯವ್ಯಾಖ್ಯಾನವು ಹೀಗಿದೆ:

ಭೋಜನಕಾಲೇ ವಿಸ್ಮೃತಮುಖೋ ಮುನಿರಾಸೀತ್; ಕೆಲವರು **"ಭೋಜನಕಾಲೆ"** ಎನ್ನುವುದಕ್ಕೆ ಬದಲು **"ಬೋಧನಕಾಲೇ"** ಎಂದು ತಿದ್ದಲು ಅಪೇಕ್ಷಿಸುವರು. ಆದರೆ "ಭೋಜನ" ವೆನ್ನುವುದಕ್ಕೆ "ಪರಮಾತ್ಮಾನುಭವ" ವೆಂದು ಅರ್ಥಮಾಡಿದರೆ ಆ ಪದವೇ ಸಮಂಜಸವಾಗಿರುವುದು. ಸಂಪ್ರದಾಯದಲ್ಲಿ ಈ ಶ್ಲೋಕದ ಅರ್ಥವು ಹೀಗಿರುವುದು:

ವಿಶ್ವಾಮಿತ್ರರು ರಾಮನನ್ನು ಎಬ್ಬಿಸಲು ಬಂದಾಗ ಅಲ್ಲಿ ಲಕ್ಷ್ಮಣನಿರಲಿಲ್ಲ. ಅವನು ಆದಿಶೇಷನಾಗಿ ರಾಮನು ಶೇಷಶಾಯಿಯಾಗಿ ಸೇವೆ ಕೊಟ್ಟನು. ಆ ಸಾಕ್ಷಾತ್ಕಾರದಲ್ಲಿ ಆನಂದದಿಂದ ತನ್ನನೇ ಮರೆತು "ರಾಮ, ಪರಂಧಾಮ, ನಿನ್ನನ್ನು ಸುಪುತ್ರನನ್ನಾಗಿ ಪಡೆದು ನಿನ್ನ ಸೌಂದರ್ಯವನ್ನು ತೊಟ್ಟಿಲಲ್ಲಿ, ಆಟದಲ್ಲಿ, ಊಟದಲ್ಲಿ, ಷಾಸಿಗೆಯಲ್ಲಿ ನೋಡಿ ನೋಡಿ ಆನಂದಪಡುತ್ತಿದ್ದ ಕೌಸಲ್ಯೆಯು ಎಷ್ಟುಧನ್ಯಳೋ? ಸ್ವಾರ್ಮಿ! ಪ್ರಾತಸಂಧ್ಯಾಕಾಲವು ಸಮೀಪಿಸಿದೆ. ದಯವಿಟ್ಟು ಏಳು: ಹೇ ನರ ಶಾರ್ದೂಲ, ಪ್ರಾತಸಂಧ್ಯಾವಂದನವನ್ನು ನಾನು ಮಾಡುವಾಗ ಸಾಕ್ಷಾತ್ತಾಗಿ ಅದನ್ನು ಸ್ವೀಕರಿಸಲು ಏಳು."

ಈ ಶ್ಲೋಕದ ಅರ್ಥವನ್ನು ಎಷ್ಟು ಅನುಭವಿಸಿದರೂ ಸಾಲದು. ಹಿಂದೆ ರಾಮನು ಮಗುವಾಗಿದ್ದಾಗ ತೊಟ್ಟಿಲಲ್ಲಿ ಕಿರಿಚಲು ಪ್ರಾರಂಭಿಸಿದನು. ಏನು ಮಾಡಿದರೂ ನಿಲ್ಲಿಸಲಿಲ್ಲ. ಕೌಸಲ್ಯೆಗೆ ಯೋಚನೆಯಾಯಿತು. ಎಲ್ಲಾ ರಾಣಿಯರೂ ಬಂದರು. ಸುಮಿತ್ರೆ ಕುಶಾಗ್ರ ಬುದ್ಧಿಯುಳ್ಳವಳು. ಅವಳಿಗೆ ವಿಷಯ ತಿಳಿಯಿತು. ಓಡಿಹೋಗಿ ಲಕ್ಷ್ಮಣನನ್ನು ಕರತಂದು ರಾಮನ ಮಗ್ಗಲಲ್ಲಿ ಮಲಗಿಸಿದಳು. ಕಿರಿಚುವುದು ನಿಂತಿತು. ಮೊಖವು ಪ್ರಸನ್ನವಾಯಿತು. ನಿದ್ದೆಬಂತು. ನಿದ್ದೆಯಲ್ಲಿ ಅವನ ಸೌಂದರ್ಯವು ಇಮ್ಮಡಿಸಿತು. ಅದನ್ನು ಯಾವಾಗಲೂ ಅನುಭವಿಸುತ್ತಿದ್ದ ಕೌಸಲ್ಯೆಯ ಭಾಗ್ಯವು ಯಾರಿಗುಂಟು. ಅವನೇ ಅಲ್ಲವೇ ಈಗ ಶ್ರೀಕೃಷ್ಣ; ಈ ಶ್ರೀಕೃಷ್ಣನೇ ಅಲ್ಲವೇ ಪರಮ. ಆ ಪರಮನ "ಅಡಿಪಾಡಿ"–ಎಂದಳು ಗೋದೆ. ಶ್ರೀಕೃಷ್ಣ ಶೇಷೀ. ಎಲ್ಲಾ ಜೀತನಗಳೂ ಶೇಷ ಭೂತವಾದವು. ಶೇಷಿ ಜ್ಞಾನದಲ್ಲಿ ಶೇಷತ್ವಜ್ಞಾನವು ಕೂಡಿ ಇದೆ.

ನೀಚೋಚ್ಚಯೋಃ ಸ್ವಭಾವೋಯಂ ನಂತೃನಂತವ್ಯತಾತ್ಮಕಃ ।

ಎಂದಿರುವರು ಪೂರ್ವಾಚಾರ್ಯರು. ಅಲ್ಲದೆ ಈ ಪಾದದ ಮಹಿಮೆಯು ಎಂತಹದು?

1) ಅಸುರ ಹನನ ಮಾಡಿದ ಪಾದವಿದು
2) ಹಾಲು ಕುದಿಯುವಾಗ ಮೇಲೆ ಏರಿದ ಸುಂದರ ಪಾದುವಿದು
3) ಪಾಂಡವರಿಗಾಗಿ ವಿರಾಟ ನಗರದಿಂದ ಹಸ್ತಿನಾಪುರಕ್ಕೆ ನಡೆದ ಪಾದವಿದು
4) ಕಲ್ಲನ್ನು ಹೆಣ್ಣಾಗಿ ಮಾಡಿದ ಪಾದವಿದು
5) ಕಾಳಿಯ ಮರ್ದನ ಮಾಡಿದ ಪಾದವಿದು
6) ಅರ್ಜುನನ ರಥದಲ್ಲಿ ತುಳಿಯುತ್ತಿದ್ದ ಪಾದವಿದು
7) ವಾಮನನಾಗಿ ಅವತರಿಸಿ ಬಲಿದಮನಕ್ಕಾಗಿ ನಡೆದು ಬಂದು ಮೂರು ಲೋಕಗಳನ್ನು ಅಳೆದುಕೊಂಡ ಪಾದವಿದು.

ಇಂತಹ ಪಾದದ ಮಹಿಮೆಯನ್ನು ಮೊದಲು ತೋರಿ ಕೊಟ್ಟವನು ಲಕ್ಷ್ಮಣ. ಇವನನ್ನು ವರ್ಣಿಸುವಾಗ ಪೆರಿಯವಾಚ್ಚಾನ್ ಪಿಳ್ಳೈಯವರು

ಅನ್ವಯತ್ತಿಲ್ ಧರಿಕ್ಕುಂ ವ್ಯತಿರೇಕತ್ತಿಲ್
ಮುಡಿಯುಂಪಡಿಯಾನ ಇಳ್ಳೈಯಪ್ಪೆರುಮಾಳ್ (ತ–ಶ್ಲೋ)

ಎಂದಿರುವರು. ರಾಮನು ಕಾಡಿಗೆ ಹೊರಟಾಗ ಅವನಿಗೆ (ಲಕ್ಷ್ಮಣನಿಗೆ) ಸಹಾಯ ಕೊಟ್ಟದ್ದು ರಾಮನಲ್ಲ; ಅವನ ಪಾದ

ಸ ಬ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ ।
ಸೀತಾಮುವಾಚಾತಿಯಶಾಂ ರಾಘವಂ ಚ ಮಹಾವ್ರತಂ ॥

ಈ ಶ್ಲೋಕದ ಅರ್ಥವು ಸಿದ್ಧಾಂತದಲ್ಲಿ ಬಹು ರಮ್ಯ ಮತ್ತು ಪುಷ್ಕಳವಾಗಿದೆ. ಇಲ್ಲಿ ಪಾದವನ್ನು ಚರಣವೆಂದು ಹೇಳಿರುವುದರಲ್ಲಿ ವಿಶೇಷಾರ್ಥವಿದೆ. "ಚರಗತಿ ಭಕ್ಷಣಯೋಃ" ಎನ್ನುವ ಕ್ರಿಯಾಪದದಿಂದ ಹುಟ್ಟಿರುವ ಚರಣಪದವು ಜೀವರಿಗೆ ಪ್ರಾಪ್ಯವೂ ಪ್ರಾಪಕವೂ ಪರಮಾತ್ಮನ ಪಾದಾರವಿಂದವೇ ಎಂದು ಅರ್ಥಕೊಡುತ್ತದೆ. ಸಂಪ್ರದಾಯದಲ್ಲಿ ಪರಮಾತ್ಮನ ಬಲಪಾದವು ಜ್ಞಾನವೆಂದೂ ಎಡಪಾದವು ಭಕ್ತಿಯೆಂದೂ ಹೇಳಲಾಗಿದೆ. ಜ್ಞಾನವೆಂದರೆ **"ಆಪರೋಕ್ಷ್ಯ"** (ಟಿಪ್ಪಣಿ 11). ಇದನ್ನೇ ನಾವು ಆತ್ಮಸಾಕ್ಷಾತ್ಕಾರವೆನ್ನುವೆವು. ಸಮಾಧಿಯಲ್ಲಿ ಗೋಚರವಾಗುವ ಜ್ಞಾನ ದೀಪ್ತಿಯಿದು. ಇದು ಮೋಕ್ಷವಲ್ಲ. ಈ ಜ್ಞಾನದಲ್ಲಿ ಶೇಷತ್ವ ಜ್ಞಾನವು ಸೇರಿದರೆ ಆಗ ಪ್ರಕಾಶಿಸುವ ನಮ್ಮ ಸ್ವರೂಪ ಮತ್ತು ಸ್ವಭಾವಾನುಭವವೇ ಸರಿಯಾದ ಜ್ಞಾನ; ಇದೇ ಪರಮಾತ್ಮನ ಬಲಪಾದ; ಈ ಜ್ಞಾನದಿಂದ ಸ್ವಾಮಿ, ಸುಹೃತ್, ಗುರುವಾಗಿರುವ ಪರಮನಲ್ಲಿ ಭಕ್ತಿಯಿಟ್ಟರೆ ಆಗ ಅವನ ಎರಡು ಪಾದಗಳೂ ಗೋಚರವಾಗುವವು, ಆದ್ದರಿಂದಲೇ ಪರಮಾತ್ಮನ ಚರಣದ್ವಯಕ್ಕೆ ಅಷ್ಟು ಪ್ರಾಶಸ್ತ್ಯ ಬಂದಿದೆ. ಪೂರ್ವಾಚಾರ್ಯರು ಪರಮಾತ್ಮನ ಚರಣದ್ವಂದ್ವವನ್ನು ಬಂದಾಗಿ ಭಾವಿಸಿ

ಇದು ಪರಮುಪದಂ ಏರುಂ ತುರೈ

ಎಂದಿರುವರು. ನಮ್ಮಾಳ್‌ವಾರ್ರು ಮೊಟ್ಟಮೊದಲು ಭಕ್ತರನ್ನು "ಅಡಿಯಾರ್" ಎಂದು ಕರೆದರು. ಮತ್ತು

ಪೆರುನಿಲಂ ಕಡಂದ ನಲ್ಲಡಿಪ್ಪೋದು
ಅಯರ್ವಿಲ ಅಲತ್ತುವರ್, ತಳ್ರುವುವರ್
ವಣಂಗುವ ಅಮರ್ನ್ದೇ I, 3, 10

ಎಂದು ತನ್ನ ಆರ್ತಿಯನ್ನು ತೋಡಿಕೊಂಡಿರುವರು. ನಂತರ

ತಿರುವಡಿಕ್ಕೀೞ್ ಕುತ್ತೇವಲ್ ಮುಶೆಯ್ ಮುಯಲಾದೇ,
ಅಕಲ್ವದುವೋ ವಿದಿಯಿನಮೇ I, IV, 2

ಎಂದು ಅತ್ತು ತನ್ನ ಭಕ್ತಿ ಪರವಶತೆಯಲ್ಲಿ

ನಾಥನೈ, ನಾಲಮುಂ ವಾನಮುಂ ವಿತ್ತುಂ
ನರುಂ ತುೞಾಯ್‌ಪೋದನೈ, ಪೊನ್ನೆಡುಂ
ಶಕ್ಕರತ್ತೆಂದೈ ಪಿರಾ ತನ್ನೈ ಪಾದಂ
ಪಣಿಯವಲ್ಲಾರೈ ಪಣಿಯುಮವರ್ ಕಂಡೀರ್
ಓದುಂ ಪಿರಪ್ಪಿಡೈ ತೋರೆಮ್ಮೈ ಯಾಳುಡೈಯಾರ್ಗಳೇ I, 7, 3

ಎಂದು ಹೇಳಿ ಪರಮಾತ್ಮನ ಪಾದಾರವಿಂದವನ್ನು ನಂಬಿದವರೇ ಭಾಗವತರು; ಅವರೇ ನಮಗೆ ಸಕಲ ಜನ್ಮಗಳಲ್ಲಿಯೂ ಶೇಷಿಭೂತರು—ಎಂದು ನಿರ್ಧಾರವನ್ನು ಕೊಟ್ಟಿರುವರು.

ಸ್ವಾಪದೇಶ

ನೈಯತ್ತುವಾೞ್‌ವೀರ್‌ಕಾಳ್—ದೇಹಿಗಳಾಗಿ ಉಜ್ಜೀವಿಸಲು ಅಪೇಕ್ಷಿಸುವವರೇ

ನಾಮುಂ—ಮೊದಲನೇ ಪದ್ಯದಲ್ಲಿ ಸದ್ವಿಷಯಾನುಭವ ಕುತೂಹಲಿಗಳನ್ನು ಕರೆದು, ಇಲ್ಲಿ ಪಾರಮಾರ್ಥಿಕದಲ್ಲಿ ವಿಶೇಷಾಭಿರುಚಿಯಿಂದ ಶ್ರುತಿ ಪ್ರಮಾಣವನ್ನು ಸ್ವೀಕರಿಸುವ ಮನೋಧರ್ಮವುಳ್ಳವರನ್ನು ಕರೆದಿರುತ್ತಾಳೆ. "ಸತ್ಯಂವದ" ಎಂದು ಸರ್ವಾಧಿಕಾರತ್ವವನ್ನು ಮೊದಲು ತಿಳಿಸಿ ಅನಂತರ ವಿಶೇಷಾಧಿಕಾರವನ್ನು "ಧರ್ಮಂ ಚರ" ಎಂದು ಶ್ರುತಿಯು ವಿಧಿಸಿರುವಂತೆ ಗೋದೆಯು "ನೀರಾಡಪ್ಪೋದುವೀರ್ ಪೋದುಮಿನೋ" ಎಂದು ಔತ್ಸರ್ಗಿಕ ಶಾಲಿಗಳನ್ನು ಮೊದಲು ಕರೆದು ಇಲ್ಲಿ ಶಾಸ್ತ್ರವಶ್ಯತ್ವ"ವೆನ್ನುವ ವಿಶೇಷಾಧಿಕಾರವುಳ್ಳ ನಾವೂ ಕೂಡ—ಎಂದಿರುವಳು.

ನಮ್ಮಾವೈಕ್ಕು—ನಮ್ಮ ವ್ರತಕ್ಕೆ ಮೋಕ್ಷಬೇಕೆನ್ನುವ ಸಂಕಲ್ಪ ಪೂರ್ತಿಗೆ

ಶೆಯ್ಯುಂ ಕಿರಿಶೈಗಳ್ ಕೇಳೀರೋ—ಮಾಡಬೇಕಾದ ಕಾರ್ಯಗಳನ್ನು ಕೇಳಿ

ಉಯ್ಯುಂ ಅರ್—ಉಜ್ಜೀವಿಸಲು ಮಾಡಬೇಕಾದದ್ದು ಆರು; ಬಿಡಬೇಕಾದದ್ದು ಆರು; ಅನುಸರಿಸಬೇಕಾದದ್ದು ಆರು ಬಿಡಬೇಕಾದದ್ದು ಆರು

1) **ನೆಯ್ಯುಣ್ಣೋಂ**—ಆಯುರ್ವೈಘೃತಂ—ಎಂದಿರುವಂತೆ ಆಯಸ್ಸನ್ನು ವೃದ್ಧಿಮಾಡಿಕೊಳ್ಳುವುದನ್ನೇ ಪ್ರಧಾನ ದೃಷ್ಟಿಯಲ್ಲಿಡುವುದಿಲ್ಲ.

2) **ಪಾಲುಣ್ಣೋಂ** ಭೋಗಗಳಲ್ಲಿ ನಿರತರಾಗುವುದಿಲ್ಲ.

3) **ಮುಯ್ಯಿಟ್ಟು ಎೞುದೋಂ**—ಜ್ಞಾನಯೋಗದಲ್ಲಿ ಪ್ರವರ್ತಿಸುವುದಿಲ್ಲ.

4) **ಮುಲರಿಟ್ಟು ನಾ ಮುಡಿಯೋಂ**—ಭಕ್ತಿಯೋಗವನ್ನು ನಾವು ಆಚರಿಸುವುದಿಲ್ಲ.

5) **ಶೆಯ್ಯಾದನ ಶೆಯ್ಯೋಂ** — ಯಾವುದನ್ನು ಶಾಸ್ತ್ರವು ಕೂಡದೆಂದಿರುವುದೋ ಅದನ್ನು ಮಾಡೆವು.

ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ

ಎಂದು ವೇದವು ಹೇಳಿರುವುದನ್ನಲ್ಲದೆ,

ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ

ಎಂದು ಆಪಸ್ತಂಬರು ಹೇಳಿರುವುದನ್ನು ಬಿಟ್ಟು

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ

ಎಂದು ಗೀತಾಚಾರ್ಯನು ಹೇಳಿರುವುದನ್ನಲ್ಲದೆ ಬೇರೆ ಮಾರ್ಗವನ್ನು ಆಶ್ರಯಿಸುವುದಿಲ್ಲ.

6) **ತೀಕ್ಕುರಳೈ ಶೆನ್ರೋದೋಂ**—ಪೈಶುನ್ಯ (ಚಾಡಿಹೇಳುವುದು) ಮೊದಲಾದುವುಗಳನ್ನು ಮಾಡೆವು; ಹರಟೆಯಲ್ಲಿ ನಿರತರಾಗುವುದಿಲ್ಲ; ಕರ್ಮಯೋಗ ಸಾದ್ಗುಣ್ಯಕ್ಕಾಗಿ ಸರ್ವಭೂತಹಿತರತತ್ವವನ್ನು ಬಿಟ್ಟು ಬೇರೆ ವಾಙ್ಮಯತಪಸ್ಸನ್ನು ಆಚರಿಸೆವು.

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥

ಭ–ಗೀ XVII–15

ಎಂದು ಗೀತಾಚಾರ್ಯನು ಹೇಳಿರುವುದಕ್ಕೆ ವಿರುದ್ಧವಾಗಿ ನಡೆವೆವು.

ಮೋಕ್ಷವನ್ನಪೇಕ್ಷಿಸುವ ಎಲ್ಲಾ ಅಧಿಕಾರಿಗಳೂ ಇವೆಲ್ಲವನ್ನು ಪಾಲಿಸಬೇಕು.

ಶಾಸ್ತ್ರಜ್ಞರು ಮೋಕ್ಷಸಾಧನವನ್ನು ಇಬ್ಬಗೆಯಾಗಿ ತಿಳಿದಿರುವರು. (1) ಭಕ್ತಿ ರೂಪಾಪನ್ನ ಉಪಾಸನ ಅಂದರೆ ಭಕ್ತಿಯೋಗ ಮತ್ತು (2) ಸ್ವತಂತ್ರ ಪ್ರಪತ್ತಿ; ಭಕ್ತಿಯೋಗವನ್ನು ಅಷ್ಟಾಂಗಯೋಗವೆಂದೂ, ಪ್ರಪತ್ತಿಯನ್ನು ಷಡಂಗಯೋಗವೆಂದೂ ಹೇಳುವುದುಂಟು. ಪ್ರಪತ್ತಿಗೆ.

1) **ಅನುಕೂಲ್ಯಸ್ಯ ಸಂಕಲ್ಪಃ** 2) **ಪ್ರಾತಿಕೂಲ್ಯಸ್ಯ ವರ್ಜನಂ ।**
3) **ರಕ್ಷಿಷ್ಯತೀತಿವಿಶ್ವಾಸಃ** 4) **ಗೋಪ್ತೃತ್ವವರಣಂ ತಥಾ ॥**
5) **ಆತ್ಮನಿಕ್ಷೇಪ** 6) **ಕಾರ್ಪಣ್ಯೆ ಷಡ್ವಿಧಾ ಶರಣಾಗತಿಃ**

(ಅ–ಸಂ 37–18)

ಇವೇ ಆರು ಅಂಗಗಳು. ಗೋದೆಯು "**ಪ್ರಾತಿಕೂಲ್ಯಸ್ಯ ವರ್ಜನಂ**" ಎನ್ನುವುದನ್ನು ವಿಸ್ತಾರವಾಗಿ ಹೇಳಿ ಮಿಕ್ಕುದನ್ನು ತಿಳಿಸುತ್ತಾಳೆ.

1) **ಅಡಿಪಾಡಿ** 2) **ನೀರಾಡಿ** 3) **ಐಯ್ಯಮಿಟ್ಟು**
4) **ಪಿಚ್ಚೈಯಿಟ್ಟು** 5) **ಎಣ್ಣೆ** 6) **ಉಕಂದು**—ಎಂದು.

ಪಾರ್ಕಡಲುಳ್ . . . ಪಾಡಿ—ಹಾಲು ಎಂದರೆ ಪರಮಾತ್ಮನ ಕಲ್ಯಾಣ ಗುಣಗಳು; ಅವುಗಳ ಅನುಸಂಧಾನದಿಂದ ತಮ್ಮನ್ನೇ ಮರೆತಿರುವ ಆಚಾರ್ಯರಲ್ಲಿ ಪರಮ ಎಂದರೆ ಪ್ರಥಮಾಚಾರ್ಯನಾದ ಶ್ರೀಮನ್ನಾರಾಯಣನ **ಅಡಿ** (ಪಾದದ ಅವತಾರವಾದ) ಶಠಗೋಪರನ್ನು **ಪಾಡಿ**.

ನೀರಾಡಿ—"ಏಷಬ್ರಹ್ಮ ಪ್ರವಿಷ್ಟೋಸ್ಮಿ" ಎಂದಿರುವಂತೆ ಪರಮಾತ್ಮಾನುಭವದಲ್ಲೇ ಪ್ರಾವಣ್ಯಹೊಂದಿ—ಇವೆರಡರಿಂದ "ಆನುಕೂಲ್ಯಸ್ಯಸಂಕಲ್ಪ" ವು ಹೇಳಲ್ಪಟ್ಟತು.

ಐಯ್ಯಮಿಟ್ಟು—ತನ್ನನ್ನು ರಕ್ಷಿಸಿಕೊಳ್ಳಲು ತನ್ನಿಂದಾಗದಿನ್ನುವ ಆಕಿಂಚನ್ಯವನ್ನು ಅಂದರೆ ಕಾರ್ಪಣ್ಯವನ್ನು ಹೊಂದಿ

ಪಿಚ್ಚೈಯಿಟ್ಟು—ನೀನೇ ರಕ್ಷಕನೆಂದು ಪರಮಾತ್ಮನಲ್ಲಿ ಪ್ರಾರ್ಥನಾ ರೂಪವಾದ ಗೋಪ್ತೃತ್ವವರಣ ಮಾಡಿ

ಉಹಂದು—ಅವನನ್ನು ಆಶ್ರಯಿಸಿದರೆ ಕೈಬಿಡನೆನ್ನುವ ಮಹಾವಿಶ್ವಾಸದಿಂದ

ಎಣ್ಣಿ—"ನಿನ್ನ ಪಾದಾರವಿಂದವೇ ಶರಣು" ಎಂದು ಚಿಂತಿಸಿ ಭರತಮರ್ಪಣ ಷ್ಮಾಡಿದರೆ **ಏಲೋರೆಂಪಾವಾಯ್**.

ಹೀಗೆ **ಉಯ್ಯುಮಾರ್** ಎನ್ನುವುದರಿಂದ ಷಡಂಗಯೋಗವಾದ ಪ್ರಪತ್ತಿಯು ಹೇಳಲ್ಪಟ್ಟಿದೆ. ಇದು ಕೇವಲ ಪ್ರಪತ್ತಿಸ್ವರೂಪಜ್ಞಾನಮಾತ್ರ; ಪ್ರಪತ್ಯನುಷ್ಠಾನವಲ್ಲ.

"**ಉಯ್ಯುಮಾರ್**" ಎನ್ನುವುದರಿಂದ 1) ಶ್ರೀಮನ್ನಾರಾಯಣ ಚರಣ್ 2) ಶರಣಂ 3) ಪ್ರಪದ್ಯೇ 4) ಶ್ರೀಮತೇ 5) ನಾರಾಯಣಾಯ 6) ನಮಃ—ಎನ್ನುವ ಆರುಪದಗಳುಳ್ಳ ದ್ವಯ ಮಂತ್ರವೂ, ಈ ಆರು ಪದಗಳ ಅರ್ಥವಿವರಣೆಯಾದ ಆರುವಲ್ಲಿಗಳುಳ್ಳ ಕಥೋಪನಿಷತ್ತೂ ಹೇಳಲ್ಪಟ್ಟಿವೆ. ಈ ದ್ವಯ ಮಂತ್ರವನ್ನು ಜಪಮಾಡುವಾಗ ವಿಹಿತವಾದ ಧ್ಯಾನಶ್ಲೋಕದಲ್ಲಿ ಕ್ಷೀರಾಬ್ಧಿಶಾಯಿ ಶ್ರೀಮನ್ನಾರಾಯಣನೇ ಧ್ಯೇಯವಸ್ತು. ಹಾಗೆಯೇ ಇಲ್ಲಿಯೂ ಅವನೇ ದೈವ (ಪಾರ್ಕಡಲ್ . . . ಪರರ್ಮ) ದ್ವಯಮಂತ್ರದ ಧ್ಯಾನಶ್ಲೋಕವು ಹೀಗಿದೆ.

ಕ್ಷೀರಾಂಭೋನಿಧಿರತ್ನಮಂಟಪಮಹಾಸೌವರ್ಣಸಿಂಹಾಸನೇ,
ವಾಮಾಂಕೇ ಸ್ಥಿತಯಾ ಪ್ರಸನ್ನವದನಂ ಶ್ರೀಕಾಂತಯಾಲಿಂಗಿತಂ ।
ದೋರ್ದಂಡಾಂಕಿತಶಂಖಪಂಕಜಗದಾಚಕ್ರೈರುದಾರಶ್ರಿಯಂ
ತ್ವಾಂ ನಿತ್ಯಂ ಕಲಯಾಮಿ ಜನ್ಮವಿಮುಖೋ ಲಕ್ಷ್ಮೀಶನಾರಾಯಣ ।

ಒಟ್ಟನಲ್ಲಿ ಗೋದೆಯ ಈ ಎರಡನೇ ಪದ್ಯದ ಅರ್ಥವನ್ನು ಸಂಗ್ರಹಮಾಡಿದರೆ ಅದು

ಸ್ವೋಜ್ಜೀವನೇಚ್ಛಾ ಯದಿ ತೇ ಸ್ವಸತ್ತಾಯಾಂ ಸ್ಪೃಹಾ ಯದಿ
ಆತ್ಮದಾಸ್ಯಂ ಹರೇಃ ಸ್ವಾಮ್ಯಂ ಸ್ವಭಾವಂಚ ಸದಾ ಸ್ಮರ

ಎನ್ನುವ ವಿಷ್ಣುತತ್ವ ಸ್ಮೃತಿ ವಾಕ್ಯದೊಡನೆ ಸರಿಹೋಗುತ್ತದೆ.

ಓಂಗಿ ಉಲಗಳಂದ ಉತ್ತಮ್ ಪೇರ್‌ಪಾಡಿ
ನಾಂಗಳ್ ನಂಪಾವೈಕ್ಕು ಶಾತ್ತಿನೀರಾಡಿನಾಲ್
ತೀಂಗಿನ್ರಿ ನಾಡೆಲ್ಲಾಂ ತಿಂಗಳ್ ಮುಮ್ಮಾರಿ ಪೆಯ್ದು
ಓಂಗುಪೆರುಂಶೆನ್ನೆಲ್ ಊಡುಕಯಲುಗಳ
ಪೂಂಕುವಲೈಪೋದಿಲ್ ಪೊರಿವಂಡು ಕಣ್‌ಪಡುಪ್ಪ
ತೇಂಗಾದೇ ಪುಕ್ಕಿರುಂದು ಶೀರ್ತಮುಲೈಪತ್ತಿ
ವಾಂಗ, ಕುಡಂ ನಿರೈಕ್ಕುಂ ವಳ್ಳಲ್‌ಪೆರುಂಪಶುಕ್ಕಳ್
ನೀಂಗಾದಶೆಲ್ವಂ ನಿರೈಂದು ಏಲೋರೆಂಪಾವಾಯ್ ॥ ೩ ॥

ಈ ಮೂರನೇ ಪದ್ಯದಲ್ಲಿ ಆನುಷಂಗಿಕ ಫಲವು ಹೇಳಲ್ಪಟ್ಟಿದೆ. ಪರಮೈಕಾಂತಿಗಳಾದ ಗೋಪಿಯರಿಗೆ ಮುಖ್ಯ ಮತ್ತು ಆನುಷಂಗಿಕವೆನ್ನುವವೆಲ್ಲಾ ಫಲಗಳೂ ಪರಮಾತ್ಮನೇ.

ಆದರೂ ಆ ಪರಮಾತ್ಮನನ್ನು ತಾವು ಹೊಂದಲು ಅನುಮತಿಯನ್ನು ಕೊಟ್ಟ ಗೋಪರಿಗೂ ಅವರು ಅಪೇಕ್ಷಿಸಿದ ಫಲವು ಸಿಗುವುದೆಂದು ಇಲ್ಲಿ ಹೇಳಲ್ಪಟ್ಟಿದೆ. ಆದರೆ ಆ ಫಲವು ಪರಮಾತ್ಮನಿಂದಲೇ ಕೊಡಲ್ಪಡುತ್ತದೆಂದು ಸ್ಮೃತಿಯು ಹೇಳಿರುತ್ತದೆ.

ಶರೀರಾರೋಗ್ಯಮೈಶ್ವರ್ಯಂ ಭೋಗಾಂಶ್ಚೈವಾನುಷಂಗಿಕಾ
ದದಾತಿ ಧ್ಯಾಯಿನಾಂ ನಿತ್ಯಮಪವರ್ಗಪ್ರದೋ ಹರಿಃ ॥

ಎಂದು ವಿಷ್ಣು ಧರ್ಮೋತ್ತರದಲ್ಲಿ (74–46) ಹೇಳಿದೆ. ಅದಕ್ಕಾಗಿಯೇ ಗೋದೆಯು "ನಂಪಾವೈಕ್ಕು" ಎಂದು ಬಹುವಚನವನ್ನು ಹೇಳಿರುವಳು.

ಓಂಗಿ ಉಲಕಳಂದ ಉತ್ತಮ್ ಪೇರ್‌ಪಾಡಿ—ಅಂಡಕಟಾಹದವರಿಗೂ ಬೆಳೆದು ಮೂರು ಲೋಕಗಳನ್ನು ಅಳೆದುಕೊಂಡ ಉತ್ತಮನ ನಾಮವನ್ನು ಹಾಡಿ—ಇಲ್ಲಿ ಉತ್ತಮ್ ಎನ್ನುವುದಕ್ಕೆ ನಾಲ್ಕು ಅರ್ಥಗಳನ್ನು ಹೇಳುವುದುಂಟು.

1) ವಾಮನನಾಗಿ ಅವತರಿಸಿ ತ್ರಿವಿಕ್ರಮನಾದ ಶ್ರೀಮನ್ನಾರಾಯಣ. ಶ್ರುತಿಯು ಪರವಸ್ತುವನ್ನು "ಉತ್" ಎಂದು ಕರೆದಿದೆ. ಹಾಗೆ ಹೆಸರು ಬರಲು ಕಾರಣವನ್ನು ಹೇಳುವಾಗ

ತಸ್ಯ ಉತ್ ಇತಿ ನಾಮ; ಸಏಷಃ ಸರ್ವೇಭ್ಯಃ ಪಾಪ್ಮಭ್ಯಃ ಉದಿತಃ
(ಛಾಂ I, 6, 7)

ಎಂದಿದೆ. ಇಲ್ಲಿ ಪಾಪ್ಮವೆಂದರೆ ಸುಕೃತ ಮತ್ತು ದುಷ್ಕೃತ. **"ಅನಿಷ್ಟಫಲಸಾಧನತ್ವರೂಪ ಪ್ರವೃತ್ತಿನಿಮಿತ್ತತ್ವಂ ಪಾಪ್ಮತ್ವಂ"** ಎನ್ನುವ ಲಕ್ಷಣದಿಂದ ಸುಕೃತವೂ ದುಷ್ಕೃತವೇ. ಹೀಗೆ ಎರಡು ವಿಧ ಪಾಪಗಳಿಗೆ ಹೊರಗಿರುವುದರಿಂದ ಪರಮಾತ್ಮನು "ಉತ್". ಈ ಅರ್ಥವನ್ನು ಮುಂದೆ ಅದೇ ಶ್ರುತಿಯು

ನೈನಂ ಸೇತುಂ ಅಹೋರಾತ್ರೇ ತರತಃ ನ ಜರಾ ನ ಮೃತ್ಯುಃ ನ ಶೋಕಃ
ನ ಸುಕೃತಂ ನ ದುಷ್ಕೃತಂ ಸರ್ವೇಪಾಪ್ಮಾನಃ ಅತೋ ನಿವರ್ತಂತೇ
(ಛಾ, VIII, 4, 1)

ಎಂದು ವಿವರಿಸಿದೆ. "ಸಿನೋತಿ ಬದ್ನಾತಿ ಚಿದಚಿದ್ವಸ್ತುಜಾತಂ ಅಸಂಕೀರ್ಣಂ ಇತಿ ಸೇತುಃ" ಎನ್ನುವ ವ್ಯುತ್ಪತ್ತಿಯಿಂದ ಸಕಲ ಚೇತನರೂ ಪ್ರಕೃತಿಯಲ್ಲಿ ಬಂಧಿತರಾಗಿರಲು ಪರಮಾತ್ಮನೇ ಕಾರಣನಾಗಿದ್ದರೂ ಅವನು ಅಪಹತಪಾಪ್ಮಾ ಅಂದರೆ ದೋಷವಿಲ್ಲದವನು; ಆದ್ದರಿಂದ "ಉತ್";

ಅಪಹತಪಾಪ್ಮಾ ಹ್ಯೇಷ ಬ್ರಹ್ಮಲೋಕಃ
ಸಕೃದ್ವಿಭಾತೋ ಹ್ಯೇವೈಷ ಬ್ರಹ್ಮಲೋಕಃ
(VIII, 4, 1) + VIII–7

ಎಂದು ಎರಡಾವರ್ತಿ ಶ್ರುತಿಯು ಹೇಳಿರುತ್ತದೆ. ಆದರೆ ಎರಡನೇ ಆವೃತ್ತಿಯಲ್ಲಿ

ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುಃ
ವಿಶೋಕೋ ವಿಜಿಘತ್ಸಃ ಅಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ

ಎಂದು ಪರಿಷ್ಕರಿಸಿದೆ. ಇಲ್ಲಿ ಮೊದಲನೇ ಆರು ವಿಶೇಷಣಗಳಿಂದ **"ಅಖಿಲಹೇಯಪ್ರತ್ಯನೀಕ"** ನೆಂದೂ ಕೊನೆಯ ಎರಡು ವಿಶೇಷಣಗಳಿಂದ **"ಕಲ್ಯಾಣಗುಣೈಕತಾನ"** ನೆಂದೂ ಹೇಳಿದೆ. ಜೀವಾತ್ಮರನ್ನು ಪ್ರಕೃತಿಯಲ್ಲಿ ಕೂಡಿಸಿ ಅವರನ್ನು ಅನಿಷ್ಟ ಪರಂಪರೆಯಲ್ಲಿ ಬೀಳುವಂತೆ ಮಾಡಿದರೂ ಅವನು ಕಲ್ಯಾಣಗುಣ ವಿಶಿಷ್ಟನು ಹೇಗೆ ಎನ್ನುವುದನ್ನು ಸ್ಮೃತಿ ಅದರಲ್ಲೂ ಗೀತೆಯಲ್ಲಿ ನೋಡಬೇಕು.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯ ಕರ್ತಾರಮವ್ಯಯಂ ॥ (IV–13)
ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ (IV–14)

ಎನ್ನುವ ವಾಕ್ಯಗಳಿಂದ ಪರಮಾತ್ಮನು ಜೀವರುಗಳನ್ನು ಸಂಸಾರಿಗಳನ್ನಾಗಿ ಮಾಡಿರುವುದು ಅವರವರ ಕರ್ಮಫಲಕ್ಕೆ ಅನುಗುಣವಾಗಿಯೇ ವಿನಹ ಅದರಿಂದ ಅವನಿಗೆ ಯಾವ ಲೇಪವೂ ಇಲ್ಲ. ಆದ್ದರಿಂದ **"ನಾರಾಯಣನೇ"** (ಒಂದನೇ ಪದ್ಯ) **"ಉತ್"; "ಪಾರ್ಕ್ಕಡಲುಳ್ ಪ್ಪೆಯ್ತುಯಿನ್ರ ಪರಮ್"** (ಎರಡನೇ ಪದ್ಯ) **ಉತ್ + ತರ; ಚೇತನರನ್ನು ಉದ್ಧಾರ ಮಾಡುವುದಕ್ಕಾಗಿ ಅವರ ಪ್ರಾರ್ಥನೆಯನ್ನು ಲಾಲಿಸಲು ಸಿದ್ಧನಾಗಿರುವ ಅನಿರುದ್ಧನು ತನ್ನ ದಯೆಗೆ ಪರವಶನಾಗಿ ವಾಮನನಾಗಿ ಅವತರಿಸಿ ಬಲಿಯನ್ನು ವಂಚಿಸಿ ಮೂರು ಲೋಕಗಳನ್ನು ಅಳೆದುಕೊಳ್ಳಲು ತ್ರಿವಿಕ್ರಮನಾದನು. ಅದಕ್ಕಾಗಿ ಅವನು "ಉತ್ + ತಮ."** ಸಾಮಾನ್ಯವಾಗಿ ಪರಮಾತ್ಮನ ಅವತಾರಗಳಲ್ಲಿ ದುಷ್ಟಶಿಕ್ಷಣ ಮತ್ತು ಶಿಷ್ಟ ಪರಿಪಾಲನವೆನ್ನುವ ಎರಡು ಕೃತ್ಯಗಳಿವೆ. (ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ). ಅಂದರೆ ವಾಮನ–ತ್ರಿವಿಕ್ರಮಾವತಾರದಲ್ಲಿ ದುಷ್ಕೃತ ವಿನಾಶ ವಿಲ್ಲದೇ ಬಲಿಯನ್ನೂ ಅನುಗ್ರಹಿಸಿ ದೇವತೆಗಳ ಇಷ್ಟಾರ್ಥವನ್ನು ಪೂರ್ತಿಮಾಡಿದ್ದರಿಂದ ಇವನು "ಉತ್ತಮ್." ಶ್ರುತಿಯು ಯಾವ ಅವತಾರಕ್ಕೂ ಪ್ರಾಧಾನ್ಯತೆ ಕೊಡದೆ ತ್ರಿವಿಕ್ರಮನನ್ನೇ ಸ್ತುತಿಸಿದೆ.

ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ,
ಸಮೂಢಮಸ್ಯ ಪಾಂಸುರೇ ಋ–ಸಂ I, 22, 17

ವಿಷ್ಣುವೇ ತ್ರಿವಿಕ್ರಮಾವತಾರ ಮಾಡಿ ಜಗತ್ತನ್ನು ಆಕ್ರಮಣ ಮಾಡಿದನು.

ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ,
ಅತೋ ಧರ್ಮಾಣಿ ಧಾರಯನ್ ಋ–ಸಂ I, 22, 18

ಯಾವ ಹಿಂಸೆಗೂ ಒಳಗಾಗದವನಾಗಿ ಸಕಲ ಜಗತ್ತನ್ನೂ ರಕ್ಷಿಸಿ, ಸಕಲ ಧರ್ಮಗಳನ್ನೂ ಪೋಷಿಸುವುದಕ್ಕಾಗಿ ತನ್ನ ಮೂರು ಪಾದಗಳನ್ನು ಹರಡಿದನು. ಇದರಿಂದ ಅವನ ಸರ್ವಶಕ್ತಿತ್ವವೂ, ಧರ್ಮೋದ್ಧಾರಕತ್ವವೂ, ಈಶ್ವರತ್ವವೂ ಹೇಳಲ್ಪಟ್ಟಿವೆ.

ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ
ದಿವೀವ ಚಕ್ಷುರಾತತಂ । ಋ ಸಂ I, 22, 20

ಸರ್ವಶಕ್ತನಾದ ವಿಷ್ಣುವಿನ ಪರಮವಾದ ಸ್ಥಾನವನ್ನು ದಿವ್ಯ ಚಕ್ಷುಸ್ಸುಳ್ಳ ನಿತ್ಯ ಸೂರಿಗಳು ಅನಂತವಾದ ಅಂತರಿಕ್ಷ (ದಿವೀವ) ವನ್ನು ನಮ್ಮ ಕಣ್ಣು ಆಶ್ಚರ್ಯದಿಂದ ನೋಡುತ್ತಿರುವಂತೆ ಸದಾ ನೋಡುತ್ತಿರುವರು. ಇದರಿಂದ ವಿಷ್ಣುವೇ ಪರತತ್ವ ವೆಂದೂ, ಅವನಿಗೆ ಅವನ ನಿತ್ಯ ಸಂಕಲ್ಪದಿಂದ ನಿತ್ಯಲೋಕವಿದೆಯೆಂದೂ ತಿಳಿಯ ಬೇಕು. ವಿಷ್ಣುವೇ ಪರವಸ್ತು; ಜಗತ್ತಿನ ಸೃಷ್ಟಿ ಸ್ಥಿತಿ ಲಯಕರ್ತಾ ಅವತಾರ ಮಾಡುವವನು ಎನ್ನುವುದನ್ನು

ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ
ವಿಮಮೇ ರಜಾಂಸಿ । ಯೋಅಸ್ಕಭಾ ಯದುತ್ತರಂ ಸದಸ್ಥಂ ವಿ
ಚಕ್ರಮಾಣಂಃ ತ್ರೇಧೋರುಗಾಯಃ (ಋ–ಸಂI, 154, 1)

ಎನ್ನುವ ಮಂತ್ರವು ತಿಳಿಸುತ್ತದೆ. ಯಾವ ವಿಷ್ಣುವು ವಿಸ್ತಾರವಾಗಿ ಹರಡಿರುವ ಸಕಲ ಲೋಕಗಳನ್ನೂ ವಿಶೇಷರೀತಿಯಿಂದ ನಿರ್ಮಿಸಿದನೋ ಯಾರು ಮೂರು ಪ್ರಕಾರವಾಗಿ ಲೋಕಗಳಲ್ಲಿ ಸಂಚರಿಸುತ್ತಲೂ ಮಹರ್ಷಿಗಳಿಂದ ಸ್ತುತಿಸಲ್ಪಡುತ್ತಲೂ (ಉರು ಗಾಯಃ) ವಿಸ್ತೃತವಾದ ಅಂತರಿಕ್ಷವನ್ನು (ಸದಸ್ಥಂ) ಸ್ಥಿರವಾಗಿ ನಿಲ್ಲಿಸಿರುವನೋ ಅಂತಹ ವಿಷ್ಣುವಿನ ವೀರ್ಯ ಕರ್ಮಗಳನ್ನು ಅತಿ ಶೀಘ್ರವಾಗಿ ಪ್ರಶಂಸಿಸುತ್ತೇನೆ.

ದ್ವೇ ಇದಸ್ಯ ಕ್ರಮಣೇ ಸ್ವರ್ದೃಶೋs ಭಿ ಖ್ಯಾಯ ಮರ್ತ್ಯೋ ಭುರಣ್ಯತಿ ।
ತೃತೀಯಮಸ್ಯ ನ ಕಿರಾದಧರ್ಷತಿ ವಯಶ್ಚನ ಪತಯಂತಃ ಪತತ್ರಿಣಃ ॥
(ಋ, ಸಂI, 155–5)

ಸ್ವರ್ಗವನ್ನು (ಸ್ವರ್ದೃಶಃ) ವೀಕ್ಷಿಸುವವಿವನ (ಅಸ್ಯ) ಎರಡು ಪಾದಗಳನ್ನು ಮಾತ್ರ ದ್ವೇಇತ್ ಕ್ರಮಣೆ (ಭೂಲೋಕ ಮತ್ತು ಅಂತರಿಕ್ಷಲೋಕ) ಮಾನವನು ಸ್ತುತಿಸಿ (ಅಭಿಖ್ಯಾಯ) ತಿಳಿದುಕೊಳ್ಳುತ್ತಾನೆ (ಭುರಣ್ಯತಿ); ಅವನ ಮೂರನೇ ಪಾದವನ್ನು ಯಾರೂ ಅರಿಯಲಾರರು (ನಕಿಃ ಆದಧರ್ಷತಿ); ತನ್ನ ಯೋಗ ಶಕ್ತಿಯಿಂದ ಹಕ್ಕಿ ಗಳಂತೆ ಹಾರ ಬಲ್ಲವರೂ ಅರಿಯಲಾರರು. ಈ ಮಂತ್ರದಿಂದ ಪುರುಷಸೂಕ್ತದ "ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂದಿವಿ" ಎನ್ನುವ ಮಂತ್ರವು ವ್ಯಾಖ್ಯಾತವಾಗಿದೆ.

ಒಟ್ಟಿನಲ್ಲಿ ಎಲ್ಲಾ ಪರಮಭಕ್ತರಿಗೂ ತ್ರಿವಿಕ್ರಮಾವತಾರವೇ ಹಿಡಿಸಿದೆ. ಮೊದಲಿನ ಮೂರು ಆಳ್ವಾರ್ರುಗಳಿಗೆ ಸಾಕ್ಷಾತ್ಕಾರ ಕೊಟ್ಟವನು ಮೊದಲು ತ್ರಿವಿಕ್ರ ಮನೇ; ನಮ್ಮಾಳ್ವಾರ್ರಿಗಂತೂ ಅವನಿಗಿಂತ ಬೇರೇ ದೈವವೇ ಇಲ್ಲ. ಅವನ ದ್ವಾರಾ ಮಿಕ್ಕ ಮೂರ್ತಿಗಳು ಅವರಿಗೆ ಪ್ರಿಯವಾಗಿ ಕಂಡು ಬಂದಿವೆ. ಯಾವ ಅರ್ಚಾ ಮೂರ್ತಿಯು ಸಾಕ್ಷಾತ್ಕಾರ ಕೊಟ್ಟರೂ ಅವನು ತ್ರಿವಿಕ್ರಮನಾಗಿಯೂ ಸೇವೆಕೊಟ್ಟರು ವುದನ್ನು ಪದೇಪದೇ ನೋಡಬಹುದು.

ಆದ್ದರಿಂದ ಗೋದೆಯು ಶ್ರುತಿಯು ಉದ್ಘೋಷಿಸುತ್ತಿರುವಂತೆ ಪರವಸ್ತುವನ್ನು ಅದರ ತ್ರಿವಿಕ್ರಮತ್ವದಿಂದ ಅರಿತೇ "ಉತ್ತಮ" ಎಂದಿರುವಳು. ಉತ್ತಮ

ಎಂದರೆ ಪುರುಷೋತ್ತಮ. ಇವನ ಲಕ್ಷಣವನ್ನು ತನ್ನಲ್ಲಿ ಅನ್ವಯಿಸಿಕೊಂಡು

ಯಸ್ಮಾತ್ ಕ್ಷರಮತೀತೋಹಂ ಅಕ್ಷರಾದಪಿಚೋತ್ತಮಃ ।
ಅತೋಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ ಭಗೀ–XV

ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿಕೊಂಡಿರುವನು. ಇಲ್ಲಿ "ಲೋಕೇ" ಅಂದರೆ "ವೇದಾರ್ಥಾವಲೋನಾತ್ ಲೋಕಃ ಸ್ಮೃತಿಃ ಉಚ್ಯತೇ" ಎಂದು ರಾಮಾನುಜರ ವ್ಯಾಖ್ಯಾನ.

2) ಗೋಪರಿಗೆ ಬೇಕಾದದ್ದು ಸಸ್ಯಸಮೃದ್ಧಿ; ಅದಕ್ಕೆ ಸಮೃದ್ಧಮಳೆಬೇಕು; ಆ ಮಳೆ ಬರದೇ ಇದ್ದುದರಿಂದಲೇ ಗೋಪರು ಶ್ರೀಕೃಷ್ಣನ ಸಲಹೆಯಂತೆ ಗೋಪಿಕಾ ಬಾಲಿಕೆಯರಿಂದ ವ್ರತವನ್ನು ಅನುಷ್ಠಿಸಲು ಅನುಜ್ಞೆಕೊಟ್ಟರು. ಮಳೆಗೆ ಪ್ರತಿ ಬಂಧಕವನ್ನು ಹೋಗಲಾಡಿಸುವವನು ವಾಮನನೆಂದೇ ಗೋದೆಯ ನಂಬಿಕೆ. ಬಲಿ ಚಕ್ರವರ್ತಿಯು ದಾನಕೊಡಲು ಸಿದ್ಧನಾದಾಗ ಗಿಂಡಿಯಿಂದ ನೀರಿನ ಧಾರೆಯನ್ನು ತಡೆಯಲು ತನ್ನ ಯೋಗಶಕ್ತಿಯಿಂದ ಸೂಕ್ಷ್ಮರೂಪದಲ್ಲಿ ಧಾರೆ ಬೀಳುವ ಬಾಯನ್ನು ಶುಕ್ರಾಚಾರ್ಯರು ಮುಚ್ಚಲು ತನ್ನ ಪವಿತ್ರದ ದರ್ಭೆಯಿಂದ ಬಾಯನ್ನು ಚುಚ್ಚಿ ಶುಕ್ರಾಚಾರ್ಯರನ್ನು ಒಕ್ಕಣ್ಣನನ್ನಾಗಿಸಿ ಧಾರೆ ಬೀಳುವಂತೆ ಮಾಡಿದವನು ವಾಮನನಲ್ಲವೇ (ಭಾಗ VIII 19 ಮತ್ತು 20 ಅಧ್ಯಾಯಗಳು.)

3) ಶ್ರೀಕೃಷ್ಣನು ದೇವಕಿಗೆ ಅವತಾರಕಾಲದಲ್ಲಿ ತಾನೇ ವಾಮನನಾಗಿದ್ದವ ನೆಂದು ತಿಳಿಸಿದ್ದನು. ಇವಳಿಗೆ ಮತ್ತು ವಸುದೇವರಿಗೆ ಅವರ ಹಿಂದಣ ಎರಡು ಜನ್ಮಗಳಲ್ಲಿಯೂ ತಾನೇ ಮಗನಾಗಿದ್ದೆನೆಂದು ಹೇಳುವಾಗ ಮೊದಲನೇ ಜನ್ಮದಲ್ಲಿ ಪೃಶ್ನಿಸ್ವಾಯಂಭುವ ಮನುವಾಗಿದ್ದಾಗ ಯಜ್ಞಪುರುಷನಾಗಿಯೂ, ಎರಡನೇ ಜನ್ಮ ದಲ್ಲಿ ಅವರು ಅದಿತಿ ಮತ್ತು ಕಶ್ಯಪರಾಗಿದ್ದಾಗ ತಾನು ವಾಮನನಾಗಿಯೂ ಇದ್ದು ಈಗ ಕೃಷ್ಣನಾಗಿರುವೆನೆಂದು ತಿಳಿಸಿದ್ದನು.

4) ಮತ್ತೊಬ್ಬರನ್ನು ಕೆಡಿಸಿ ತಾನೂ ಬಾಳದವನು ಅಧಮ; ಮತ್ತೊಬ್ಬರ ಬಾಳನ್ನು ಕೆಡಿಸದೇ ತಾನೂ ಬಾಳುವವನು ಮಧ್ಯಮ; ತಾನು ಕೆಟ್ಟರೂ ಮತ್ತೊಬ್ಬರು ಕೆಡಬಾರದೆನ್ನುವವನು ಉತ್ತಮ.

ಮತಿಯಿನಾಲ್ ಕುರಲ್‌ಮಾಣಾಯ್ ಉಲಕಿರಂದ ಕಳ್ವರ್
ತಿರು–ಮೊ I, 5, 3

ಎಂದು ನಮ್ಮಾಳ್ವಾರ್ರು ಅನುಭವಿಸಿರುವಂತೆ ದೇವತೆಗಳಿಗಾಗಿ ಯಾಚಕನಾಗಿ ಬಂದುದರಿಂದ ವಾಮನನು ಉತ್ತಮನು. ಅಧಮಾಧಮವಾಗಿದೆ ಜೀವನಶೈಲಿ ಯಾಚನಾವೃತ್ತಿ.

ವಿಶಾಖಾಂತಂ ಗತಾ ಮೇಘಾಃ ಪ್ರಸವಾಂತಂ ಚ ಯೌವನಂ ।
ಯಾಚಕಾಂತಂ ಚ ಜೀವಿತಂ ॥

ಎಂದು ವ್ಯಪದೇಶ್ಯರು ಹೇಳಿರುವರು. ವಾಮನಾವತಾರದಲ್ಲಲ್ಲದೆ ಮತ್ತಾವ ಅವತಾರದಲ್ಲೂ ಯಾಚಕನಾಗಿರಲಿಲ್ಲ ಪರಮಾತ್ಮಾ; ಇದು ಉತ್ತಮಪುರುಷ ಲಕ್ಷಣವಾಗಿರುವುದು ಆ ವೃತ್ತಿಯನ್ನು ಮತ್ತೊಬ್ಬರಿಗಾಗಿ ಆಶ್ರಯಿಸಿದ್ದರಿಂದ

ಇಂತಹ ಉತ್ತಮನಾದ ವಾಮನ–ತ್ರಿವಿಕ್ರಮನ ನಾಮವನ್ನು ಹಾಡಿ.

ನಾಂಗಳ್ ನಂ ಪಾವೈಕ್ಕು ಚ್ಛಾತ್ತಿ ನೀರಾಡಲ್–ನಾವು ನಮ್ಮ ವ್ರತಕ್ಕಾಗಿ ಸಂಕಲ್ಪಿಸಿ ಸ್ನಾನಮಾಡಿದರೆ

ತೀಂಗಿನ್ರಿ—ಈತಿಬಾಧೆಯಿಲ್ಲದ ಅಂದರೆ

ಅತಿವೃಷ್ಟಿರನಾವೃಷ್ಟಿ ಮೂರ್ಷಕಾಶ್ಶಲಭಾಃ ಶುಕಾಃ ।
ಅತಿಕ್ರೂರಾಶ್ಚರಾಜಾನಃ ಷಡೇತೇ ಈತಯಃ ಸ್ಮೃತಾಃ ॥

ಎಂದಿರುವಂತೆ ಅತಿವೃಷ್ಟಿ ಅನಾವೃಷ್ಟಿ ಬಾಧೆಯಿಲ್ಲದೇ.

ನಾಡೆಲ್ಲಾಂ ತಿಂಗಳ್ ಮುಮ್ಮಾರಿ ಪೆಯ್ದು

1) ದೇಶದಲ್ಲೆಲ್ಲಾ ಒಂದು ತಿಂಗಳಲ್ಲಿ ಮೂರು ಪ್ರಕಾರದಲ್ಲಿ ಮಳೆಯು ಸುರಿದು; 9 ದಿನಗಳು ಬಿಸಿಲು ಒಂದು ದಿನ ಚೆನ್ನಾಗಿ ಮಳೆ–ಹೀಗೆ ಮೂರಾವರ್ತಿ ಮಳೆ ಸುರಿದು–ಇದು ಸುಭಿಕ್ಷಕ್ಕೆ ಹೇತು;

2) ಅಥವಾ "ಮುಮ್ಮಾರಿಪೆಯ್ದು"

ವೇದಮೋದಿಯ ಅಂದಣರ್ಕು ಓರ್‌ಮಳೈ ಮಾದರ್ ಮಂಗೈಯರ್
ಕರ್ಪಿನುಕ್ಕು ಓರ್‌ಮಳೈ ನೀತಿನಿರ್ಕಿಡುಂ ಮನ್ನವರ್ಕು ಓರ್‌ಮಳೈ

ಎಂದು ತಮಿಳರು ಹೇಳುವಂತೆ ಬ್ರಾಹ್ಮಣರ ಸದಾಚಾರಕ್ಕೂ ವನಿತೆಯರ ಪಾತಿವ್ರತ್ಯಕ್ಕೂ ಭೂಪತಿಗಳ ಯಥಾನ್ಯಾಯ ಪರಿಪಾಲನಕ್ಕೂ ಅನುಕೂಲವಾಗಿ ಮಳೆ ಸುರಿದು–ಈ ಅರ್ಥದಲ್ಲಿ—

ಅತಿವೃಷ್ಟಿ — ಅನ್ಯಧರ್ಮಾನುಷ್ಠಾನ
ಅನಾವೃಷ್ಟಿ — ಸ್ವಧರ್ಮತ್ಯಾಗ
ಮೂಷಕ — ಇರುವುದನ್ನು ಕೆಡಿಸುವುದು
ಶಲಭ — ಮಾನವತ್ವವನ್ನೇ ಹೋಗಲಾಡಿಸುವುದು
ಶುಕ — ಫಲ ಬರುವ ವೇಳೆಯಲ್ಲಿ ಕೆಡಿಸುವುದು
ಕ್ರೂರ ರಾಜರು —ಧರ್ಮಾನುಷ್ಠಾನಕ್ಕೆ ಪ್ರತಿಬಂಧಕ

ಇವು ಉಂಟಾಗದಂತೆ "ಮುಮ್ಮಾರಿಪೆಯ್ದು"

ಓಂಗು ಪೆರುಂ ಶೆನ್ನೆಲ್ ಊಡು—ಅತಿ ಎತ್ತರವಾಗಿ ಬೆಳೆದ ಕೆಂಪುಭತ್ತದ ಪೈರುಗಳ ನಡುವೆ.

ಕಯಲುಗಳ—ಮೀನುಗಳು ನಲಿಯುತ್ತಿರುವಲ್ಲಿ

ಪೂಂ ಕುವಲೈಪೋದಿಲ್—ಸುಂದರವಾದ ನೈದಿಲೇ ಹೂವಿನ ಕುಸುಮದಲ್ಲಿ

ಪೊರಿವಂಡು—(ಸುಂದರ) ದುಂಬಿಯು

ಕಣ್ ಪಡುಪ್ಪ—(ಮಧುಪಾನದಿಂದ ಮತ್ತನ್ನು ಹೊಂದಿ) ನಿದ್ರಿಸುತ್ತಿರುವಲ್ಲಿ —ಇಲ್ಲಿಯವರೆಗೂ ಸಸ್ಯಸಮೃದ್ಧಿಯನ್ನು ಹೇಳಿ ಮುಂದೆ ಗ್ರಾಮಸಮೃದ್ಧಿಯನ್ನು ಹೇಳಲ ಹೊರಟು

ತೇಂಗಾದೆ ಪುಕ್ಕಿರುಂದು—ಧೈರ್ಯದಿಂದ ತನ್ನಕೊಟ್ಟಿಗೆಯನ್ನು ಪ್ರವೇಶಿಸಿನಿಂತು

ಶೀರ್ತಮುಲೈ—ಹಾಲಿನಿಂದ ತುಂಬಿ ದಪ್ಪನಾದ ಕೆಚ್ಚಲನ್ನು

ಪತ್ತಿವಾಂಗ—ಹಿಡಿದು ಕರೆಯುವಂತೆ

ವಳ್ಳಲ್—ಯಾರು ಕರೆದರೂ ಕರೆಯಿಸಿಕೊಳ್ಳುವ ಮತ್ತು ಹಾಲು ಕೊಡಲು ಮೋಸಮಾಡದ

ಪೆರುಂ ಪಶುಕ್ಕಳ್—ದೊಡ್ಡ ಹಸುಗಳು

ನೀಂಗಾದ ಶೆಲ್ವಂ ನಿರೈಂದು—ವೃದ್ಧಿಹೊಂದುತ್ತಿರುವ ಐಶ್ವರ್ಯವಾಗಿ ತುಂಬಿ

ಕುಡಂ ನಿರೈಕ್ಕುಂ—ಕೊಡಕೊಡವಾಗಿ ಹಾಲುಕೊಡುವಂತೆ ಆಗುತ್ತದೆ. ಹಸುಗಳು ಹಾಲುಕೊಡುತ್ತಿದ್ದರೆ ಕೊಡಗಳ ಅಭಾವವು ಬರುವುದೇ ವಿನಹ ಹಾಲಿಗೆ ಸಂಕೋಚ ಬರುತ್ತಿರಲಿಲ್ಲವೆಂದು ಫಲಿತಾರ್ಥ.

ಸ್ವಾಪದೇಶ

ವೇದದಲ್ಲಿ ಅಷ್ಟಾಕ್ಷರಿಯ ಮಹಿಮೆಯು ವಿಸ್ತಾರವಾಗಿ ಹೇಳಲ್ಪಟ್ಟಿದೆ.

ಅಥ ಪುರುಷೋ ಹವೈ ನಾರಾಯಣೋಽಕಾಮಯತ ಪ್ರಜಾಃಸೃಜೇಯೇತಿ

ಎಂದು ಪ್ರಾರಂಭಿಸಿ ಶ್ರೀಮನ್ನಾರಾಯಣನೇ ಜಗತ್ತಿಗೆ ಉಪಾದಾನ ಮತ್ತು ನಿಮಿತ್ತ ಕಾರಣನೆಂದು ತಿಳಿಸಿ ಅವನನ್ನು ಹೀಗೆ ತಿಳಿದುಕೊಂಡರೆ ನಾವು ಅವನಂತೆಯೇ ಆಗುವೆವು—

ಯ ಏವಂ ವೇದ ಸ ವಿಷ್ಣುರೇವ ಭವತಿ ಸವಿಷ್ಣುರೇವ ಭವತಿ –ನಾ–ಉ ಎಂದು ಪ್ರತಿಜ್ಞೆಮಾಡಿ ಅವನನ್ನು ಸರ್ವವ್ಯಾಪಿಯೆಂದು ತಿಳಿದುಕೊಳ್ಳಲು ಅಷ್ಟಾಕ್ಷರೀ ಮಂತ್ರವನ್ನು ಪದೇಶಿಸಿದೆ. ಈ ನಾರಾಯಣನ ವ್ಯಾಪ್ತಿಯನ್ನು ವಾಮನಾವಾತಾರದಿಂದಲೇ ತಿಳಿಯಬೇಕೆಂದು ಆಳ್ವಾರ್ ಮತ್ತು ಆಚಾರ್ಯರು ಉಪದೇಶ. ಆಳ್ವಾರ್ರಲ್ಲಿ ತಿರುಮಂಗೈ ಆಳ್ವಾರ್ರು

ಇಂದಿರರ್ಕುಂ ಪಿರಮರ್ಕುಂ ಮುದಲ್ವನ್ ತನ್ನೈ
ಇರುಂನಿಲಂ ಕಾತ್ತೀನೀರ್‌ವಿಣ್ ಭೂತಮೈಂದಾಯ್
ಚೆಂದಿರತ್ತ ತಮಿಳ್ಳಿnಶೈ ವಡಶೊಲ್ಲಾಕಿ
ದಿಶೈನಾನ್ಗುಮಾಯ್ ತಿಂಗಳ್ ನಾಯರಾಕಿ
ಅಂತರತ್ತಿಲ್ ದೇವರ್ಕುಂ ಅರಿಯಲಾಕಾ

ಅಂದಣನೈ ಅಂದಣರ್ ಮೂಡತ್ತಿವೈತ್ತ
ಮುಂತಿರತ್ತೈ ಮುಂತಿರತ್ತಾಲ್ ಮುರವಾದೆನ್ರುಂ
ವಾಳ್ತಿಯೇಲ್ ವಳ್ಳಲಾಂ ಮುಡನೆಂಜೇ । ತಿ–ನೆ–ತಾ–4

ಎನ್ನುವ ಪದ್ಯದಿಂದ ಮೇಲೆ ಹೇಳಿದ ನಾರಾಯಣೋಪನಿಷತ್ತು ಹೇಳಿರುವಂತೆಯೇ ಹೇಳಿ ಈ ರೀತಿಯಲ್ಲಿ ಪರಮಾತ್ಮನ ಸ್ವರೂಪರೂಪ ಮತ್ತು ಕಲ್ಯಾಣ ಗುಣಗಳನ್ನು ನಾವು ತಿಳಿದು ಅನುಭವಿಸಬೇಕಾದರೆ ಅಷ್ಟಾಕ್ಷರೀ ಜಪ ಮತ್ತು ಅರ್ಥಾನುಸಂಧಾನವೇ ನಮಗೆ ದಿಕ್ಕು ಎಂದು ಹೇಳಿರುವರು. ಮುಂದಿನ ಪದ್ಯದಲ್ಲಿ

ಒಣ್ಮುತಿಯಿಲ್ ಪುನಲುರುವಿ ಯೊರುಕಾಲ್ ನಿರ್ಪ,
ಒರುಕಾಲುಂ ಕಾಮುರುಚೀರವುಣನುಳ್ಳ ತಣ್ಮತಿಯುಂ ಕಡಂ
ತಂಡವಿಾಡು ಪೋಕಿ ಯಿರುವಿಶುಬ್ಧಿ ಊಡುಪೋಯ್
ಎಳ್ರುಂದು ಮೇಲ್ವೈ, ತಣ್ಮತಿಯುಂ ಕದಿರವನುಂ
ತವಿರ ವೋಡಿ ತಾರಕೈಯ್ಧಿ ಪುರಂ ತಡವಿ ಯಪ್ಪಾಲ್ ವಿಕ್ಕು,
ಮುಣ್ಮುಳ್ರುದುಂ ಅಕಪ್ಪಡುತ್ತು ನಿನ್ರ ವೆಂದೈ ಮುಲರ್‌ಪುರೈ
ಯುಂ ತಿರುವಡಿಯೇ ವಣಂಗಿನೇನೇ ತಿ–ನೆ–ತಾಂ 5

ಆ ನಾರಾಯಣನೇ ವಾಮನನೆಂದು ಅವನ ಚರಿತ್ರೆಯನ್ನು ವರ್ಣಿಸಿರುವರು. ನಾರಾಯಣೋಪನಿಷತ್ತಿನಲ್ಲಿ

ಕಾಲಶ್ಚ ನಾರಾಯಣಃ, ದಿಶಶ್ಚ ನಾರಾಯಣಃ,
ಊರ್ಧ್ವಶ್ಚ ನಾರಾಯಣಃ, ಅಧಶ್ಚ ನಾರಾಯಣಃ,
ಅಂತರ್ಬಹಿಶ್ಚ ನಾರಾಯಣಃ, ನಾರಾಯಣ ಏವೇದಂ ಸರ್ವಂ

ನಾ–ಉ

ಎಂದಿರುವುದನ್ನು ತಿರುಮಂಗೈ ಆಳ್ವಾರ್ರು "ಮಣ್ಮುಳ್ರುದುಂ ಅಕಪ್ಪಡುತ್ತು ನಿನ್ರ ವೆಂದೈ" ಎಂದು ಹೇಳಿರುವುದನ್ನು ಗೋದೆಯು "ಓಂಗಿ ಉಲಕಳಂದ" ಎಂದು ಗಂಭೀರವಾಗಿ ಸಂಗ್ರಹಿಸಿರುವಳು. ಇಂತಹ ಅಷ್ಟಾಕ್ಷರಿಗೆ ವಾಚ್ಯನಾಗಿ ಉತ್ತಮನಾದ ವಾಮನನ "ಪೇರ್‌ಪಾಡಿ" ನಾಮಸಂಕೀರ್ತನಮಾಡಿ, ಅನುಭವಿಸಿ—ಎಂದಿರುವುದರಿಂದ "ಅಷ್ಟಾಕ್ಷರ ಸಂಸಿದ್ಧಿ ಹೊಂದಿ" ಎಂದು ಅರ್ಥವಾಗುತ್ತದೆ. ನಾರದೀಯ ಸ್ಮೃತಿಯು—

ಯತ್ರಾಷ್ಟಾಕ್ಷರಸಂಸಿದ್ಧಃ ಮಹಾಭಾಗೋ ಮಹೀಯತೇ ।
ನ ತತ್ರ ಸಂಚರಿಷ್ಯಂತಿ ವ್ಯಾಧಿದುರ್ಭಿಕ್ಷತಸ್ಕರಾಃ ॥

ನಾರದೀಯ 1, 20

ಎಂದು ಹೇಳಿ ಅಷ್ಟಾಕ್ಷರ ಜಪಮಾಡಿ ಸಿದ್ಧಿಹೊಂದಿದವನು ಎಲ್ಲಿರುವನೋ ಅಲ್ಲಿ "ವ್ಯಾಧಿ" ಅರಿದರೆ ರಾಗದ್ವೇಷವೆನ್ನುವ ರೋಗವೂ, "ದುರ್ಭಿಕ್ಷ" ಅಂದರೆ ಕೈವಲ್ಯಾಂತ (ಟಿಪ್ಪಣಿ 12) ದಲ್ಲೇ ನಿಲ್ಲುವ ಜ್ಞಾನಸಂಕೋಚವೆನ್ನುವ ಕ್ಷಾಮವೂ,

"ತಸ್ಕರ" ಅಂದರೆ ನಾನು ಸ್ವತಂತ್ರ, ನಾನೂ ಪರಮಾತ್ಮನೂ ಒಂದೇ ಎಂದು ಹೇಳಿಕೊಂಡು ಉಪದೇಶಿಸಿ ಆತ್ಮಾಪಹಾರ ಮಾಡುವ ಕಳ್ಳರೂ ಸಂಚಾರ ಮಾಡುವುದಿಲ್ಲ—ಎನ್ನುವ ಅರ್ಥವನ್ನು ಕೊಟ್ಟಿರುತ್ತದೆ.

ಛಾಂದೋಗ್ಯೋಪನಿಷತ್ತಿನ **"ಉಪಕೊಸಲ"** ವಿದ್ಯೆಯಲ್ಲಿ (IV, 10) ಸತ್ಯಕಾಮ ಜಾಬಾನಿಗೆ ಉಪಕೊಸಲನೆನ್ನುವ ಶಿಷ್ಯನಿದ್ದ. ಅವನು ಬ್ರಹ್ಮೋಪದೇಶಕ್ಕಾಗಿ ಬಹಳ ಕಾಲ ಕಾದಿದ್ದರೂ ಗುರುಗಳು ಪ್ರವಾಸಕ್ಕೆ ಹೊರಟರು. ಆಗ ಶ್ರುತಿಯು ಶಿಷ್ಯನನ್ನು

ಸಹ ವ್ಯಾಧಿನಾ ಅನಶಿತುಂ ದಧ್ರೆ; ತಂ ಆಚಾರ್ಯ
ಜಾಯಾ ಉವಾಚ—"ಬ್ರಹ್ಮಚಾರ್ಯಿ ಅಶಾನ,
ಕಿನ್ನು ನಾಶ್ನಾಸಿ" ಇತಿ; ಸಹೋವಾಚ "ಬಹವ
ಇಮೇ ಅಸ್ಮಿನ್ ಪುರುಷೆ ಕಾಮಾಃ ನಾನಾತ್ಯಯಾಃ
ವ್ಯಾಧಿಭಿಃ ಪ್ರತಿಪೂರ್ಣೋಽಸ್ಮಿ, ನಾಶಿಷ್ಯಾಮಿ ಇತಿ"

ಎಂದು ವರ್ಣಿಸಿದೆ. ಇದರಂತೆ ವ್ಯಾಧಿ ಎಂದರೆ ಶಾರೀರಕ ರೋಗವಲ್ಲ; ಆತ್ಮಕ್ಕೆ ಪರಮಾತ್ಮನ ಪೂರ್ಣಾನುಭನ ಬರದೇ ಇರುವ ಜ್ಞಾನ ಸಂಕೋಚವೆನ್ನುವ ವ್ಯಾಧಿ.

ಇಂತಹ ಮಹಿಮೆಯುಳ್ಳ ಅಷ್ಟಾಕ್ಷರಿಗೆ ವಾಚ್ಯನಾಗಿ

ಓಂಗಿ . . . ಪಾಡಿ—ಎತ್ತರವಾಗಿ ಅಂಡಕಟಾಹವನ್ನು ಸೀಳಿಕೊಂಡು ಬೆಳೆದು ವಿಶ್ವವನ್ನೇ ಅಳೆದುಕೊಂಡ ವಾಮನನ ನಾಮವನ್ನು ಹಾಡಿ

ನಾಂಗಳ್—ಶಿಷ್ಯರಾದ ನಾವು

ನಂ ಪಾವೈಕ್ಕು—ನಮ್ಮ ಆಚಾರ್ಯನಿಷ್ಠೆ ಎನ್ನುವ ವ್ರತಕ್ಕಾಗಿ

ಶಾತ್ತಿ—ಸಂಕಲ್ಪಿಸಿ

ನೀರಾಡಿನಾಲ್—ಆಚಾರ್ಯ ತೀರ್ಥರಲ್ಲಿಗೆ ಹೋಗಿ ಶತ್ರುಘ್ನನು ಭರತನನ್ನೂ, ಮಧುರಕವಿಯು ಶಠಗೋಪರನ್ನೂ ಅಮುದನಾರ್ ಅವರು ಕೂರತ್ತಾಳ್ವಾನನ್ನೂ ಆಶ್ರಯಿಸಿದಂತೆ ಆಶ್ರಯಿಸಿದರೆ

ತೀಂಗಿನ್ರಿ—ದೇಹಾತ್ಮಭ್ರಮ, ಸ್ವತಂತ್ರಾತ್ಮಭ್ರಮ, ಇತರ ದೇವತಾಶೇಷತ್ವ ಭ್ರಮವೆನ್ನುವ ಈತಿಬಾಧೆಯಿಲ್ಲದೆ.

ತಿಂಗಳ್—ಯಾವಾಗಲೂ (ಇದು ಉಪಲಕ್ಷಣಾರ್ಥ)

11ನೇ ಪದ್ಯ ವ್ಯಾಖ್ಯಾನನೋಡಿ

ಮುಂಮಾರಿಪೆಯ್ದು—ಮೂರು ಪ್ರಕಾರದಲ್ಲಿ ಪರಿಷ್ಕಾರಹೊಂದಿ

ಅಷ್ಟಾಕ್ಷರದ ಮೂರು ಪದಗಳ ಅರ್ಥವನ್ನು

ಪದತ್ರಯೇಣ ಸಂಕ್ಷೇಪಾತ್ ಭಾವ್ಯಾನನ್ಯಾರ್ಹಶೇಷತಾ ।
ಅನನ್ಯೋಪಾಯತಾ ಸ್ವಸ್ಯ ತಥಾನನ್ಯಪುರುಷಾರ್ಥತಾ

ಎಂದು ನಿಗಮಾಂತ ದೇಶಿಕರು ಮೂಲ ಮಂತ್ರಾಧಿಕಾರದಲ್ಲಿ ಹೇಳಿರುವಂತೆ

ಓಂ—ಅನ್ನುವುದರಿಂದ–ಅನನ್ಯಾರ್ಹಶೇಷತ್ವವೂ ಅಂದರೆ ನಾನು ನಾರಾಯಣನಲ್ಲದೆ ಮತ್ತಾರಿಗೂ ಶೇಷನಲ್ಲ–ಎಂದೂ

ನಮಃ—ಅನನ್ಯೋಪಾಯತ್ವವೂ–ಅವನಲ್ಲದೆ ಮೋಕ್ಷಕ್ಕೆ ಬೇರೆ ಉಪಾಯವೇ ಇಲ್ಲ ಎಂದೂ

ನಾರಾಯಣಾಯ–ಅನನ್ಯಪುರುಷಾರ್ಥವೂ ಅಂದರೆ ಅವನಲ್ಲದೆ ಬೇರೆ ಪುರುಷಾರ್ಥವೇ ಇಲ್ಲ ಎಂದೂ

ಅರ್ಥವು ಗೋಚರವಾಗಿ

ಓಂಗು . . . ಊಡು—

ಸಮುಯೋಪನತೈಸ್ತವ ಪ್ರವಾಹೈಃ ಅನುಕಂಪೇ ಕೃತಸಂಪ್ರವಾ ಧರಿತ್ರೀ ।
ಶರಣಾಗತಸಸ್ಯಮಾಲಿನೀಯಂ ವೃಷಶೈಲೇಶಕೃಶೀವಲಂ ಧಿನೋತಿ —ದ ಶ ಎಂದು ನಿಗಮಾಂತ ದೇಶಿಕರು ಹೇಳಿರುವಂತೆ ಪ್ರವೃದ್ಧಮಾನವಾದ ಶರಣಾಗತಿ ಧರ್ಮದಲ್ಲಿ

ಕ್ಷುಲುಕಳ—ಮಾನಿನಿಂದ ಉಪಲಕ್ಷಿತಗಳಾದ ತಿರ್ಯಕ್ ಜಂತುಗಳೂ

ಪಶುರ್ಮನುಷ್ಯಃ ಪಕ್ಷೀ ವಾ ಯೇಚ ವೈಷ್ಣವಸಂಶ್ರಯಾಃ
ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ

ಎಂದು ಶಾಂಡಿಲ್ಯಸ್ಮೃತಿಯಲ್ಲಿ (I, 15) ಹೇಳಿರುವಂತೆ ಮೃಗ, ಪಕ್ಷಿ, ಮನುಷ್ಯ ಮೊದಲಾದುವು ಯಾವುದಾದರೂ ವಿಷ್ಣುಭಕ್ತನನ್ನು ಆಶ್ರಯಿಸಿದರೆ ಅದರಿಂದಲೇ ಅವುಗಳಿಗೆ ಮೋಕ್ಷವು ಸಿಗುವುದು.

ಇಲ್ಲಿ ವಿಷ್ಣುಭಕ್ತನೆಂದರೆ ಪ್ರಪನ್ನನಾದ ಆಚಾರ್ಯ; ಹೀಗೆ ತನ್ನ ಭಕ್ತರಾದ ಆಚಾರ್ಯರಿಂದ ಶರಣಾಗತಿ ಧರ್ಮವು ಪ್ರಚಾರಕ್ಕೆ ಬಂದು ತನ್ನ ಸಂಕಲ್ಪವು ಫಲಿಸಿತಲ್ಲಾ ಎಂದು.

ಪೊರಿವಂಡು—ಆರುಕಾಲುಗಳುಳ್ಳ ಭ್ರಮರದಂತೆ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ ಮತ್ತು ತೇಜಸ್ಸೆನ್ನುವ ಆರು ಗುಣಗಳುಳ್ಳ ಪರಮಾತ್ಮನು.

ಕಣ್ ಪಡುಪ್ಪ—ಕಣ್ಣುಮುಚ್ಚಿ ಆನಂದಿಸುತ್ತಿರುವಲ್ಲಿ, ನಾವು,

ತೇಂಗಾದೇ—ಆಚಾರ್ಯರು ಪರೀಕ್ಷೆ ಮಾಡುವರು ಎಂದು ಹೆದರದೇ

ಪುಕ್ಕು—ಅವರ ಹತ್ತಿರಕ್ಕೆ ಹೋಗಿ

ಇರುಂದು—ಅಲ್ಲಿ ನಿಂತು, ಆ ಆಚಾರ್ಯರ

ಶೀರ್ತ—ವೇದಾಂತ ಜ್ಞಾನವೆಂಬ ಹಾಲಿನಿಂದ ತುಂಬಿದ

ಮುಲೈ—ವಾತ್ಸಲ್ಯ ಸೂಚಕವಾದ ಕೆಚ್ಚಲನ್ನು (ಕೆಚ್ಚಲು ಆಚಾರ್ಯರ ವಿಶೇಷ ಕಟಾಕ್ಷವನ್ನು ಸೂಚಿಸುತ್ತದೆ)

ಪತ್ತಿವಾಂಗ—ಹೊಂದಿದರೆ

ಕುಡಂ ನಿರೈಕ್ಕುಂ—ನಮ್ಮ ಹೃದಯವೆಂಬ ಬಿಂದಿಗೆಯನ್ನು (ಜ್ಞಾನದಿಂದ) ತುಂಬುವ

ವಳ್ಳಲ್ ಪೆರುಂ ಪೆಶುಕ್ಕಳ್—ಉದಾರಿಗಳಾದ ಆಚಾರ್ಯರು.

ನೀಂಗಾದ ಶೆಲ್ವಂ ನಿರೈಂದು— ನಾಶವಾಗದ ಐಶ್ವರ್ಯದಿಂದ (ಜ್ಞಾನರೂಪದಲ್ಲಿ) ಹೃದಯವು ತುಂಬುವಂತೆ ಮಾಡುವರು. ಇಲ್ಲಿ 14 ಲೋಕಗಳಿಗೆ ಆಧಾರವಾದ ಹಸುಗಳಂತೆ 14 ವಿದ್ಯಾ ಸಂಪನ್ನರು ಆಚಾರ್ಯರು. ಹಸುಗಳ ನಾಲ್ಕು ಮೊಲೆಗಳಲ್ಲಿ ಹಾಲು ತುಂಬಿರುವಂತೆ ಆಚಾರ್ಯರು 1) ಉಪನಿಷತ್ತು 2) ಬ್ರಹ್ಮಸೂತ್ರ 3) ಗೀತಾ ಮತ್ತು 4) ಭಗವದ್ವಿಷಯ—ಇವುಗಳ ಸಾರವನ್ನು ತುಂಬಿಕೊಂಡಿರುವರು. ಇದರಿಂದ ಅವರು ಬಹಳ ಮೃದುವಾಗಿ ಶಿಷ್ಯನ ವಿಷಯದಲ್ಲಿ ವಾತ್ಸಲ್ಯಪೂರಿತರಾಗಿರುವರು; ಅದಕ್ಕಾಗಿಯೇ ನಿಗಮಾಂತದೇಶಿಕರು ಅವರನ್ನು

ಅನ್ರೀನ್ರ ಕನ್ರುಕ್ಕು ಇರಂಗುಂ ಧೇನುವೈಪ್ಪೊಲೇ
ನಂ ಆಶಿರಿಯರ್

ಎಂದು ವರ್ಣಿಸಿರುವರು. ಹಾಗೆಯೇ

ಕನ್ರಿನ ನಮ್ಮೈ ಎಣ್ಣಿ ಶುರಕ್ಕುಂ ಶುರಭಿಗಳ್
ಪೋಲ್ ಶೊರಿಗಿನ್ರ ನಲ್ ಶೊಲ್ಲಮುದೇ

ಎಂದು ಹೇಳಿ ಶಿಷ್ಯರನ್ನು ಕರುಗಳು ಎಂದಿರುವರು.

ಗೀತಾಮಾಹಾತ್ಮ್ಯವನ್ನು ಹೇಳುವಾಗ

ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್

ಎಂದು ಅನುಸಂಧಾನ ಮಾಡುವಂತೆ ಭಗವದ್ವಿಷಯಕ ಜ್ಞಾನವೇ ಹಾಲು, ಶಿಷ್ಯನೇ ಕರು, ಉಪನಿಷತ್ತನ್ನು ಪ್ರತಿಬಿಂಬಿಸುವ ಆಚಾರ್ಯನೇ ಹಸು.

ಈ ಪದ್ಯವನ್ನು ಪೂರ್ಣವಾಗಿ ಆಚಾರ್ಯ ಪರವಾಗಿಯೂ ಯೋಜಿಸಬಹುದು.

ಓಂಗಿ—ತನ್ನ ಜ್ಞಾನವನ್ನು ತರ್ಕದಿಂದ ಪರಿಷ್ಕರಿಸಿ ಬೆಳೆಯಿಸಿಕೊಂಡು

ಉಲಕಳಂದ—ದಿಗ್ವಿಜಯ ಮಾಡಿದ

ಉತ್ತರ್ಮ—ಆಚಾರ್ಯೋತ್ತಮನು–ಆಚಾರ್ಯರಲ್ಲಿ ಮೂರುವಿಧ

1) ಕರ್ಮಕಾಂಡದಲ್ಲೇ ನಿರತರಾಗಿ ಬ್ರಹ್ಮೋಪದೇಶ ವಿಮುಖರಾಗಿರುವರು ಅಧಮರು;

2) ಕರ್ಮಕಾಂಡೋಪಚರಿತ ಜ್ಞಾನಕಾಂಡ ನಿರತರಾದರೂ ಲೋಕ ಪ್ರೀತ್ಯರ್ಥಕ್ಕಾಗಿ ಅನುಷ್ಠಾನ ವಿಕಲರು ಮಧ್ಯಮರು

3) ಶಾಸ್ತ್ರಜ್ಞಾನದಾರ್ಢ್ಯದಿಂದ ಯಾವ ಪ್ರಜ್ಞೋದನೆಗೂ ಒಳಗಾಗದೆ ಸಾತ್ವಿಕ ಧೈರ್ಯದಿಂದ ಜ್ಞಾನ ಮತ್ತು ಕರ್ಮಕಾಂಡಗಳನ್ನು ಅರ್ಥಮಾಡಿಕೊಂಡು ನಿರ್ಹೇತುಕ ಕರುಣಾಶಾಲಿಗಳಾದವರು ಉತ್ತಮರು

ಇಂತಹ ಆಚಾರ್ಯರ " ಗುರುಂಪ್ರಕಾಶಯೇದ್ಧೀರ್ಮಾ " ಎಂದಿರುವಂತೆ

ಪೇರಸಾಡಿ—ನಾವುಸಂಕೀರ್ತನ ಮಾಡಿ

ನಾಂಗಳ್—ಶಿಷ್ಯರಾದ ನಾವು

ನಂಪಾವೈಕ್ಕು—ನಮ್ಮ ಆಚಾರ್ಯನಿಷ್ಠೆಗೆ

ಕಾತ್ತಿ—ಸಂಕಲ್ಪಿಸಿ, **ನೀರಾಡಿನಾಲ್**—ಆಚಾರ್ಯ ತೀರ್ಥೋಪಾಸನೆಯನ್ನು ಮಾಡಿದರೆ **ತೀಂಗಿನ್ರಿ—ನಾಡೆಲ್ಲಾಂ—ತಿಂಗಳ್ ಮುಮ್ಮಾರಿ ಪೆಯ್ದು**—ಮೊದಲಿನ ಅರ್ಥವೇ—

ಓಂಗು . . . ಉಗಳ—ಜ್ಞಾನವೃದ್ಧರಾದ (ಓಂಗುಪೆರುಂ) ಪ್ರಪನ್ನರ (ಶೆನ್ನೆಲ್) ಸಾನ್ನಿಧ್ಯದಲ್ಲಿ (ಊಡು) ಭಾಗವತರು (ಕಳ್ಗಲ್) ಅವಹಿತರಾಗಿರುವಲ್ಲಿ (ಉಕಳ)

ಸಮುನೋಪನತೈ ಸ್ತವ ಪ್ರವಾಹೈಃ—ಎನ್ನುವ ಶ್ಲೋಕದಲ್ಲಿ ಹೇಳಿರುವಂತೆ ಪ್ರಪನ್ನರೇ ಪೈರು. ಅವರು ಎಷ್ಟು ಬೆಳೆದಿರುವರೆಂದು ನೋಡುತ್ತಿರುವ ಕೃಶೀವಲ ಅಂದರೆ ರೈತ ಪರಮಾತ್ಮಾ

" ಕಳ್ಗಲ್ " ಎಂದರೆ ಮೀನು, ರಾಮಾಯಣದಲ್ಲಿ

ನಚ ಸೀತಾ ತ್ವಯಾಹೀನಾ ನಚಾಹಮಪಿ ರಾಘವ ।
ಮುಹೂರ್ತಮಪಿ ಜೀವಾವಃ ಜಲಾನ್ಮತ್ಸ್ಯವಿವೋದ್ಧೃತೌ ॥

ಎಂದು ಲಕ್ಷ್ಮಣನು ಹೇಳಿರುವಂತೆ, ಮೀನು ನೀರಿಲ್ಲದೇ ಹೇಗೆ ಜೀವಿಸಲಾರದೋ ಹಾಗೆ ಭಾಗವತರು ಭಗವದನುಭವವಿಲ್ಲದೇ ಒಂದು ಕ್ಷಣವೂ ಜೀವಿಸಲಾರರು. ಭಗವದ್ವಿಚ್ಛೇದನವನ್ನು ಒಂದು ಕ್ಷಣವೂ ಸಹಿಸಲಾರರು.

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ

—ಭ. ಗೀ. II

ಎಂದು ಗೀತೆಯು ಹೇಳಿರುವಂತೆ ಭಾಗವತರು ಪ್ರಪಂಚ ವಿಮುಖರು.

ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ

ಎಂದು ಹೇಳಿರುವಂತೆ ಅವರ ದರ್ಶನದಿಂದ ನಮಗೆ ಪಾವನತ್ವವು ಬರುವುದು.

ಕುಲಶೇಖರರು ಅನಂತಶಯನದಲ್ಲಿ ತನ್ನ ಇಷ್ಟದೇವತಾ ಸಾನ್ನಿಧ್ಯವನ್ನು ಹೊಂದಿದ್ದರೂ

ಘುಷ್ಯತೇ ಯಸ್ಯ ನಗರೆ ರಂಗಯಾತ್ರಾ ದಿನೇ ದಿನೇ

ಎಂದಿರುವಂತೆ, ಶ್ರೀರಂಗಕ್ಕೆ ಹೋಗಬೇಕೆಂದು ಯಾವಾಗಲೂ ಆಶಿಸುತ್ತಿದ್ದುದು ಅಲ್ಲಿ ಭಾಗವತ ಸಮೃದ್ಧಿಯಿದೆ ಎನ್ನುವ ಕಾರಣದಿಂದ

ಪೂಂ ಕುವಳೈ ಪೋದಿಲ್—ಹೃದಯ ಕಮಲದಲ್ಲಿ ನಿಂತಿರುವ ಪರಮಾತ್ಮನಲ್ಲೇ ಆಸಕ್ತರಾದ

ಪೊರಿವಂಡು—ಭ್ರಮರದಂತಿರುವ ಆಚಾರ್ಯರು—ಯಾಮುನಾಚಾರ್ಯರು ತನ್ನ ಸ್ತೋತ್ರ ರತ್ನದಲ್ಲಿ

ತವಾಮೃತಸ್ಯಂದಿನಿ ಪಾದಪಂಕಜೇ
ನಿವೇಶಿತಾತ್ಮಾ ಕಥಮನ್ಯದಿಚ್ಛತಿ ।
ಸ್ಥಿತೇರವಿಂದೇ ಮಕರಂದ ನಿರ್ಭರೇ
ಮಧುವ್ರತೋ ನೇಕ್ಷುರಕಂ ಹಿ ವೀಕ್ಷತೇ ॥

ಎಂದು ವರ್ಣಿಸಿರುವಂತೆ ಪರಮಾತ್ಮನ ಪಾದಾರವಿಂದದಲ್ಲಿ ಸಕ್ತರಾದವರು ಆಚಾರ್ಯರು ಭ್ರಮರಪ್ರಾಯರು

ಕಣ್ ಪಡುಪ್ಪ—ಅವನಲ್ಲೇ (ಪರಮಾತ್ಮನಲ್ಲೇ) ಆಸಕ್ತರಾಗಿರುವಲ್ಲಿ, ಅವರ ಸಾನ್ನಿಧ್ಯಕ್ಕೆ

ತೇಂಗಾದೆ . . . . ಏಲೋರ್ ಎಂಪಾವಾಯ್—ಮೊದಲಿನ ಸ್ವಾಪದೇಶಾರ್ಥವೇ

ಆಳಿಮಳೈಕ್ಕಣ್ಣಾ ಒನ್ರು ನೀ ಕೈಕರವೇಲ್
ಆಳಿಯುಳ್ ಪುಕ್ಕು ಮುಗಂದು ಕೊಡಾರ್ತ್ತೇರಿ
ಊಳಿಮುದಲ್ವರ್ ಉರುವಂ ಪೋಲ್ ಮೆಯ್ ಕರುತ್ತು
ಪಾಳಿಯಂತೋಳುಡೈ ಪರ್ಪನಾರ್ಭ ಕೈಯಿಲ್
ಆಳಿಪೋಲ್ ಮಿನ್ನಿ ವಲಂಪುರಿಪೋಲ್ ನಿನ್ರದಿರ್ನ್ದು
ತಾಳಾnದೇ ಶಾರ್ಙ್ಗಮುದೈತ್ತ ಶರಮಳೈಪೋಲ್
ವಾಳ ವುಲಕಿನಿಲ್ ಪೇಯ್ದಿಡಾಯ್ ನಾಂಗಳುಂ
ಮಾರ್ಗಳಿ ನೀರಾಡ ಮಗಿಳ್ಂದೇಲೋರೆಂಪಾವಾಯ್ ॥ ೪ ॥

ಈ ಪಾಶುರದಲ್ಲಿ ಭಾಗವತ ಮಾಹಾತ್ಮ್ಯವು ಹೇಳಲ್ಪಟ್ಟಿದೆ. ಭಾಗವತರು ಕೇವಲ ಭಗವದ್ಭಕ್ತರಲ್ಲ. ಪ್ರಪನ್ನರೂ ಆಗಿರಬೇಕು. ಇಂತಹ ಭಾಗವತರನ್ನು ದೇವತೆಗಳು ಪೂಜಿಸುವರಲ್ಲದೆ ಹೆದರುವರೂ ಕೂಡ.

ದ್ರವಂತಿ ದೈತ್ಯಾಃ ಪ್ರಣಮಂತಿ ದೇವತಾಃ ನಶ್ಯಂತಿ ರಕ್ಷಾಂಸ್ಯ
ಪಯಂತಿ ಚಾರಯಃ । ಯತ್ಕೀರ್ತನಾತ್ ಸೋದ್ಭುತರೂಪಕೇಣ
ಮುಮಾಸ್ತು ಮಾಂಗಲ್ಯವಿವರ್ಧಯೇ ಹರಿಃ

ಎಂದು ಹೇಳಿರುವಂತೆ ಗೋದೆಯು ಮಳೆಯಾಗಿ ಸುಭಿಕ್ಷವಾಗಬೇಕೆಂದು ಸಂಕಲ್ಪ ಮಾಡಿದೊಡನೆ ವರುಣದೇವನು ಓಡಿಬಂದು " ಅಮ್ಮಾ, ಮಳೆಯನ್ನು ಹೇಗೆ ಸುರಿಸಲಿ " ಎಂದು ಕೇಳಿದಾಗ ಹೇಳಿದ ಮಾತು ಈ ಪದ್ಯದಲ್ಲಿದೆ.

ಶ್ರುತಿಯು

1) **ಸರ್ವೇಽಸ್ಮೈ ದೇವಾ ಬಲಿಮಾವಹಂತಿ**

2) **ಭೀಷಾಸ್ಮಾದ್ವಾತಃ ಪವತೇ ; ಭೀಷೋದೇತಿ ಸೂರ್ಯಃ**

ಭೀಷಾಸ್ಮಾದಗ್ನಿಶ್ಚೇಂದ್ರಶ್ಚ ಮೃತ್ಯು ರ್ಧಾವತಿ ಪಂಚಮ ಇತಿ

ಇವೇ ಮೊದಲಾದ ಮಂತ್ರಗಳಿಂದ ಸಮಸ್ತ ದೇವತೆಗಳೂ ಪರಮಾತ್ಮನ ಕಿಂಕರರು ಮತ್ತು ಅವರು ಅವನಿಗೆ ಹೆದರುವರು ಎಂದು ತಿಳಿಸಿರುತ್ತದೆ. ಇಂತಹ ಭಾಗವತರು ನನಗೆ ಆತ್ಮಭೂತರೆಂದು ಶ್ರೀಕೃಷ್ಣನು

ಸಮೋಹಂ ಸರ್ವಭೂತೇಷು ನಮೇ ದ್ವೇಷ್ಯೋಽಸ್ತಿ ನಪ್ರಿಯಃ
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಂ ॥

ಎನ್ನುವ (IX–29) ಶ್ಲೋಕದಲ್ಲಿ ತಿಳಿಸಿರುವನು. ಅಂದರೆ " ಭಾಗವತರ ಇಚ್ಛೆ ನನ್ನ ಇಚ್ಛೆ; ಅವರಿಗೆ ಪ್ರಿಯವಾದವರು ನನಗೂ ಪ್ರಿಯ; ಅವರಿಗೆ ದ್ವೇಷಿಗಳು ನನಗೂ ದ್ವೇಷಿಗಳು " ಎನ್ನುವ ಅರ್ಥಬರುತ್ತದೆ. ಅದರಂತೆ ವರುಣದೇವನು ಗೋದೆಯ ಇಚ್ಛೆಯನ್ನು ಆಜ್ಞೆಯೆಂದು ತಿಳಿದು ಅದನ್ನು ಪಾಲನೇ ಮಾಡಲು ಬಂದನೆಂದು 3 ಮತ್ತು 4ನೇ ಪದ್ಯಗಳ ಅಂತರದಲ್ಲಿ ಊಹಿಸಬೇಕು.

ಪರಮಾತ್ಮನಲ್ಲಿ ಪ್ರೀತಿಯಿಂದ ತನ್ನನ್ನು ಅರ್ಪಣ ಮಾಡಿಕೊಂಡಿರುವರು ಮಾತ್ರ ಪರಮಾತ್ಮನಿಗೆ ಪ್ರಿಯರೆಲ್ಲ ಅವನ ನಾಮ ಸಂಕೀರ್ತನಮಾಡಿದರೆ ಸಾಕು, ಅವರು ಅವನಿಗೆ ಪ್ರಿಯರಾಗಿ ಮುಕ್ತರಾಗುವರು. 2 ನೇ ಪಾಶುರದಲ್ಲಿ " ಪರಮ್ಮ ಅಡಿಪಾಡಿ " ಎಂತಲೂ, 3 ನೇ ಪದ್ಯದಲ್ಲಿ " ಉತ್ತಮ್ಮ ಪೇರ್ ಪಾಡಿ " ಎಂತಲೂ, ಎಲ್ಲ ಗೋಪಿಯರನ್ನು ಗೊದೆಯು ಕರೆಯುತ್ತಲೇ ವರುಣನಿಗೆ ತೋರಿತು " ಇನ್ನೇನು ಪರಮಾತ್ಮನ ನಾಮ ಸಂಕೀರ್ತ ಮಾಡುವವರ ಗುಂಪೇ ಸೇರುವುದು; ಇವರೆಲ್ಲರ ಸೇವೆಮಾಡದಿದ್ದರೆ ನನ್ನ ಅಧಿಕಾರವುಳಿಯುವುದೋ ಇಲ್ಲವೋ " ಎಂದಂಜಿ ವರುಣನು ಬಂದು " ಹೇಗೆ ಮಳೆಯನ್ನು ಸುರಿಸಲಿ " ಎಂದು ಕೇಳಿದನೆಂದು ತಿಳಿಯುವುದು ಸರಿಯಾಗಿದೆ.

ಭಗವನ್ನಾಮ ಸಂಕೀರ್ತನವು ಸಂಸಾರತಾರಕವೆನ್ನುವುದಕ್ಕೆ ಅಜಮಿಳೋಪಾಖ್ಯಾನವೇ ಒಂದು ನಿದರ್ಶನ

ಅಜಮಿಳನು ಕನ್ಯಾಕುಬ್ಜದ ಒಬ್ಬ ಬ್ರಾಹ್ಮಣ; ಸಕಲ ಶಾಸ್ತ್ರವನ್ನು ತಿಳಿದಿದ್ದರೂ

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।

—ಗೀ.–III–33

ಎಂದು ಗೀತೆಯಲ್ಲಿ ಹೇಳಿರುವಂತೆ ಒಬ್ಬ ನೀಚ ಜಾತಿಸ್ತ್ರೀಯಲ್ಲಿ ಮೋಹಗೊಂಡು ಅವಳ ಜಾತಿಗೆ ಸೇರಿ ಬ್ರಾಹ್ಮಣ್ಯವನ್ನು ಪೂರ್ಣವಾಗಿ ಕಳೆದುಕೊಂಡನು. ಅವಳಲ್ಲಿ ಅವನಿಗೆ ಹತ್ತುಮಕ್ಕಳಾದವು. ಕೊನೆಯ ಮಗನಿಗೆ ದೈವ ಸಂಕಲ್ಪದಿಂದ " ನಾರಾಯಣ " ಎಂದು ಹೆಸರಿಟ್ಟು ಬಹಳ ಪ್ರೀತಿಸುತ್ತಿದ್ದನು. ಮರಣಕಾಲವು ಸಮೀಪಿಸಿತು.

ಇವನು ಮಾಡಿದ ಫಲವಾಗಿ ನರಕಕ್ಕೆ ಕರೆದೊಯ್ಯಲು ಬಂದರು ಯಮಭೂತರು. ಆದರೆ ಇವನ ಜ್ಞಾನಾಜ್ಞಾನದಲ್ಲಿ

ಯಂ ಯಂ ವಾಪಿ ಸ್ಮರ್ಭಾವಂ ತ್ಯಜತ್ಯಂತೇ ಕಳೇಬರಂ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥ —ಗೀ. VIII

ಎಂದು ಗೀತೆಯು ಹೇಳಿರುವಂತೆ " ನಾರಾಯಣ, ನಾರಾಯಣ " ಎಂದು ತನ್ನ ಮಗನನ್ನು ನೆನೆಯುತ್ತಿದ್ದುದರಿಂದ ಅವನಲ್ಲಿಗೆ ವಿಷ್ಣುದೂತರು ವೈಕುಂಠದಿಂದ ಬಂದು ಯಮಭೂತರನ್ನು ತಡೆದರು. ಆಗ ಅವರು ಹೇಳಿದ ಮಾತಿದು.

ಯದಾ ನಾರಾಯಣಾಯೇತಿ ಜಗಾದ ಚತುರಕ್ಷರಂ ।
ಸ್ತೇನಃ ಸುರಾಪೋ ಮಿತ್ರದ್ರುಕ್ ಬ್ರಹ್ಮಹಾ ಗುರುತಲ್ಪಗಃ ।
ಸ್ತ್ರೀರಾಜಪಿತೃಗೋಹಂತಾ ಯೇಚ ಪಾತಕಿನೋ ಪರೇ ।
ಸರ್ವೇಷಾಮಪ್ಯಘವತಾಂ ಇದಮೇವ ಸುನಿಷ್ಕೃತಂ ॥
ನಾಮವ್ಯಾಹರಣಂ ವಿಷ್ಣೋಃ ಯತಸ್ತದ್ವಿಷಯಾ ಮತಿಃ ॥

—ಭಾಗ VI 2, 8–10

ಆಥೈನಂ ಮಾಪನಯಥ ಕೃತಾಶೇಷಾಘನಿಷ್ಕೃತಂ ।
ಯದಸೌ ಭಗವನ್ನಾಮ ಮ್ರಿಯಮಾಣಃ ಸಮಗ್ರಹೀತ್
ಸಂಕೀರ್ತ್ಯ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ॥
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ —13–14

ಹೀಗೆ ಜ್ಞಾನದಿಂದಲೋ ಅಜ್ಞಾನದಿಂದಲೋ ಭಗವನ್ನಾಮ ಸಂಕೀರ್ತನಮಾಡುವುದರಿಂದ ಮುಕ್ತಿಫಲವು ಲಬಿಸುವಲ್ಲಿ ಭಕ್ತಿಯಿಂದ ಭಗವನ್ನಾಮಸಂಕೀರ್ತನ ಮಾಡಿದರೆ ವಿಶ್ವಪ್ರಭುಗಳು ಅವರ ಆಜ್ಞಾಪಾಲಕರಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಇಲ್ಲಿ ಸ್ವಲ್ಪ ವೇದಾಂತಜ್ಞಾನವುಳ್ಳವರಿಗೆ ಒಂದು ಸಂಶಯವು ತೋರಬಹುದು. ಪರಮಾತ್ಮನು ಕರ್ಮಾಧ್ಯಕ್ಷನಾಗಿ ಅವರವರ ಕರ್ಮಫಲವನ್ನು ಕೊಡುವನಾದುದರಿಂದ ಅವನ ಸಂಕಲ್ಪಕ್ಕೆ ವಿರುದ್ಧವಾಗಿ ಇಂದ್ರಾದಿ ದೇವತೆಗಳು ನಡೆದು ಗೋದೆಯ ಇಚ್ಛಾಪೂರ್ತಿಮಾಡಲು ಹೇಗೆ ಸಿದ್ಧರಾಗಬಲ್ಲರು ಎಂದು. ಪ್ರಪನ್ನರಾದವರು ಭಕ್ತರಾದರೆ ಅವರು ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧವಾಗಿ ಸಂಕಲ್ಪಿಸಲು ಸಮರ್ಥರಾಗುವುದಿಲ್ಲ. ಇಲ್ಲಿ ಗೋದೆಯ ಸಂಕಲ್ಪವು ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧವಾಗಿಲ್ಲ. ಅಹಂಕಾರ ಮಮಕಾರಗಳನ್ನು ತೊರೆದು ಕೇವಲ ತ್ಯಾಗಜೀವಿಗಳಾದರೆ ಪರಮಾತ್ಮ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವ ಸಂಭವವೇ ಇಲ್ಲ.

ಈ ವಿಷಯದಲ್ಲಿ ನಿಗಮಾಂತದೇಶಿಕರು ಸಮಾಧಾನವನ್ನು " ವಿರೋಧ ಪರಿಹಾರ–ಮೂಲ ಮಂತ್ರಾಧಿಕಾರ "ದಲ್ಲಿ ಹೀಗೆ ಕೊಟ್ಟಿರುವರು.

" ರಾಜ ಸ್ವಾತಂತ್ರ್ಯತ್ತಾಲೆ ರಾಜದಾಸ್ಯ ತದೀಯ ದಾಸನಾಂ ಪೋದು ವಿರೋಧಮಿಲ್ಲೈ; ಇಂಗುಂ ಇಪ್ಪಡಿಯೇ ಭಗವಸ್ಸಂಕಲ್ಪತ್ತಾಲೇ ಒರು

ಜೀವನುಕ್ಕು ಒರು ಜೀರ್ವ ದಾಸನಾಕ ಕುರೈಯಿಲ್ಲೈ; ಅದಿಲ್ "ಅಡಿಯಾರುಕ್ಕು ಎನ್ನೈಯಾಳ್ ಪಡುತ್ತ ವಿಮರ್ಲ" (ಅಮಲನಾದಿಪಿರ್ಪಾ) ಎಗಿರ ಪಡಿಯೇ ಭಾಗವತ ವಿಷಯತ್ತಿಲ್ ವರುಂ ದಾಸ್ಯಂ ಅನುಗ್ರಪ ಫಲಮಾಯ್ ನಿರಂ ಪೆತ್ತಿರುಕ್ಕುಂ"

ಹಿಂದೆ ಪಾಂಡ್ಯದೇಶದಲ್ಲಿ (ಮದುರೆ) ಒಬ್ಬ ದೊರೆ ಇದ್ದನು; ಅವನು ಪರಾಕ್ರಮಶಾಲಿ; ಒಂದು ಕಾಲದಲ್ಲಿ ದೇವತೆಗಳಿಗೂ ಸಹಾಯಮಾಡಿದನು. ಸಂತುಷ್ಟನಾದ ಇಂದ್ರನು "ಮಹಾರಾಜ, ನಿನ್ನ ಒಂದು ಇಷ್ಟಾರ್ಥವನ್ನು ಪೂರ್ತಿಮಾಡಲಿಚ್ಛಿಸುತ್ತೀನೆ ಕೇಳು." ಎಂದಾಗ ಧೊರೆಯು "ಮಹೇಂದ್ರ, ನನ್ನ ದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಾಗದೇ ಯಾವಾಗಲೂ ಸುಭಿಕ್ಷತೆ ಇರಬೇಕು" ಎಂದು ಕೇಳಿದನು. ಇತರ ದೇವತೆಗಳು ಇದಕ್ಕೆ ಸಮ್ಮತಿಸಲಿಲ್ಲ. ಮಳೆಯ ಅಭಿಮಾನಿ ದೇವತೆಗಂತೂ ಹಿಡಿಸಲೇ ಇಲ್ಲ. ಧೊರೆಗೆ ಕೋಪಬಂದು ಮಳೆಯ ಅಭಿಮಾನಿ ದೇವತೆಗಳನ್ನೆಲ್ಲಾ ಸೆರೆಯಲ್ಲಿಟ್ಟನು. ಎಲ್ಲೆಲ್ಲೂ ದುರ್ಭಿಕ್ಷವು ತಲೆದೋರಿತು. ಅವನು ಪರಮ ಭಕ್ತನಾದುದರಿಂದ ಎಲ್ಲಾ ದೇವತೆಗಳೂ ತಲೆಬಾಗುವಂತಾಯಿತು. ಅನಂತರ ಅವರೆಲ್ಲರೂ ಅವನ ಮಾತನ್ನು ನಡೆಯಿಸಿಕೊಡುವೆವೆಂದು ವಾಗ್ದಾನಮಾಡಿದಮೇಲೆ ಅವರನ್ನು ವಿಮುಕ್ತಿಗೊಳಿಸಿದನಂತೆ. ಇದನ್ನು ನಿಗಮಾಂತದೇಶಿಕರು ತನ್ನ ಹಂಸ ಸಂದೇಶಕಾವ್ಯದಲ್ಲಿ

ಈಶಾದಸ್ಮಾಣ್ಮಧಿಗತವತಾಂ ಕ್ಷತ್ರಿಯಾಣಾಂ ಪ್ರಭಾವಾತ್ ।
ಕಾರಾವಾಸಸ್ಮರಣಚಕಿತೈಃ ಸಿಕ್ತಸಸ್ಯಾಂ ಪಯೋದ್ಯೈಃ ॥
ಪಶ್ಯ ಯಾಯಾಃ ಪರಮಲಕಯಾ ಸ್ಪರ್ಧಮಾನೈರಜಸ್ರಂ ।
ಪುಣ್ಯಾವಾಸೈಃ ಪುರಜನಪದೈಃ ಪಂಡಿತಾರ್ಹಾಂ ಪಾಂಡ್ಯದೇಶಾರ್ ॥ –50

ರಾಮನು ಸೀತಾನ್ವೇಷಣವಾದ ಮೇಲೆ ತನ್ನ ವಿರಹದಶೆಯಲ್ಲಿ ಒಂದು ಹಂಸದ ಮೂಲಕ ಸೀತೆಗೆ ತನ್ನ ಸಂದೇಶವನ್ನು ಕಳುಹಿಸಿದಾಗ ಆ ಹಂಸಕ್ಕೆ ಹೇಳಿದ ಮಾತುಗಳಲ್ಲಿ ಇದು ಒಂದು. "ಎಲೈ ಹಂಸವೇ, ಪಾಂಡ್ಯದೇಶವು ಸುಭಿಕ್ಷವಾಗಿದೆ. ಅಲ್ಲಿ ನಿಲ್ಲಲು ಮನಮಾಡಬೇಡ; ನೋಡಿ ಸಂತೋಷಪಟ್ಟು ಮುಂದೆ ಸಾಗು" ಎಂದು ಹೇಳಿ ಹಾಗೆ ಅಲ್ಲಿ ಸುಭಿಕ್ಷತೆಯು ಇರಲು ಕಾರಣವನ್ನು ಮೇಲೆ ಹೇಳಿದ ಕಥೆಯನ್ನು ಸೂಕ್ಷ್ಮವಾಗಿ ತಿಳಿಸಿಕೊಟ್ಟಿರುವರು. ಪಾಂಡ್ಯದೇಶದ ರಾಜ ಈಶ್ವರ ಭಕ್ತ. ಅವನಿಗೆ ಪರ್ಜನ್ಯ ದೇವನು ಹೆದರಿದರೆ ಭೂದೇವಿಯ ಅವತಾರವಾಗಿ, ಪರಮ ವಿಷ್ಣು ಭಕ್ತೆಯಾದ ಗೋದೆಗೆ ಹೆದರುವುದು ಕೈಮುತ್ಯನ್ಯಾಯದಿಂದ (ಟಿಪ್ಪಣಿ 13) ಸಿದ್ಧವಾಗುತ್ತದೆ.

ಭೂಮಿ ಮೊದಲಾದ ಎಂಟು ತತ್ವಗಳ ಮೂರ್ತಿಯನ್ನು ಹೊಂದಿರುವನೇ ಈಶ್ವರ, ಈ ಅಷ್ಟಮೂರ್ತಿಗಳಲ್ಲಿ ಪ್ರತ್ಯೇಕ ಜೀತನಗಳಿವೆ. ಅವುಗಳಿಗೆ ಶಕ್ತಿಗಳೂ ಬಿನ್ನಭಿನ್ನಗಳಾಗಿವೆ. ಆಶಕ್ತಿಗಳಿಗೆಲ್ಲಾ ನಿಯಂತೃಸ್ಥಾನದಲ್ಲಿ ಈಶ್ವರ ಶಕ್ತಿಯಿದೆ.

ಈ ಶಕ್ತಿಯೇ ಪಾರ್ವತೀತತ್ವ. ಈರೀತಿಯು ಸ್ಮೃತಿ ಅಭಿಪ್ರಾಯದಿಂದಲೇ ಶೈವ ಸಂಪ್ರದಾಯವು ತನ್ನ ಸಿದ್ಧಾಂತವನ್ನು ರೂಪಿಸಿಕೊಂಡಿದೆ. ಈ ಶಕ್ತಿ ಸಿದ್ಧಾಂತ ನಿರೂಪಣವನ್ನು ವಿಷ್ಣುಪುರಾಣ VI, 7 ಅಧ್ಯಾಯದಲ್ಲಿ ಖಾಂಡಿಕ್ಯ ಕೇಶಿಧ್ವಜ ಸಂವಾದದಲ್ಲಿ ವಿಸ್ತಾರವಾಗಿ ನೋಡಬಹುದು.

ಪ್ರಧಾನವಾಗಿ ನಮಗೆ ಕಾಣುವುದು ಮೂರು ವಿಧ ಶಕ್ತಿ. ಆದರೆ ಆಧುನಿಕ ವಿಜ್ಞಾನವು ಪ್ರಾಕೃತಿಕ ಶಕ್ತಿಯೊಂದನ್ನೇ ನಂಬಿದೆ. ಅದರಲ್ಲೇ ವಿಶ್ವಾಸವಿಟ್ಟಿದೆ. ಅದೇ ದೈವವೆಂದು ಹೇಳುತ್ತಿದೆ. ಇದಕ್ಕೆ ಅದು ಕೊಟ್ಟಿರುವ ಹೆಸರು Nisus ಎಂದು. "ನೀಸಸ್" (Nisus) ಎಂದರೆ ಅಂಧ ಶಕ್ತಿ (blind energy). ಮಾನವ ಶಕ್ತಿಯು ಇದಕ್ಕೆ ಮಿಂಚಿದ್ದೆಂದು ಈಗೀಗ ಹೇಳುತ್ತಿದೆ. ಅದರಿಂದಲೇ ವಿಶ್ವವನ್ನೇ ಜಯಿಸುವ ಶಕ್ತಿ ಮಾನವನಿಗಿದೆಯೆಂದು ನಂಬಿದೆ. ವಿಶ್ವದಲ್ಲಿ ಒಂದು ನಿಯತಿಯಿದೆ. ಇದು ಸ್ವಾಭಾವಿಕವಾಗಿ ವ್ಯತ್ಯಾಸವಾಗದ ಶಕ್ತಿ. ಇದರಿಂದಲೇ ವಿಜ್ಞಾನವು ನಿರ್ದಿಷ್ಟ ವಿಶ್ವನೀತಿಯನ್ನು (Universal laws) ಸ್ಥಾಪಿಸಿಕೊಂಡು ಮುಂದೆ ಮುಂದೆ ಸಾಗುತ್ತಿದೆ. ಮಾನವ ಶಕ್ತಿಯಲ್ಲಿ ತಾರತಮ್ಯವಿದೆ.

ಸರ್ವಭೂತೇಷು, ಭೂಪಾಲ, ತಾರತಮ್ಯೇನ ವರ್ತತೇ

—ವಿ. ಪು. VI, 7–63,

ಪ್ರಾಣವಿಲ್ಲದ ಅಚೇತನಪ್ರಾಯ ಜೀವಶಕ್ತಿಯಿಂದ ಹಿಡಿದು ಚತುರ್ಮುಖ ಶಕ್ತಿಯವರಿಗೂ ಪರ್ವಗಳಿವೆ. ಇವನ್ನು ತಿಳಿದುಕೊಳ್ಳುವುದರಿಂದ ಮಾನವನು ಉತ್ತರೋತ್ತರ ಜನ್ಮಗಳಲ್ಲಿ ತಾರತಮ್ಯದಿಂದ ಜ್ಞಾನಪರ್ವವನ್ನು ಹೊಂದಬಹುದು. ಮಾನವ ಸಂಸ್ಕೃತಿಯು ಉತ್ತರೋತ್ತರಕಾಲದಲ್ಲಿ ಉತ್ತಮಗೊಳ್ಳುತ್ತಾ ಸಾಗುತ್ತಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. (Civilization is a progressive civic advancement). ಈ ಭಾವಕ್ಕೆ ಅನುಗುಣವಾಗಿ ಪಾರಮಾರ್ಥಿಕದಲ್ಲಿ ದೃಷ್ಟಿಯುಳ್ಳವರು ಶೈವಸಂಪ್ರದಾಯದಲ್ಲಿ ವಿಶ್ವಾಸವುಳ್ಳವರಾಗುತ್ತಾರೆ. ಶೈವಸಂಪ್ರದಾಯವು ಎಲ್ಲೆಲ್ಲೂ ವ್ಯಾಪಿಸಿರಲು ಇದೇ ಕಾರಣ. ವಿಶ್ವವ್ಯಾಪಿತ್ವವನ್ನೇ ಗುರಿಯಾಗಿಟ್ಟು ಕೊಂಡಿರುವ ವೇದಾಂತಿಗಳು ಬೌದ್ಧ ದರ್ಶನವನ್ನೋ ಜೈನ ದರ್ಶನವನ್ನೋ ಅಥವಾ ಶಿವಾದ್ವೈತವನ್ನೋ ಅವಲಂಬಿಸಿರುವರು. ವೇದಪ್ರಾಮಾಣ್ಯವನ್ನು ಸ್ವೀಕಾರ ಮಾಡುವವರಲ್ಲಿ ಕೆಲವರು ವಿಶ್ವಾತೀತ ತತ್ವವನ್ನು ನಂಬಿ ವಿಶ್ವವು ಅದರ ಮಾಯಾ ಸ್ವರೂಪವೆಂದೂ ಉಪದೇಶಿಸುತ್ತಿರುವರು. ವಿಷ್ಣುಪುರಾಣವು ಈ ವಿಷಯದಲ್ಲಿ ನಿರ್ಧಾರಕೊಡುವಾಗ

ಸಮಸ್ತಾಶ್ಚ ಶಕ್ತಯ ಶ್ಚೈತಾಃ ನೃಪ ಯತ್ರ ಪ್ರತಿಷ್ಠಿತಾಃ ।
ತದ್ವಿಶ್ವರೂಪ ವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥

ಎಂದು ಹೇಳಿರುತ್ತದೆ. ಈ ವಿಷ್ಣು ಶಕ್ತಿಯೇ ಮೂರನೇ ಶಕ್ತಿ ಸರ್ವನಿಯಂತೃ ಸ್ಥಾನದಲ್ಲಿರುವುದು. ಶ್ರೀವೈಷ್ಣವ ಸಂಪ್ರದಾಯದಲ್ಲಿ ಶ್ರುತಿ ಮತ್ತು ಸ್ಮೃತಿಗೆ

ಯಾವ ಭಿನ್ನಾಭಿಪ್ರಾಯವೂ ಬರದಂತೆ ಶಕ್ತಿ ಸಿದ್ಧಾಂತವನ್ನು ನೋಡಬಹುದು. ಮಹೇಶ್ವರ ಮತ್ತು ಪಾರ್ವತೀ ಎರಡು ದೇವತೆಗಳೂ ಭೂದೇವಿಯ ಶಕ್ತಿಯಿಂದ ನಿಯಮಿಸಲ್ಪಟ್ಟಿಡುತ್ತಾರೆನ್ನುವುದಕ್ಕೆ ವಿಪುಲ ಪ್ರಮಾಣವಿದೆ. ಭೂಸೂಕ್ತವನ್ನು ಶಾಸ್ತ್ರೀಯ ರೀತಿಯಲ್ಲಿ ಅರ್ಥ ಮಾಡಿಕೊಂಡರೆ ಸಾಕು. ಪ್ರಕೃತಿ ಶಕ್ತಿ ಸಂಬಂಧದಿಂದ ಈಶ್ವರ ಪಾರ್ವತೀ ತತ್ವನಿರ್ಣಯ; ಚೇತನರ ಸಂಬಂಧದಿಂದ ಭೂತತ್ವ ನಿರ್ಣಯ. ಇದರ ವಿಸ್ತಾರವನ್ನು ಗ್ರಂಥಕರ್ತೃವಿನ "ಭೂತತ್ವನಿರ್ಣಯ" ವೆನ್ನುವ ಗ್ರಂಥದಲ್ಲಿ ನೋಡಬಹುದು.

ಪ್ರಕೃತ, ಇಲ್ಲಿ ವರುಣದೇವನು ಸಾಕ್ಷಾತ್ತಾಗಿ ಫಲಪ್ರದನೆಂದು ಗೋದೆಯು ತಿಳಿದಿಲ್ಲ. ಹಾಗೆ ಅವಳು ತಿಳಿದಿದ್ದಳೆಂದು ನಾವು ಭಾವಿಸಿದರೆ ಅದು ಅವಳ ಪಾರಮೈಕಾಂತ್ಯಕ್ಕೆ (ಟಿಪ್ಪಣಿ 14) ಲೋಪ ಬಂದೀತು. ಮೊದಲನೇ ಪದ್ಯದಲ್ಲಿ ಪರತ್ವವನ್ನೂ ಎರಡನೆಯದರಲ್ಲಿ ಅವತಾರಗಳಿಗೆ ಮೂಲರೂಪವಾದ ಪುರುಷಸೂಕ್ತ ಪ್ರತಿಪಾದ್ಯ ದೈವವಾದ ಅನಿರುದ್ಧರೂಪವನ್ನೂ, ಮೂರನೆಯದರಲ್ಲಿ ಪರತ್ವಸೂಚಕ ವಿಭವಾವತಾರಗಳಲ್ಲಿ ಪ್ರಧಾನವಾದ ತ್ರಿವಿಕ್ರಮರೂಪವನ್ನೂ ಹೇಳಿ ಈಗ ನಾಲ್ಕನೆಯದರಲ್ಲಿ ಅಂತರ್ಯಾಮಿ ಸ್ವರೂಪವನ್ನು ವರ್ಣಿಸಿರುವಳು. ಶ್ರೀಕೃಷ್ಣನು ಗೀತೆಯಲ್ಲಿ

ಯೇ ಯಥಾ ಮಾಂ ಪ್ರಪದ್ಯಂತೇ ತಾ ಸ್ತಥೈವ ಭಜಾಮ್ಯಹಂ। IV
ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ।
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ। VII, 21
ಯಾಂತಿ ದೇವವ್ರತಾ ದೇವಾ ಪಿತೃಂಶ್ಚ ಯಾಂತಿ ಪಿತೃವ್ರತಾಃ।
ಭೂತಾನಿ ಯಾಂತಿ ಭೂತೇಜ್ಯಾಃ ಯಾಂತಿ ಮದ್ಯಾಜಿನೋಪಿ ಮಾಂ॥
IX–21

ಎನ್ನುವ ಶ್ಲೋಕಗಳಲ್ಲಿ ಭಾವನಾ ತಾರತಮ್ಯದಿಂದ ಫಲತಾರತಮ್ಯವೆಂದು ಹೇಳಿರುವನು. ಈ ಅರ್ಥವನ್ನು ಗೋದೆಯು ಪದ್ಯದ ಮೊದಲೇ ಕರೆದಿರುವ ಸಂಬೋಧನೆಯಿಂದ ತಿಳಿಯಬಹುದು.

ಆ�ழிಮಳೈಕ್ಕಣ್ಣಾ–"ಆ�ழಿಮಳೈಕ್ಕು ಅಣ್ಣಾ" ಅಥವಾ "ಆ�ழಿಮಳೈ ಕಣ್ಣಾ" ಎಂದು ಪದಚ್ಛೇದಮಾಡಬಹುದು. ಮೊದಲನೇ ಛೇದದಿಂದ "ಮಂಡಲ ವರ್ಷಕ್ಕೆ ಅಧ್ಯಕ್ಷನಾದ ವರುಣ ದೇವನೇ" ಎಂದು ಅರ್ಥವಾಗುತ್ತದೆ. ಇದಕ್ಕಿಂತಲೂ ಎರಡನೇ ಛೇದವೇ ಸಾಧುವೆಂದು ಆಚಾರ್ಯರ ಅಭಿಪ್ರಾಯ. ಶ್ರೀಕೃಷ್ಣನಲ್ಲಿಯೇ ಇವಳ ಮನಸ್ಸು ಆಸಕ್ತವಾಗಿತ್ತು. ಯಾವನಿಗೆ ಯಾವುದರಲ್ಲಿ ಆಸಕ್ತಿಯಿರುವುದೋ ಅವನಿಗೆ ಮತ್ತಾವ ವಿಷಯದಲ್ಲಿ ಪ್ರವರ್ತಿಸುವಂತಾದರೂ ಆಸಕ್ತ ವಿಷಯವನ್ನೇ ಹೇಳುವಂತಾಗುತ್ತದೆ. ಭಾಗವತದಲ್ಲಿ ಗೋಪಿಯರು ಹಾಲು ಮೊಸರು ಮಾರುವಾಗ "ಹಾಲುಬೇಕೆ ಮೊಸರುಬೇಕೇ" ಎನ್ನುವುದಕ್ಕೆ ಬದಲಾಗಿ "ಗೋವಿಂದಬೇಕೇ? ದಾಮೋದರಬೇಕೇ" ಎಂದು ಹೇಳಿಕೊಂಡು ಹೋಗುತ್ತಿದ್ದರಂತೆ (6ನೇ ಪಾಶುರವನ್ನು

ನೋಡಿ). ಹಾಗೆಯೇ ಇಲ್ಲಿ ಗೋದೆಯು "ಮಂಡಲ ವರ್ಷಕೊಡುವ ಕಣ್ಣಾ" ಎಂದು ಕರೆದಿರುವಳು. ಗೋವರ್ಧನೋದ್ಧರಣವನ್ನೇ ನೆನೆಯುತ್ತಿದ್ದ ಇವಳಿಗೆ ಶ್ರೀಕೃಷ್ಣನೇ ಸರ್ವದೇವತೆಗಳಿಗೂ ಅಂತರ್ಯಾಮಿಯೆನ್ನುವ ತಿಳಿವಿನಿಂದ "ಮಂಡಲ ವರ್ಷಕ್ಕೆ ಅಧಿಪನಾದ ವರುಣನಿಗೆ ಅಂತರ್ಯಾಮಿ ಯಾಗಿರುವ ಕಣ್ಣಾ" ಎನ್ನುವ ಅರ್ಥದಲ್ಲೂ ಕರೆದಿರುವಳು. ಶ್ರೀಕೃಷ್ಣನು ಗೋಪರಿಗೆ

ರಜಸೋತ್ಪಾದಿತಾ ಮೇಘಾಃ ವರ್ಷಂತ್ಯಂಭೂನಿ ಸರ್ವಶಃ।
ಪ್ರಜಾಸ್ತೈರೇವ ಸಿಧ್ಯಂತಿ ಮಹೇಂದ್ರಃ ಕಿಂ ಕರಿಷ್ಯತಿ॥

ಎಂದು ಹೇಳಿ ಇಂದ್ರವ್ರತವನ್ನು ತಪ್ಪಿಸಿ ತಾನು ಗೋವರ್ಧನ ಪರ್ವತವನ್ನು ಆವರಿಸಿ ಗೋಪರು ಕೊಟ್ಟ ಹವಿಸ್ಸನ್ನು ಸ್ವೀಕರಿಸಿ, ಇಂದ್ರನ ಕೋಪದಿಂದ ಪ್ರಳಯಸದೃಶ ಮಳೆಯು ತಲೆದೋರಿದಾಗ ಗೋವರ್ಧನವನ್ನೇ ಕೊಡೆಯಾಗಿ ಎತ್ತಿಹಿಡಿದ ಲೀಲೆಯು ಇವಳ ಮನಸ್ಸಿನಲ್ಲಿ ತುಂಬಿದ್ದರಿಂದ "ಕಣ್ಣಾ" ಎಂದಲ್ಲದೇ ಬೇರೆ ಪದವೇ ಹೊರಡದಾಯಿತು.

ಮತ್ತೊಂದು ಯೋಜನೆಯಿಂದ "ಸಮುದ್ರದಂತೆ ಗಂಭೀರವಾದ ಸ್ವಭಾವವುಳ್ಳ ಕಣ್ಣಾ" ಎನ್ನುವಅರ್ಥವನ್ನೂ ಹೇಳಲಾಗಿದೆ.

ಒನ್ರುನೀಕ್ಕೈಕರವೇಲ್—ನೀನು, ಒಂದು ಪ್ರಕಾರದಲ್ಲೂ ನಿನ್ನ ಔದಾರ್ಯವನ್ನು ಬಿಡದೇ—ಹೀಗೆ ಹೇಳಿರುವುದರಿಂದ "ಹೇ" ಪರಮಾತ್ಮ, ಗೋಪರು ನಾವು ಪರ್ಜನ್ಯ ದೇವನನ್ನೇ ಪ್ರಾರ್ಥಿಸುತ್ತಿರುವೆವೆಂದು ತಿಳಿದಿದ್ದರೂ ನಮ್ಮ ಹೃದಯವು ನಿನಗೆ ತಿಳಿಯದೇ? ನೀನು ನಿನ್ನ ಸ್ವಾಮಿತ್ವವನ್ನು ಮಾತ್ರ ನೆನೆಸಿಕೊಂಡರೆ ಅದು ನಮಗೆ ಪ್ರತಿ ಬಂಧಕ; ನಾವು ಪಾಪಿಷ್ಠರು; ನೀನು ನಿಷ್ಪಕ್ಷಪಾತಿ; ಪುಣ್ಯವಂತರನ್ನು ಅನುಗ್ರಹಿಸಿ ಪಾಪಿಷ್ಠರನ್ನು ನಿಗ್ರಹಿಸುವೆ. ನಿನ್ನ ರಮಾಪತಿತ್ವವನ್ನು ಮರೆಯಬೇಡ. ಶ್ರೀದೇವಿಯು ನಿಗ್ರಹವನ್ನೇ ಅರಿಯಳು. ಅವಳಿಗಾಗಿಯಾದರೂ ನೀನು ಮಳೆ ಸುರಿಸದೇ ಹಿಂಜರಿಯಬೇಡ. ಹೇಗೆ ಮಳೆ ಸುರಿಸಬೇಕೆನ್ನುವೆಯೋ? ಕೇಳು.

ಆழியುಳ್ ಪುಕ್ಕು ಮುಕಂದು ಕೊಡು—ಮಹಾಸಮುದ್ರದಲ್ಲಿ ಪ್ರವೇಶಿಸಿ ಶೀತಲ ಜಲವನ್ನು ತೆಗೆದುಕೊಂಡು

ಆರ್ತ್ತು ಏರಿ—ಗರ್ಜನೆ ಮಾಡಿ ನಾಡಿನವರೆಲ್ಲರೂ ಬಾಳುವಂತೆ ಗರ್ಜಿಸಿ, ಆಕಾಶಕ್ಕೆ ಹತ್ತಿ

ಊழிಮುದಲ್ವನ್ ಉರುವಂ ಪೋಲ್ ಮೆಯ್ ಕರತ್ತು–ಸೃಷ್ಟಿಕಾಲದಲ್ಲಿ ಕರುಣೆ ಎನ್ನುವ ನೀರಿನಿಂದ ತುಂಬಿದ ಪರಮಾತ್ಮನ ದಿವ್ಯಮಂಗಳ ವಿಗ್ರಹದ ಬಣ್ಣದಂತೆ ನಿನ್ನ ಶರೀರವು ನೀಲವಾಗಿ

ಪಾழಿ—ಅಂ—ತೋಳುಡೈ—ಗಂಭೀರವಾದ ಮತ್ತು ಸುಂದರವಾದ ತೋಳುಗಳುಳ್ಳ

ಪರ್ಪನಾರ್ಪ ಕೈಯಿಲ್—ಪದ್ಮನಾಭನ ಹಸ್ತದಲ್ಲಿರುವ

ಆಳಿಪೋಲ್ ಮಿನ್ನಿ—ಚಕ್ರದಂತೆ ಮಿಂಚಿ

ವಲಂಪುರಿಪೋಲ್—ಪರಮಾತ್ಮನ ಎಡಭಾಗದಲ್ಲಿರುವ ಪಾಂಚಜನ್ಯವೆಂದು ಹೆಸರುಳ್ಳ ಶಂಖದಂತೆ

ನಿನ್ರದಿರ್ ನ್ದು—ಸ್ಥಿರವಾಗಿ ಘೋಷಿಸಿ

ತಾಳ್ದಾದೇ—ಅವಿಚ್ಛಿನ್ನವಾಗಿ

ಶಾರ್ಙ್ಗಮುದೈತ್ತ—ಶಾರ್ಙ್ಗವೆನ್ನುವ ಪರಮಾತ್ಮನ ಬಿಲ್ಲಿನಿಂದ ಬಿಡಲ್ಪಟ್ಟ

ಶರಮಳೈಪೋಲ್—ಬಾಣವೃಷ್ಟಿಗಳಂತೆ

ವಾೞ್—ಪ್ರಪಂಚದವರೆಲ್ಲರೂ ಬಾಳುವಂತೆ

ನಾಂಗಳುಂ—ನಾವೂ ಕೂಡ

ಮಗಿೞ್ಂದು—ಸಂತೋಷಪಟ್ಟು

ಮಾರ್ಗೞಿನೀರಾಡ—ಮಾರ್ಗಶೀರ್ಷಮಾಸದಲ್ಲಿ ವ್ರತಾಂಗ ಸ್ನಾನ ಮಾಡುವಂತೆ

ಉಲಗಿನಿಲ್—ಈ ಪ್ರಪಂಚದಲ್ಲಿ

ಪೇಯ್ದಿಡಾಯ್—ಮಳೆಯನ್ನು ಸುರಿಸು—

ಸಾದೃಶ್ಯಕೊಡಬೇಕಾದರೆ ಆಯಾಗುಣಗಳುಳ್ಳ ಪ್ರಾಕೃತಿಕ ಮತ್ತು ತಿರ್ಯಕ್ ಜಂತುಗಳನ್ನೇ ಉಪಮಾನವಾಗಿ ತೆಗೆಯುತ್ತೇವೆ. ಇದು ಗೋದೆಗೆ ಸರಿಯೆಂದು ತೋರಿದಂತಿಲ್ಲ. ಗೋವಿಂದನಲ್ಲದೆ ಮತ್ತಾವ ವಿಷಯವೂ ಅವಳ ಮನಸ್ಸಿನಲ್ಲಿರದು.

ವೇದಶಾಸ್ತ್ರ ರಥಾರೂಢಾಃ ಜ್ಞಾನಖಡ್ಗಧರಾದ್ವಿಜಾಃ
ಕ್ರೀಡಾರ್ಥಮಪಿ ಯದ್ಬ್ರೂಯುಃ ಸನೋ ಧರ್ಮಸ್ಸನಾತನಃ ।

ಎನ್ನುವ ನ್ಯಾಯದಿಂದ ಇವಳು ಕೊಟ್ಟಿರುವ ಸಾದೃಶ್ಯದಲ್ಲೂ ಪಾರಮಾರ್ಥಿಕರಸವೇ ತುಂಬಿದೆ.

1) ಮೊದಲು ನೀಲ ಮೇಘವು ಪರಮಾತ್ಮನ ದಿವ್ಯಮಂಗಳ ವಿಗ್ರಹದ ಕಾಂತಿಯಂತಿರಬೇಕು ಎಂದಿರುವಳು. ಇದರಿಂದ **ಕಲ್ಪಾದಿ ಪುರುಷನು** ಬ್ರಹ್ಮದೇವನೆಂದು ನಾವು ಭ್ರಮಿಸದಿರಲೆಂದು ಹೀಗೆ ಹೇಳಿರುವಳು. (ಟಪ್ಪಣಿ 15)

2) ಎರಡನೇಯದಾಗಿ, ಪದ್ಮನಾಭನ ಕೈಯಲ್ಲಿರುವ ಚಕ್ರದಂತೆ ಪ್ರಕಾಶಿಸಿ ಎಂದು ಹೇಳಿರುವಳು. ರಾಮಾಯಣದಲ್ಲಿ

ಪದ್ಮೇ ದಿವ್ಯೇರ್ಕ ಸಂಕಾಶೇ ನಾಭ್ಯಾಮುತ್ಪಾದ್ಯ ಮಾಮಪಿ ।
ಪ್ರಾಜಾಪತ್ಯಂ ತ್ವಯಾ ಕರ್ಮ ಮಯಿ ಸರ್ವಂ ನಿವೇಶಿತಂ ॥

ಎಂದು ಬ್ರಹ್ಮನು ರಾಮನನ್ನು ಸ್ತುತಿಸಿರವನು. **ಶ್ವೇತಾಶ್ವತರ ಉಪನಿಷತ್ತಿನಲ್ಲಿ**

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈ ವೇದಾಂ
ಶ್ಚ ಪ್ರಹಿಣೋತಿ ತಸ್ಮೈ

ಎಂದು ಹೇಳಿರುವಂತೆ ಬ್ರಹ್ಮನು ಪರಮಾತ್ಮನ ಮಗನೆಂದು ತಿಳಿಸಲು "ಪರ್ಜನಾರ್ಭ"

ಎಂದಿರುವಳು. ಒಬ್ಬ ಮಹಾತ್ಮನಿಗೆ ಬಹಳಕಾಲ ಮಕ್ಕಳಾಗದೆ ನಂತರ ಹುಟ್ಟಿದರೂ ಅವನು ತನ್ನ ಸಂತೋಷವನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಅವನ ಅನುಯಾಯಿಗಳು ತೋರ್ಪಡಿಸಿಕೊಳ್ಳುವರು. ಹಾಗೆ ಪ್ರಳಯವಾದಮೇಲೆ ಬಹಳಕಾಲ ಮಕ್ಕಳಾಗದೇ ನಂತರ ತಾನು ಸೃಷ್ಟಿಮಾಡಲು ಸಂಕಲ್ಪಿಸಿ ಬ್ರಹ್ಮನನ್ನು ನಾಭಿಕಮಲದಿಂದ ಹುಟ್ಟಿಸಿದರೂ ತನ್ನ ಗಾಂಭೀರ್ಯದಿಂದ ಸಂತೋಷವನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಆದರೆ ಅನುಯಾಯಿಯಾದ "ಚಕ್ರತ್ತಾೞ್ವಾರ್" ಅಧಿಕವಾಗಿ ಪ್ರಕಾಶಿಸಿ ತನ್ನ ಸಂತೋಷವನ್ನು ತೋರ್ಪಡಿಸಿಕೊಂಡಂತೆ ಎಲೈ ಮಂಡಲವರ್ಷಾಧಿಪತಿಯೇ ನೀನು ಮಿಂಚಬೇಕು ಎಂದಿರುವಳು.

3) ಮೂರನೇಯದಾಗಿ ಪರಮಾತ್ಮನ ಪಾಂಚಜನ್ಯದಂತೆ ಸ್ಥಿರವಾಗಿ ಘರ್ಜಿಸು ಎನ್ನುವ ಸಾದೃಶ್ಯದಿಂದ ಪಾಂಚಜನ್ಯದ ಸ್ವಭಾವವನ್ನು ನೆನೆಯುವಂತೆ ಮಾಡಿರುವಳು. ಪರಮಾತ್ಮನ ಶಂಖಧ್ವನಿಯು ಅನುಕೂಲರಿಗೆ ಆನಂದದಾಯಕವೂ ಪ್ರತಿಕೂಲರಿಗೆ ಭಯೋತ್ಪಾದಕವೂ ಆಗಿದೆ. ಭಗವದ್ಗೀತೆಯು ಪ್ರಾರಂಭದಲ್ಲೇ ಪಾಂಚಜನ್ಯ ವಿಷಯದಲ್ಲಿ

ಸಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್

ಎಂದು ಹೇಳಿ, ಪರಮಾತ್ಮನ ಪಾಂಚಜನ್ಯದಶಬ್ದವು ಶತ್ರುಗಳ ಹೃದಯವನ್ನು ಸೀಳಿತು ಎಂದು ಹೇಳಿದೆ. ಒಂದಾವರ್ತಿ ಶಬ್ದಮಾಡಿದಾಗ ಹೀಗಾಯಿತು. ಗೋದೆಯು "ನಿನ್ರು ಅದಿರ್ನ್ದು" ಎಂದಿರುವುದರಿಂದ ಇನ್ನೂ ವಿಶೇಷಾರ್ಥವನ್ನು ತಿಳಿಸಲಪೇಕ್ಷಿಸಿರುವಳು. ಸ್ಥಿರವಾಗಿ ಶಬ್ದಮಾಡಿದರೆ ದೇವತಾಂತರ ಪ್ರಾವಣ್ಯವು ಪೂರ್ಣವಾಗಿ ನಶಿಸಿಹೋಗುವುದೆಂದು ತಿಳಿಸಲಪೇಕ್ಷೆಪಟ್ಟಂತಿದೆ.

4) ನಾಲ್ಕನೇಯದಾಗಿ, ಕೌಮೋದಿಕೀ ಎನ್ನುವ ಪರಮಾತ್ಮನ ಸಾದೃಶ್ಯದಿಂದ ಶೀಘ್ರಫಲಪ್ರದತ್ವವು ತಿಳಿಸಲ್ಪಟ್ಟಿದೆ. ದೇವತಾಂತರ ಭಕ್ತಿಯು ಶೀಘ್ರಫಲಪ್ರದವೆಂದು ಗೀತೆಯಲ್ಲಿ

ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ (IV–12)

ಎನ್ನುವ ಶ್ಲೋಕದಲ್ಲಿ ಹೇಳಲ್ಪಟ್ಟಿದೆ. ಪರಮಾತ್ಮನ ಸಾಮಾನ್ಯ ಕಟಾಕ್ಷ ಅಂದರೆ ನಿರ್ಹೇತುಕ ಕರುಣೆಯಿಂದ (ಟಪ್ಪಣಿ 16) ಪ್ರತಿಜೀವನೂ ತನಗೆ ಕರ್ಮಫಲದಿಂದ ಬರುವ ಶರೀರಗಳಿಂದ ಉಜ್ಜೀವನದಲ್ಲಿ ಮುಂದೆ ಮುಂದೆ ಸಾಗುತ್ತಿರುವನು. ಇದನ್ನೇ ಪಾಶ್ಚಾತ್ಯ ವೇದಾಂತಿಗಳು Evolution is a slow process of emancipation ಎಂದಿರುವರು. Evolution (ಎವಲ್ಯೂಷ್ನ) ಎಂದರೆ ಪರಿಣತಿ ಅಥವಾ ಪರಿಣಾಮ. ಪ್ರಕೃತಿ ಪರಿಣಾಮದಲ್ಲಿ ನಾವು ನಮ್ಮ ಸಂಕಲ್ಪದಿಂದ ಪರಮಾತ್ಮನನ್ನು ಸೇರಲು ಆತುರಪಡದಿದ್ದರೆ ನಾವು ನಾಸ್ತಿಕರೆಂದೇ ತಿಳಿಯಬೇಕು. ನಾವು ಆತುರಪಡುವಂತಾದರೂ ಕಾಲವಿಳಂಬವನ್ನು ಸಹಿಸಿ ಯೋಗಸಿದ್ಧಿಗಳನ್ನಪೇಕ್ಷಿಸುವ ಮನೋ

ಧರ್ಮವುಳ್ಳವರಾದರೆ ಆಗ ನಾವು ಆಶ್ರಯಿಸುವುದು ಉಪಾಸನಮಾರ್ಗ ಅಂದರೆ ಭಕ್ತಿಯೋಗ ಮಾರ್ಗ. ಶರಣಾಗತಿಯನ್ನು ಅನುಷ್ಠಿಸಿದರೆ ನಮಗೆ ಈಗಿರುವ ಶರೀರವು ಬಿದ್ದೊಡನೇ ಮುಕ್ತಿಯು ಸಿಗುವದೆಂದು ಶಾಸ್ತ್ರವು ತಿಳಿಸಿರುತ್ತದೆ. ಈ ಅರ್ಥವನ್ನು ಗೋದೆಯು ಸಾದೃಶ್ಯದಿಂದ ಸುಲಭವಾಗಿ ತಿಳಿಸಿರುವಳು.

ಹೀಗೆ ಗೋಪರಿಗೂ, ಗೋಪಿಯರಿಗೂ ತಾನು ಕೊಟ್ಟ ಸಾದೃಶ್ಯಬಲದಿಂದ ಉಪಕರಿಸಿರುವಳು. ಗೋಪರಿಗೆ ಹಿತವಾಗಿ ಮಳೆ ಸುರಿಯುವುದೆನ್ನುವ ನಂಬಿಕೆಯೂ, ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಶರಣಾಗತಿಯೊಂದೇ ತಮ್ಮ ಇಷ್ಟಾರ್ಥಸಿದ್ಧಿಗೆ ಸಾಧನವೆನ್ನುವ ತಿಳುವಳಿಕೆಯೂ ಏಕಕಾಲದಲ್ಲಿ ಕೊಡಲ್ಪಟ್ಟಿದೆ.

ಸ್ವಾಪದೇಶ

ಆಳ್ವಿಮಣ್ಣಳಕ್ಕಣ್ಣಾ—1) ಜ್ಞಾನಾನುಷ್ಠಾನ ವೈರಾಗ್ಯಗಳಿಗೆ ಸಮುದ್ರ ಪ್ರಾಯನೇ;

2) ಪರಮಾತ್ಮನ ಕೃಪಾವರ್ಷಕ್ಕೆ ನಿರ್ವಾಹಕನೇ;

3) ಭಗವದನುಭವಜನಿತವಾದ ಆನಂದಬಾಷ್ಪವನ್ನು ಸುರಿಸುವನೇ;

ಈ ಗುಣಗಳಿಂದ ಆಚಾರ್ಯನಲ್ಲಿ ನಾವು ಮಾಡುವ ಶರಣಾಗತಿಯು ಫಲಿಸುವುದೆನ್ನುವ ಮಹಾವಿಶ್ವಾಸವು ಮೂಡಿಬರುವುದು.

ಲಕ್ಷ್ಮೀನಾಥಾಖ್ಯಸಿಂಧೌ ಶಠರಿಪುಜಲದಃ ಪ್ರಾಪ್ಯ ಕಾರುಣ್ಯನೀರಂ
ನಾಥಾದ್ಯಾವಭ್ಯಷಿಂಚತ್ತದನು ರಘುವರಾಂಭೋಜಚಕ್ಷುರ್ಮುರಾಭ್ಯಾಂ
ಗತ್ವಾತಾಂ ಯಾಮುನಾಖ್ಯಾಂ ಸರಿತಮಥ ಯತೀಂದ್ರಾಖ್ಯ
ಪದ್ಮಾಕರೇಂದ್ರಂ
ಸಂಪೂರ್ಯ ಪ್ರಾಣಿಸಸ್ಯೇ ಪ್ರವಹತಿ ಸತತಂ ದೇಶಿಕೇಂದ್ರಾಭ್ರಸಂಶ್ಲೇಷಃ

—ವಿ—ಗು—

ಎಂದು ವರ್ಣಿಸಿರುವಂತೆ ಆಚಾರ್ಯನಿಗೂ ಮೇಘಗಳಿಗೂ ಬಹಳ ಸಾಮ್ಯವಿದೆ.

1) ಆಚಾರ್ಯನು ವೇದವೆನ್ನುವ ಉಪ್ಪುಸಮುದ್ರದಿಂದ ಮಂದಮತಿಗಳಿಗೆ ತಿಳಿಯಲಾರದ ವಿಷಯಗಳನ್ನು ಗ್ರಹಿಸುವನು ಮತ್ತು ಪರಮ ಭೋಗ್ಯನಾಗಿ ಶಿಷ್ಯರಿಗೆ ಉಪದೇಶಿಸುವನು;

2) ಮೇಘಗಳು ಅಲ್ಲಲ್ಲಿ ಹೋಗಿ ಮಳೆ ಸುರಿಸುವಂತೆ ಆಚಾರ್ಯನು ದೇಶ ದೇಶಾಂತರಗಳಿಗೆ ಹೋಗಿ ಉಪದೇಶಿಸುವನು;

3) ಸರಿಯಾದ ಕಾಲದಲ್ಲಿ ಮೇಘಗಳು ಮಳೆಯನ್ನು ಸುರಿಸುವಂತೆ ಸಕಾಲದಲ್ಲಿ ಸದುಪದೇಶಕೊಟ್ಟು ದೇಹಾತ್ಮಭ್ರಮ ಮೊದಲಾದ ಅನರ್ಥವನ್ನು ಹೋಗಲಾಡಿಸುವನು;

4) ಮೇಘಗಳು ಎಷ್ಟು ಮಳೆ ಸುರಿಸಿದರೂ ಪ್ರತಿ ಫಲವನ್ನಪೇಕ್ಷಿಸದಂತೆ ಆಚಾರ್ಯನೂ ಶಿಷ್ಯರಿಂದ ಯಾವ ಪ್ರತಿ ಫಲವನ್ನೂ ಅಪೇಕ್ಷಿಸುವುದಿಲ್ಲ;

5) ಮೇಘವು ಮಳೆಯನ್ನು ಸುರಿಸಿ ಹಳ್ಳ ಮತ್ತು ತಿಟ್ಟನ್ನು ಸಮಮಾಡುವಂತೆ ಆಚಾರ್ಯನು ಅಜ್ಞಾನಿಗಳನ್ನೂ ಜ್ಞಾನಪರಿಪೂರ್ಣರನ್ನಾಗಿ ಮಾಡುತ್ತಾನೆ;

6) ಮೇಘಗಳು ಹನಿಯಾಗಿ ದಟ್ಟವಾಗಿ ಸೌಮ್ಯವಾಗಿ ಮಳೆ ಸುರಿಸುವಂತೆ ಆಚಾರ್ಯನು ಏಕಾಂತೋಪದೇಶದಿಂದಲೂ, ವಿಶೇಷವ್ಯಾಖ್ಯಾನದಿಂದಲೂ, ಜಿಜ್ಞಾಸುಗಳಿಗೆ ಬೇಕಾದ ತರ್ಕ ಬಲದಿಂದಲೂ ಉಪದೇಶಿಸುತ್ತಾನೆ—ಇಷ್ಟು ಮಹಿಮೆಯುಳ್ಳ ಆಚಾರ್ಯನೇ

ಒನ್ರುನೀಕ್ಕೈಕರವೇಲ್—ಶಿಷ್ಯ ಪ್ರಾರ್ಥನೆಯನ್ನು ಪ್ರತೀಕ್ಷಿಸದೇ "ಕೃಪಯಾ ನಿಸ್ಪೃಹೋ ವದೇತ್" ಎಂದು ಆಚಾರ್ಯನ ವಿಷಯದಲ್ಲಿ ಹೇಳಿರುವಂತೆ ಯಾವುದನ್ನೂ ಬಚ್ಚಿಡದೇ; ಈಶಾವಾಸ್ಯೋಪನಿಷತ್ತಿನಲ್ಲಿ

ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥
ಅನ್ಯದೇವಾಹು ಸ್ಸಂಭವಾದನ್ಯದಾಹು ರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥ —(11, 13)

ಎನ್ನುವ ಈ ಎರಡು ಮಂತ್ರಗಳು ಆಚಾರ್ಯನನ್ನು "ಧೀರಾಃ" ಎಂದು ಕರೆದು ಅಂತಹ ಆಚಾರ್ಯರಿಂದ, ಕರ್ಮ, ಜ್ಞಾನ ಮೊದಲಾದ ವೇದಾಂತ ವಿಷಯಗಳು ನಮಗೆ ಉಪದೇಶಿಸಲ್ಪಟ್ಟವೆಂದು ಶಿಷ್ಯರು ಹೇಳಿಕೊಳ್ಳುವಂತಿದೆ. ಇಲ್ಲಿ "ಧೀರಾಃ" ಎನ್ನುವ ಪದವನ್ನು "ಧೀರೇಭ್ಯಃ" ಎಂದು ಪಂಚಮೀ ವಿಭಕ್ತಿಯಲ್ಲಿ ಉಪಯೋಗಿಸಬೇಕಿತ್ತು. ಅದಕ್ಕೆ ಬದಲು "ಧೀರಾಣಾಂ" ಎಂದು ಷಷ್ಠೀ ವಿಭಕ್ತಿಯು ಪ್ರಯೋಗಿಸಿದರೆ ಆಗ ವಿಶೇಷಾರ್ಥವನ್ನು ಕೂಡಿಸಿಕೊಳ್ಳಬೇಕೆನ್ನುವ ನಿಯಮವಿದೆ ವ್ಯಾಕರಣ ಶಾಸ್ತ್ರದಲ್ಲಿ. ಅದರಂತೆ ಇಲ್ಲಿ "ಧೀರಾಣಾಂ" ಎನ್ನುವುದಕ್ಕೆ "ಧೀರರಾದ ಆಚಾರ್ಯರು ಕರುಣಾಮಯರು; ಯಾವುದನ್ನೂ ಬಚ್ಚಿಡದೇ ಶಿಷ್ಯರು ಕೇಳದೆ, ತಾವೇ ಪರಮಕೃಪೆಯಿಂದ ಹೇಳಿಕೊಡುವರು" ಎಂದು ಅರ್ಥಮಾಡಿಕೊಳ್ಳಬೇಕು. "ಧೀರ" ಎನ್ನುವುದರಿಂದ ಆಚಾರ್ಯಲಕ್ಷಣವೂ "ನಃ" ಎನ್ನುವುದರಿಂದ ಶಿಷ್ಯ ಲಕ್ಷಣವೂ ಹೇಳಲ್ಪಟ್ಟವೆ. "ಧೀ" ಎಂದರೆ ನಿಶ್ಚಿತಜ್ಞಾನ; ಯಾವ ಪ್ರಶ್ನೋದ್ದನೆಗೂ ತಲೆಬಾಗದ ಶುದ್ಧ ಜ್ಞಾನ; ಇಂತಹ ಜ್ಞಾನವನ್ನು ಸಂಪಾದಿಸುವಾಗ ಶ್ರಮವಾಗುವುದು; ಆದರೆ ಅನುಭವಿಸುವಾಗ ಆನಂದದಾಯಕವಾಗಿರುವುದು. ಇದನ್ನು ಬಲ್ಲವರೇ ಬಲ್ಲರು.

ಜ್ಞಾನವು ನಿಶ್ಚಿತವಾದರೂ ನಮಗೆ ಹಿಡಿಸದೇ ಇರಬಹುದು. ಇದನ್ನು ನಾವು ನಿತ್ಯ ಜೀವದಲ್ಲಿ ಕಾಣುವೆವು. ಒಂದು ಸಿದ್ಧಾಂತಕ್ಕೆ ಸೇರಿದವನು ಮತ್ತೊಂದು ಸಿದ್ಧಾಂತಿಯವಾದಕ್ಕೆ ಸೋತು ಅವನ ಸಿದ್ಧಾಂತವನ್ನು ಅಲ್ಲಗಳೆಯಲಾಗದವ

ನಾದರೂ ಅದನ್ನು ಒಪ್ಪುವುದಿಲ್ಲ. ಹಾಗೆ ಒಪ್ಪಬೇಕಾದರೆ ಅವನು ನಿಷ್ಪಕ್ಷಪಾತಿಯಾಗಿರಬೇಕಾದರೆ ಅಹಂಕಾರಮಮಕಾರಗಳನ್ನು ಜಯಿಸಿರಬೇಕು. ಇಂತಹವನೇ ಶಿಷ್ಯನಾಗಿರಲು ಯೋಗ್ಯ. ಮುಂಡಕೋಪನಿಷತ್ತು (II, 13)

ತಸ್ಮೈ ಸ ವಿದ್ವಾನ್ ಉಪಸನ್ನಾಯ ಸಮ್ಯಕ್ ಪ್ರಶಾಂತ ಚಿತ್ತಾಯ
ಶಮಾನ್ವಿತಾಯ । ಯೇನಾಕ್ಷರಂ ಪುರುಷಂ ವೇದ ಸತ್ಯಂ
ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಂ

ಎನ್ನುವ ಮಂತ್ರದಿಂದ ಶಿಷ್ಯ ಲಕ್ಷಣವನ್ನು ಕೊಟ್ಟಿದೆ. ಹೀಗೆ ಉಪನಿಷತ್ತು ಕೊಟ್ಟಿರುವ ಆಚಾರ್ಯ ಮತ್ತು ಶಿಷ್ಯ ಲಕ್ಷಣಗಳನ್ನು ಕ್ರೋಡೀಕರಿಸಿ ನಿಗಮಾಂತ ದೇಶಿಕರು ಎರಡು ಶ್ಲೋಕದಲ್ಲಿ ಕೊಟ್ಟಿರುವರು (ನ್ಯಾ–ವಿಂ)

ಸಿದ್ಧಂ ಸತ್ಯಂಪ್ರದಾಯೇ ಸ್ಥಿರಧಿಯಮನಘಂ ಶ್ರೋತ್ರಿಯಂ ಬ್ರಹ್ಮನಿಷ್ಠಂ,
ಸತ್ವಸ್ಥಂ ಸತ್ಯವಾಚಂ ಸಮಯನಿಯತಯಾ ಸಾದುವೃತ್ಯಾ ಸಮೇತಂ ।
ದಂಭಾಸೂಯಾದಿ ಮುಕ್ತಂ ಜಿತ ವಿಷಯಗಣಂದೀರ್ಘಬಂಧುಂ ದಯಾಳುಂ
ಸ್ಖಾಲಿತ್ಯೇ ಶಾಸಿತಾರಂ ಸ್ವಪರಹಿತಪರಂ ದೇಶಿಕಂ ಭೂಷ್ಣು ರೀಪ್ಸೇತ್ ॥

ಇದು ಆಚಾರ್ಯ ಲಕ್ಷಣ; ಶಿಷ್ಯ ಲಕ್ಷಣವು ಹೀಗಿದೆ.

ಸದ್ಬುದ್ಧಿಸ್ಸಾಧುಸೇವೀ ಸಮುಚಿತಚರಿತಃ ತತ್ವಭೋಧಾಭಿಲಾಷೀ
ಶುಶ್ರೂಷುಃ ತ್ಯಕ್ತಮಾನಃ ಪ್ರಣಿಪತನಪರಃ ಪ್ರಶ್ನಕಾಲ ಪ್ರತೀಕ್ಷಃ
ಶಾಂತೋ ದಾಂತೋಽನಸೂಯುಃ ಶರಣಮುಪಗತಃ ಶಾಸ್ತ್ರವಿಶ್ವಾಸಶಾಲೀ
ಶಿಷ್ಯಃ ಪ್ರಾಪ್ತಃ ಪರೀಕ್ಷಾಂಕೃತವಿಧಭಿಮತಂ ತತ್ವತಃ ಶಿಕ್ಷಣೀಯಃ

ಇದರ ವಿಸ್ತಾರವನ್ನು ನಿಗಮಾಂತದೇಶಿಕರ ರಹಸ್ಯತ್ರಯಸಾರ ಗ್ರಂಥದ ಕೊನೆಯ ಮೂರು ಅಧಿಕಾರ ಅಂದರೆ ಅಧ್ಯಾಯಗಳಲ್ಲಿ ನೋಡಬಹುದು.

ಆಚಾರ್ಯನು ಶಿಷ್ಯರನ್ನು ಮಾತ್ರ ಉದ್ಧಾರಮಾಡುವುದಿಲ್ಲ. ಪರಮಾತ್ಪನ ಆಸ್ತಿತ್ವ ಸ್ಥಾಪನೆಯಿಂದ ಅವನನ್ನೂ ಉದ್ಧರಿಸುವನು. ರಾಮಾನುಜರ ವಿಷಯದಲ್ಲಿ ನಿಗಮಾಂತದೇಶಿಕರು ಹಾಗೆಯೇ ಹೇಳಿರುವರು.

ಕಪರ್ದಿಮತಕರ್ದಮಂ ಕಪಿಲಕಲ್ಪನಾವಾಗುರಂ ।
ದುರತ್ಯಯಮತೀತ್ಯತದ್ದ್ರುಹಿಣತಂತ್ರಯಂತ್ರೋದರಂ ॥
ಕುದೃಷ್ಟಿಕುಹನಾಮುಖೇನಿಪತಿತಃ ಪರಬ್ರಹ್ಮಣಃ ।
ಕರಗ್ರಹವಿಚಕ್ಷಣೋ ಜಯತಿ ಲಕ್ಷ್ಮಣೋಽಯಂ ಮುನಿಃ ॥

ಯತಿ–ಸಪ್ತ 38

ಅಂತಹ ಆಚಾರ್ಯರಾದ ತಾವು

ಆಳ್ಳಿಯುಳ್‌ಪುಕ್ಕು—ಉಪನಿಷತ್ತಿನಲ್ಲಿ, ವೇದಾಂತದಲ್ಲಿ, ಭಗವದ್ಗುಣಗಳಲ್ಲಿ, ಭಗವದ್ಧ್ಯಾನದಲ್ಲಿ ಪ್ರವೇಶಿಸಿ.

ಮುಕುಂದುಕೊಡು—ಸಾರತಮಾರ್ಥವನ್ನು ಗ್ರಹಿಸಿ, ಅದರಲ್ಲೇ ಮುಳುಗಿ ನಮಗೆ ಅವನ್ನು ಕೊಡು; ಅದಕ್ಕಾಗಿ

ಆರ್ತ್ತು—ಪರಪಕ್ಷನಿರಸನಮಾಡುವ ಸಿಂಹನಾದದೊಡನೆ

ಗಂಭೀರೇಣ ಪರಾತ್ಮಭೇದನಮಹಾನಾದೇನ ನಾಥೇನ ಮೇ,
ಗುಪ್ತೋಹಂ ಯತಿಸಾರ್ವಭೌಮಹರಿಣಾ

ಎಂದಿರುವಂತಿದ್ದು

ಏರಿ—ಆಚಾರ್ಯಸಿಂಹಾಸನವನ್ನಲಂಕರಿಸಿ

ಊಳಿ . . . ಕರುತ್ತು—ಕಲ್ಪಾದಿಯಲ್ಲಿ ತನ್ನ ಕರುಣೆಯಿಂದ ಜಗತ್ಸೃಷ್ಟ್ಯುನ್ಮುಖನಾದಂತೆ, ಅವನನ್ನೇ ಧ್ಯಾನಿಸಿ ತದಾಕಾರನಾದ ನೀನು ಉಪದೇಶಕಾಲದಲ್ಲಿ ಕರುಣಾಪೂರ್ಣನಾಗಿ "ಸತ್ಯಸಂಕಲ್ಪತ್ವಪರಮಕಾರುಣಿಕತ್ವದ್ಯೋತಕಂ ನೀಲಮೇಘಶ್ಯಾಮಲತ್ವಂ" ಎನ್ನುವ ಲಕ್ಷಣದಂತೆ ಬ್ರಹ್ಮತೇಜಸ್ಸಿನಿಂದ ಕೂಡಿದವನಾಗಿ

ಪಾಳಿ . . . ಮಿನ್ನಿ—ಸುದರ್ಶನ ಚಕ್ರದಂತೆ ಸಕಲಶತ್ರುನಾಶಮಾಡಿ

ಪ್ರಥಯನ್ ವಿಮತೇಷು ತೀಕ್ಷ್ಣಭಾವಂ
ಪ್ರಭುರಸ್ಮತ್ಪರಿರಕ್ಷಣೆ ಯತೀಂದ್ರಃ ।
ಅಪೃಥಕ್‌ಪ್ರತಿಪನ್ನಯನ್ಮಯತ್ವೈಃ
ವವೃಧೇ ಪಂಚಭಿರಾಯುಧೈರ್ಮುನ್ರಾರೇಃ ॥

ಯತಿ–ಸಪ್ತ 12

ಅಡೈಯಾರ್ ಕಮಲತ್ತಲರ್‌ಮಕಳ್ ಕೇಳ್ವನ್
ಕೈಯಾಳಿ ಎನ್ನುಂ ಪಡೈಯೋಡು ನಾಂತಕಮುಂ
ಪಡರ್‌ತಂಡುಂ ಓಣ್‌ಶಂಕುವಿಲ್ಲುಂ
ಪುಡೈಯಾರ್ ಪುರಿ ಶಂಗಮುಂ ಇಂದ ಭೂತಲಂ ಕಾಪ್ಪದರ್ಕೆನ್ರು
ಇಡೈಯೇ ಇರಾಮಾನುಜ ಮುನಿಯಾಯಿನ ಇನ್ನಿಲತ್ತೇ

ರಾ–ನೂ 33

ಎಂದಿರುವಂತೆ ಅನ್ಯ ಸಿದ್ಧಾಂತಿಗಳನ್ನು ಜಯಿಸಿ; **ವಲಂಪುರಿ . . . ದಿರ್ನ್ದ**–ನಾವು ನಿಮ್ಮನ್ನು ಯಾವಾಗಲೂ ಕೂಡಿಯಿದ್ದು, ತಾವು ಶಂಖ ಧ್ವನಿಯಿಂದ ಪರಪಕ್ಷ ಹೃದಯವನ್ನು ಸೀಳಿ

ಚಕ್ರಾಯುಧವು ಪರಮಾತ್ಮನನ್ನು ಬಿಟ್ಟು ದೂರ ಹೋಗಿ ಶತ್ರುನಾಶ ಮಾಡುತ್ತದೆ. ಅಥವಾ ಪರಮಾತ್ಮನನ್ನೇ ಶರಣು ಹೊಂದುವ ಮನೋಧರ್ಮವನ್ನುಂಟು ಮಾಡುತ್ತದೆ. ಇದಕ್ಕೆ ನಿದರ್ಶನ ಅಂಬರೀಷ ಚರಿತ್ರೆ. ಶಂಖವಾದರೋ ಪರಮಾತ್ಮನನ್ನು ಬಿಟ್ಟು ಒಂದು ಕ್ಷಣವೂ ಇರುವುದಿಲ್ಲ; ಹಾಗೆ ತಾವು ಪರಮಾತ್ಮನನ್ನು ನೆನೆ

ಯುತ್ತಾ, ಅವನನ್ನು ಸ್ವಲ್ಪವೂ ಮರೆಯದೆ ಇರುವರಾದ್ದರಿಂದ ತಮ್ಮ ಶಂಖ ಧ್ವನಿಯು ಪಾಂಚಜನ್ಯ ಧ್ವನಿಗೆ ಸದೃಶವಾಗಿದೆ–ಎಂದು ತಾತ್ಪರ್ಯ

ತಾೞ್ nದೇ . . . ವಾೞ್—ಅವಿಚ್ಛಿನ್ನವಾಗಿ ಪರಮಾತ್ಮನ ಶಾರ್ಙ್ಗ ಧನುಸ್ಸಿನಿಂದ ಬಿಡಲ್ಪಟ್ಟ ಶರವರ್ಷದಂತೆ ನಾವೂ ಬಾಳುವಂತಾಗಿ; ಪರಮಾತ್ಮನ ಶರವರ್ಷದಿಂದ ಶತ್ರುಗಳು ನಾಶವಾಗುವರು; ಭಕ್ತರು ಉಜ್ಜೀವಿಸುವರು.

ಶರಾಸನವಿನಿರ್ಮುಕ್ತಾಃ ಶರಾ ಆಶೀವಿಷೋಪಮಾಃ ।
ವೈರಿವ್ರಾತಂ ವಿನಿಘ್ನಂತಿ ರಾಘವಸ್ಯ ಮಹಾತ್ಮನಃ ॥

ಎಂದೂ

ಬ್ರಹ್ಮದಂಡಸಕಾಶಾನಾಂ ವಿದ್ಯುತ್ಸದೃಶವರ್ಚಸಾಂ ।
ಸ್ಮರ್ತ ರಾಘವಬಾಣಾನಾನಾಂ ವಿನ್ಯಥೇ ರಾಕ್ಷಸೇಶ್ವರಃ ॥

ಎಂದೂ ರಾಮಾಯಣದಲ್ಲಿ ಹೇಳಿರುವಂತೆ ಪ್ರಣವಧ್ಯಾನ ಮಾಡುತ್ತಿರುವ ಆಚಾರ್ಯ ಹೃದಯದಿಂದ ಶರಸದೃಶವಾದ ವಾಕ್‌ಶರಿಯು ಹೊರಹೊಮ್ಮಿ ನಾವು ಬಾಳುವಂತಾಗಬೇಕು.

"ತಾೞ್nದೇ" ಎನ್ನುವುದರಿಂದ ಒಂದು ವಿಶೇಷಾರ್ಥವೂ ಬರುತ್ತದೆ. ರಾವಣನು ವಿಭೀಷಣನನ್ನು "ತ್ವಾಂ ತು ಧಿಕ್ ಕುಲಪಾಂಸನಂ" ಎಂದು ನಿಂದಿಸಲು ಅವನು ತನ್ನ ನಾಲ್ಕು ಮಂತ್ರಿಗಳೊಡನೆ ರಾಮನಲ್ಲಿಗೆ ಓಡಿಬಂದು ಆಕಾಶದಿಂದಲೇ ವಾನರರನ್ನು ಕುರಿತು

ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ

ಎಂದು ಪ್ರಾರ್ಥಿಸಿಕೊಂಡನು. "ಎಲ್ಲಿ ಯಾರಾದರೂ ಬಂದು ನನ್ನ ಬುದ್ಧಿಯು ಕೆಡುವಂತೆ ಮಾಡಿಯಾರು; ಅದಕ್ಕೆ ಮುಂಚೆಯೇ ರಾಮನು ನನ್ನ ಶರಣಾಗತಿಯನ್ನು ಸ್ವೀಕರಿಸುವಂತೆ ಮಾಡಿ" ಎನ್ನುವ ಅರ್ಥವು ಅವನ ಮಾತಿನಲ್ಲಿ ತೋರುತ್ತದೆ. ಅಲ್ಲಿ ವಿಭೀಷಣನ **"ಕ್ಷಿಪ್ರಂ"** ಎನ್ನುವ ಆರ್ತಿಗೆ ಸಮನಾಗಿ ಇಲ್ಲಿ ಶಿಷ್ಯನು **"ತಾೞ್nದೇ"** ಎಂದಿರುವನು. "ಆಚಾರ್ಯ, ತಮ್ಮಲ್ಲಿಗೆ ಭರಸಮರ್ಪಣಕ್ಕಾಗಿ ಬಂದಿರುವೆವು; ಹಾಗೆ ಬಂದುದು ತಮ್ಮ ವಾಗ್ಧರಿಯ ಹಿರಿಮೆಯಿಂದ; ತಕ್ಷಣವೇ, ನಮ್ಮ ಬುದ್ಧಿ ಕೆಡುವುದಕ್ಕೆ ಮುಂಚೆಯೇ ನಮ್ಮ ಭರಸಮರ್ಪಣವನ್ನು ಸ್ವೀಕರಿಸಬೇಕು" ಎನ್ನುವ ಅರ್ಥ ಬರುತ್ತಿದೆ.

ವಾೞ್ . . . . ಏಲೋರೆಂಪಾವಾಯ್

ಮಾಯನೈ ಮನ್ನು ವಡಮಧುರೈ ಮೈಂದನೈ
ತೂಯ ಪೆರುನೀರ್ ಯಮುನೈತ್ತುರೈವನೈ
ಆಯರ್‌ಕುಲತ್ತಿನಿಲ್ ತೋನ್ರುಮಣಿವಿಳಕ್ಕೈ
ತಾಯೈಕುಡಲ್‌ವಿಳಕ್ಕಂ ಶೈಯ್ದ ದಾಮೋದರನೈ
ತೂಯೋಮಾಯ್‌ವಂದು ನಾಂ ತೂಮಲರ್ ತೂವಿತ್ತೊೞುದು
ವಾಯಿನಾಲ್ ಪಾಡಿ ಮನತ್ತಿನಾಲ್ ಚಿಂತಿಕ್ಕ
ಪೋಯಪಿೞ್ದೆಯುಂ ಪುಗುದರುವಾನಿನ್ರನವುಂ
ತೀಯಿನಿಲ್ ತೂಶಾಗುಂ ಶೆಪ್ಪೇಲೋರೆಂಪಾವಾಯ್ ॥ ೫ ॥

ಹಿಂದಿನ ಪದ್ಯದಲ್ಲಿ ಗೋದೆಯು ಗುಹ್ಯವಾಗಿ "ಶರಣಾಗತಿಯೇ ನಮ್ಮ ಇಷ್ಟಾರ್ಥಸಿದ್ಧಿಗೆ ಸಾಧನ" ವೆಂದು ತಿಳಿಸಿದರೂ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳದೆ ಒಬ್ಬಳು "ದೊಡ್ಡವರು ಆರಂಭಿಸುವ ಒಳ್ಳೇ ಕೆಲಸಕ್ಕೆ ಪ್ರತಿಬಂಧಕವು ಬಂದುದಕ್ಕೆ ಅನೇಕ ನಿದರ್ಶನಗಳಿವೆ. ದಶರಥನು ರಾಮನ ಪಟ್ಟಾಭಿಷೇಕಕ್ಕೆ ಲಗ್ನವನ್ನು ವಸಿಷ್ಠರಿಂದ ಇಡಿಸಿದ್ದನು. ವಸಿಷ್ಠರೋ ವಿಶ್ವಾಮಿತ್ರರಿಗೆ ಬ್ರಹ್ಮಋಷಿತ್ವ ಕೊಟ್ಟ ಮಹಾತ್ಮ; ರಾಮನೋ ಸಾಕ್ಷಾನ್ನಾರಾಯಣಾವತಾರವೇ; ಅಲ್ಲದೆ ಲೋಕಮರ್ಯಾದೆಗಾಗಿ

ಸಹ ಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ರಾ–ಅ VI, 1

ಎಂದಿರುವಂತೆ ದೇವತಾ ಪೂಜೆಯನ್ನು ಮಾಡಿದ್ದನು. ಹಾಗಿದ್ದರೂ ಪ್ರತಿಬಂಧಕ ಬರಲಿಲ್ಲವೇ?

ರಾಮೇ ರಾಜ್ಯಂ ಪಿತುರಭಿಮತಂ ಸಮ್ಮತಂ ಚ ಪ್ರಜಾನಾಂ
ಮಾತಾ ನನ್ದೇ ತದನು ಭರತೇ ಸತ್ಯವಾದೀ ದದೌ ಚ ।
ಚಿಂತಾತೀತಸ್ಯಮುಜನಿ ತದಾ ಪಾದುಕಾಗ್ರ್ಯಾಭಿಷೇಕಃ
ದುರ್ವಿಜ್ಞಾನಸ್ಯಹೃದಯಮಹೋ ದೈವಮತ್ರ ಪ್ರಮಾಣಂ

ಎಂದು ಪಾದುಕಾಸಹಸ್ರದಲ್ಲಿ ಹೇಳಲಾಗಿದೆ." ಎಂದು ತಿಳಿಸಿದ್ದಕ್ಕೆ ಉತ್ತರವು ಈ ಪದ್ಯದಲ್ಲಿದೆ. ಪ್ರತಿಬಂಧಕವು ಪಾಪದಿಂದ ಬರುತ್ತದೆ. ಪರಮಾತ್ಮನಲ್ಲಿ ನಾವು ಶರಣಾಗತಿಯನ್ನು ಆಚರಿಸಿದರೆ ಸಕಲಪಾಪವೂ ಹೋಗುವುದು ಎಂದು ಗೋದೆಯು ಹೇಳಲು ಹೊರಟು ಶರಣ್ಯ ಪರಮಾತ್ಮನ ಪೂರ್ಣಲಕ್ಷಣವನ್ನು ಕೊಡುವಳು.

ಮಾಯನೈ—(1) ಆಶ್ಚರ್ಯಜೀಷ್ಮಿತನನ್ನು ಶ್ರೀರಾಮನು ಅವತಾರ ಮಾಡುವಾಗ ಸಾಮಾನ್ಯ ಶಿಶುವಂತೆ ಜನಿಸಿದನು; ಆದರೂ ಮಂಡೋದರಿಗೆ ಅವಳ ಪತಿ ರಾವಣನ ಮರಣಕ್ಕೆ ಕಾರಣನಾದ ತಾನು ಸಾಕ್ಷಾನ್ನಾರಾಯಣನೆಂದು ತೋರಿಸುವ ಪ್ರಸಂಗ ಬಂದಿತು. ರಾ–ಯು

ತಮುಸಃ ಪರಮೋ ಧಾತಾ ಶಂಖಚಕ್ರಗದಾಧರಃ ।
ಶ್ರೀವತ್ಸವಕ್ಷಾ ನಿತ್ಯ ಶ್ರೀರಜಯ್ಯಃ ಶಾಶ್ವತೋ ಧ್ರುವಃ ॥

ಎಂದು ರಾಮನನ್ನು ವರ್ಣಿಸಿರುವಳು. ಕೃಷ್ಣಾವತಾರ ರಾಮನಂತಲ್ಲ

ಜಾತೋಸಿ ದೇವದೇವೇಶ ಶಂಖಚಕ್ರಗದಾಧರಃ ।

ಎಂದಿರುವಂತೆ ಆವಿರ್ಭವಿಸುವಾಗಲೇ ಶಂಖಚಕ್ರಗದಾಪಾಣಿಯಾಗಿ ತೋರ್ಪಡಿಸಿಕೊಂಡನು.

2) "ಮಾಯಾ" ಎಂದರೆ

ಮಾಯಾಂತು ಪ್ರಕೃತಿಂ ವಿಂದ್ಯಾತ್ ಮಾಯಿನಂ ತು ಮಹೇಶ್ವರಂ

ಎಂದು ಶ್ವೇತಾಶ್ವತರೋಪನಿಷತ್ತು ಹೇಳಿರುವಂತೆ ಪ್ರಕೃತಿ. ಭಗವದ್ಗೀತೆಯಲ್ಲಿಯೂ

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ

(VII–14) ಎನ್ನುವ ಶ್ಲೋಕದಲ್ಲಿ, ಮಾಯಾ ಅಂದರೆ ಅಚೇತನ ಪ್ರಕೃತಿ. ದೈವೀ ದೇವೇನ ನಿರ್ಮಿತಾ; ಗುಣಮಯೀ ಏಷಾ ಮಮ ಮಾಯಾ ದುರತ್ಯಯಾ" ಎನ್ನುವ ಅನ್ವಯದಿಂದ ಪ್ರಕೃತಿಯು ಜೀವನರನ್ನು ಉದ್ಧಾರ ಮಾಡಲೆಂದೇ ಸೃಷ್ಟಿಸಲ್ಪಟ್ಟ ಅವರಿಗೆ ದೇಹೇಂದ್ರಿಯ ಮನಃ ಪ್ರಾಣರೂಪದಲ್ಲಿರುತ್ತದೆ. ಹಾಗಿರುವುದು ಪರಮಾತ್ಮನ ಇಚ್ಛೆಯಿಂದಲೇಯೆಂದು ತಿಳಿಸಲು ಶ್ರುತಿಯು "ಮಮಮಾಯಾ" ಎಂದೂ ಹೇಳಿದೆ. ಮಾಯೆಯಾದ ಪ್ರಕೃತಿಯು ಹೇಗೋ ಹಾಗೆ ಸೀತೆಯು ಜನಿಸಿದಳೆಂದು ರಾಮಾಯಣವು

ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।

ಎಂದು ಹೇಳಿದೆ. ರಾಮಾಯಣದ ಶ್ಲೋಕಗಳನ್ನು ಅರ್ಥಮಾಡಿಕೊಳ್ಳುವಾಗ ಈ ವಿಶೇಷಾರ್ಥವನ್ನು ಮರೆಯಕೂಡದು. ರಾಮನು ಪೂಜೆಮಾಡಿ ಮುಗಿಸಿದ್ದರೂ ಪಟ್ಟಾಭಿಷೇಕಕ್ಕೆ ಪ್ರತಿಬಂಧಕ ಬಂದಿತೆಂದು ತಿಳಿಯುವುದು ತಪ್ಪು.

ಗತೇ ಪುರೋಹಿತೇ ರಾಮಃ ಸ್ನಾತೋ ನಿಯತಮಾನಸಃ ।
ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣ ಮುಪಾಗಮತ್ ॥ (ರಾ–ಅ VI)

ಈ ಶ್ಲೋಕದ ಅರ್ಥವು ಸಿದ್ಧಾಂತದಲ್ಲಿ ಹೀಗಿದೆ.

ತನ್ನಿಲುಂ ತೀರ್ತ್ತ ಕೋಯಿಲಾಳ್ವಾರೈ
ಸೇವಿಕ್ಕಪ್ಪುಹ ಪಿರಾಟ್ಟಿಕ್ಕು ಮುಖಮೆಲ್ಲಾಂ ಕಣ್ಣಾಚ್ಚುದು

ಹೀಗೆ ಮುಖವೆಲ್ಲಾ ಕಣ್ಣಾಗಿದ್ದೀಕೆ ಎನ್ನುವಾಗ ಮತ್ತೊಂದರ್ಥವನ್ನು ಹೇಳುವುದುಂಟು. "ವಿಶಾಲಾಕ್ಷ್ಯಾ" ಎನ್ನುವ ಪದದಲ್ಲೇ ವಿಶೇಷಾರ್ಥವು ಅಡಗಿದೆ. ವಿಶಾಲ ಕಣ್ಣುಳ್ಳವಳೆನ್ನುವ ಅರ್ಥವು ಇಲ್ಲಿ ಸಂಗತವಾಗಬೇಕಾದರೆ "ಆರ್ಚಾಮೂರ್ತಿಯ ಸೌಂದರ್ಯಕ್ಕೆ ಮನಸೋತು ಬಿಚ್ಚಿದ ಕಣ್ಣುಳ್ಳವಳಾದಳು" ಎಂದು ಮಾತ್ರ ತಿಳಿದರೆ ಸಾಲದು. ಇವಳು ಆರ್ಚಾಪೂರ್ತಿಯನ್ನು ನೋಡಿದಮೇಲೆ ವಿಶಾಲಾಕ್ಷಿಯಾಗಲಿಲ್ಲ. ಶ್ರೀರಾಮನೂ ವಿಶಾಲಾಕ್ಷಿ ಸೀತೆಯೂ ನಿಯತಮಾನಸರಾಗಿ ನಾರಾಯಣನ ಅರ್ಚಾಮೂರ್ತಿಯ ಹತ್ತಿರ ಹೋದರು. ಸೀತೆಯು ತನ್ನ ವಿಶಾಲದೃಷ್ಟಿಯಿಂದ ಆ ಮೂರ್ತಿಯನ್ನು ಭಾವಪೂರಿತವಾಗಿ ನೋಡಿದಳು. "ಹೇ ನಾರಾಯಣ, ನೀನೇ ಈಗ ಸೀತೆಯಾಗಿ ಬಂದ ನನ್ನ ಪತಿಯಾಗಿ ರಾಮನಾಗಿ ಇಲ್ಲಿ ನಿಂತಿರುವೆ; ರಾಮನಾಗಿ ತಾನು ಏತಕ್ಕೆ ಅವತಾರ ಮಾಡಿದೆನೆಂದು ತೋರ್ಪಡಿಸದೇ ಮಾನವತ್ವವನ್ನು ಪ್ರಕಾಶಪಡಿಸುತ್ತಿದ್ದರೂ ನೀನು ನಿನ್ನ ಸಂಕಲ್ಪವನ್ನು ಮರೆಯಬೇಡ; ರಾವಣಾದಿಹನನಕ್ಕಾಗಲ್ಲವೇ ನೀನು ರಾಮನಾದುದು; ಪಟ್ಟಾಭಿಷೇಕವಾದರೆ "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ" ಹೇಗೆ ಆದೀತು" ಎಂದು ಹೇಳುವಂತಿತ್ತು ಅವಳ ನೋಟ. ಆ ಸೇವೆಯ ಫಲವೋ ಎನ್ನುವಂತೆ ಪಟ್ಟಾಭಿಷೇಕವೂ ನಿಂತಿತು. ಈಶ್ವರಸಂಕಲ್ಪಕ್ಕೆ ಪ್ರತಿಬಂಧಕವೂ ನಿವೃತ್ತಿಯಾಯಿತು.

(3) ಮೂರನೇ ಅರ್ಥದಲ್ಲಿ ಶ್ರೀಕೃಷ್ಣನೇ ಗೋಪಿಯರ ವ್ರತವನ್ನು ಏರ್ಪಡಿಸಿರುವುದರಿಂದ ಇವನು "ಮಾರ್ಯ" ಆಶ್ಚರ್ಯಚೇಷ್ಟಿತನು. ಶ್ರೀಕೃಷ್ಣಾವತಾರದಲ್ಲಿ ಯಾವುದುತಾನೇ ಆಶ್ಚರ್ಯದಿಂದ ಕೂಡಿಲ್ಲ?

ಶಠಗೋಪರು

ಪಿರಂದವಾರುಂ ವಳರ್ನ್ದವಾರುಂ ತಿರು ಮೊ V, 10, 1–10

ಎಂದು ಪ್ರಾರಂಭವಾಗುವ ಹತ್ತು ಪದ್ಯಗಳಲ್ಲಿ ಪರಮಾತ್ಮನ ಆಶ್ಚರ್ಯ ಚೇಷ್ಟಿತಗಳನ್ನೆಲ್ಲಾ ತಾನು ಅನುಭವಿಸಿದಂತೆ ವರ್ಣಿಸಿರುವರು.

(4) ನಾಲ್ಕನೇ ಅರ್ಥದಲ್ಲಿ, ಪರಮಾತ್ಮನ ಮಹಿಮೆಯು ಅನಂತವಾದುದು; ಯಾರಿಂದಲೂ ಅರಿಯಲು ಸಾಧ್ಯವಿಲ್ಲ. ಶ್ರುತಿಯು (ಕೇ–ಉ)

ಯಸ್ಯಾS ಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ ॥

ಎಂದಿದೆ.

(5) ಅವನು ತಾನೇ ತನ್ನ ಮಹಿಮೆಯನ್ನು ಅರಿಯಲಾರ; "ಸೊ ಅಂಗ ವೇದ ಯದಿ ವಾ ನ ವೇದ" ಎಂದಲ್ಲವೇ ಶ್ರುತಿಯು ಹೇಳುತ್ತಿರುವುದು?

(6) ಸುಂದರ ಬಾಹುಸ್ತವದಲ್ಲಿ ಕೂರೇಶರು ಶ್ರೀಕೃಷ್ಣನು ಮಾಡಿದ ಮಾಯೆಗಳನ್ನು 107–115 ಶ್ಲೋಕಗಳಲ್ಲಿ ವರ್ಣಿಸಿರುವರು. ಇನ್ನೂ ಮುಂದೆ

ಲಂಕಾರುದ್ಧಹರ್ತಾ ಹರೀರ್ ದ್ವಿಜಸುತಂ ಶಂಬೂಕದೋಷಾನ್ಮೃತಂ,
ಸಾಂದೀಪಿನ್ಯಭಿಜಂ ಮೃರ್ತಾ ದ್ವಿಜಸುರ್ತಾ ಬಾಲಾಂಶ್ಚ ವೈಕುಂಠಗರ್ತಾ।
ಗರ್ಭಂಚಾರ್ಜುನಿಸಂಭವಂ ವ್ಯುದದರಃ ಸ್ವೇನೈವ ರೂಪೇಣ ಯಃ,
ಸ್ವಾಭೀಷ್ಟಂ ಮಮ ಮದ್ಗುರೋಶ್ಚ ದಯಸೇ ನೋ ಕಿಂ ವನಾದ್ರೀಶ್ವರ 124

ಎನ್ನುವ ಶ್ಲೋಕದಿಂದ ಪರಮಾತ್ಮನ ಮುಖ್ಯವಾದ ಆಶ್ಚರ್ಯ ಚೇಷ್ಟಿತಗಳನ್ನು ಸಂಗ್ರಹಿಸಿರುವರು. ರಾಮನೇ ಕೃಷ್ಣನು ಕೃಷ್ಣನೇ ರಾಮನು. ಒಂದು ದಿನ ಶ್ರೀಕೃಷ್ಣ

ತೊಟ್ಟಿನಲ್ಲಿ ನಿದ್ದೆ ಮಾಡಲೆಂದು ಯಶೋದೆ ಕತೆ ಹೇಳಲು ಹೊರಟು ರಾಮನ ಕತೆಯನ್ನು ಹೇಳುತ್ತಾ ಬಂದಳು. ಕೃಷ್ಣ "ಹೂಂ" ಎನ್ನುತ್ತಾ ಕೇಳುತ್ತಿದ್ದ. ಅದನ್ನು ಲೀಲಾ ಶುಕರು ಸುಂದರವಾಗಿ ಹೀಗೆ ವರ್ಣಿಸಿರುವರು.

ರಾಮೋ ನಾಮು ಬಭೂವ ಹುಂ ತದಬಲಾ ಸೀತೇತಿ ಹುಂ ತಾಂ ಪಿತುಃ
ವಾಚಾ ಪಂಚವಟೀ ತಟೀ ವಿಹರತಸ್ತಸ್ಯಾಹರದ್ರಾವಣಃ ।
ನಿದ್ರಾರ್ಥಂ ಜನನೀಕಥಾಮಿತಿ ಹರೇ ಹುಂಕಾರತಃ ಶೃಣ್ವತಃ
ಸೌಮಿತ್ರೇ, ಕ್ವಧನುರ್ಧನುರ್ಧನುರಿತಿ ವ್ಯಗ್ರಾ ಗಿರಃ ಪಾತು ನಃ

(ಕೃ–ಕರ್ಣಾ II 71) ಕತೆಯಲ್ಲಿ ಸೀತಾಪಹರಣ ಘಟ್ಟ ಬಂದಾಗ ಕೃಷ್ಣನು ತಾನೇ ರಾಮನೆಂದು "ಲಕ್ಷ್ಮಣ, ನನ್ನ ಧನುಸ್ಸಿನಲ್ಲಿ ರಾವಣನನ್ನು ಧ್ವಂಸ ಮಾಡುವೆನು" ಎಂದು ತೊಟ್ಟಿಲಲ್ಲಿ ಎದ್ದುನಿಂತನಂತೆ. ಹಾಗೆಯೇ ಕೂರೇಶರು ರಾಮ ಮತ್ತು ಕೃಷ್ಣರ ಆಶ್ಚರ್ಯ ಚೇಷ್ಟಿತಗಳನ್ನು ಒಟ್ಟುಗೂಡಿಸಿರುವರು.

(7) ಪರಮಾತ್ಮನ ಆಶ್ಚರ್ಯಚೇಷ್ಟಿತಗಳನ್ನು ವೇದಾಂತದೇಶಿಕರು ದಶಾವತಾರ ಸ್ತೋತ್ರ ಮತ್ತು ಗೋಪಾಲವಿಂಶತಿಯಲ್ಲಿ ವರ್ಣಿಸಿರುವರು.

ಇಂತಹ ಆಶ್ಚರ್ಯಚೇಷ್ಟಿತನಾದ ಪರಮಾತ್ಮನು ಈಗ **ಮನ್ನು ವಡಮಧುರೈ ಮೈಂದನೈ**—ನೆಲೆಯಾಗಿರುವ ಉತ್ತರಮಧುರೆಯಲ್ಲಿ ಮೊಗುವಾಗಿ ಜನಿಸಿ, ಮಕುಟವಿಲ್ಲದಿದ್ದರೂ ರಾಜನಾಗಿ, ಸರ್ವಕಷ್ಟನಿವಾರಕನಾಗಿರುವವನನ್ನು,

"ಮೈಂದನೈ" ಎನ್ನುವ ಪದಕ್ಕೆ (1) ಮೊಗು (2) ರಾಜಾ ಮತ್ತು (3) ಮೋಚಕ ಎನ್ನುವ ಮೂರರ್ಥವಿದೆ. ಗೋದೆಯು ತನ್ನ ತಿರುಮೊಳಿಯಲ್ಲಿ "ಮಧುರೈಮನ್ನ" ಎಂದಿರುವಳು. ಹುಟ್ಟಿದ್ದು ಉತ್ತರಮಧುರೆಯಲ್ಲಿ; ಹುಟ್ಟುವಾಗಲೇ ತಂದೆ ತಾಯಿಯರ ಸಂಕೋಲೆಯನ್ನು ಬಿಡಿಸಿದನು; ಮಧುರೆಯು ಇವನಿಗೆ ಪ್ರಿಯವಾದುದು; ಅದು ಅನಾದಿಕಾಲದಿಂದ ಪುಣ್ಯಭೂಮಿಯಾದುದರಿಂದ; ಇದರ ವರ್ಣನೆಯು ವಿಷ್ಣುಪುರಾಣದಲ್ಲಿದೆ.

ಮಧುಸಂಜ್ಞಂ ಮಹಾಪುಣ್ಯಂ ಜಗಾಮ ಯಮುನಾತಟಂ ।
ಪುನಶ್ಚ ಮಧುಸಂಜ್ಞೇನ ದೈತ್ಯೇನಾಧಿಷ್ಠಿತಂ ಯತಃ ॥
ತತೋ ಮಧುವನಂ ನಾಮ್ನಾ ಖ್ಯಾತಮತ್ರಮಹೀತಲೇ ।
ಹತ್ವಾ ಚ ಲವಣಂ ರಕ್ಷೋ ಮಧುಪುತ್ರಂ ಮಹಾಬಲಂ ॥
ಶತ್ರಘ್ನೋ ಮಧುರಾಂ ಧಾಮ ಪುರೀಂ ಯತ್ರ ಚಕಾರ ವೈ ।
ಯತ್ರ ವೈ ದೇವದೇವಸ್ಯ ಸಾನ್ನಿಧ್ಯಂ ಹರಿಮೇಧಸಃ
ಸರ್ವಪಾಪಹರೇ ಸ್ತಸ್ಮಿನ್ತಪಸ್ತೀರ್ಥೇ ಚಕಾರ ಸಃ ॥

ಮೈತ್ರೇಯರಿಗೆ ಪರಾಶರರು ಧ್ರುವನು ಮಧುರೆಯೆಂದು ಪ್ರಸಿದ್ಧಿ ಹೊಂದಿದ್ದ ಸ್ಥಳಕ್ಕೆ ತಪಸ್ಸಿಗಾಗಿ ಹೊರಟನು ಎಂದು ಹೇಳುವ ಪ್ರಸಂಗದಲ್ಲಿ ಮಧುರೆಯ ಮಹಾತ್ಮೆಯನ್ನು ಮೇಲಿನ ಶ್ಲೋಕಗಳಲ್ಲಿ ಹೇಳಿರುವಂತೆ ವರ್ಣಿಸಿರುವರು. ಇದೇ ಸಿದ್ಧಾಶ್ರಮ; ವಾಮನನು ತಪಸ್ಸು ಮಾಡಿದ್ದು ಇಲ್ಲಿ. ಇಂತಹ ಮಧುರೆಯೇ ತನ್ನ ಪರತ್ವಕ್ಕೆ ಯೋಗ್ಯವಾದ ಸ್ಥಳವೆಂದು ಶ್ರೀಕೃಷ್ಣನು ಅಲ್ಲೇ ಜನಿಸಿದನು. ಶತ ಗೋಪರು

ಕಣ್ಣನಲ್ಲಾಲ್ ಇಲ್ಲೈ ಕಂಡೀರ್ ಶರಣ್
ಅದು ನಿಕ್ಕವಂದು ಮಣ್ಣೈಭಾರಂ ನೀಕ್ಕುದರ್ಕೇ
ವಡ ಮಧುರೈ ಪಿರಂದಾ

ಎಂದು ಅನುಸಂಧಾನ ಮಾಡಿರುವರು.

ತೂಯ ಪೆರುನೀರ್ ಯಮುನೈ ತುರೈವನೈ—ಪರಿಶುದ್ಧವಾದ ಸಮೃದ್ಧ ನೀರಿನಿಂದ ತುಂಬಿರುವ ಯಮುನಾ ನದೀ ತಟದಲ್ಲಿ ಪ್ರೀತಿಯಿಟ್ಟಿರುವ ಅಥವಾ ಯಮುನಾ ದಾರಿಯಾಗಿ ಸ್ವಾಗತ; ತುರೈ ಎಂದರೆ ದಾರಿ ಮತ್ತು ತೀರ.

ಕೃಷ್ಣಾವತಾರದಲ್ಲಿ ಅವನು ಯಮುನಾ ತಟದಲ್ಲಿಟ್ಟ ಪ್ರೀತಿಯನ್ನು ಅವತಾರದಲ್ಲೂ ಯಾವ ನದಿಯಲ್ಲೂ ಇಟ್ಟಿರಲಿಲ್ಲ. ರಾಮಾವತಾರದಲ್ಲಿ ಅವನು ಸೀತಾಪಹರಣ ವಿಷಯವನ್ನು ಗೋದಾವರೀ ನದಿಯಿಂದ ಕೇಳಿದಾಗ ಅವಳು ಮೌನವಾಗಿದ್ದಳು. ರಾಮನನ್ನು ಉಪೇಕ್ಷೆಮಾಡಿದಳು.

ಲಕ್ಷ್ಮಣಸ್ಯ ವಚಃ ಶ್ರುತ್ವಾ ದೀನಸಂತಾಪಮೋಹಿತಃ ।
ರಾಮಃ ಸಮಭಿಚಕ್ರಾಮ ಸ್ವಯಂ ಗೋದಾವರೀಂ ನದೀಂ ॥
ಸ ತಾಮುಪಸ್ಥಿತೋ ರಾಮಃ ಕ್ವಸೀತೇತ್ಯೇವಮಬ್ರವೀತ್
ಭೂತಾನಿ ರಾಕ್ಷಸೇಂದ್ರೇಣ ವಧಾರ್ಹೇಣ ಹತಾಮಪಿ
ನ ತಾಂ ಶಶಂಸೂ ರಾಮಾಯ ತಥಾ ಗೋದಾವರೀ ನದೀ
ರಾವಣಸ್ಯ ಚ ತದ್ರೂಪಂ ಕರ್ಮಾಪಿ ಚ ದುರಾತ್ಮನಃ ।
ಧ್ಯಾತ್ವಾ ಭಯಾತ್ತು ವೈದೇಹೀಂ ಸಾ ನದೀ ನ ಶಶಂಸ ಹ

ರಾ. ಅರ 64, 5–9

ಹೀಗೆಯೇ ಸಮುದ್ರರಾಜನೂ ಶ್ರೀರಾಮನನ್ನು ಉಪೇಕ್ಷಿಸಿದನು. ಆದರೆ ಶ್ರೀಕೃಷ್ಣನನ್ನು ಹೊತ್ತು ವಸುದೇವನು ನದಿಯಲ್ಲಿ ಇಳಿದೊಡನೇ ತನ್ನನ್ನು ಬತ್ತಿಸಿಕೊಂಡು ದಾರಿ ಬಿಟ್ಟಳು ಯಮುನೆ. ಇದು ಸಜ್ಜನ ಲಕ್ಷಣ. ರಾಮನು ಸಮುದ್ರರಾಜನ ವಿಷಯದಲ್ಲಿ ಹೇಳಿದ ಮಾತಿದು

ಪ್ರಶಮಶ್ಚ ಕ್ಷಮಾಚೈವ ಆರ್ಜವಂ ಪ್ರಿಯವಾದಿತಾ
ಅಸಾಮರ್ಥ್ಯಂ ಫಲಾಹ್ಯೇತೆ ನಿರ್ಗುಣೇಷು ಸತಾಂಗುಣಾಃ
ಆತ್ಮಪ್ರಶಂಸಿನಂ ದುಷ್ಟಂ ಧೃಷ್ಟಂ ವಿಪರಿಧಾವಕಂ ।
ಸರ್ವತ್ರೋತ್ಸೃಷ್ಟದಂಡಂ ಚ ಲೋಕಸ್ತ್ಯಕ್ತುರುತೇ ನರಂ ॥ ೧೫ ॥
ನ ಸಾಮ್ನಾ ಶಕ್ಯತೇ ಕೀರ್ತಿಃ ನ ಸಾಮ್ನಾ ಶಕ್ಯತೇ ಯಶಃ ।
ಪ್ರಾಪ್ತುಂ ಲಕ್ಷ್ಮಣ ಲೋಕೇಸ್ಮಿನ್ ಜಯೋ ವಾರಣಮೂರ್ಧನಿ ॥ ೧೬ ॥

ಅದ್ಯ ಮದ್ಬಾಣನಿರ್ಭಗ್ನೈಃ ಮಕರೈರ್ಮಕರಾಲಯಂ ।
ನಿರುದ್ಧತೋಯಂ ಸೌಮಿತ್ರೇ ಪ್ರವದ್ಭಿಃ ಪಶ್ಯ ಸರ್ವತಃ ॥ ೧೭ ॥

ಗೋದಾವರಿಯೂ ಸಮುದ್ರರಾಜನೂ ಸಜ್ಜನಮಾರ್ಗದಲ್ಲಿ ನಡೆಯಲಿಲ್ಲ. ಯಮುನೆಯು ಮಹಾತ್ಮಳು ಮತ್ತು ಪರಿಶುದ್ಧಳು. ಇವಳ ಹೆಸರೇ ಕಾಳಿಂದೀ; ಕಳಿಂದದೇಶದಲ್ಲಿ ಹುಟ್ಟಿದುದರಿಂದ ಇವಳಿಗೆ ಈ ಹೆಸರು. ಕಲಿಯನ್ನು ಖಂಡಿಸಿದ್ದರಿಂದ ಈ ಧೇಶಕ್ಕೆ ಈ ಹೆಸರು. ಅದರಿಂದಲೂ ಇವಳು ಪರಿಶುದ್ಧಳು. ಅವತಾರಗಳಲ್ಲಿ ವಿರಜೆಯು ಸನ್ನಿಹಿತ ನದಿಗಳಲ್ಲಿ ಬಂದು ಸೇರುವಳೆಂದು ಸ್ಮೃತಿಯು ಹೇಳುತ್ತಿದೆ. ಕೈಂಕರ್ಯಪರರು ಪ್ರಾರ್ಥಿಸಿದರೆ ಮಾತ್ರ ಹಾಗೆ ಬರುವಳು. ನಾವು ಪ್ರತಿದಿನವೂ ಭಗವದಾರಾಧನೆ ಮಾಡುವಾಗ ಅರ್ಘ್ಯಪಾದ್ಯಾದಿ ತೀರ್ಥದಲ್ಲಿ " ಏಹಿ ವಿರಜೆ, ಏಹಿ ವಿರಜೆ " ಎಂದು ಪ್ರಾರ್ಥಿಸುತ್ತೇವೆ. ಸರಯೂ ನದೀತಟದಲ್ಲಿ ರಾಮಾವತಾರವಾದರೂ ಅವಳು ರಾಮನ ಕೈಂಕರ್ಯ ಮಾಡಲಿಲ್ಲ. ಆದ್ದರಿಂದ ಅವನು ಅವಳಲ್ಲಿ ಅಭಿಮಾನವಿಡಲಿಲ್ಲ. ಯಮುನೆ ಹಾಗಲ್ಲ. ಸೇವೆ ಮಾಡಿದಳು. ಶ್ರೀಕೃಷ್ಣನು ಅವಳಲ್ಲಿ ಪ್ರೀತಿಯಿಟ್ಟನು. ನಿಗಮಾಂತದೇಶಿಕರು ಗೋ–ವಿಂ

ನಿಕಟೇಷು ನಿಶಾಮಯಾಮಿ ನಿತ್ಯಂ
ನಿಗಮಾಂತೈರಧುನಾಪಿ ಮೃಗ್ಯಮಾಣಂ
ಯಮುಳಾರ್ಜುನದೃಷ್ಟಬಾಲಕೇಳಿಂ
ಯಮುನಾಸಾಕ್ಷಿಕಯೌವನಂ ಯುವಾನಂ ॥

ಎಂದಿರುವರು. ಶ್ರೀಕೃಷ್ಣನ ಯೌವನಕ್ಕೆ ಸಾಕ್ಷೀಭೂತಳು ಯಮುನೆ. ಈ ಯಮುನಾತಟದಲ್ಲೇ ಗೋಪಿಯರು ಕಾತ್ಯಾಯನೀವ್ರತವನ್ನಾಚರಿಸಿ ಕೃಷ್ಣಸಾನ್ನಿಧ್ಯವನ್ನು ಹೊಂದಿದರು (ಭಾಗ X, 22). ಆದ್ದರಿಂದ ಯಮುನೆ ಪುನೀತಳು.

ಜಯದೇವ ಮಹಾಕವಿಯು ಯಮುನಾತಟದಲ್ಲಿ ರಾಧೆಯೊಡನೆ ಶ್ರೀಕೃಷ್ಣಲೀಲೆಯು ನಮ್ಮನ್ನು ರಕ್ಷಿಸಲೆಂದು ತನ್ನ ಗೀತಗೋವಿಂದಕಾವ್ಯದ ಮಂಗಳಶ್ಲೋಕದಲ್ಲಿ ಪ್ರಾರ್ಥಿಸಿರುವನು. ಆ ಶ್ಲೋಕವಿದು.

ಮೇಘೈರ್ಮೇದುರಮಂಬರಂ ವನಲತಾ ಶ್ಯಾಮಾ ತಮಾಲದ್ರುಮೈಃ
ನಕ್ತಂ ಭೀರುರಯಂ ತ್ವಮೇವ ತಮಿಮಂ ರಾಧೇ, ಗೃಹಂ ಪ್ರಾಪಯ ।
ಇತ್ಥಂ ನಂದನಿದೇಶತಶ್ಚಲಿತಯೋಃ ಪ್ರತ್ಯಧ್ವಕುಂಜದ್ರುಮಂ
ರಾಧಾಮಾಧವಯೋರ್ಜಯಂತಿ ಯಮುನಾಕೂಲೇ ರಹಃಕೇಳಯಃ

ಗೀ–ಗೋ

ಭಾರತ ಚಂಪುವಿನಲ್ಲಿ ಶ್ರೀಕೃಷ್ಣನ ಯಮುನಾ ತರಣವನ್ನು ವರ್ಣಿಸುವಾಗ ಇವಳನ್ನು (ಯಮುನೆ) ಪರೋಕ್ಷವಾಗಿ ವರ್ಣಿಸಲಾಗಿದೆ.

ಕೃತಸೇತುಮನಾಕಲಿತಪ್ಲವಾಂ
ಜನನಸಿಂಧುಧೃತೇ ಪ್ಲವಮುದ್ವಹ ।

ರವಿಸುತಾಮತಿಲಂಘ್ಯ ರಮಾಪತಿಂ
ಸಹದಿ ಘೋಷಸವಿಂಪಮುಪಾನಯತ್

ಅಯರ್ಕುಲತ್ತಿನಿಲ್ ತೋನ್ರುಮಣಿ ವಿಳಕ್ಕೈ—ಗೋಪಾಲಕರವಂಶದಲ್ಲಿ ತೋರಿಸಿಕೊಂಡ ರತ್ನ ದೀಪದಂತಿರುವವನನ್ನು ಅಥವಾ ಆ ವಂಶಕ್ಕೆ ಭೂಷಣ ಪ್ರಾಯವಾದ ತೇಜೋವಸ್ತುವನ್ನು

ಪರಮಾತ್ಮನ ಪ್ರಕಾಶವೆಂದರೆ ಅವನ ಕಲ್ಯಾಣಗುಣಗಳು; ಅವು ವೈಕುಂಠದಲ್ಲಿ ಪ್ರಕಾಶಿಸಲು ಅವಕಾಶವಿಲ್ಲ.

ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ
ಪರಮಂ ಸಾಮ್ಯಮುಪೈತಿ ಮುಂ. ಉ.

ಎಂದು ಮುಂಡಕೋಪನಿಷತ್ತು ವರ್ಣಿಸಿರುವಂತೆ ಪರಮಾತ್ಮ ಸಾಮ್ಯ ಹೊಂದಿದ ಮುಕ್ತಚೇತನರಲ್ಲಿ ಅವನ ವಾತ್ಸಲ್ಯಾದಿ ಗುಣಗಳು ಪ್ರಕಾಶಿಸುವುದಕ್ಕೆ ಅವಕಾಶವಿಲ್ಲ. ಬದ್ಧಚೇತನರಾಗಿ ಋಷಿಗಳಾಗಿದ್ದವರು ಈಗ ಗೋಪಿಯರಾಗಿ ಜನ್ಮತಾಳಿ ಇವನಲ್ಲಿ ಪ್ರೀತಿಯಿಟ್ಟಿರುವುದರಿಂದ ಅವರಲ್ಲಿ ತಾನೂ ಪ್ರೀತಿಯಿಟ್ಟು ಪ್ರಕಾಶಿಸುತ್ತಿರುವನು. " ತೋಸ್ರುಂ " ಎಂದರೆ " ತಾನೇ ತೋರಿಕೊಂಡವನು "; ಪಿರತ್ತಲ್, ಜನಿತ್ತಲ್, ಪ್ರಾದುರ್ಭವಿತ್ತಲ್ ಮತ್ತು ತೋನ್ರುದಲ್ ಈ ಪದಗಳು ಒಂದೇ ಅರ್ಥವನ್ನು ಕೊಡುವಂತಿದ್ದರೂ ಪ್ರತಿಯೊಂದು ಪದಕ್ಕೂ ಸ್ವಲ್ಪ ಅರ್ಥ ಭೇಧವಿದೆ. ಪ್ರಾದುರ್ಭವಿಸಿದ್ದು ಮಥುರೆಯಲ್ಲಿ; ಅಲ್ಲಿ ಅವನು ಎಲ್ಲರಂತೆ ಜನಿಸಲಿಲ್ಲ; ಗೋಕುಲದಲ್ಲಿ ತೋರಿಕೊಂಡನು. ಪ್ರಾದುರ್ಭವಿಸಿದ್ದು ಮತ್ತು ತೋರಿಸಿಕೊಂಡಿದ್ದು ಅವನ ಅಯೋನಿಜತ್ವವನ್ನು ತಿಳಿಸುತ್ತದೆ. ಇವನ ಹುಟ್ಟು ಇವನ ಸಂಕಲ್ಪಾಧೀನ.

ಅಜೋಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಪಿ ಸನ್
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

ಎಂದು ಅವನೇ ಹೇಳಿಕೊಂಡಿರುವಂತೆ ಶುದ್ಧ ಸತ್ವಮಯರೂಪವನ್ನು ತನ್ನ ಇಚ್ಛೆಯಿಂದ ಧರಿಸಿ ಅವತರಿಸಿರುವ ಇವನ ಸೌಲಭ್ಯಗುಣವನ್ನು ನೆನೆದು ಕೂರೇಶರು

ಹೇ, ಸುಂದರೈಕತರಜನ್ಮನಿ ಕೃಷ್ಣಭಾವೇ
ದ್ವೇಮಾತರೌ ಚ ಪಿತರೌ ಚ ಕುಲೇ ಅಪಿ ದ್ವೇ ।
ಏಕಕ್ಷಣಾದನುಗೃಹಿತವತಃ ಪರಂ ತೇ
ನೀಲಾಕುಲೇನ ಸದೃಶೀ ಕಿಲ ರುಕ್ಮಿಣೀ ಚ ॥

ಸುಂ–ಬಾ

ಎಂದು ವರ್ಣಿಸಿರುವರು. ಇವನ ಸೌಲಭ್ಯಗುಣದಿಂದಲೇ ವಸುದೇವ ದೇವಕಿಯರ ಮಗನಾಗಿ ತೋರಿಸಿಕೊಂಡಿದ್ದು? ಆದರೆ ಅವರು " ಹೇ ಪರಮಾತ್ಮಾ ನಿನ್ನಂಥ ಮಗ ಬೇಕು " ಎಂದು ಹಿಂದೆ ಮೂರಾವರ್ತಿ ಪ್ರಾರ್ಥಿಸಿದ್ದರಿಂದ ಅವನು ತನ್ನ ಸತ್ಯ ಸಂಕಲ್ಪತ್ವದಿಂದ ಹಾಗೆಯೇ ಆದನು. ಹಾಗೆ ಈ ಮೂರನೇಯಾವರ್ತಿ ಕೃಷ್ಣನಾಗಿ

ಮಥುರೆಯಲ್ಲಿ ತೋರಿಕೊಂಡರೂ ಬೆಳೆಯಲು ಮತ್ತು ತನ್ನ ಬಾಲಲೀಲೆಯನ್ನು ತೋರಿಸಲು ಯಶೋದೆಯ ಭಾಗ್ಯವಾಗಿ ಇಲ್ಲಿಗೆ ಈ ನಂದಗೋಕುಲಕ್ಕೆ ಬಂದನು. ಇದು ಅವನ ಸೌಲಭ್ಯದ ಪರಾಕಾಷ್ಠೆ.

ತಾಯ್ಕೈಕುಡಲ್ ವಿಳಕ್ಕಂ ಶೆಯ್ದ ದಾಮೋದರನೈ—ತಾಯಿಯ ಕರುಳಿಗೆ ಬೆಳಕು ತಂದು ದಾಮೋದರನೆನಿಸಿಕೊಂಡವನನ್ನು

ಯಮಳಾರ್ಜುನ ಭಂಗವನ್ನು ಮಾಡಲು ಸಂಕಲ್ಪಿಸಿ ತಾಯಿ ಯಶೋದೆಗೆ ಕೋಪಬರುವಂತೆ ಮಾಡಿ ಒರಳಿನಲ್ಲಿ ಮೊಸರು ಕಡೆಯುವ ಹಗ್ಗದಿಂದ ಕಟ್ಟಿಸಿಕೊಂಡಿದ್ದು ಅವನ ಸೌಲಭ್ಯಕ್ಕೆ ಪರಮ ನಿದರ್ಶನ. ಶಠಗೋಪರು,

ಪತ್ತುಡೈಯಡಿಯವರ್ಕು ಎಳಿಯವ್ನ, ಪಿರರ್ಗಳುಕ್ಕು
ಆರಿಯವಿತ್ತರ್ಕ, ಮಲರ್‌ಮುಗಳ್ ವಿರುಂಬುಂ ನಂ
ಅರುಪೆರಲಡಿಗಳ್, ಮತ್ತುರುಕಡೈ ವೆಣ್ಣೈಕಳ
ವಿನಿಲ್ ಉರುವಿಡೈ ಆಪ್ಪುಂಡು, ಎತ್ತಿರಂ ಉರಲಿ
ನೋಡಿಣ್ಮಂದಿರ್ಕೈಂದು ಏಂಗಿಯವೆಳಿವೇ I, 3, 1.

ಎಂದು ಇವನ ದಾಮೋದರತ್ವವನ್ನೇ ನೆನೆದು ನೆನೆದು ಆರುತಿಂಗಳ ಕಾಲ ಸಮಾಧಿಸ್ಥರಾಗಿದ್ದರಂತೆ. ದಾಮ ಎಂದರೆ ಮೊಸರು ಕಡೆಯುವ ಹಗ್ಗ; ಉದರ–ಸೊಂಟದಲ್ಲಿ ಯಾರಿಗೋ ಅವನು ದಾಮೋದರ. ಶ್ರೀ ಕೃಷ್ಣನು ಜಗತ್ಪ್ರಭುವಾಗಿ ತಾಯಿಯಾಗಿ ತಾನು ಸ್ವೀಕರಿಸಿನ ಯಶೋದೆಯಿಂದ ಕಟ್ಟಿಸಿಕೊಳ್ಳುವುದೆಂದರೆ ಅದೇ ಅವನ ಸೌಲಭ್ಯಕಾಷ್ಠೆ. ಸೌಲಭ್ಯಗುಣವೆಂದರೆ

ಅಕಲನಿನ್ನೈಪ್ಪಾರ್ಕ್ಕು ಅಕಲವೋಣ್ಣಾದಪಡಿ ಅಣುಕ ನಿರ್ಕ್ಕೈ

ಪರಮಾತ್ಮನಿಂದ ದೂರವಾಗಿ ಸರಿದುಹೋಗಲು ಚಿಂತಿಸುವವರನ್ನು ಎಡಬಿಡದೇ ಅವರ ಹತ್ತಿರದಲ್ಲೇ ಇರುವ ಗುಣ ಸೌಲಭ್ಯ. ಇದನ್ನು ಭಕ್ತಿಪಂಥದವರು "ಭಕ್ತ ಪರಾಧೀನತ್ವ" ಎಂದಿರುವರು. ಈ ಪ್ರಸಂಗವನ್ನೇ ಪರಮಾತ್ಮನ ಸೌಲಭ್ಯಕ್ಕೆ ನಿದರ್ಶನವಾಗಿ ಹೇಳುವಾಗ ನಿಗಮಾಂತ ದೇಶಿಕರು ಗೋ–ವಿಂ

ಹರ್ತುಂ ಕುಂಭೇ ವಿನಿಹಿತಕರಃ ಸ್ವಾದು ಹ್ಯೆಯಂಗವೀನಂ
ದೃಷ್ಟ್ವಾ ದಾನುಗ್ರಹಣಚಟುಲಾಂ ಮಾತರಂ ಜಾತರೋಷಾಂ ।
ಪಾಯಾದೀಷತ್‌ಪ್ರಜಲಿತಪದೋ ನಾಪಗಚ್ಛನ್ನತಿಷ್ಮ
ಮಿಥ್ಯಾಗೋಪಃ ಸಪದಿ ನಯನೇ ವಿಶ್ವಗೋಪ್ತಾ

ಎಂದು ಸ್ತುತಿಸಿರುವರು. ಪರಮಾತ್ಮನ ಸೌಲಭ್ಯಕ್ಕೂ, ಸೌಶೀಲ್ಯಕ್ಕೂ ನಿಕಟ ಸಂಬಂಧವಿದೆ. ಭಕ್ತಪರಾಧೀನನಾಗಿ ಸೌಶೀಲ್ಯದಿಂದ ತನ್ನ ಸೌಲಭ್ಯವನ್ನು ಪ್ರಕಾಶಪಡಿಸುವನು.

ಹೀಗೆ ಶರಣ್ಯವಸ್ತುವಿನ ಕಲ್ಯಾಣಗುಣಗಳನ್ನು ಐದು ವಿಶೇಷಣಗಳಿಂದ ಸಂಗ್ರಹಿಸಿರುವಳು ಗೋದೆ. "ಮಾಯನ್ನೈ" ಎನ್ನುವುದರಿಂದ ಪರತ್ವವನ್ನೂ, "ಮನ್ನು

ವಡಮಧುರೈವೈಂದನ್ನೈ" ಎನ್ನುವುದರಿಂದ, ವ್ಯೂಹದ್ವಾರಾ ಉತ್ತರ ಮಥುರಾಪುರಿಯಲ್ಲಿ ವಸುದೇವ ದೇವಕಿಯರ ಮಗನಾದ ಮಹಿಮೆಯನ್ನೂ, "ತೂಯಪೆರುನೀರ್ ಯಮುನೈತ್ತುರೈವನ್ನೈ" ಎನ್ನುವುದರಿಂದ ಮಥುರೆಯಿಂದ ನಂದಗೋಕುಲಕ್ಕೆ ಯಮುನೆಯ ಮೂಲಕ ದಾರಿಹೋದನೆಂದು ಅವನ ಭಕ್ತಪರಾಧೀನತೆಯನ್ನೂ, "ಆಯರ್‌ಕುಲತ್ತಿನಿಲ್ ತೋನ್ರುಮಣಿವಿಳಕ್ಕೈ" ಎನ್ನುವುದರಿಂದ ನಂದ ಗೋಕುಲದಲ್ಲಿ ಎಲ್ಲರಿಗೂ ಬೆಳಕಾಗಿ ಬೆಳೆದನೆಂದು ಅವನ ಸೌಲಭ್ಯವನ್ನೂ, "ತಾಯ್ಕೈಕುಡಲ್ ವಿಳಕ್ಕಂ ಶೈಯ್ದ ದಾಮೋದರನೈ" ಎನ್ನುವುದರಿಂದ ಅವನ ಸೌಶೀಲ್ಯವನ್ನೂ ವರ್ಣಿಸಿರುವಳು. ಅಥವಾ ಈ ಐದು ವಿಶೇಷಣಗಳಿಂದ ಕ್ರಮೇಣ ಅವನ ಬಾಲಲೀಲೆ, ಬ್ರಹ್ಮಚರ್ಯ, ಯೌವನ, ಭಕ್ತಪರಾಧೀನತೆ ಮತ್ತು ಸೌಶೀಲ್ಯಗಳು ವರ್ಣಿತಗಳಾಗಿವೆ.

ಪರಮಾತ್ಮನು ಷಾಡ್ಗುಣ್ಯ ಪರಿಪೂರ್ಣನು; ಆ ಗುಣಗಳೆಲ್ಲವೂ ದಯಾಮುಖವಾಗಿ ಕಾರ್ಯಕಾರಿಯಾಗುವವು. ಆ ದಯೆಯು ಸಾಮಾನ್ಯ ಕಟಾಕ್ಷ ವಿಶೇಷಕಟಾಕ್ಷವೆಂದು ಇಬ್ಬಗೆಯಾಗಿರುವುದು. ಸಾಮಾನ್ಯ ಕಟಾಕ್ಷದಿಂದಲೇ ಅವನು ಕರ್ಮಾಧ್ಯಕ್ಷನಾಗಿ ಜಗತ್ತಿನ ಸೃಷ್ಟಿಸ್ಥಿತಿಲಯಕ್ಕೆ ಕಾರಣನಾಗಿ, ಚೇತನರಿಗೆ ಕರಣಕಳೇಬರಾದಿಗಳನ್ನು ಕೊಟ್ಟು ಕ್ರಮೇಣ ಪ್ರಕೃತಿ ಪರಿಣಾಮಕ್ಕೆ ಅನುಗುಣವಾಗಿ ಚೇತನರ ಉಜ್ಜೀವನಕ್ಕೆ ಬೇಕಾದ ಮನೋಧರ್ಮವು ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿರುವನು. ಯಾವುದಾದರೊಂದು ಸುಕೃತವಿಶೇಷದಿಂದ ಈ ಚೇತನನು ಆಚಾರ್ಯನಲ್ಲಿ ಶರಣುಹೋದರೆ ಆಗ ತನ್ನ ವಿಶೇಷ ಕಟಾಕ್ಷದಿಂದ ಕೋಟ್ಯಂತರ ಜನ್ಮಗಳಲ್ಲಿ ಸಾಧ್ಯವಾಗದ ಮೋಕ್ಷವನ್ನು ಪ್ರಕೃತ ದೇಹಾವಸಾನದಲ್ಲೇ ಅನುಗ್ರಹಿಸುವನು. ಈ ವಿಶೇಷ ಕಟಾಕ್ಷದಿಂದ ನಾವು ಅನುಭವಿಸುವ ಪರಮಾತ್ಮನ ಪ್ರಧಾನಗುಣಗಳೆಂದರೆ ಅವನ ಸೌಲಭ್ಯ ಮತ್ತು ಸೌಶೀಲ್ಯ.

ತ್ಯಾಗರೂಪವಾದ ಭಕ್ತಿಯಿಂದ ಪರಮಾತ್ಮನು ಸುಲಭನಾಗುವನು.

ಅನನ್ಯ ಚೇತಾಸ್ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥

ಭ. ಗೀ. VIII–14

"ನಿತ್ಯಯುಕ್ತಸ್ಯ—ನಿತ್ಯಂ ಪರಮಾತ್ಮಯೋಗಂ ಸಾನ್ನಿಧ್ಯಂ ಕಾಂಕ್ಷಮಾಣಸ್ಯ" ಎನ್ನುವ ವ್ಯುತ್ಪತ್ತಿಯಿಂದ ಮೋಕ್ಷವನ್ನು ಅಪೇಕ್ಷಿಸುವವನಿಗೆ ಪರಮಾತ್ಮನು ಸುಲಭನು; ಪರಮಾತ್ಮನು ತನ್ನೊಡನಿರುವನೆನ್ನುವ ಅರಿವು ಯಾವಾಗಲೂ ಜಾಗೃತವಾಗಿ ಅಂದರೆ ಎಚ್ಚರವಾಗಿದ್ದು, "ಅಭಯ" ಗುಣವು ನಮ್ಮಲ್ಲಿ ತೋರುವುದು. ಜೀವನದಲ್ಲಿ ಯಾವ ಸನ್ನಿವೇಶ ಬಂದರೂ ಮನಸ್ಸು ಕಲುಷಿತವಾಗದೇ ಶಾಂತವಾಗಿದ್ದರೆ ಅದೇ "ಅಭಯ" ಗುಣ. ಇದನ್ನೇ ಮನಸ್ಸಿನಲ್ಲಿಟ್ಟು ಶ್ರೀಕೃಷ್ಣನು 9ನೇ ಅಧ್ಯಾಯದಲ್ಲಿ

ಅಪಿ ಚೇತ್ ಸುದುರಾಚಾರಃ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥
ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕಾಂತೇಯ ಪ್ರತಿಜಾನೀಹಿ ನಮೇ ಭಕ್ತಃ ಪ್ರಣಶ್ಯತಿ ॥
ಭ. ಗೀ. IX, 30–31

ಎಂದಿರುವನು. ಈ ಶ್ಲೋಕದಲ್ಲಿ ಸನ್ನಿಹಿತ ಭವಿಷ್ಯದರ್ಥದಲ್ಲಿ "ಭವತಿ" ಎನ್ನುವ ವರ್ತಮಾನವು ಹೇಳಲ್ಪಟ್ಟಿದೆ. ಧರ್ಮಾತ್ಮನಾಗುವನೆಂದರೆ ದೈವೀ ಸಂಪದ್ವಿಶಿಷ್ಟನಾಗುವನೆಂದು ಗೀತೇ 16ನೇ ಅಧ್ಯಾಯದ ಪ್ರಾರಂಭದಲ್ಲಿ ಹೇಳಿರುವನು. ಹೀಗೆ ದೈವೀ ಸಂಪದ್ವಿಶಿಷ್ಟನಾಗಿ ಕೊನೆಯಲ್ಲಿ "ಅತಿಮಾನ"ವನ್ನು ತೊರೆದು ಪರಮಾತ್ಮನಲ್ಲಿ ಶರಣು ಹೊಂದುವನು. ನಾವು ಶರಣು ಹೋದಮೇಲೆ ಅವನು ನಮ್ಮ ಯೋಗಕ್ಷೇಮವನ್ನೆಲ್ಲಾ ತಾನೇ ವಹಿಸಿಕೊಳ್ಳುವನೆಂದು

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥
ಭ. ಗೀ. IX 22

ಎನ್ನುವ ಶ್ಲೋಕದಿಂದ ಹೇಳಿರುವನು. ಇವನ ಭಕ್ತ ಪರಾಧೀನತೆಯು ಇವನನ್ನು ಸುಲಭನನ್ನಾಗಿ ಮಾಡಿ, ಭಕ್ತನು ಪ್ರಪನ್ನನಾದ ಮೇಲೆ, ತನ್ನ ಸೌಶೀಲ್ಯದಿಂದ ಅವನಿಗೆ ನಾನಾ ರೀತಿಯಲ್ಲಿ ಆನಂದ ಕೊಡುವನು. ಸೌಶೀಲ್ಯಗುಣವನ್ನು ವರ್ಣಿಸುವಾಗ ಪಿಳ್ಳೈ ಲೋಕಾಚಾರ್ಯರು

ಪೆರಿಯವರ್ ತಾಳ್ಂದವರ್ಕಳೋಡೆ ಪುರೈಯರ ಕ್ಕಲಕ್ಕುಂ ಸ್ವಭಾವಂ

ಎಂದೂ, ನಿಗಮಾಂತದೇಶಿಕರು

ತರ್ ಪಕ್ಕಲ್ ಈಶ್ವರತ್ವತ್ತೈ ಶಂಕಿಪ್ಪಾರ್ಕ್ಕುಂ ವೆಳಿಯಿಡುವಾರ್ಕ್ಕುಂ ತಾನೇ
ಮುರಿಮಾತ್ತುಂ ಶೊಲ್ಲಿ ಮೇಲುಂ ತನ್ನೈ ತಾಳ್ವಿಟ್ಟು ಪರಿಮಾರುಕೈ

ಎಂದೂ ಹೇಳಿರುವರು. ಪರಮಾತ್ಮನು ನಮಗೆ ಸುಲಭನಾದನೆಂದರೆ ಆಗ ನಮ್ಮಲ್ಲಿ ಪ್ರಕಾಶಿಸುವುದು "ನಾತಿಮಾನಿತಾ" ಅಂದರೆ ಅತಿ ಮಾನವಿಲ್ಲದಿರುವುದು. ಇದನ್ನೇ ರಾಮಾನುಜರು ಬ್ರಹ್ಮ ಸೂತ್ರ ವ್ಯಾಖ್ಯಾನದಲ್ಲಿ "ಶೇಷತ್ವ" ಜ್ಞಾನವೆಂದಿರುವರು. ಈ ಶೇಷತ್ವಜ್ಞಾನವೇ ಪ್ರಪತ್ಯನುಷ್ಠಾನಕ್ಕೆ ಅಧಿಕಾರವೆಂದು ನಿಗಮಾಂತ ದೇಶಿಕರು.

"ಪರಶೇಷತ್ವಧೀಮಾತ್ರಮಧಿಕಾರವಿಶೇಷಕಂ

ಎನ್ನುವ ಕಾರಿಕೆ(ಶ್ಲೋಕ)ಯಿಂದ ತಿಳಿಸಿರುವರು. (1ನೇ ಪಾಶುರವ್ಯಾಖ್ಯಾನ ನೋಡಿ).

ಗೋದೆಯು ಪರಮಾತ್ಮನ ಸೌಲಭ್ಯವನ್ನು ಮೊದಲಿನ ನಾಲ್ಕು ಪದ್ಯಗಳಲ್ಲಿ ಬೆಳೆಯಿಸಿ, ಅದನ್ನು ಈ ಪದ್ಯದಲ್ಲಿ ಐದು ವಿಶೇಷಣಗಳಿಂದ ಸಂಗ್ರಹಿಸಿ ಇವನೇ ಶರಣ್ಯವಸ್ತುವೆಂದು ನಿರ್ಧರಿಸಿರುವಳು. ಇಂತಹ ದೈವನಲ್ಲಿಗೆ, **ನಾಂ**—ನಾವು

ತೂಯೋಮಾಯ್ ವಂದು—ಪರಿಶುದ್ಧರಾಗಿ ಬಂದು; ಇಲ್ಲಿ ಎಲ್ಲಾ ವ್ಯಾಖ್ಯಾನಕಾರರೂ "ತೂಯೋಮಾಯ್" ಎನ್ನುವುದಕ್ಕೆ "ಭಾವ ಶುದ್ಧಿಯೈ ಶೊನ್ನಪಡಿ" ಎಂದಿರುವರು. ಭಾವ ಸಂಶುದ್ಧಿಯನ್ನು ಗೀತೆಯು ಮಾನಸ ತಪಸ್ಸೆಂದು

ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ ತಪೋ ಮಾನಸಮುಚ್ಯತೇ ॥ XVII, 16

ಎನ್ನುವ ಶ್ಲೋಕದಲ್ಲಿ ತಿಳಿಸಿದೆ. ಭಾವ ಸಂಶುದ್ಧಿಃ ಆತ್ಮವ್ಯತಿರಿಕ್ತ ವಿಷಯ ಚಿಂತಾರಹಿತತ್ವಂ; ಹತ್ತನೇ ಅಧ್ಯಾಯದಲ್ಲಿ

ಅಹಂ ಸರ್ವಸ್ಯ ಪ್ರಭವಃ ಮತ್ತ ಸರ್ವಂ ಪ್ರವರ್ತತೇ ।
ಇತಿಮತ್ವಾ ಭಜಂತೇ ಮಾಂಬುಧಾಃ ಭಾವಸಮನ್ವಿತಾಃ ॥ (8)

ಎನ್ನುವ ಶ್ಲೋಕದಲ್ಲಿ **ಭಾವಃ** ಎಂದರೆ ಪರಮಾತ್ಮನಲ್ಲಿ ಅತಿಯಾದ ಆಸೆ. ಮತ್ತೆ 18ನೇ ಅಧ್ಯಾಯದಲ್ಲಿ

ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ ।
ಭ್ರಾಮಯರ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ 61–62

ಎನ್ನುವಾಗ "ಸರ್ವಭಾವೇನ"—ಸರ್ವಾತ್ಮನಾ, ಶರಣಂಗಚ್ಛ-ಅನುವರ್ತಸ್ವ ಎನ್ನುವ ಅರ್ಥ ಬರುತ್ತದೆ. ತಿಲದಲ್ಲಿ ತೈಲದಂತೆ ನಾವು ಅಂದರೆ ಚೇತನರಾದ ನಾವು ಪ್ರಕೃತಿಯೊಡನೆ ನೀರಂದ್ರ ಸಂಶ್ಲೇಷದಿಂದ ಕಲೆತಿರುವೆವು. ಶರೀರ, ಇಂದ್ರಿಯ, ಮನಸ್ಸು ಮತ್ತು ಪ್ರಾಣದ ಕಾರ್ಯಗಳನ್ನೆಲ್ಲಾ ನಮ್ಮದೇಯೆಂದು ಭ್ರಮಿಸಿರುವೆವು.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ III 27

ಶರೀರವೇ ನಾನು ಎನ್ನುವ ಭಾವವೂ, ಇಂದ್ರಿಯವೇ ನಾನು ಎನ್ನುವ ಭಾವವೂ, ಮನಸ್ಸೇ ನಾನು ಎನ್ನುವ ಭಾವವೂ ನಮ್ಮಲ್ಲಿ ತುಂಬಿವೆ. ಇವೇ ಭಾವ ದೋಷ. ನಾನು ಎಂದರೆ ಅಹಂ ವಸ್ತು ಜೀವಾತ್ಮ. ದೇಹೇಂದ್ರಿಯ ಮನಃ ಪ್ರಾಣ ಬುದ್ಧಿ ಭಿನ್ನ ತತ್ವ; ಇದು ಪರಮಾತ್ಮನಿಗೆ ಶೇಷವಾಗಿರುವುದು ಎನ್ನುವುದೇ ಭಾವಶುದ್ಧಿ; ಈ ಭಾವಶುದ್ಧಿಯಿಂದ ನಾವು ಪರಮಾತ್ಮನಲ್ಲಿ ಶರಣುಹೋಗಬೇಕು.

ಪ್ರಾರಬ್ಧಕರ್ಮದಿಂದ ಆಗಾಗ ಈ ಭಾವಶುದ್ಧಿಗೆ ಲೋಪಬರುವಂತಾದರೂ ಯಾವಾಗ ಭಾವ ಇರುವುದೋ ಆಗಲೇ ನಾವು ಪರಮಾತ್ಮನಲ್ಲಿ ಶರಣುಹೋದರೆ ಆ ಶರಣಾಗತಿಯಿಂದ ಪರಮಾತ್ಮನು ತೃಪ್ತನಾಗಿ ದೈವೀಸಂಪತ್ತನ್ನು ಕೊಡುವುದಲ್ಲದೇ

ಪ್ರಕೃತ ದೇಹಾವಸಾನದಲ್ಲಿ ನಮಗೆ ಮೋಕ್ಷವನ್ನು ಕೊಡುವನೆಂದು ವರಾಹಪುರಾಣದಲ್ಲಿ ಹೇಳಿದೆ.

ಸ್ಥಿತೇ ಮನಸಿ ಸುಸ್ಥೇ ಶರೀರೇ ಸತಿ ಯೋ ನರಃ ।
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ॥
ತತಸ್ತ್ಯಂ ಮ್ರಿಯಮಾಣಂ ತು ಕಾಷ್ಮಪಾಷಾಣಸನ್ನಿಭಂ ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ ॥

ಈ ಎರಡು ಶ್ಲೋಕಗಳಿಗೆ ಶ್ರೀವೈಷ್ಣವ ಸಂಪ್ರದಾಯದಲ್ಲಿ "ವರಾಹ ಚರಮ ಶ್ಲೋಕ" ವೆಂದು ಹೆಸರಿದೆ. ಇದಕ್ಕೆ ನಿಗಮಾಂತದೇಶಿಕರ ವಿಸ್ತಾರ ವ್ಯಾಖ್ಯಾನವಿದೆ. ಇದಕ್ಕೆ "ರಹಸ್ಯ ಶಿಖಾಮಣಿ" ಎಂದು ಹೆಸರು.

ಇಂತಹ ಭಾವಶುದ್ಧಿಯನ್ನು ಮನಸ್ಸಿನಲ್ಲಿಟ್ಟು "ತೂಯೋಮಾಯ್ ವಂದೋಂ" ಎಂದಿರುವಳು ಗೋದೆ.

ತೂಮಲರ್ ತೂವಿ—ಒಳ್ಳೇ ಮತ್ತು ಪರಿಶುದ್ಧವಾದ ಪುಷ್ಪಗಳನ್ನು ಸಮರ್ಪಿಸಿ.

ತೊಳ್ತುದು—ಸೇವಿಸಿ.

ವಾಯಿನಾಲ್ ಪಾಡಿ—ಬಾಯಿತುಂಬ ಹಾಡಿ.

ಮನತ್ತಿನಾಲ್ ಚಿಂತಿಕ್ಕ—ಮನಸ್ಸಿನಿಂದ ಧ್ಯಾನಮಾಡಿದರೆ

ನಮ್ಮ ತೋಟದಲ್ಲಿ ನಾವೇ ಬೆಳೆಸಿದ್ದು ಮುಳ್ಳಿಲ್ಲದ್ದು, ಸುವಾಸನೆಯಿಂದ ಕೂಡಿದ್ದು ಮತ್ತು ಶಾಸ್ತ್ರ ವಿಹಿತವಾದದ್ದು "ತೂಮಲರ್" ಇದನ್ನು ಸಮರ್ಪಿಸಿ ಎಂದಿರುವುದರಿಂದ ಆರ್ಚಾಮೂರ್ತಿಯಲ್ಲಿ ಸಮರ್ಪಣವು ಹೇಳಲ್ಪಟ್ಟಿದೆ "ತೂಮಲರ್" ಎನ್ನುವುದರಿಂದ ಪರಿಶುದ್ಧವಾದ ಪುಷ್ಪದಂತೆ ಭಾವಸಂಶುದ್ಧಿಯಿಂದ ಅರಳಿದ ದೈವೀಸಂಪತ್ತಿನಿಂದ ಕೂಡಿದ ಆತ್ಮವಸ್ತುವನ್ನು ಸಮರ್ಪಿಸಿ ಎಂದು ಪ್ರಪತ್ತಿಯು ಹೇಳಲ್ಪಟ್ಟಿದೆ. **"ವಾಯಿನಾಲ್ ಪಾಡಿ"** ಎನ್ನುವಾಗ **"ವಾಯಿನಾಲ್** ಮಾಯನೈ, ವಡಮಧುರೈವೈಂದನೈ, ತೂಯಪೆರುನೀರ್ಯಮುನೈ ತುರೈವನೈ, ಆಯರ್‌ಕುಲತ್ತಿನಿಲ್‌ತೋನ್ರುಮಣಿವಿಳಕ್ಕೈ, ತಾಯೈ ಕುಡಲ್ ವಿಳಕ್ಕಂಶೆಯ್ದ ದಾಮೋದರನೈ ಪಾಡಿ" ಎಂದು ಸೇರಿಸಿಕೊಳ್ಳಬೇಕು. ಪರಮಾತ್ಮ ಸೌಲಭ್ಯಾನುಭವದಿಂದ ಶೇಷತ್ವ ಜ್ಞಾನವು ಹುಟ್ಟಿ ಪ್ರಪನ್ನರಾದರೆ, ಪರಮಾತ್ಮನ ಸೌಶೀಲ್ಯಾನುಭವಕ್ಕಾಗಿ ಅವನ ನಾಮಗಳನ್ನು ಹಾಡಿ, ದಿವ್ಯಮಂಗಳ ವಿಗ್ರಹವನ್ನು ನೆನೆಯುತ್ತಿದ್ದರೆ ಪ್ರಪತ್ತ್ಯುತ್ತರಕೃತ್ಯದಲ್ಲಿ ಲೋಪ ಬರದೇ ಪರಮಾತ್ಮಸಂದರ್ಶನವು ಸಿದ್ಧಿಸುವುದು ಎಂದು ಹೇಳಿ ಪ್ರಪತ್ತಿಯಿಂದ ಬರುವ ಫಲವು ಮುಂದೆ ಹೇಳುತ್ತಾಳೆ ಗೋದೆ—

ಪೋಯಪಿೞೈಯುಂ ಪುಗುದರುವಾನಿನ್ರ ನವುಂ—ಹಿಂದೆ ಮಾಡಿದ ಪಾಪಗಳೂ ಮುಂದೆ ಸಂಭವಿಸುವ ಪಾಪಗಳೂ

ತೀಯಿನಿಲ್ ತೂಶಾಕುಂ—ಬೆಂಕೆಯಲ್ಲಿ ಹತ್ತಿಯಂತೆ ನಿಶ್ಶೇಷವಿನಷ್ಟವಾಗುವುದು. ತಿಳಿಯಿತೇ, ಸಖಿ, ನಾನು ಏನು ಹೇಳಿದೆನೋ ಅದನ್ನು ಮುತ್ತೈ ನೀನು ಕೇಳ್ದು—ಹೇಳು—ಆಗ ನಾನು ಹೇಳಿದ್ದು ನಿನಗೆ ತಿಳಿಯಿತೆಂದು ಭಾವಿಸುತ್ತೇನೆ.

ಏಲೋರ್ ಎಂಪಾವಾಯ್

ಪ್ರಪತ್ತಿಯಿಂದ ಎಲ್ಲಾ ಕರ್ಮಗಳೂ ನಾಶವಾಗುವವು. ಮೋಕ್ಷವು ಸಿಗುವುದು ಸಿದ್ಧ. ಆ ಮೋಕ್ಷಾನಂದವನ್ನು ಸ್ವಲ್ಪವಾದರೂ ಇಲ್ಲೇ ಅನುಭವಿಸಬೇಕಾದರೆ ಪರಮಾತ್ಮನ ಸೌಶೀಲ್ಯಗುಣವು ನಮ್ಮ ವಿಷಯದಲ್ಲಿ ಪ್ರಬುದ್ಧವಾಗಿ ಅವನು ನಮಗೆ ದರ್ಶನಕೊಡುವಂತಾಗಬೇಕಾದರೆ ಅವನ ನಾಮಗಳನ್ನು ಪ್ರಪತ್ತಿ ಮಾಡಿದ ಮೇಲೆಯೂ ಹಾಡುತ್ತಿರಬೇಕು ಮತ್ತು ಅವನ ದಿವ್ಯಮಂಗಳ ವಿಗ್ರಹವನ್ನು ನೆನೆಯುತ್ತಿರಬೇಕು ಎಂದು ಈ ಪಾಶುರದಲ್ಲಿ ಮುಖ್ಯಾರ್ಥವನ್ನು ಕೊಟ್ಟಿರುವಳು ಗೋದೆ.

ನಮ್ಮ ಕರ್ಮವು ಮೂರು ಬರೆಯಾಗಿರುವುದು 1) ಸಂಚಿತ ಕರ್ಮ 2) ಪ್ರಾರಬ್ಧ ಕರ್ಮ ಮತ್ತು 3) ಆಗಾಮಿ ಕರ್ಮ. ಪ್ರಪತ್ತಿಯಿಂದ ಸಂಚಿತ ಕರ್ಮವು ಪೂರ್ಣವಾಗಿ ನಾಶವಾಗಿ ಆಗಾಮಿ ಕರ್ಮವು ಹುಟ್ಟುವುದೇ ಇಲ್ಲಿ. ಪ್ರಾರಬ್ಧದಲ್ಲಿ ಎರಡು ವಿಧ 1) ಅಭ್ಯುಪಗತ ಪ್ರಾರಬ್ಧ ಮತ್ತು 2) ಅನಭ್ಯುಪಗತ ಪ್ರಾರಬ್ಧ. ಪ್ರಪತ್ಯನುಷ್ಠಾನದಿಂದ ಅನಭ್ಯುಪಗತ ಪ್ರಾರಬ್ಧವೂ ನಾಶವಾಗುತ್ತದೆ. ಉಳಿಯುವುದು ಅಭ್ಯುಪಗತಪ್ರಾರಬ್ಧಮಾತ್ರ. ಇದು ಪ್ರಕೃತದೇಹಾವಸಾನದಲ್ಲಿ ಮುಗಿಯುತ್ತದೆ. ನಾವು ಹುಟ್ಟುವುದಕ್ಕೆ ಮುಂಚೆಯೇ ನಮಗೆ ಮುಂದೆ ಮುಂದೆ ಬರಲೆಂದು ಪರಮಾತ್ಮನಿಂದ ಸಂಕಲ್ಪಿಸಲ್ಪಟ್ಟ ಕರ್ಮವೇ ಪ್ರಾರಬ್ಧ. ಇದು ಒಂದು ಜನ್ಮದಲ್ಲೋ ಅಧಿಕ ಜನ್ಮಗಳಲ್ಲೋ ಕಳೆಯಲೆಂದು ಮೊದಲೇ ಪರಮಾತ್ಮನಿಂದ ಸಂಕಲ್ಪಿಸಲ್ಪಟ್ಟು ಸ್ವಾಭಾವಿಕವಾಗಿ ಅನುಭವಿಸಲ್ಪಟ್ಟು ಸುಖದುಃಖಾದಿ ರೂಪದಲ್ಲಿ ಕಳೆಯುತ್ತದೆ. ಪ್ರಕೃತಜನ್ಮದಲ್ಲಿ ಕಾರ್ಯಕಾರಿಯಾಗುವ ಕರ್ಮಕ್ಕೆ ಅಭ್ಯುಪಗತ ಪ್ರಾರಬ್ಧವೆಂದೂ, ಮುಂದಿನ ನಿಶ್ಚಿತ ಜನ್ಮಗಳಲ್ಲಿ ಕಳೆಯುವ ಕರ್ಮಕ್ಕೆ ಅನಭ್ಯುಪಗತ ಪ್ರಾರಬ್ಧವೆಂದೂ ಹೆಸರಿಡಲಾಗಿದೆ. ಇವೆರಡೂ ಸಂಚಿತಕರ್ಮದಿಂದ ಪರಮಾತ್ಮನಿಂದಲೇ ನಮ್ಮ ಹಿತಕ್ಕಾಗಿ ಆರಿಸಲ್ಪಟ್ಟ ಕರ್ಮಗಳು. ಇವನ್ನು ಅನುಭವಿಸಲೇಬೇಕು. ಆದರೆ ಪ್ರಕೃತ ಜನ್ಮದಲ್ಲಿ ಪ್ರವಹಿಸುತ್ತಿರುವ ಕರ್ಮ ಮಾತ್ರ ಪ್ರಪನ್ನನಿಗೆ ಉಳಿದು ಅನಭ್ಯುಪಗತ ಪ್ರಾರಬ್ಧವೂ ತೀರಿಹೋಗುವುದು. ನಮ್ಮಮೇಲೆ ಅನೇಕ ಅಪರಾಧಗಳಿದ್ದು ಕೆಲವು ಮಾತ್ರ ತೀರ್ಪಿಗೆ ಒಳಗಾಗಿ ಮಿಕ್ಕವು ಇನ್ನೂ ನ್ಯಾಯಾಸ್ಥಾನದ ಮುಂದೆ ಬರದೆ ಇರುವಂತೆ ನಾವು ಪ್ರಾರಬ್ಧವನ್ನೂ, ಸಂಚಿತಕರ್ಮವನ್ನೂ ತಿಳಿಯಬೇಕು. ಪ್ರಾರಬ್ಧವೆಂದರೆ decreed offences. ಇದಕ್ಕೆ ಅದೃಷ್ಟ, ದಿಷ್ಟ ನಿಯತಿ ಎಂದು ಶಾಸ್ತ್ರವು ಹೆಸರಿಟ್ಟಿದೆ. ಪ್ರಪನ್ನನ ವಿಷಯದಲ್ಲಿ ಈ ವಿಧಿ ಅದೃಷ್ಟವೆಂದರೆ ಈ ಜನ್ಮದಲ್ಲಿ ನಾವು ಬದುಕಿರುವವರೆಗೂ ಅನುಭವಿಸಲೇಬೇಕಾದ ಕರ್ಮವೆಂದು ತಿಳಿಯಬೇಕು. ಅಲ್ಲದೆ ನಾವು ಪ್ರಪನ್ನರಾದಮೇಲೆ ಅಜ್ಞಾನದಿಂದ ಪಾಪ ಮಾಡಿ

ದರೂ ಅದು ಕರ್ಮಶೇಷವನ್ನು ಬಿಡುವುದಿಲ್ಲ. ಆದರೆ ಆ ಪಾಪಗಳಿಗೆ ಈ ಜನ್ಮಕಾಲದಲ್ಲೇ ಶಿಕ್ಷೆಯನ್ನು ಅನುಭವಿಸುವೆವು. ಅಂದರೆ ನಮಗೆ ಆಗಾಮಿ ಕರ್ಮವೂ ಇರುವುದಿಲ್ಲ.

ಗೋದೆಯು **ಪೋನ ಪಿಗ್ಗೈಯುಂ** ಎಂದಿರುವುದು ಸಂಚಿತಕರ್ಮ; **ಪುಕು ದರುವಾ ನಿನ್ರನವುಂ** ಎಂದಿರುವುದು ಅನಭ್ಯುಪಗತ ಪ್ರಾರಬ್ಧ ಮತ್ತು ಆಗಾಮಿ ಕರ್ಮ ಎಂದು ಅರ್ಥಮಾಡಿಕೊಳ್ಳಬೇಕು. ನಿಗಮಾಂತದೇಶಿಕರು ಈ ಅರ್ಥವೆಲ್ಲವನ್ನೂ ಒಂದು ಶ್ಲೋಕದಲ್ಲಿ ಸಂಗ್ರಹಿಸಿರುವರು. ಅದುವಿದು

ಪ್ರಾರಬ್ಧೇತರಪೂರ್ವಪಾಪಮುಖಿಲಂ ಪ್ರಾವಾಮಾದಿಕಂ ಚೋತ್ತರಂ
ನ್ಯಾಸೇನ ಕ್ಷಪಯರ್ ಅನಭ್ಯುಪಗತಪ್ರಾರಬ್ಧಖಂಡಂ ಚ ನಃ।
ಧೀಪೂರ್ವೋತ್ತರಪಾಪ್ಮನಾಮಜನನಾತ್ ಜಾತೇಪಿ ತನ್ನಿಷ್ಠತೇಃ
ಕಾಟಲ್ಯೇ ಸತಿ ಶಿಕ್ಷಯಾಪ್ಯನಘರ್ಯ ಕ್ರೋಢೀಕರೋತಿ ಪ್ರಭುಃ ॥

ಇದಕ್ಕೆ ಶ್ರುತಿಯ ಆಧಾರವೂ ಇದೆ.

(1) ಛಾಂ IV, 14—ಸತ್ಯಕಾಮ ಜಾಬಾಲಿಯು ತನ್ನ ಶಿಷ್ಯ ಉಪಕೋಸಲನಿಗೆ

ಅಹಂ ತು ತೇ ತದ್ವದಿಷ್ಯಾಮಿ, ಯಥಾ ಪುಷ್ಕರಪಲಾಶೇ ಆಪೋನ ಶ್ಲಿಷ್ಯಂತೇ, ಏವಮೇವಂ ವಿದಿ ಪಾಪಂ ಕರ್ಮ ನ ಶ್ಲಿಷ್ಯತೇ

ಎಂದು ಹೇಳಿ ಬ್ರಹ್ಮವಿದ್ಯೆಯನ್ನುಪದೇಶಿಸಿದರು. ಇವರು ಉಪದೇಶಿಸಿದ ಬ್ರಹ್ಮಜ್ಞಾನದಿಂದ ಆಗಾಮಿ ಕರ್ಮಸಂಗ ಬರುವುದಿಲ್ಲವೆಂದು ಹೇಳಿರುವುದರಲ್ಲಿ, ಸಂಚಿತ ಕರ್ಮವೂ ನಾಶವಾಗುವುದೆಂದು ಅರ್ಥ ಬರುತ್ತದೆ. (ಭಾರತ–ಉದ್ಯೋಗ)

ಪಾಪಂ ಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃಪುನಃ ।
ನಷ್ಟಪ್ರಜ್ಞಃ ಪಾಪಮೇವ ಪುನರಾರಭತೇ ನರಃ ॥

ಎಂದು ಭಾರತ ಉದ್ಯೋಗ ಪರ್ವದಲ್ಲಿ ಹೇಳಿರುವಂತೆ (35–74) ಸಂಚಿತ ಕರ್ಮವು ಉಳಿಯುವಂತಾದರೆ ಪುಷ್ಕರಪಲಾಶದಂತೆ ಮನುಷ್ಯನಾಗಲಾರ. ಪುಷ್ಕರಪಲಾಶವೆಂದರೆ ಕಮಲದೆಲೆ; ಅದರಲ್ಲಿ ನೀರು ಬಿದ್ದರೆ ನೀರು ಅದರಲ್ಲಿ ಅಂಟಿಕೊಳ್ಳದೆ, ಬೆಳ್ಳಿಯಂತೆ ಕಂಡು ಬರುವುದಲ್ಲದೆ ಒದರಿದರೆ ಯಾವಶೇಷವೂ ಇಲ್ಲದೇ ಬೀಳುತ್ತದೆ. ಹಾಗೆಯೇ ಉಪಕೋಸಲನಿಗೆ ಉಪದೇಶಿಸಿದ ಜ್ಞಾನದಿಂದ ಯಾವನೂ ಪುನೀತನಾಗುವನು. ಬ್ರಹ್ಮಜ್ಞಾನ ಬಂದಮೇಲೆ ಯಾವ ಕರ್ಮ ಮಾಡಿದರೂ ಅದು ಬೆಳ್ಳಿಯಂತೆ ಲೋಕೋಪಕಾರಿಯಾಗುವುದಲ್ಲದೆ ಆ ಕರ್ಮದಿಂದ ಅವನಿಗೆ ಯಾವಲೇಪವೂ ಇರುವುದಿಲ್ಲ. ಅಂತಹ ಮಹಿಮೆಯುಳ್ಳ ಬ್ರಹ್ಮಜ್ಞಾನವಾವುದೆಂದರೆ

ಯ ಏಷೋಽಕ್ಷಿಣಿ ಪುರುಷೋ ದೃಶ್ಯತೇ, ಏಷ
ಆತ್ಮಾ. . . ತದಮೃತಂ ಅಭಯಂ ಏತತ್ ಬ್ರಹ್ಮ

ಯಾವ ಪುರುಷನು ಕಣ್ಣಿನಲ್ಲಿ ಕಾಣಿಸಿಕೊಳ್ಳುವನೋ ಅವನೇ ಆತ್ಮ, ಅವನೇ ಅಮೃತ, ಅವನೇ ಅಭಯ, ಅವನೇ ಬ್ರಹ್ಮ. "ಅಹಂ ಬ್ರಹ್ಮಾಸ್ಮಿ" ಎನ್ನುವ ಜ್ಞಾನದಲ್ಲಿ

ಸಂಕುಚಿತವಾಗಿ ನೋಡಲ್ಪಡುವ ಬ್ರಹ್ಮವು ಅಮೃತವಲ್ಲ ಅಭಯವಲ್ಲ. "ಅಕ್ಷಿಣಿ" ಎಂದು ಸಪ್ತಮ್ಯಾವಿಭಕ್ತಿಯಲ್ಲಿದೆ. ಬ್ರಹ್ಮವಸ್ತುವಿಗೆ ಕಣ್ಣು ಆಧಾರ; ಪರಮಾತ್ಮನು ಆಧೇಯ; ಅಂದರೆ ಭಕ್ತನ ಕಣ್ಣು ದೃಷ್ಟಿಯಿಂದ ಒಂದು ಕ್ಷಣವೂ ಬಿಟ್ಟಿರಲಾರದವನು ಸುಶೀಲ. ಸೌಶೀಲ್ಯ ಗುಣವಿಶಿಷ್ಟನೇ ತನ್ನ ಗುಣದಿಂದ ನಮ್ಮೊಡನೆ ಕಲೆತು ಆನಂದಾನುಭವ ಕೊಡುವವನೇ ಬ್ರಹ್ಮ, ಅಮೃತಸ್ವರೂಪನು; ಪುರುಷನು ಎಂದರೆ ದಿವ್ಯ ಮಂಗಳವಿಗ್ರಹವಿಶಿಷ್ಟನು; ಅಭಯನು ಅಂದರೆ ಯಾವನ ಸೌಲಭ್ಯದಿಂದ ನಮಗೆ ಯಾವ ಭಯವೂ ಬರುವದಿಲ್ಲವೋ ಅವನೇ

ಏತಂ ಸಂಯದ್ವಾಮ ಇತ್ಯಾಚಕ್ಷತೇ
ಏಷ ಉ ಏವ ವಾಮನಿಃ ಏಷ ಉ ಏವ ಭಾಮನಿಃ

"ಸಂಯದ್ವಾಮಃ"–ಸಂಯಂತಿ, ಸಂಗತಾನಿ ವಾಮಾನಿ ವನನೀಯಾನಿ ಪ್ರಾರ್ಥನೀಯಾನಿ ಯಸ್ಮಿನ್, ಅರ್ಥಾತ್ ಸತ್ಯಸಂಕಲ್ಪನೂ, ಸರ್ವಕಲ್ಯಾಣಗುಣವಿಶಿಷ್ಟನೂ, ಶರಣ್ಯನೂ; "ವಾಮನಿಃ"–ಸ್ವಾಶ್ರಿತೇಷು ಶೋಭನಪ್ರಾಪಕಃ; "ಭಾಮನಿಃ"–ಸರ್ವಲೋಕವ್ಯಾಪ್ತದೀಪ್ತಿಮದ್ವಿಗ್ರಹಯುಕ್ತಃ.

ಈ ಶ್ರುತಿವಾಕ್ಯವನ್ನು ಬ್ರಹ್ಮಸೂತ್ರ I, 2, 13 ರಲ್ಲಿ ವ್ಯಾಖ್ಯಾನಮಾಡುವಾಗ ಸುದರ್ಶನಾಚಾರ್ಯರು "ನಿರುಪಾಧಿಕಾವ್ಯತತ್ವಾದಯೋ ನ ಜೀವಾದಿಷು ಸಂಭವಂತಿ" ಎಂದು ವಿಶದಮಾಡಿರುವರು.

2) ಛಾ V, 24, 3—ವೈಶ್ವಾನರ ವಿದ್ಯೆಯನ್ನು ಹೇಳುವಾಗ ಅದಕ್ಕೆ ಅಂಗವಿದ್ಯೆಯಾದ ಪ್ರಾಣಾಗ್ನಿಹೋತ್ರ ವಿದ್ಯಾ ಪ್ರಸ್ತಾಪದಲ್ಲಿ

ತದ್ಯಥೇಷಿಕಾತೂಲಮಗ್ನೌ ಪ್ರೋತಂ ಪ್ರದೂಯೇತ;
ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ

ಎಂದು ವಿದ್ಯಾ ಫಲವು ಹೇಳಲ್ಪಟ್ಟಿದೆ. ಪ್ರಾಣಾಗ್ನಿಹೋತ್ರ ವಿದ್ಯಾವನ್ನು ಗೀತಾಚಾರ್ಯನು

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ
ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ
ಸರ್ವೇಪ್ಯೇತೇ ಯಜ್ಞವಿದಃ ಯಜ್ಞಕ್ಷಪಿತಕಲ್ಮಷಾಃ ॥

ಎಂದು ಒಂದು ರೀತಿಯಲ್ಲಿ ಹೇಳಿರುವನು. ಇಲ್ಲಿ ಹೇಳಿರುವ ಕರ್ಮಯೋಗವನ್ನು ಜ್ಞಾನ ಯೋಗಾಂಗವಾಗಿ ಮಾಡುತ್ತಲೇ ಇರಬೇಕು. ಇಲ್ಲದಿದ್ದರೆ ಜ್ಞಾನಯೋಗ ವಿಚ್ಛಿದ ಬರುತ್ತದೆ. ಆದರೆ ಮೇಲೆ ಹೇಳಿದ ಪ್ರಾಣಾಗ್ನಿಹೋತ್ರವಿದ್ಯೆಯನ್ನು ವೈಶ್ವಾನರ ವಿದ್ಯೆಗೆ ಅಂಗವಾಗಿ ಅನುಷ್ಠಿಸಿದರೆ ಆಗ ಅದು ಶರಣಾಗತಿಯಾಗುತ್ತದೆ. ಈಯರ್ಥವನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಬೇಕು. ವೈಶ್ವಾನರನೆನ್ನುವ

ಅಗ್ನಿಯಲ್ಲಿ ಅಗ್ನಿಹೋತ್ರ ಮಾಡಿದರೆ ಅಂದರೆ ಆತ್ಮಸಮರ್ಪಣೆ ಮಾಡಿದರೆ ಆಗ ಬರುವ ಫಲ "ತದ್ಯಥಾ .... ಪ್ರದೂಯಂತೆ" ಅಂದರೆ ಈ ವಿದ್ಯೆಯನ್ನು ಅನುಷ್ಠಿಸುವವನ ಸಕಲ ಪಾಪಗಳೂ, ಅಗ್ನಿಯಲ್ಲಿ ಹಾಕಿದ ಹತ್ತಿಯಂತೆ ಭಸ್ಮವಾಗುತ್ತವೆ.

ಸ್ವಾಪದೇಶ

ಮಾಯನೈ—ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವಂತೆ ಸಂಸಾರಿಯಾದ ನನ್ನನ್ನು ಸ್ವೀಕರಿಸಿ ನನಗಾಗಿ ಪ್ರಪತ್ಯನುಷ್ಠಾನ ಮಾಡಿ ಮೋಕ್ಷಸಾಮ್ರಾಜ್ಯ ಕೊಡುವ ಆಶ್ಚರ್ಯಚೇಷ್ಟಿತನೇ—ಮಧುರ ಕವಿಯು ತನ್ನ ಆಚಾರ್ಯರಾದ ಶಠಗೋಪರನ್ನು ಸ್ತುತಿಸುವಾಗ ತನ್ನನ್ನು

ನನ್ಮೈಯಾಲ್ ನಾನ್ಮರೈಯಾಳರ್‌ಕಳ್ ಪುನ್ಮೈ
ಯಾಕ ಕರುದುವರ್ —ಕಂ–ತಿ

ಎಂದು ಹೇಳಿಕೊಂಡು ತನ್ನ ಆಚಾರ್ಯನು

ಶೆಯಲ್ ನನ್ರಾಹ ತ್ತಿರುತ್ತಿ ಪ್ಪಣಿಕೊಳ್ವಾರ್ —ಕಂ–ತಿ

ಎಂದಿರುವರು. ಹಾಗೆಯೇ ತಿರುವರಂಗತ್ತು ಅಮುಧನಾರ್ ಅವರು ಪ್ರಾಚಾರ್ಯರಾದ ರಾಮಾನುಜರ ವಿಷಯದಲ್ಲಿ

ಆಕ್ಕಿ ಯಡಿಮೈ ನಿಲೈಪ್ಪಿತ್ತನೈ ಎನ್ನೈ ಇನ್ರು
ಅವಮೇ ಪೋಕ್ಕಿ ಪುರತ್ತಿಟ್ಟದು ಎಂ ಪೊರುಳಾ ಮುನ್ನು
ಪುಣ್ಣಿಯರ್‌ತಂ ವಾಕ್ಕಿಲ್ ಪಿರಿಯಾ ವಿರಾಮಾನುಜ
ನಿಂ ಅರುಳಿ ವಣ್ಣಂ ನೋಕ್ಕಿಲ್ ತೆರಿವರಿದಾಲ್ ಉರೈ
ಯಾಯ್ ಇಂದ ನುಣ್ ಪೊರುಳೇ —ರಾ–ನೂ–38

ಎಂದು ಹೇಳಿರುವರು. ಅದಕ್ಕಾಗಿಯೇ ನಿಗಮಾಂತದೇಶಿಕರು.

"ಆಚಾರ್ಯಾದಿಹ ದೇವತಾಂ ಸಮಧಿಕಾಮನ್ಯಾಂ ನ ಮನ್ಯಾಮಹೇ" ಎಂದಿರುವರು.

ತಿರುವರಂಗತ್ತು ಅಮುದನಾರ್—ಅವರು ಮತ್ತೆ 52ನೇ ಪಾಶುರದಲ್ಲಿ ರಾಮಾನುಜರು ಮಾಡಿದ ಅರ್ಚ್ಯತವನ್ನು ವರ್ಣಿಸಿರುವರು.

ಮನ್ನು . . . ಮೈಂದನೈ—ಭಗವತ್ಸಂಬಂಧವನ್ನು ಯಾವ ಯುಗದಲ್ಲೂ ಬಿಟ್ಟಲ್ಲದ ಮಧುರೆಯಲ್ಲಿ ಅತಿಯಾಸೆಯಿಟ್ಟಿರುವ ರಾಜನೇ, ಅಥವಾ, ಮಧು–

ಸಂಸಾರಗಂಧವು, ರೀಯತೇ–ಕ್ಷೀಯತೇ ಯಸ್ಮಿನ್ ಸಾ ಮಧುರಾ ಅಂದರೆ ಲೀಲಾ ವಿಭೂತಿ ಈ ಪ್ರಪಂಚ; ಇಲ್ಲಿಗೆ ವೈಕುಂಠದಿಂದ ಬಂದ ಮೋಚಕನೇ

ತೂಯ . . . ವನ್ಮೈ—ಇಲ್ಲಿ ಯಮುನೆ ಯೆನ್ನುವುದು ಮಿಕ್ಕ ನದಿಗಳಿಗೆ ಉಪಲಕ್ಷಣ; ತಾಂಬ್ರಪರ್ಣೀ ಕಾವೇರೀ ಮೊದಲಾದ ಪುಣ್ಯ ನದೀ ತೀರದಲ್ಲಿ ಜನಿಸಿದವನೇ; ಮಹಾತ್ಮರು ಕಲಿಯುಗದಲ್ಲಿ ಪುಣ್ಯ ನದಿಗಳ ತೀರದಲ್ಲಿ ಅವತರಿಸಿ ಪರಮಾತ್ಮನ ಹಿರಿಮೆಯನ್ನು ಎತ್ತಿ ಹಿಡಿದು ಸದುಪದೇಶಮಾಡಿ ಶರಣಾಗತಿಯಿಂದ ಎಲ್ಲರನ್ನೂ ಕೃತಾರ್ಥರನ್ನಾಗಿ ಮಾಡುವರೆಂದು ಭಾಗ XI, 5, 38 ರಲ್ಲಿ ಹೇಳಲಾಗಿದೆ.

ಕೃತಾದಿಷು ಪ್ರಜಾ ರಾಜ್ಞ ಕಲಾವಿಚ್ಛಂತಿ ಸಂಭವಂ ।
ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ ॥
ಕ್ವಚಿತ್ಕ್ವಚಿನ್ಮಹಾರಾಜ ದ್ರವಿಡೇಷು ಚ ಭೂರಿಶಃ ।
ತಾಂಬ್ರಪರ್ಣೀ ನದೀ ಯತ್ರ ಕೃತಮಾಲಾ ತಪಸ್ವಿನೀ ॥
ಕಾವೇರಿ ಚ ಮಹಾಪುಣ್ಯಾ ಪ್ರತೀಚೀ ಚ ಮಹಾನದೀ ।
ಯೇ ಪಿಬಂತಿ ಜಲಂ ತಾಸಾಂ ಮನುಜಾ ಮನುಜೇಶ್ವರ

ಎಂದು ಹೇಳಿ

ಕಲೌ ದೋಷನಿಧೇ ರಾಜ್ಞ ಅಸ್ತಿ ಹ್ಯೇಕೋ ಮಹಾನ್ ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಬಂಧಃ ಪರಂ ವ್ರಜೇತ್ ॥
XII, 3, 51

ಯೇ ಚ ವೇದವಿದೋ ವಿಪ್ರಾಃ ಯೇ ಚಾಧ್ಯಾತ್ಮವಿದೋ ಜನಾಃ ।
ತೇ ವದಂತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಂ ॥
ಭಾ–ಆ 71–123

ಶ್ರೀಕೃಷ್ಣನೇ ಧರ್ಮ ಅಂದರೆ ಮೋಕ್ಷಪ್ರದನು ಅರ್ಥಾತ್ ಸಿದ್ಧೋಪಾಯನು. ಮೋಕ್ಷೋಪಾಯವು ಎರಡು ವಿಧ. ಸಾಧ್ಯೋಪಾಯ ಮತ್ತು ಸಿದ್ಧೋಪಾಯವೆಂದು; ಭಕ್ತಿ ಮತ್ತು ಪ್ರಪತ್ತಿ ಇವೆರಡೂ ಸಾಧ್ಯೋಪಾಯಗಳು; ಇವುಗಳಿಂದ ಪರಮಾತ್ಮನು ಪ್ರಸನ್ನನಾಗಿ ತನ್ನ ಕೃಪೆಯಿಂದ ಮೋಕ್ಷವನ್ನು ಕೊಡುವನು. ಅವನೇ ಸಿದ್ಧೋಪಾಯ. ಆ ಸಿದ್ಧೋಪಾಯನನ್ನು ಒಲಿಸಲು ಕೀರ್ತನವೊಂದೇ ಸಾಧನವೆಂದು ಗೋದೆಯು ಇಲ್ಲಿ ಹೇಳಿರುವಳು. ಕೀರ್ತನವು ಪ್ರಾರ್ಥನಾರೂಪದಲ್ಲಿ ಪ್ರಪತ್ತಿ ಎನಿಸಿಕೊಳ್ಳುತ್ತದೆ. ರಾಮಾನುಜರು

ಪ್ರಪತ್ತಿಃ ವಿಶ್ವಾಸಃ ಸಕೃತ್ಪ್ರಾರ್ಥನಾಮಾತ್ರೇಣ
ಅಪೇಕ್ಷಿತಂ ದಾಸ್ಯತೀತಿ ವಿಶ್ವಾಸಪೂರ್ವಕಂ ಪ್ರಾರ್ಥನಂ

ಎಂದಿರುವರು. ಈ ಪ್ರಪತ್ತಿಯನ್ನು ನಮಗಾಗಿ ತಾವು ಅನುಷ್ಠಿಸಲು ಆಚಾರ್ಯರು ತಾಂಬ್ರಪರ್ಣೀ ಮೊದಲಾದ ನದೀತೀರಗಳಲ್ಲಿ ಅವತರಿಸುವರು.

ಆಯರ್ . . . ವಿಳಕ್ಕೈ—ಜ್ಞಾನ, ಅನುಷ್ಠಾನ ಮತ್ತು ವೈರಾಗ್ಯಶೂನ್ಯರಾದ ನಾವು ವಾಸಿಸುವ ಸ್ಥಳವೇ "ಆಯಪ್ಪಾಡಿ"; ಅಲ್ಲಿ ತೋರಿಕೊಂಡು ನಮ್ಮನ್ನು ಪ್ರಕಾಶಶಾಲಿಗಳನ್ನಾಗಿ ಮಾಡುವ ಭಾಸ್ಕರನನ್ನು

ತಾಯೈ . . . . ದಾಮೋದರನೈ

ಆಯಾತು ವರದಾ ದೇವಿ . . . . ಗಾಯತ್ರೀಚ್ಛಂದಸಾಂ ಮಾತಾ—ಎಂದು ಹೇಳಿರುವಂತೆ ಗಾಯತ್ರೀಯೆನ್ನುವ ತಾಯಿಯ ಮಧ್ಯಭಾಗವಾದ "ಭರ್ಗೋ ದೇವಸ್ಯ ಧೀಮಹಿ" ಎನ್ನುವುದನ್ನು ಪ್ರಕಾಶ ಪಡಿಸುವವನನ್ನು ಅಥವಾ ತಾಯಿಗೂ ತಾಯಾದ ಮೂಲಮಂತ್ರದ ಮಧ್ಯಭಾಗವಾದ "ನಮಃ" ಎನ್ನುವುದನ್ನು ಪ್ರಸಿದ್ಧಿ ಪಡಿಸಿದವನನ್ನು

ಎಟ್ಟಿನೋಡಿರಂಡೆನುಂ ಕಯಟ್ಟ್ರಿನಾಲ್ ಮನತ್ತನೈ ಕ್ಕಟ್ಟಿ

ಎಂದು ತಿರುಮಳಿಶೈ ಆಳ್ವಾರ್ರು ಹೇಳಿರುವಂತೆ ದಾಮೋದರನಾದ ಆಚಾರ್ಯನನ್ನು

ತೂಯೋಮಾಯ್ ವಂದು—ಆಚಾರ್ಯನೇ ಪರಮ ದೈವವೆನ್ನುವ ಭಾವ ಶುದ್ಧಿಯೊಡನೆ ಬಂದು

ತೂಮಲರ್ . . . . ಚಿಂತಿಕ್ಕ—"ಗುರುಂ ಪ್ರಕಾಶಯೇದ್ಧೀಮಾನ್" ಎಂದೂ, "ಪೀತಕವಾಡೈ ಪಿರಾನಾರ್ ಪಿರಮಗುರುವಾಕಿ ವಂದು" ಎಂದೂ, "ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಂ | ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ" ಎಂದೂ ಹೇಳಿರುವಂತೆ ಶ್ರೀಮನ್ನಾರಾಯಣನೇ ಆಚಾರ್ಯನಾಗಿ ಬರುವುದರಿಂದ ಅವನ ಪಾದಾರವಿಂದದಲ್ಲಿ ಪುಷ್ಪವನ್ನು ಸಮರ್ಪಿಸಿ, ಅವನ ನಾಮವನ್ನು ಹಾಡಿ, ಅವನನ್ನು ಮನಸ್ಸಿನಲ್ಲಿ ಧ್ಯಾನಮಾಡಿವರೆ—

ಪೋನರ್ಪಿಣಳಯುಂ, ಪುಕುದರುವಾ ನಿನ್ರವುಂ, ತೀಯಿನಿಲ್
ತೂಶಾಕುಂ —ಏಲೋಕ ಎಂಪಾವಾಯ್

ಭಾಗ ೨

ತಿರುಪ್ಪಾವೈ ಐದೈದು ಪದ್ಯಗಳಿಗೆ ಒಂದೊಂದು ಪರ್ವ. ಮೊದಲಿನ ಐದು ಪದ್ಯಗಳಲ್ಲಿ ಪರಮಾತ್ಮನ ಪೂರ್ಣ ಸ್ವರೂಪವು ಹೇಳಲ್ಪಟ್ಟು ಎಲ್ಲಾ ಗೋಪಿಯರೂ ಶರಣು ಹೋಗಿಯಾಯಿತು. ಅನನ್ಯ ಪ್ರಯೋಜನರಾಗಿ, ತ್ರಿಕರಣ ಶುದ್ಧಿಯಿಂದ ಪರಮಾತ್ಮನ ಭಜನೆಯಿಂದ ಪಾಪವೆಲ್ಲವೂ ನಾಶವಾಗುತ್ತದೆಂದು ಪೂರ್ಣವಿಶ್ವಾಸದೊಡನೆ ಅವನನ್ನು ಪ್ರತ್ಯಕ್ಷದಲ್ಲಿ ಅನುಭವಿಸಲು ಒಟ್ಟುಗೂಡಿಯಾಯಿತು. ಗೋದೆಯು ಬಾಲಿಕೆಯರನ್ನೆಲ್ಲಾ ನೋಡಿ, ಅವರಲ್ಲಿ ಪರಮಾತ್ಮನಿಗೆ ಪ್ರಿಯರಾದ ಹತ್ತು ಬಾಲಿಕೆಯರು ಇಲ್ಲವೆಂದು ತಿಳಿದು ಅವರನ್ನು ಎಬ್ಬಿಸಲು ಹೊರಟು, ಮೊದಲಿನ ಐದು ಪಾಶುರಗಳಲ್ಲಿ (6–10) ಭಗವದನುಭವದಲ್ಲಿ ಹೊಸಬರಾದ ಐವರನ್ನು ಎಬ್ಬಿಸುವಳು. "ಏಕಃ ಸ್ವಾದು ನ ಭುಂಜೀತ," ಎನ್ನುವ ನಿಯಮದಂತೆ ಪರಮ ಸ್ವಾದುವಾರ ಪರಮಾತ್ಮಾನುಭವದಲ್ಲಿ ಏಕಾಂತಕ್ಕಿಂತಲೂ ಕೂಡಿ ಇರುವುದರಿಂದ ಭೋಗ್ಯತೆಯು ಹೆಚ್ಚುವುದು. ಇವರೆಲ್ಲರಿಗೂ ಕೃಷ್ಣನಲ್ಲಿ ಪ್ರೇಮವಿದೆ. ಆದರೆ ಕೆಲವರು ಸ್ವಾರ್ಥಪರರು; ಸಂಕುಚಿತ ಬುದ್ಧಿಯಿಂದ ಪರಮಾತ್ಮನನ್ನು ತಮ್ಮ ಅಂತರ್ಹೃದಯದಲ್ಲೇ ಅನುಭವಿಸುತ್ತಾ ಬಾಹ್ಯ ಸಂಶ್ಲೇಷಾದಿಗಳಿಂದ ಬರುವ ಆನಂದವನ್ನು ಅರಿಯರಲ್ಲಾ ಎನ್ನುವ ಕೃಪೆಯಿಂದ ಅವರೆಲ್ಲರನ್ನೂ ಒಬ್ಬೊಬ್ಬರನಾಗಿ ಕರೆಯಲು ಹೊರಟು ಮೊದಲು ಭಗವದನುಭವಕ್ಕೆ ಅತಿ ಹೊಸಬಳನ್ನು ಕರೆಯುವಳು ಆರನೇ ಪಾಶುರದಲ್ಲಿ. ಈ ಐದು ಪಾಶುರಗಳಲ್ಲಿ (6–10) ನಿದ್ದೆ ಮಾಡುತ್ತಿರುವ ಗೋಪಿಕೆಯರನ್ನು ಎಬ್ಬಿಸುವಂತಿದೆ. ಈ ನಿದ್ದೆ ಸಾಮಾನ್ಯ ನಿದ್ದೆಯಲ್ಲ. ಯೋಗನಿದ್ರೆ—ಪರಮಾತ್ಮಾನುಭವದಲ್ಲಿ ಜಾಗೃತವಾದ ಅಂತರ್ಮುಖತೆ, ಮೊದಲಿನ ಬಾಲಿಕೆಯನ್ನು "ಪಿಳ್ಳಾಯ್" ಎಂದು ಕರೆದಿರುವಳು.

ಪುಳ್ಳುಂ ಶಿಲಂಬಿನಕಾಣ್ ಪುಳ್ಳರೈಯಿನ್ ಕೋಯಿಲಿಲ್
ವೆಳ್ಳೈ ವಿಳಿಶಂಗಿನ್ ಪೇರರವಂ ಕೇಟ್ಟಿಲೈಯೋ
ಪಿಳ್ಳಾಯ್ ಎಳ್ಳಂದಿರಾಯ್ ಪೆಯ್‌ಮುಲೈ ನಂಜುಂಡು
ಕಳ್ಳಚ್ಚಕಟಂ ಕಲಕ್ಕಳಿಯ ಕಾಲೋಚ್ಚಿ
ವೆಳ್ಳತ್ತರವಿಲ್ ತುಯಿಲಮರ್ನ್ದ ವಿತ್ತಿನೈ
ಉಳ್ಳತ್ತುಕೊಂಡು ಮುನಿವರ್ಗಳುಂ ಯೋಗಿಗಳುಂ
ಮೆಳ್ಳವೆಳ್ಳಂದು ಅರಿಯೆನ್ನ ಪೇರರವಂ
ಉಳ್ಳಂ ಪುಕುಂದು ಕುಳಿರ್ನ್ದು ಎಲೋರೆಂಪಾವಾಯ್ ॥ ೬ ॥

ಬೆಳಗಾಯಿತು; ಏಳು; ಏಕಾಂತಾನುಭವದಲ್ಲಿ ಸುಖವು ಹಿತವಾಗಿದೆಯೆಂದು ಭ್ರಮಿಸಿರುವ ಹುಡುಗಿ, ಏಳು, ಪ್ರೀತಿಯ ಲಕ್ಷಣವು ಇದಲ್ಲ

ಅಹಂ ಸರ್ವಸ್ಯ ಪ್ರಭವಃ ಮತ್ತಸ್ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ಗೀX–8
ಮಚ್ಚಿತ್ತಾ ಮದ್ಗತಪ್ರಾಣಾ ಭೋಧಯಂತಃ ಪರಸ್ಪರಂ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ ಗೀX–9

ಎಂದು ಶ್ರೀಕೃಷ್ಣನೇ ಹೇಳಿರುವಂತೆ ನಾವು ಕಲೆತು ಅವನನ್ನು ಅನುಭವಿಸಿದರೆ ಅದರಲ್ಲಿ ಸುಖವುಂಟು—ಎನ್ನುತ್ತಾಳೆ ಗೋದೆ, ಇವಳ ಧ್ವನಿಯನ್ನು ಕೇಳಿ ಒಳಗಿರುವ ಬಾಲಿಕೆಯು "ಏನೇ, ಬೆಳಗಾಗಿಲ್ಲ, ಏಕೆ ನನಗೆ ತೊಂದರೆ ಕೊಡುವಿ" ಎನ್ನಲಾಗಿ, ಗೋದೆಯು "ನೋಡೆ, ನಾವು ಎದ್ದು ಬಂದಿಲ್ಲವೇ?" ಎಂದಾಗ ಅವಳು "ನಿದ್ರಿಸುತ್ತಿರುವವರಿಗೆ ಎಚ್ಚರವಾದರೆ ಬೆಳಗಾಯಿತೆನ್ನಬಹುದು; ನನಗೆ ಇನ್ನೂ ನಿದ್ದೆ ತಿಳಿದಿಲ್ಲ" ಎನ್ನುವಾಗ ಪಾಶುರ ಪ್ರಾರಂಭವಾಗಿದೆ. **ಪುಳ್ಳುಂ ಶಿಲಂಬಿನಕಾಣ್**—ಹಕ್ಕಿಗಳು ತಮ್ಮ ಆಹಾರವನ್ನು ಹುಡುಕಿಕೊಂಡು ಗೂಡಿನಿಂದ ಹೊರಬಿದ್ದಿವೆ. ಪಕ್ಷಿಗಳಿಗೆ ಕಾಲಜ್ಞಾನವುಂಟು. ಅವು ತಾವಾಗಿ ಏಳುತ್ತವೆ—ಎಂದು ಗೋದೆಯು ಹೇಳಿದಾಗ ಒಳಗಿರುವಳು. "ನೀವು ಗುಂಪು ಕಟ್ಟಿಕೊಂಡು ಗೋವಿಂದ ಭಜನಮಾಡುತ್ತಾ ಹೊರಟಿರುವಿರಿ; ಅವನ ನೆನಪಿನಲ್ಲಿ ನಿಮಗೆ ನಿದ್ದೆ ಬರದೆ ಎದ್ದು ಹೊರಟಿರುವಿರಿ; ನಿಮಗೆ ಅವನನ್ನು ಸೇರಬೇಕೆನ್ನುವ ಆತುರದಲ್ಲಿ ಕಾಲವೇ ತಿಳಿದಿಲ್ಲ; ನಿಮ್ಮ ಶಬ್ದದಿಂದ ಹಕ್ಕಿಗಳು ಎದ್ದಿವೆ ಅಷ್ಟೆ" ಎಂದಳು. ಅದಕ್ಕೆ ಗೋದೆಯು ಹೇಳಿದ್ದು **ಪುಳ್ಳರ್ಯಿರ್ಕೋಯಿಲಿಲ್ ವೆಳ್ಳೈ ವಿಳಿಶಂಗಿನ್ ಪೇರರವಂ ಕೇಟ್ಟಿಲೈಯೋ** ಎಂದು; ಪಕ್ಷಿರಾಜನಾದ ಗರುಡನ ಸ್ವಾಮಿಯಾದ ಸರ್ವೇಶ್ವರನ ಗುಡಿಯಲ್ಲಿ ಬೆಳ್ಳಗಿರುವ ಶಂಖಗಳ ದೊಡ್ಡ ಶಬ್ದವು ಮೊಳಗುತ್ತಿರುವುದು ಕೇಳಿಸಲಿಲ್ಲವೇ?" ಅದಕ್ಕೆ ಅವಳು "ನಿಮಗೆ ಯಾವಾಗಲೂ ಅವನದೇ ಧ್ಯಾನ;

ನೆಯ್ ಅಡಿಯಾರ್‌ಕಳ್ ತಂ ಈಟ್ಟಂ ಕಂಡಿಡ
ಕೂಡುಮೇಲ್ ಅದು ಕಾಣುಂ ಕಣ್ ಪೆಯನಾವದೇ

ಎಂದು ಆಳ್ವಾರ್ರು ಹೇಳಿರುವಂತಾಗಿದೆ ನಿಮಗೆ; ಶಂಖವೂ ಇಲ್ಲ; ಶಬ್ದವೂ ಇಲ್ಲ;" ಎನ್ನಲಾಗಿ ಗೋದೆಯು

ಪಿಳ್ಳಾಯ್ ಏಳ್ಗುಂದಿರಾಯ್—ಏ ಹುಡುಗಿ, ಇರಲಿ ಕಣೆ ಏಳೆ; ಮಕ್ಕಳಂತೆ ಏನೇನೋ ಹೇಳಬೇಡ" ಎಂದಾಗ ಅವಳು "ನಿಮ್ಮನ್ನು ಎಬ್ಬಿಸಿದವರಾರೇ" ಎಂದು ಕೇಳಿದಳು. ಅದಕ್ಕೆ ಗೋದೆಯು "ಪೆಯ್ . . . . ಕುಳಿರ್ನ್ದ" ಎಂದಳು.

ಪೆಯ್‌ಮುಲೈನಂಜುಂಡು—ರಾಕ್ಷಸಿಯಾದ ಪೂತನೆಯ ಮೊಲೆಯಿಂದ ವಿಷವನ್ನು ಕುಡಿದು

ಕಳ್ಳಚ್ಚಕಟಂ . . . ಓಚ್ಚಿ—ವಂಚಕನಾಗಿ ಗಾಡಿಯ ರೂಪದಲ್ಲಿ ಬಂದ ರಾಕ್ಷಸನನ್ನು ಅವನ ಶರೀರವು ನುಚ್ಚಾಗುವಂತೆ ಕಾಲಿನಿಂದೊದ್ದು

ವೆಳ್ಳತ್ತು . . . ವಿತ್ತಿನೈ—ಕ್ಷೀರ ಸಮುದ್ರದಲ್ಲಿ ಆದಿಶೇಷನ ಮೇಲೆ ಯೋಗ ನಿದ್ದೆಯನ್ನಾಶ್ರಯಿಸಿರುವ ಜಗತ್ಕಾರಣ ಭೂತನಾದ ಪರಮಾತ್ಮನನ್ನು

ಉಳ್ಳತ್ತುಕೊಂಡು—ತಮ್ಮ ಮನಸ್ಸಿನಲ್ಲಿಟ್ಟು

ಮುನಿವರ್ಗಳುಂ ಯೋಗಿಗಳುಂ—ಮುನಿಗಳು ಮತ್ತು ಯೋಗಿಗಳೂ

ಮೆಳ್ಳವೆೞ್ಗುಂದು—ಮೆಲ್ಲಗೆದ್ದು ಮಾಡಿದ

ಅರಿ ಎನ್ನ ಪೇರರವಂ—ಹರಿಃ ಹರಿಃ ಎನ್ನುವ ಮಹಾಘೋಷವು

ಉಳ್ಳಂ ಪುಕುಂದು—ಹೃದಯವನ್ನು ಪ್ರವೇಶಿಸಿ **ಕುಳಿರ್ನ್ದ**—ಮನಸ್ಸಿಗೆ ತಂಪನ್ನುಂಟುಮಾಡಿ ನಾವು ಎದ್ದೆವು ಕಣೆ, ಇದೇ ನಮ್ಮನ್ನು ಎಬ್ಬಿಸಿದ್ದು, ಎದ್ದು ಬಾ" ಎಂದಳು ಗೋದೆ.

ಪುಳ್ಳರ್ಯಿರ್ಕೋಯಿಲ್—ಅಂದರೆ, ಪುಳ್ಳರ್ಯಿರ್ ಗರುಡನ, **ಕೊಯಿಲ್**—ಗುಡಿ, ಎನ್ನುವುದಕ್ಕಿಂತ, **ಪುಳ್ಳರ್ಯಿರ್ಕೋ**—ಗರುಡನ ಸ್ವಾಮಿ, ಅವನ, **ಇಲ್**—ಗುಡಿ, ಎನ್ನುವುದು ಸಾಧುವಾಗಿದೆ. ಕೃಷ್ಣಾವತಾರದಲ್ಲೂ ರಾಮಾವತಾರಕಾಲದಲ್ಲಲ್ಲದ್ದಂತೆ ಗುಡಿಗಳಿದ್ದವು.

ಗತೇ ಪುರೋಹಿತೇ ರಾಮಃ ಸ್ನಾತೋ ನಿಯತಮಾನಸಃ ।
ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ॥

ರಾ. ಅಯೋ. VI, 1

ಎನ್ನುವ ಶ್ಲೋಕದಿಂದ (ಪುಟ 51–52) ರಾಮನು ನಾರಾಯಣನ ಗುಡಿಗೆ ಹೋಗಿದ್ದನು. ಹಾಗೆಯೇ ಕೃಷ್ಣಾವತಾರದಲ್ಲೂ ಗುಡಿಗಳಿದ್ದವು. ಶ್ರೀಕೃಷ್ಣನೇ ಪರಮಾತ್ಮನಾದರೂ, ತನ್ನ ಅರ್ಚಾಮೂರ್ತಿಯಲ್ಲಿ ಅವನಿಗೆ ವಿಶೇಷ ರುಚಿಯಿರುವುದು ಸಹಜ. ವಿಭವಾವತಾರದಲ್ಲಿರುವುದಕ್ಕಿಂತಲೂ ಅರ್ಚಾವತಾರದಲ್ಲಿ ಅವನ ದಯಾಗುಣವು ಪೂರ್ಣವಾಗಿ, ರೂಪವು ಬಹಳ ಸೌಮ್ಯ ಮತ್ತು ಸುಂದರವಾಗಿರುತ್ತದೆ. ಪ್ರೇಮಸ್ವರೂಪನಾದವಿವನಿಗೆ ಇದಕ್ಕಿಂತ ಬೇರೆ ರೂಪ ಅಷ್ಟು ಪ್ರಿಯವಲ್ಲ. ತನ್ನ ಭಕ್ತರು ಇಟ್ಟಂತೆ ಆಡಿಸುವಂತೆ ಇರುವುದು ಇವನಿಗೆ ಬಹುಪ್ರಿಯ–ಅಥವಾ

ಪುಳ್ಳರ್ಯಿರ್ ಕೋಯಿಲ್—ಗರುಡನು ಪೂಜಿಸುವ ಗುಡಿ; ನಮ್ಮಾೞ್ವಾರ್ರು ತಮ್ಮ ವಿರಹ ದಶೆಯಲ್ಲಿ

ಅರುಳಾದ ನೀರ್ ಅರುಳಿ, ಅವರಾವಿ ತುವರಾಮ್ಮು
ಅರುಳಾೞಿಪುಳಕೆಡವೀರ್ ಆವರ್‌ವೀಧಿ ಯೊರುನಾಳ್

ತಿರು–ಮೊ I, 4, 6.

ಎಂದು ಹೇಳಿ ಪರಮಾತ್ಮನಲ್ಲಿಗೆ ಭ್ರಮರವನ್ನು ದೂತನನ್ನಾಗಿ ಹೋಗಲು ಕೇಳಿ ಕೊಂಡಿರುವರು. ಪರಮ ಯೋಗಿಗಳಾದ ಶಠಗೋಪರಿಗೆ ಆಗಾಗ ಭಗವದ್ವಿಶ್ಲೇಷ ಬಂದು ಅವರು ವಿರಹಿಗಳಾಗಿ ಹೇಳಿಕೊಂಡ ಮಾತುಗಳಲ್ಲಿ ಇದು ಒಂದು. "ಭ್ರಮರವೇ, ನೀನು ಪರಮಾತ್ಮನಲ್ಲಿಗೆ ಹೋಗಿ ಹೇಳು; "ಹೇ ಪರಮಾತ್ಮ, ನೀನು ಕರ್ಮಾಧ್ಯಕ್ಷನಾಗಿ ಕರುಣಿಸುವವನೇ ಅಲ್ಲ; ಆದರೂ ಕೇಳು, ಈ ವಿರಹಿಣಿಯು ನಿನ್ನೇ ಧ್ಯಾನದಲ್ಲೇ ಕೃಶಳಾಗಿರುವಳು; ಯಾವಾಗ ಪ್ರಾಣವು ಹಾರಿ ಹೋಗುವುದೋ ತಿಳಿಯದು; ಅವಳ ಪ್ರಾಣ ಹೋಗುವುದಕ್ಕೆ ಮುಂಚೆ ಒಂದು ದಿನವಾದರೂ ಗರುಡಾರೂಢನಾಗಿ ಅವಳ ಬೀದಿಯಲ್ಲಿ ದರ್ಶನ ಕೊಡು ಸ್ವಾಮಿ ಎನ್ನುತ್ತಾಳೆ" ಎಂದು ತನ್ನನ್ನೇ ಹೇಳಿಕೊಂಡಿರುವರು. ಇಲ್ಲಿ ಗರುಡನನ್ನು "**ಅರುಳಾಳಿಪುಳ್**" ಎಂದಿರುವರು "ಗರುಡ ಪರಮ ಭಕ್ತ; ಭಕ್ತರನ್ನು ಕಂಡರೆ ಅವನಿಗೆ ಬಹು ಇಷ್ಟ; ನೀನು ಸುಮ್ಮನಿದ್ದರೆ ಸಾಕು; ಎಲ್ಲಿಗಾದರೂ ಹೋಗು; ಹೋಗುವಾಗ ಇವಳ ಬೀದಿ ಹಾಸಿ ಹೋಗುವನು ಗರುಡ; ಅವನು ಕರುಣಾಮಯ" ಎನ್ನುವ ಅಭಿಪ್ರಾಯವನ್ನಿಟ್ಟಿರುವರು ತಮ್ಮ ಮಾತಿನಲ್ಲಿ. ಗರುಡ ವೇದಮಯ. ವೇದ ಪ್ರತಿಪಾದ್ಯನೇ ಶ್ರೀಮನ್ನಾರಾಯಣ. ಭಕ್ತರ ಕೂಗಿಗೆ ಮನಸೋತು ಓಡಿಬರುವ ಹರಿ ಇವನು; ಗರುಡ ವಾಹನನೇ ಹರಿ; ಗಜೇಂದ್ರನನ್ನು ರಕ್ಷಿಸಿದ ದೈವ: ದೇವತೆಗಳೆಲ್ಲರಿಗೂ ಅಧಿದೇವತೆಯೆಂದು ತೋರಿಸಿಕೊಂಡಿದ್ದು ಗರುಡಾರೂಢನಾಗಿ; ಗರುಡನಿದ್ದೆಡೆ ನಾರಾಯಣ; ಗರುಡನ ಗುಡಿ ಎಂದರೆ ನಾರಾಯಣನ ಗುಡಿಯೇ; ಅದಕ್ಕಾಗಿಯೇ ಅಲ್ಲಿ ಆಗಿದ್ದು ಶಂಖನಾದ. ಇದು ನಿನಗೆ ಕೇಳಿಸಲಿಲ್ಲವೇ–ಎಂದಳು ಗೋದೆ. ಈ ಪ್ರಸಂಗವು ಮಲಗಿರುವವಳ ಮನಸ್ಸಿಗೆ ಬಂದು ಎದ್ದು ಬರಲೆಂದೇ ಹೀಗೆ ಹೇಳಿದಳು. **ಇವಳ ಮಾತುಗಳೆಲ್ಲವೂ ಭಾವಪೂರಿತವಾದವು. ವ್ಯರ್ಥವಾಗಿ ಒಂದು ಪದವನ್ನೂ ಹೇಳಿಲ್ಲ.** ಇಷ್ಟು ಹೇಳಿದ ಮೇಲೆಯು ಒಳಗಿದ್ದವಳು ಎದ್ದು ಬರಲಿಲ್ಲ. ಅವಳ ಮನಸ್ಸು ಪರಮಾತ್ಮನಲ್ಲಿ ಲೀನವಾದರೂ ಪ್ರಕೃತಕ್ಕೆ ಹೊಂದಿಕೊಳ್ಳಲಿಲ್ಲ. ಆ ಶ್ರೀಮನ್ನಾರಾಯಣನೇ ಶ್ರೀಕೃಷ್ಣ ಎಂದು ಹೇಳಲು ಹೊರಟು, ಕೃಷ್ಣಲೀಲೆಯಲ್ಲಿ ಅವನ ಒಂದುವರ್ಷ ವಯಸ್ಸಿಗಿಂತ ಮುಂಚೆ ಎಸಗಿದ ಅದ್ಭುತವನ್ನು ಜ್ಞಾಪಿಸುವಳು.

ಪೆಯ್‌ಮುಲೈನಂಜುಂಡು—ರಾಕ್ಷಸಿಯ ಮೊಲೆಯಿಂದ ವಿಷವನ್ನು ಕುಡಿದು—

"ಅನ್ನಂ ಚ ವಿಷಸಮ್ಮಿಶ್ರಂ ರಸ್ಯಮಾಸೀಜ್ಜಗದ್ಗುರೋಃ" ಎಂದು ಹೇಳಿರುವಂತೆ ಪೂತನಿಯ ವಿಷಮಿಶ್ರವಾದ ಹಾಲು ಬಹಳ ಪ್ರಿಯವಾಯಿತು ಕೃಷ್ಣನಿಗೆ. ಯಾವ ಕಾರಣವಾಗಲಿ ನನ್ನನ್ನು ಅರಸಿ ಬಂದಳಲ್ಲಾ ಎನ್ನುವುದೇ ಅವನ ತೃಪ್ತಿ. ನಿಗಮಾಂತ ದೇಶಿಕರು ಈ ಪ್ರಸಂಗವನ್ನು ಚಿಂತಿಸುವಾಗ (ಯಾ–ಅ IV, 4)

ಸ್ತನ್ಯೇನ ಕೃಷ್ಣಃ ಸಹ ಪೂತನಾಯಾಃ
ಪ್ರಾಣಾರ್ಜ ಪಪೌ ಲುಪ್ತಪುನರ್ಭವಾಯಾಃ ।

ಯದದ್ಭುತಂ ಭಾವಯತಾಂ ಜನಾನಾಂ
ಸ್ತನಂಧಯತ್ವಂ ನ ಪುನರ್ಭವಾಯ ॥

ಪೂತನಿಯ ಸ್ತನ್ಯದೊಡನೆ ಅವಳ ಪ್ರಾಣವನ್ನೂ ಕುಡಿದು ಅವಳಿಗೆ ಪುನರ್ಜನ್ಮವಿಲ್ಲದಂತೆ ಮಾಡಿದನು. ಈ ಅದ್ಭುತವನ್ನು ಚಿಂತಿಸುವವರಿಗೂ ಪುನರ್ಜನ್ಮವಿರುವುದಿಲ್ಲ–ಎಂದಿರುವರು. ಈ ಪ್ರಸಂಗವು ಗೋಪಿಯ ಸ್ಮೃತಿಗೆ ಬರಲೆನ್ನುವುದೇ ಗೋದೆಯ ಆಶಯ. ಯಶೋದೆಯು ಪೂತನೀ ಸಂಹಾರವನ್ನು ಕೇಳಿ ಓಡಿ ಬಂದು ಮಗುವನ್ನು ತಬ್ಬಿಕೊಂಡಳು. ಅವಳ ಮೋಹದಲ್ಲಿ ಅವನು ಜಗದೀಶನೆಂದು ಹೇಗೆ ತಿಳಿದಾಳು (ತಮಗ್ರಹೀತ್ ದುರ್ಗ್ರಹಮಾಗಮಾನಾಂ.) ವೇದಮಯನಾದ ಗರುಡನಿಗೂ ಗೋಚರನಲ್ಲದವನು ಯಶೋದೆಗೆ ಹೇಗೆ ಗೋಚರವಾದನು; ಗೋಪಾಲರು ಪೂತನಿ ಶರೀರವನ್ನು ಕತ್ತರಿಸಿ ಹೊರಗೆ ಕಾಗೆ ನರಿಗಳಿಗೆ ಹಾಕಿದರು. ಪಂಚಾಯುಧರಕ್ಷೆಯನ್ನು ಕಟ್ಟಿದರು (IV, 9)

ಇಷ್ಟು ಕೇಳಿಯೂ ಗೋಪಿಕೆಯು ಹೊರಬರಲಿಲ್ಲ. ಶಕಟಾಸುರವಧೆಯನ್ನು ಜ್ಞಾಪಿಸುತ್ತಾಳೆ ಗೋದೆ.

ಕಳ್ಳ . . . ಚ್ಚಿ—ವಂಚಕ ಶಕಟಾಸುರನನ್ನು ಕಾಲಿನಿಂದ ಒದ್ದು . . . ಎಂದಳು; ಶಕಟಾಸುರ ಭಂಜನವಾದಾಗ ಶ್ರೀಕೃಷ್ಣನಿಗೆ ಆರೇತಿಂಗಳು. ಕಮಲದಂತಿದ್ದ ಕಾಲಿನಿಂದ ಹೇಗೆ ಶಕಟನನ್ನು ಒದ್ದಿದ್ದಾನೆಂದೇ ಯಶೋದೆಗೆ ಸಂಶಯ. ಆದರೂ ಏನೋ ಹೇಗೋ ಎಂದು ಕೃಷ್ಣನ ಕಾಲನ್ನು ಸವರಿದಳಂತೆ ಯಶೋದೆ.

ಯದ್ಯಚ್ಛಯೋತ್ಕ್ಷಿಪ್ತಪದೇ ಕುಮಾರೇ
ಶೈಲೋಪಲಪ್ಲೇ ಶಕಟೇ ನಿರಸ್ತೇ ।
ಸರೋಜಗರ್ಭೋತ್ಪವನಸೌಕುಮಾರ್ಯಂ
ಪಸ್ಪರ್ಶ ತತ್ಪಾದತಲಂ ಯಶೋಬಾ ॥ ಯಾ–ಅ–IV–6

ಇಷ್ಟು ಹೇಳಿಯೂ ಗೋಪಿಕೆಯು ಎದ್ದು ಬರಲಿಲ್ಲ "ಏನಿದು ಇವಳ ಹೃದಯ ಇಷ್ಟು ಕಠಿಣ; ಕೃಷ್ಣನ ಈ ಎರಡು ಲೀಲೆಗಳನ್ನು ಕೇಳಿಯೂ ಮನಸ್ಸು ಕರಗದೇ ಶುಷ್ಕ ಧ್ಯಾನದಿಂದ ಬಹಿರ್ಮುಖಳಾಗಲಿಲ್ಲವೇ? ಸರಿ, ಇವಳು ಇನ್ನೂ **ನಿಷ್ಪನ್ನಸಮಾಧಿ** ಯುಳ್ಳವಳಲ್ಲ (ಟಪ್ಪಣಿ 17). ಶಠಗೋಪರಿಗೆ ಈ ಎರಡು ಪ್ರಸಂಗಗಳು ಮನಸ್ಸು ಕರಗುವಂತೆ ಮಾಡಿತು.

ಪೆಯ್ಯುಂ ಪೂಂಕುಳಲ್ ಪೆಯ್‌ಮುಲೈ ಯುಂಡ
ಪಿಳ್ಳೈತ್ತೇತ್ತಮುಂ, ಪೇರ್ನ್ದು ಓರ್‌ಶಾಡಿರ
ಚ್ಚೆಯ್ಯಪಾದವೊನ್ರಾಲ್ ಶೈಯ್ದ, ನಿ ಶಿರುಚ್ಚೀವಕಮುಂ

ನೆಯ್ಯುಣ್ವಾತ್ತೈಯುಳ್ ಅನ್ನೈ ಕೋಲ್‌ಕೊಳ್ಳ
ನೀ ಉಗ ತಾಮರೈಕಣ್‌ಗಳ್ ನೀರ್‌ಮಲ್ಗ
ಪೈಯವೇ ನಿಲೈಯುಂ ವಂದು ಎಗ ನೆಂಜೈ ಉರುಕ್ಕುಂಗಳೇ
V, 10, 3

ಇವಳ ದಾರಿಯಲ್ಲೇ ಹೋಗಿ ಬಹಿರ್ಮುಖಳನ್ನಾಗಿ ಮಾಡಬೇಕೆಂದು ನೆನೆದು—

ವೆಳ್ಳತ್ತು . . . . ವಿತ್ತಿನೈ—ಕ್ಷೀರಾಬ್ಧಿಯಲ್ಲಿ, ನಾಗಶಯನನಾಗಿ ಜಗತ್ಕಾರಣನಾದವನನ್ನು—ಎಲೇ ಗೋಪಿ, ಇಷ್ಟಾದರೂ ಚಿಂತಿಸು; ವೈಕುಂಠವನ್ನು ಬಿಟ್ಟು ಕ್ಷೀರಾಬ್ಧಿಗೆ ಏಕೆ ಬಂದ; ಇವನು **ಜಗತ್ತಿಗೆ ಹೇಗೆ ಕಾರಣಭೂತನು**—ಎಂದು ಪರಮಾತ್ಮನಲ್ಲಿ ಭಕ್ತಿ ಹುಟ್ಟಿ ಅವನ ಬಾಹ್ಯಸಂಶ್ಲೇಷಕ್ಕೆ ಆಸೆ ಪಡುವಂತಾಗಬೇಕಾದರೆ, "ಕಾರಣಂ ತು ಧ್ಯೇಯಃ" ಎಂದು ಅಥರ್ವಶಿಖೋಪನಿಷತ್ತು ಹೇಳುವಂತೆಯೂ,

ಅಹಂ ಸರ್ವಸ್ಯ ಪ್ರಭವಃ ಮತ್ತಃ ಸರ್ವಂ ಪ್ರವರ್ತತೇ
ಇತಿ ಮತ್ವಾ ಭಜಂತೇ ಮಾಂ ಬುಧಾಃ ಭಾವಸಮನ್ವಿತಾಃ ಗೀ X–8

ಎಂದು ಶ್ರೀಕೃಷ್ಣನೇ ಹೇಳಿರುವಂತೆ ಚಿಂತಿಸಬೇಕು. **ಏಕಾಗ್ರ ಚಿತ್ತಕ್ಕಿಂತ ಪರಾಮರ್ಶಜ್ಞಾನವು ಭಕ್ತಿಗೆ ಕಾರಣವಾಗುತ್ತದೆ.**

ವಿಶ್ವಾನಿ ವಿಶ್ವಾಧಿಕಶಕ್ತಿರೇಕೋ ನಾಮಾನಿ
ರೂಪಾಣಿ ಚ ನಿರ್ಮಿಮಾಣಃ
ನಾಮೈಕದೇಶಗ್ರಹಣೇಪಿ ಮಾತುಃ ಬಭೂವ
ಕೃಷ್ಣೋ ಬಹುಮಾನಪಾತ್ರಂ ಯಾ–ಅ–IV–16

ವಿಶ್ವಶಕ್ತಿಯೇ ದೈವವಲ್ಲ; ವಿಶ್ವಾಧಿಕ ಶಕ್ತಿಯಾಗಿದ್ದು ಅದ್ವಿತೀಯನಾಗಿ ಕೃಷ್ಣನೆಂದು ಕರೆಯಿಸಿಕೊಳ್ಳುವವನನ್ನು ನಾವು ಕೂಡಲು ಹೊರಟಿರುವಾಗ, ಇದೇನಿದು ನಿನ್ನ ಧ್ಯಾನಮೋಹ—ಎನ್ನುವುದೇ ಗೋದೆಯ ಆಶಯ; ಮತ್ತೂ ಹೇಳಿದಳು

ಉಳ್ಳತ್ತುಕೊಂಡು ಮುನಿವರ್ಹಳುಂ ಯೋಗಿಗಳುಂ—ನಿನ್ನಂತೆ ಧ್ಯಾನ ಯೋಗನಿಷ್ಠರಾದ ಮುನಿಗಳು ಮತ್ತು ಯೋಗಿಗಳು ಇಂತಹ ದೈವವನ್ನು ಮನಸ್ಸಿನಲ್ಲಿಟ್ಟು

ಮೆಳ್ಳವೆಳ್ಗುಂದು—ಮೆಲ್ಲಗೆದ್ದು

ಹರಿ ಎನ್ನ ಪೇರರವಂ ಕೇಟ್ಟಿಲೈಯೋ—ಹರಿ ಎಂದು ಘಟ್ಟಯಾಗಿ ಉಚ್ಚಸ್ವರದಲ್ಲಿ ಕೂಗುತ್ತಿರುವುದನ್ನು ನೀನು ಕೇಳಲಿಲ್ಲವೇ?

ಮನನ ಶೀಲರು ಮುನಿಗಳು; ಯೋಗಸಿದ್ಧಿಯಿಲ್ಲದವರಿವರು; ಯೋಗಿಗಳು ನಿಷ್ಪನ್ನರು; ಇವರೇ ಪರಮ ಭಕ್ತರು; ಇವರನ್ನೇ ಶ್ರೀಕೃಷ್ಣನು "ಜ್ಞಾನೀತ್ವಾತ್ಮೈವ

ಮೇ ಮತಂ" ಎಂದಿರುವನು. ಸಂಸ್ಕೃತದಲ್ಲಿ "ಜ್ಞಾನವಾನ್" ಎನ್ನುವುದಕ್ಕೂ "ಜ್ಞಾನೀ" ಎನ್ನುವುದಕ್ಕೂ ವ್ಯತ್ಯಾಸವಿದೆ; ಧನವಾನ್, ಧನೀ ಎನ್ನುವಂತೆ. ಧನವುಳ್ಳವನು ಧನವಾನ್, ಧನದಿಂದ ಏನನ್ನು ಅಪೇಕ್ಷಿಸುವೆಯೋ ಅದನ್ನು ಮಾನಸಿಕವಾಗಿ ಅನುಭವಿಸುವವನು ಧನೀ; ಹಾಗೆಯೇ, ಪರಮಾತ್ಮನು ಜಗತ್ತಿನ ಅಭಿನ್ನನಿಮಿತ್ತೋಪಾದಾನನೆನ್ನುವ ಜ್ಞಾನ ಪರಿಷ್ಕಾರವುಳ್ಳವನು ಜ್ಞಾನವಾನ್; ಆ ಜ್ಞಾನದಿಂದ ಮನಸ್ಸುಕರಗಿ, ತನ್ಮಯನಾದವನು ಜ್ಞಾನೀ—ಇಲ್ಲಿ ಜ್ಞಾನೀ ಯೋಗಿ, ಹಾಗೆ ಯೋಗಿಯಾಗಲು ಪ್ರಯತ್ನಿಸುತ್ತಿರುವನು ಜ್ಞಾನವಾನ್ ಮುನಿ. ಇವರಿಬ್ಬರಿಗೂ ಹರಿಯೇ ದೈವ; ಅವನೇ ಯಾವಾಗಲೂ ಮನಸ್ಸಿನಲ್ಲಿರುವನು; ನಿದ್ದೆಯಿಂದ ಎದ್ದರೆ ಮಲಗುವಾಗ ಇರುವ ಸ್ಮೃತಿಯೇ ಬರುವುದು. ಮುನಿಗಳಿಗೆ ಯೋಗಿಗಳಿಗೆ "ಹರಿ" ಯೇ ಸ್ಮೃತಿಯಲ್ಲಿರುವನು; ಮುನಿಗಳಿಗೆ ಉಪಾಸ್ಯ ದೈವವಾಗಿ, ಯೋಗಿಗಳಿಗೆ ಇಷ್ಟದೈವವಾಗಿ; ಇಬ್ಬರ ಹೃದಯದಲ್ಲೂ ಇರುವವನು ಹರಿಯೇ; ಅವನಿಗೆ ನೋವಾಗದಿರಲೆಂದು "ಮೆಳ್ಳವೆಳ್ಗುಂದು" ಎಂದು ನಾಮ ಸಂಕೀರ್ತನ ಮಾಡುವರು. ಪ್ರಹ್ಲಾದನನ್ನು ದೈತ್ಯರು ಬೆಟ್ಟದಿಂದ ತಳ್ಳಿದಾಗ ಅವನು ಹೃದಯವನ್ನು ಘಟ್ಟಯಾಗಿ ಹಿಡಿದುಕೊಂಡು ಕೆಳಗೆ ಬಿದ್ದನಂತೆ. ಹರಿಗೆ ನೋವಾಗದಿರಲೆಂದು ಹಾಗೆ ಮಾಡಿದನಂತೆ.

ತತಸ್ತಂ ಚಿಕ್ಷಿಪುಸ್ಸರ್ವೇ ಬಾಲಂ ದೈತೇಯಕಿನ್ನರಾಃ।
ಪಪಾತ ಸೋಪ್ಯಧೋಕ್ಷಿಪ್ತಃ ಹೃದಯೇನೋದ್ಯಹ್ಯ ಹರಿಂ॥

ಎಂದು ಪರಾಶರರು ಹೇಳಿರುವರು.

ಇಂತಹ ಹರಿನಾಮಸಂಕೀರ್ತನವನ್ನು ಕೇಳಿಯೂ ನಿದ್ದೆಯು ತಿಳಿಯಲಿಲ್ಲವೇ?

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ।
ಅನಿಚ್ಛಯಾಪಿ ಸಂಸ್ಪೃಷ್ಟಃ ದಹತ್ಯೇವ ಹಿ ಪಾವಕಃ॥
ವಾರಾಣಸ್ಯಾಂ ಕುರುಕ್ಷೇತ್ರೇ ನೈಮಿಶಾರಣ್ಯ ಏವ ಚ।
ದತ್ತಂ ಸ್ಯಾತ್ತೇನ ಯೇನೋಕ್ತಂ ಹರಿರಿತ್ಯಕ್ಷರದ್ವಯಂ॥
ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಂ।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ॥

ಪರಮಾತ್ಮನ ಒಂದೊಂದು ನಾಮದಲ್ಲಿ ಒಂದೊಂದು ಮಹಿಮೆಯುಂಟು. ಹೀಗೆ ಸಾಸಿರನಾಮವುಳ್ಳವನಿವನು. ಇವನನ್ನು ಸಂಗ್ರಹವಾಗಿ ಪೂರ್ಣವಾಗಿ ತಿಳಿಯಬೇಕಾದರೆ "ಭಗವಾನ್" "ಪುರುಷಃ" ಎಂದರೆ ಸಾಕು ಎಂದಿರುವರು ಪರಾಶರರು.

ಭಗವಾನಿತಿ ಶಬ್ದೋಯಂ ತಥಾ ಪುರುಷ ಇತ್ಯಪಿ।
ವಿರುಪಾಧೀ ಚ ವರ್ತೇತೇ ವಾಸುದೇವೇ ಸನಾತನೇ॥

ಇನ್ನೂ ಸಂಗ್ರಹವಾಗಿ ಅವನನ್ನು ಕರೆಯಬೇಕಾದರೆ "ಹರಿ" ಎಂದರೆ ಸಾಕು. ಅದಕ್ಕಾಗಿಯೇ ವೇದ ಪಾರಾಯಣದ ಮೊದಲು ಮತ್ತು ಕೊನೆಯಲ್ಲಿ "ಹರಿಃ ಓಂ" ಎನ್ನುವ ಅನುಷ್ಠಾನವಿದೆ. ದ್ವೈತಸಂಪ್ರದಾಯದಲ್ಲಿ ಪರದೇವತೆಯನ್ನು "ಹರಿ ಸರ್ವೋತ್ತಮ" ಎನ್ನುವುದುಂಟು.

ಇಷ್ಟುಹೇಳಿದಮೇಲೆ ಮಲಗಿದ್ದವಳು ಎದ್ದುಬಂದು ಭಜನಕೂಟಕ್ಕೆ ಸೇರಿದಳು.

ಸ್ವಾಪದೇಶ

ಗೋದೆಯು ಶ್ರೀಕೃಷ್ಣನಲ್ಲಿಗೆ ಗೋಪಿಕೆಯರನ್ನು ಕರೆದೊಯ್ಯಲು ಹೊರಟಂತೆ ಒಬ್ಬ ಪ್ರಧಾನ ಶಿಷ್ಯನು ಸತೀರ್ಥರನ್ನು ಅಂದರೆ ತನ್ನೊಡನೆ ಓದುತ್ತಿರುವರನ್ನು ಆಚಾರ್ಯರಲ್ಲಿಗೆ ಹೋಗಲು ಕರೆಯುವ ಪಾಶುರಗಳು (6–15). ಈ ಶಿಷ್ಯನು ಆಚಾರ್ಯರಲ್ಲಿ ಶರಣಾಗತಿಯನ್ನು ಮಾಡಿಯಾಯಿತು. ಕೃತಕೃತ್ಯಭಾವವು ಬಂದಾಯಿತು (ಟಿಪ್ಪಣಿ 18). ಆದರೆ ಆತ್ಮಗುಣ ಪೂರ್ತಿಯಿಲ್ಲದೆ ಮನಸ್ಸಿಗೆ ನೆಮ್ಮದಿ ದೊರಕದು. ತನಗೆ ಬರುವುದೆಲ್ಲಾ ಕ್ಷೇಮಕ್ಕಾಗಿಯೇ ಎನ್ನುವ ನಿಶ್ಚಯವೂ, ತನ್ನ ಜೀವನಯಾತ್ರೆ ಮತ್ತು ಆತ್ಮಯಾತ್ರೆಗಾಗಿ ತನ್ನ ಭಾರವೇನೂ ಇಲ್ಲ; ಎಲ್ಲ ಭಗವದ ಧೀನವೆನ್ನುವ ವಿಶ್ವಾಸವೂ ಮತ್ತು ತಾನು ಮಾಡುವ ಎಲ್ಲಾ ಕರ್ಮಗಳೂ ಭಗವತ್ಕೈಂಕರ್ಯರೂಪದಲ್ಲಾಗಬೇಕು; ಅವನ ನಿತ್ಯ ಕೈಂಕರ್ಯವು ಯಾವಾಗ ಲಭಿಸುವುದೋ ಎನ್ನುವ ತ್ವರೆಯೂ ಬರುವುದಕ್ಕಾಗಿ ಸತ್ಸಹವಾಸ ಮತ್ತು ಆಚಾರ್ಯರ ಕೃಪಾಕಟಾಕ್ಷಕ್ಕಾಗಿ ಅವರಲ್ಲಿ ಹೊರಟಿರುವ ಪ್ರಧಾನ ಶಿಷ್ಯನ ಪಾಶುರವಿದು.

ಸಂತೋಷಾರ್ಥಂ ವಿಮೃಶತಿ ಮುಹುಃ ಸದ್ಭಿರಧ್ಯಾತ್ಮವಿದ್ಯಾಂ
ನಿತ್ಯಂ ಬ್ರೂತೇ ನಿಶಮಯತಿ ಚ ಸ್ವಾದು ಸುವ್ಯಾಹೃತಾನಿ ।
ಆಂಗೀಕುರ್ವನ್ ಅನಘಲಲಿತಾಂ ವೃತ್ತಿಮಾದೇಹಪಾತಾತ್
ದೃಷ್ಟ್ವಾsದೃಷ್ಟಸ್ವಭರವಿಗಮೇ ದತ್ತದೃಷ್ಟಿಃ ಪ್ರಪನ್ನಃ ॥

ಎಂದು ನಿಗಮಾಂತ ದೇಶಿಕರು ಹೇಳಿರುವಂತೆ ಸತ್ಸಹವಾಸದಲ್ಲಿದ್ದು ಮನಸ್ಸನ್ನು ಪಕ್ವಮಾಡಿಕೊಳ್ಳಬೇಕೆನ್ನುವ ಸಂಕಲ್ಪದಿಂದ, ಆಚಾರ್ಯ ಭಕ್ತಿಯಲ್ಲಿ ತೊಯ್ದು ಅವರನ್ನು ಧ್ಯಾನಮಾಡುತ್ತಾ ಏಕಾಂತ ಜೀವಿಗಳಾದ ಸತೀರ್ಥರನ್ನು ಆಚಾರ್ಯರಲ್ಲಿಗೆ ಕರೆಯುವ ಪಾಶುರಗಳು ಇಲ್ಲಿಂದ ಮುಂದಿನ ಹತ್ತು ಪದ್ಯಗಳು.

ಪುಳ್ಳುಂ ಶಿಲಂಬಿನ ಕಾಣ್—ಹಕ್ಕಿಗಳಿಗೆ ಎರಡು ರೆಕ್ಕೆಗಳಿರುವಂತೆ ನಮಗೆ ಆಚಾರ್ಯರು ಜ್ಞಾನ ಮತ್ತು ಭಕ್ತಿಯನ್ನು ಕೊಟ್ಟಿರುವರು; ಅಂತಹ ಶಿಷ್ಯರೆಲ್ಲರೂ

ಹೊರಗಿರುವರು; ಮಿತ್ರರಾದ ನೀವು ಎದ್ದು ಬಂದು ನಮ್ಮನ್ನು ಕೂಡಿಕೊಳ್ಳಿ-ಮುಂಡಕೋಪ ನಿಷತ್ತಿನ ಐದನೇ ಅಧ್ಯಾಯ ಪ್ರಾರಂಭದಲ್ಲಿ **"ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ"** ಎನ್ನುವ ಮಂತ್ರದಲ್ಲಿ ಜೀವನು "ಸುಪರ್ಣ" ಬಳ್ಳಿರೆಕ್ಕೆಯುಳ್ಳವನು ಎಂದು ಹೇಳಲಾಗಿದೆ. ಪರಮಾತ್ಮನೂ ಸುಪರ್ಣನು; ಜ್ಞಾನ ಭಕ್ತಿಗಳಿಂದ ನಾವು ಸುಪರ್ಣರು; ಅಮಲತ್ವ ಮತ್ತು ಕಲ್ಯಾಣ ಗುಣ ವಿಶಿಷ್ಟತ್ವದಿಂದ ಪರಮಾತ್ಮನು ಸುಪರ್ಣನು. ಹೀಗೆ ನಾವು ತಿಳಿಯಲು ಸಮರ್ಥರಾದುದು ಆಚಾರ್ಯರಿಂದ.

ಸ ವೇದೈತತ್ ಪರಮಂ ಬ್ರಹ್ಮ ಧಾಮ
ಯತ್ರ ವಿಶ್ವಂ ನಿಹಿತಂ ಭಾತಿ ಶುಭ್ರಂ ।
ಉಪಾಸತೇ ಪುರುಷಂ ಯೇಹ್ಯಕಾಮಾಸ್ತೇ
ಶುಕ್ರಮೇತದತಿವರ್ತಂತಿ ಧೀರಾಃ ॥ ಮುಂ VI, 1

ಪರಮಾತ್ಮನಲ್ಲಿರುವ ಈ ವಿಶ್ವವು ಶುಭ್ರವಾಗಿಯೇ ಇದೆ. ಅದರಲ್ಲಿ ಯಾವ ದೋಷವೂ ಇಲ್ಲ — ಎಂದು ತಿಳಿದವರು ತಿಳಿಸಿದವರು ಆಚಾರ್ಯರು. ಅಂತಹ ಆಚಾರ್ಯರನ್ನು ನಾವು ಉಪಾಸನೆ ಮಾಡಿದರೆ, ಹತ್ತಿರವಿದ್ದು ಸೇವೆ ಸಲ್ಲಿಸಿದರೆ, ನಾವು ಸಂಸಾರಬೀಜವನ್ನು (ಶುಕ್ರಂ) ದಾಟಲು ಸಮರ್ಥರಾಗುವೆವು–ಬನ್ನಿ ಎಂದು ಕರೆಯುತ್ತಾನೆ ಪ್ರಧಾನ ಶಿಷ್ಯ.

ಪುಳ್ಳರೈ. . . ಕೇಟ್ಟಲೈಯೋ — ಪುಳ್ಳರೈ–ಗರುಡ, ವೇದಮಯ; ಆ ವೇದದ ಕೋಯಿಲ್ ನಿವಾಸಸ್ಥಾನ ಆಚಾರ್ಯ; ಅವನಿಂದ ಪ್ರತಿಪಾದಿಸಲ್ಪಟ್ಟ **ವೆಳ್ಳೈವಿಳಿಶಂಗಿ ಪೇರರವಂ**–ಶಂಖಧ್ವನಿಯಾದ ಪ್ರಣವದ ಅರ್ಥವು ಅದರೊಡನೆ ಕೂಡಿರುವ ಮೂಲಮಂತ್ರಾರ್ಥವು ನಿಮ್ಮ ಕಿವಿಗೆ ಬೀಳಲಿಲ್ಲವೇ;

ಪಿಳ್ಳಾಯ್ ಎೞುಂದಿರಾಯ್—ಬೃ–ಉ–ನಲ್ಲಿ

ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್—ಎಂದು ಹೇಳಿರುವಂತೆ, ಪಾಂಡಿತ್ಯವು ನೆಲೆಯೂರಿ (ನಿರ್ವಿದ್ಯ) ಬಾಲಭಾವದಲ್ಲಿ ಮನಸ್ಸು ನಿಲ್ಲಬೇಕು ಎಂದು ಹೇಳಿರುವಂತೆ, ನೀವು ಅಹಂಕಾರ ಮಮಕಾರವಿಲ್ಲದವರು; ದಯಮಾಡಿಸಬೇಕು.

ಪೇಯ್ಮುಲೈ ನಂಜುಂಡು—ನಿಗಮಾಂತದೇಶಿಕರು

ಅವಿದ್ಯಾಪೂತನೋನ್ಮುಕ್ಕೈಃ ಅನವಜ್ಞಾತಸಶ್ಪತ್ಪೈಃ ।
ಅಸದಾಸ್ವಾದನವ್ರೀಳೈಃ ಆದಿಷ್ಟವಿತಿ ದರ್ಶಿತಂ ॥

ಎಂದು ತಿರುಮಂತ್ರಾಧಿಕಾರದಲ್ಲಿ ಹೇಳಿರುವಂತೆ, ಶರೀರವೇ ಆತ್ಮಾಎನ್ನುವ ಮತ್ತು ತನ್ನದಲ್ಲದುದನ್ನು ತನ್ನದೆನ್ನುವ ಅವಿದ್ಯಾ ಎನ್ನುವ ಪೂತನಿ ರಾಕ್ಷಸಿಯನ್ನು ನಾಶ ಮಾಡಿದವರು ನಮ್ಮ ಆಚಾರ್ಯರು

ಅನಾದ್ಯವಿದ್ಯಾಸಂಚಿತ—ಅನಂತಾಶಕ್ಯವಿಸ್ರಂಸನ—
ಕರ್ಮಪಾಶ ಪ್ರಗ್ರಥಿತಃ, ಅನಾಗತ—ಅನಂತಕಾಲ—
ಸಮೀಕ್ಷಯಾಪಿ, ಅದೃಷ್ಟಸಂತಾರೋಽಪಾಯಃ;
ಶ್ರೀಮನ್ನಾರಾಯಣ, ತವ ಚರಣಾರವಿಂದಯುಗಳಂ
ಶರಣಮಹಂ ಪ್ರಪದ್ಯೆ

ಎಂದು ರಾಮಾನುಜರು ತೋರಿಕೊಟ್ಟಂತೆ ಶರಣಾಗತಿಯನ್ನು ಮಾಡಿ ಅವಿದ್ಯಾವನ್ನು ನೀಗಿಕೊಂಡವರು; ಮತ್ತು

ದೇವಕೀತನಯಪೂಜನಪೂತಃ
ಪೂತನಾರಿಚರಣೋದಕಧೌತಃ
ಯದ್ಯಹಂ ಸ್ಮೃತಧನಂಜಯಸೂತಃ
ಕಿಂ ಕರಿಷ್ಯತಿ ಸ ಮೇ ಯಮದೂತಃ॥ ಕೃ–ಕರ್ಣ II, 29

ಎಂದು ಶಾಂತಚಿತ್ತರಾಗಿರುವವರು;

ಕಳ್ಳ . . . . ಚ್ಚಿ—ಗಾಡಿಗೆ ಎರಡು ಚಕ್ರದಂತೆ, ಗಾಡಿ ಸಮನಾದ ಈ ಶರೀರದ ಎರಡು ಚಕ್ರ ಕಾಮ ಮತ್ತು ಮೋಹ; ಅಥವಾ ಜೀವನ ದೇಹಾತ್ಮಭ್ರಮ ಮತ್ತು ಪ್ರಕೃತಿ ಪ್ರಾವಣ್ಯ—ಈ ಎರಡು ಚಕ್ರಗಳನ್ನುಳ್ಳ ಶಕಟಾಸುರನನ್ನು, ತನ್ನ ವೈರಾಗ್ಯವೆನ್ನುವ ಕಾಲಿನಿಂದ ಒದ್ದು ನಾಶಪಡಿಸಿದವರು ಆಚಾರ್ಯರು.

ವೆಳ್ಳತು . . . ವಿತ್ತಿನೈ—ಭಗವದ್ಗುಣ ಸಾಗರದಲ್ಲಿ ಧ್ಯಾನಾಸಕ್ತರಾದ, ಮತ್ತು ನಮ್ಮ ಮೋಕ್ಷಕ್ಕೆ ಕಾರಣರಾದ ಆಚಾರ್ಯರನ್ನು

ಉಳ್ಳತ್ತುಕೊಂಡು—ಮನಸ್ಸಿನಲ್ಲಿಟ್ಟು

ಮುನಿ . . . ಳುಂ—ಅನಿಷ್ಪನ್ನ ಸಮಾಧಿಗಳು ಮತ್ತು ನಿಷ್ಪನ್ನ ಭಕ್ತರೂ

ಮೆಳ್ಳವೆೞುಂದು—ಮೆಲ್ಲಗೆ ಸವಿನಯವಾಗಿ

ಹರಿ ಎನ್ನ ಪೇರರುವಂ—ಆಚಾರ್ಯನೇ, ನಮ್ಮ ಅಜ್ಞಾನವನ್ನು ಹರಿಸು, ಪರಿಹರಿಸು ಎಂದು ಪ್ರಾರ್ಥಿಸುವ ಗಂಭೀರ ಸ್ಮರವು

ಉಳ್ಳಂ ಪುಕುಂದು ಕುಳಿರ್ನ್ದ—ನಮ್ಮ ಮನಸ್ಸನ್ನು ಪ್ರವೇಶಿಸಿ, ಅದಕ್ಕೆ "ಇಂತಹ ಆಚಾರ್ಯರು ನಮ್ಮವರಲ್ಲಾ" ಎಂದು ತಂಪು ತಂದಿದೆ.

ಅಸ್ಮದ್ಗುರುಭ್ಯೋ ನಮಃ

ಕೇಶುಕೀಶೆನ್ರೆಂಗುಂ ಆನೈಚ್ಚಾತ್ತಂ ಕಲಂದು
ಪೇಶಿನ ಪೇಚ್ಚರವಂ ಕೇಟ್ಟಿಲ್ಲೈಯೋ ಪೇಯ್‌ಪೆಣ್ಣೇ
ಕಾಶುಂ ಪಿರಪ್ಪುಂ ಕಲಕಲಿಪ್ಪ ಕ್ಕೈ ಪೇರ್ತ್ತು
ವಾಶನರುಂ ಕುೞಲಾಚ್ಚಿಯರ್ ಮತ್ತಿನಾಲ್
ಓಶೈಪಡುತ್ತ ತಯಿರರವಂ ಕೇಟ್ಟಿಲ್ಲೈಯೋ
ನಾಯಕಪ್ಪೆಣ್ ಪಿಳ್ಳಾಯ್ ನಾರಾಯಣ್ಣ ಮೂರ್ತಿ
ಕೇಶವನೈ ಪಾಡವುಂ ನೀ ಕೇಟ್ಟೇ ಕಿಡತ್ತೀಯೋ
ತೇಶಮುಡೈಯಾಯ್ ತಿರವೇಲೋರೆಂಪಾವಾಯ್ ॥ ೭ ॥

ಇಲ್ಲಿ ಎಬ್ಬಿಸಲ್ಪಡುವವಳು ಭಾಗವತಯೂಥಕ್ಕೇ ನಾಯಕಿಪ್ರಾಯಳಾದ ಗೋಪಿಕೆ. ಭಾಗವತರಿಂದಲೇ ಪರಮಾತ್ಮನ ಮಹಿಮೆಯು ಗೋಚರವಾಗುವುದು. ಶಠಗೋಪರು ತಮ್ಮ ತಿರುವಾಯ್‌ಮೊೞಿಯನ್ನು "ಉಯರ್‌ವರ ಉಯಿರ್ನಲಂ" ಎಂದು ಪ್ರಾರಂಭಿಸಿ, ಅಂತಹ ಪರಮಾತ್ಮನ "ತುಯರರ ಶುಡರಡಿ ತೊೞುದು ಎೞುಎ ಮನನೇ" ಎಂದು ತನ್ನ ಮನಸ್ಸನ್ನು ಕೇಳಿಕೊಂಡು ಮೊದಲನೇ ಪದ್ಯವನ್ನು ಮುಗಿಸಿರುವರು. ಅದಾದಮೇಲೆ ಪರಮಾತ್ಮನ ಹಿರಿಮೆಯನ್ನೂ, ಸೌಲಭ್ಯ ಸೌಶೀಲ್ಯ ಮೊದಲಾದ ಗುಣಗಳನ್ನೂ ಒಂದರಮೇಲೊಂದು ಪರ್ವದಲ್ಲಿ ಅನುಭವಿಸಿ ಕೊನೆಗೆ

ತಿರು–ಮೊ II, 7, 1

ಕೇಶರ್ವತಮರ್ ಕೀೞ್‌ಮೇಲ್ ಎಮರ್
ಏೞೇೞುಪಿರಪ್ಪುಂ ಮಾಶದಿರ್ ಇದು
ಪೆತ್ತು ನಮ್ಮುಡೈವಾೞ್ವು ವಾಯ್‌ಕಿನ್ರವಾತಿ ತಿರು–ಮೊ II, 7, 1

ಎಂದು ಹೇಳಿ ಭಾಗವತ ಸಮೃದ್ಧಿಯನ್ನುಂಟುಮಾಡುವುದೇ ಪರಮಾತ್ಮನಿಗೆ ಪ್ರಿಯವಾದುದೆಂದು ಹೇಳಿರುವರು. ಹಾಗೆಯೇ ಗೋದೆಯು ಭಾಗವತರೊಡನೆ ಕೂಡಿ ಇದ್ದು ಪರಮಾತ್ಮನನ್ನು ಸ್ತುತಿಸುವುದೇ ಪರಮಪುರುಷಾರ್ಥವೆಂದು ತಿಳಿಸಿ ಪರಮಾತ್ಮನಲ್ಲಿ ತಲ್ಲೀನಳಾದ ನಾಯಕಿ ಗೋಪಬಾಲಿಕೆಯನ್ನು ಎಬ್ಬಿಸುವಳು.

ಪರಮಾತ್ಮನನ್ನು ಏಕಾಂತದಲ್ಲಿ ಅನುಭವಿಸುವವರು ಋಷಿಗಳು. ಅವರು ಒಟ್ಟುಗೂಡಿ ನಿಶ್ಚಯಿಸಿದ ಪರಮಾತ್ಮನನ್ನು ಅನುಭವಿಸುವವರು ಭಾಗವತರು. ಅವರಿಗಾಗಿಯೇ ಶ್ವೇತಾಶ್ವತರ ಉಪನಿಷತ್ತಿದೆ. ಶ್ವೇತಾಶ್ವತರು ಒಬ್ಬ ಋಷಿ. ಅವರು ಋಷಿ ಸಂಘದಲ್ಲಿ ಅರಿತು ಸೇವಿಸಿದ ದೈವವೇ ಪರಮಾತ್ಮನೆಂದು ಆ ಉಪನಿಷತ್ತಿನಲ್ಲಿ ಹೇಳಿರುವರು.

ತಪಃ ಪ್ರಭಾವಾತ್ ದೇವಪ್ರಸಾದಾಚ್ಚ
ಬ್ರಹ್ಮ ಹ ಶ್ವೇತಾಶ್ವತರೋಽಥ ವಿದ್ವಾ ।
ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ
ಪ್ರೋವಾಚ ಸಮ್ಯಕ್ ಋಷಿಸಂಘಜುಷ್ಟಂ ॥ VI–21

" ಮನಸಶ್ಚೇಂದ್ರಿಯಾಣಾಂ ಚ ಐಕಾಗ್ರ್ಯಂ ಪರಮಂ ತಪಃ " ಎಂದಿರುವಂತೆ ತಮ್ಮ ತಪಸ್ಸಿನ ಪ್ರಭಾವದಿಂದಲೂ, **" ದಿವು—ಕ್ರೀಡಾಯಾಂ, ದಿವು—ದ್ಯೋತನೇ "** ಎನ್ನುವ ಎರಡು ಕ್ರಿಯಾಪದದರ್ಥವನ್ನೊಳಗೊಂಡ ದೇವನಾದ ಪರಮಾತ್ಮನ ಕೃಪೆಯಿಂದಲೂ ಶ್ವೇತಾಶ್ವತರು, ಸನ್ಯಾಸಿಗಳಿಂದ (**ಅತ್ಯಾಶ್ರಮಿಭ್ಯ**) ಋಷಿಸಂಘದಲ್ಲಿ ನಿರ್ಣಿತವಾಗಿ ಸೇವಿಸಲ್ಪಟ್ಟ ಪರಮಪವಿತ್ರವಾದ ಬ್ರಹ್ಮವಸ್ತುವನ್ನು ಚೆನ್ನಾಗಿ ಅರಿತರು ಶ್ವೇತಾಶ್ವತರರು. ಆ ದೈವವೇ " **ನಾರಾಯಣ್ ಮೂರ್ತಿ ಕೇಶವ್** " ಎಂದು ಜ್ಞಾಪಿಸಿ **ಅವನ** ನಾಮಸಂಕೀರ್ತನೆಗಾಗಿ ನಾಯಿಕೆ ಗೋಪ ಬಾಲಿಕೆಯನ್ನು **ಎಬ್ಬಿಸುತ್ತಾಳೆ.**

ಕೀಶುಕೀಶು ಎನ್ರು—ಕೀಚ್ ಕೀಚ್ ಎಂದು
ಎಂಗುಂ—ಎಲ್ಲಾ ಕಡೆಯಲ್ಲೂ
ಆನೈಚ್ಚಾತ್ತಂ—ಭಾರದ್ವಾಜಪಕ್ಷಿಯು
ಕಲಂದು—ಪರಸ್ಪರ ಒಟ್ಟುಗೂಡಿ
ಪೇಶಿನ ಪೇರರವಂ ಕೇಟ್ಟಿಲೈಯೋ—ಮಾಡಿದ ದೊಡ್ಡ ಶಬ್ದವನ್ನು ಕೇಳಲಿಲ್ಲವೆ ?

ಇಲ್ಲಿ ಗೋದೆಯು ಮೊದಲು " ಕೀಶು ಕೀಶು ಎನ್ನು ಆನೈಚ್ಚಾತ್ತಂ ಪೇಶಿನ ಪೇರರವಂಕೇಟ್ಟಿಲೈಯೋ " ಎಂದು ಹೇಳಿ, ಇದರಿಂದ ಬೆಳಗಾಯಿತೆಂದು ನಿನಗೆ ತಿಳಿಯಲಿಲ್ಲವೇ; ಏಳು ಎಂದಳು. ಆದಕ್ಕೆ ಒಳಗಿದ್ದವಳು "ಬಂದು ಭಾರದ್ವಾಜ ಪಕ್ಷಿಯು ಶಬ್ದಮಾಡಿದರೆ ಅದರಿಂದ ಬೆಳಗಾಯಿತೆಂದು ಹೇಗೆ ಹೇಳುತ್ತಿಯೆ ?" ಎನ್ನಲಾಗಿ, ಗೋದೆಯು " ಕಲಂದು, ಎಂಗುಂ " ಎಂದು ತಿಳಿಸಿ " ಭರದ್ವಾಜ ಪಕ್ಷಿಯು ಒಂದಲ್ಲ; ಒಂದು ಕಡೆಯಲ್ಲ ಎಲ್ಲೆಡೆಯೂ ಒಟ್ಟುಗೂಡಿ ಶಬ್ದಿಸುತ್ತಿವೆ " ಎಂದಳು. "ಅವಕ್ಕೆ ಎಚ್ಚರವಾಗಿ ಪರಸ್ಪರ ಶಬ್ದಮಾಡುತ್ತಿವೆ" ಎಂದಾಗ, "ಕಲಂದು" ಎಂದು ಮತ್ತೆ ಜ್ಞಾಪಿಸಿದಳು. ಒಳಗಿದ್ದವಳು ಐಶ್ವರ್ಯವಂತಳು; "ಹಕ್ಕಿ ಶಬ್ದದಿಂದ ಏಳುವುದೇ " ಎಂದು ಮಲಗಿಯೇ ಇದ್ದಳು. ಆಗ ಗೋದೆಯು

ಪೇಯ್ ಪೆಣ್ಣೇ—"ಹುಚ್ಚುಹುಡುಗಿ, ಇದೇನೇ ನಿನ್ನ ದೊಡ್ಡಸ್ತಿಗೆ; ಪರಮಾತ್ಮನಲ್ಲಿ ಪ್ರೇಮತಾಳಿದ ಮೇಲೂ ಈ ಅಹಂಕಾರ ಹುಚ್ಚು ಬಿಡಲಿಲ್ಲವೇ ? " ಎನ್ನಲಾಗಿ ಆವಳು " ನಾನು ಸ್ತುತಿಪಾಠಕರು ಸ್ತುತಿ ಮಾಡಿದ ಮೇಲೆ ಏಳುವೆನೆಂದು ಹೇಳಲಿಲ್ಲ; ಸ್ತುತಿ ಪಾಠಕರು ಬಾರದೇ ಇದ್ದುದರಿಂದ ಬೆಳಗಾಗಿಲ್ಲ ಎಂದೆ " ಎಂದಳು. ಆಗ ಬೆಳಗಾಗಿದ್ದಕ್ಕೆ ಬೇರೆ ಗುರುತನ್ನು ಕೊಡುವಳು ಗೋದೆ.

ಕಾಶುಂ ಪಿರಪ್ಪುಂ ಕಲಕಲಪ್ಪ—ಗೋಪಿಕೆಯರು ಕತ್ತಿಗೆ ಕಟ್ಟಿಕೊಂಡಿರುವ ಅಚ್ಚುತ್ತಾಲಿ, ಆಮೈತ್ತಾಲಿಗಳು ಅವರು ಹಾಲುಕರೆಯುವಾಗ ಒಂದಕ್ಕೊಂದು ತಗಲಿ ಶಬ್ದಮಾಡುತ್ತಿರಲು

ಕೈ ಪೇರ್ತು—ಕೈಗಳನ್ನು ಸೇರಿಸಿಕೊಂಡು
ವಾಶನರುಂ—ಪರಿಮಳಸುವಾಸನೆಯಿಂದ ಕೂಡಿರುವ

ಕುಳಲ್—ಕೂದಲುಗಳುಳ್ಳ, **ಆಯ್ಚ್ಚಿಯರ್**—ಗೋಪಿಕೆಯರು, **ಮುತ್ತಿನಾಲ್**—ಕಡುಗೋಲಿನಿಂದ, **ಓಶೈಪಡುತ್ತ**—ಶಬ್ದಬರುವಂತೆ ಕಡೆದ, **ತಯಿರರವಂ**—ಮೊಸರಿನ ಶಬ್ದವನ್ನು, **ಕೇಟ್ಟಿಲೈಯೋ**—(ನೀನು) ಕೇಳಲಿಲ್ಲವೇ ?

ಗೋಪಿಯರು ಬ್ರಾಹ್ಮ ಮುಹೂರ್ತದಲ್ಲೆದ್ದು ಮೊಸರು ಕಡೆಯುವುದು ಅನೂಚಾನವಾಗಿ ಬಂದಿದೆ. ಅವರು ಕಡೆಯುವಾಗ ಅವರ ಆಭರಣ ಶಬ್ದವು ಸೇರಿ ಮೊಸರು ಕಡೆಯುವ ಶಬ್ದವು ಹಿತವಾಗಿರುತ್ತದೆ. **ಕೃಷ್ಣಪ್ರೇಮಿನಿಯಾದ ನಿನಗೆ** ಇದರಿಂದ **ಶ್ರೀಕೃಷ್ಣನ** ಜ್ಞಾಪಕ ಬರಲಿಲ್ಲವೇ ? ಅಲ್ಲವೇ ಅವರು ಕಡೆಯುವಾಗ ಕೃಷ್ಣನ ಮೇಲೆ ಹಾಡುತ್ತಿರುವರು. ಹೀಗೆ ಆಭರಣ ಶಬ್ದ, ಮೊಸರು ಶಬ್ದ, ಸಂಕೀರ್ತನ ಶಬ್ದ ಸೇರಿ ಯಾವ ನಾಸ್ತಿಕನನ್ನೂ ಎಬ್ಬಿಸುವಂತಿರುವಲ್ಲಿ ನೀನು ಮಾತ್ರ ಹೇಗೆ ಮಲಗಿರುವೆ ? ಎಂದಳು ಗೋದೆ. ಅದಕ್ಕೂ ಏಳದಿರುವುದನ್ನು ಕಂಡು

ನಾಯಕಪ್ಪೆಣ್ ಪಿಳ್ಳಾಯ್—ಎಂದಳು. ನಮಗೆ ಸ್ವಾಮಿನಿಯಾದ ಹೆಣ್ಣೇ, ನಿನ್ನ ಮನೆಯಲ್ಲಿ ಮೊಸರು ಕಡೆಯುವರೆನೇಕರಿರುವರು, ನಿಜ; ಕಡೆಯುವುದಕ್ಕಾಗಿ ನೀನು ಏಳಬೇಕಾಗಿಲ್ಲ.

ನಾರಾಯಣ್ . . . ಕಡತ್ತಿಯೋ—ಎಲ್ಲಾ ಗೋಪಿಯರೂ ಮೊಸರು ಕಡೆಯುವಾಗ " ನಾರಾಯಣ, ಕೇಶವ " ಎಂದು ಹಾಡುತ್ತಿರುವುದನ್ನು ಕೇಳಿಸಿಕೊಂಡೇ ಮಲಗಿರುವೆಯಾ ? ಅವನ ಆ ನಾಮ ಸಂಕೀರ್ತನ ಸವಿಯು ತಗಲಲಿಲ್ಲವೇ ?

ವಿಕ್ರೇತುಕಾಮಾ ಕಿಲ ಗೋಪಿಕನ್ಯಾ
ಮುರಾರಿಪಾದಾರ್ಪಿತಚಿತ್ತವೃತ್ತಿಃ ।
ದಧ್ಯಾದಿಕಂ ಮೋಹವಶಾದವೋಚತ್
ಗೋವಿಂದ ದಾಮೋದರ ಮಾಧವೇತಿ ॥

ಹಾಲು ಮೊಸರು ಮಾರುವುದಕ್ಕೆ ಹೋಗುವಾಗಲೂ ಗೋಪಿಯರಿಗೆ ಶ್ರೀಕೃಷ್ಣನ ಧ್ಯಾನವೇ. ಹಾಲುಬೇಕೇ ಮೊಸರುಬೇಕೇ ಎನ್ನುವುದಕ್ಕೆ ಬದಲು, ಗೋವಿಂದ ಬೇಕೇ ದಾಮೋದರ ಬೇಕೇ, ಮಾಧವ ಬೇಕೇ ಎಂದು ಹೇಳುತ್ತಾರೆ; ನೀನು ಮಾತ್ರ ಮಲಗಿ ನಿದ್ರಿಸುತ್ತಾ ಅವನನ್ನು ಮರೆತಿರುವಂತಿದೆ. ಅಲ್ಲದೆ

ಉದ್ಗಾಯತೀನಾಮುರದಿಂದಲೋಚನಂ
ವ್ರಜಾಂಗನಾನಾಂ ದಿವಮುಸ್ಪೃಶದ್ಧ್ವನಿಃ ।
ದದ್ಮಶ್ಚ ನಿರ್ಮಂಥನಶಬ್ದಮಿಶ್ರಿತೋ
ನಿರಸ್ಯತೇ ಯೇನ ದಿಶಾಮು ಮಂಗಳಂ ॥

ಗೋಪಿಯರ ಶ್ರೀಕೃಷ್ಣನಾಮ ಸಂಕೀರ್ತನವು ಮೊಸರು ಕಡೆಯುವ ಶಬ್ದದೊಡನೆ ಸೇರಿ ದೇವತೆಗಳ ಕಿವಿಗೂ ಬಿದ್ದು ಇಂಪು ತರುವಂತಹುದು. ಈ ಶಬ್ದವು ಯಾವ ದಿಕ್ಕಿನಲ್ಲಿ ಕೇಳಿಸುತ್ತದೋ ಅಲ್ಲಿ ಎಲ್ಲವೂ ಮಂಗಳವೇ ಆಗುತ್ತದೆ. ನಿನ್ನ ಕಿವಿಗೆ ಬಿದ್ದಿದ್ದರೆ ನೀನು ಏಳುತ್ತಿದ್ದೆ ; ಇದು ನಿನ್ನ ಕರ್ಮ ; ಎಂದು ಹೇಳಿ ಬಾಗಿಲಿನ ಕಿಂಡಿಯಿಂದ ನೋಡಿದಳು ಗೋದೆ ; ಒಳಗಿರುವಳು ಪ್ರಸನ್ನ ಮುಖವುಳ್ಳವಳಾಗಿ ಎದ್ದು ಬರಲು ಸಿದ್ಧಮಾಡಿಕೊಳ್ಳುತ್ತಿರುವುದನ್ನು ಕಂಡು

ತೇಶ ಮುಡೈಯಾಯ್ ತಿರವು—ತೇಜಸ್ಸಿನಿಂದ ಪ್ರಕಾಶಿಸುವವಳೇ ಬಾ, ಬಾಗಿಲು ತೆಗೆ ಎಂದಳು ಗೋದೆ.

ಇಲ್ಲಿ ಗೋದೆಯು ಪರಮಾತ್ಮನ ನಾಮವನ್ನು ಹೇಳುವಾಗ "ನಾರಾಯಣ್ ಮೂರ್ತಿ ಕೇಶವ್" ಎಂದಿರುವಳು. "ನಾರಾಯಣ್" ಎಂದು ಮಾತ್ರ ಹೇಳದೆ "ನಾರಾಯಣ್ ಮೂರ್ತಿ" ಎಂದಿರುವುದು ವಿಶೇಷಾರ್ಥದಲ್ಲಿ ವೇದದಿಂದ "ನಾರಾಯಣ" ನೇ ಪರಮಾತ್ಮನೆಂದು ತಿಳಿದರೂ ಅವನು ಅಮೂರ್ತನೇ ಮೂರ್ತನೇ ಎನ್ನುವುದು ನಿಶ್ಚಯವಿಲ್ಲದಿದ್ದರೆ ಭಕ್ತಿಯು ಶಾಶ್ವತವಾಗುವುದಿಲ್ಲ ಹಿಂದಿನ ಪದ್ಯದ ಗೋಪಿಗೆ ಕ್ಷೀರಾಬ್ಧಿಶಾಯಿಯೇ ಶ್ರೀಕೃಷ್ಣ ಅವನೇ ಹರಿ ಎಂದು ಹೇಳಿದ್ದು ಸಾಕಾಯಿತು. ಎದ್ದು ಬಂದು ಭಜನಕೂಟವನ್ನು ಕೂಡಿಕೊಂಡಳು. ಇಲ್ಲಿರುವವಳು "ನಾಯಕಪ್ಪೆಣ್, ಪೇಯ್ಪೆಣ್," ಸಮಾಧಿಯಲ್ಲಿ ಪರಮಾತ್ಮನೊಡನೆ ಐಕ್ಯಹೊಂದಿ "ಅಹಂ ಸೂರ್ಯಶ್ಚ ಅಭವಂ ಚಂದ್ರಶ್ಚ" ಎಂದು ವಾಮದೇವರು ಭಕ್ತಿಪರವಶರಾಗಿ ಕೂಗಿಕೊಂಡಂತಲ್ಲದೆ, ಆ ಪರದೈವಕ್ಕೆ ನಿತ್ಯರೂಪವಿರುವುದೇ ಇಲ್ಲವೇ? ಎಂದು ನೆನೆಯುತ್ತಿರುವಳು. ಅವಳ ಸಂಶಯವನ್ನು ತೀರಿಸಲು "ನಾರಾಯಣ್ ಮೂರ್ತಿ" ಎಂದು ಹೇಳಿ, "ಎಲೈ ಗೋಪಿಕೆ, ಜಗತ್ತಿನ ಸೃಷ್ಟಿಸ್ಥಿತಿಲಯಕ್ಕೆ ಕಾರಣನಾದ ನಾರಾಯಣನು ದಿವ್ಯಮಂಗಳ ವಿಗ್ರಹ ವಿಶಿಷ್ಟನು. ಮತ್ತು "ಕೇಶವ್" ಒಳ್ಳೆ ಕೇಶವುಳ್ಳವನು; ಮತ್ತು **"ಕಶ್ಚ ಈಶಶ್ಚ ಕೇಶೌ, ತೌ ಅವತೀತಿ ಕೇಶವಃ** ಎನ್ನುವ ವ್ಯುತ್ಪತ್ತಿಯಿಂದ ಚತುರ್ಮುಖ ಬ್ರಹ್ಮನಿಗೂ ರುದ್ರನಿಗೂ ಕಷ್ಟವೊದಗಿದಾಗ ಕಾಪಾಡುವವನು ; ಇವನೇ ಪರದೈವ ; ಇವನೇ ಈಗ ಶ್ರೀಕೃಷ್ಣನಾಗಿರುವನು ಎಂದು ತಿಳಿಸಿರುವಳು. ಆರನೇ ಪದ್ಯದಲ್ಲಿ ಪರದೈವವು "ಹರಿ" ಎಂದಾದರೂ ಇಲ್ಲಿ ಅದು "ನಾರಾಯಣ್ ಮೂರ್ತಿ, ಕೇಶವ್" ಎಂದು ಮತ್ತೂ ನಿಷ್ಕರ್ಷಿಸಲ್ಪಟ್ಟಿದೆ.

ಸ್ಥಾಪದೇಶ

ಇಲ್ಲಿ ಸರ್ವಲಕ್ಷಣಸಂಪನ್ನನಾದ ಆಚಾರ್ಯನನ್ನು ಸೇರಲು ಒಬ್ಬ ಪ್ರಧಾನ ಶಿಷ್ಯ ಮಿಕ್ಕವರನ್ನು ಎಬ್ಬಿಸಲು ಹೊರಟು ಶಿಷ್ಯಲಕ್ಷಣ ಪರಿಪೂರ್ಣನಾದವನೊಬ್ಬನನ್ನು "ಪೇಯ್ ಪೆಣ್ಣೇ, ನಾಯಕ ಪೆಣ್ ಪಿಳ್ಳಾಯ್," "ತೇಶಮುಡೈಯಾಯ್" ಎಂದು ಕರೆದಿರುವನು. ಆಚಾರ್ಯನಿಗೆ ಪೂರ್ಣ ಪರತಂತ್ರನಾದುದರಿಂದ ಇವನು "ಪೆಣ್ಪಿಳ್ಳಾಯ್!" ಮಿಕ್ಕ ಶಿಷ್ಯಲಕ್ಷಣಗಳು ತುಂಬಿರುವುದರಿಂದ "ನಾಯಕ ಪೆಣ್ಪಿಳ್ಳಾಯ್."

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಎಂದು ಶ್ವೆ–ಉ ಕೊನೆಯಲ್ಲಿ ಹೇಳಿರುವಂತೆ ಆಚಾರ್ಯಭಕ್ತಿ ಮತ್ತು ಭಗವದ್ಭಕ್ತಿಯಿಂದ ತನ್ನನ್ನೇ ಮರೆತಿರುವನಂತಿರುವನಾದುದರಿಂದ "ಪೇಯ್ ಪೆಣ್!" ಆಚಾರ್ಯನಲ್ಲಿಗೆ ಹೋಗುವ ಪ್ರಸಂಗವು ಬಂದಿತಲ್ಲಾ ಎನ್ನುವ ಹರ್ಷದಿಂದ ಪುಲಕಿತನಾದುದರಿಂದ "ತೇಶಮುಡೈಯಾಯ್!" ಅಥವಾ

ಅಮುನಾ ತಪನಾತಿಶಾಯಿ ಭೂಮ್ನಾ
ಯತಿರಾಜೇನ ನಿಬದ್ಧನಾಯಕಶ್ರೀಃ ।
ಮಹತೀ ಗುರುಪಂಕ್ತಿಹಾರಯಷ್ಟಿಃ
ವಿಬುಧಾನಾಂ ಹೃದಯಂಗಮಾ ವಿಭಾತಿ ಯ–ಸ–15

ಮಹತ್ತರ ಗುರುಪಂಕ್ತಿಯೆನ್ನುವ ಹಾರದಲ್ಲಿ ನಾಯಕಮಣಿಯಂತೆ ರಾಮಾನುಜರು ಪ್ರಕಾಶಿಸುತ್ತಿದ್ದಂತೆ, ಶಿಷ್ಯರಲ್ಲಿ ನಾಯಕ ಸ್ಥಾನದಲ್ಲಿರುವನಾದ್ದರಿಂದ "ಪೇಯ್ ಪೆಣ್" ನಾಯಕ ಪೆಣ್ ಪಿಳ್ಳಾಯ್" "ತೇಜಮುಡೈಮಾಯ್;" ಅಥವಾ

"ರೂಪಮೇವಾಸ್ಯೈತಂ ಮಹಿಮಾನಂ ವ್ಯಾಚಷ್ಟೆ" ಎಂದು ವೇದವು ಹೇಳಿರುವಂತೆ ತನ್ನ ಇರುವಿಕೆಯಿಂದಲೇ ತನ್ನ ಮಹಿಮೆಯನ್ನು ಬಹಿರಂಗಪಡಿಸುವನಾದ ಶಿಷ್ಯ ಇಲ್ಲಿ ಎಬ್ಬಿಸಲ್ಪಡುವನು.

ಕೇಶು . . . ಪೆಣ್ಣೇ—ಇಲ್ಲಿ ಭರದ್ವಾಜ ಋಷಿಗಳಿಗೆ ಸದೃಶನಾದ ಆಚಾರ್ಯನು "ಕಃ ಈಶಃ, ಕಃ ಈಶಃ" ಎಂದು ವ್ಯಾಖ್ಯಾನಮಾಡಲು ಹೊರಟು ಮಿಕ್ಕ ಶಿಷ್ಯರೊಡನೆಯೂ, ಮಹಾತ್ಮರೊಡನೆಯೂ ಕಲೆತು ಘಂಟಾನಾದದಿಂದ ಪ್ರತಿಪಾದಿಸುವ ವಾಕ್ಯಾರ್ಥವನ್ನು ನೀನು ಕೇಳಿಸಿಕೊಳ್ಳಲಿಲ್ಲವೇ ?

ಅಥರ್ವಶಿಖೋಪನಿಷತ್ತಿನಲ್ಲಿ "ಜಗತ್ತಿಗೆ ಯಾವನು ಸೃಷ್ಟಿಕರ್ತನೋ ಅವನೇ ಪರಬ್ರಹ್ಮ; ಅವನನ್ನೇ ಧ್ಯಾನಿಸಬೇಕು" ಎಂದು ಹೇಳುವಾಗ **"ಕಾರಣಂ ತು**

ಧ್ಯೇಯಃ" "ನಕಾರಣಂ ಕಾರಣಾನಾಂ ಧಾತಾ ಧ್ಯಾತಾ," "ಧ್ಯಾನಂ ವಿಷ್ಣುಃ," "ಧ್ಯಾತಾ ರುದ್ರಃ" ಎಂದು ಹೇಳಿ ಆ ಕಾರಣವಸ್ತು ಎಲ್ಲಾ ವಿಶ್ವಕ್ಕೂ ಕಾರಣವಾಗಿ, ತನಗೆ ಕಾರಣವಿಲ್ಲದ್ದು; ಅದು ಧಾತಾವಾದ ಬ್ರಹ್ಮನಲ್ಲ; ಸಿದ್ಧೋಪಾಯನಾದವನೇ ವಿಷ್ಣು (ಧ್ಯಾಯತೇ ಅನೇನ ಇತಿ ಧ್ಯಾನಂ); ಎಂದು ಪರತತ್ವವನ್ನು ಜಗತ್ಕಾರಣತ್ವ ಚಿಂತನದ ಮೂಲಕ ನಿಷ್ಕರ್ಷಿಸಿದೆ. ಅದೇ ರೀತಿಯಲ್ಲಿ ಆಚಾರ್ಯರು "ಕಃ ಈಶಃ" ಅಂದರೆ "ಕಾರಣ ವಸ್ತುವೇ ಈಶ್ವರ" ಎಂದು ಎಲ್ಲರೊಡನೆ ಕಲೆತು ಪ್ರಭುತ್ವ ಸೂಚಕ ಧ್ವನಿಯಿಂದ ಶ್ರುತಿವಾಕ್ಯವನ್ನು ಸ್ಮೃತಿವಾಕ್ಯದೊಡನೆಯೂ ಪ್ರಬಂದಗಳೊಡನೆಯೂ ಮಿಶ್ರಮಾಡಿ (ಕಲಂದು) ಸಮರ್ಥಿಸಿರುತ್ತಿರುವರು. ಇದನ್ನು ನೀನು ಕೇಳಲಿಲ್ಲವೇ ?

ಪೇಚ್ಚರವಂ—ಶಾಸ್ತ್ರದಲ್ಲಿ ವಸ್ತು ನಿರ್ಣಾಯಕವಾದಕ್ಕೆ "ಕಥಾ" ಎಂದು ಹೇಳುವುದುಂಟು; ಅದು ಮೂರು ವಿಧ (1) ವಿತಂಡಾವಾದ–ಇದು ಅವ್ಯವಸ್ಥಿತ ಪಕ್ಷವಾದ; ತನ್ನದೆನ್ನುವ ಒಂದು ಮತವಿಲ್ಲದೆ ಹೇಳಿದ್ದಕ್ಕೆಲ್ಲಾ ಒಂದು ಕೋಟಿ ಹಾಕುತ್ತಿರುವುದು; (2) ಜಲ್ಪ–ಇದು ಹೇತುಪಕ್ಷವಾದ; ಇದನ್ನೇ ಶ್ವೇ-ಉ. ಅನುಸರಿಸುತ್ತಿರುವುದು "ಇದಕ್ಕೆ ಇದು ಕಾರಣ; ಇದಕ್ಕೆ ಇದು ಕಾರಣ" ವೆಂದು ಯೋಚಿಸುತ್ತಾ ಸಮರ್ಥಿಸುತ್ತಾ ಹೊರಟು, ನಿದರ್ಶನಗಳಿಂದ, ಯಾವುದು ಎಲ್ಲಕ್ಕೂ ಕಾರಣವಾಗಿ ತನಗೆ ಯಾವ ಕಾರಣವೂ ಇಲ್ಲದೇ ಉಳಿಯುವುದೋ ಅದೇ ಪರಮಾತ್ಮ ಎಂದು ನಿರ್ಣಯಮಾಡುವ ಕ್ರಮ. (3) ವಾದ ಅಥವಾ ವ್ಯವಸ್ಥಿತ ಪಕ್ಷ: ಲೋಕಾನುಭವವನ್ನು ಶ್ರುತಿ ಅಂದರೆ ವೇದದೊಡನೆ ಸಮನ್ವಯ ಮಾಡಿಕೊಂಡು ಸಿದ್ಧಾಂತವನ್ನು ಪ್ರತಿಪಾದಿಸುವ ಕ್ರಮ. ಈ ಮಾರ್ಗದಲ್ಲೇ ನಡೆದು ಪರಮಾತ್ಮನನ್ನು ಸ್ಥಾಪಿಸುವಾಗ ಆಚಾರ್ಯರ ಪ್ರಭುತ್ವ ಸೂಚಕ ಮಾತೇ "ಕಲಂದು, ಪೇಚ್ಚರವಂ";

"ಭಗವದ್ಬೋಧಾಯನಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರ ವೃತ್ತಿಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ; ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ" —ಶ್ರೀ ಭಾಷ್ಯ

ಎಂದು ರಾಮಾನುಜರು ಹೇಳಿರುವಂತೆ ಹೇಳುವ ಮಾತು "ಪೇಶಿನಪೇಚ್ಚರವಂ": ಅಥವಾ ಅಷ್ಟಾಕ್ಷರೀ, ದ್ವಯ ಮತ್ತು ಚರಮ ಶ್ಲೋಕಗಳ ಅರ್ಥವನ್ನು ಒಟ್ಟುಗೂಡಿಸಿ (ಕಲಂದು ಪೇಶಿನ) ಹೇಳಿದ ಮಾತೇ **ಪೇಚ್ಚರವಂ.**

ಕಾಶುಂ . . . ಕೇಟ್ಟಿಲೈಯೋ—ಕಾಶುಂ–ಪ್ರಬಂಧ ಅಥವಾ ಸ್ಮೃತಿ; ಪಿರಪ್ಪು–ಉಪನಿಷತ್ತು; ಇವನ್ನು ಒಟ್ಟಿಗೆ ಸೇರಿಸಿ ಮಾಡುವ ಸಿಂಹನಾದವೇ **ಕಾಶುಂ ಪಿರಪ್ಪುಂ ಕಲಕಲಪ್ಪ; ಈ** ಸಿಂಹನಾದ ವೇಳೆಯಲ್ಲಿಯೂ ತನ್ನ ಸೌಮ್ಯತೆಯನ್ನು ಮತ್ತು ನಮ್ರತೆಯನ್ನು ಬಿಡದೆ ತೋರಿಸುವ ಅಂಜಲಿ ಮುದ್ರೆಯೇ

ಕೈಪೇರ್ತು;
ಅಂಜಲಿಃ ಪರಮಾಮುದ್ರಾ ಕ್ಷಿಪ್ರಂ ದೇವಪ್ರಸಾದಿನೀ

ಎಂದಿರುವಂತೆ

ಶಿರಸ್ಯಂಜಲಿಮಾದಾಯ ಕೈಕೇಯ್ಯಾನಂದವರ್ಧನಃ।
ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಂ ॥

ಎಂದು ರಾಮಾಯಣದಲ್ಲಿ ಹೇಳಿರುವಂತೆ ತನ್ನ ಶಿರಸ್ಸಿನಲ್ಲಿ ಅಂಜಲಿಬದ್ಧನಾಗಿ ಭರತನು ಪ್ರಾರ್ಥಿಸಿಕೊಂಡಮೇಲೆ ಶ್ರೀರಾಮನು ರಾಜ್ಯವನ್ನು ಸ್ವೀಕಾರಮಾಡಲು ಒಪ್ಪಿದನು. ಹಾಗೆಯೇ ಎಷ್ಟು ವಾದ ಸಾಮರ್ಥ್ಯದಿಂದ ವಾದಿಸಿ ಪರಪಕ್ಷವನ್ನು ಜಯಿಸುವಂತಾದರೂ ಅವರನ್ನು ನಮ್ಮವರನ್ನಾಗಿ ಮಾಡಿಕೊಳ್ಳಬೇಕಾದರೆ ಅಂಜಲಿಯೇ ಪರಮಸಾಧನ; ಅದಕ್ಕಾಗಿಯೇ ಭಗವಚ್ಛೇಷತ್ವವು ಭಾಗವತಶೇಷತ್ವದಲ್ಲಿ ಪರ್ಯವಸಾನ ಹೊಂದುವುದೆಂದು ತಿರುಮಂಗೈ ಆಳ್ವಾರ್ರು

ಪತ್ತಿಲ್ಲಾಂ ಪೇಶಿನುಂ ನಿಂ ತಿರುವೆಟ್ಟೆಳುತ್ತುಕ್ಕು
ತ್ತಾ ಉನ್ನದುಂ ಉನ್ನಡಿಯಾರ್ಕಡಿಮೈ

ಎಂದಿರುವರು. ಉಪನಿಷತ್ತು ತತ್ವ ಹಿತ ಅಂದರೆ ಸಾಧನ ಮತ್ತು ಪುರುಷಾರ್ಥವನ್ನು ಪ್ರತಿಪಾದಿಸಿದರೆ ಪ್ರಬಂಧಗಳು ಅದನ್ನು ಅನುಭವದಿಂದ ಸಮರ್ಥಿಸುತ್ತವೆ. ಅದಕ್ಕಾಗಿಯೇ ನಿಗಮಾಂತದೇಶಿಕರು —(ದ್ರ–ಉ–ತಾ)

ಪ್ರಜ್ಞಾಜ್ಯೋ ಮುಂಥಶೈಲೇ ಪ್ರಥಿತಗುಣರುಚಿಂ ನೇತ್ರರ್ಯ ಸಂಪ್ರದಾಯಂ
ತತ್ತಲ್ಲಬ್ಧಿಪ್ರಸಕ್ತೈರನು ಪಥಿವಿಬುಧೈ ರರ್ಥಿತೋ ವೇಂಕಟೇಶಃ।
ತಲ್ಪಂ ಕಲ್ಪಾಂತಯೂನಃ ಶತಜಿದುಪನಿಷದ್ದುಗ್ಧಸಿಂಧುಂ ವಿಮಥ್ನನ್
ಗ್ರಥ್ನಾತಿ ಸ್ಮಾದು ಗಾಥಾಲಹರಿದಶಶತೀನಿರ್ಗತಂ ರತ್ನಜಾತಂ ॥

ಎಂದಿರುವರು.

ಹೀಗೆ ಶ್ರುತಿ, ಸ್ಮೃತಿ ಮತ್ತು ಪ್ರಬಂಧಗಳನ್ನು ಒಟ್ಟುಗೂಡಿಸಿ ವಿನಯದಿಂದ, ನಮ್ರತೆಯಿಂದ ಪರಪಕ್ಷವನ್ನು ಜಯಿಸಲು ಪ್ರಯೋಗಿಸಿದ ಸಿಂಹನಾದವನ್ನು ನೀನು ಕೇಳಲಿಲ್ಲವೇ ?

ವಾಶನರುಂ ಕುಳಲ್ ಆಯ್ಚ್ಚಿಯರ್—ಇವರ ಶಿರೋಭೂಷಣ ವೆಂದರೆ ಆಚಾರ್ಯರ ಮುಖೇನ ಸಂಪಾದಿಸಿದ ಜ್ಞಾನ; ಅವರ ಅನುಷ್ಠಾನವನ್ನು ಅನುಕರಿಸುವುದರಿಂದ ಬಂದ ವಿನಯವೇ ಸೌರಭ;

ವೇದನಿರ್ಮಥನಾಭ್ಯಾಸಾದಿಮಮರ್ಥಂ ಗೃಹಿತವಾ ।
ಕಾರಣಂ ರಕ್ಷಕೋ ವಿಷ್ಣುಃ ಪರಮಾಪ್ಯಾಯನೋ ನಿಧಿಃ ॥
ಆಲೋಢ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

ಭಾ–ಆನು 186–11

ಯತ್ರಾಷ್ಟಾಕ್ಷರಸಂಸಿದ್ಧೋ ಮಹಾಭಾಗೋ ಮಹೀಮತೇ ।
ನ ತತ್ರ ಸಂಚರಿಷ್ಯಂತಿ ವ್ಯಾಧಿದುರ್ಭಿಕ್ಷತಸ್ಕರಾಃ ॥ ನಾರ 4–20
ದ್ವ್ಯಕ್ಷರಂ ಹಿ ಭವೇನ್ಮೃತ್ಯುಃ ತ್ರ್ಯಕ್ಷರಂ ಬ್ರಹ್ಮ ಶಾಶ್ವತಂ ।
ಮಮೇತಿ ದ್ವ್ಯಕ್ಷರಂ ಮೃತ್ಯುಃ ನಮಮೇತಿ ಚ ಶಾಶ್ವತಂ ॥

ಇವೇ ಮೊದಲಾದ ಸ್ಮೃತಿವಾಕ್ಯಗಳಲ್ಲಿ ಹೇಳಿರುವಂತೆ ಜ್ಞಾನಭೂಷಿತರು ಮತ್ತು ವಿನಯ ಭೂಷಿತರು ಗೋಪಿಯರಂತೆ ಪರಮಾತ್ಮನಲ್ಲೇ ನಿಂತಿರುವರು.

ಮುತ್ತಿನಾಲ್ ಓಶೈಪಡುತ್ತ ತಯಿರರವಂ—ತಮ್ಮ ಪ್ರಜ್ಞೆ ಎನ್ನುವ ಕಡಗೋಲಿನಿಂದ ಶಾಸ್ತ್ರಾರ್ಥವೆನ್ನುವ ಹಾಲಿಗೆ ತಮ್ಮ ಪ್ರೇಮವೆನ್ನುವ ಹೆಪ್ಪನ್ನು ಹಾಕಿ ಮಾಡಿದ ಮೊಸರನ್ನು ಕಡೆದು ಬೆಣ್ಣೆತೆಗೆಯಲು ಮಾಡಿದ ದೊಡ್ಡ ಶಬ್ದವನ್ನು ನೀನು ಕೇಳಲಿಲ್ಲವೇ? ಅದಕ್ಕಾಗಿಯೇ ಮುಮುಕ್ಷುಪ್ಪಡಿಯಲ್ಲಿ

ತಯಿರ್ಕ್ಕಡೈಂದು ವೆಣ್ಣೈತ್ತಿರಟ್ಟಿನಾಪ್ಪೋಲೆ
ಮಾನ್ರುವೇದತ್ತಿಲುಂ ಮೂನ್ರಕ್ಷರತ್ತೈ ಎಡುತ್ತದು

ಎಂದು ಹೇಳಲಾಗಿದೆ. ಇಲ್ಲಿ "ತಯಿರರವಂ" ಎನ್ನುವುದರಿಂದ ಮಥನವೇಳೆಯಲ್ಲಿ ಬೆಣ್ಣೆಯು ಸ್ವಲ್ಪಸ್ವಲ್ಪವಾಗಿ ಕಾಣಿಸಿಕೊಳ್ಳುವಂತೆ ಪರಮಾರ್ಥವು ಮೇಲೇಳುವುದು ಎಂದು ಅರ್ಥ ಬರುತ್ತದೆ. ಹೀಗೆ ಬೆಣ್ಣೆಯಾಗಿ ತೆಗೆದ ಅರ್ಥವಾವುದೆಂದರೆ

ನಾರಾಯಣ ಮೂರ್ತಿ ಕೇಶವ—ಜಗತ್ತಿನ ಸೃಷ್ಟಿ ಸ್ಥಿತಿಲಯಕ್ಕೆ ಕಾರಣ ಭೂತನೂ, ಪ್ರಾಪಕನೂ, ಪ್ರಾಪ್ಯನೂ ನಾರಾಯಣನೇ; ಈ ಅರ್ಥವೆಲ್ಲವು ಈ ಶಬ್ದದಲ್ಲೇ ಅಡಗಿದೆ (ಯೌಗಿಕಾರ್ಥದಲ್ಲಿ); ಈ ನಾರಾಯಣನೇ ಕೇಶವನು;

ಕ ಇತಿ ಬ್ರಹ್ಮಣೋ ನಾಮ ಈಶೋಹಂ ಸರ್ವದೇಹಿನಾಂ ।
ಆವಾಂ ತವಾಂಗೇ ಸಂಭೂತೌ ತಸ್ಮಾತ್ಕೇಶವನಾಮವಾ ॥

ಹರಿ–ವಂ 136–48

ಎಂದು ರುದ್ರನೇ ಹೇಳಿರುವಂತೆ ಬ್ರಹ್ಮರುದ್ರರಿಬ್ಬರಿಗೂ ಕಾರಣ ಭೂತನಾಗಿ, ಅವರನ್ನು ನಿಯಮಿಸುವ ನಾರಾಯಣ, ವೈಕುಂಠವಾಸಿ, ಮುಕ್ತಿಭೋಗ್ಯ ಇವನೇ

ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಂ ।
ಮಗ್ನಾನುದ್ಧರತೇ ಲೋಕಾ ಕಾರುಣ್ಯಾಚ್ಛಾಸ್ತ್ರಪಾಣಿನಾ ॥

ಎಂದೂ

ಪೀತಕ ವಾಡೈ ಪಿರಾನಾರ್ ಪಿರಮಗುರುವಾಕಿ—ಪೆರಿ–ತಿರು V, 2, 8

ಎಂದೂ ಹೇಳಿರುವಂತೆ ನಾರಾಯಣನೇ ಆಚಾರ್ಯನಾಗಿ ಬಂದಿರುವನು; ಇವನೂ ಕೇಶವನು; ಕೇಶಿ ಎನ್ನುವ ಕುದುರೆಯಂತೆ ಬಂದ ರಾಕ್ಷಸನನ್ನು ಶ್ರೀಕೃಷ್ಣನು ಕೊಂದಂತೆ "ಇಂದ್ರಿಯಾಣಿ ಹಯಾನಾಹುಃ" ಎಂದು ಕಠೋಪನಿಷತ್ತಿನಲ್ಲಿ ಹೇಳಿರುವಂತೆ ಇಂದ್ರಿಯವೆನ್ನುವ ಕುದುರೆಯನ್ನು ಜಯಿಸಿದವನು ನಮ್ಮ ಆಚಾರ್ಯ; ಅವನನ್ನು ಕುರಿತ ಸ್ತೋತ್ರವನ್ನು

ಪಾಡವುಂ ನೀ . . . ತಿರವು ಏಲೋರೆಂಪಾವಾಯ್
ಅಸ್ಮತ್ಸರ್ವಗುರುಭ್ಯೋ ನಮಃ

ಕೀೞ್ವಾನಂ ವೆಳ್ಳೆನ್ರೆರುಮೈ ಶಿರುವೀಡು
ಮೇಯ್ವಾ ಪರಂದನಕಾಣ್ ಮಿಕುಳ್ಳ ವಿಳ್ಳೈಗಳುಂ
ಪೋವಾ ಪೋಕಿನ್ರಾರೈ ಪೋಕಾಮಲ್ ಕಾತ್ತುನ್ನೈ
ಕೂವುವಾ ವಂದು ನಿನ್ರೋಂ ಕೋತುಕುಲಮುಡೈಯ
ಪಾವಾಯ್ ಎೞುಂದಿರಾಯ್ ಪಾಡಿಪ್ಪರೈಕೊಂಡು
ಮೂವಾಯ್ ಪಿಳಂದಾನೈ ಮುಲ್ಲರೈಮಾಟ್ಟಿಯ
ದೇವಾದಿ ದೇವನೈ ಚ್ಚೆನ್ರು ನಾಂ ಶೇವಿತ್ತಾಲ್
ಆವಾವೆನ್ರು ಅರಾಯ್ನ್ದು ಆರುಳ್ ಏಲೋರ್ ಎಂಪಾವಾಯ್ ॥ ೮ ॥

ಮೊದಲನೆ ಗೋಪಿಕೆ "ಪಿಳ್ಳಾಯ್;" ಪ್ರಕೃತಿ ಸಂಸರ್ಗಕ್ಕೆ ಅಂದರೆ ಬಾಳಿನಲ್ಲಿ ಕಷ್ಟಸುಖಗಳು ತಪ್ಪಿದ್ದಲ್ಲವೆಂದೂ ಅದು ಯಾವತ್ತಿಗೂ ಮೋಕ್ಷಕ್ಕೆ ಪ್ರತಿಬಂಧಕವೆಂದೂ ಅಂಜಿದವಳು ಮತ್ತು ಪರಮಾತ್ಮಾನುಭವದಲ್ಲಿ ಹೊಸಬಳು; ಎರಡನೇ ಗೋಪಿ "ಪೇಯ್ಪೆಣ್," "ನಾಯಕ ಪೆಣ್ಪಿಳ್ಳಾಯ್," "ತೇಜಮುಡೈಯಾಯ್"; ಮೊದಲಿನವಳಂತೆ ಬಾಳಿಗೆ ಅಂಜುವವಳಲ್ಲ. ಆದರೆ ಸ್ವಾಭಿಮಾನಿ; ನನಗೆ ಆತ್ಮಗುಣವಿದೆ; ನನಗಲ್ಲದೆ ಮತ್ತಾರಿಗೆ ಪರಮಾತ್ಮನು ಒಲಿದಾನು ಎನ್ನುವ ಆತ್ಮವಿಶ್ವಾಸವುಳ್ಳವಳು; ಈಗ ಮೂರನೇಯವಳು ಇವರಿಬ್ಬರಿಗಿಂತಲೂ ಭಿನ್ನಳು; ಕುತೂಹಲವುಳ್ಳವಳು; ಪರಮಾತ್ಮನಲ್ಲಿ ಭಕ್ತಿ ಇಟ್ಟಿರುವುದರಿಂದ

"ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷುಚಾಪ್ಯಹಂ" ಎಂದು ಶ್ರೀಕೃಷ್ಣನೇ ಗೀತೆಯಲ್ಲಿ (IX–29) ಹೇಳಿರುವಂತೆ ಅವನಿಗೆ ಪ್ರಿಯವಾದವಳು ನಾನು ಎಂದು ನಂಬಿದ್ದರೂ ಪರಮಾತ್ಮನಲ್ಲಿ ತನಗೆ ಪ್ರೀತಿ ಜಾಸ್ತಿಯೋ ಅಥವಾ ತನ್ನಲ್ಲಿ ಅವನಿಗೆ ಪ್ರಿಯತೆಯು ಜಾಸ್ತಿಯೋ ಎಂದು ತಿಳಿದುಕೊಳ್ಳುವ ಕುತೂಹಲ ಇವಳಿಗೆ; ಅಲ್ಲದೇ ವ್ರತವಿಲ್ಲದೇ ಕೃಷ್ಣನು ಒಲಿಯನೇ; ಅದು ಅತ್ಯಾವಶ್ಯಕವೇ

ಎನ್ನುವ ಕುತೂಹಲ; ಏನು ಇಷ್ಟು ಹೊತ್ತಾಯಿತು? ಕೃಷ್ಣನು ಮಿಕ್ಕವರೊಡನೆ ಕೂಡಿಕೊಂಡು ನನ್ನನ್ನು ಉಪೇಕ್ಷಿಸಿರುವನೇ ಎನ್ನುವ ಸಂಶಯ ಪೀಡಿತಳು; ಅದಕ್ಕೆ ಗೋದೆ ಹೇಳುತ್ತಿರುವುದು " ನಿನ್ನ ಸಂಶಯಕ್ಕೆ ಯಾವ ಕಾರಣವೂ ಇಲ್ಲ;

ಕೀೞ್ವಾನಂ—ಪೂರ್ವದಿಕ್ಕಿನಲ್ಲಿ ಆಕಾಶವು

ವೆೞ್ಳಿನ್ರು—ಬಿಳಿಪು ಕಾಣುತ್ತಿದೆ; ಸೂರ್ಯೋದಯವಾಗಿರುವುದು ತಿಳಿಯದೇ ನೀನೇಕೆ ಮಲಗಿರುವೆ? ಇದು ನಿನ್ನ ದೋಷ; ನಾವು ನಿನ್ನನ್ನು ಉಪೇಕ್ಷಿಸಿಲ್ಲ; ಏಳು;" ಎನ್ನಲಾಗಿ ಅವಳು "ಇದು ಸುಳ್ಳು; ಆಕಾಶವು ಬಿಳುಪಾಗಿಲ್ಲ; ಶ್ರೀಕೃಷ್ಣನಲ್ಲಿ ನಿಮಗೆ ವಿರಹ ಹುಟ್ಟಿ ಆ ವೇದನೆಯಿಂದ ರಾತ್ರಿಯು ನಿರ್ಮಲವಾಗಿ ತೋರಿದೆ; ಪೂರ್ವದಿಕ್ಕನ್ನೇ ನೋಡುತ್ತಿರುವ ನಿಮ್ಮ ಮುಖದ ಬೆಳಕು ಹರಡಿ ಅದು ಬಿಳುಪಾಗಿ ಕಾಣುತ್ತಿದೆ. ಇದು ನಿಮ್ಮ ಅನ್ಯಥಾ ಜ್ಞಾನ" ಎಂದುದಕ್ಕೆ ಗೋದೆಯು

ಎರುಮೈ ಶಿರುವೀಡು ಮೇಯ್ವಾನ್ ಪರಂದನಕಾಣ್—ಎಂದಳು; ಎಮ್ಮೆಗಳು ಹನಿಗೂಡಿದ ಗರಿಕೆಯನ್ನು ಮೇಯಲು ಹೊರಟಿವೆ; ಬೇಕಾದರೆ ನೀನು ಬಂದು ನೋಡು; " ಶಿರುವೀಡು " ಎನ್ನುವುದಕ್ಕೆ ಚಿಕ್ಕತೋಟಗಳಲ್ಲಿ ಎಂದೂ ಅರ್ಥವುಂಟು; " ಶಿರುವೀಡು " ಎಂದರೆ ಚಿಕ್ಕ, ಸಂಕೋಚವುಳ್ಳ ಮನೆ: ಪರಮಾತ್ಮನನ್ನು ಸೇರುವುದೆನ್ನುವ ಮೋಕ್ಷವು " ಪೆರುವೀಡು"; ಅದಕ್ಕೆ ಆಶೆಪಡದೆ " ಕೈವಲ್ಯ" ಅಂದರೆ " ಸ್ವಾತ್ಮಾನಂದ " ವನ್ನು ಮಾತ್ರ ಆಸೆ ಪಡುವುದು ಬುದ್ಧಿಮಾಂದ್ಯದಿಂದ; ಎಮ್ಮೆ ಮಂದಗಾಮಿಪ್ರಾಣಿ; ಅದರಂತೆ ಮಂದಗಾಮಿನಿಯಾದ ನೀನು ಸಮಾಧಿಯಲ್ಲಿದ್ದು " ಕೈವಲ್ಯ"ದಲ್ಲೇ ತೃಪ್ತಿಹೊಂದಿರುವಂತಿದೆ ಎನ್ನುವ ಅರ್ಥವಿಟ್ಟು " ಶಿರುವೀಡು " ಎನ್ನುವ ಪದವನ್ನು ಪ್ರಯೋಗಿಸಿರುವಳು ಗೋದೆ. " ಶಿರುವೀಡು " ಎನ್ನುವುದಕ್ಕೆ ಅಂತರಾರ್ಥ ಕೈವಲ್ಯ; ಬಾಹ್ಯಾರ್ಥ ಚಿಕ್ಕತೋಟ, ಹಸುಗಳು ಮೇಯಲು ಹೊರಟಿವೆಯೆಂದು ಹೇಳದೆ ಎಮ್ಮೆಯನ್ನು ಹೇಳಿರುವುದು ಒಳಗಿರುವ ಗೋಪಿಯನ್ನು ಹೀಯಾಳಿಸಲು. ಶಠಗೋಪರು

ಕುರುಕ ಮಿಕ ವುಣರ್ವತ್ತೋಡು ನೋಕ್ಕಿ ಯೆಲ್ಲಾಂ ವಿಟ್ಟು
ಇರುಕಲಿರಪ್ಪೆನ್ನುಂ ಇವಾನಿಕ್ಕು ಮುಪ್ಪಯನಿಲ್ಲಿಯೇಲ್
ಶಿರುಕ ನಿನ್ನೈವದೋರ್ ಪಾಶಮುಂಡಾಂ ಪಿನ್ನುಂ ವೀಡಿಲ್ಲೈ
ಮುರುಕಲಿಲೀಶನೈ ಪ್ಪತ್ತಿ ವಿಡಾವಿಡಿಲ್ ವೀಡ..ದೇ

—ತಿರು–ಮೊ IV, 1,10

ಎಂದು ಹೇಳಿ " ಶಿರುಕ " ಅಂದರೆ ಅಲ್ಪವಾದ ಕೈವಲ್ಯವನ್ನು ಚಿಂತಿಸುವುದರಿಂದ ಬಂಧವೇ ವಿನಹ; ಅದು ಮೋಕ್ಷವಲ್ಲ; ಅಮಲನೂ, ಕಲ್ಯಾಣ ಗುಣಪೂರ್ಣನೂ ಆದ ಈಶ್ವರ ಅಂದರೆ ಶ್ರೀಮನ್ನಾರಾಯಣನನ್ನು ಆಶ್ರಯಿಸಿ ಅವನನ್ನು ಬಿಡದೇ ಇದ್ದರೆ ಅದೇ ಮೋಕ್ಷ (ವೀಡು) ಅಂದರೆ ಪೆರುವೀಡು–ಎಂದು ವಿಶದ ಮಾಡಿರುವುದನ್ನು ಗೋದೆ ಜ್ಞಾಪಿಸುವಂತಿದೆ ಈ " ಶಿರುವೀಡು" ಶಬ್ದಪ್ರಯೋಗ. ಸಾಮಾನ್ಯಾರ್ಥ

ದಲ್ಲಿ " ಎಮ್ಮೆ ಎದ್ದು ಹೊರಟಿದೆ " ಎಂದರೆ " ನಿಧಾನ ಪ್ರಾಣಿಯೂ ಎದ್ದಾಯಿತು; ನೀನು ಅದಕ್ಕಿಂತಲೂ ನಿಧಾನವಾಗಿದ್ದು ಮಲಗಿರುವೆಯಲ್ಲಾ; ಇದೇನು ತಮೋಗುಣ ನಿನ್ನದು" ಎನ್ನುವ ಅರ್ಥವು ತೋರುತ್ತದೆ. ವಿಶೇಷಾರ್ಥದಲ್ಲಿ " ಎಲೇ ಗೋಪಿ, ಯೋಗಮಾರ್ಗದಲ್ಲಿ ಮಂದಮತಿ ಮತ್ತು ಮಂದಗತಿಗಳು ಹಟಯೋಗಿಗಳು; ಅವರು ಕೈವಲ್ಯಾಕಾಂಕ್ಷಿಗಳಾದರೂ ಎಷ್ಟು ಹುರುಪಿನಿಂದ ತಮ್ಮ ಸಾಧನದಲ್ಲಿ ಇಳಿಯುತ್ತಾರೆ; ಭಕ್ತೆಯಾದ ನೀನು, ಕೃಷ್ಣನನ್ನೇ ಕೂಡಬೇಕೆನ್ನುವ ನೀನು ಅವರಿಗಿಂತಲೂ ಕಡೆಯಾಗಿರುವೆಯಲ್ಲಾ" ಎಂದು ಹೀಯಾಳಿಸುವ ಮಾತಿದು.

ಇದಕ್ಕೆ ಗೋಪಿ ಕೋಪಿಸಿಕೊಂಡು " ಇದು ಎಮ್ಮೆಯೂ ಅಲ್ಲ; ಕತ್ತಲೆಯು ಕಳೆದೂ ಇಲ್ಲ; ನಿಮ್ಮ ಮುಖಕಾಂತಿಯು ಪೂರ್ವದಿಕ್ಕಿನಲ್ಲಿ ಬೀಳುತ್ತಾ ಬೀಳುತ್ತಾ ಕತ್ತಲೆಯು ಮುಂದೆ ಮುಂದೆ ಹೋಗುವಂತಿದೆ. ಇದು ನಿಮ್ಮ ವಿಪರೀತ ಜ್ಞಾನ ಎಂದಳು. ಇದು ಸಾಮಾನ್ಯಾರ್ಥದಲ್ಲಿ ಹೇಳಿದ ಮಾತು.

ಪ್ರಪಂಚದಲ್ಲಿ ಎಲ್ಲಾ ವಸ್ತುವಿನಲ್ಲೂ ಅವುಗಳ ಸ್ವರೂಪವನ್ನು ನಿರೂಪಿಸಿ ಅದರೊಡನೆ ಸಮಕಾಲಿಕವಾಗಿರುವ ಗುಣಗಳಿವೆ. ಸ್ವರೂಪವಿರುವವರೆಗೂ ಆ ಗುಣಗಳಿದ್ದೇ ಇರುತ್ತವೆ. ಗುಣವಿಲ್ಲದೆ ಸ್ವರೂಪವೇ ಇಲ್ಲ. ಹೀಗೆ ಸ್ವರೂಪ ಸಮಕಾಲಿಕ ಗುಣಗಳಿಗೆ ಸ್ವರೂಪ ನಿರೂಪಕ ಧರ್ಮವೆಂದು ಹೇಳಲಾಗಿದೆ. ಪರಮಾತ್ಮನಲ್ಲಿ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸು ಮತ್ತು ಶ್ರೀವಿಶಿಷ್ಟತ್ವ–ಇವು ಸ್ವರೂಪ ನಿರೂಪಕ ಧರ್ಮಗಳು; ಈ ಗುಣಗಳು ಜೀವಚೇತನರಲ್ಲಿ ಪ್ರಯೋಗಕ್ಕೆ ಬರುವಾಗ, ದಯಾ, ವಾತ್ಸಲ್ಯ ಮೊದಲಾದ ಗುಣಗಳಾಗಿ ಪರಿಣಾಮ ಹೊಂದುತ್ತವೆ. ಇವಕ್ಕೆ " ನಿರೂಪಿತ ಸ್ವರೂಪಗುಣವಿಶೇಷಣಗಳು " ಎನ್ನುವ ಹೆಸರನ್ನು ಕೊಡಲಾಗಿದೆ. ಸ್ವರೂಪನಿರೂಪಕ ಧರ್ಮದಲ್ಲಿ ಭ್ರಮೆ ತೋರಿದರೆ ಆಗ ಆ ವಸ್ತುವೇ ಬೇರೆಯಾಗಿ ತೋರುತ್ತದೆ. ಅಂತಹ ಭ್ರಮೆ ಒಳಗಿದ್ದ ಗೋಪಿಕೆಗೆ ಬಂದದ್ದು. ಇದು **ಅನ್ಯಥಾ ಜ್ಞಾನ**. ಗೋಪಿಯರ ಮುಖಕಾಂತಿ ಪ್ರತಿಬಿಂಬವೇ ಈ ಬೆಳಕು ಎಂದದ್ದು **ಅನ್ಯಥಾ ಜ್ಞಾನ**. ನಿರೂಪಿತ ಸ್ವರೂಪ ಗುಣವಿಶೇಷ ಭ್ರಮೆಯಿಂದ ಕತ್ತಲೆಯು ಮುಂದೆ ಮುಂದೆ ಹೋಗುತ್ತಿದೆ ಎಂದಿದ್ದು **ವಿಪರೀತಜ್ಞಾನ**. ಒಳಗಿರುವ ಗೋಪಿಯು ತನ್ನ ಹಟವನ್ನೇ ಸಾಧಿಸಿದಳು. ಅದಕ್ಕೆ ಗೋದೆಯು " ಸರಿ, ನಾವು ಹೇಳಿದ್ದೆಲ್ಲವೂ ಸುಳ್ಳೇ ಆಗಲಿ ಬೆಳಗಾಗಿಲ್ಲವೆನ್ನುವುದಕ್ಕೆ ನಿನ್ನ ಕಾರಣವೇನು " ಎಂದು ಕೇಳಿದಾಗ, ಅವಳು " ಗೋಪಿಯರೇ, ನಾವು ಒಟ್ಟು ಇರುವುದು ಐದು ಲಕ್ಷ; ಆದರೆ ಬಂದಿರುವರು ನೀವು ಕೆಲವರು ಮಾತ್ರ ; ಎಲ್ಲರೂ ಬಂದಿಲ್ಲದಿರುವುದರಿಂದ ಬೆಳಗಾಗಿಲ್ಲ–ಎಂದಳು.

ಗುಹ್ಯವಾಗಿ " ಗೋಪಿ, ನೀನು ಕೈವಲ್ಯದಲ್ಲಿ ಆಸೆ ಇಟ್ಟಿರುವಳು " ಎಂದು ಮೂದಲಿಸಿದ್ದಕ್ಕೆ ಅವಳು " ನಾನೇನೂ ಕೈವಲ್ಯಪರಳಲ್ಲ; ಕೃಷ್ಣನನ್ನೇ ನನ್ನ ಹೃದಯದಲ್ಲಿ ಚಿಂತಿಸುತ್ತಿರುವೆನು " ಎಂದು ಗುಹ್ಯವಾಗಿಯೇ ತಿಳಿಸಿದಳು.

ಮಿಕ್ಕುಳ್ಳ . . . ನಿನ್ಕೋಂ— ಸಾಮಾನ್ಯಾರ್ಥದಲ್ಲಿ, ಬಂದಿರುವರು ನಾವು ಮಾತ್ರವಲ್ಲ; ಮಿಕ್ಕವರೂ ಹೊರಟಿರುವರು; ಎಲ್ಲರೂ ಪ್ರಪನ್ನರು; ಅರ್ಚಿರಾದಿ ಮಾರ್ಗದಲ್ಲೂ, ಅಕ್ರೂರನು ಶ್ರೀಕೃಷ್ಣನನ್ನು ಕರೆದೊಯ್ಯಲು ಹೊರಟಾಗಲೂ, ತಿರುಪತಿ ಯಾತ್ರೆಯಲ್ಲೂ, ಆ ದಾರಿ ಹೋಗುವುದೇ ಒಂದು ಸುಕೃತ ವಿಶೇಷವೆಂದು ತಿಳಿದಿರುವಂತೆ ಗೋಪಿಯರೆಲ್ಲರೂ ಕೃಷ್ಣನಲ್ಲಿಗೆ ಹೊರಟಿರುವರು. ಅವರಲ್ಲಿ ಕೆಲವರನ್ನು ಮಾತ್ರ ನಾವು ತಡೆದು ನೀನು ಬರದೇ ಇರುವುದನ್ನು ತಿಳಿಸಿ ನಿಲ್ಲಿಸಿರುವೆವು ಮತ್ತು ನಿನ್ನನ್ನು ಕರೆಯಲು ಬಂದಿರುವೆವು; ಪರಮಾತ್ಮನಿಗೆ ಪ್ರಿಯಳಾದ ನಿನ್ನನ್ನು ಬಿಟ್ಟು ಹೇಗೆ ಹೋಗುವುದೆಂದು ನಾವು ಮಾತ್ರ ಬಂದೆವು–ನೀನೋ

ಕೋತು ಕುಲಮುಡೈಯ ಪಾವಾಯ್—" ಕುತೂಹಲವುಳ್ಳವಳಾಗಿ ಏನೇನೋ ಸಂಶಯಪಡುತ್ತಿರುವೆ" ಎಂದಳು ಗೋದೆ.

ವಿಶೇಷಾರ್ಥದಲ್ಲಿ, ಮಿಕ್ಕುಳ್ಳ ಪಿಳ್ಳೈಗಳುಂ–ನಿನ್ನನ್ನು ಬಿಟ್ಟು ಮಿಕ್ಕ ಗೋಪಿಕೆಯರೆಲ್ಲರೂ, ನಿನ್ನಂತೆ ಏಕಾಂತದಲ್ಲಿ ಕೃಷ್ಣನನ್ನು ಚಿಂತಿಸುತ್ತಿಲ್ಲ; **ಪೋರ್ವಾ**–ಕೃಷ್ಣನಲ್ಲಿಗೆ ಹೊರಟಿರುವರು; ಪ್ರತ್ಯಕ್ಷವಾಗಿ ಕೃಷ್ಣನೇ ನಮಗಾಗಿ ಕಾದಿರುವಲ್ಲಿ, ನಾವು ಅಂತರಂಗದಲ್ಲಿ ಮಾತ್ರ ಅವನನ್ನು ಚಿಂತಿಸಿ ತೃಪ್ತಿಹೊಂದುವುದು ಸಂಕುಚಿತಬುದ್ಧಿ; ಅಂತಹವರನ್ನೂ ತಡೆದು ಕೆಲವರನ್ನು ನಾವು ನಿಲ್ಲಿಸಿರುವೆವು. ಮಿಕ್ಕವರು ಮುಂದೆ ಮುಂದೆ ಸಾಗುತ್ತಿದ್ದಾರೆ. ಭಾಗವತೆಯಾದ ನಿನ್ನನ್ನು ಬಿಟ್ಟುಹೋಗುವುದೆಂತು? ಎಂದು ನಾವು ಬಂದಿರುವೆವು. ನೀನು

ಎಳ್ಗುಂದಿರಾಯ್ — ಏಳು, ಎದ್ದುಬಾ, ಒಟ್ಟಿಗೆ ಶ್ರೀಕೃಷ್ಣನಲ್ಲಿಗೆ ಹೋಗೋಣ—ಎಂದಳು. ಇಷ್ಟಾದರೂ ಹೊರಗೆ ಬಾರದಿದ್ದನ್ನು ಕಂಡು

ಕೋತುಕುಲಮುಡೈಯ ಪಾವಾಯ್ ಎಳ್ಗುಂದಿರಾಯ್—ಇದೇನಿದು ನಿನ್ನ ವರ್ತನೆ; ಪ್ರತ್ಯಕ್ಷಸೇವೆಗಿಂತಲೂ ನಿನಗೆ ಅಂತರಂಗ ದರ್ಶನವೇ ಹಿತವಾಗಿದೆಯೇ? ಅಥವಾ ಅವನೇ ಬರಲೆಂದು ಕಾದಿರುವೆಯಾ? ನಿನ್ನನ್ನು ನಿನ್ನಲ್ಲೇ ಇಟ್ಟುಕೊಂಡಿರುವವರಿಗೂ ಕೃಷ್ಣನು ಬರನು. ಏಳು ಎದ್ದುಬಾ—

ಪಾಡಿಪ್ಪರೈಕೊಂಡು—

ಪಾಥೇಯಂ ಪುಂಡರೀಕಾಕ್ಷನಾಮ ಸಂಕೀರ್ತನಂ ಪರಂ

ಎಂದಿರುವಂತೆ, ಅವನ ನಾಮಸಂಕೀರ್ತನ ಮಾಡುತ್ತಾ ವಾದ್ಯಗಳನ್ನು ಹಿಡಿದು ಹೋಗೋಣ ಬಾ; ನಾವು ಸ್ತ್ರೀಯರು; ಅವನ ವೀರ್ಯವನ್ನು ಹಾಡಿಕೊಂಡು ನಡೆಯೋಣ. ಅವನು ಯಾರು ಗೊತ್ತಿ ನಿನಗೆ?

ಮಾವಾಯ್ ಪಿಳಿಂದಾನೈ—ಕೇಶಿ ಎನ್ನುವ ರಾಕ್ಷಸನು ಕುದುರೆಯಾಗಿ ಇವನನ್ನು ತಿನ್ನಲು ಬಂದಾಗ ಅವನ ಬಾಯನ್ನು ಸೀಳಿದವನು ಕಣೆ.

ಮುಲ್ಲರೈಮಾಟ್ಟಿಯ—ಮುಷ್ಟಿಚಾಣೂರರೆನ್ನುವ ಜಟ್ಟಿಗಳನ್ನು ಕೊಂದವನು ಕಣೇ. ಇಷ್ಟೇ ಅಲ್ಲ;

ದೇವಾದಿದೇವನೈ—ಬ್ರಹ್ಮರುದ್ರಾದಿ ಸಕಲ ದೇವತೆಗಳಿಗೂ ದೇವನಾದವನು ಈಗ ಕೃಷ್ಣನಾಗಿ ನಮಗಾಗಿ ಬಂದಿರುವನು; ನಮಗಾಗಿ ಈ ವ್ರತವನ್ನು ಏರ್ಪಡಿಸಿರುವನು; ಕಣೆ—

ಶೆನ್ರು—ಈಗ ಅವನಲ್ಲಿಗೆ ಹೋಗಿ

ಸೇವಿತ್ತಾಲ್—ಸೇವೆಮಾಡಿದರೆ, ಅವನು

ಆವಾವೆನ್ರು ಆರಾಯ್ನ್ದು ಅರುಳ್—ಅಯ್ಯೋ ಇಷ್ಟು ಛಳಿಯಲ್ಲಿ ನನ್ನಲ್ಲಿಗೆ ನನಗಾಗಿ ಬಂದಿರುವರಲ್ಲಾ ಎಂದು ಮನಕರಗಿದವನಾಗಿ, ನಮ್ಮ ಇಷ್ಟವೇನೆಂದು ತಾನೇ ತಿಳಿದು (ಆರಾಯ್ನ್ದು) ಕೃಪೆಮಾಡುವನು"—

ಏಲೋರ್ ಎಂ ಪಾವಾಯ್

ಸ್ವಾಪದೇಶ

ಅರುಳ್ ಪೆರುವಾರ್ ಅಡಿಯಾರ್ತಂ ಅಡಿಯೆನೆರ್ಕು ಆಕ್ಕಿಯ್ಯಾ
ಅರುಳ್ ತರುವಾ ಅಮ್ಮೈ ಕಿನ್ರಾ ಅದು ನಮುದು ವಿದಿವಕ್ಕೈಯೇ।
ಇರುಳ್ತರುಂ ಮಾಞ್ಞಾಲತ್ತುಳ್ ಇನಿ ಪಿರವಿ ಯಾ ವೇಂಡೇ
ಮರುಳೊಳ್ಳಿ ನೀ ಮುಡನೆಂಜೇ ವಾಟ್ಟಾತ್ತಾ ಅಡಿವಣಂಗೇ ॥

ತಿರು–ಮೊ X, 6

ಎಂದು ಶರಗೋಪರು ತನ್ನ ಚಪಲ ಮನಸ್ಸಿಗೆ ಧೈರ್ಯ ತಂದುಕೊಟ್ಟಂತೆ ಶಿಷ್ಯನು ಆಚಾರ್ಯರಲ್ಲಿ ಪ್ರಪನ್ನನಾಗಿ, ಸ್ವರೂಪಾಭಿಜ್ಞಾನ, ಉಪಾಯಾಭಿಜ್ಞಾನ ಮತ್ತು ಪುರುಷಾರ್ಥಾಭಿಜ್ಞಾನವೆನ್ನುವ (ಟಿಪ್ಪಣಿ 19) ಆತ್ಮ ಗುಣಗಳನ್ನು ಬೆಳೆಸಿಕೊಳ್ಳಲು ಕುತೂಹಲಿಯಾಗಿ, ತದೇಕ ಚಿತ್ತನಾದವನನ್ನು ಎಬ್ಬಿಸುವನು ಈ ಪಾಶುರದಲ್ಲಿ. ಈ ವಿಷಯದಲ್ಲಿ ನಿಗಮಾಂತದೇಶಿಕರು—

ಸ್ವಾಪೋದ್ಭೋಧವ್ಯತಿಕರನಿಭೇ ಭೋಗಮೋಕ್ಷಾಂತರಾಳೇ
ಕಾಲಂ ಕಂಚಿತ್ ಜಗತಿ ವಿಧಿನಾ ಕೇನಚಿತ್ ಸ್ಥಾಪ್ಯಮಾನಾಃ ।
ತತ್ಪೋಪಾಯಪ್ರಭೃತಿವಿಷಯೇ ಸ್ವಾಮಿದತ್ತಾಂ ಸ್ವನಿಷ್ಠಾಂ
ಶೇಷಾಂ ಕೃತ್ವಾ ಶಿರಸಿ ಕೃತಿನಃ ಶೇಷವಾಯುರ್ನಯಂತಿ ॥

ಎಂದು ಹೇಳಿರುವಂತೆ ಅತ್ಯಂತ ಹೇಯವಾದ ಮತ್ತು ಕಾರಾಗೃಹತುಲ್ಯವಾದ ಈ ಸಂಸಾರದಲ್ಲಿ ಪ್ರಪತ್ತಿಮಾಡಿದಮೇಲೆ ದೇಹಬಿಡುವವರಿಗೂ

ಸಂಕಲ್ಪಾದೇವ ಭಗವಾ ತತ್ವತೋ ಭಾವಿತಾತ್ಮನಾಂ ।
ವೃತ್ತಾಂತಮಖಿಲಂ ಕಾಲಂ ಸೇಚಯತ್ಯಮೃತೇನ ತು ॥

ಎಂದಿರುವಂತೆ ಪರಮಾತ್ಮನ ಕೃಪೆಯಿಂದ ಸತ್ವಗುಣವು ಮೇಲೆದ್ದು

ಸತ್ಯಂ ಶಪೇ ವಾರಣಶೈಲನಾಥ, ವೈಕುಂಠವಾಸೇಪಿ ನ ಮೇಽಭಿಲಾಷಃ ಎಂದು ನಿಗಮಾಂತದೇಶಿಕರು ಆಣೆ ಇಟ್ಟಂತೆ, ಜ್ಞಾನವು ಆಚಾರ್ಯ ಕೃಪೆಯಿಂದ ಬೆಳೆದುಬರಲು ಅವರ ಸಾನ್ನಿಧ್ಯವು ಒದಗಿದೆ ಏಳು ಎಂದು ಸಹಪಾಠಿಯನ್ನು ಎಬ್ಬಿಸುವ ಪಾಶುರವಿದು.

ಇಲ್ಲಿ ನಿದ್ರಿಸುತ್ತಿರುವ ಶಿಷ್ಯ "ಕೋತುಕುಲಮುಡೈಯ ಪಾವಾಯ್" ಅಂದರೆ "ಪರಮಾತ್ಮನಲ್ಲಿ ನಾನು ಪ್ರಪನ್ನನಾಗಿಯಾಯಿತು; ಎಂದಿಗೆ ಅವನು ಎನಗೆ ತನ್ನ ಸಾನ್ನಿಧ್ಯ ಕೊಡುವನೋ? ಈ ಸಂಸಾರ ಬಂಧನದಲ್ಲಿ ಇರಲಾರೆನಲ್ಲಾ" ಎಂದು ಚಪಲಚಿತ್ತನಾದ ತನ್ನಲ್ಲೇ ಯೋಚಿಸುತ್ತಿರುವ ಭಾಗವತ. ಇವನ ಮನಸ್ಸಿನ ವೇದನೆಯನ್ನು ವಿವೇಕವೆನ್ನುವ ರಾಜನು ವ್ಯವಸಾಯವೆನ್ನುವ ತನ್ನ ಸೇನಾಪತಿಗೆ ಹೇಳುವಂತೆ ಸಂಕಲ್ಪ ಸೂರ್ಯೋದಯ ನಾಟಕದಲ್ಲಿ ವರ್ಣಿಸಿರುವರು ನಿಗಮಾಂತ ದೇಶಿಕರು.

ಕಾಮಾತಂಕಮತೀತ್ಯ ಕೋಪದಹನಂ ನಿರ್ವಾಪ್ಯ ವಿತ್ತಸ್ಪೃಹಾ
ವೇತಾಲೀಂ ವ್ಯವಧೂಯ ಬಾಂಧವಕಥಾಗರ್ತಂ ಸಮುತ್ತೀರ್ಯ ಚ ।
ಸಂಗೋತ್ತಂಸಿತವಾಸನಾಸಹಚರಃ ಸಂಸಾರಕಾರಾಕುಟೀ
ನಿಷ್ಕ್ರಾಂತಿಕ್ರಮಸಾದುಕಾಂ ತನುಮನುದ್ವಿಗ್ನೋ ಮುನಿಃ ಕ್ಷಾಮ್ಯತಿ ॥

ಕೀೞ್ವಾನಂ—"ಮೇಲ್‌ವಾನಂ" ಅಂದರೆ ಪರಮಾಕಾಶ ವೈಕುಂಠ; ಅದಲ್ಲದ್ದು "ಕೀೞ್ವಾನಂ" ಸಂಸಾರ ಚಕ್ರ ಇದರಲ್ಲಿ ಈಗ **ವೆಳ್ಳೆನ್ರು**—ಬೆಳಗಾಯಿತು; ಪರಮಾತ್ಮನ ಸಂಕಲ್ಪಸೂರ್ಯೋದಯವಾಯಿತು; ತಮೋಗುಣ ಕಳೆಯಿತು; ಜಾಯಮಾನ ಕಟಾಕ್ಷದಿಂದ, (ಟಿಪ್ಪಣಿ 20) ಆಚಾರ್ಯ ಸಾನ್ನಿಧ್ಯವು ದೊರಕಿದೆ.

ಎರುಮೈ ಶಿರುವೀಡು—ಎಮ್ಮೆಯಂತೆ ಐಶ್ವರ್ಯವು ಆಂಧಕಾರ ವೃದ್ಧಿ ಮಾಡುವುದು; ಕೈವಲ್ಯವು ಒಂದು ಗುಡಿಸಲಂತೆ "ಶಿರುವೀಡು"—ಇವು

ಮೇಯ್ವಾ ಪರಂದನ ಕಾಣ್—ಬೇರೆ ಅಧಿಕಾರಿಯನ್ನು ಹುಡುಕಿಕೊಂಡು ಹೊರಗೆ ಹೋದವು; ಈಗ ನಮಗೆ ಅವುಗಳ ಆಸೆಯಿಲ್ಲ;

ಮಿಕುಳ್ಳ . . . ನಿನ್ರೋಂ—ಐಶ್ವರ್ಯವೆನ್ನುವ ವಿಶ್ವ ಪ್ರಭುತ್ವವನ್ನೂ ತಮ್ಮ ಧ್ಯೇಯ ವಸ್ತುವನ್ನಾಗಿ ಇಟ್ಟುಕೊಳ್ಳದವರಾದ ಭಾಗವತರನ್ನೂ, ಆಚಾರ್ಯರಲ್ಲಿಗೆ ಹೋಗುವುದೇ ಪರಮ ಪ್ರಯೋಜನವೆಂದು ಭಾವಿಸಿರುವರನ್ನೂ ತಡೆದು, ನಿನ್ನನ್ನು ಕರೆಯಲು ಬಂದಿರುವೆವು; ನೀನೋ ಎಂದರೆ

ಕೋತುಕುಲ ಮುಡೈಯ ಪಾವಾಯ್—ಮೋಕ್ಷವು ಎಂದಿಗೆ ಸಿಗುವುದೋ ಎಂದು ಕುತೂಹಲಿಯಾಗಿ ಪ್ರಪಂಚವಿಮುಖನಾಗಿರುವೆ; ಆಚಾರ್ಯ ಸಹವಾಸದಲ್ಲಿ ಆ ಮೋಕ್ಷಾನಂದವು ಸಿಗುವುದೆಂದು ನೀನು ಮನಗಾಣಬೇಕು.

ಎೞುಂದಿರಾಯ್—ಏಳು; ನಮ್ಮ ಆಚಾರ್ಯರು ಯಾರೆಂದಿರುವೆ?

ಮಾವಾಯ್ ಪಿಳಂದಾನೈ—"ಮಾ" ಅಂದರೆ ಕಥಕರು, ವಿತಂಡಾವಾದಿಗಳು; ಅವರ "ವಾಯ್ ಪಿಳಂದಾನೈ" ಬಾಯಿಮುಚ್ಚಿಸುವ ಶಕ್ತಿಯುಳ್ಳವರು; ಅಥವಾ, ಜಿತೇಂದ್ರಿಯರು (7ನೇ ಪಾಶುರದಲ್ಲಿ ಹೇಳಿರುವಂತೆ;)

ಮಲ್ಲರೈ ಮಾಟ್ಟಿಯ—ಅಹಂಕಾರ ಮಮಕಾರವನ್ನೂ, ಮದ ಮಾತ್ಸರ್ಯವನ್ನೂ, ಕಾಮ ಕ್ರೋಧವನ್ನೂ ಜಯಿಸಿದವರು;

ದೇವಾಧಿದೇವನೈ—ದೇವ ಶ್ರೀಕೃಷ್ಣ

ಭಸ್ಮೀ ಕುರ್ಯಾತ್ ಜಗತ್ಸರ್ವಂ ಮನಸೈವ ಜನಾರ್ದನಃ ।
ನ ತು ಕೃತ್ಸ್ನಂ ಜಗತ್ ಶಕ್ತಂ ಕಿಂಚಿತ್ಕರ್ತುಂ ಜನಾರ್ದನೇ ॥

ಎಂದಿರುವಂತೆ ಪ್ರಪಂಚವೆಲ್ಲವು ಅವನ ಅಧೀನ; ಅಂತಹ ದೇವನನ್ನು ತನ್ನ ವಶದಲ್ಲಿಟ್ಟುಕೊಂಡಿರುವುದರಿಂದ ಆಚಾರ್ಯರು "ದೇವಾಧಿದೇವ;" ಜಗತ್ತಿಗೆ ಕಾರಣಭೂತನಾದ ಪರಮಾತ್ಮನು ದೇವನಾದರೆ ಆ ದೇವನಜ್ಞಾಪ್ತಿಗೆ ಕಾರಣಭೂತನಾದ ಆಚಾರ್ಯನು ದೇವಾಧಿದೇವ. ಉದಯನಾಚಾರ್ಯರಿಗೆ ರಂಗನಾಥ ದರ್ಶನವು ಸಿಗದಿದ್ದಾಗ

ಐಶ್ವರ್ಯಮತವತ್ತೋಸಿ ಮಾಮವಜ್ಞಾಯ ತಿಷ್ಠಸೇ ।
ಪರೈರಭಿಭವೇ ಪ್ರಾಪ್ತೇ ಮದಧೀನಾ ತವ ಸ್ಥಿತಿಃ ॥

ಎಂದರಂತೆ (ಪುಟ 5 ನೋಡಿ;) ಶಠಗೋಪರೂ ಕೂಡ

ಕನ್ಮಮನ್ರು ಎಂಗಳ್ ಕೈಯಿಲ್ ಪಾವೈ ಪರಿಪ್ಪದು, ಕಡಲ್
ಇಲಂಗುಮುಂಡಿಟ್ಟ; ನಿನ್ನಲಾ ನೆಡಿಯಾಯ್ ಉನಕ್ಕೇಲುಂ
ಪಿೞೈ ಪಿೞೈಯೇ; ವನ್ಮಮೇ ಶೊಲ್ಲಿಯೆನ್ಮೈ
ವಿಳೈಯಾಡುದಿ ಅದು ಕೇಳ್ಕಿಲ್ ಅನ್ನೈಮಾರ್
ತನ್ಮಪಾವಮೆನ್ನಾರ್ ಒರು ನಾನ್ರು ತಡಿಪಿಣಕ್ಕೇ VI, 2, 7

ಎನ್ನುವ ಪಾಶುರದಲ್ಲಿ ಪರಮಾತ್ಮನ ಪರತ್ವವು ತಾನು ಅವನೊಡನಾಡಿದ ಕ್ರೀಡೆಯನ್ನು ಹೊರಗಿಡದೇ ಇರುವುದರಿಂದ ಉಳಿದಿದೆ ಎಂದಿರುವರು.

ಆದ್ದರಿಂದ ಪರಮಾತ್ಮ ಕೈಂಕರ್ಯಕ್ಕಿಂತಲೂ ಭಾಗವತೋತ್ತಮರಾದ ಆಚಾರ್ಯ ಕೈಂಕರ್ಯವೇ ಉಪಾದೇಯತಮವೆಂದು ನಿಗಮಾಂತದೇಶಿಕರು ಹೇಳಿರುವರು.

ಭಗವತ್ಕೈಂಕರ್ಯಮುಂ ಭಾಗವತ ಕೈಂಕರ್ಯಮುಂ
ಶೇರ ವನುಷ್ಮಿಕ್ಕ ಅರಿದಾನ ಪೋದು ಪರನು
ಪುರುಷಾರ್ಥಕಾಷ್ಠೈಯಾನ ಭಾಗವತ ಕೈಂಕರ್ಯ
ಮೇ ಉಪಾದೇಯತಮಂ; ಇವೈ ಇರಂಡಿ
ಲುಂ ಪ್ರಧಾನಂ ಆಚಾರ್ಯ ಕೈಂಕರ್ಯಂ ರ–ರ

ಎಂದು ಅವರು ರಹಸ್ಯ ರತ್ನಾವಳಿಯಲ್ಲಿ ಹೇಳಿರುವರು. ಆದ್ದರಿಂದ ಇಂತಹ ಆಚಾರ್ಯರನ್ನು **ಪಾಡಿ . . . ಎಂಪಾವಾಯ್.**

|| ಶ್ರೀಮತೇ ವೇದಾಂತಗುರವೇ ನಮಃ ||

ತೂಮಣಿಮಾಡತ್ತು ಚ್ಚುಟ್ರುಂ ವಿಳಕ್ಕೆರಿಯ
ತೂಪಂ ಕಮ್ಲ್ ತುಯಿಲಣೈಮೇಲ್ ಕಣ್ವಳರುಂ
ಮಾಮ್ಮಾ ಮಗಳೇ ಮಣಿಕ್ಕದವಂ ತಾಳ್ ತಿರವಾಯ್
ಮಾವಿಮ್ಮಾ ಆವಳೈ ಯೆಮ್ಗ್ರುಪ್ಪೀರೋ; ಉಮ್ ಮಕಳ್ತ್ತಾ
ಊಮ್ಮೈಯೊ, ; ಅನ್ರಿ ಚ್ಚವುಡೋ ; ಆನಂದಲೋ
ಏಮಪ್ಪೆರುಂ ತುಯಿಲ್ ಮುಂದಿರಪ್ಪಟ್ಟಾಳೋ
ಮಾಮಾಯ್ ಮಾಧವ್ ವೈಕುಂದ್ ಎನ್ರೆನ್ರು
ನಾಮಂ ಪಲವುಂ ನವಿನ್ರು ಏಲೋರೆಂಪಾವಾಯ್ ॥ ೯ ॥

ರಾಮಾಯಣದಲ್ಲಿ (ಸುಂ 39, 30) ಸೀತೆಯು ಆಂಜನೇಯನಿಗೆ ಹೇಳುವಾಗ

ಶರೈಸ್ತುಂ ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂ ಭವೇತ್ ॥

"ಶತ್ರುಬಲವನ್ನು ನಾಶಮಾಡಬಲ್ಲ ಕಾಕುತ್ಸ್ಥನು ಲಂಕೆಯನ್ನು ಬಾಣಗಳಿಂದ ಧ್ವಂಸಮಾಡಿ ನನ್ನನ್ನು ಕರೆದೊಯ್ದರೆ ಅದು ಅವನಿಗೆ ತಕ್ಕದು" ಎಂದಳು. ಹಾಗೆ ತನ್ನಲ್ಲಿಗೆ ಕೃಷ್ಣನೇ ಬಂದು ಕರೆಯಲೆಂದು ವೀರಸ್ತ್ರೀಯಂತಿರುವ ಗೋಪಿಕೆಯನ್ನು ಎಬ್ಬಿಸುವ ಪದ್ಯವಿದು. ಇವಳನ್ನು ಗೋದೆಯು "ಮಾಮ್ಮಾಮಗಳೇ" ಎಂದು ಕರೆದಿರುವಳು; ಇವಳಾರು?

1) ಧೀರ್ಮಾ ಎನ್ನುವಂತೆ "ಮಾಮ್ಮಾ" ಎಂದು ತಿಳಿದುಕೊಂಡರೆ ಇವಳು ಒಬ್ಬ ಐಶ್ವರ್ಯವಂತನ ಮಗಳು (ಮಾ—ಮಹಾ ಐಶ್ವರ್ಯವಂತ; ಅವನ ಮಗಳು;)

2) ಅತ್ತೆಯಮಗಳು ಅಂದರೆ ಗಂಡನ ತಂಗಿ; ಇವಳನ್ನು ತನ್ನ ಪ್ರಿಯನಾದ, ಅವಳ ಅಣ್ಣನಾದ ಕೃಷ್ಣನಲ್ಲಿಗೆ ಕರೆಯುವುದು ಯುಕ್ತವೇ?

a) ಯುಕ್ತವಾಗಿದೆ. ಗೋದೆಯು ಭಾವ ಬಂಧದಲ್ಲಿರುವಳೇ ವಿನಹ ಸಾಕ್ಷಾತ್ ಗೋಪಿಯಲ್ಲ; ಶಠಗೋಪರು ಸ್ತ್ರೀಭಾವವನ್ನು ತಾಳಿದರೂ ತನ್ನನ್ನು ತಾನು ಮರೆತಿರಲಿಲ್ಲ; ಆ ಭಾವದಲ್ಲಿ ಅವಳಂತಿದ್ದು ಅನ್ಯಾಪದೇಶಕೊಟ್ಟರು; ಹಾಗೆ ಇವಳು ತಾನು ಗೋದೆಯೆನ್ನುವುದನ್ನು ಮರೆಯಲಿಲ್ಲ. ಅಲ್ಲದೆ ಇಲ್ಲಿ ಅನುಭವವೂ ಲೌಕಿಕ ಪತಿ ಪತ್ನಿಯರ ಅನುಭವದಂತಲ್ಲ. ಆದ್ದರಿಂದ ಗೋದೆಯು ಕೃಷ್ಣನ ತಂಗಿಯನ್ನು ತನ್ನ ನಾದಿನಿಯಾಗಿ ಕರೆದಿರುವುದು ದೋಷವಲ್ಲ.

b) ಅಥವಾ, ಪಾರಮಾರ್ಥಿಕ ವಿಷಯದಲ್ಲಿ ದೇಹಾನುಬಂಧಿಗಳನ್ನು ಮರೆಯಬೇಕೆನ್ನುವ ನಿಯಮವಿದೆ. ಆದರೆ ಅದಕ್ಕೆ ಅಪವಾದ (exception) ವುಂಟು; ಶ್ರುತಿಯಲ್ಲಿ

1) ಭೃಗುರ್ವೈ ವಾರುಣಿಃ—ಎಂದು ಪ್ರಾರಂಭಿಸಿ ತಂದೆ ಮಗನಿಗೆ ಉಪದೇಶ ಕೊಟ್ಟ ನಿದರ್ಶನವಿದೆ. ಹಾಗೆಯೇ **"ಶ್ವೇತಕೇತುರ್ಹಾರುಣೇಯಃ"** ಎಂದು ವಾಂದೋಗ್ಯೋಪನಿಷತ್ತಿನಲ್ಲಿ ಶ್ವೇತಕೇತುವಿಗೆ ಅವನ ತಂದೆ ಉಪದೇಶಕೊಟ್ಟರು;

2) ಯಾಮುನಾಚಾರ್ಯರು "ಪಿತಾಮಹಂ ನಾಥಮುನಿಂ ವಿಲೋಕ್ಯ" ಎಂದು ತನ್ನ ಪ್ರಾರ್ಥನೆಯನ್ನು ಪರಮಾತ್ಮನಲ್ಲಿ ಅರ್ಪಿಸಿರುವರು;

3) ನಯನಾಚಾರ್ಯರಿಗೆ ನಿಗಮಾಂತದೇಶಿಕರು ತಂದೆ ಮಾತ್ರರಲ್ಲ; **"ಪಿತ್ರೇ ಬ್ರಹ್ಮೋಪದೇಷ್ಟ್ರೇ ಮೇ ಗುರವೇ ದೈವತಾಯ ಚ । ಪ್ರಾಪ್ಯಾಯ ಪ್ರಾಪಕಾಯಾಸ್ತು ವೇಂಕಟೇಶಾಯ ಮಂಗಳಂ"** ಎಂದಿರುವರು;

4) ರಾಮಾನುಜರಿಗೆ ಆಳ್ವಾರ್, ಆಚ್ಚಾನ್ ಎನ್ನುವ ಇಬ್ಬರು ಪ್ರಧಾನ ಶಿಷ್ಯರು; ಆಳ್ವಾರ್ ರಾಮಾನುಜರ ಸಹೋದರಿಯ ಮಕ್ಕಳು; ಆದರೂ ಅವರೊಡನೆ ಆತ್ಮ ಸಂಬಂಧವನ್ನು ಹೊಂದಿದ್ದರು;

ಆದ್ದರಿಂದ ಯತಿಗಳಿಗೆ ಮಾತ್ರ ಪೂರ್ವಾಶ್ರಮದ ದೇಹಾನುಬಂಧುತ್ವ ಬಿಡಬೇಕೆನ್ನುವುದೇ ಶಾಸ್ತ್ರಾರ್ಥವೆಂದು ತಿಳಿಯಬೇಕು. ಸಂಸಾರದಲ್ಲಿ ಗಂಡನಿಗೆ ಹೆಂಡತಿಯ ಸಂಬಂಧಿಕರು ಪ್ರಿಯರು; ಪಾರಮಾರ್ಥಿಕದಲ್ಲಿ ಹೆಂಗಸರಿಗೆ ಗಂಡನ ಕಡೆಯವರು ಪ್ರಿಯರು; ಭಾವಬಂಧದಲ್ಲಿ ಪರಮಾತ್ಮನಿಗೆ ಸೇರಿದ ಸಕಲ ಚರಾಚರವೂ ಪ್ರಿಯವಾಗಿರುವಾಗ ನಾದಿನಿಯೂ ಪ್ರಿಯವಾಗಿರುವುದರಲ್ಲಿ ಅತಿಶಯವೇನೂ ಇಲ್ಲ. ಶ್ರೀರಾಮನನ್ನು ನಾವು ಭಕ್ತಿಯಿಂದ ಸ್ತೋತ್ರ ಮಾಡುವಾಗ

ರಾಮಾಯ ರಾಮಚಂದ್ರಾಯ ರಾಮಭದ್ರಾಯ ವೇಧಸೇ ।
ರಘುನಾಥಾಯ ನಾಥಾಯ, ಸೀತಾಯಾಃ ಪತಯೇ ನಮಃ ॥

ಎನ್ನುವೆವು. ಜಗತ್ತನ್ನೂ ಸಕಲ ದೇವತೆಗಳನ್ನು ತೃಪ್ತಿಪಡಿಸಲು, ಆನಂದ ಪಡಿಸಲು ಶ್ರೀಮನ್ನಾರಾಯಣನು ಅವತಾರಮಾಡಿದ ರಾಮನಾಗಿ (ರಮಯತೀತಿ

ರಾಮಃ;) ತಾಯಿ ಕೌಸಲ್ಯೆಗೆ ಚಂದ್ರನಂತಿದ್ದ; ತಂದೆಗೆ ರಾಮಭದ್ರ; ವಸಿಷ್ಠಾದಿಗಳಿಗೆ ವೇಧಾಃ; ಪ್ರಜೆಗಳಿಗೆ ರಘುನಾಥ; ವಿಶ್ವಕ್ಕೇ ನಾಥ, ನಮಗೆ ಪ್ರಪನ್ನರಿಗೆ ಸೀತಾಪತಿ.

ಇಲ್ಲಿ ಗೋದೆಗೆ ಶ್ರೀಕೃಷ್ಣ ಪತಿ; ಅವನ ತಂಗಿ ಇವಳಿಗೆ ಬಹಳ ಪ್ರಿಯ; ಅದಕ್ಕಾಗಿ ಇವಳಿಗೂ ಅವಳಲ್ಲಿ ಅತಿಶಯ ಆದರ; ವಿಶ್ವಶಕ್ತಿಯಾದ ಮಾಯೆಯು ದುರ್ಗಿಯಾಗಿ ಶ್ರೀಕೃಷ್ಣನ ತಂಗಿಯಾಗಿ ಬಂದಳು; ಅವಳಿಗೆ ಸಮಳಾದ ಗೋಪಿಕೆಯನ್ನು ಎಬ್ಬಿಸಲು ಬಂದಿರುವಳು ಗೋದೆ.

ಪರಿಶುದ್ಧವಾದ ಮಣಿಗಳಿಂದ ಅಲಂಕೃತವಾದ ಉಪ್ಪರಿಗೆಯಲ್ಲಿ ಮಲಗಿರುವ ಇವಳನ್ನು ಎಬ್ಬಿಸುವಳು ಗೋದೆ. ಇವಳು ಪದ್ಯವನ್ನು **" ತೂಮಣಿ ಮಾಡುತ್ತು "** ಎಂದು ಪ್ರಾರಂಭಿಸಿರುವುದು ಶಠಗೋಪರ ಒಂದು ಪದ್ಯವು ಜ್ಞಾಪಕ ತರುವಂತಿದೆ.

ತುವಳಿಲ್ ಮಾಮಣಿ ಮಾಡಮೋಂಗು ತೊಲೈವಿಲ್ಲಿ ಮಂಗಲಂ ತೊಳ್ತುಂ
ಇವಳೈ ನೀರಿನಿ ಯನ್ನೈಮಿಮಾರ್ ಉಮಕ್ಕು ಆಶೈಯಿಲ್ಲೈ ವಿಡುಮಿನೋ।
ತವಳವೊಣ್ ಶಂಗು ಶಕ್ಕರಮೆನ್ರುಂ ತಾಮರೈ ತಡಂ ಕಣ್ ಎನ್ರುಂ
ಕುವಳೈಯೊಣ್ ಮುಲರ್ ಕಣ್ ಕಳ್ ನೀರ್ ಮಲ್ಗ ನಿನ್ರು ನಿನ್ರು ಕುಮರುಮೇ
IV, 5, 1

ನಾಯಿಕಾವಸ್ಥೆಯಲ್ಲಿ ಹೇಳಿದ ಮಾತಿದು; ಶಠಗೋಪರೆನ್ನುವ ಈ ನಾಯಕಿಯ ವಿಷಯದಲ್ಲಿ ಅವಳ ಸಖಿಯರು ಮಾತೃವರ್ಗವನ್ನು ಕುರಿತು ಹೇಳಿದ ಮಾತಿದು; ಇವಳು ಪರಮಾತ್ಮನಿಗೆ ಬಹು ಪ್ರಿಯವಾದವಳು; ಶ್ರೀಕೃಷ್ಣನು ಶತ್ರುಗಳನ್ನು ಜಯಿಸಿ ಅವರ ಐಶ್ವರ್ಯವನ್ನು ದೋಚಿಕೊಂಡು ಬಂದು ಅದರಲ್ಲಿ ಪರಿಶುದ್ಧವಾದ ಮಣಿಗಳಿಂದ ಈ ನಾಯಿಕೆಗೆ ಒಂದು ಪ್ರಾಸಾದವನ್ನು ಕಟ್ಟಿಸಿ ಉಪ್ಪರಿಗೆಯನ್ನು ಅಲಂಕರಿಸಿಟ್ಟಿರುವನು; ಮಿಕ್ಕ ರತ್ನಗಳಲ್ಲಿ ದೋಷಗಳನ್ನು ಹೋಗಲಾಡಿಸಿ ತನ್ನ ಉಪ್ಪರಿಗೆಯನ್ನು ಅಲಂಕರಿಸಿಕೊಂಡಿರುವನು; ಇವರ ದಾಂಪತ್ಯದಲ್ಲಿ ತಾಯಿಯು ಅವಳನ್ನು ಮರೆಯುವಂತಾಗಿದೆ. ರಸಿಕರು ಈ ವರ್ಣನೆಯಲ್ಲಿ ಅಡಗಿರುವ ವೇದಾಂತಾರ್ಥವನ್ನು ಹೃದಯಂಗಮವಾಗಿ ಅನುಭವಿಸಬಲ್ಲರು; ಅದರಲ್ಲಿ ಒಂದು ಕ್ರಮವನ್ನು ಗೋದೆಯು ಇಲ್ಲಿ ಕೊಟ್ಟಿರುವಳು. ಇಲ್ಲಿ ಮಾಮ್ಮಾ ಮಗಳು

ತೂಮಣಿಮಾಡುತ್ತು—ಕೃಷ್ಣನು ಬರುವನೆಂದು, ಅಥವಾ ಕೃಷ್ಣನು ಬರುವ ಬಾಗಿಲುಳ್ಳ ಮಹಡಿಯಲ್ಲಿ, ಅಂದರೆ ರತ್ನ ಖಚಿತ ಪ್ರಾಸಾದದಲ್ಲಿ

ಶುತ್ತುಂವಿಳಕ್ಕೆರಿಯ—ಸುತ್ತಲೂ ದೀಪವು ಉರಿಯುತ್ತಿರುವಲ್ಲಿ, ತಾನು ಅವನಿಗಾಗಿ ಕಾದಿರುವಳೆಂದು ತೋರಿಸುವುದಕ್ಕಾಗಿ ದೀಪವು ಉರಿಯುವಂತೆಯೇ ಇಟ್ಟಿರುವಳು;

ತೂಪಂ ಕಮುಗ್ಗು—ಹೊಗೆ ಇಲ್ಲದೆ ಧೂಪದವಾಸನೆ ಮಾತ್ರ ಬರುವಂತೆ ಮಾಡಿ

ತುಯಿಲಣೈ ಮೇಲ್ ಕಣ್ ವಳರುಂ — ಹಂಸತೂಲಿಕಾತಲ್ಪದಮೇಲೆ ಶಯನಿಸಿರುವ—ಇಂತಹ ಹಾಸಿಗೆಯೆಂದು ಹೇಳಿಲ್ಲ; ನಿದ್ದೆ ಬರೆಸುವ ಹಾಸಿಗೆ ಅಂದರೆ ಹಂಸತೂಲಿಕಾತಲ್ಪ; ಇಲ್ಲಿ **" ತೂಂಗುಂ (ನಿದ್ರಿಸುವ) ಎನ್ನದೆ " ಕಣ್ ವಳರುಂ "** ಎಂದಿರುವುದು ನಾದಿನಿಯನ್ನು ಗೌರವದಿಂದ ಕರೆಯಬೇಕೆನ್ನುವ ಸಂಪ್ರದಾಯವನ್ನು ತೋರಿಸಿಕೊಡುವುದಕ್ಕಾಗಿ; ಇವಳು ಭಾಗವತಳು; ಗೌರವವಾಗಿ ಕರೆಯಬೇಕು.

ಮಾವರ್ ಮಗಳೇ—ನಾದಿನಿಯೇ

ಮಣಿಕ್ಕದವಂ ತಾಳ್ ತಿರವಾಯ್—ಮಾಣಿಕ್ಯಮಯ ಕವಾಟವನ್ನು ತೆಗಿ; ಪರಮಾತ್ಮನು ಬರುವ ಬಾಗಿಲು ಮಣಿಗಳಿಂದ ಅಲಂಕರಿಸಲ್ಪಟ್ಟಿದೆ; ಮತ್ತಾರಿಗೂ ಈ ಬಾಗಿಲಿಂದ ಪ್ರವೇಶವಿಲ್ಲ; ಇದು ಅವಳ ಮನಸ್ಸಿನಲ್ಲಿ ನೆಲೆಸಿರುವ ಭಾವ; ಇದನ್ನು ಬೇರೇರೀತಿಯಲ್ಲಿ ನಾಚ್ಚಿಯಾರ್ ತಿರುಮೊಳಿಯಲ್ಲಿ (4ನೇ ದಶಕ–ಕೂಡಲ್ ಇೞೈತ್ತಲ್)

ಮಾಡಮಾಳಿಕೈ ಶೂೞ್ ಮದುರೈಪ್ಪತಿ
ನಾಡಿನಂ ತೆರುವಿಲ್ ನಡುವೇ ವಂದಿಟ್ಟು
ಓಡೈ ಮಾಮದಿಯಾನೈ ಯುದೈತ್ತರ್ವ
ಕೂಡುವಾಕಿಲ್ ನೀ ಕೂಡಿಡುಕೂಡಲೇ

ಶ್ರೀಕೃಷ್ಣನೇ ಉಪ್ಪರಿಗೆ ಮನೆಗಳಿಂದ ಸುತ್ತುವರಿಯಲ್ಪಟ್ಟ ಮಧುರೆಗೆ ಯಜಮಾನನೇ! ನನ್ನನ್ನೇ ಹುಡುಕಿಕೊಂಡು ನನ್ನ ಬೀದಿಯಲ್ಲಿ ಮಧ್ಯೆ ಬಂದು, ಮದಿಸಿದ ಆನೆಯನ್ನು ನಾಶಮಾಡಿದವನೇ, ನನ್ನನ್ನು ಕೂಡುವಂತಾದಾಗ ನೀನು ಕೂಡಿಕೋ ಎಂದು ತನ್ನ ಮನಸ್ಸಿಗೆ ಹೇಳಿದ ಮಾತಿದು. ಅಂತರಾರ್ಥದಲ್ಲಿ ಈ ಪದ್ಯವು ಬಹು ಹಿತವಾದುದು. " ನನ್ನ ಬೀದಿ " ಎಂದರೆ " ನನ್ನ ಮನಸ್ಸು ಹೇಗೆ ಹೋಗುವುದೋ ಹಾಗೆಯೇ ಬರುವನು ಅವನು." ಈ ಮಾತು

ಯೇ ಯಥಾ ಮಾಂ ಪ್ರಪದ್ಯಂತೇ ತಾ ಸ್ತಥೈವ ಭಜಾಮ್ಯಹಂ

ಎನ್ನುವ ಶ್ರೀಕೃಷ್ಣನ ಮಾತನ್ನು ಜ್ಞಾಪಿಸುವಂತಿದೆ. " ನನ್ನ ಮನಸ್ಸು ಹೋಗುತ್ತಿರುವಂತೆಯೇ ಅನುಸರಿಸಿ ನನ್ನ ಅಹಂಕಾರ ಮಮಕಾರವನ್ನು (ಯಾನೈ) ಹೋಗಲಾಡಿಸಿ ನನ್ನನ್ನು ಕೂಡಿಕೊಳ್ಳುವ ಪ್ರೇಮಸ್ವರೂಪ ಶ್ರೀಕೃಷ್ಣನದು. ಅವನನ್ನು ಅರಸಿ ನಾವು ಹೋದರೆ ಅವನು ಬರುವನು; ನೀನು ಹೀಗೆ ಮಲಗಿದ್ದರೆ ಅವನು ಬರುವನೆಂದಿರುವೆಯೇನು? ಸರ್ವಥಾ ಇಲ್ಲ; ನಿನ್ನ ಮಾಳಿಗೆಗೆ ಅನೇಕ ಬಾಗಿಲುಗಳಿವೆ; ಮರದ ಬಾಗಿಲು ಸೇವಕಿಯರು ಬರಲು; ರತ್ನದ ಬಾಗಿಲು ತಾಯಿ ತಂದೆಯವರು ಬರಲು; ಪರಾಗದ್ದು ಕೃಷ್ಣನಿಗಾಗಿ; ನಿನಗೆ ಪ್ರಿಯೆಯರಾದ ನಮಗಾಗಿ ಮಣಿಬಾಗಿಲು; ಅದನ್ನು ತೆಗಿ " ಎಂದಳು ಗೋದೆ.

ಈ ಸಂಬಂಧದಲ್ಲಿ ಪೆರಿಯನಂಬಿಗೂ ರಾಮಾನುಜರಿಗೂ ವಿಮರ್ಶೆ ನಡೆದಾಗ ರಾಮಾನುಜರು "ಇಲ್ಲಿ ಐಶ್ವರ್ಯ ಚಿಹ್ನೆಯಿದೆ; ನಿದ್ರಿಸುತ್ತಿರುವಳು; ಆದರೆ ಬೆಳಕಿದೆ; ಇವೆಲ್ಲವನ್ನೂ ಹೇಗೆ ಸಮನ್ವಯ ಮಾಡಿಕೊಳ್ಳಬೇಕು" ಎಂದು ಕೇಳಿದ ಠಂತೆ. ಅದಕ್ಕೆ ಪೆರಿಯನಂಬಿಯವರು "ನೀವು ತಿರುಮಂತ್ರೋಪದೇಶಕ್ಕಾಗಿ ಗೋಷ್ಠೀಪೂರ್ಣರನ್ನು 18 ಆವರ್ತಿ ಅನುವರ್ತಿಸಲಿಲ್ಲವೆ? ಅದರಿಂದ ಇದನ್ನು ತಿಳಿದುಕೊಳ್ಳಿ ಎಂದು ಗಂಭೀರವಾಗಿ ನುಡಿದರಂತೆ. ಇದರರ್ಥವು ಸೊಗಸು. ಆತ್ಮ ಗುಣವೆನ್ನುವ ಐಶ್ವರ್ಯವಿದ್ದೂ ಸ್ವಾಭಿಮಾನವನ್ನು ಪೂರ್ತಿ ಬಿಡದೇ ಇರುವ ನಿದ್ದೆಯಲ್ಲೂ ಪರಮಾತ್ಮನು ಯಾವಾಗ ಬರುವನೋ ಎನ್ನುವ ಆತ್ಮಾಭಿಮಾನ ತ್ಯಾಗ ರೂಪವಾದ ಬೆಳಕು ಇರುವುದು ಅಸಂಭವವಿಲ್ಲ. ಇದರರ್ಥವನ್ನು ಯಾರು ಅರಿವರೋ ಅವರಿಗೆ ಆದ್ವೈತಾನುಭವಕ್ಕೂ, ವಿಶಿಷ್ಟಾದ್ವೈತಾನುಭವಕ್ಕೂ ವ್ಯತ್ಯಾಸವು ಗೋಚರವಾಗುವುದು.

ಇಷ್ಟರಲ್ಲಿ ಮಲಗಿರುವ ಗೋಪಿಕೆಯ ತಾಯಿಗೆ ಎಚ್ಚರವಾಗಿರುವುದನ್ನು ಕಂಡು

ಮಾವಿಮಾರ್ ಅವಳೈ ಎಳ್ಪ್ಪೀರೋ—ಮಾವಿ, ನೀವಾದರೂ ಅವಳನ್ನು ಎಬ್ಬಿಸಬಾರದೆ. ಎಂದಳು ಗೋದೆ. ಅದಕ್ಕೆ ಆ ತಾಯಿ "ನೀವೆಲ್ಲರೂ ಯಾರಮ್ಮ" ಎಂದು ಕೇಳಲಾಗಿ, "ಇದನ್ನು ನಮ್ಮಿಂದ ಏಕೆ ಕೇಳಲಪೇಕ್ಷಿಸುವಿರಿ; ನಿಮ್ಮಮಗಳನ್ನೇ ಕೇಳಬಾರದೇ

ಉಮ್ಮಕಳ್ತಾ ಉಮ್ಮೈಯೋ—ನಿಮ್ಮ ಮಗಳು ಮೂಗಿಯೇನು"? ಅದಕ್ಕೆ ತಾಯಿಯಾದವಳು "ಮೂಗಿಯೇನಲ್ಲಮ್ಮ, ನಿದ್ರಿಸುತ್ತಿರುವಳು" ಎಂದು ದಕ್ಕೆ ಗೋದೆಯು "ನಾವು ಇಷ್ಟು ಕೂಗುತ್ತಿದ್ದರೂ ಎಚ್ಚರವಾಗದಿರಲು ಅವಳು

ಅನ್ರಿ ಚ್ಚೆವಿಡೋ—ಕಿವುಡಿಯೇನು ಅಥವಾ

ಅನಂದಲೋ—ಆಲಸ್ಯವೋ, ಅಲ್ಲವೇ ಯಾರಿಂದಲಾದರೂ

ಮುಂತಿರಪ್ಪಟ್ಟಾಳೋ—ನಿದ್ದೆ ಬರುವುದಕ್ಕಾಗಿ ಮಂತ್ರಿಸಲ್ಪಟ್ಟಿರುವಳೋ ಅಂದರೆ ಯಾರಾದರೂ ಮಂಕುಬೂದಿ (ಅಮ್ಕ್ಕಪೊಡಿ, ಶುಕ್ಕುಪ್ಪೊಡಿ) ಹಾಕಿರುವರೋ" ಎಂದು ಕೇಳಿದರು ಗೋದೆ. ತಾಯಿಯು "ಅದೇನೂ ಇಲ್ಲವಮ್ಮಾ"; ಗೋದೆ ಅದಕ್ಕೆ "ಹಾಗಾದರೆ ಹೀಗಿದ್ದರೆ ಶ್ರೀಕೃಷ್ಣನು ಅವಳಲ್ಲಿಗೆ ಹೇಗೆ ಬಂದಾನು" ಎಂದು ಹೇಳಿ ಗೋಪಿಯನ್ನು ಕುರಿತು "ಈ ಅಹಂಕಾರ ಬೇಡ ಕಣೆ; ಏಳೇ; ಮೊದಲೇ ಅವನು

ಮಾಮಾಯರ್—ಬಹು ಮೋಸಗಾರ, ಅಲ್ಲದೆ **ಮಾದವರ್**—ಅವನಿಗೆ ಲಕ್ಷ್ಮಿಬೇರೆ ಹೆಂಡತಿಯಿರುವಳು; ನೀನು ಹೀಗೆ ಹಟ ಹಿಡಿದೇ ಇದ್ದರೆ, **ವೈಕುಂದ**–ತನ್ನ ಸ್ವಂತ ಊರಾದ ವೈಕುಂಠಕ್ಕೆ ಹೊರಟು ಹೋಗುವನು; ಅಥವಾ ಬೇರೆ ಅರ್ಥದಲ್ಲಿ, "ಬಾಣಾಸುರನ ರುದ್ರ ಜ್ವರವನ್ನು ವಿಷ್ಣು ಜ್ವರದಿಂದ ಜಯಿಸಿದವನು;

ಅವನ ಮಾಯೆಗಿಂತಲೂ ಮೇಲಾದ ಮಾಯೆಯುಳ್ಳವನು (ಮಾಮಾಯರ್); ನೀನು ಹೀಗೆ ಇದ್ದರೆ ಕ್ಷೀರಾಬ್ಧಿಗೆ ಹೋಗಿಬಿಡುವನು; ಅದು ಅವರ ಅತ್ತೆಮನೆ. (ಮಾಧವ) ತಿಳಿಯಿತೇ? ಅಲ್ಲಿಗೂ ನೀನು ಹೋದರೆ ಅಲ್ಲಿಂದ ವೈಕುಂಠಕ್ಕೆ ಹೋಗಿಬಿಡುನನು ಜೋಕೆ" ಎಂದಳು. ಇದನ್ನು ಕೇಳಿ ಮಲಗಿದ್ದವಳು ಎದ್ದು ಓಡಿ ಬರಲು, ಅವಳನ್ನು ನೋಡಿ ನಕ್ಕು ಗೋದೆಯು "ನಾನು ಹೇಳಿದ್ದು ಹಾಗಲ್ಲ ಕಣೆ; **"ಮಾಮಾಯರ್"** ಇವನೇ ಪರತತ್ವ;

ಅಜೋಪಿ ಸ್ಯ ಅವ್ಯಯಾತ್ಮಾ ಭೂತಾನಾಮಿಶ್ವರೋಪಿ ಸ್ಯ।
ಪ್ರಕೃತಿಂ ಸ್ವಾಮವಷ್ಟಭ್ಯ ಸಂಭವಾಮ್ಯಾತ್ಮಮಾಯಯಾ ॥
ಮಾಧರ್ವ—
ಸರ್ವಜ್ಞೋಪಿ ಹಿ ದೇವೇಶಃ ಸದಾ ಕಾರುಣಿಕೋಪಿ ಸ್ಯ।
ಸಂಸಾರತಂತ್ರವಾಹಿತ್ವಾತ್ ರಕ್ಷಾಪೇಕ್ಷಾನುಪೇಕ್ಷತೇ ॥

ಲಕ್ಷ್ಮಿಯು ಸವತಿಯಲ್ಲ; ನಮ್ಮ ರಕ್ಷಕದೈವ; ಅವಳಿರುವುದರಿಂದಲೇ ನಾವು ಅವನಲ್ಲಿಗೆ ಧೈರ್ಯವಾಗಿ ಹೋಗಬಹುದು;

ವೈಕುಂದ—ಅವನೇ ವೈಕುಂಠನಾಥ, ಮುಕ್ತಿಯಲ್ಲಿ ನಾವು ಅನುಭವಿಸುವ ರಸ, ಅಮೃತ–ಇಂತಹವನ

ನಾಮುಂ ಪಲವುಂ ನವಿನು,—ಅನಂತನಾಮಗಳನ್ನು ಸಂಕೀರ್ತನ ಮಾಡುತ್ತಾ ಹೋಗೋಣ ಬಾ ಅವನಲ್ಲಿಗೆ—

ಏಲೋರ್ ಎಂಪಾವಾಯ್.

ನಾಮ ಸಂಕೀರ್ತನವೇ ಸಕಲ ಕಷ್ಟ ನಿವಾರಣೆಗೂ ದಿವ್ಯೌಷಧ; ಧರ್ಮರಾಜನು ಭೀಷ್ಮರನ್ನು ಕುರಿತು

ಕೋ ಧರ್ಮಸ್ಸರ್ವಧರ್ಮಾಣಾಂ ಭವತಃ ಪರಮೋ ಮತಃ।
ಕಿಂ ಜಪರ್ ಮುಚ್ಯತೇ ಜಂತುಃ ಜನ್ಮಸಂಸಾರಬಂಧನಾತ್ ॥

ಎಂದು ಕೇಳಿದ್ದಕ್ಕೆ ಅವರು

ಜಗತ್ಪ್ರಭುಂ ದೇವದೇವಂ ಅನಂತಂ ಪುರುಷೋತ್ತಮುಂ
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ।
ಏಷನೇ ಸರ್ವಧರ್ಮಾಣಾಂ ಧರ್ಮೋಧಿಕತಮೋ ಮತಃ

ಎಂದು ಹೇಳಿದರು.

ವೇದದಲ್ಲೂ

1) **ಧ್ರುವಾಸೋ ಅಸ್ಯ ಕೀರಯೋ ಜನಾಸಃ**—ಅಂತರೆ ಜನಾಸಃ—ಸಂಸಾರಿಗಳು, ಅಸ್ಯ—ಈ ತ್ರಿವಕ್ರಮನ, ಕೀರಯಃ—ನಾಮಸಂಕೀರ್ತನ ಮಾಡುವರಾಗಿ, ಧ್ರುವಾಸಃ—ಶಾಶ್ವತವಾದ ಮೋಕ್ಷಹೊಂದುವರು.

2) **ಅಸ್ಯ ಜಾನಂತೋ ನಾಮಚಿದ್ವಿವಕ್ತನ**—ಅಂದರೆ ಮೋಕ್ಷಸ್ವರೂಪ ತಿಳಿದವರು (ಜಾನಂತಃ) ಅಸ್ಯ—ಅಕಾರವಾಚ್ಯನಾದ, ನಿರುಪಾಧಿಕ ಸರ್ವ ರಕ್ಷಕ ನಾದ (ಅವ—ರಕ್ಷಣೆ ಎನ್ನುವ ಕ್ರಿಯಾಪದದಿಂದ "ಅ"ಕಾರ ಬಂದಿದೆ) ಪರಮಾತ್ಮನ

ನಾಮಚಿತ್—ಯಾವದಾದರೊಂದು ನಾಮವನ್ನು **ವಿವಕ್ತನ**–ಸಂಕೀರ್ತನ ಮಾಡುವರು;

ವೈಷ್ಣವಧರ್ಮದಲ್ಲಿ—

ಅಜ್ಞಾನತೋ ಜ್ಞಾನತೋ ವಾ ವಾಸುದೇವಸ್ಯ ಕೀರ್ತನಾತ್ ।
ತತ್ಸರ್ವಂ ವಿಲಯಂ ಯಾತಿ ತೋಯಸ್ಥಲವಣೋ ಯಥಾ 66–70
ಶಮಾಯಾಲಂ ಜಲಂ ವಹ್ನೇಃ, ತಮಸೋ ಭಾಸ್ಕರೋದಯಃ
ಶಾಂತಿಃ ಕಲೇರತ್ವಘಸ್ಯ ನಾಮಸಂಕೀರ್ತನಂ ಹರೇಃ ।
ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಂ ।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥
ಅಚ್ಯುತಾನಂತಗೋವಿಂದನಾಮೋಚ್ಚಾರಣಭೇಷಜಾತ್
ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಂ

ಸ್ವಾಪದೇಶ

ಹಿಂದಿನ ಪದ್ಯದಲ್ಲಿ ಆತ್ಮಗುಣಪೂರ್ತಿಗಾಗಿ ಕುತೂಹಲಿ ಶಿಷ್ಯ ಕರೆಯಲ್ಪಟ್ಟನು; ಇಲ್ಲಿ ಅದಿರುವವನು ಎಬ್ಬಿಸಲ್ಪಡುವನು; ಶ್ರೀಕೃಷ್ಣನಿಗೆ ಅವನ ತಂಗಿಯಂತೆ ಆಚಾರ್ಯನಿಗೆ ವಿಧೇಯನಾಗಿಯೂ, ಪ್ರಿಯನಾಗಿಯೂ ಇರುವ ಭಾಗವತನೇ ಇಲ್ಲಿ ಶಿಷ್ಯ.

ತೂಮಣಿ ಮಾಡತ್ತು—**"ಪ್ರಜ್ಞಾಪ್ರಾಸಾದಮಾರುಹ್ಯ"** ಎಂದಿರುವಂತೆ ಪ್ರಜ್ಞೆಯೆನ್ನುವ ಉಪ್ಪರಿಗೆಯಲ್ಲಿ;

ಪ್ರಭೂತವಿಬುಧದ್ವಿಷದ್ಭರಣಖಿನ್ನವಿಶ್ವಂಭರಾ
ಭರಾಪನಯನಚ್ಛಲಾತ್ತ್ವಮವತಾರ್ಯ ಲಕ್ಷ್ಮೀಧರಂ ।
ನಿರಾಕೃತವತೀ ದಯೇ ನಿಗಮಸೌಧದೀಪಶ್ರಿಯಾ
ವಿಪಶ್ಚಿದವಿಗೀತಯಾ ಜಗತಿ ಗೀತಯಾಂಧಂತಮಃ ದ–ಶ 89

ಎಂದಿರುವಂತೆ ವೇದವೇ ಒಂದು ಮಹಲು; ಅದರ ಉಪ್ಪರಿಗೆ ಉಪನಿಷತ್ತು; ಅದನ್ನು ಬೆಳಗುವ ಬೆಳಕು ಭಗವದ್ಗೀತೆ; ಅದಕ್ಕಾಗಿಯೇ ನಿಗಮಾಂತದೇಶಿಕರು ತನ್ನ ಗೀತಾ ಭಾಷ್ಯವಾದ ತಾತ್ಪರ್ಯ ಚಂದ್ರಿಕೆಯ ಕೊನೆಯಲ್ಲಿ

ಶುದ್ಧಾದೇಶವಂಶವದೀಕೃತಯತಿಕ್ಷೋಣೀಶವಾಣೀ ಶತಾ
ಪ್ರಜ್ಞಾತಲ್ಪಪರಿಷ್ಕೃತಶ್ರುತಿಶಿರಃಪ್ರಾಸಾದಮಾಸೇದುಷೀ ।
ನಿತ್ಯಾನಂದವಿಸೀಮಸನ್ನಿಧಿಸದಾಸಾಮೋದದಾಮೋದರ
ದ್ವಿತ್ರಾಲಿಂಗನದೌರ್ಲಲಿತ್ಯಲಲಿತೋನ್ಮೇಷಾ ಮನೀಷಾಸ್ತು ಮೇ ॥

ಎನ್ನುವ ಶ್ಲೋಕದಲ್ಲಿ ವೇದ ಶಿರಸ್ಸಾದ ಉಪನಿಷತ್ತಿನ ಪ್ರಾಸಾದವನ್ನು ಹತ್ತಲಪೇಕ್ಷಿಸುತ್ತಿರುವ ನನ್ನ ಬುದ್ಧಿಯು (ಮನಿಷಾ) ಪರಮಾತ್ಮನ ಅಲಭ್ಯ ಆಲಿಂಗನದಿಂದ ಸದಾ ಜಾಗೃತವಾಗಿರಲಿ ಎಂದು ಪ್ರಾರ್ಥಿಸಿರುವರು.

ಸಂಸ್ಕೃತದಲ್ಲಿ ಪ್ರಜ್ಞಾ ಶಬ್ದದಲ್ಲೇ ಸ್ವಾರಸ್ಯವು ಅಡಗಿದೆ. ಜ್ಞಾ ಅಥವಾ ಜ್ಞಾನ ಎಂದರೆ ಶುದ್ಧವಾದ ಚಲಿಸದಿರುವ, ವಿಶ್ವಾಸರೂಪದಲ್ಲಿ ನಿಲ್ಲುವ ವಸ್ತು ಬೋಧ; ಪ್ರಜ್ಞಾ ಅಂದರೆ ಪ್ರಕೃಷ್ಟಜ್ಞಾನ; ವೀರ್ಯವುಳ್ಳ ಜ್ಞಾನ; ಎಷ್ಟು ಮನಸ್ಸಿನಲ್ಲಿ ತುಂಬಿದರೂ ಶ್ರಮತಾರದ ಬೆಳಕು; ಇದು ರಸವತ್ತಾದ ಜ್ಞಾನ: ಶುಷ್ಕಜ್ಞಾನವಲ್ಲ; ಸಂಬಂಧ ಜ್ಞಾನದೊಡನೆ ಬೆಳಗುವ ತೇಜಸ್ಸು; ಆರ್ದ್ರದೀಪ್ತಿ; ಭಕ್ತಿರೂಪಾಪನ್ನಜ್ಞಾನ ನಮ್ಮಲ್ಲಿ; ದಯಾಪೂರಿತಜ್ಞಾನ ಪರಮಾತ್ಮನಲ್ಲಿ; ಉಪನಿಷತ್ತಿನಲ್ಲಿ ಪರಮಾತ್ಮನನ್ನು (ಬ್ರಹ್ಮ ವಸ್ತುವನ್ನು) ಪ್ರಜ್ಞಾ ಎಂದು ಕರೆದಿರುವಾಗಲೆಲ್ಲಾ ಇದೇ ಅರ್ಥವು ಕೂಡಿ ಬರುತ್ತದೆ. ಇಲ್ಲಿ ಎಬ್ಬಿಸಲ್ಪಡುವ ಭಾಗವತನು ಮಲಗಿರುವುದು **"ತೂಮಣಿಮಾಡಂ"** ಪ್ರಜ್ಞಾಪ್ರಾಸಾದ; ಅಂದರೆ ಪರಮ ಭಾಗವತ; ಅಂತಹ ಪ್ರಾಸಾದದಲ್ಲಿ **ಶುತ್ತಂವಿಳಕ್ಕೆರಿಯ**—ಸುತ್ತಲೂ ಬೆಳಕು ಬೆಳಗುತ್ತಿರಲು, ನಾನಾಶಾಸ್ತ್ರಜ್ಞಾನವೇ ಈ ಬೆಳಕು; ವೇದದ ಷಡಂಗ ಜ್ಞಾನವೇ ಈ ಜ್ಯೋತಿಸ್ಸು; ಶಿಕ್ಷಾ, ವ್ಯಾಕರಣ, ಛಂದಸ್ಸು ನಿರುಕ್ತಂ, ಜ್ಯೋತಿಷ ಮತ್ತು ಕಲ್ಪ–ಇವೇ ವೇದದ ಷಡಂಗ; ಈ ಜ್ಞಾನವನ್ನು ಶ್ರೀಕೃಷ್ಣನೇ ತನ್ನ ಭಕ್ತರಿಗೆ ಕೊಡುವನು.

ತೇಷಾಮೇವಾನುಕಂಪಾರ್ಥ ಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥಃ ಜ್ಞಾನದೀಪೇನ ಭಾಸ್ವತಾ X–11

ತನ್ನ ಭಕ್ತರಲ್ಲಿ ಈ ಸರ್ವತೋಮುಖ ಜ್ಞಾನ ದೀಪವನ್ನು ಹಚ್ಚುವವನು ಅಚ್ಯುತನೇ; ಹಾಗೆ ದೀಪವು ಉರಿಯುತ್ತಿರಲು

ದೂಪಂ ಕಮಝ್ಗ—ಅನುಷ್ಠಾನ ಪೂರ್ತಿ ಇರುವಲ್ಲಿ; ಅನುಷ್ಠಾನವಿಲ್ಲದೆ ಜ್ಞಾನವು ಪೂರ್ತಿಯಾಗಲಾರದು; ಪ್ರಜ್ಞಾವಿನ ಧೂಪ ವಾಸನೇಯೇ ಅನುಷ್ಠಾನ

ಉಭಾಭ್ಯಾಮೇವ ಪಕ್ಷಾಭ್ಯಾಂ ಆಕಾಶೇ ಪಕ್ಷಿಣೋ ಗತಿಃ ।
ತಥೈವ ಜ್ಞಾನಕರ್ಮಭ್ಯಾಂ ಪ್ರಾಪ್ಯತೇ ಪುರುಷೋತ್ತಮಃ ॥

ಶುದ್ಧ ಜ್ಞಾನ ಪ್ರವಾಹವೇ ಧರ್ಮ; ಧರ್ಮವಲ್ಲದ ಕರ್ಮ ತಾಳಿಯಿಲ್ಲದ ಸೈರಂಧ್ರಿ; ಧರ್ಮ ಶೂನ್ಯಪಾಂಡಿತ್ಯ ನಾಯಿಯ ಬಾಲದಂತೆ

ನಾಚ್ಛಾದಯತಿ ಕೌಪೀನಂ ನ ದಂಶಮಶಕಾಪಹಂ ।
ಶುನಃಪುಚ್ಛಮಿವಾನರ್ಥಂ ಪಾಂಡಿತ್ಯಂ ಧರ್ಮವರ್ಜಿತಂ ॥

ಹಾಗಲ್ಲ ಈ ಭಾಗವತನ ಜ್ಞಾನ; ಧರ್ಮಪೂರಿತ ಪ್ರಜ್ಞಾ ಇವನದು (**ದೂಪಂ ಕಮಱ ಶುತ್ತಂ ವಿಳಕ್ಕು**), ಹೀಗಿದ್ದು

ತುಯಿಲಣೈ ಮೇಲ್ ಕಣ್ ವಳರುಂ—ವೈರಾಗ್ಯನಿಧಿಯಾಗಿ, ಲೌಕಿಕ ವಿಷಯದಲ್ಲಿ ನಿದ್ದೆಮಾಡುತ್ತಿರುವ

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥

ಎಂದು ಗೀತೆಯಲ್ಲಿ (II–69) ಹೇಳಿರುವಂತೆ ಇರುವ

ಮಾಮಾನ್ಮಕಳೇ—ಆಚಾರ್ಯರಿಗೆ ವಿಧೇಯ ಶಿಷ್ಯನೇ

ಮಣಿಕ್ಕದವಂ ತಾಳ್ ತಿರುವಾಯ್—ಮಣಿಯಂತೆ ಪರಿಶುದ್ಧವಾದ ಹೃದಯ ಬಾಗಿಲು ತೆಗಿ

ಮಾಮೀರ್—ಇವನು ಪ್ರಧಾನಾಚಾರ್ಯನಲ್ಲಿಗೆ ಬರುವಂತೆ ಜ್ಞಾನಪಾಕವನ್ನು ಕೊಟ್ಟ ಉಪಕಾರಕಾಚಾರ್ಯರೇ

ಅವಳೈ ಎಱ್ಱಪ್ಪೀರೋ—ಸ್ತ್ರೀಭಾವದಲ್ಲಿರುವ ಈ ಶಿಷ್ಯನನ್ನು ಎಬ್ಬಿಸಿ

ಉನ್ಮಕಳ್ . . . . ಪಟ್ಟಾಳೋ—ಇತರ ದೂಷಣೆ ವಿಷಯದಲ್ಲಿ ಮೂಗನೂ, ಇತರರ ತಪ್ಪುಗಳನ್ನು ಕಾಣದ ಕುರುಡನೂ, ಪರರ ಹೆಂಡರ ವಿಷಯದಲ್ಲಿ ನಪುಂಸಕನೂ ಆದವನಲ್ಲವೇ ಈ ಭಾಗವತ—

ಪರರಂದ್ರೇಷು ಜಾತ್ಯಂಧಾಃ ಪರದಾರೇಷ್ವಪುಂಸಕಾಃ ।
ಪರಿವಾದೇಷು ಯೇ ಮೂಕಾಃ ತೇತೀವ ದಯಿತಾ ಮಮ ॥

ವಿಷ್ಣು–ಧರ್ಮ 76–22

ಎಂದಿರುವಂತೆ ಪರಮಾತ್ಮನಿಗೆ ಬಹುಪ್ರಿಯವಾದವನು; ಬಾಹ್ಯವಿಷಯದಲ್ಲಿ, ಮೂಗನೂ, ಕುರುಡನೂ, ಮಂಕನೂ ಆದವನು ತನ್ನ ಅಂತರಂಗದಲ್ಲಿ ಪರಮಾತ್ಮನನ್ನು ಅನುಭವಿಸುವವನು.

ಯತ್ರ ನಾನ್ಯತ್ ಪಶ್ಯತಿ, ನಾನ್ಯದ್ವಿಜಾನಾತಿ
ಸ ಭೂಮಾ—ಛಾ—ಉ—

ಆ ಪರಮಾತ್ಮನೇ ಸರ್ವಸ್ವವೂ (ಭೂಮಾ) ಆಗಿರುವನು. ಇವನು ಸಹಸಾ ಬಹಿರ್ಮುಖನಾಗುವುದಿಲ್ಲ; ಹಾಗೆ ಆಗಬೇಕಾದರೆ ಉಪಾಯವೊಂದೇ–ಆಚಾರ್ಯನಾಮ ಸಂಕೀರ್ತನವೇ ಪರಮೌಷಧ; "ಹೇ ಭಾಗವತೋತ್ತಮ—ಆಚಾರ್ಯನು

ಅಚ್ಯುತನಿಗಿಂತ ಮಿಗಿಲಾದವನೆಂದರಿಯೆಯಾ; ಅಲ್ಲದೆ ನಮ್ಮ ಆಚಾರ್ಯನ್ನು ಯಾರೆಂದಿರುವಿ.

ಮಾಮಾರ್ಯ—ಆಶ್ಚರ್ಯ ಶಕ್ತಿಯುಳ್ಳವನು; ಯಾವ ಪರಪಕ್ಷದವರು ಬಂದರೂ, ತಲೆಬಾಗುವಂತೆ ಅವರನ್ನು ಮಾಡುವ ಪ್ರಭಾವವುಳ್ಳವನು;

ಮಾಧರ್ವ—ಮಾ + ತರ್ವ

ತಸ್ಮಾನ್ಯಾಸ ಮೇಷಾಂ ತಪಸಾಮತಿರಿಕ್ತಮಾಹುಃ ತೈ–ಯಾ–ಉ ಎಂದು ವೇದವು ಉದ್ಘೋಷಿಸಿರುವಂತೆ ಎಲ್ಲಾ ತಪಸ್ಸಿಗಿಂತಲೂ ಉತ್ತಮವಾದ ನ್ಯಾಸ ಅಂದರೆ ಪ್ರಪತ್ತಿಯನ್ನು ಅನುಷ್ಠಿಸಿ, ಮಾಡಿಸುವವನು; ಅವನ

ನಾಮಂ ಪಲವಂ ನವಿನ್ರು—ಅನೇಕ ನಾಮಗಳನ್ನು ಸಂಕೀರ್ತನ ಮಾಡೋಣ—ಏಲ್ ಓರ್ ಎಂ ಪಾವಾಯ್

ಶ್ರೀಮತೆ ಭಗವತೇ ಭಾಷ್ಯಕಾರಾಯ ನಮಃ

ನೋತ್ತುಚ್ಚುವರ್ಗಂ ಪುಕುಕಿನ್ರ ವಮ್ಮನಾಯ್
ಮಾತ್ತವಂ ತಾರಾರೋ ವಾಶಲ್ ತಿರವಾದಾರ್
ನಾತ್ತತ್ತುಱnಯ್ಮುಡಿ ನಾರಾಯಣನ್ ನಮ್ಮಾಲ್
ಪೋತ್ತ ಪ್ಪರೈತರುಂ ಪುಣ್ಣಿಯನಾಲ್ ಪಂಡೊರುನಾಳ್
ಕೂತ್ತತ್ತಿನ್ ವಾಯ್ ವೀಱ್ಱನ್ದ ಕುಂಭಕರಣನುಂ
ತೋತ್ತು ಮುನಕ್ಕೇ ಪೆರುಂತುಯಿಲ್ ತಾನ್ ತಂದಾನೋ
ಆತ್ತವನಂದಲುಡೈಯಾಯ್ ಅರುಂಕಲಮೇ
ತೇತ್ತಮಾಯ್ ವನ್ದು ತಿರವು ಏಲೋರೆಂಪಾವಾಯ್ ॥ ೧೦ ॥

ಭಾಗವತ ಕೂಟಕ್ಕೆ ಭೂಷಣಪ್ರಾಯಳಾದವಳು ಇಲ್ಲಿ ಎಬ್ಬಿಸಲ್ಪಡುವಳು. ಹಿಂದಿನ ನಾಲ್ಕು ಗೋಪಿಯರೂ ಭೂಷಣಪ್ರಾಯರೇ; ಆದರೆ ತಾರತಮ್ಯವುಂಟು; ಮೊದಲಿಗಳು ಪರಮಾತ್ಮಾನುಭವದಲ್ಲಿ ಹೊಸಬಳು; ಇನ್ನೂ ಭಕ್ತಿ ಅಷ್ಟು ಬೆಳೆದಿಲ್ಲ; ಎರಡನೇಯವಳು ಪರಮಾತ್ಮನನ್ನು ತಾನೊಬ್ಬಳೇ ಅನುಭವಿಸಬೇಕೆನ್ನುವ ಸ್ವಾರ್ಥಪ್ರಿಯೆ ಆದರೆ ಆತ್ಮಗುಣ ಪೂರ್ತಿಯುಳ್ಳ ನಾಯಕಿ; ಮೂರನೇಯವಳು ಕುತೂಹಲಿನೀ, ಪರಮಾತ್ಮನಿಗೆ ತನ್ನಲ್ಲಿ ಪ್ರೀತಿ ಹೆಚ್ಚೋ ಅವನಲ್ಲಿ ತನಗೆ ಪ್ರೀತಿ ಮಿಗಿಲೋ ಎನ್ನುವ ಚಿಂತಾಕ್ರಾಂತೆ; ನಾಲ್ಕನೇಯವಳು ಪರಮಾತ್ಮನು ತನ್ನಲ್ಲಿಗೆ ತಾನೇ ಬರುವನೆನ್ನುವ ವಿಶ್ವಾಸವುಳ್ಳವಳು. . ಇಲ್ಲಿ ಐದನೇಯವಳು ಶ್ರೀಕೃಷ್ಣನು ತನ್ನಲ್ಲಿಗೆ ಬರುವನೆನ್ನುವುದಕ್ಕೆ ಸೂಚನೆಯುಳ್ಳವಳು ಮತ್ತು ತನ್ನ ಪ್ರಯತ್ನವನ್ನೆಲ್ಲಾ ಬಿಟ್ಟು ಸುಖನಿದ್ದೆಯಲ್ಲಿರುವವಳು,

ಭಗವತಿ ಹರೌ ಪಾರಂ ಗಂತುಂ ಭರನ್ಯಸನಂ ಕೃತಂ
ಪರಿಮಿತಸುಖಪ್ರಾಪ್ತ್ಯೈ ಕೃತ್ಯಂ ಪ್ರಹೀಣಮಕೃತ್ಯವತ್ ।
ಭವತಿ ಚ ವಪುರ್ವೃತ್ತಿಃ ಪೂರ್ವಂ ಕೃತೈರ್ನಿಯತಕ್ರಮಾ
ಪರಮಿಹ ವಿಭೋರಾಜ್ಞಾಸೇತುರ್ಬುಧೈಃ ರನುಪಾಲ್ಯತೇ

ರ–ಸಾ; ಕೃ–ಕೃ ಮುಖ ಶ್ಲೋಕ

ಎಂದು ನಿಗಮಾಂತ ದೇಶಿಕರು ಹೇಳಿರುವಂತೆ ಪರಮಾತ್ಮನಲ್ಲಿ ತನ್ನನ್ನು ರಕ್ಷಿಸುವ, ಸುಖಕೊಡುವ ಮತ್ತು ಆನಂದ ಕೊಡುವ ಭಾರವನ್ನು ಸಮರ್ಪಿಸಿ ನಿಶ್ಚಿಂತೆಯಾಗಿರುವಳು; ಇವಳೂ ಹಿಂದಿನ ನಾಲ್ವರಂತೆ ಏಕಾಂತ ಪ್ರಿಯಳು

ನೋತ್ತು ಚುವರ್ಗಂ ಪುಕುಕಿನ್ರ ವಮ್ಮೆನಾಯ್

ವ್ರತಾನುಷ್ಠಾನಮಾಡಿ ಸ್ವರ್ಗಸುಖವನ್ನು ಅಂದರೆ ಕೃಷ್ಣಾನುಭವವನ್ನು ಅನುಭವಿಸಲು ಹೊಕ್ಕಿರುವ ಪೆಣ್‌ಮಣಿಯೇ, ನೀನು ಕೃಷ್ಣಾನುಭವಕ್ಕಾಗಿ ಮಾಡುತ್ತಿರುವ ವ್ರತ ವಿಜಾತೀಯವಾಗಿದೆ.

ಮಾಟ್ರಮುಂ ತಾರಾರೋ ವಾಶಲ್ ತಿರವಾದಾರ್—ಬಾಗಿಲು ಹಾಕಿಕೊಂಡಿರುವೆಯಲ್ಲಾ; ಕೃಷ್ಣನು ಅಲ್ಲಿರುವುದು ನಮಗೆ ತಿಳಿಯದೆಂದಿರುವೆಯೇನು? ಬಾಗಿಲು ತೆಗೆಯಲು ಇಷ್ಟವಿಲ್ಲದಿದ್ದರೆ ಮಾತನ್ನಾದರೂ ಆಡಬಾರದೇ

ಇದಕ್ಕೆ ಒಳಗಿರುವವಳು "ಇಲ್ಲಿ ಕೃಷ್ಣನಿರುವನೆಂದು ನಿಮಗೆ ಹೇಳಿದವರಾರೇ?" ಅದಕ್ಕೆ ಗೋದೆಯು

ನಾತ್ತತ್ತುೞನಯ್ ಮುಡಿ—"ಅವನು ಕಣ್ಣಿಗೆ ಕಾಣದಿದ್ದರೂ ಅವನು ಶಿರಸ್ಸಿನಲ್ಲಿ ಧರಿಸಿರುವ ತುಲಸೀವಾಸನೆಯು ಅವನನ್ನು ತೋರಿಕೊಟ್ಟಿರುವುದು ಕಣೆ" ಅದಕ್ಕೆ ಒಳಗಿರುವಳು "ಇಲ್ಲಿಯವರಿಗೂ ನಿಮ್ಮೊಡನಿದ್ದೆ; ಈಗತಾನೇ ಬಂದು ಸ್ವಲ್ಪ ಮಲಗಿರುವೆನು; ಇಷ್ಟರಲ್ಲಿ ಕೃಷ್ಣನು ಹೇಗೆ ಒಳಗೆ ಬಂದಿರುವನೇ" ಎನ್ನಲಾಗಿ, ಗೋದೆಯು

ನಾರಾಯಣ—"ಅವನು ಎಲ್ಲರಿಗೂ ಕಾಣುವಂತೆ ಬರುವವನೇನೇ? ಸರ್ವವ್ಯಾಪಿಯಾಗಿ ಸರ್ವಕಾರಣ ವಸ್ತುವಾಗಿ ಸರ್ವರಕ್ಷಕನಾಗಿರುವವನಿಗೆ ಯಾವುದು ತಡೆಯೆ? ನಿನ್ನ ಕೋಣೆಗೆ ಬರಲು ಅವನಿಂದ ಸಾಧ್ಯವಿಲ್ಲವೇ" ಎಂದಳು. ಇಲ್ಲಿ ಅತಿ ರಮ್ಯವಾದ ಗೂಢಾರ್ಥವಿದೆ. **ಯೋಗಾನುಭವದಲ್ಲಿರುವವರಿಗೆ ಪರಮಾತ್ಮನು ಬರುವನೆನ್ನುವ ಸೂಚನೆಯು ಧ್ಯಾನದಲ್ಲಿ ದಿವ್ಯ ತುಲಸೀವಾಸನೆಯಿಂದ ತಿಳಿಯುವುದು.** ಶಠಗೋಪರಿಗೆ ಹಾಗೆಯೇ ಆಗಿ ಅವರು

ಬಾಲನಾಯ್ ಏೞ್ ಉಲಕುಂಡು ಪರಿವಿನ್ರಿ
ಅಲಿಲೈಯನ್ನವಶಂ ಕೆಯ್ಯು ಮಣ್ಣಾರ್
ತಾಳಿಣೈ ಮೇಲಣಿ ತಣ್ಣಂ ತುೞನಯೆನ್ರೇ
ಮಾಲುಮಾಲ್ ವಲ್ವಿನೈಯೇ ಪುಡವಲ್ಲಿಯೇ

ಎಂದು ಪ್ರಾರಂಭಿಸಿ, ಹತ್ತು ಪದ್ಯಗಳಲ್ಲಿ ತನ್ನನಾಯಕೀ ಭಾವದಲ್ಲಿ, "ತಣ್ಣಂತುೞನಯ್, ನಾರುಂತುೞನಯ್, ಶೆಂಪೊತುೞನಯ್, ಪೈಂಪೊತುೞನಯ್, ಕೞಲ್‌ತುೞನಯ್" ಎಂದು ತುಲಸೀವಾಸನೆಯನ್ನೇ ನೆನೆದಿರುವರು. ಈ ಹತ್ತು ಪದ್ಯಗಳರ್ಥವನ್ನು ಸಂಗ್ರಹಮಾಡುವಾಗ ನಿಗಮಾಂತದೇಶಿಕರು ತುಲಸೀ ಸಂಬಂದದಿಂದ ಪರಮಾತ್ಮನು ಶಠರಿಪು (ನಮ್ಮಾೞ್ವಾರ್) ಗಳಿಗೆ ಪರಮ ಭೋಗ್ಯವಾಗಿ ಕಂಡನು ಎಂದಿರುವರು

ಶೈತ್ಯಾತ್ಸೌಗಂಧ್ಯಭೂಮ್ನಾ ರುಚಿರುಚಿರತಯಾ
ಪೋಷಣಾದಾಭಿರೂಪ್ಯಾತ್
ಸಂದರ್ಭಾತ್ಪುಷ್ಪಸಂಗಾತ್ ಮುಹಿತತುಲಸಿ
ಕಾಮಾಲಯಾ ಶಂಖತಶ್ಚ
ಚಕ್ರಾಧೀಶಸ್ಯ ಯೋಗಾತ್ ವಟದಳಶಯನಾದ್ಯ
ರ್ಹಣೀಯಾಪದಾನೈಃ
ಸಂಪನ್ನಾನೇಕಭೋಗ್ಯಂ ನಿರವಿಶದಜಿತಂ
ಕೃಷ್ಣಮೂರ್ತಿಂ ಶಠಾರಿಃ ॥ —ದ್ರ–ಉ–ತಾ

ಪರಮಾತ್ಮನ ಯಾವ ಭೋಗ್ಯತೆಯಲ್ಲೂ ತುಲಸೀಗಂಧವೇ ಸೇರಿರುವುದು ಅವನ ನಿರೂಪಿತ ಸ್ವರೂಪ ಗುಣವಿಶೇಷಗಳಲ್ಲಿ ಪ್ರಧಾನ. ಹಲಸಿನ ಹಣ್ಣಿನಂತೆ ತುಲಸೀ ಪರಮಾತ್ಮನ ಭೋಗ್ಯತೆಯನ್ನು ತೋರಿಸುವುದರಲ್ಲಿ; ರುಕ್ಮಿಣೀ ಪರಿಣಯ ಸಂದರ್ಭದಲ್ಲಿ ಶ್ರೀಕೃಷ್ಣನು ತನ್ನನ್ನು ರಕ್ಷಿಸಲು ಬಂದನೆಂದು ಅವಳು ತಿಳಿದಿದ್ದು ಮೊದಲು ತುಲಸೀವಾಸನೆಯಿಂದ ಅನಂತರ ಶಂಖನಾದದಿಂದ, ಶಠಗೋಪರು ತಿಳಿದಂತೆ.

ಊರುಸ್ಸವ್ಯೋ ನಯನಕಮುಲಂ ಭ್ರೂಲತಾ ಚಾಪಿ ತಸ್ಯಾಃ
ಪ್ರಾವೇಪಂತ ಪ್ರಿಯಮನುಗತಂ ಸೂಚಯಂತಿ ಸ್ವವೃತ್ತ್ಯಾ ।
ಆರಾದಾಸೀದಲಘುತುಲಸೀಗಂಧಸೌಮ್ಯಃ ಸಖಾರಃ
ಪ್ರತ್ಯಾಸನ್ನಂ ಮುಹುರುದಚರತ್ಪಾಂಚಜನ್ಯಪ್ರಣಾದಃ

ಎಂದು ನಿಗಮಾಂತದೇಶಿಕರು ಯಾದವಾಭ್ಯುದಯ ಕಾವ್ಯದಲ್ಲಿ (XII, 93) ವರ್ಣಿಸಿರುವರು.

ಗೋದೆಯು "**ನಾತ್ತತ್ತುೞನಯ್‌ಮುಡಿ ನಾರಾಯಣ**" ಎಂದಿರುವುದನ್ನೂ, ಶಠಗೋಪರು "**ತಣ್ಣಂತುೞನಯ್**" ಎಂದು ಕನವರಿಸುತ್ತಿರುವುದನ್ನೂ ನಿಗಮಾಂತದೇಶಿಕರೂ "**ತುಲಸಿಕಾಮಾಲಯಾ ಶಂಖತಶ್ಚ**" ಎಂದು ಸಂಗ್ರಹಿಸಿ

ರುವುದನ್ನೂ ಚೆನ್ನಾಗಿ ಯೋಗಸ್ವರೂಪ ತಿಳಿದವರು ಚಿಂತಿಸಿದರೆ, " ಪರದೇವತೆಯು ಶ್ರುತಿಯ ಮತ್ತು ಸ್ಮೃತಿಯ ಪ್ರಕಾರ ಯಾರಾಗಿರಲಿ, ಶಿವನೋ, ಬ್ರಹ್ಮನೋ, ವಿಷ್ಣುವೋ ಆ ನಾಮದಲ್ಲಿ ಅಷ್ಟು ಪ್ರಾಧಾನ್ಯವಿಡದೆ ಅನುಭವೈಕಶರಣರಾದ ಯೋಗಿಗಳು ಹೇಳುವ ಮಾತೆಂದರೆ " ಯಾವ ಅನುಭವದಲ್ಲಿ ಅಂದರೆ ಯೋಗ ಸಾಕ್ಷಾತ್ಕಾರದಲ್ಲಿ ಮೊದಲು ದಿವ್ಯಗಂಧ ವಾಸನೆ ಅಂದರೆ ತುಲಸೀವಾಸನೆ, ಸರ್ವಸುಗಂಧ ಪುಷ್ಪದೊಡನೆ ಕೂಡಿದ್ದರೂ, ಮೇಲೆದ್ದು ಕಾಣುವ ತುಲಸೀ ಗಂಧ, ಅದಾದಮೇಲೆ ಪ್ರಣವನಾದ ಸಾಕ್ಷಾತ್ಕಾರ ಅದಾದಮೇಲೆ ದಿವ್ಯಮಂಗಳವಿಗ್ರಹ ಸಾಕ್ಷಾತ್ಕಾರ ಇವುಗಳಿಂದ, ಆಪರದೈವವು ತುಲಸೀಮಾಲಾಧರ, ಜಗತ್ತಿನ ಸೃಷ್ಟಿಸ್ಥಿತಿಲಯಕರ್ತಾ, ಈ ಎಲ್ಲಾ ಅರ್ಥವನ್ನೂ ಕೊಡಬಲ್ಲ ಸರ್ವವ್ಯಾಪಕ ವಾಚಕವೆಂದರೆ " ನಾರಾಯಣ " ಎಂದು ಒಪ್ಪಿಯೇ ಒಪ್ಪುವರು." ಪಾತಂಜಲ ಯೋಗಸೂತ್ರವನ್ನು ಅದರಲ್ಲೂ

ಸತ್ವಪುರುಷಯೋ ರತ್ಯಂತಾಸಂಕೀರ್ಣಯೋಃ ಪ್ರತ್ಯಯಾವಿಶೇಷಃ
ಭೋಗಃ ಪರಾರ್ಥಾತ್ ಸ್ವಾರ್ಥಸಂಯಮಾತ್ ಪುರುಷ ಜ್ಞಾನಂ III, 35
ತತಃ ಪ್ರಾತಿಭ ಶ್ರಾವಣ ವೇದನಾ ದರ್ಶನ ಆಸ್ವಾದ ವಾರ್ತಾ ಜಾಯಂತೇ III, 36

ಶ್ರೋತ್ರಾಕಾಶಯೋಃ ಸಂಬಂದ ಸಂಯಮಾತ್ ದಿವ್ಯಂ ಶ್ರೋತ್ರಂ III 41

ಎನ್ನುವ ಮೂರು ಸೂತ್ರಗಳನ್ನು ಗ್ರಂಥ ಕರ್ತೃವು ಬರೆದಿರುವ ಸಂಸ್ಕೃತ ವ್ಯಾಖ್ಯಾನದೊಡನೆ ಅರ್ಥ ಮಾಡಿಕೊಂಡರೆ ಎಲ್ಲಾ ಸಂಶಯವೂ ತೀರುವುದು. III, 36ನೇ ಸೂತ್ರದಲ್ಲಿರುವ " ವಾರ್ತಾ " ಎನ್ನುವಪದಕ್ಕೆ ಈಗ ಇರುವ 18 ವ್ಯಾಖ್ಯಾನಕಾರರೂ " ದಿವ್ಯಗಂಧ " ಎಂದು ಅರ್ಥಮಾಡಿರುವರು. ಯೋಗಿಗಳು ಈ ದಿವ್ಯಗಂಧವು " ತುಲಸೀಗಂಧ " ಎಂದು ನಿಷ್ಕರ್ಷವಾಗಿ ಹೇಳಿರುವರು. ದಿವ್ಯಗಂಧಕ್ಕೆ " ವಾರ್ತಾ " ಎಂದು ಪತಂಜಲಗಳು ಹೆಸರು ಕೊಟ್ಟರಲು ಕಾರಣ ಈ ಗಂಧವು ಪರಮಾತ್ಮಾನುಭವವನ್ನು ಸಂಸಾರಿಗಳಿಗೆ ತೋರಿಸುವ ವಾರ್ತಾಪತ್ರಿಕೆಯಂತಿರುವುದು ಎನ್ನುವ ಅರ್ಥವನ್ನು ಕೊಡುವುದಕ್ಕಾಗಿಯೇ; ಈ ವಿಷಯವು ಸಾಮಾನ್ಯನಿಗೆ ಯೋಗಮರ್ಯಾದೆ ತಿಳಿಯದವರಿಗೆ ಗಹನವಾಗಿರುವುದರಿಂದ ಇಷ್ಟಕ್ಕೆ ಬಿಡಲಾಗಿದೆ. ಆದರೆ ಒಂದು ಮಾತ್ರ ಎಲ್ಲರ ಗಮನದಲ್ಲಿರಬೇಕು. ಗೋದೆಯು **" ನಾತ್ತತ್ತುಳನಯ್‌ಮುಡಿ ನಾರಾಯಣ "** ಎಂದು ಅತಿ ಗಂಭೀರಾರ್ಥವಿಟ್ಟೇ ಹೇಳಿರುವಳು.

ಗೋದೆಯು ಹೇಳಿದ್ದು ಒಳಗಿರುವವಳಿಗೆ ಪ್ರಿಯವಾಗಿ ತೋರಲಿಲ್ಲ. "ಎನ್ನಮ್ಮ, ನಾನು ಕೃಷ್ಣವಿರಹದಲ್ಲಿ ತಪಿಸುತ್ತಾ ಅವನಿಗೆ ಪ್ರಿಯವಾದ ತುಳಸಿಯನ್ನು ಹಿಡಿದು ದುಃಖಿಸುತ್ತಿರುವಲ್ಲಿ ನೀವು ನನ್ನನ್ನು ಪರಿಹಾಸ್ಯ ಮಾಡುತ್ತಿರುವಿರಿ" ಎನ್ನಲಾಗಿ ಗೋದೆಯು

" ನಾತ್ತತ್ತುಳನಯಮುಡಿ ನಾರಾಯಣ

ನಮ್ಮಾಲ್ ಪೋತ್ತ ಪರೈತರುಂ—ನಮ್ಮೆಲ್ಲರಿಂದಲೂ ಸ್ತೋತ್ರ ಮಾಡಲ್ಪಟ್ಟರೆ ನಮ್ಮೆಲ್ಲರ ಇಷ್ಟಾರ್ಥವನ್ನು ಅವನೇ ಪೂರ್ತಿಮಾಡುವ

ಪುಣ್ಣಿಯರ್—ಪುಣ್ಯಪುರುಷ; **ಆಲ್**–ಹಾಗಾದರೆ ಅಂತಹವನಿಂದ

ಪಂಡು ಒರುನಾಳ್—ಹಿಂದೆ ಒಂದು ದಿನ

ಕೂತ್ತತ್ತಿರ್ವಾಯ್ ವೀೞ್ನ್ದ–ಮೃತ್ಯುವಿನ ಬಾಯಿಗೆ ತಾನೇ ಹೋಗಿ ಬಿದ್ದ

ಕುಂಭಕರಣನುಂ ತ್ತೋತ್ತು ಉನಕ್ಕೇ ಪೆರುಂ ತುಯಿಲ್ ತ್ತನ್ದಾನೋ—ಕುಂಭಕರ್ಣನು (ನಿನಗೆ) ಸೋತು ಹೋಗಿ (ಆ ತನ್ನ) ದೀರ್ಘನಿದ್ದೆಯನ್ನು ನಿನಗೆ ಕೊಟ್ಟನೇನು? ಸೋತವನು ಗೆದ್ದವನಿಗೆ ತನಗೆ ಪ್ರಿಯವಾದುದನ್ನು ಕೊಡುವಂತೆ ನಿನಗೆ ಅವನು ನಿದ್ದೆಯನ್ನು ಕೊಟ್ಟನೋ? ಕುಂಭಕರ್ಣನು ಭಾಗವತ; ಆದರೆ ಪ್ರಚ್ಛನ್ನ ಭಾಗವತ; ಸಾವು ಅವನನ್ನು ಅಪ್ಪಲಿಲ್ಲ; ಅಣ್ಣನಾದ ರಾವಣನಿಗೆ ಬುದ್ಧಿವಾದ ಹೇಳಿಯೂ ಅವನು ಕೇಳದಿರಲು, ತಾನೇ ಮೃತ್ಯುವಿನ ಬಾಯಿಗೆ ತಾನೇ ಹೋಗಿ ಬಿದ್ದವನು; ವಿಭೀಷಣ ಅಣ್ಣನನ್ನು ಬಿಟ್ಟು ಶತ್ರುವನ್ನು ಸೇರಿದ್ದು ಅಧರ್ಮವೆಂದು ತಿಳಿದವನಿವನು; ಅಣ್ಣನಿಗಾಗಿ ಸಾಯುವುದೇ ಲೇಸು ಎಂದು ನಿರ್ಧಾರಕ್ಕೆ ಬಂದವನಿವನು; ಅಣ್ಣನಾದ ರಾವಣನಿಗೂ ಸಂತೋಷವಾಗಿ ತನ್ನ ಅಂತರಾತ್ಮಕ್ಕೂ ದ್ರೋಹವೆಸಗದೇ ಇರಬೇಕಾದರೆ ಸಾಯುವುದೇ ಉಪಾಯವೆಂದು ನಿಶ್ಚಯಿಸಿಕೊಂಡವನು. ಅವನ ಕೊನೆಯ ಮಾತುಗಳಿಂದ ಅದೇ ಅರ್ಥ ಬರುತ್ತದೆ.

ನೈತನ್ಮನಸಿ ಕರ್ತವ್ಯಂ ಮಯಿ ಜೀವತಿ ಕಾರ್ಹಿವ।
ತಮಹಂ ನಾಶಯಿಷ್ಯಾಮಿ ಯತ್ಕೃತೇ ಪರಿತಪ್ಯಸೇ ರಾ–ಯು 63–31

ರಾವಣನಿಗೆ ಪ್ರಿಯವಾಗುವ ಈ ಶ್ಲೋಕದರ್ಥವಿದು "ರಾರ್ಜ, ಯಾವ ರಾಮನಿಗಾಗಿ ನೀನು ತಪಿಸುತ್ತಿರುವೆಯೋ (ಯತ್ಕೃತೇ) ಆ ರಾಮನನ್ನು ನಾನು ಧ್ವಂಸಮಾಡುವೆನು"; ಅವನ ಅಂತರಾತ್ಮಕ್ಕೆ ಹಿತವಾದರ್ಥವಿದು " ರಾರ್ಜ, ಇಷ್ಟುಕಾಲವೂ ನಾನು ನಿನಗೆ ಹೇಳಿದ್ದನ್ನು ಮರೆತು ಬಿಡು; ನಾನು ಜೀವಿಸಿರುವವರಿಗೂ ಅದನ್ನು ನೆನೆಯಬೇಡ; ನಿನಗೆ ಅವಿಧೇಯನೆಂದು ನನ್ನ ವಿಷಯದಲ್ಲಿ ತಪಿಸುತ್ತಿರುವೆಯಲ್ಲಾ (ಯತ್ಕೃತೆ) ಅಂತಹ ನಾನು ನನ್ನನ್ನು ನಾನೇ ನಾಶಮಾಡಿಕೊಳ್ಳುವೆನು; ಅನಂತರವಾದರೂ ನೆನೆದುಕೋ"; ಅಂತೆಯೇ

ಮುಂಚ ರಾಮಾದ್ಭಯಂ ರಾರ್ಜ ಹನಿಷ್ಯಾಮಿಾಹ ಸಂಯುಗೇ।
ರಾಘವಂ ಲಕ್ಷಣಂ ಚೈವ ಸುಗ್ರೀವಂ ಚ ಮಹಾಬಲಂ ॥ —50

" ರಾವಣ, ರಾಮನಿಂದ ಭಯವನ್ನು ಬಿಡು; ಅವರೆಲ್ಲರನ್ನು ಕೊಲ್ಲುವೆನು " ಇದು ರಾವಣನಿಗೆ ಪ್ರಿಯವಾದರ್ಥ; ಕುಂಭಕರ್ಣನಿಗೆ ಪ್ರಿಯವಾದುದು " ರಾಮನಿಂದ ಭಯವಿದ್ದೇ ಇದೆ; ಯುದ್ಧದಲ್ಲಿ ಅವನನ್ನು, ಲಕ್ಷಣನನ್ನೂ ಸುಗ್ರೀವನನ್ನೂ ಕೊಲ್ಲುವೆನೆನ್ನುವ ಮಾತನ್ನು ಬಿಡು " ಎಂದು.

ಒಳಗಿರುವವಳಿಗೆ ತನ್ನನ್ನು ಕುಂಭಕರ್ಣನಿಗೆ ಹೋಲಿಸಿದ್ದು ಹಿತವಾಗಲಿಲ್ಲ. ಎಷ್ಟಾದರೂ ಅವನು ಮಹಾಪರಾಧಿ; ಅವನು ತನಗೆ ನಿದ್ದೆಕೊಟ್ಟನೆಂದರೆ ಅವನು ಸಾತ್ವಿಕನೆಂದು ಸೂಚಿಸಿದ್ದು ಇವಳಿಗೆ ಹಿಡಿಸಲಿಲ್ಲ, ಮನಸ್ಸಿನಲ್ಲಿ ಬೇಸರಗೊಂಡು ಹಾಸಿಗೆಯಿಂದೆದ್ದು "ಕೃಷ್ಣ, ಕೃಷ್ಣ, ಇದೇನು; ಇವರೆಲ್ಲರೂ ನನ್ನನ್ನು ಹೀಯಾಳಿಸುವರಲ್ಲಾ ನಿನ್ನಲ್ಲಿ ನನಗೆ ಪ್ರೇಮವಿಲ್ಲವೇ? ನಾನು ತಮೋಗುಣವುಳ್ಳವಳೇ" ಎಂದು ಹೇಳಿಕೊಂಡಿದ್ದನ್ನು ಗೋದೆಯು ಕೇಳಿ "ಏನೆಯಿದು

ಆತ್ತವನಂದಲುಡೈಮಾಯ್—ಎಂತಹ ನಿದ್ದೆಯೇ ನಿನ್ನದು; ಒಳ್ಳೆ ಅನುಕರಣ ಕಣೆ; ಈಗ ಏನೇನೋ ಕನವರಿಸುತ್ತಿರುವೆಯಲ್ಲಾ; ಎದ್ದುಬಾರೆ, ಸಾಕು ನಿನ್ನ ಅಭಿನಯ; ನಿನ್ನ ಸ್ವಸ್ವರೂಪದಲ್ಲಿ ಬಾರೇ; ನೀನಿಲ್ಲದೆ ನಮಗೆ ಎಲ್ಲೀ ಗೌರವ.

ಅರುಂಕಲಮೇ—ನಮ್ಮ ಕೂಟಕ್ಕೆ ನೀನು ಅಲಂಕಾರ ಕಣೆ ಆದ್ದರಿಂದ

ತೇತ್ತಮಾಯ್ವಂದು—ಒಳ್ಳೆ ತಿಳಿವಿನಿಂದ, ಪ್ರಸನ್ನಚಿತ್ತಳಾಗಿ, ಅರಳಿದ ಮುಖವುಳ್ಳವಳಾಗಿ ಬಂದು

ತಿರ—ಬಾಗಿಲು ತೆಗಿ.

ಇಲ್ಲಿ **ಆತ್ತವನಂದಲ್** ಎನ್ನುವುದಕ್ಕೆ **ಅಶಾಂತಿಯೆಂದರ್ಥ** ಮಾಡುವುದುಂಟು; ಗೋದೆಯ ಪರಿಹಾಸ್ಯಮಾತಿನಿಂದ ನೊಂದವಳಾಗಿ ತನ್ನ ಮುಖದಲ್ಲಿ ಆ ನೋವನ್ನು ತೋರಿಸಿದಳು. ಅದನ್ನು ಕಂಡು "ಆತ್ತವನಂದಲುಡೈಯಾಯ್" ಎಂದು ಗೋದೆಯು ಹೇಳಿ ಅವಳನ್ನು ತೃಪ್ತಿಪಡಿಸುವುದಕ್ಕಾಗಿ "ಅರುಂಕಲಮೆ" ಎಂದಳು ಮತ್ತು ಹೇಳಿದಳು "**ತೇತ್ತಮಾಯ್ ವಂದು ತಿರ**"—"ಗೋಪಿ, ನಿನಗೆ ನಾವು ಹೇಳಿಕೊಡಬೇಕೆ? ನಿನಗೆ ತಿಳಿಯದೇ? ನೆನೆಸಿಕೋ

ಸಂಕಲ್ಪಾದೇವ ಭಗವಾ ತತ್ವತೋ ಭಾವಿತಾತ್ಮನಾಂ।
ವೃತ್ತಾಂತಮುಖಿಲಂ ಕಾಲಂ ಸೇಚಯತ್ಯಮೃತೇನ ತು॥

ಎನ್ನುವ ಆರ್ಷೇಯ ಮಾತನ್ನು ನೆನಪಿನಲ್ಲಿಡು–ಎದ್ದುಬಾ, ಬಾಗಿಲು ತೆಗಿ" ಎಂದು.

ಇಲ್ಲಿ ಅಶಾಂತಿ ಎನ್ನುವ ಪದವನ್ನು ಶಾಸ್ತ್ರಮರ್ಯಾದೆಯಿಂದ ಅರ್ಥಮಾಡಿಕೊಳ್ಳಬೇಕು. ಭಗವದನುಭವದಲ್ಲಿ ಪಳಗಿಲ್ಲದವಳಿವಳೆನ್ನುವುದನ್ನು ಮರೆಯಕೂಡದು. ಇವಳ ಲಕ್ಷಣಕ್ಕೆ ಹೋಲುವ ಒಂದು ನಿದರ್ಶನವು ಉಪನಿಷತ್ತಿನಲ್ಲಿದೆ. ಜಾನಶ್ರುತಿ ಎನ್ನುವ ಧೊರೆ; ತಾನು ಪರಮಾತ್ಮನನ್ನು ಚೆನ್ನಾಗಿ ತಿಳಿದವನೆನ್ನುವ ಅಭಿಮಾನಿ; ಇವನು ಶಾಂತಚಿತ್ತನಾಗಿ ತನ್ನ ಅರಮನೆಯ ಬಿಸಿಲು ಉಪ್ಪರಿಗೆ ಮೇಲೆ ಧ್ಯಾನಚಿತ್ತನಾಗಿ ವಿಶ್ರಮಿಸುತ್ತಿರಲು, ಇಬ್ಬರು ಋಷಿಗಳು ಇವನಲ್ಲಿ ಕರುಣೆಯಿಟ್ಟು, ಹಂಸರೂಪವನ್ನು ತಾಳಿ ಇವನ ತಲೆಯಮೇಲೆ ಹಾರಿಹೋಗುತ್ತಾ ಸಂವಾದದಲ್ಲಿ ತೊಡಗಿದರು. ಒಬ್ಬ—ಮಿತ್ರ, ಆ ಧೊರೆಯಮೇಲೆ ಹಾದು ಹೋಗಬೇಡ ಅವನು ಮಹಾಜ್ಞಾನಿ; ಅವನ ತೇಜಸ್ಸಿನಿಂದ ಸುಟ್ಟುಹೋದೀಯೆ. ಮತ್ತೊಬ್ಬ—ಏನು ಹೇಳುತ್ತೀಯೆ

ನೀನು? ಇವನು ಯಾವ ಜ್ಞಾನಿ? ಇವನಿಗೆ ಏನೂ ತಿಳಿಯದೇ ತಿಳಿದವನೆನ್ನುವ ಅಭಿಮಾನವಿದೆ ಅಷ್ಟೆ; ರೈಕ್ವರೆನ್ನುವ ಮಹಾತ್ಮನಲ್ಲಿಗೆ ಹೋಗಿ ಇವನು ತಿಳಿಯಬೇಕಾದ್ದಿದೆ. ನಮಗ್ಯಾಕೆ ಈ ವಿಷಯ; ನಡೆ ನಾವು ಹೋಗೋಣ.

ಈ ಸಂವಾದವು ರಾಜನ ಕಿವಿಗೆ ಬಿತ್ತು; ಶಾಂತವಾಗಿದ್ದ ಮನಸ್ಸು ಕಲಕಿತು. ಅಶಾಂತವಾಯಿತು; ರೈಕ್ವರನ್ನು ಪತ್ತೆಹಚ್ಚಿ ಅವರಿಂದ ಪರಮಾತ್ಮ ಸ್ವರೂಪವನ್ನು ತಿಳಿದಮೇಲೆ ಮನಸ್ಸು ಶಾಂತವಾಯಿತು. ಇದಕ್ಕೆ ಸಂವರ್ಗವಿದ್ಯೆ ಎಂದು ಹೆಸರು.

ಹೀಗೆ ಒಳಗಿರುವ ಗೋಪಿಯು ಶಾಂತಚಿತ್ತಳಾಗಿದ್ದಳು; ಗೋದೆಯ ಮಾತುಗಳಿಂದ ಮನಸ್ಸು ಕಲಕಿತು; ತತ್ವಾರ್ಥವನ್ನು ಗೋದೆಯು ಜ್ಞಾಪಿಸಿ "**ತೇತ್ತ ಮಾಯ್ ವಂದು ತಿರ**" ಎಂದಮೇಲೆ ಅವಳು ಪ್ರಸನ್ನಳಾಗಿ ಕೂಟವನ್ನು ಕೂಡಿಕೊಂಡಳು.

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮುನೀಷಿಭಿಃ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಸ್ತದಾ॥

ಎನ್ನುವ ಇತಿಹಾಸ ಸಮುಚ್ಚಯದ ಮಾತಿನಂತೆ, ಯಾರ ಮನಸ್ಸು ಯಾವಾಗಲೂ ಯಾವ ಪ್ರಚೋದನೆ ಬಂದರೂ, ಯಾವ ವಾದದಲ್ಲಿ ಸೇರಿದರೂ, ಶಾಂತವಾಗಿಯೇ ಇರುವುದೋ (**ಯಸ್ಯ ಮನಃ ಸದಾ ಶಾಂತಂ**), ಅವನೇ ಶಾಸ್ತ್ರಜ್ಞ. ಏಕಾಂತವಾಸದಲ್ಲಿ ಅಲ್ಪಜ್ಞನಿಗೂ ಒಂದು ವಿಧವಾದ ಶಾಂತಿ ಇರುತ್ತದೆ. ಮತ್ತೊಬ್ಬರೊಡನೆ ಕಲೆತು ಚರ್ಚೆಯಲ್ಲಿ ಸಿಕ್ಕರೆ ಆ ಶಾಂತಿಯು ನಾಶವಾಗುವುದು. ಇದು ಲೋಕಾನುಭವ.

ವೇದಾಂತ ವಿಷಯದಲ್ಲಿ ನಾನಾ ಪರ್ವದಲ್ಲಿ ಬರುವ ಶಾಂತಿಯನ್ನು ಭಗವದ್ಗೀತೆಯು ವಿಮರ್ಶಿಸಿ ಹೇಳಿದೆ.

ಆಪೂರ್ಯಮಾಣ ಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್।
ತದ್ವತ್ ಕಾಮಾಃ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ॥ ಗೀತೆ II

ಎಂದು ಸಾಂಖ್ಯಯೋಗಿಗೆ ಬರುವ ಶಾಂತಿಯೇ ಬೇರೆ.

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ।
ನ ಚಾಭಾವಯತಃ ಶಾಂತಿಃ ಅಶಾಂತಸ್ಯ ಕುತಸ್ಸುಖಂ॥ ಗೀತೆ II

ಎಂದು, ಪರಮಾತ್ಮನನ್ನು ಅವಲಂಬಿಸಿ ಆತ್ಮಚಿಂತನೆ ಮಾಡುವವನಿಗೆ ಬರುವ ಶಾಂತಿ ಬೇರೆ;

ಭೋಕ್ತಾರಂ ಯಜ್ಞತಪಸಾಂ ಸರ್ವಭೂತಮಹೇಶ್ವರಂ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ॥ V

ಎಂದು ಪರಮಾತ್ಮನನ್ನು ಜಗತ್ತಿನ ನಿಮಿತ್ತಕಾರಣನೆಂದು ಮಾತ್ರ ತಿಳಿದು ಅವನ ಸ್ವಾಮಿತ್ವದಲ್ಲಿ ವಿಶ್ವಾಸವಿಟ್ಟು ಅವನ ತೃಪ್ತಿಗಾಗಿ ಯಜ್ಞಾದಿಗಳನ್ನು ಮಾಡುವುದರಿಂದ ಬರುವ ಶಾಂತಿಯೇ ಬೇರೆ;

ಯುಂಜನ್ನೇವಂ ಸದಾತ್ಮಾನಂ ಯೋಗಿ ನಿಯತ ಮಾನಸಃ ।
ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮದಿಗಚ್ಛತಿ ॥

ಎಂದು, ಶರೀರ ಭಿನ್ನನಾದ ತನ್ನನ್ನು ನೋಡಿಕೊಳ್ಳುವ ಯೋಗದಿಂದ ಬರುವ ಶಾಂತಿಯೇ ಬೇರೆ. **ಶಾಂತಿ** ಎಂದರೆ ಅಭಾವಾತ್ಮಕವಾದ ಮನಸ್ಸಿನ ನೆಮ್ಮದಿ ಅಂದರೆ ದುಃಖವಿಲ್ಲದೇ ಇರುವುದು. ಇದನ್ನು ಅನುಭವವೆಂದು ಹೇಳುವುದೇ ಸರಿಯಲ್ಲ. ಜ್ಞಾನದಲ್ಲಿ ತುದಿ ಮುಟ್ಟಿದಾಗ ಬರುವ ಮನಸ್ಸಿನ ಸಮಾಧಾನವಿದು. ಅಜ್ಞಾನದಿಂದಲೋ, ಬುದ್ಧಿಗೆ ತಾಗದೆಯೋ, ಹಠದಿಂದಲೋ, ದಂಭ ದರ್ಪದಿಂದಲೋ ಜ್ಞಾನದ ತುದಿ ಮುಟ್ಟಿದೆವೆಂದು ತಿಳಿದಾಗ ಬರುವ ಒಂದು ನಿಷ್ಕೃತಿ. ಇದನ್ನು ಆಂಗ್ಲಭಾಷೆಯಲ್ಲಿ ಡಾಗ್ಮಾ (dogma) ಫಾನಾಟಿಸಿಸಂ (fanaticism) ಎನ್ನುವ ಪದಗಳಿಂದ ಅರ್ಥಮಾಡಿಕೊಳ್ಳಬಹುದು. ಅಹಂಕಾರ ಮಮಕಾರವು ನಮ್ಮಲ್ಲಿ ತಾಂಡವವಾಡುವವರಿಗೂ ಇಂತಹ ನಾನಾಪರ್ವದಲ್ಲಿರುವ ಶಾಂತಿಯೇ ವೇದಾಂತದ ಪರಮ ಪ್ರಯೋಜನ. ಆದರೆ ಅಹಂಕಾರ ಮಮಕಾರ ಬಿಟ್ಟು ಪರಮಾತ್ಮನನ್ನು ಜಗತ್ತಿನ ಉಪಾದಾನ ಕಾರಣನೂ ಮತ್ತು ನಿಮಿತ್ತಕಾರಣನೂ ಎಂದು ತಿಳಿದು, ಚಿಂತಿಸಿ, ಅನುಸಂಧಾನ ಮಾಡಿ, ಅದರ ಫಲವಾಗಿ ಅವನಲ್ಲಿ ಶರಣುಹೋದರೆ ಅದರಿಂದ ಬರುವುದು ಶಾಂತಿಯಂತೆ ಕಂಡರೂ ಅದು ಶಾಂತಿಯಲ್ಲ; ಅದು ಅಭಯ ಜ್ಞಾನ; ಯಾವುದಕ್ಕೂ ಜಗ್ಗದ ಮನಸ್ಸಿನ ಧೈರ್ಯ ಮತ್ತು ಪ್ರಶಾಂತತೆ. ಇದರೊಡನೆ ಮನಸ್ಸಿದಲ್ಲಿ ಬಂದು ಅಲೌಕಿಕ ಆನಂದವೂ ಅನುಭವರೂಪದಲ್ಲಿ ನಿಲ್ಲುವುದು.

ಒಳಗಿರುವ ಗೋಪಿಗೆ ಮೊದಲು ಈ ತೆರನಾದ ಆನಂದವಿರಲಿಲ್ಲ. ಅದಕ್ಕಾಗಿಯೇ ಗೋದೆಯು ಅವಳನ್ನು "ಆತ್ತವನಂದಲುಡೈಯಾಯ್" ಎಂದು ಕರೆದಿದ್ದು; ಆದರೆ ಆ ಗೋಪಿಯು ಎಲ್ಲವನ್ನೂ ತಿಳಿದಿದ್ದವಳು; ತಿಳಿದಿದ್ದೂ ಮರೆತಿದ್ದಳು; ಆದ್ದರಿಂದ **"ಅರುಂಕಲಮೇ, ತೇತ್ತಮಾಯ್ ವಂದು ತಿರ"** ಎಂದು ಗೋದೆಯು ಅವಳಿಗೆ ಹೇಳಿದಳು. ಹೀಗಿರದಿದ್ದರೆ ಅವಳನ್ನು ಎಬ್ಬಿಸುವ ಪ್ರಸಂಗವೇ ಬರುತ್ತಿರಲಿಲ್ಲ.

ಯಸ್ತ್ವಯಾ ಸಹ ಸಸ್ವರ್ಗಃ ನಿರಯೋ ಯಸ್ತ್ವಯಾ ವಿನಾ ।
ಇತಿ ಜಾನ್ನ ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ ॥

—ರಾ–ಅಯೊ 30–18

ಎಂದು ಸೀತೆಯು ರಾಮನಿಗೆ ವನಕ್ಕೆ ಹೋಗುವುದಕ್ಕೆ ಮುಂಚೆ ಹೇಳಿದಂತೆ ಇದ್ದು, ಗೋದೆಯ ಧ್ವನಿಕೇಳುತ್ತಲೇ ಹೊರಗೆ ಬರುತ್ತಿದ್ದಳು—

ಸ್ವಾಪದೇಶ

ಹಿಂದಿನ ಪದ್ಯದಲ್ಲಿ ಆತ್ಮಗುಣದಿಂದ ಬೆಳಗುವ ಭಾಗವತನನ್ನು ಎಬ್ಬಿಸಿ ತಮ್ಮ ಕೂಟಕ್ಕೆ ಸೇರಿಸಿಕೊಂಡಾಯಿತು; ಹೀಗೆ ಆತ್ಮಗುಣ ಭೂಷಿತನಾಗಿದ್ದೂ ಆಚಾರ್ಯ ಕೃಪೆಯೊಂದರಿಂದಲೇ ಭಗವಂತನು ಸುಲಭವಾಗಿ ಸಿಗುವುನೆಂದು ತಿಳಿಯದೇ ಏಕಾಂತವನ್ನೇ ಹಂಬಲಿಸಿ, ಯೋಗ ದೆಶೆಯಲ್ಲಿ ಇರಲಪೇಕ್ಷಿಸುವ ಭಾಗವತನನ್ನು ಎಬ್ಬಿಸುವ ಪಾಶುರವಿದು.

ನೋತ್ತು—ಯೋಗವನ್ನುಮಾಡಿ, ಮೂಲಮಂತ್ರದಲ್ಲಿ ತನ್ನ ಬಿಂಬವನ್ನು ನೋಡಿಕೊಂಡು ತೃಪ್ತನಾಗಿ

ಸುವರ್ಗಂ . . . ನಾಯ್—ಆತ್ಮಾವಲೋಕನದಿಂದ ಶೇಷಭಾವವನ್ನು ಹೊಂದಿ, ಬ್ರಹ್ಮಾತ್ಮಕಸ್ವಾತ್ಮಾನುಸಂಧಾನದಿಂದ, ಅಂದರೆ ಆತ್ಮವಾದ ನಾನು ಪರಮಾತ್ಮನ ಸೊತ್ತು ಎನ್ನುವ ಭಾವಪೂರ್ತಿಯಿಂದ ಆತ್ಮಸಾಕ್ಷಾತ್ಕಾರ ಪಡೆದಿರುವ ಮಹಿಮನೇ,

ಮಾತ್ತವಂ . . . ತಿರವಾದಾರ್—ನಿನ್ನ ಹೃದಯವನ್ನು ಬಿಚ್ಚಿ ತೋರಿಸಲಾಗದಿದ್ದರೆ ನಿನ್ನ ಅನುಭವವನ್ನು ಯಥಾಶಕ್ತಿ ಮಾತುಗಳಿಂದಲಾದರೂ ಹೇಳಬಾರದೇ; ಇದೇನು ಮೌನ; ಇದು ಕೃತಾರ್ಥಭಾವವೆಂದು ತಿಳಿದಿರುವೆಯಾ?

ನಾತ್ತ . . . ಪೋತ್ತ—**"ಜ್ಞಾನೀತ್ವಾತ್ಮೈವ ಮೇ ಮತಂ"** ಎಂದು ಭಗವಂತನೇ ಹೇಳಿಕೊಂಡಿರುವಂತೆ ಅವನೇ ನಮ್ಮ ಆಚಾರ್ಯನಾಗಿ ಬಂದಿರುವಲ್ಲಿ ನಾವು ಅವನನ್ನು ಸ್ತೋತ್ರಮಾಡಿದರೆ

ಪರ್ಯಿತರಂ ಪುಣ್ಣಿರ್ಯ—(ನಮ್ಮ) (ಸಕಲ) ಸೌಭಾಗ್ಯವನ್ನು ಆ ಪುಣ್ಯ ಪುರುಷನೇ ಕೊಡುವನು.

ಆಲ್—ಅವನಿಂದ

ಪಂಡೊರುನಾಳ್—ಹಿಂದೆ ಒಂದು ದಿನ

ಕೂತ್ತತ್ತಿ ನಾಯ್ ವೀೞ್ನ್ದ—ಯಮನ ದಿಕ್ಕಾದ ದಕ್ಷಿಣಕ್ಕೆ ಬಂದಿಳಿದ

ಕುಂಭಕರಣನುಂ—ಕುಂಭಯೋನಿಯಾದ ಅಗಸ್ತ್ಯನು

ತೋತ್ತು—ಸೋಲಿಸಲ್ಪಟ್ಟು

ಉನಕ್ಕೇ . . . ತಂದಾನೋ—ನಿನಗೆ ಒಳ್ಳೆ ಉಪಾಸನೆಯನ್ನು ಹೇಳಿಕೊಟ್ಟಿರುವನೋ? ಹಾಗಿಲ್ಲದಿದ್ದರೆ ಈ ಮೌನವೇಕೆ?

ಅತ್ತ . . . ಯಾಯ್—ಹೀಗಿರುವುದು ನಿನ್ನ ಮೋಹ

ಅರುಂಕಲಮೇ—ಹಾಗಿದ್ದರೂ ನೀನು ನಮ್ಮ ಕೂಟಕ್ಕೆ ಭೂಷಣವಾದವನು;

ತೇತ್ತಮಾಯ್ ವಂದು ತಿರ—ನಿನ್ನ ಧ್ಯಾನದಿಂದ ಹೊರಬಂದು ಅಥವಾ ನಿನ್ನ ಯೋಗದೆಶೆಗೂ ವ್ಯುತ್ಥಾನದೆಶೆಗೂ (ಟಿಪ್ಪಣಿ 21) ವ್ಯತ್ಯಾಸವಿಲ್ಲದಂತಿರುವ

ನಾಗಿ, ನಿನ್ನ ಬಾಹ್ಯದಲ್ಲೇ ಎಲ್ಲಾ ಬ್ರಹ್ಮಾನಂದವನ್ನು ಹೊಂದಲು, ಮನಬಿಚ್ಚಿ ಮಾತನಾಡು; ಎದ್ದು ಬಾ;

ಅಗಸ್ತ್ಯರು ವಿಂಧ್ಯಪರ್ವತವನ್ನು ದಾಟಿ ದಕ್ಷಿಣಕ್ಕೆ ಬಂದು ತಮಿಳು ಭಾಷೆಯನ್ನು ಪ್ರಚಾರಕ್ಕೆ ತಂದರೆಂದು ನಿಗಮಾಂತದೇಶಿಕರು

ವಿಂಧ್ಯಸ್ತಂಭಾದಭಿಹತಗತೇರ್ವಿಶ್ವಮಾಚಾಂತಸಿಂಧೋಃ ।
ಕುಂಭೀಸೂನೋರಸುರಕಬಳಗ್ರಾಸಿನಃ ಸ್ವೈರಭಾಷಾ ॥

ಎಂದು ಪಾದುಕಾಸಹಸ್ರದಲ್ಲಿ (ಸಮಾಖ್ಯಾ ಪದ್ಧತಿ) ಹೇಳಿರುವರು. ವಿಂಧ್ಯ ಪರ್ವತವೂ ಮೇಲು ಮೇಲೆ ಬೆಳೆಯುತ್ತಲೇ ಇತ್ತು. ಅದನ್ನು ತಡೆಗಟ್ಟಿ ಅಗಸ್ತ್ಯರು ದಕ್ಷಿಣದಿಕ್ಕಿಗೆ ಬಂದು "ನಾನು ಮತ್ತೆ ಬರುವವರಿಗೂ ನೀನು ಬೆಳೆಯುತ್ತಾ ಹೋಗಬೇಡ" ಎಂದು ಹೇಳಿ, ಈ ದಕ್ಷಿಣದಿಕ್ಕಿನಲ್ಲಿ ದ್ರಾವಿಡ ಭಾಷೆಗಳಿಗೆ ಮೂಲ ಭಾಷೆಯಾದ ತಮಿಳನ್ನು ಪ್ರಚಾರಕ್ಕೆ ತಂದರು. ಮತ್ತು ಇಲ್ಲಿಯೇ ಉಳಿದರು. ಸಮುದ್ರವನ್ನು ಆಪೋಶನೆ ಮಾಡಿದ ಮಹಾತ್ಮ ಇವರು. ಇಲ್ವಲ ವಾತಾಪಿ ಎನ್ನುವ ರಾಕ್ಷಸರ ಸಂಚಿನಲ್ಲಿ ಸಿಕ್ಕಿ, ಇಲ್ವಲ ಪಿತೃಶ್ರಾದ್ಧ ವ್ಯಾಜದಲ್ಲಿ ಮೇಕೆ ಮಾಂಸ ರೂಪದಲ್ಲಿ ಹೊಟ್ಟೆಯೊಳಗೆ ಇದ್ದಾಗ "ವಾತಾಪೇ ಆಗಚ್ಛ" ಎಂದು ಇಲ್ವಲನು ಕರೆದಾಗ, ಈ ಸಂಚನ್ನು ಮನಗಂಡು "ವಾತಾಪೇ, ಜೀರ್ಣೋಭವ" ಎಂದು ಅಸುರನನ್ನು ಕಬಳವನ್ನಾಗಿಸಿದ ಮಹಿಮವಂತ. ಅವನಿಂದ ಉಪಾಸನೆಯನ್ನು ಕಲಿತ ಶಿಷ್ಯನು ಇಲ್ಲಿ ಎಬ್ಬಿಸಲ್ಪಟ್ಟಿರುವನೆನ್ನುವುದರಿಂದ, ಈ ಶಿಷ್ಯ, ಸಂಸ್ಕೃತ ವೇದಾಂತದಲ್ಲಲ್ಲದೆ ತಮಿಳು ವೇದಾಂತದಲ್ಲೂ ಪ್ರವೀಣನೆಂದು ಹೇಳಿದಂತಾಯಿತು.

"ಮಾಟ್ರಮುಂ ತಾರಾರೋ ವಾಶಲ್ ತಿರವಾದಾರ್" ಎನ್ನುವ ಮಾತಿನಿಂದ ಕೃತಾರ್ಥಭಾವವು ಪರಮವೇದಾಂತಿಯಲ್ಲಿ ಮೌನವಾಗಿ ತೋರುತ್ತದೆ ಎನ್ನುವುದನ್ನು ಅಲ್ಲಗಳೆದಿರುವಳು ಗೋದೆ. ವೇದಾಂತಾನುಭವದಲ್ಲಿ **"ಕೃತಕೃತ್ಯಭಾವ, ಕೃತಾರ್ಥಭಾವ"** ವೆನ್ನುವ ಎರಡು ಭಾವಗಳು ತುಂಬಿರಬೇಕು. (18ನೇ ಟಿಪ್ಪಣಿ ನೋಡಿ) ಮೋಕ್ಷಕ್ಕಾಗಿ ನಾವು ಮಾಡಬೇಕಾದದ್ದನ್ನು ಮಾಡಿಯಾಯಿತೆನ್ನುವ ಭಾವ ಕೃತಕೃತ್ಯಭಾವ; ಈ ಭಾವ ಬಂದಮೇಲೆ "ನಮಗೆ ಆಗಬೇಕಾದದ್ದೆಲ್ಲವೂ ಆಯಿತು; ಶಾಂತಿ ನೆಲೆಸಿತು; ಆನಂದವು ತಲೆದೋರಿತು; ಮೋಕ್ಷದ ಸವಿಯನ್ನು ಕಂಡಾಯಿತು" ಎನ್ನುವ ಭಾವ ಕೃತಾರ್ಥಭಾವ. ಯೋಗಸಂಪ್ರದಾಯದಂತೆ ಕೃತಕೃತ್ಯಭಾವಕ್ಕೆ ಕಾರ್ಯವಿಮುಕ್ತಿಭಾವವೆಂದೂ, ಕೃತಾರ್ಥಭಾವಕ್ಕೆ ಚಿತ್ತವಿಮುಕ್ತಿಭಾವವೆಂದೂ ಹೇಳಲಾಗಿದೆ. ಈ ಎರಡು ಭಾವಗಳನ್ನು ಕೂಡಿಸಿ ಪತಂಜಲಿ ಋಷಿಗಳು "ತತ್ರ ಸಪ್ತಧಾಪ್ರಾಂತ ಭೂಮಿಃ" ಎಂದು ಸೂತ್ರರೂಪದಲ್ಲಿ ಕೊಟ್ಟಿರುವರು. ಇಲ್ಲಿಗೆ ಎರಡನೇ ಘಟ್ಟವು ಪೂರ್ತಿಗೊಂಡಿದೆ.

॥ ಶ್ರೀಮತೇ ಮಹಾಪೂರ್ಣಾಯ ನಮಃ ॥

ಭಾಗ ೩

ಆತ್ಮಾಭಿಮಾನಾನುಗುಣಪುರುಷಾರ್ಥವ್ಯವಸ್ಥಯಾ ।
ಭಗವತ್ಪಾರತಂತ್ರ್ಯಾದಿಃ ಪ್ರಬುದ್ಧಸ್ಯ ಸುಖಾಯತೇ ॥

ಎಂದು ನಿಗಮಾಂತದೇಶಿಕರು ಭಗವದ್ರಾಮಾನುಜರ ಶರಣಾಗತಿ ಗದ್ಯ ವ್ಯಾಖ್ಯಾನದಲ್ಲಿ ಹೇಳಿರುವಂತೆ ಆತ್ಮವಾವುದು ಎನ್ನುವ ಜ್ಞಾನದೀಪ್ತಿ ಪರ್ವದಲ್ಲಿ ಅಭಿಮಾನವು ಎಲ್ಲಿ ನಿಲ್ಲುವುದೋ ಅದೇ ಆಯಾ ಅಧಿಕಾರಿಗೆ ಪುರುಷಾರ್ಥವಾಗುತ್ತದೆ. ಜೀವನು ಶರೀರ ಭಿನ್ನ; ಪರಮಾತ್ಮನಿಗೆ ಶೇಷಭೂತನು; ಇವನದೂ ಯಾವದೂ ಇಲ್ಲ ಎನ್ನುವ ಪ್ರಬುದ್ಧನಿಗೆ "ಭಗವಂತನಿಗೆ ನಾನು ಎಲ್ಲಾ ವಿಧದಲ್ಲೂ ಪರತಂತ್ರನು" ಎನ್ನುವ ಭಾವವು ಆನಂದಮಯವಾಗಿರುತ್ತದೆ. ಇದಕ್ಕೆ ಮೇಲ್ಪಟ್ಟ ಭಾವವಾವುದೂ ಇಲ್ಲ.

ಈ ವೇದಾಂತದೃಷ್ಟಿಯಿಂದ ನೋಡಿದರೆ 9 ನೇ ಪದ್ಯದಲ್ಲಿ ಎಬ್ಬಿಸಲ್ಪಟ್ಟ ಕನ್ಯೆ **ಐಹಿಕಫಲಾಪೇಕ್ಷಿಣಿ**; 10 ನೇ ಪದ್ಯದಲ್ಲಿ ಕರೆಯಲ್ಪಡುವಳು ಆಮುಷ್ಮಿಕ ಫಲಾಕಾಂಕ್ಷಿಣಿ; ಇಬ್ಬರಲ್ಲಿಯೂ ಆತ್ಮನು ಶರೀರಭಿನ್ನವೆನ್ನುವ ಜ್ಞಾನ ತಿಳಿವಿದ್ದರೂ ಭಗವತ್ಪಾರತಂತ್ರ್ಯಭಾವವು ಮೂಡಿಬಂದಿಲ್ಲ; ಇಬ್ಬರಿಗೂ ನಶ್ವರಸುಖಾಪೇಕ್ಷೆಯು ಬಿಟ್ಟಿಲ್ಲ; 6 ನೇ ಪದ್ಯದ ಕನ್ನಿಕೆಯಂತೂ ಭಗವದನುಭವಕ್ಕೆ ಹೊಸಬಳು; 7 ನೇ ಪದ್ಯದವಳು ಇವಳಿಗಿಂತ ಮೇಲಿನವಳಾದರೂ ಪರಮಾತ್ಮಾನುಭವದಲ್ಲಿ ಸ್ವಾಭಿಮಾನವನ್ನು ಬಿಟ್ಟಿಲ್ಲದವಳು; 8 ನೇ ಪದ್ಯದಲ್ಲಿ ಎಬ್ಬಿಸಲ್ಪಡುವಳಂತೂ ಪರಮಾತ್ಮನನ್ನು ಪರೀಕ್ಷೆಮಾಡುವ ಮನೋ ಧರ್ಮವುಳ್ಳವಳು. ಅಂತೂ 6 ರಿಂದ 10 ನೇ ಪದ್ಯದಲ್ಲಿಯವರಿಗೂ ಎಬ್ಬಿಸಲ್ಪಟ್ಟ ಐದು ಕನ್ಯೆಯರು ಒಂದಲ್ಲ ಒಂದು ವಿಧದಲ್ಲಿ ಸ್ವಾತ್ಮಾಭಿಮಾನ ಬಿಡದವರು; ಇವರೆಲ್ಲರೂ ತಮ್ಮ ತಮ್ಮ ಅಂತಃಪುರದಲ್ಲಿ ಮಲಗಿರಲು ಗೋದೆಯು ಹೊರಗಿಂದ ಎಬ್ಬಿಸಬೇಕಾಯಿತು.

ಆದರೆ 11 ರಿಂದ ಐದು ಪದ್ಯಗಳಲ್ಲಿ ಎಬ್ಬಿಸಲ್ಪಡುವರು ಮೊದಲಿನ ಐದು ಗೋಪಿಯರಿಗಿಂತಲೂ ಶ್ರೀಕೃಷ್ಣನಿಗೆ ಪ್ರಿಯರು; ಪರಿಶುದ್ಧರು; ಇವರೆಲ್ಲರನ್ನೂ ಗೋದೆಯು ಮನೆಯ ಹೊರಗಿನ ಪ್ರಾಕಾರವನ್ನು ಹೊಕ್ಕು ಎಬ್ಬಿಸುವಳು; ಆದ್ದರಿಂದ ಈ ಐದು ಪದ್ಯಗಳು ಒಟ್ಟುಗೂಡಿ ಭಿನ್ನವಾಗಿವೆ.

ಕಟ್ರುಕ್ಕರವೈಕಣಂಗಳ್ ಪಲ ಕರಂದು
ಶೆಟ್ರಾರ್ತಿರಲ್ಗಳೈ ಚ್ಚೆನ್ರು ಶೆರುಚ್ಚೆಯುಂ
ಕುಟ್ರಮೊನ್ರಿಲ್ಲಾದ ಕೋವಲರ್‌ತಂ ಪೊರ್ಕೊಡಿಯೇ
ಪುಟ್ರರವಲ್‌ಕುಲ್ ಪುನಮಯಿಲೇ ಪೋದರಾಯ್
ಶುಟ್ರತ್ತು ತೋಳ್ಗಳಿವರೆಲ್ಲಾರುಂ ವಂದು ನಿ
ಮುಟ್ರಂ ಪುಕುಂದು ಮುಕಿಲ್‌ವಣ್ಣ ಪೇರ್ ಪಾಡ
ಶಿಟ್ರಾದೇ ಪೇಶಾದೇ ಶೆಲ್ವಪ್ಪೆಂಡಾಟ್ಟಿ ನೀ
ಎಟ್ರುಕ್ಕುರುಂಗುಂ ಪೊರುಳ್ ಏಲೋರೆಂಪಾವಾಯ್ ॥ ೧೧ ॥

ಕಟ್ರು . . . ಕಣಂಗಳ್—ಕರುಗಳನ್ನು ಹಾಕಿ ಹಾಲುಕರೆಯಿಸಿಕೊಳ್ಳುವ ಗೋ ಸಮೂಹಗಳು; ಭಗವಂತನ ಗುಣಗಳಿಗೂ, ಅವನ ಅವತಾರಗಳಿಗೂ, ನಮ್ಮ ಜನ್ಮಗಳಿಗೂ ಕೊನೆಯಿಲ್ಲದಂತೆ ಗೋಕುಲದ ಗೋಸಂಖ್ಯೆಗೆ ಕೊನೆಯಿರಲಿಲ್ಲ. ಯಾವ ಗೋಪಾಲನು ಹೆಚ್ಚು ಹಾಲನ್ನು ಹೆಚ್ಚು ಹಸುಗಳಿಂದ ಕರೆಯುತ್ತಿದ್ದನೋ ಅವನಿಗೆ ಕೀರ್ತಿಯಿತ್ತು. ಇದರಲ್ಲಿ ಗೋಕುಲದ ಗೋಪಾಲರು ಒಬ್ಬೊಬ್ಬರೂ ಮತ್ತೊಬ್ಬರಿಗೆ ಸಮನಾದವರೇ. ಗೋಪಾಲವಂಶವೇ ಹಾಗಿತ್ತು.

ಪಲಕರಂದು—ಹಾಗೆ ಅನೇಕ ಹಸುಗಳನ್ನು ಸ್ವಲ್ಪಕಾಲದಲ್ಲಿ ಹೆಚ್ಚು ಹಾಲು ಕೊಡುವಂತೆ ಕರೆಯಲು ಸಮರ್ಥರಾದವರೂ!

ಶೆಟ್ರಾರ್ ತಿರಲ್ಗಳೈ—ಶತ್ರುಗಳ ಬಲವು ಕುಂದುವಂತೆ

ಶೆನ್ರು ಶೆರುಚ್ಚೆಯ್ಯುಂ—ತಾವೇ ದಂಡೆತ್ತಿಹೋಗಿ ಅವರಿದ್ದಲ್ಲಿ (ಅವರ ಸೊಕ್ಕು ಮುರಿಯುವಂತೆ) ಯುದ್ಧಮಾಡಲು ಸಮರ್ಥರಾದವರೂ; ಮತ್ತು

ಕುಟ್ರಮೊನ್ರಿಲ್ಲಾದ—ಯಾವ ದೋಷವಿಲ್ಲದವರೂ ಆದ

ಕೋವಲರ್‌ತಂ—ಗೋಪಾಲವಂಶಕ್ಕೇ

ಪೊರ್ಕೊಡಿಯೇ—ಚಿನ್ನದ ಬಳ್ಳಿಯಂತಿರುವಳೇ! ಪರಮಾತ್ಮನಿದ್ದೆಡೆ ದೋಷ ಗಂಧವೇ ಇರಲಾರದು; ಬೆಳಕಿರುವಕಡೆ ಕತ್ತಲೆ ಇಲ್ಲದಂತೆ; ಅವನ ಸೌಂದರ್ಯವು ಎಲ್ಲರನ್ನೂ ಆಕರ್ಷಿಸಿತ್ತು; ಗೋಪರಿಗೆ ಸ್ವಂತ ಶತ್ರುಗಳಿರಲಿಲ್ಲ; ಪರಮಾತ್ಮನಾದ ಕೃಷ್ಣನ ಶತ್ರುಗಳೇ ಇವರ ಶತ್ರುಗಳು; ಪರಮಾತ್ಮನಿಗೋ ಎಂದರೆ,

ಸಮೋಹಂ ಸರ್ವಭೂತೇಷು ನ ಮೇ ದ್ವೇಷ್ಯೋಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಂ ॥
ಗೀ. IX 29

ಎಂದು ಅವನೇ ಹೇಳಿರುವಂತೆ, ಸ್ವತಃ ಶತ್ರುಗಳೂ ಇಲ್ಲ ಪ್ರಿಯರೂ ಇಲ್ಲ; ಆದರೆ ಅವನಲ್ಲಿ ಯಾರು ಪ್ರೀತಿಯಿಟ್ಟು ಭಜಿಸುವರೋ ಅವರೇ ಅವನು; ಅವನೇ ಅವರು. ಯಾರು ಅವನನ್ನು ದ್ವೇಷಿಸುವರೋ ಅವರು ಅವನ ಶತ್ರುಗಳು.

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ವಿದ್ವಿಷಂತೋಽಭ್ಯಸೂಯತಾಃ ॥
ತಾನಹಂ ದ್ವಿಷತಃ ಕ್ರೂರಾ ಸಂಸಾರೇಷು ನರಾಧಮಾ ।
ಕ್ಷಿಪಾಮ್ಯಜಸ್ರಮಶುಭಾ ಆಸುರೀಷ್ವೇವ ಯೋನಿಷು ॥
ಗೀ. XVI

ಎಂದೂ ಅವನೇ ಹೇಳಿರುವಂತೆ, ಅಹಂಕಾರ, ಬಲ, ದರ್ಪ ಮತ್ತು ಕೋಪ–ಇವುಗಳಿಂದ ಪರಮಾತ್ಮನ ದ್ವೇಷಿಗಳಾಗಿ "ಪ್ರಪಂಚವು ನನ್ನದು, ನನಗಾಗಿ; ನಾನೇ ಪರಮಾತ್ಮ; ಯಾರು ನನಗೆ ಎಣೆ? ನಾನು ಕೊಡಬಲ್ಲೆ, ತಿನ್ನಬಲ್ಲೆ, ಜೀರ್ಣಿಸಿಕೊಳ್ಳಬಲ್ಲೆ;" ಎಂದು ಮೆರೆಯುವರೋ ಅವರು ಅವನ ಭಕ್ತರಿಗೂ ಶತ್ರುಗಳು; ಅವರು ತಮ್ಮಲ್ಲಿಗೆ ಬರದಿದ್ದರೂ ತಾವೇ ಹೋಗಿ ಅವರ ಸೊಕ್ಕನ್ನು ಮುರಿಯುವ ಶಕ್ತಿ ಅವರಲ್ಲಿತ್ತು; ಅಂತಹ ಗೋಪಾಲವಂಶಕ್ಕೆ ಸ್ವರ್ಣಲತೆಯಂತಿರುವ ಕನ್ಯೆಯನ್ನು ಕರೆದಳು ಗೋದೆ.

ಗೋಪಾಲರು ವೈಶ್ಯರು–"ಕೃಷಿಗೋರಕ್ಷ್ಯವಾಣಿಜ್ಯಂ ವೈಶ್ಯಸ್ಯಾಪಿ ಸ್ವಭಾವಜಂ" ಎಂದು ಕೃಷ್ಣನೇ ಹೇಳಿರುವಂತೆ ಗೋರಕ್ಷಣ ಮತ್ತು ಕೃಷಿ ಇವರ ನಿತ್ಯ ನೈಮಿತ್ತಿಕ ಕರ್ಮ ಮತ್ತು ಶಾಸ್ತ್ರ ವಿಹಿತವಾದುದು.

ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ಗೀ. XVIII

ಎಂದಿರುವಂತೆ ಅವರ ಕರ್ಮದಲ್ಲಿ ಅವರಿರುವುದು ಅವರಿಗೆ ಶ್ರೇಯಸ್ಸು; ಕ್ಷತ್ರಿಯ ಧರ್ಮವನ್ನು ಇವರು ಆಶ್ರಯಿಸಿ ಯುದ್ಧಕ್ಕೆ ಹೋಗುತ್ತಿದ್ದರು ಎಂದು ಹೇಳಿಯೂ ಅವರು ಹೇಗೆ "ಕುಟ್ರಮೊನ್ರಿಲ್ಲಾದವರ್"? ಇದು ಪ್ರಶ್ನೆ. ಹೌದು; ಅವರು ಯಾವ ದೋಷವೂ ಇಲ್ಲದವರು;

ಸರ್ವಶಃ ಆತ್ಮಾನಂ ಗೋಪಾಯೇತ್

ಎನ್ನುವ ನಿಯಮಕ್ಕನುಗುಣವಾಗಿ ತಮ್ಮ ಆತ್ಮರಕ್ಷಣೆಗಲ್ಲದೆ ಆತ್ಮಧಾರಣೆಗೂ ಶಸ್ತ್ರ ಹಿಡಿಯುವುದು ನೈಮಿತ್ತಿಕ ಕರ್ಮವಾಗುತ್ತದೆ; ನಿತ್ಯಕರ್ಮ ಗೋರಕ್ಷಣೆ ಮತ್ತು ಕೃಷಿ; ಈ ನಿತ್ಯಕರ್ಮ, ಶಸ್ತ್ರಧಾರಣ ಮಾಡುವ ನೈಮಿತ್ತಿಕ ಕರ್ಮ ಇವೆರಡೂ ಒಂದೇ ಕಾಲದಲ್ಲಿ ಮಾಡುವ ಪ್ರಸಂಗ ಬಂದರೆ, ನೈಮಿತ್ತಿಕವನ್ನೇ ಮಾಡಬೇಕೆಂದು ಶಾಸ್ತ್ರವಿದೆ. ಅಮಾವಾಸ್ಯೆ ಮತ್ತು ಸಂಕ್ರಮಣ ಎರಡೂ ಒಟ್ಟಿಗೆ ಬಂದರೆ ನೈಮಿತ್ತಿಕವಾದ ಸಂಕ್ರಮಣವನ್ನು ಮಾಡಿ ಅಮಾವಾಸ್ಯೆ ತರ್ಪಣವನ್ನು ಬಿಡುವಂತೆ ಇಲ್ಲಿ ಗೋಪಾಲರೂ ತಾವೇ ಹೋಗಿ ಶತ್ರುದಮನಮಾಡುತ್ತಿದ್ದರೆಂದಿರುವುದರಿಂದ ನಿತ್ಯ

ಕರ್ಮಕ್ಕೆ ಲೋಪ ಬರುತ್ತಿದ್ದರೂ ಅವರು **"ಕುಟ್ರಮೊನ್ರಿಲ್ಲಾದವರ್"**; ಶ್ರೀಕೃಷ್ಣನು ಕ್ಷತ್ರಿಯನಾದರೂ ಗೋಪಾಲನಾಗಿಯೇ ಬೆಳೆದನು ಚಿಕ್ಕವಯಸ್ಸಿನಲ್ಲಿ. ಗೋಪಾಲಧರ್ಮವನ್ನೇ ಆಚರಿಸುತ್ತಿದ್ದನು. ಹಾಗಿದ್ದೂ ಅಘಾಸುರ ಮೊದಲಾದವರನ್ನು ಕೊಲ್ಲಲಿಲ್ಲವೆ? ಅಧರ್ಮವಾಗಿದ್ದರೆ ಹಾಗೆ ಮಾಡುತ್ತಿದ್ದನೇ? ಎಂದೂ ಇಲ್ಲ. ಹಾಗೆಯೇ ಗೋಪಾಲರು ಶಸ್ತ್ರ ಹಿಡಿಯುವುದು ಧರ್ಮವೇ! ಧರ್ಮದಗತಿ ಗಹನವಾದುದು. ಧರ್ಮದ ಸ್ವರೂಪವನ್ನು ಚಿಂತಿಸಿ ನಿರ್ಣಯ ಕೊಡುವಾಗಲೆಲ್ಲಾ ಅದರ ಹಿನ್ನೆಲೆಯಲ್ಲಿ ಶುದ್ಧ ವೇದಾಂತಜ್ಞಾನವಿದ್ದೇ ಇರಬೇಕು.

ಲಭಂತೇ ಬ್ರಹ್ಮನಿರ್ವಾಣಂ ಋಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾಃ ಯತಾತ್ಮಾನಃ ಸರ್ವಭೂತಹಿತೇರತಾಃ ॥ ಗೀ–V

ಎಂದೂ, ಮತ್ತು ಆತ್ಮೋಪಾಸಕರ ವಿಷಯದಲ್ಲಿ

ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇರತಾಃ ॥ ಗೀ–XII

ಎಂದೂ ಕೃಷ್ಣನೇ ಹೇಳಿರುವಂತೆ ನಮ್ಮ ಧರ್ಮವೆಲ್ಲವೂ **ಸರ್ವಭೂತಹಿತರತಿಯ** ಮೇಲೆ ನಿಂತಿದೆ. ಆ ಅರ್ಥದಿಂದಲೇ ಶ್ರುತಿಯು (ತೈ–ಯಾಜ್ಞ)

ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ

ಎಂದು ನಿರ್ಣಯ ಕೊಟ್ಟಿದೆ. ಧರ್ಮಶಬ್ದದಲ್ಲೇ ಈ ಅರ್ಥವು ಅಡಗಿದೆ. ಯಾವ ಶಬ್ದದಲ್ಲಿ ಅದರರ್ಥವು ಅಡಗಿದೆಯೋ ಆ ಅರ್ಥಕ್ಕೆ ಯೌಗಿಕಾರ್ಥವೆನ್ನುವರು. ಈ ಶಬ್ದವು "ಡುಧಾಞ್—ಧಾರಣಪೋಷಣಯೋಃ" ಎನ್ನುವ ಕ್ರಿಯಾಪದದಿಂದ ಹುಟ್ಟಿದೆ. ಯಾವ ಕರ್ಮವು ಲೋಕ, ಸಮಾಜ, ಸಂಪ್ರದಾಯ, ಸದ್ಬುದ್ಧಿಗೆ ಧಾರಕ ಪೋಷಕವಾಗಿರುವುದೋ ಅದೇ ಧರ್ಮ. ಎಲ್ಲಾ ಕರ್ಮವೂ ಧರ್ಮವಲ್ಲ. ಅದಕ್ಕಾಗಿಯೇ ಸ್ಮೃತಿಕಾರರು ಅದರ ಲಕ್ಷಣವನ್ನು

ಧಾರಣಾದ್ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾಃ

ಎಂದಿರುವರು. ಈ ಧರ್ಮಾನುಷ್ಠಾನದಲ್ಲಿ ನಮ್ಮ ಹಿತ ಮತ್ತು ರಕ್ಷಣೆಗಿಂತಲೂ ಪರಹಿತ ಮತ್ತು ಪರರಕ್ಷಣೆಯೇ ಮುಖ್ಯ; ಶ್ರೀಕೃಷ್ಣ ದೈವ; ಅವನಿಗಾಗಿ ಶಸ್ತ್ರ ಹಿಡಿಯುವುದು ಯಾವವಿಧದಲ್ಲೂ ಅಧರ್ಮವಲ್ಲವೆಂದೇ ತಿಳಿದು ಗೋದೆಯು "ಕುಟ್ರಮೊನ್ರಿಲ್ಲಾದವರ್" ಎಂದಿರುವಳು.

ಈ ಪದದಲ್ಲಿ ಗೋದೆಯು ಮತ್ತೊಂದರ್ಥವನ್ನೂ ಇಟ್ಟಿರುವಳು. ಗೋಪಾಲರು ಜ್ಞಾನಿಗಳಲ್ಲ; ಶಾಸ್ತ್ರತಿಳಿದವರಲ್ಲ; ಆದರೂ ಕೃಷ್ಣನ ಸಹವಾಸದಿಂದಲೇ ಅವರಿಗೆ ದೋಷದ ಸೊಂಕು ತಗಲುವುದಿಲ್ಲ. ಶ್ರೀಕೃಷ್ಣನು ಇವರನ್ನು ತನ್ನವರೆಂದಿದ್ದಿದ್ದೇ ಸಾಕು ಅವರು ಶುದ್ಧರೆನ್ನುವುದಕ್ಕೆ. ಸೃಷ್ಟಿಯಲ್ಲೇ ಸ್ವಾಭಾವಿಕ ಶುದ್ಧವಸ್ತುಗಳಿವೆ. ಕೆಲವು ಹುಳುಗಳು ಕೊಚ್ಚೆಯಲ್ಲೇ ಇವೆ. ಅವು ಹೊರಗೆ ಬಂದಾಗ ಆ ಕೊಚ್ಚೆಯು ಅವಕ್ಕೆ ಅಂಟಿಕೊಂಡಿರುವುದಿಲ್ಲ. ನಾಲಿಗೆಯನ್ನು ನೋಡಿ; ಎಷ್ಟು,

ಏನು ತಿಂದರೂ ಶುದ್ಧವಾಗಿಯೇ ಆಗುತ್ತದೆ. ಹಾಗೆಯೇ ಗೋಪಾಲರು ಪರಿಶುದ್ಧರು; ಅವರ ಕುಲಕ್ಕೆ ಚಿನ್ನದ ಲತೆಯಂತಿರುವಳನ್ನು ಕೇಳಬೇಕೇ; ಅಲ್ಲದೇ ಅವಳು ಬಹು ಚೆಲುವೆ. ಅದರಿಂದಲೂ **"ಪೊರ್ಕೊಡಿ"**; ಇದನ್ನೂ ಹೇಳುತ್ತಾಳೆ ಗೋದೆ.

ಪುತ್ತರವಲ್ ಕುಲ್—ಹುತ್ತದಲ್ಲಿರುವ ಹಾವಿನಂತೆ ಬಳುಕುವ ನಿತಂಬವುಳ್ಳವಳೇ–ಇದು ಅವಯವ ಶೋಭೆಗೆ ಉಪಲಕ್ಷಣ; ಒಂದು ಶಬ್ದದಮೇಲಿನ ಅರ್ಥದಿಂದ ಆ ಅರ್ಥಕ್ಕೆ ಸಂಬಂಧಪಟ್ಟ ಅರ್ಥವನ್ನೆಲ್ಲಾ "ಉಪಲಕ್ಷಣ" ವೆನ್ನಲಾಗಿದೆ. ಶಾಸ್ತ್ರಾರ್ಥವನ್ನು ಪರಮಾತ್ಮನ ಗುಣಾದಿಗಳನ್ನು ಚಿಂತಿಸುವಾಗ ಉಪಲಕ್ಷಣಾರ್ಥಕ್ಕೆ ಮುಖ್ಯ ಸ್ಥಾನವಿದೆ. ಇದು ನಮ್ಮ ಜ್ಞಾಪಕಶಕ್ತಿಯಿಂದ ತೋರುವ ಅರ್ಥ. ಒಂದು ವಸ್ತುವಿನ ಸ್ಮರಣ ಬರಬೇಕಾದರೆ ಆ ವಸ್ತುವು ನಮಗೆ ಭಯವುಂಟುಮಾಡುವಂತಹದಾಗಿರಬೇಕು ಅಲ್ಲವೇ ಬಹು ಪ್ರಿಯವಾಗಿರಬೇಕು.

ವೃಷ್ಣೇ ವೃಷ್ಣೇ ಚ ಪಶ್ಯಾಮಿ ಚೀರಕೃಷ್ಣಾಜಿನಾಂಬರಂ ।
ಗೃಹೀತಧನುಷಂ ರಾಮಂ ಪಾಶಹಸ್ತಮಿವಾಂತಕಂ ॥

ಎಂದು ಮಾರೀಚನು ರಾವಣನಿಗೆ ಹೇಳುವಾಗ ಅವನ ಭಯವೇ ಮೂಲ. ಕಂಸನಿಗೆ ಕೃಷ್ಣನು ಎಲ್ಲೆಲ್ಲೂ ಕಂಡಿದ್ದು ಹೆದರಿಕೆಯಿಂದಲೇ. ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುವ ಸ್ಮೃತಿಯಿದು. ಪ್ರೀತಿಯಿಂದಲೂ ಸ್ಮೃತಿಯು ಬರುತ್ತದೆ. ಪಾರಮಾರ್ಥಿಕ ಜೀವನದಲ್ಲಿ ಈ ಸ್ಮೃತಿಗಿರುವಷ್ಟು ಹಿರಿಮೇ ಮತ್ತಾವುದಕ್ಕೂ ಇಲ್ಲ. ಗೀತೆಯ ಉಪದೇಶವನ್ನೆಲ್ಲಾ ಕೇಳಿ ಅರ್ಜುನನು ಹೇಳಿದ್ದು ಕೊನೆಯಲ್ಲಿ

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ

ಎಂದು ಮಾತ್ರ. ಶಾಸ್ತ್ರಜ್ಞಾನ ಸಂಪಾದಿಸಿದವರಿಗೆ ಪರಮಾತ್ಮನಲ್ಲಿ ಪ್ರೀತಿ ಸಂಪಾದಿಸಿಕೊಂಡವರಿಗೆ, ಆಗಾಗ ಬರುವ ಲೌಕಿಕಜ್ಞಾನದೊಡನೆ ಅವನ ಸ್ಮೃತಿ ಬಂದರೆ ಅವರು ಎಂದೂ ಧರ್ಮ ಬಿಟ್ಟುಹೋಗುವುದಿಲ್ಲ. ಪ್ರತ್ಯಕ್ಷಾನುಭವಕ್ಕೆ ಸ್ಮೃತಿಜ್ಞಾನವು ಸೇರಿದರೆ ಅದಕ್ಕೆ ಶಾಸ್ತ್ರದಲ್ಲಿ "ಪ್ರತ್ಯಭಿಜ್ಞೆ" ಎನ್ನುವ ಹೆಸರಿದೆ. ಇದರ ಸ್ವರೂಪ ತಿಳಿದವರೇ ನಿಜವಾದ ವೇದಾಂತಿಗಳು.

ಇಂತಹ ಪ್ರತ್ಯಭಿಜ್ಞೆ ಶಕ್ತಿಯುಳ್ಳವರಿಗೆ ಅಲಂಕಾರ ಶಾಸ್ತ್ರವನ್ನು ಓದಿ, ರಸ ಸ್ವರೂಪವನ್ನು ತಿಳಿದು, ತನ್ನ ಜೀವನದಿಂದ ಅದನ್ನು ಪರಿಷ್ಕರಿಸಿಕೊಂಡ ವೇದಾಂತಿಗಳಿಗೆ ಇಲ್ಲಿಯ ಗೋಪಿಕೆಯು ಎಷ್ಟು ಚೆಲುವೆ ಎಂದು ತೋರಿಸಲು **"ಪುತ್ತರವಲ್ ಕುಲ್", "ಪುನಮುಯಿಲೇ"** ಎಂದು ಎರಡು ಪದವನ್ನು ಹೇಳಿರುವಳು ಗೋದೆ. ಇವೆರಡರಿಂದ ಶೃಂಗಾರರಸವೇ ಕಣ್ಣುಮುಂದೆ ನಿಲ್ಲುವಂತೆ ಮಾಡಿರುವಳು. ಇಂತಹ ಜ್ಞಾನ ಬರುವುದು **"ಉಪಲಕ್ಷಣ"** ದಿಂದ. ಎಲೈ ಗೋಪಿಯೇ, ಬಳುಕುವ ನಿತಂಬವುಳ್ಳವಳಲ್ಲವೇ ನೀನು.

ಪುನಮಯಿಲೇ—ನವಿಲುಗರಿಯಂತೆ ನೀಳವಾದ ಕೇಶರಾಶಿಯುಳ್ಳವಳೇ, ಹೆಂಗಸರಿಗೆ ಸೌಂದರ್ಯಕೊಡುವುದು ಮೊದಲು ಅವರ ಬಳುಕು ತಳಕು; ಅದು ಅವರ ನಿತಂಬದಿಂದ ಬರುವ ಸ್ವಭಾವ; ಅದಾದಮೇಲೆ ಅವರಲ್ಲಿ ಆಕರ್ಷಕ ಕೇಶಪಾಶ. ಇವೆರಡು ಪದಗಳಿಂದ ಇವಳದು ಎಲ್ಲರನ್ನೂ ಆಕರ್ಷಿಸುವ ರೂಪು; ಅಲ್ಲದೆ ಅವಳು **ಪೊರ್ಕೊಡಿ**; ಲತೆಯು ವೃಕ್ಷವನ್ನು ಆಶ್ರಯಿಸಿದಲ್ಲದೇ ಇರಲಾರದು; ಹಾಗೆ ಶ್ರೀಕೃಷ್ಣನನ್ನೇ ಅವಲಂಬಿಸಿರುವಳು. ಕೇಳಬೇಕೇ? ಇವಳು ಕೃಷ್ಣನಿಗೆ ಬಹು ಪ್ರಿಯಳು. ಇವಳನ್ನು ಮುಂದೆ ಬಿಟ್ಟುಕೊಂಡು ಹೋದರೆ ಅವನು ಒಲಿಯುವುದರಲ್ಲಿ ಸಂದೇಹವೇ ಇಲ್ಲಾ ಎನ್ನುವುದೇ ಗೋದೆಯ ಹೃದಯ.

ಸ್ತ್ರೀರೂಪ ಮತ್ತು ಸೌಂದರ್ಯವನ್ನು ಆತ್ಮದೃಷ್ಟಿಯಿಂದ ನೋಡಿ ಹಿಗ್ಗಬೇಕು. ಹೀನ ಶರೀರ ದೃಷ್ಟಿಯಿಂದಲ್ಲ; ಕಾಮದ ಬಿಸಿಯಿಂದಲ್ಲ; ಜ್ಞಾನ ತಂಪಿನಿಂದ ಅದು ನೋಡಲು ಅನುಭವಿಸಲು ಆನಂದ. ಶೃಂಗಾರ ರಸವಿಲ್ಲದೆ ವೇದಾಂತಾನುಭವವಿಲ್ಲ. ಕಾಮದಲ್ಲಿ ಕನವರಿಸುವವರು ಅರಿಯರು ಇದರ ಆನಂದದಲೆಗಳನ್ನು. ಕವಿಯಾಗಿ ರಸಿಕ ವೇದಾಂತಿಯಾಗಿ ಸ್ತ್ರೀಭಾವ ಮುಸುಕಿನಲ್ಲಿ ಶ್ರಿಯಃಪತಿಯನ್ನು ಅನುಭವಿಸಲೆಂದೇ ಆತ್ಮದ ಭಾವವನ್ನು ಬಣ್ಣಿಸಿರುವಳು "**ಪೊರ್ಕೊಡಿ, ಪುಟ್ರರವಲ್ ಕುಲ್ ಮತ್ತು ಪುನಮಯಿಲ್**" ಎನ್ನುವ ಮೂರು ಪದಗಳಿಂದ. ಪುರಷನಾಗಿ ಪುರುಷ ಸೌಂದರ್ಯವನ್ನು ಅನುಭಸಿಸುವುದೆಂತು?

ಏಕೀಭವದ್ಭಿರಯುತೈರಪಿ ಮನ್ಮಥಾನಾಂ
ಯತ್ಕಾಂತಿಸಿಂಧು ವೃಷತಾನುಕೃತಿ ರ್ನ ಶಕ್ಯಾ।
ಸಂಪ್ರೇಕ್ಷ್ಯ ತಂ ಯದುಪತಿಂ ಯಮಿನೋಪಿ ನೂನಂ
ಸ್ತ್ರೀಭಾವಮೇವ ಮನಸಾ ಬಿಭರಾಂಬಭೂವುಃ

ಋಷಿಗಳು ಸ್ತ್ರೀಭಾವವನ್ನು ತಾಳಿಯೇ ಕೃಷ್ಣನನ್ನು ಅನುಭವಿಸಿದರು.

ಹೀಗೆ ಚೆಲುವಿನಿಂದಲೂ, ಪ್ರೀತಿಯಿಂದಲೂ ಕೃಷ್ಣನನ್ನೇ ನಂಬಿರುವಳು. "**ಪೊರ್ಕೊಡಿ**"; ಅವನು "**ಪೊಕರ್ಪಕಂ**" ಕಲ್ಪವೃಕ್ಷ. ಇಲ್ಲಿ ಉಪನಿಷತ್ತಿನ
1. **ಪುರುಷವಿದ್ಯಾ** (ಬೃ-ಉ.); 2. **ಮೈತ್ರೇಯಿವಿದ್ಯಾ** (ಬೃ-ಉ.); ಮತ್ತು
3. **ಆನಂದವಿದ್ಯಾ** (ತೈ-ಉ.) ಗಳನ್ನು ಸಮನ್ವಯ ಮಾಡಿಕೊಳ್ಳಬಹುದು.

ಆತ್ಮಾನಮೇವ ಪ್ರಿಯಮುಪಾಸೀತ

ಎನ್ನುವ ಪುರುಷವಿದ್ಯಾನಿಯಮವೂ

ನ ವಾ ಅರೆ ಪತ್ಯುಃ ಕಾಮಾಯ ಪತಿಃ ಪ್ರಿಯೋ
ಭವತಿ; ಆತ್ಮನಸ್ತು ಕಾಮಾಯ;

ಎನ್ನುವ ಮೈತ್ರೇಯಿ ವಿದ್ಯೆಯ ನಿಷ್ಕರ್ಷವೂ

ರಸೋ ವೈ ಸಃ ರಸಂ ಏವಾಯಂ ಲಬ್ಧ್ವಾ ಆನಂದೀ ಭವತಿ

ಎನ್ನುವ ಆನಂದವಿದ್ಯೆಯು ಕೊಟ್ಟಿರುವ ಅನುಭವವೂ ಒಟ್ಟುಗೂಡಿ ಅನುಭವಿಸುವವರೆಗೆ ತಮ್ಮ ಎಲ್ಲೆಯನ್ನರಿಯಲು ದಾರಿ ತೋರಿಕೊಟ್ಟಿರುವಳು ಸ್ತ್ರೀ ಸೌಂದರ್ಯ ವರ್ಣನೆಯಿಂದ. ಒಳಗಿರುವ ಕನ್ಯೆಯೆಂದು ನಮ್ಮನ್ನು ಭಾವಿಸಿಕೊಂಡು ಗೋದೆಯು ನಮ್ಮನ್ನು ಪರಮಾತ್ಮನಲ್ಲಿಗೆ ಕರೆಯುತ್ತಿರುವಳೆಂದು ನೆನೆಯುವುದೇ ಚೆಂದ. "ಅಂತಹ ಚೆಂದುಳ್ಳಿಚೆಲುವೆಯೇ

ಪೋದರಾಯ್—ಹೊರಡು.

ಶುಟ್ರತ್ತು ತೋಳ್ಗಿಮಾರೆಲ್ಲಾರುಂ ವಂದು—ಸುತ್ತಲಿಂದಲೂ ಎಲ್ಲಾ ಸಖಿಯರೂ ಬಂದು.

ನಿನ್ ಮುಟ್ರಂ ಪುಕುಂದು—ನಿನ್ನ ಮನೆಯಮುಂದಿನ ಅಂಗಣವನ್ನು ಹೊಕ್ಕು

ಮುಕಿಲ್ ವಣ್ಣ ಪೇರ್ ಪಾಡ—ನೀಲಮೇಘ ಶ್ಯಾಮನ ನಾಮಸಂಕೀರ್ತನ ಮಾಡಿದರೂ, ನೀನು

ಶಿಟ್ರಾದೇ ಪೇಶಾದೇ—ಅಲುಗದೇ ಮಾತನಾಡದೇ ಇರುವ

ಶೆಲ್ವಪ್ಪೆಂಡಾಟ್ಟಿ ನೀ—ಐಶ್ವರ್ಯವಂತ ಹೆಣ್ಣಲ್ಲವೇ ನೀನು? ಇಲ್ಲಿ ಐಶ್ವರ್ಯ ನಶ್ವರ ಧನಕನಕಾದಿಗಳಲ್ಲ; ಆತ್ಮಗುಣ; ಆತ್ಮಗುಣವುಳ್ಳವಳು ನೀನು; ಹಿಂದಿನ ಮೂರು ವಿಶೇಷಣಗಳಿಂದ ಇದನ್ನೇ ಇದರರ್ಥವನ್ನಾಗಿ ಕೊಳ್ಳಬೇಕು.

ಎಟ್ರುಕ್ಕು ಉರಂಗುಂ ಪೊರುಳ್—ಹೀಗೆ ನಿದ್ರಿಸುತ್ತಿರಲು ಕಾರಣವೇನು; ನಿನ್ನ ಅಭಿಪ್ರಾಯವೇನು; ಉದ್ದೇಶವೇನು; ಆಸೆಯೇನು?
ತೈ—ಯಾಜ್ಞ—ಉಪನಿಷತ್ತಿನಲ್ಲಿ

ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ

ಎಂದು ಅಂತರ್ಯಾಮಿ ದೈವವನ್ನು ವರ್ಣಿಸಲಾಗಿದೆ. ಆ ನೀಲಮೇಘಶ್ಯಾಮನೇ ಕೃಷ್ಣನಾಗಿ ನಮ್ಮೊಡನೆ ಕೂಡಲು ನಿಂತಿರುವಲ್ಲಿ, ನಿನ್ನ ಯೋಗನಿದ್ದೆಯಲ್ಲಿ ಅವನನ್ನು ಆಶಿಸುವುದರ ಅರ್ಥವೇನು? ಇನ್ನೂ ನಿನ್ನ ಜ್ಞಾನ ಪಕ್ವವಾಗಿಲ್ಲವೇ? ಏಳು ಅವನ ನಾಮಸಂಕೀರ್ತನವನ್ನು ಮಾಡಿಕೊಂಡು ಅವನಲ್ಲಿಗೆ ಹೋಗೋಣ ಎಂದಳು ಗೋದೆ.
ಏಲೋರೆಂಪಾವಾಯ್.

ಸ್ವಾಪದೇಶ

ಇಲ್ಲಿಂದ ಮುಂದೆ ಶಿಷ್ಯ ಗುಣಸಂಪನ್ನರೂ ಆಚಾರ್ಯಪೀಠಕ್ಕೆ ಯೋಗ್ಯರೂ ಆದ ಐವರು ಎಬ್ಬಿಸಲ್ಪಡುವರು.

ಕತ್ತು—ಅನೇಕ ಶಾಸ್ತ್ರಗಳನ್ನು ಕಲಿತು

1) **ಬಹುಭ್ಯಃ ಶ್ರೋತವ್ಯಂ ಬಹುಧಾ ಶ್ರೋತವ್ಯಂ**
2) **ಬಹುಭ್ಯಶ್ಚ ಮುಹದ್ಭ್ಯಶ್ಚ ಶಾಸ್ತ್ರೇಭ್ಯೋ ಮತಿಮಾನ್ನರಃ ।**
   ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥
3) **ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್ ।**

ಎನ್ನುವಂತೆ ಶಾಸ್ತ್ರಾರ್ಥವನ್ನು ತಿಳಿದು ಆಚಾರ್ಯನಾಗಲು ಯೋಗ್ಯತೆಯನ್ನು ಸಂಪಾದಿಸಿರುವ

ಕರವೈ ಕಣಂಗಳ್—ಕರೆಯುವ ಹಸುವಿನಂತಿರುವ (ಶಿಷ್ಯರಿಗೆ)

ಪಲಕರಂದು—ನಾನಾ ಶಾಸ್ತ್ರಾರ್ಥವನ್ನು ಹೇಳಿಕೊಟ್ಟು — ಆಚಾರ್ಯನಾಗಿರಲು ಯೋಗ್ಯತೆಯುಳ್ಳವರನ್ನು ಕರೆಯುವ ಹಸುಗಳೆಂದು ನಿಗಮಾಂತದೇಶಿಕರು ಹೇಳಿರುವರು.

ಪಾರ್ಕ್ಕುಂ ಪುಕಳ್ವರುಂ ಪೈಂಪೊರುಳ್ ವಾಯ್ತ್ತಿಡುಂ ಪತ್ತರ್ಕಳಾಯ್
ಇರುಕ್ಕಿನ್ರವರ್ಕ್ಕು ಇವೈ ಈಂದಾಲ್ ಅರಮುಳದೆನ್ರು ಇಯಂಪಾರ್ ।
ಕಾಕ್ಕುಂ ಕರುತ್ತುಡೈ ದೇಶಿಕರ್ ಕನ್ರೆನ ನಮ್ಮೈ ಎಣ್ಣಿ
ಶುರಕ್ಕುಂ ಶುರಭಿಗಳ್ ಪೋಲ್ ಶೊರಿಗಿನ್ರನರ್ ಶೊಲ್ಲಮುದೇ

—ಸಾರಸಾರ—ಚರ—ಶ್ಲೋ

ನಮಗೆ ಕೀರ್ತಿಬರುವದು, ಐಶ್ವರ್ಯ ಮೂಡುವದು, ಧರ್ಮವು ತಲೆಯೆತ್ತವದು ಎನ್ನುವ ಅಭಿಪ್ರಾಯದಿಂದ ತಮ್ಮಲ್ಲಿ ಭಕ್ತಿಯಿಟ್ಟವರಿಗೆ ಉಪದೇಶ ಕೊಡುವುದಿಲ್ಲ ಆಚಾರ್ಯರು; ಕರೆಯುವ ಹಸುಗಳಂತೆ ನಮ್ಮನ್ನು ಕರುಗಳೆಂದು ನೆನೆದು ಬೇರೆ ಪ್ರಯೋಜನವನ್ನಪೇಕ್ಷಿಸದೇ ಪ್ರೀತಿಯಿಂದ ಹಸುವು ಹಾಲುಕೊಡುವಂತೆ ಶಾಸ್ತ್ರಾರ್ಥವನ್ನು ತಿಳಿಸುವರು.

ಶೆಟ್ರಾರ್ . . . ಚ್ಚೆಯುಂ—ವೇದವನ್ನು ಪ್ರಮಾಣವನ್ನಾಗಿ ಸ್ವೀಕರಿಸದವರು; ಅದನ್ನು ಪ್ರಮಾಣವನ್ನಾಗಿ ಒಪ್ಪಿದ್ದರೂ ವಿಪರೀತ ಮತ್ತು ವಿರುದ್ಧಾರ್ಥಗಳಿಂದ ದ್ರೋಹವೆಸಗುವರು ಶತ್ರುಗಳು; ಅವರ ಸೊಕ್ಕನ್ನು ತಮ್ಮವಾದ ಶಕ್ತಿಯಿಂದ ಮುರಿಯಲು, ಯಾಮುನಾಚಾರ್ಯ, ರಾಮಾನುಜ, ವೇದಾಂತದೇಶಿಕ ಪ್ರಭೃತಿ ಮಹಾತ್ಮರಲ್ಲಿಗೆ ಹೋಗಿ ಕಲಿತು ಬಂದು ವಾಗ್ಯುದ್ಧಮಾಡಲು ಸಮರ್ಥರಾದ,

ದಿಕ್ಸೌಧಾಬದ್ಧಚೈತ್ರಧ್ವಜಪಟಪವನಸ್ಪಾತಿನಿರ್ಧೂತ
ತತ್ತತ್ಸಿದ್ಧಾಂತ ಸ್ತೋಮತೂಲಸ್ತಬಕನಿಗಮನವ್ಯಕ್ತಸದ್ವರ್ತನೀಕಾಃ

ಎಂದು ನಿಗಮಾಂತದೇಶಿಕರು ಬಣ್ಣಿಸಿರುವಂತೆ ಪ್ರಭಾವವುಳ್ಳ

ಕುಟ್ರವೊನ್ನಿಲಾದ—ಪಾಪರಹಿತರಾದ, ಇವರು ವೇದಬಾಹ್ಯರನ್ನು ವೇದದ್ರೋಹಿಗಳನ್ನು ಗೆಲ್ಲುವುದು ತಮ್ಮ ಪಾಂಡಿತ್ಯ ಪ್ರದರ್ಶನಕ್ಕಲ್ಲ; ಅವರನ್ನು ಒಳ್ಳೆಯ ಮಾರ್ಗಕ್ಕೆ ತರಲು;

ಕೋವಲರ್ತಂ—ಆಚಾರ್ಯ ಶ್ರೀಸೂಕ್ತಿಗಳನ್ನು ರಕ್ಷಿಸುವವರು; ಅಂತಹ ಆಚಾರ್ಯರಿಗೆ

ಪೊಕ್ಕೊಡಿಯೇ—ಸ್ವರ್ಣಲತೆಯಂತೆ ಅವರನ್ನೇ ಆಶ್ರಯಿಸಿರುವ ಶಿಷ್ಯೋತ್ತಮನೇ; ಅಥವಾ ಅಂತಹ ಆಚಾರ್ಯಕುಲದಲ್ಲಿ ಹುಟ್ಟಿರುವ ಮಹನೀಯನೇ, ಸತ್ಕುಲಪ್ರಸೂತನೇ

1) **ನಾಬ್ರಹ್ಮವಿತ್ಕುಲೇ ಭವತಿ**—ಎಂದು ವೇದವೂ (ಮಾಂ–ಉ)
2) **ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ।**
   ಪ್ರಾಪ್ಯ ಪುಣ್ಯಕೃತಾಂ ಲೋಕಾನ್ ಉಷಿತ್ವಾ ಶಾಶ್ವತೀ ಸ್ಸಮಾಃ ॥
   ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ

ಎಂದು ಭಗವದ್ಗೀತೆಯೂ

3) **ಆಸ್ಫೋಟಯಂತಿ ಪಿತರಃ ಪ್ರಣೃತ್ಯಂತಿ ಪಿತಾಮಹಾಃ ।**
   ವೈಷ್ಣವೋ ನಃ ಕುಲೇಃ ಜಾತಃ ಸ ನ ಸ್ಸಂತಾರಯಿಷ್ಯತಿ ॥

ಎಂದು ವರಾಹಪುರಾಣವೂ

4) **ಕೇಶವರ್ ತಮರ್ ಕೀೞ್ಮೇಲ್ ಎಮರ್**
   ಏೞೇೞು ಪಿರಪ್ಪುಂ ಮಾಶದಿರಿದು ಪೆತ್ತು

ಎಂದು ಶಠಗೋಪರೂ ಹೇಳಿರುವಂತಿರುವ ಮಹನೀಯನೇ

ಪುತ್ತರವಲ್ಕುಲ್—ಹುತ್ತದಲ್ಲಿರುವ ಹಾವಿನ ಹೆಡೆಯಂತೆ ಪ್ರತಿಭಟಿಸುವವರಿಲ್ಲದಾಗ

" ತಸ್ಮಾತ್ ಬ್ರಾಹ್ಮಣಃ ಬಾಲ್ಯೇನ ತಿಷ್ಠಾಸೇತ್ "

ಎಂದು ವೇದವು (ಬೃ–ಉ) ಹೇಳಿರುವಂತೆ ಬೂದಿಮುಚ್ಚಿದ ಕೆಂಡದಂತಿರುವನೇ, ಹಾವಿನ ಹೆಡೆ ಸಾದೃಶ್ಯದಿಂದ (1) ಇವನ ಆತ್ಮಸೌಂದರ್ಯವೂ (2) ಹುತ್ತದಲ್ಲಿ ಮಡಿಸಿರುವ ಹೆಡೆಯನ್ನು ನಡುವೆ ಇಟ್ಟುಕೊಂಡು ಬಾಲವನ್ನು ಸುತ್ತಿ ಮಲಗಿರುವ ಸರ್ಪದಂತೆ, ಭಕ್ತಿಯೆನ್ನುವ ನಿತ್ಯಗುಣವನ್ನು ತನಗಿಟ್ಟುಕೊಂಡು, ಅದರ ಸುತ್ತಲೂ ಜ್ಞಾನ ವೈರಾಗ್ಯವೆನ್ನುವ ಪ್ರಾಕಾರವನ್ನು ಕಟ್ಟಿಕೊಂಡಿರುವುದೂ ಹೇಳಲ್ಪಟ್ಟವೆ.

ಭಕ್ತಿಯೊಂದೇ ಆಚಾರ್ಯನಿಗೆ ಆಚಾರ್ಯನಾಗುವವನಿಗೆ ಭೂಷಣ; ಪ್ರಪತ್ತಿಯಿಂದ ತಾಲಿಕಟ್ಟಿದಂತಾಗಿ ಭಕ್ತಿಯಿಂದ ಅವನಿಗೆ ಪ್ರಿಯವಾಗಿ ಆತ್ಮಗುಣವೆಂಬ ಆಭರಣವನ್ನು ಪರಮಾತ್ಮನಿಂದಲೇ ಹೊಂದಿರುವವನು ಧನವಿಲ್ಲದೆ ಧನಿಕ. ಭಕ್ತಿ

ಯಿರುವೆಡೆ ಮಹಾವಿಶ್ವಾಸವಿರುವುದು; **ವಿಶ್ವಾಸವು** ಮಹಾವಿಶ್ವಾಸವಾಗಬೇಕಾದರೆ ಚಲಿಸದ ಪರಮಾತ್ಮ ಜ್ಞಾನವಿರಬೇಕು. ಪ್ರಪನ್ನ ಭಕ್ತನೇ ಆಚಾರ್ಯನಾಗಲು ಯೋಗ್ಯ. ಅವನಿಗೆ ಯಾವದೂ ಬೇಡ; ಅವನು ಎಲ್ಲರಿಗೂ ಬೇಕು; ಆದ್ದರಿಂದ ಅವನು "**ಪುತ್ತು–ಅರವು–ಅಲಕುಲ್**" ಮತ್ತು "**ಪೊರ್ಕೊಡಿ**"

ಪರಮಾತ್ಮನಿ ಯೋ ರಕ್ತಃ ವಿರಕೋಽಪರಮಾತ್ಮನಿ ।
ಸರ್ವೇಷಣಾವಿನಿಮುಕ್ತಃ ಸ ಭೈಕ್ಷಂ ಭೋಕ್ತುಮರ್ಹತಿ ॥

ಎಂದು ಬಾರ್ಹಸ್ಪತ್ಯಸ್ಮೃತಿಯು ಹೇಳಿರುವಂತೆ ವೈರಾಗ್ಯವು ಪ್ರಪನ್ನ ಭಕ್ತನ ಹಿಮ್ಮೊಮ್ಮಿ. ಭಕ್ತಿ, ಪರಮಾತ್ಮಾನುಭವ ಮತ್ತು ವೈರಾಗ್ಯ ಇವು ಪಾಕ ಹೊಂದಿದ ಮನಸ್ಸಿನ ಮೂರು ಮುಖಗಳು, ಒಂದಿದ್ದರೆ ಮಿಕ್ಕವೆರಡೂ ಇದ್ದೆ ಇರುತ್ತವೆ. ವೈರಾಗ್ಯಕಷ್ಟ; ಪರಮಾತ್ಮಾನುಭವ ಸುಲಭವಲ್ಲ; ಸ್ವತಂತ್ರವಾಗಿ ಗಳಿಸುವುದಲ್ಲ; ಭಕ್ತಿಯೊಂದೇ ನಮಗೆ ಸುಕಕರ. ಅದರಿಂದಲೇ ಪ್ರಪನ್ನರಾಗುವೆವು; ಅವನನ್ನು ಆಶಿಸುವೆವು; ಅವನಿಗಾಗಿ ಹಂಬಲಿಸುವೆವು; ಅವನಿಗಾಗಿ ದುಡಿಯುವೆವು; ಈ ದುಡಿತವು ಅವನ ಕೈಂಕರ್ಯ; ಅದರಿಂದ ಅವನಿಗೆ ತೃಪ್ತಿ; ಭಕ್ತಿಯಿದ್ದರೆ ಸಾಕು; ದಣಿಯಾಗಿ ದುಡಿತವನ್ನು ತಾನೊಪ್ಪುವಂತೆ ಮಾಡಿಸಿಕೊಳ್ಳುವನು.

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ಗೀ–IX31

ಎಂದು ಆಶ್ವಾಸನೆ ಕೊಟ್ಟರುವನೂ ಅವನೇ. ಹೀಗೆ ಜ್ಞಾನ ಮತ್ತು ಭಕ್ತಿ ನಿರ್ಮಲವಾಗಿದ್ದರೆ ನಿಷ್ಠೆಯೂ ಶುದ್ಧವಾಗಿರುವುದು. ಆತ್ಮಗುಣ ತುಂಬಿಬರುವುದು.

ತತೋಽನಾಯಪ್ರಭೃತಿವಿಷಯೇ ಸ್ವಾಮಿದತ್ತಾಂ ಸ್ವನಿಷ್ಠಾಂ
ಶೇಷಾಂ ಕೃತ್ವಾ ಶಿರಸಿ ಕೃತಿನಃ ಶೇಷಮಾಯುರ್ನಯಂತಿ

ರ–ಸಾ–ಸ್ವ–ಅ

ಎಂದಿರುವಂತೆ ಆತ್ಮಗುಣವು ಅವನಿಂದಲೇ ಬರುವುದು. ಆದ್ದರಿಂದ

ಮಾಯಾಂ ನ ಸೇವೇ ಭದ್ರಂ ತೇ ನ ವೃಥಾ ಧರ್ಮಮಾಚರೇತ್ ।
ಶುದ್ಧಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಂ ॥

ಭಾರ, ಉ. 305, 33.

ಶಾಸ್ತ್ರದಿಂದ ಜನಾರ್ದನ ಜ್ಞಾನ; ಆ ಜ್ಞಾನದಿಂದ ಭಕ್ತಿ; ಭಕ್ತಿಯಿಂದ ಶುದ್ಧಭಾವ ಅಂದರೆ ಆತ್ಮಗುಣ; ಅದರಿಂದ ವಿರಕ್ತಿ (ಮಾಯಾಂ ನ ಸೇವೇ); ಶಾಸ್ತ್ರಜ್ಞಾನ ವಿಲ್ಲದೆ ಭಕ್ತಿ ಶುದ್ಧವಲ್ಲ; ಶುದ್ಧ ಭಕ್ತಿಯಿಲ್ಲದೆ ಆತ್ಮಗುಣವಿಲ್ಲ; ಶುದ್ಧ ಧರ್ಮಪರಿ ಜ್ಞಾನವಿಲ್ಲ; ಅದಿಲ್ಲದೆ ವಿರಕ್ತಿಯು ನಿಜರೂಪದಲ್ಲಿಲ್ಲವೇ ಇಲ್ಲ.

ಹೀಗೆ ಯಾವ ದೋಷವಿಲ್ಲದೆ ಇರುವ "**ಕೋವಲರ್**" ಆಚಾರ್ಯರಲ್ಲಿ ಬೆಳೆದ ಶಿಷ್ಯ "**ಪೊರ್ಕೊಡಿ,**" "**ಪುಟ್ರರವಲಕುಲ್**" ಮತ್ತು

ಪುನಮಯಿಲ್—ನವಿಲಿನಂತಿರುವನು.

(I) ನವಿಲಿರುವೆಡೆ ವಿಷಕ್ರಿಮಿಗಳಿರುವುದಿಲ್ಲ; ಆಚಾರ್ಯನಾಗಲು ಯೋಗ್ಯತೆಯುಳ್ಳ ಶಿಷ್ಯನಿಗೆ ವ್ಯಾಧಿ, ಹಸಿವು ಮೊದಲಾದ ಅವದ್ಯಗಳಿರುವುದಿಲ್ಲ;

(II) ನವಿಲು ತನಗೆ ಸಂತೋಷವಾದಾಗ ಬಾಲ ಬಿಚ್ಚುವುದು; ಮತ್ತೊಬ್ಬರ ಪ್ರೇರಣೆಯಿಂದಲ್ಲ; ಹಾಗೆಯೇ ಇವನು;

(III) ನವಿಲನ್ನು ನೋಡಿ ಹಾವು ಓಡಿಹೋಗುವುದು; ಹಾಗೆ ಕುಟಿಲ ಪ್ರಕೃತಿಗಳು ಇವನಿಗೆ ಹೆದರುವರು;

(IV) ನವಿಲು ಮೇಘ ಕಂಡು ಕುಣಿಯುವುದು; ಇವನು ನೀಲಮೇಘ ಶ್ಯಾಮನ ನೆನೆಸಿಕೊಂಡರೆ ಕುಣಿಯುವನು; ಮೇಘದಂತೆ ಉದಾರಿ–ಅಂತಹ ಶಿಷ್ಯನೇ!

ಪೋದರಾಯ್—ಹೊರಡು (ಆಚಾರ್ಯರಲ್ಲಿಗೆ)

ಶುಟ್ರತ್ತು . . . ಪಾಡ—ವಿಕ್ಕ ಶಿಷ್ಯರೆಲ್ಲರೂ ಬಂದು ನಿನ್ನನ್ನು ಸುತ್ತಿರುವರು; "**ಮುಕಿಲ್‌ವಣ್ಣಪೇರ್‌ಪಾಡ**" ನೀಲಮೇಘಶ್ಯಾಮನಾದ ಪರಮಾತ್ಮನೊಡನೆ ಸಾಧಮ್ಯ ಹೊಂದಿರುವ ಆಚಾರ್ಯನನ್ನು ಸ್ತೋತ್ರಮಾಡುತ್ತಿರುವಾಗ

ಶಿಟ್ರಾದೇ ಪೇಶಾದೇ—ಚಲಿಸದೇ ಮಾತನಾಡದೇ ಇರುವನಾಗಿ

ಶೆಲ್ವಪ್ಪೆಂಡಾಟ್ಟಿ ನೀ—ಶಿಷ್ಯಗುಣಪೂರ್ತಿಯುಳ್ಳವನಾಗಿ

ಸದ್ಬುದ್ಧಿಃ ಸಾಧುಸೇವೀ ಸಮುಚಿತಚರಿತಃ ನ್ಯಾ–ವಿಂ 2

ಎಂದಿರುವಂತೆ ಪರಮಯೋಗ್ಯನಾದ ನೀನು

ಎಟ್ರುಕ್ಕು ಉರಂಗುಂ ಪೊರುಳ್ — ಹೀಗೆ ಮಲಗಿರುವುದರ ಉದ್ದೇಶವೇನು? ಏಳು–**ಏಲೋರೆಂಪಾವಾಯ್.**

॥ ಶ್ರೀಮತೇ ಯಾಮುನಮುನಯೇ ನಮಃ ॥

ಕನ್ನೆತ್ತಿಳಂ ಕಟ್ರೆರುಮೈ ಕನ್ರುಕ್ಕಿರಂಗಿ
ನಿನ್ನೆತ್ತು ಮುಲೈ ವಳ್ಳಿಯೇ ನಿನ್ರು ಪಾಲ್ ಶೋರ
ನನ್ನೆತ್ತಿಲ್ಲಂ ಶೇರಾರ್ಕುಂ ನರ್ಚೆಲ್ವ ತಂಗಾಯ್
ಪನಿತ್ತಲೈ ವೀೞ್ ನಿ ವಾಶಲ್‌ಕಡೈ ಪತ್ತಿ
ಶಿನತ್ತಿನಾಲ್ ತೆನ್ನಿಲಂಗೈಕ್ಕೋಮಾನೈ ಚ್ಚೆಟ್ರ
ಮನತ್ತುಕ್ಕು ಇನಿಯಾನೈ ಪ್ಪಾಡವುಂ ನೀ ವಾಯ್ ತಿರವಾಯ್
ಇನಿತ್ತಾನ್ ಎೞುಂದಿರಾಯ್ ಈದೆನ್ನ ಪೇರುರಕ್ಕಂ
ಅನೈತ್ತಿಲ್ಲತ್ತಾರುಂ ಅರಿಂದು ಏಲೋರೆಂಪಾವಾಯ್ ॥ ೧೭ ॥

" ಭಗವತ್ಕೈಂಕರ್ಯಮುಂ ಭಾಗವತ ಕೈಂಕರ್ಯಮುಂ ಶೇರ
ವನುಷ್ಮಿಕ್ಕ ವರಿದಾನ ಪೋದು ಪರಮುಪುರುಷಾರ್ಥಕಾಷ್ಠೈ
ಯಾನ ಭಾಗವತ ಕೈಂಕರ್ಯಮೇ ಉಪಾದೇಯತಮಂ "

ಎಂದು ನಿಗಮಾಂತದೇಶಿಕರೂ

ತಸ್ಮಾದ್ವಿಷ್ಣುಪ್ರಸಾದಾಯ ವೈಷ್ಣವಾ ಪರಿತೋಷಯೇತ್
ಪ್ರಸಾದಸುಮುಖೋ ವಿಷ್ಣುಃ ತೇನೈವ ಸ್ಯಾನ್ನಸಂಶಯಃ
ಮುಮು ಮದ್ಭಕ್ತಭಕ್ತೇಷು ಪ್ರೀತಿರತ್ಯಧಿಕಾ ಭವೇತ್ ।
ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾವಿಶೇಷತಃ ॥

ಭಾರ, ಆಶ್ವ 116–23

ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ ।
ತಸ್ಮಾತ್ಪರತರಂ ಪ್ರೋಕ್ತಂ ತದೀಯಾರಾಧನಂ ಪರಂ ॥

ಪಾದ್ಮೋತ್ತರ 29–81

ಅನಾದೃತಸುತಂ ಗೇಹೀ ಪುರುಷಂ ನಾಭಿನಂದತಿ ।
ತಥಾನರ್ಚಿತತದ್ಭಕ್ತಂ ಭಗವಾನ್ನಾಭಿನಂದತಿ ॥

ಶಾಂ–ಸ್ಮೃ 4–86

ಸ್ವಾರಾಧನಂ ವಿಹಾಮಾಪಿ ಸ್ವಭಕ್ತಾನರ್ಚಯಂತಿ ಯೇ ।
ತೇಭ್ಯಃ ಪ್ರಸನ್ನೋ ಭಗವಾ ಸಿದ್ಧಿಮಿಷ್ಟಾಂ ಪ್ರಯಚ್ಛತಿ ॥

ಎಂದು ಬೇರೆ ಸ್ಮೃತಿಯೂ ಹೇಳಿರುವಂತೆ ಪರಮಾತ್ಮನಿಗೆ ಅವನ ಭಕ್ತರು, ಅವರ ಭಕ್ತರೂ ತನಗಿಂತ ಪ್ರಿಯರು. ಆ ತೆರನಾದ ಭಾಗವತ ಭಕ್ತೆಯಾದ ಕನ್ಯೆಯನ್ನು ಎಬ್ಬಿಸುವ ಪದ್ಯವಿದು.

ಪರಮಾತ್ಮನನ್ನು ಒಂದು ಕ್ಷಣವೂ ಬಿಟ್ಟಿರಲಾರದ ಒಬ್ಬ ಗೋಪ; ಅವನು ಪರಮ ಭಾಗವತ;

ಭಾಗವತರಿಲ್ ಸಮ್ಯಕ್‌ಜ್ಞಾನಾಧಿಕರ್ ಸತ್ಕಾರ್ಯಯೋಗ್ಯ
ರಿಲ್ ಪ್ರಧಾನಂ; ನಿರ್ವೇದಾಧಿಕರ್ ಸಲ್ಲಾಪಯೋಗ್ಯರಿಲ್
ಪ್ರಧಾನಂ; ವೈರಾಗ್ಯಾಧಿಕರ್ ಸಹವಾಸಯೋಗ್ಯರಿಲ್ ಪ್ರಧಾನಂ

ಎಂದು ಪ್ರಧಾನಶತಕದಲ್ಲಿ ನಿಗಮಾಂತದೇಶಿಕರು ಹೇಳಿರುವಂತೆ ಈ ಗೋಪನು

" ಪರಮಾತ್ಮನಿ ಯೋ ರಕ್ತಃ ವಿರಕ್ತೋಽಪರಮಾತ್ಮನಿ "

ಎಂದು ಬಾರ್ಹಸ್ಪತ್ಯ ಸ್ಮೃತಿಯಂತೆ ಪರಮವಿರಕ್ತನು; ಅವನ ತಂಗಿ ಅವನನ್ನೇ ಅವಲಂಬಿಸಿ ಶ್ರೀಕೃಷ್ಣನಲ್ಲಿಗೆ ಹೋಗಲು ತಾಮಸ ಮಾಡಿರುವಳು. ಪರಮಾತ್ಮನಿಗೆ ಆ ಗೋಪನಿಗಿಂತ ಇವಳಲ್ಲಿ ಪ್ರೀತಿ ಹೆಚ್ಚು; ಭಾಗವತ ಭಕ್ತೆಯಲ್ಲವೇ ಇವಳು?

ರಾಮಾಯಣದಲ್ಲಿ ಶತ್ರುಘ್ನನಂತೆ; ಇವಳನ್ನು ಬಿಡುವುದುಂಟೆ ಎಂದು ಎಬ್ಬಿಸಲು ಬಂದಳು ಗೋದೆ.

ಕನ್ನೈತ್ತು . . . ಇರಂಗಿ—ಗಟ್ಟಿಯಾಗಿ ಕೂಗಿಕೊಂಡು ತಮ್ಮ ಎಳೇ ಕರುಗಳನ್ನು ನೆನೆಸಿಕೊಂಡು ಅವುಗಳ ಮೇಲಿನ ವಾತ್ಸಲ್ಯದಿಂದ ಓಡಿಬಂದು ಅಂಗಳದಲ್ಲಿ ಆ ಕರುಗಳಿಲ್ಲದಿರುವುದನ್ನೂ, ಸ್ವಲ್ಪಕಾಲವಾದರೂ ಬಾರದಿರುವುದನ್ನೂ ಕಂಡು, ಆ ಕರುಗಳ ನೆನಪಿನಲ್ಲಿ ಹಾಲು ಕೊಡುವ ಕಾಲವು ಮಿಂಚಿತಲ್ಲಾ ಎಂದು, ಕರುಗಳಿಲ್ಲದಿದ್ದರೂ ಕೆಚ್ಚಲಿನ ಮೂಲಕ ಹಾಲನ್ನು ತಾವೇ ಸುರಿದು

ನನ್ನೈತ್ತು ಇಲ್ಲಂ ಶೇರಾಕ್ಕುಂ—ಅಂಗಳವನ್ನೆಲ್ಲಾ ನೆನೆಸಿ ಅದನ್ನು ಕೆಸರನ್ನಾಗಿ ಮಾಡುವುದಕ್ಕೆ ಕಾರಣನಾದ

ನರ್ಚೆಲ್ವ ತಂಗಾಯ್—ಒಳ್ಳೆ ಐಶ್ವರ್ಯವಂತ ಗೋಪನ ತಂಗಿಯೇ!

ಗೋಪನು ಮನೆಯ ದೊಡ್ಡ ಮಗ; ಅದರ ಯಜಮಾನ; ಅವನಿಗೆ ಎಲ್ಲವನ್ನೂ ಒಪ್ಪಿಸಿ ನಿಶ್ಚಿಂತನಾಗಿರುವನು ಅವನ ತಂದೆ; ಇವನೊ ತನ್ನ ಹಾಲುಕರೆಯುವ ಕೆಲಸವನ್ನು ಬಿಟ್ಟು ಕೃಷ್ಣನ ಹಿಂದೆಯೇ ಓಡಾಡುತ್ತಿರುವನು. ಹಾಲುಕರೆಯುವ ಕಾಲವು ಮೀರಿಹೋಗಿ ಎಮ್ಮೆಗಳು ತಾವೇ ಹಾಲು ಸುರಿಸಿ, ಅದರ ಮೇಲೆ ಓಡಾಡಿ ಅಂಗಳವೆಲ್ಲಾ ಕೆಸರಾಗಿದೆ. ಇವನಲ್ಲಿ ಅನೇಕ ಎಮ್ಮೆಗಳಿವೆ; ಐಶ್ವರ್ಯವಂತ; ತಾನು ನಿತ್ಯವು ಮಾಡಬೇಕಾದ ಕೆಲಸವನ್ನು ಮರೆತು ಅನ್ಯಮನಸ್ಕನಾಗಿದ್ದರೂ ಅವನು **" ನರ್ಚೆಲ್ವ "** ಹೇಗೆ ಎನ್ನುವುದು ಪ್ರಶ್ನೆ. ಇಲ್ಲಿ ಸಂಗ್ರಹವಾಗಿ ಕೊಟ್ಟಿರುವ ಚಿತ್ರವನ್ನು ಮನಸ್ಸಿಗೆ ತಂದುಕೊಂಡು, ಅವನು ಇರುವುದಕ್ಕೂ ಅವನಿಗೆ ಕೊಟ್ಟಿರುವ ಕೀರ್ತಿಗೂ ವಿರೋಧ ಬರದಂತೆ ಅರ್ಥಮಾಡಿಕೊಳ್ಳಬೇಕು.

ಗೋಪರಿಗೆ ಗೋಪಾಲನಾದಿ ಕರ್ಮಗಳು ನಿತ್ಯಕರ್ಮ; ಭಗವದ್ಭಕ್ತಿಯು ನೈಮಿತ್ತಿಕವಲ್ಲದಿದ್ದರೂ ಭಗವಂತನ ಕೈಂಕರ್ಯವು ನೈಮಿತ್ತಿಕ. ರಾಮಾಯಣದಲ್ಲಿ ರಾಮನು ಲಕ್ಷ್ಮಣನ ವಿಷಯದಲ್ಲಿ

ದೇಶೇ ದೇಶೇ ಕಳತ್ರಾಣಿ ದೇಶೇ ದೇಶೇ ಚ ಬಾಂಧವಾಃ
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥

ರಾ–ಯು 102, 12

ಎಂದಿರುವನು. " ಎಲ್ಲೆಲ್ಲೂ ನಮ್ಮ ಸಾರವನ್ನು ಹೀರುವ ಹೆಂಡಂದಿರೂ ಮತ್ತು ಬಂಧುಗಳು ಸಿಗುವರು; ಆದರೆ ಸಹೋದರನಾದ ಭ್ರಾತಾವಿರುವ ಸ್ಥಳವು ನನಗೆ ಗೋಚರವಾಗಿಲ್ಲ " ಎಂದು ಅವನು ಹೇಳಿರುವುದರಲ್ಲಿ ಸ್ವಾರಸ್ಯವಿದೆ. ಸಾಮಾನ್ಯವಾಗಿ ಸಹೋದರನೆಂದರೆ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು. ಲಕ್ಷ್ಮಣನು ಭ್ರಾತಾ; ಸಹೋದರನಲ್ಲ; ಹಾಗಿದ್ದರೂ ಅವನನ್ನು ಸಹೋದರನೆಂದಿರುವನು ರಾಮ. ಅರ್ಥವಿಟ್ಟೇ ಹೇಳಿರುವನು. ಸಹ + ಉ + ಆದರಃ ಅಂದರೆ

ರಾಮನ ಸಂಗಡಲೇ ಯಾವಾಗಲೂ ಇದ್ದು ಅವನಲ್ಲಿ ಆದರವುಳ್ಳವನು ಲಕ್ಷ್ಮಣ; "ಉ" ಎಂದರೆ "ಏವ; ಭ್ರಾತೃವಾಗಿ ಹುಟ್ಟಿದರೂ ಜ್ಞಾತಿಗಳಾಗಿ ಬೆಳೆಯುವುದೇ ಲೋಕ ರೀತಿ; ಇದಕ್ಕೆ ಸಹವಾಸವೇ ಕಾರಣ; ಲಕ್ಷ್ಮಣನು ರಾಮನ ಸಹವಾಸದಲ್ಲೇ ತೊಟ್ಟಲಿನಿಂದ ಇದ್ದವನು (2ನೇ ಪಾಶುರವ್ಯಾಖ್ಯಾನ ನೋಡಿ.) ಅವನಿಗೆ ಭಿನ್ನಾದರ ಹುಟ್ಟಲು ಅವಕಾಶವೇ ಬರಲಿಲ್ಲ. ರಾಮನಿಗೂ ಲಕ್ಷ್ಮಣನಿಗೂ ಸಮಾನಾದರವಿತ್ತು. ಅಲ್ಲದೇ ರಾಮನ ಗುಣ (ಅಯೋಧ್ಯಾಕಾಂಡ 1ನೇ ಸರ್ಗನೋಡಿ) ಲಕ್ಷ್ಮಣನನ್ನು ಪೂರ್ಣವಶ ಮಾಡಿಕೊಂಡಿತ್ತು. ಆಂಜನೇಯನೊಡನೆ, ಸುಗ್ರೀವ ಸಖ್ಯಕ್ಕೆ ಮುಂಚೆ ತಮ್ಮ ಪರಿಚಯವನ್ನು ಹೇಳಿಕೊಳ್ಳುವಾಗ ಲಕ್ಷ್ಮಣನು ತನ್ನನ್ನು ಹೇಳಿಕೊಂಡಿದ್ದು **"ಗುಣೈರ್ದಾಸ್ಯಮುಪಾಗತಃ"** ಎಂದು; ಅದಕ್ಕಾಗಿಯೇ ಸುಷೇಣನು ಲಕ್ಷ್ಮಣನು ಮೂರ್ಛೆಬಿದ್ದಾಗ **"ಲಕ್ಷ್ಮಣೋ ಲಕ್ಷ್ಮಿವರ್ಧನಃ"** ಎಂದಿರುವನು. ಲಕ್ಷ್ಮಣನಿಗೆ ಎಂದಿಗೂ ಕೇಡು ಸಂಭವಿಸಲಾರದು. ಇವನು ತನಗೆ ವಿಹಿತವಾಗಿದ್ದ ಅಗ್ನಿಹೋತ್ರಾದಿಗಳನ್ನೆಲ್ಲಾ ಬಿಟ್ಟು ರಾಮನ ಸೇವೆಯಲ್ಲೇ ಕಳೆದನು ದಿನಗಳನ್ನು. ರಾಮನ ಸೇವೆ ನೈಮಿತ್ತಿಕ ಇವನಿಗೆ. ನಿತ್ಯಕರ್ಮ ಲೋಪಬಂದರೂ ಬಾಧಕವಿಲ್ಲ, ಹಿಂದಿನ ಪಾಶುರದಲ್ಲಿ ಹೇಳಿರುವಂತೆ. **"ನಿತ್ಯಾತ್ ನೈಮಿತ್ತಿಕಂ ಪ್ರಬಲಂ"** ಎನ್ನುವುದೇ ಶಾಸ್ತ್ರ; ಇಲ್ಲಿಯೂ ಗೋಪನಿಗೆ ಕೃಷ್ಣ ಸೇವೆ ನೈಮಿತ್ತಿಕವಾಗಿ, ಹಾಲು ಕರೆಯುವ ನಿತ್ಯಕರ್ಮ ಲೋಪ ಬಂದರೂ ಅವನು **"ನರ್ಚೆಲ್ವ"** ಅದಕ್ಕಾಗಿಯೇ ನಿಗಮಾಂತ ದೇಶಿಕರು

ಆಜ್ಞಾಕೈಂಕರ್ಯವೃದ್ಧಿಷ್ವನಘಗುರುಜನಪ್ರಕ್ರಿಯಾನೇಮವೃದ್ಧಿಃ
ಸ್ವಾಹಾರ್ಹಾನುಜ್ಞಾತಸೇವಾಧಿಷು ಚ ಶಕನೇ ಯಾವದಿಷ್ಟಂ ಪ್ರವೃತ್ತಃ।

ಎಂದಿರುವರು.

ಮತ್ಕರ್ಮಕುರ್ವಂತಾಂ ಪುಂಸಾಂ ಕರ್ಮಲೋಪೋ ಭವೇದ್ಯದಿ।
ತತ್ಕರ್ಮ ಕುರ್ವತೇ ನಿತ್ಯಂ ತಿಸ್ರಃ ಕೋಟ್ಯೋ ಮಹರ್ಷಯಃ॥

ಎನ್ನುವ ಭಗಚ್ಛಾಸ್ತ್ರವಾಕ್ಯದಂತೆ "ಅವಿಚ್ಛಿನ್ನ ಕೈಂಕರ್ಯದಲ್ಲಿ ಸಾಮಾನ್ಯ ಧರ್ಮ ಲೋಪ ಬಂದರೂ ದೋಷವಿಲ್ಲ." ಈ ವಿಷಯದಲ್ಲಿ ಬ್ರಹ್ಮಸೂತ್ರ III, 4, 1 ಪುರುಷಾರ್ಥಾಧಿಕರಣದಲ್ಲಿ ರಾಮಾನುಜರು ತೀರ್ಪನ್ನು ಕೊಟ್ಟಿರುವರು. ಆದ್ದರಿಂದ ಗೋಪನು ನಿತ್ಯಕರ್ಮವನ್ನು ಬಿಟ್ಟವನಾದರೂ **"ನರ್ಚೆಲ್ವ"**; ಇದು ಒಂದು ಯೋಜನೆ.

ಪೆರಿಯ ಪರಕಾಲಸ್ವಾಮಿಯವರು ಬೇರೆ ಯೋಜನೆಯನ್ನು ಕೊಟ್ಟಿರುವರು. ಇಲ್ಲಿ ಕರೆಯಲ್ಪಡಬೇಕಾದವು ಹಸುಗಳಲ್ಲ; ಎಮ್ಮೆಗಳು; **ಕೃಷಿ ಗೋರಕ್ಷ್ಯ ವಾಣಿಜ್ಯಂ ವೈಶ್ಯಸ್ಯಾಪಿ ಸ್ವಭಾವಜಂ"** ಎನ್ನುವುದರಲ್ಲಿರುವ "ಗೋ" ಶಬ್ದಕ್ಕೆ "ಎಮ್ಮೆ"ಯೆಂದು ಅರ್ಥವಾಗುವುದಿಲ್ಲ. ಆದ್ದರಿಂದ ಎಮ್ಮೆ ಕರೆಯುವುದು ಗೋಪನ

ನಿತ್ಯಕರ್ಮವಲ್ಲ; ಅದು ಕಾಮ್ಯಕರ್ಮ; ಅದನ್ನು ಉಪೇಕ್ಷೆ ಮಾಡಿ ಶ್ರೀಕೃಷ್ಣ ಸೇವೆಯಲ್ಲಿ ಅವನಿದ್ದುದು ಶಾಸ್ತ್ರವಿಹಿತವೇ.

ಒಟ್ಟಿನಲ್ಲಿ ಗೋಪನು ದೋಷವಿಲ್ಲದವನು. ಇಂತಹ ಭಾಗವತನಾದ ಅಣ್ಣನನ್ನು ಸೇವೆ ಮಾಡುತ್ತಿರುವುದರಿಂದ ಈ ಗೋಪಿಯು ಹಿಂದಿನ ಪಾಶುರದ **"ಪೊರ್ಕೊಡಿ"** ಗಿಂತಲೂ ಉತ್ತಮಳು.

ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ

ಎಂದು ರಾಮನು ಭರತ ವಿಷಯದಲ್ಲಿ ಹೇಳಿಕೊಂಡಂತೆ ಇವಳಿಗೆ ಇವಳ ಅಣ್ಣ ಗೋಪ.

ಪನಿತ್ತಲೈ ವೀೞ್ ನಿನ್ ವಾಶಲ್ ಕಡೈ ಪತ್ತಿ — ಮಳಿಹನಿ ತಲೆಯಮೇಲೆ ಬೀಳುತ್ತಿದ್ದರೂ ನಿನ್ನ ಮನೆಬಾಗಿಲಿನ ಮೆಟ್ಟಲನ್ನು ನಾವು ಹಿಡಿದುಕೊಂಡು–ಇಷ್ಟು ಹೇಳುವದರೊಳಗೆ ಒಳಗಿರುವವಳು "ಹೌದೆ, ಮನೆಯ ಹೊರಅಂಗಳ ಕೆಸರಾಗಿದೆ; ತಲೆಯಮೇಲೆ ನೀರು ಸುರಿಯುತ್ತಿದೆ; ಹೀಗಿದ್ದರೂ ನಿಮಗೇಕೆ ಈ ಪ್ರಯಾಸ; ಕೃಷ್ಣನಲ್ಲಿಗೆ ನನ್ನನ್ನು ಕರೆದೊಯ್ಯಲು ತಾನೆ ಹೀಗೆ ಬಂದಿರುವಿರಿ; ಅವನಲ್ಲಿಗೆ ಏಕೆ ಹೋಗಬೇಕು? ವಿಧಿ, ತಪ್ಪಿದ್ದಲ್ಲ–ಎಂದರೆ ನಿಧಾನವಾಗಿ ಹೋದರಾಯಿತು; ಅವನನ್ನು ನಂಬುವಂತಿಲ್ಲ; ಅವನ ವಿಷಯದಲ್ಲಿ **"ಪೊಯ್ಯೇ ಆಶ್ರಿತಸಂರಕ್ಷಣ ತ್ತಿರ್ಕು ತಂಜಂ."** ಇದಕ್ಕೆ ಉತ್ತರ "ಬೇಡ ಕಣೆ; ನಿನಗೆ ಕೃಷ್ಣನನ್ನು ಕಂಡರೆ ಇಷ್ಟವಿಲ್ಲವೆನ್ನುವುದು ಗೊತ್ತು; ರಾಮನೆಂದರೆ ನಿನಗೆ ಹಿಡಿಸುತ್ತೆ. ಅಲ್ಲವೆ? ಅವನನ್ನೇ ಹಾಡಿಕೊಂಡು ಹೋಗೋಣ ಬಾ.

ಶಿನತ್ತಿನಾಲ್ . . . . ತಿರವಾಯ್—ಕೋಪದಿಂದ ರಮ್ಯವಾದ ಲಂಕಾಪುರಿಗೆ ರಾಜನಾದ ರಾವಣನನ್ನು ಕೊಂದ, ನಿನ್ನ ಮನಸ್ಸಿಗೆ ಬಹಳ ಹಿಡಿಸುವ ರಾಮನನ್ನು ನಾವು ಹಾಡಲು (ಹೊರಟಿರುವೆವು) ಹಾಗಿದ್ದರೂ ನೀನು ಬಾಯಿ ಬಿಚ್ಚುತ್ತಿಲ್ಲ; ರಾಮನಿಗೆ ಕೋಪವೇ ಬರುವುದಿಲ್ಲ; ಬಂದರೆ ಯಾರೂ ಅವನ ಮುಂದೆ ನಿಲ್ಲುವಂತಿಲ್ಲ; ಕೋಪಬರುವುದೂ ಅವನಿಗಾಗಲ್ಲ; ತನಗೆ ಸೇರಿದವರಿಗೆ ಹಿಂಸೆಯಾದರೆ ಅವನು ಸಹಿಸನು; ಸೀತಾಪಹರಣವನ್ನು ಯಾರೂ ತಿಳಿಸದಿರಲು

ಪುರೇವ ಮೇ ಚಾರುದತೀಮನಿಂದಿತಾಂ
ದಿಶಂತಿ ಸೀತಾಂ ಯದಿ ನಾದ್ಯ ಮೈಥಿಲೀಂ
ಸದೇವಗಂಧರ್ವಮನುಷ್ಯಪನ್ನಗಂ
ಜಗತ್ಸಶೈಲಂ ಪರಿವರ್ತಯಾಮ್ಯಹಂ

"ಸೀತೆಯು ಯಾವಾಗಲೂ ಪ್ರಸನ್ನಮುಖೀ "ನಿತ್ಯಮಜ್ಞಾತನಿಗ್ರಹಾ" ಎನಿಸಿಕೊಂಡ ಶ್ರೀದೇವಿಯಲ್ಲವೇ ಇವಳು; ನಿರ್ದೋಷಳು; ಅವಳನ್ನು ಅಪಹರಿಸಿದವನನ್ನು ಯಾರೂ ಹೇಳದಿದ್ದರೆ ವಿಶ್ವವನ್ನೇ ನಾಶಮಾಡುವೆನು" ಎಂದು ಕೋಪಗೊಂಡ. ಆಗ ಲಕ್ಷ್ಮಣ

ಕಿಂ ತೇ ಸರ್ವವಿನಾಶೇನ ಕೃತೇನ ಪುರುಷರ್ಷಭ ।
ತಮೇವ ಚರಿತಂ ಪಾಪಂ ವಿಜ್ಞಾಯೋದ್ಧರ್ತುಮರ್ಹಸಿ ॥

ಎಂದದ್ದಕ್ಕೆ ಸಮಾಧಾನಗೊಂಡನು. ಇವನು ಯಾವತ್ತಿಗೂ

" ರಿಪೂಣಾಮಪಿ ವತ್ಸಲಃ "

ಇದು ರಾಮಾಯಣದಲ್ಲಿ ಎರಡುಕಡೆ ಬರುತ್ತದೆ. ಅರಣ್ಯಕಾಂಡದಲ್ಲಿ ಲಕ್ಷ್ಮಣ ಒಂದಾವರ್ತಿ ಹೇಳಿದ; ಯುದ್ಧಕಾಂಡದಲ್ಲಿ ಗರುಡ ಹೇಳಿದ್ದು ಎರಡನೇಯಾವರ್ತಿ. ಲಕ್ಷ್ಮಣ ಆದಿಶೇಷ; ಅವನು ಗರುಡ ಪರಸ್ಪರ ಶತ್ರುಗಳು ಲೋಕದೃಷ್ಟಿಯಲ್ಲಿ. ಪರಸ್ಪರ ಶತ್ರುಗಳಾದವರು ರಾಮನನ್ನು ಇಷ್ಟು ಪ್ರಿಯವಾಗಿ ಹೇಳಬೇಕಾದರೆ ಅವನ ಸೌಶೀಲ್ಯವು ಪರಮಾವಧಿ ರೂಪ ಮುಟ್ಟಿದೆ. ತನ್ನ ಪರಮಶತ್ರುವಾದ ರಾವಣನನ್ನು ಮೊದಲು ಸೋಲಿಸಿ

ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ ಪ್ರವಿಶ್ಯ ರಾತ್ರಿಂಚರರಾಜ ಲಂಕಾಂ ।
ಅಶ್ವಾಸ್ಯ ನಿರ್ಯಾಹಿ ರಥೀ ಚ ಧನ್ವೀ ತದಾ ಬಲಂ ದ್ರಕ್ಷ್ಯಸಿ ಮೇ ರಥಸ್ಥಃ ॥

" ರಾವಣ, ಹೋಗು; ನಿನಗೆ ಅವಕಾಶ ಕೊಟ್ಟಿರುವೆನು; ಯುದ್ಧದಿಂದ ದಣಿದಿರುವೆ; ಲಂಕೆಗೆ ಹೋಗು; ಸುದಾರಿಸಿಕೊ; ರಥ, ಧನುಸ್ಸು ಮೊದಲಾದವುಗಳಿಂದ ಸಜ್ಜಿತನಾಗಿ ಮತ್ತೆ ಬಾ; ಆಗ ನೋಡುವೆಯಂತೆ ನನ್ನ ಬಲವನ್ನು " ಹೀಗೆ ಹೇಳಿದವನಲ್ಲವೇ **" ಮನತ್ತುಕ್ಕು ಇನಿಯ್ಯ; "** ಇವನು ಎಷ್ಟು ದಯಾಮಯ; ರಾವಣ ಹಿಂತಿರುಗಿ ಯೋಚಿಸಿದ; ತಾನು ಮಾಡಿದ್ದು ತಪ್ಪು ಎಂದು ತಿಳಿದ; ಆದರೆ ಜಾತಿಗುಣ ಎಲ್ಲಿ ಹೋಗಬೇಕು; ತಾನು ಹೀಗೆ ತಿಳಿದವನೇಲಾದರೂ ಶರಣು ಬರಲೆಂದು ತನಗೆ ಅವಕಾಶ ಕೊಟ್ಟಿರುವನೆಂದು ಅರಿಯಲಾರದವನಾದ. ಹಿಂದೆ ಜನಸ್ಥಾನದಲ್ಲಿ 14 ಸಹಸ್ರ ರಾಕ್ಷಸರೊಡನೆ ಖರ, ದೂಷಣ ಮತ್ತು ತ್ರಿಶಿರಸ್ಸು–ಇವರೆಲ್ಲರನ್ನೂ ಒಬ್ಬನೇ ಕೊಂದ ವೃತ್ತಾಂತವನ್ನು ರಾವಣನಿಗೆ ಅಲ್ಲಿಂದ ತಪ್ಪಿಸಿಕೊಂಡು ಬಂದ ಅಕಂಪನನು ತಿಳಿಸಿದಾಗ

" ರಾಮೋ ನಾಮ ಮಹಾತೇಜಾಃ ಶ್ರೇಷ್ಠಸ್ಸರ್ವಧನುಷ್ಮತಾಂ ।
ದಿವ್ಯಾಸ್ತ್ರಗುಣಸಂಪನ್ನಃ ಪರಂ ಧರ್ಮಂ ಗತೋ ಯುಧಿ ॥

ರಾ–ಅರ 81–15

ರಾವಣ ಒಂದು ಮಾತಿನಲ್ಲಿ ಹೇಳುವುದಾದರೆ

ನಹಿ ರಾಮೋ ದಶಗ್ರೀವ ಶಕ್ಯೋ ಜೇತುಂ ರಣೇ ತ್ವಯಾ ॥ "

ರಾ–ಅರ 31–27

ಎಂದನು. ಶೂರ್ಪನಕಿಯು ರಾಮನನ್ನು ರಾವಣನಿಗೆ ವರ್ಣಿಸುವಾಗ

ದೀರ್ಘಬಾಹುಃ ವಿಶಾಲಾಕ್ಷಃ ಚೀರಕೃಷ್ಣಾಜಿನಾಂಬರಃ ।
ಕಂದರ್ಪಸಮರೂಪಶ್ಚ ರಾಮೋ ದಶರಥಾತ್ಮಜಃ ॥ ರಾ–ಅರ 32–5

ಋಷೀಣಾಮುಭಯಂ ದತ್ತಂ ಕೃತಘ್ನೇಮಾಶ್ಚ ದಂಡಕಾಃ ॥ 3–11

ಎಂದು ಅವನ ಸೌಂದರ್ಯದೊಡನೆ ವೀರ್ಯವನ್ನೂ ಹೇಳಿದಳು. ಮಾರೀಚನು ಇನ್ನೂ ಸ್ಪಷ್ಟವಾಗಿ ತಿಳಿಸಿದನು. " ರಾವಣ,

ನ ರಾಮಃ ಕರ್ಕಶಸ್ತಾತ ನಾವಿದ್ವಾನ್ ನಾಜಿತೇಂದ್ರಿಯಃ ।

–37, 12,13

ಅನೃತಂ ನ ಶ್ರುತಂ ಚೈವ ನೈವ ತ್ವಂ ವಕ್ತುಮರ್ಹಸಿ ॥
ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ ।
ರಾಜಾ ಸರ್ವಸ್ಯ ಲೋಕಸ್ಯ ದೇವಾನಾಮಿವ ವಾಸವಃ ॥

ಕುಂಭಕರ್ಣನೂ ಕೂಡ ಹಿಂದೆ ವಿಭೀಷಣನು ಹೇಳಿದ್ದನ್ನೇ ಜ್ಞಾಪಿಸಿ

ಯದುಕ್ತಮಿಹ ತೇ ಪೂರ್ವಂ ಕ್ರಿಯತಾಂ ಅನುಜೇನ ಚ ।
ತದೇವ ನೋ ಹಿತಂ ಕಾರ್ಯ ಯದಿಚ್ಛಸಿ ತಥಾ ಕುರು ॥

ಯು. 73–21

ಎಂದು ಹಿತ ಹೇಳಿದನು. ಹೀಗೆ ಶತ್ರುಗಳಾದ ರಾಕ್ಷಸಕುಲ ನಾಯಕರಿಂದಲೂ ಹೊಗಳಿಸಿಕೊಂಡವನು

" ರಿಪೂಣಾಮಪಿ ವತ್ಸಲಃ " ಮತ್ತು **" ಮನತ್ತುಕ್ಕು ಇನಿಯ್ಯಾ "** ಮಂಡೋದರಿ? ರಾವಣನು ಸತ್ತಮೇಲೆ ಅವನ ಶರೀರದಮೇಲೆ ಬಿದ್ದು ರೋದಿಸುತ್ತಾ " ಮಹಾವೀರ ರಾವಣ, ಜನಸ್ಥಾನ ನಿರ್ಮೂಲನ, ಲಂಕಾದಹನ, ಸಮುದ್ರತರಣ ಇವುಗಳಿಂದಲೂ, ಯುದ್ಧದಲ್ಲಿ ಅವನು ತೋರಿದ ವೀರ್ಯದಿಂದಲೂ

ಅಥವಾ ರಾಮರೂಪೇಣ ಕೃತಾಂತಃ ಸ್ವಯಮಾಗತಃ ॥

ಯು. 114–12

ಎಂದು ತಿಳಿಯದೇ ಹೋದೆಯಲ್ಲಾ? ರಾಮ ಪರಮಾತ್ಮನೆಂದೂ ತಿಳಿಯಲಿಲ್ಲವೇ?

ವ್ಯಕ್ತಮೇಷೋ ಮಹಾಯೋಗೀ ಪರಮಾತ್ಮಾ ಸನಾತನಃ ।
ಅನಾದಿಮಧ್ಯನಿಧನಃ ಮಹತಃ ಪರಮೋ ಮಹಾ ॥
ತಮಸಃ ಪರಮೋ ಧಾತಾ ಶಂಖಚಕ್ರಗದಾಧರಃ ।
ಶ್ರೀವತ್ಸವಕ್ಷಾಃ ನಿತ್ಯಶ್ರೀಃ ಅಜಯಃ ಶಾಶ್ವತೋ ಧ್ರುವಃ ॥
ಸರ್ವಲೋಕೇಶ್ವರಃ ಸಾಕ್ಷಾತ್ ಲೋಕಾನಾಂ ಹಿತಕಾಮ್ಯಯಾ ।
ಸ ರಾಕ್ಷಸಪರೀವಾರಂ ಹತವಾನ್ ಸ್ತ್ವಾಂ ಮಹಾದ್ಯುತಿಃ ॥

ರಾ–ಯು. 114, 14–17

ಇಂತಹ ರಾಮನನ್ನು

" ಮನತ್ತುಕ್ಕು ಇನಿಯಾನೈ ಪಾಡವುಂ ನೀ ವಾಯ್ ತಿರವಾಯ್ "

ನಿನ್ನ ಬಾಯಿಂದಲೂ ನಮ್ಮೊಡನೆ ಹಾಡುವೆಯಂತೆ ಬಾ,

ಕೂರತ್ತಾೞ್ವಾನವರು ರಾಮಾವತಾರವನ್ನು ಏಳು ಶ್ಲೋಕಗಳಲ್ಲಿ ಸುಂದರವಾಗಿ ವರ್ಣಿಸಿರುವರು (ಸುಂದರ ಬಾಹುತ್ತವ 100–105) ಅಲ್ಲಿ ಅವರು **ಶ್ರೀರ್ಮ ಸುಂದರ ಸೇತುಬಂಧನಮುಖಾಃ ಕ್ರೀಡಾ ಸ್ತವಾಡಂಬರಂ** (105) ಎಂದು ಹೇಳಿರುವುದು ಎಷ್ಟು ಇಂಪಾಗಿದೆ. ಪರಾಶರಭಟ್ಟರು (ಅವರ ಮಕ್ಕಳು) ಸಹಸ್ರನಾಮ ಭಾಷ್ಯದಲ್ಲಿ

" ಮೃತಸಂಜೀವನಂ ರಾಮಚರಿತಮಾರಭ್ಯತೇ "

ಎಂದು ಪೀಠಿಕೆಯನ್ನು ಹಾಡಿಕೊಂಡು 32 ನಾಮಗಳನ್ನು ಭೀಷ್ಮರು ಹಾಡಿದ್ದನ್ನು ಇಂಪಾಗಿ ವಿವರಿಸಿರುವರು.

1) ಪರರ್ದಿಃ—ಕಲ್ಯಾಣಗುಣ ಸಮೃದ್ಧಿಯುಳ್ಳವನು;
2) ಪರಮಃಸ್ಪಷ್ಟಃ—ತನ್ನ ಪರದೇವತಾ ಸ್ವರೂಪವನ್ನು ತೋರಿಸಿರುವನು.
3) ತುಷ್ಟಃ—ಪ್ರಜೆಗಳಿಗೆ ಸಂತೋಷಕೊಟ್ಟು, ತಂದೆಗೂ ಸಂತೋಷಕೊಟ್ಟು, ತಾನು ಆನಂದಪಟ್ಟವನು;
4) ಪುಷ್ಟಃ—ದಯಾದಿ ಗುಣಸಂಪನ್ನನು;
5) ಶುಭೇಕ್ಷಣಃ—ಎಲ್ಲರನ್ನೂ ಮೋಹಗೊಳಿಸುವ, ದರ್ಶನದಿಂದಲೇ ರಕ್ಷಿಸಬಲ್ಲ ಕಣ್ಣುಳ್ಳವನು;
6) ರಾಮಃ—ತನ್ನ ಗುಣದಿಂದಲೂ, ಸೌಂದರ್ಯದಿಂದಲೂ ಎಲ್ಲರನ್ನೂ ಸಂತೋಷಪಡಿಸುವವನು;
7) ವಿರಾಮಃ—ಬ್ರಹ್ಮನೇ ಮೊದಲಾದ ದೇವತೆಗಳು ಕೊಟ್ಟ ವರಗಳನ್ನು ಸುಳ್ಳಾಗಿಸಿದವನು;
8) ವಿರತಃ—ಸ್ವಾಭಾವಿಕವಾಗಿ ಕೃಪಣಗಳಾದ ರಾಜ್ಯಾದಿಗಳಲ್ಲಿ ಆಸೆ ಇಲ್ಲದವನು;
9) ಮಾರ್ಗಃ—ಭರದ್ವಾಜಾದಿ ಋಷಿಗಳಿಂದ ನಿತ್ಯವಾಗಿ ಹುಡುಕಲ್ಪಡುತ್ತಿರುವವನು;
10) ನೇಯಃ—ತನ್ನನ್ನೇ ನಂಬಿರುವವರಿಂದ ನಿಯೋಗಿಸಲ್ಪಡುವವನು **" ಆಜ್ಞಾಪ್ಯೋಹಂ ತಪಸ್ವಿನಾಂ " " ಶತ್ರೂಣಾಮುಪ್ರಕಂಪ್ಯೋಪಿ ಲಘುತ್ವಮಗಮತ್ಕಪೇಃ "** ಎನ್ನುವಂತೆ;
11) ನಯಃ—ಎಲ್ಲರ ರಕ್ಷಕನು;
12) ಅನಯಃ—ಹಾಗಿಲ್ಲದವರಿಗೆ ಜಗ್ಗದವನು;
13) ವೀರಃ—ರಾಕ್ಷಸರಿಗೆ ಭಯಕಾರಣನಾದವನು;
14) ಶಕ್ತಿಮತಾಂ ಶ್ರೇಷ್ಠಃ—ಶಕ್ತಿವಂತರಲ್ಲಿ ಉತ್ತಮನು;
15) ಧರ್ಮಃ—ಅಭ್ಯುದಯ ಮತ್ತು ಮೋಕ್ಷಕ್ಕೆ ಕಾರಣನು;
16) ಧರ್ಮವಿದುತ್ತಮಃ—ಧರ್ಮ ತಿಳಿದವರಾದ ವಸಿಷ್ಠ, ವಾಮದೇವ, ಮಾರ್ಕಂಡೇಯ, ಜಾಬಾಲಿ ಇವರಿಗಿಂತಲೂ ಉತ್ತಮನು;

17) ವೈಕುಂಠಃ—ಎಲ್ಲರೊಡನೆಯೂ ಸಮಭಾವದಲ್ಲಿ ಸಂಶ್ಲೇಷಿಸಿರುವವನು;
18) ಪುರುಷಃ—ಪರಮಪಾವನನಾದವನು;
19) ಪ್ರಾಣಃ—ಎಲ್ಲರಿಗೂ ಪ್ರಾಣನಾಗಿರುವವನು;
20) ಪ್ರಾಣದಃ—ಎಲ್ಲರಿಗೂ ಪ್ರಾಣ ಕೊಡುವವನು;
21) ಪ್ರಣಯಃ—ತನ್ನ ಗುಣದಿಂದಲೇ ಎಲ್ಲರನ್ನೂ ಉಜ್ಜೀವಿಸಬಲ್ಲವನು;
22) ಪೃಥುಃ—ಮಹಾ ಯಶಸ್ಸುಳ್ಳವನು;
23) ಹಿರಣ್ಯಗರ್ಭಃ—ತನ್ನ ಅವತಾರಕಾಲದಲ್ಲಿರುವವರಿಗೂ ಧಾನ್ಯಾದಿಗಳಿಂದ ಉಪಕರಿಸುವವನು;
24) ಶತ್ರುಘ್ನಃ—ನಮ್ಮ ಶತ್ರುಗಳಾದ ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯ ವಿಮುಖ ಮಾಡಬಲ್ಲ ಗುಣವುಳ್ಳವನು;
25) ವ್ಯಾಪ್ತಃ—ಹಾಗಾದಮೇಲೆ ಧ್ಯಾನದಲ್ಲಿ ಮುಗ್ಧ, ವೃದ್ಧ, ಭರ್ತೃ, ಭೃತ್ಯ, ಶತ್ರು, ಮಿತ್ರ ಇವರೆಲ್ಲರಲ್ಲೂ ವಾತ್ಸಲ್ಯದಿಂದ ವ್ಯಾಪಿಸಿಕೊಂಡಿರುವನು;
26) ವಾಯುಃ—ಅವರಲ್ಲಿಗೆ ತಾನೇ ಹೋಗುವವನು, ಶಬರಿಯಲ್ಲಿಗೆ ಹೋದಂತೆ;
27) ಅಧೋಕ್ಷಜಃ—ಹೀಗೆ ಸರ್ವರಿಗೂ ಸದಾ ಭೋಗ್ಯನಾಗಿದ್ದರೂ ಕ್ಷಯಿಸದವನು;
28) ಋತುಃ—ಯಾವಾಗಲೂ ಅಪೂರ್ವನು;
29) ಸುದರ್ಶನಃ—ಇವನನ್ನು ನೋಡುವುದರಿಂದ ಎಲ್ಲರಿಗೂ ಶೋಭನವುಂಟಾಗುವಂತಿರುವವನು;
30) ಕಾಲಃ—ಸಕಲ ಚರಾಚರವಸ್ತುಗಳನ್ನು ಸಂಕಲನ ಮಾಡುವವನು;
81) ಪರಮೇಷ್ಠೀ—ರಾಕ್ಷಸಾದಿಗಳನ್ನು ಕೊಂದು ಜಗದ್ರಕ್ಷಕನಾಗಿದ್ದು ತನ್ನ ಸ್ಥಾನವಾದ ವೈಕುಂಠಕ್ಕೆ ತೆರಳಿ ನಿಲ್ಲುವವನು;
32) ತನ್ನ ಪ್ರಜೆಗಳಲ್ಲಿ ಯಾರು ಯಾರು ಬಂದರೋ ಅವರೆಲ್ಲರನ್ನೂ ವೈಕುಂಠಕ್ಕೆ ಕರೆದೊಯ್ದವನು.

ಹೀಗೆ ಅವತಾರ ಮೊದಲ್ಗೊಂಡು ವೈಕುಂಠಕ್ಕೆ ಹೋಗುವವರಿಗೂ ಅವನು ಪ್ರಕಾಶಪಡಿಸಿದ ದಿವ್ಯ ಗುಣಗಳನ್ನು ಭೀಷ್ಮರು ಈ ಮುವತ್ತೆರಡು ಗುಣಗಳಿಂದ ಅನುಭವಿಸಿರುವರು. ಇದರಲ್ಲಿ ರಾಮನ ಗುಣರೂಪದಲ್ಲಿ ರಾಮಾಯಣ ಸಂಗ್ರಹವೇ ಇದೆ. ಈ ರಾಮನಲ್ಲವೇ **" ಮನತ್ತುಕ್ಕು ಇನಿಯಾರ್ "** ಶಠಗೋಪರೂ ಕೂಡ

ಮೂವರಾಕಿಯ ಮೂರ್ತಿಯೈ ಮುದಲ್ ಮೂವರ್ಕುಂ ಮುದಲ್ವನ್ ತನ್ನೈ
ಶಾವಮುಳ್ಳನ ನೀಕ್ಕುವಾನೈ ತಡಂಕಡಲ್ ಕಿಡಂದಾನ್ ತನ್ನೈ
ತೇವದೇವನೈ ತೆನ್ನಿಲಂಗೈ ಯೆರಿ ಯೆೞ ಚ್ಚೆತ್ತವಿ ಲ್ಲಿನೈ
ಪಾವನಾಶನೈ ಪಂಗಯ ತಡಂ ಕಣ್ಣನೈ ಪರವುಮಿನೋ III, 6, 2

ತುಯರಮೇ ತರುಂ ತುನ್ಬವಿನ್ಬವಿನೈಗಳಾಯ್ ಅವೈ ಅಲ್ಲನಾಯ್

ಉಯರ ನಿನ್ರದೋರ್ ಶೋದಿಯಾಯ್
ಉಲಗೇೞುಮುಂಡುಮುಕ್ಗುನ್ರಾ ತನ್ನೈ
ಅಯರ ವಾಂಗು ನರ್ಮತಮಕ್ಕು ಅರುನಂಜಿನೈ ಅಚ್ಯುತ ತನ್ನೈ
ತಯರದಕ್ಕುರ್ ಮರ್ಕ ತನ್ನೈ ಯನ್ರಿ ಮತ್ತಿಲ್ಲೇ ತಂಜಮಾಕವೇ

III, 6, 8

ಎಂದು ರಾಮನನ್ನು ಆಶ್ರಯಿಸಿದರು. ಇವನ ಮಹಿಮೆಯನ್ನು ಎಷ್ಟು ಹೇಳಿದರೂ ಸಾಲದು.

1) ಪರತ್ವವನ್ನು ತೋರಿಸದೇ ಇದ್ದು ಪರವಸ್ತುವಾಗಿರುವುದು;
2) "ರಿಪೂಣಾಮಪಿವತ್ಸಲಃ" ಎಂದಿದ್ದುದು;
3) ಶಸ್ತ್ರಘಾತದಿಂದ ಸತ್ತವರಿಗೆ ಮೋಕ್ಷವಿಲ್ಲವೆಂದು ಶಾಸ್ತ್ರವಿದ್ದರೂ ಜಟಾಯುವಿಗೆ ಮೋಕ್ಷ ಕೊಟ್ಟಿದ್ದು;
4) ಮೋಕ್ಷದಲ್ಲಿ ರಾಮಕತೆಯಿಲ್ಲವೆನ್ನುವಕಾರಣ ಮೋಕ್ಷವೇ ಬೇಡವೆಂದು ಆಂಜನೇಯನು ಹೇಳುವಂಥ ಮಹಿಮೆಯುಳ್ಳವನಾಗಿರುವುದು;
5) ತನ್ನ ಭಕ್ತರಿಗೆ ತೊಂದರೆ ಬಂದಾಗ ಮಾತ್ರ ಕೋಪಿಸಿಕೊಳ್ಳುವುದು; ರಾವಣನು ಆಂಜನೇಯನಿಗೆ ಘಾಯಗೊಳಿಸಿದಾಗ ಆದಂತೆ;
6) ರಾವಣನನ್ನು ಸೋಲಿಸಿ ಹಿಂದಕ್ಕೆ ಕಳುಹಿದ್ದು; ತಲೆಯನ್ನೂ, ಕೈಗಳನ್ನೂ ಒಂದೊಂದಾಗಿ ಕತ್ತರಿಸಿದ್ದು; ಹೊಸ ಹೊಸ ತಲೆ ಮತ್ತು ಕೈ ಬಂದ ಮೇಲೆಯಾದರೂ ಬುದ್ಧಿಯು ಬಂದು ಶರಣು ಬರಲೆಂದು ಅವಕಾಶ ಕಲ್ಪಿಸಿದ್ದು;
7) ತನ್ನೊಡನೆ ಬಂದು ಯುದ್ಧದಲ್ಲಿ ಸತ್ತ ಎಲ್ಲಾ ಮಂಗಗಳನ್ನು ಬದುಕಿಸಿದ್ದು;
8) ಶಂಬೂಕ ತಪಸ್ಸು ಫಲಿಸಬೇಕು; ವರ್ಣಾಶ್ರಮ ಧರ್ಮವೂ ಕಾಪಾಡಲ್ಪಡಬೇಕು ಎಂದು ಅವನನ್ನು ಕೊಂದಿದ್ದು.

ಇವೇ ಮೊದಲಾದುವುಗಳಿಂದ ಅವನೇ **"ಮನತ್ತುಕ್ಕು ಇನಿಯಾನ್."**

ಗೋದೆಯು ಇಷ್ಟು ಹೇಳಿ "ಗೋಪಿ, ಈ ರಾಮನನ್ನೇ ಹಾಡುತ್ತಾ ಹೋಗುವ ಬಾ; ಆ ರಾಮನೇ ಈ ಕೃಷ್ಣ ಕಣೆ; ಹೋಗಲಿ ರಾಮನನ್ನೇ ಭಜಿಸುವೆಯಂತೆ.

ಇನಿತ್ತಾ ಎೞುಂದಿರಾಯ್—ಇನ್ನುಮೇಲಾದರೂ ಎದ್ದು ಬಾ; ಇದೇ ನಿದು; ಇಷ್ಟು ಹೇಳಿದರೂ ಇನ್ನೂ ಏಳಲಿಲ್ಲವೇ

ಇದೆನ್ನ ಪೇರುರಕ್ಕಂ—ಇದೆಂತಹ ಗಾಢ ನಿದ್ದೆ

ಅನೈತ್ತಿಲ್ಲತ್ತಾರುಂ ಅರಿಂದು—ಎಲ್ಲಾ ಮನೆಯವರೂ ನಿನ್ನ ಸ್ವಭಾವವನ್ನು ತಿಳಿಯಲೆಂದೋ ಹೀಗೆ ಮಾಡುತ್ತಿರುವೆ; ಸಾಕು **ಎದ್ದು ಬಾ**

ಏಲೋರ್ ಎಂಪಾವಾಯ್.

ಸ್ವಾಪದೇಶ

ಕನೆತ್ತು—ಪ್ರಾರ್ಥಿಸುತ್ತಿರುವ, **ಇಳಂ ಕನ್ರುಕ್ಕು**—ಎಳೇ ಕರುವಿನಂತಿರುವ ಶಿಷ್ಯರ ವಿಷಯದಲ್ಲಿ, **ಇರಂಗಿ**—ಕೃಪೆಯಿಟ್ಟು, ಇಲ್ಲಿ **ಎರುಮೈ ಕನ್ರುಕ್ಕು**—ಎಂದು ಮತ್ತೆ ಓದಿಕೊಂಡು, ಮಂದಮತಿಗಳಾದ ಶಿಷ್ಯರ ವಿಷಯದಲ್ಲೂ ಕೃಪೆಯಿಟ್ಟು; **ನಿನೈತ್ತು**—ಪ್ರೀತಿಯಿಂದ (ಸ್ಮೃತಿ ಎಂದರೆ ಪ್ರೀತಿಯು ಸೇರಿರುತ್ತದೆ), **ಮುಲೈ ವಳ್ಳಿಯೇ**—ನಾಲ್ಕು ಮೊಲೆಗಳಂತಿರುವ (ಕೆಚ್ಚಲುಗಳಂತಿರುವ) ನಾಲ್ಕು ವೇದಗಳ ದ್ವಾರಾ ಅಥವಾ ಶ್ರುತಿ, ಸ್ಮೃತಿ, ಧರ್ಮಶಾಸ್ತ್ರ ಮತ್ತು ಆಚಾರ್ಯಸೂಕ್ತಿ ಎನ್ನುವ ನಾಲ್ಕು ಮೊಲೆಗಳಿಂದ **ನಿನ್ರು**—ಧಾರಾಕಾರವಾಗಿ, **ಪಾಲ್ ಶೋರ**—ಜ್ಞಾನವೆನ್ನುವ ಹಾಲನ್ನು ಸುರಿಸುತ್ತಿರುವಲ್ಲಿ, **ನನೈತ್ತು**—ತಾನೂ ಆನಂದಬಾಷ್ಪದೊಡನೆ, **ಇಲ್ಲಂ ಶೇರಾಕ್ಕುಂ**—ಕಾಲಕ್ಷೇಪ ಮಾಡುವ ಅಂಗಳವನ್ನು ಕೆಸರಾಗಿಮಾಡುವ, **ನರ್ಚೆಲ್ವ ತಂಗಾಯ್**—ಯೋಗದ ಅನುಭವವನ್ನು ಶಾಸ್ತ್ರಜ್ಞಾನದೊಡನೆ ಸಮನ್ವಯಮಾಡಿಕೊಂಡು ವಾದ ಸಮರ್ಥನಾದ ಆಚಾರ್ಯಶ್ರೇಷ್ಠನಿಗೆ ಪ್ರಿಯನಾದ ಶಿಷ್ಯನೇ

ಪನಿತ್ತಲೈ ವೀೞ್ ನಿ ವಾಶಲ್‌ಕಡೈ ಪತ್ತಿ—ವೇದದ ಸಕಲಾರ್ಥವೂ ಹನಿಹನಿಯಾಗಿ ತಲೆಗೆ ತಗಲುವಂತಾಗಿ, ಮೂಲಮಂತ್ರದ ಬಾಗಿಲಲ್ಲಿದ್ದು, **ಶಿನತ್ತಿ ನಾಲ್**—ತಪ್ಪು ಅರ್ಥಮಾಡುವವರ ವಿಷಯದಲ್ಲಿ ಕೋಪಗೊಂಡು, **ತೆ ಇಲಂ-ಕೈ-ಕೋಮಾನೈ-ಶೆತ್ತ**—ಯಮಪುರಿಯನ್ನು ತನ್ನ ಕೈಯ್ಯಲ್ಲಿಟ್ಟುಕೊಂಡಿರುವ, (ಅಹಂಕಾರ ಮಮಕಾರಗಳಿಗೆ ಆಶ್ರಯಕೊಟ್ಟು ಪ್ರಭುವಾಗಿ ರಾವಣನಂತೆ) ನಾಸ್ತಿಕರಾಗಿರುವವನನ್ನು ನಾಶಮಾಡಿದ, **ಮನತ್ತುಕ್ಕಿನಿಯಾನೈ**—ಮನಸ್ಸಿಗೆ ಪ್ರಿಯನಾದ ಆಚಾರ್ಯನನ್ನು (ನಾವು) **ಪಾಡವುಂ ನೀವಾಯ್ ತಿರವಾಯ್**—ಸ್ತೋತ್ರಮಾಡುತ್ತಿದ್ದರೂ ನೀನು ಬಾಯಿಬಿಡದವನಾಗಿರುವಿ, **ಇನಿತ್ತಾ ಎೞುಂದಿರಾಯ್**—ಇನ್ನುಮೇಲಾದರೂ ಏಳು, **ಇದೆನ್ನಪೇರುರಕ್ಕಂ**—ಇದೆಂತಹ ನಿದ್ದೆ ನಿನ್ನದು; **ಅನೈತ್ತಿಲ್ಲತ್ತಾರುಂ ಅರಿಂದು**—ನಿನ್ನ ಮಹಿಮೆಯು ಎಲ್ಲರಿಗೂ ತಿಳಿಯಲೆಂದೋ ಹೀಗೆ ಮಲಗಿರುವೆ? ಸಾಕು ಏಳು **ಎಲೋರ್ ಎಂಪಾವಾಯ್**—ಇಲ್ಲಿ

ದರ್ಪೋದಗ್ರದಶೇಂದ್ರಿಯಾನನನುನೋನಕ್ತಂಜರಾಧಿಷ್ಠಿತೇ
ದೇಹೇಸ್ಮಿನ್ ಭವಸಿಂಧುನಾ ಪರಿವೃತೇ ದೀನಾಂ ದಶಾಮಾಸ್ಥಿತಃ।
ಅದ್ಯತ್ವೇ ಹನುಮತ್ಸಮೇನ ಗುರುಣಾ ಪ್ರಖ್ಯಾಪಿತಾರ್ಥಃ ಪುರ್ಮಾ
ಲಂಕಾರುದ್ಧವಿದೇಹರಾಜತನಯಾನ್ಯಾಯೇನ ಲಾಲಪ್ಯತೇ।

ಸಂ–ಸೂ–I ಅಂಗ 72

ಎನ್ನುವ ಶ್ಲೋಕವನ್ನು ಅನುಸಂಧಾನಮಾಡಿ, ಅರ್ಥವನ್ನು ಇನ್ನೂ ಸ್ವಾರಸ್ಯವಾಗಿ ಹೇಳಬಹುದು.

॥ ಶ್ರೀಮತೇ ರಾಮಮಿಶ್ರಾಯ ನಮಃ ॥

ಪುಳ್ಳಿ ವಾಯ್ ಕೀಂಡಾನೈ ಪೊಲ್ಲಾ ವರಕ್ಕನೈ
ಕಿಳ್ಳಿ ಕಳೈಂದಾನೈ ಕೀರ್ತಿಮೈ ಪ್ಪಾಡಿಪ್ಪೋಯ್
ಪಿಳ್ಳೈ ಗಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್
ವೆಳ್ಳಿ ಯೆೞುಂದು ವಿಯಾೞ್ಮುರಿಂಗಿತ್ತು
ಪುಳ್ಳುಂ ಶಿಲಂಬಿನಕಾಣ್ ಪೋದರಿಕ್ಕಣ್ಣಿನಾಯ್
ಕುಳ್ಳಕುಳಿರ ಕುಡೈಂದು ನೀರಾಡಾದೇ
ಪಳ್ಳಿಕ್ಕಿಡತ್ತೀಯೋ ಪಾವಾಯ್ ನೀ ನನ್ನಾಳಾಲ್
ಕಳ್ಳಂ ತವಿರ್ನ್ದು ಕಲಂದೇಲೋರೆಂಬಾವಾಯ್ ॥ ೧೩ ॥

ಗೋಕುಲದಲ್ಲಿ ಎಲ್ಲೆಲ್ಲೂ ಶ್ರೀಕೃಷ್ಣನನ್ನೇ ಕೊಂಡಾಡುವರು; ಅವನನ್ನು ಬಿಟ್ಟು ಶ್ರೀರಾಮನನ್ನು ಇಲ್ಲಿ ಕೊಂಡಾಡುವುದೆಂದರೇನು? ಎಂದು ಅಸಮಾಧಾನದಿಂದಲೂ ಶ್ರೀಕೃಷ್ಣನು ತನ್ನ ಕಣ್ಣಿನ ಸೌಂದರ್ಯಕ್ಕೆ ಮರುಳಾಗಿ ತನ್ನಲ್ಲಿಗೆ ತಾನೇ ಬರುವನೆಂಬ ವಿಶ್ವಾಸದಿಂದಲೂ ಮಲಗಿರುವ ಗೋಪಿಕೆಯನ್ನು ಎಬ್ಬಿಸುವ ಪದ್ಯವಿದು. ಇವಳ ಆತ್ಮಾಭಿಮಾನ ಅಷ್ಟಿಲ್ಲ; ಆದರೆ ಆತ್ಮಗುಣದಲ್ಲಿ ಮಿಗಿಲಾದವಳು. ರಾಮನೂ, ಕೃಷ್ಣನೂ ಒಂದು ದೈವದ ಆಕಾರಭೇದವೇ; ಆದರೂ ಕೃಷ್ಣ ಆ ದೈವ ತಾನೇ ಎಂದು ಹೇಳಿಕೊಂಡು ಬಂದ. ರಾಮನು ನಾನು ದೈವವಲ್ಲ; ನಾನೊಬ್ಬ ಮನುಷ್ಯನೆಂದೇ ತನ್ನ ಅವತಾರವನ್ನು ಕಳೆದ.

ರಾಮೋ ವಿಗ್ರಹವಾ ಧರ್ಮಃ

ಎಂದು ಮಾರೀಚನು ರಾಮನ ವಿಷಯದಲ್ಲಿ ಹೇಳಿದನೇ ವಿನಹ ತಾನು ಹೇಳಿಕೊಳ್ಳಲಿಲ್ಲ. ನನ್ನ ಶ್ರೀಕೃಷ್ಣನೋ ಎಂದರೆ

ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ

ಎಂದು ತನ್ನನ್ನು ಹೇಳಿಕೊಂಡು ತಾನೇ ರಾಮನಾದವನು ಎಂದ. ಹೀಗಿರಲು **"ಮನತ್ತುಕ್ಕು ಇನಿಯಾ"** ರಾಮನೋ, ಕೃಷ್ಣನೋ? ಎಂದು ಗೋದೆಯು ಯೋಚಿಸಲಿಲ್ಲವೇ? ಸೀತೆ ಎಷ್ಟು ಸುಂದರಿ? ರಾಮನನ್ನೇ ನಂಬಿದ್ದಳು; ಅವಳಲ್ಲಿ ಯಾವ ದೋಷವೂ ಇಲ್ಲ; ಹಾಗಿದ್ದೂ ಅವಳನ್ನು ಕಾಡುಪಾಲು ಮಾಡಿದವನು **"ಮನತ್ತುಕ್ಕು ಇನಿಯಾ"** ಹೇಗಾದಾನು? ನನ್ನ ಕೃಷ್ಣ ಹಾಗೆಯೇ? ಎಂದೂ ಇಲ್ಲ." ಎಂದು ಅಸಮಾಧಾನವುಳ್ಳವಳನ್ನು ಎಬ್ಬಿಸುವ ಪಾಶುರವಿದು.

"ಗೋಪಿ! ಏಳೇ; ನಿನ್ನ ಕೃಷ್ಣನನ್ನೇ ಹಾಡುತ್ತಾ ಹೊರಟಿರುವೆವು; ನೀನು ತಿಳಿದಂತೆ ಅವನೇ ತಾನು ದೈವವೆಂದು ಹೇಳಿಕೊಂಡು ಬಂದವನಲ್ಲದೆ ತೋರಿಸಿಯೂ ತೋರಿಸಿದವನು ಕಣೆ. ಅಂತಹ

ಪುಳ್ಳಿವಾಯ್ ಕೀಂಡಾನೈ—ಐದು ವರುಷದ ಬಾಲಕೃಷ್ಣ; ಪೂತನಿಯ ಸಹೋದರ ಬಕಾಸುರನ ಬಾಯನ್ನು ಸೀಳಿದನು ಕಣೆ; ಒಂದೇ ಕಾಲದಲ್ಲಿ ಆಶ್ರಿತ ಸಂರಕ್ಷಣ ಮತ್ತು ದುಷ್ಟಶಿಕ್ಷಣ ಮಾಡಿದವ ಇವ; ಇವನ ಮಹಿಮೆಯೇ ದೊಡ್ಡದು.

ಇದನ್ನು ಕೇಳಿ ಒಳಗಿರುವ ಗೋಪಿಗೆ ಬಹು ಸಂತೋಷವಾಯಿತು. ಅವನಲ್ಲೇ ಮನಸ್ಸಿಟ್ಟು ಕಣ್ಣುಮುಚ್ಚಿ ಇನ್ನೂ ಚೆನ್ನಾಗಿ ಮಲಗುವುದನ್ನು ಕಂಡು ಗೋದೆ ಮತ್ತೆ ಹೇಳಿದಳು. **ಪುಳ್ಳಿವಾಯ್ ಕೀಂಡಾನೈ** ಎಂದು "ನಿನ್ನ ಕೃಷ್ಣ ಎಂಥಾ ಮಹಿಮನೆ! ಲೀಲಾಜಾಲವಾಗಿ ರಾಕ್ಷಸನ ಬಾಯನ್ನು ಸೀಳಿದನಲ್ಲಾ; ಏನು ವೀರ್ಯ ಅವನದು." ಇದನ್ನು ಕೇಳಿ ಗೋಪಿಯು ಭಾವನಾ ಪ್ರಪಂಚದಲ್ಲೇ ಮುಳುಗಿರುವಂತೆ ಕಂಡಿತು. ಅಲ್ಲದೆ ಹಿಂದಿನ ಪದ್ಯದಲ್ಲಿ ಎಬ್ಬಿಸಲ್ಪಟ್ಟವಳಿಗೆ ಅಸಮಾಧಾನ "ಏನೇ ಗೋದೆ, ನನ್ನ ರಾಮ ಅಷ್ಟು ಕೀಳೆ? ನೀನು ಹೇಳುವುದು ಚೆನ್ನಾಗಿಲ್ಲವಮ್ಮ" ಎಂದಾಗ, ಗೋದೆಯು ಕಣ್ಣು ಸಂಜ್ಞೆಯಿಂದ ಸಮಾಧಾನ ಮಾಡಿ ಮಲಗಿರುವವಳನ್ನು ಕುರಿತು **ಪೊಲ್ಲಾವರಕ್ಕನೈ ಕಿಳ್ಳಿ ಕಳೈಂದಾನೈ** ಎಂದಳು. "ಗೋಪಿ, ದುಷ್ಟನಾದ ರಾಕ್ಷಸ ರಾವಣ; ಅವನನ್ನು ಲೀಲಾಜಾಲವಾಗಿ ಕೊಂದವ ಕಣೇ" ಎಂದಾಗ ಒಳಗಿದ್ದ ಗೋಪಿಗೆ ಕುತೂಹಲ; ನಮ್ಮ ಕೃಷ್ಣನೇ ಇದನ್ನು ಮಾಡಿದ್ದು? ಯೋಚಿಸಿದಳು; ಹೌದು ಇವನು ಹಿಂದೆ ರಾಮಾವತಾರ ಮಾಡಿದಾಗ ರಾವಣನನ್ನು ಕೊಂದ; ಕೃಷ್ಣನೇ ರಾಮನೆಂದಿದ್ದು ಇವಳಿಗೆ ಹಿತವಾಯಿತು; ಮುನಿಸಿಕೊಂಡಿದ್ದ ಹಿಂದಿನ ಪದ್ಯದ ಗೋಪಿಗೂ ಪ್ರಿಯವಾಯಿತು. "ತನ್ನ ರಾಮನೇ ಈಗ ಶ್ರೀಕೃಷ್ಣನಾಗಿರುವನು" ಎಂದು ಅವಳಿಗೆ ಅರ್ಥವಾಯಿತು. ಹೌದು,

ಪಿಶಾಚಾ ದಾನವಾ ಯಕ್ಷಾ ಪೃಥಿವ್ಯಾಂ ಯೇ ಚ ರಾಕ್ಷಸಾಃ।
ಆಂಗಳ್ಯಗ್ರೇಣ ತಾ ಹನ್ಯಾಂ ಇಚ್ಛೆ ಹರಿಗಣೇಶ್ವರ ॥

ಎಂದು ಹೇಳಿದವನು ನನ್ನ ರಾಮನೇ; ಅವನೇ ಈಗ ಶ್ರೀಕೃಷ್ಣ ಎಂದು ಭಾವವು ತುಂಬಿ ಅವಳು ತೃಪ್ತಳಾದಳು; ಇವಳಿಗೆ ನನ್ನ ಕೃಷ್ಣನೇ ರಾಮನಾಗಿದ್ದಾಗ ಹೇಳಿದ ಮಾತಿದು ಎಂದು ಸಂತೋಷವೂ ಆಯಿತು. ಹೌದು, ರಾಮನೂ ನನ್ನವನೇ; ಧರ್ಮ ಸ್ವರೂಪ; ಅದನ್ನು ಪರಿಪಾಲನೆ ಮಾಡುವುದಕ್ಕಾಗಿಯೇ ಹಾಗೆ ಅವತಾರ ಮಾಡಿದ; ಸೀತೆಯನ್ನು ಬಿಟ್ಟಿದ್ದು ದೋಷವಲ್ಲ. ಅವನು ಕ್ಷತ್ರಿಯ; ಪ್ರಜೆಗಳೇ ಅವನಿಗೆ ಪ್ರಿಯ; ಸೀತೆಯು ಮೊದಲು ಅವನ ಪ್ರಜೆ; ಅನಂತರ ಹೆಂಡತಿ; ಪ್ರಜೆಗಳಿಗೆ, ಅವಳು ತನ್ನ ಹೆಂಡತಿಯಾಗಿರುವುದು ಇಷ್ಟವಿಲ್ಲದಿರುವುದರಿಂದ ಬಿಟ್ಟ. ಸೀತೆಗೂ ಇದು ಗೊತ್ತು. ಆಂಜನೇಯನಿಂದ ತನ್ನ ಸಮಾಚಾರವನ್ನು ರಾಮನಿಗೆ ತಿಳಿಸುವಾಗ

ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ

ಎಂದು ಹೇಳಿ "ಆಂಜನೇಯ, ಕೌಸಲ್ಯೆಯು ಆಸೆಪಟ್ಟದ್ದು "ನನ್ನ ಮಗ ಲೋಕವನ್ನೇ ರಕ್ಷಿಸುವವನಾಗಬೇಕು" ಎಂದು; ರಾಮನು ಹಾಗೆಯೇ ಇರುವನು; ಅವನಿಗೆ

ಹೇಳು " ರಾಮ, ನನ್ನನ್ನು ಹೆಂಡತಿ ಎನ್ನುವ ಸಂಬಂಧದಿಂದ ಪ್ರೀತಿಸಿ ನನ್ನನ್ನು ಬಿಡಿಸ ಬೇಡ ; ನಾನು ನಿನ್ನ ಪ್ರಜೆ ಎಂದು ತಿಳಿದು ಬಿಡಿಸು ; ನಾನು ಇನ್ನು ಒಂದು ತಿಂಗಳು ನಿನಗಾಗಿ ಜೀವಿಸಿರುವೆನು ಎಂದು " ಎಂದಳು. ರಾಮನಾದರೋ

ಚಿರಂ ಜೀವತಿ ವೈದೇಹೀ ಯದಿ ಮಾಸಂ ಗಮಿಷ್ಯತಿ ।
ನ ಜೀವೇಯಂ ಕ್ಷಣಮಪಿ ತಾಂ ವಿಸೃಜ್ಯಾಸಿತೇಕ್ಷಣಾಂ ॥

" ಆಂಜನೇಯ, ಅವಳು ಒಂದು ತಿಂಗಳಾದರೂ ಜೀವಿಸುವೆನೆಂದಳು ; ನಾನು ಅವಳನ್ನು ಬಿಟ್ಟು ಒಂದು ಕ್ಷಣವೂ ಜೀವಿಸಲಾರೆ" ಎಂದನು. ಪ್ರೇಮಸ್ವರೂಪ ನನ್ನ ಕೃಷ್ಣನೇ ರಾಮನಾಗಿಲ್ಲದಿದ್ದರೆ ಹೀಗೆ ಹೇಳುತ್ತಿದ್ದನೆ? ಇಲ್ಲ ; ನನ್ನ ಕೃಷ್ಣನೇ ರಾಮನಾಗಿದ್ದವನು ; ಭಾವವು ತುಂಬಿತು ಕೃಷ್ಣನು ತನ್ನಲ್ಲಿಗೇ ಬರುವನೆನ್ನುವ ನಂಬಿಕೆಯು ಜಾಸ್ತಿಯಾಯಿತು. ಹೊದಿಕೆಯನ್ನು ಮತ್ತೂ ಎಳೆದುಕೊಂಡು ಕಣ್ಣುಮುಚ್ಚಿದಳು. ಶ್ರೀಕೃಷ್ಣಾನುಭವದಲ್ಲಿ ಏಕಾಕಿನಿಯಾಗಿರಲಪೇಕ್ಷಿಸುವಳಿವಳೆಂದು ತಿಳಿದು ಗೋದೆಯು ಮತ್ತೆ

ಪೊಲ್ಲಾವರಕ್ಕನೈ ಕೀರ್ತಿಮೈಪಾಡಿಪ್ಪೋಯ್ ; ಎಂದಳು " ಗೋಪಿ! ಶ್ರೀಕೃಷ್ಣನೇನೋ ಬಕಾಸುರನನ್ನು ಕೊಂದ ; ಆದರೆ ವೀರ್ಯವೆಂದರೆ ಶ್ರೀರಾಮನದು ಕಣೆ ; ಕೇಳೆ

ಬ್ರಹ್ಮದಂಡಸಕಾಶಾನಾಂ ವಿದ್ಯುಜ್ಜ್ವಲಿತವರ್ಚಸಾಂ ।
ಸ್ಮರ್ತೃ ರಾಘವಬಾಣಾನಾಂ ವಿವ್ಯಥೇ ರಾಕ್ಷಸೇಶ್ವರಃ ॥

ರಾಮನೊಡನೆ ಮೊದಲು ಯುದ್ಧಮಾಡಿ ಸೋತು ಲಂಕೆಗೆ ಹಿಂತಿರುಗಿ ರಾಮನ ಬಾಣದ ತೀವ್ರತೆಯನ್ನು ನೆನೆದುಕೊಳ್ಳುತ್ತಲೇ ಇದ್ದ ರಾವಣ ; ಮತ್ತೆ ಬಂದು ಯುದ್ಧ ಮಾಡಿದಾಗಲೂ

ಮಾತಂಗ ಇವ ಸಿಂಹೇನ ಗರುಡೇನೇವ ಪನ್ನಗಃ ॥
ಅಭಿಭೂತೋಽಭವದ್ರಾಜಾ ರಾಘವೇಣ ಮಹಾತ್ಮನಾ ॥

ರಾಮನಿಂದ ಪರಾಜಯ ಹೊಂದಿ ಅವನ ವೀರ್ಯಕ್ಕೆ ಮಾರುಹೋದನು. ಅಲ್ಲದೆ

ವೃಷ್ಣೇ ವೃಷ್ಣೇ ಚ ಪೆಶ್ಯಾಮಿ . . . ರಾಮಂ

ಎಂದು ಮಾರೀಚನು ಹೇಳಿಕೊಳ್ಳುವಂಥ ವೀರ್ಯ ರಾಮನದು ; ನನ್ನ ಕೃಷ್ಣನ ವೀರ್ಯ ಇನ್ನೂ ಸೊಗಸು ಕಣೆ ; ಬರೀ ಕೈಯಿಂದಲೇ ರಾಕ್ಷಸನ ಬಾಯಿ ಸೀಳಿದ. ಅಂತಹವ ಈಗ ನಮಗಾಗಿ ಕಾದಿರುವನು. ಅವನ

ಕೀರ್ತಿಮೈ ಪ್ಪಾಡಿಪ್ಪೋಯ್—ಕೀರ್ತಿಯನ್ನು ಹಾಡುವುದಕ್ಕಾಗಿ

ಪಿಳ್ಳೈಕಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್—ಹೆಣ್ಣುಮಕ್ಕಳೆಲ್ಲರೂ ವ್ರತಸ್ಥಳದಲ್ಲಿ ಕೂಡಿರುವರು. ನೀನು ಎದ್ದು ಬಾ " ಎಂದಳು ಗೋದೆ.

ಇಲ್ಲಿ " ಪೊಲ್ಲಾವರಕ್ಕನೈ ಕಿಳ್ಳಿಕ್ಕಳೈಂದಾನೈ " ಎನ್ನುವುದಕ್ಕೆ " ತನ್ನ ಉಗುರಿನಿಂದ ದುಷ್ಟ ರಾಕ್ಷಸನಾದ ಹಿರಣ್ಯಕಶಿಪುವನ್ನು ಕೊಂದ ನರಸಿಂಹನನ್ನು " ಎಂದು ಅರ್ಥಮಾಡುವುದುಂಟು. ಹಿರಣ್ಯಕಶಿಪು ಅಸುರ ; ರಾಕ್ಷಸನಲ್ಲ ; ಯಾರಲ್ಲಿ ತಮೋಗುಣವು ಜಾಸ್ತಿಯೋ ಅವರು ಅಸುರರು ; ರಜೋಗುಣವು ಜಾಸ್ತಿಯಿದ್ದರೆ ಅವರು ರಾಕ್ಷಸರು ; ಆದ್ದರಿಂದ ಹಿರಣ್ಯಕಶಿಪು ಇಲ್ಲಿ ಅರ್ಥದಲ್ಲಿ ಬರುವುದಿಲ್ಲ. ಹೀಗಿದ್ದರೂ ನೃಸಿಂಹ–ಶ್ರೀಕೃಷ್ಣ ಭಾವನೈಕ್ಯಕ್ಕಾಗಿ ಹೇಳಿದ್ದರೂ ಇರಬಹುದು. ಆಗ " ಅರಕ್ಕ " ಎಂದು ಅವಳು ಸಾಮಾನ್ಯಾರ್ಥದಲ್ಲಿ ಹೇಳಿರಬೇಕು. ಇವಳೇ ತನ್ನ ನಾಚ್ಚಿಯಾರ್ ತಿರುಮೊಳಿಯಲ್ಲಿ (6–9)

ಅರಿಮುರ್ಕ ಅಚ್ಯುತ ರ್ತ ಕೈಮೇಲ್ ಎ ಕೈ ವೈತ್ತು
ಪೊರಿಮುಕಂ ತಟ್ಟ–ಕನಾ ಕ್ಕಂಡೇ ತೋಳಿ ನಾನ್

ಎಂದು ಹೇಳಿ, ಶ್ರೀಕೃಷ್ಣ, ಅಚ್ಯುತ, ರಂಗನಾಥ ಮತ್ತು ನರಸಿಂಹ ಇವರೆಲ್ಲರೂ ಒಂದು ದೈವವೇ ಎನ್ನುವ ಭಾವೈಕ್ಯವನ್ನು ಹೇಳಿರಲೂಸಾಧ್ಯ.

ಒಳಗಿರುವ ಗೋಪಿಗೆ ಗೋದೆಯ ಮಾತಿನಿಂದ ಬಹು ಸಂತೋಷವೇನೋ ಆಯಿತು. ಆದರೆ ಬೆಳಗಾಗಬೇಡವೆ ಏಳಲು ?

ಪಾಥೇಯಂ ಪುಂಡರೀಕ್ಷನಾಮಸಂಕೀರ್ತನಂ ಪರಂ

ನನ್ನ ಕೃಷ್ಣ ಪುಂಡರೀಕಾಕ್ಷ ; ಅವನ ಕಣ್ಣೇ ಕಣ್ಣು ಅದೊಂದೇಸಾಕು ; ಅದನ್ನು ಕಾಣಬೇಕಾದರೆ ಬೆಳಗಾಗಬೇಡವೇ ? ಹೌದು, ಅವನ ನಾಮ ಸಂಕೀರ್ತನೆ ಪರಲೋಕಕ್ಕೆ ಬುತ್ತಿ. ನಾಮ ಸಂಕೀರ್ತನೆಯೇ ಮುಕ್ತಿಯಲ್ಲ. ಟಪಾಲಿನಲ್ಲಿ ಹಣ ಕಳುಹಿಸಿದರೆ ಅದೇ ಹಣವು ಹೋಗುವುದೇನು ? ಇಲ್ಲ ; ಇವರಿಗೆ ನಾಮ ಸಂಕೀರ್ತನದಲ್ಲಿ ಕತ್ತಲೆಯೇ ತೊರಿಲ್ಲ. ಇರಲಿ ನನ್ನಷ್ಟಕ್ಕೆ ನಾನು ಮಲಗಿರುವೆನು–ಎಂದುಕೊಂಡು ಹೊದಿಕೆಯನ್ನು ಮತ್ತೂ ಎಳೆದುಕೊಂಡಳು. ಇವಳ ಮನೋಭಾವ ಗೋದೆಗೆ ಗೋಚರವಾಯಿತು. ಹೇಳಿದಳು ಗೋಪಿ, "ಬೆಳಗಾಯಿತು ಕಣೆ.

ವೆಳ್ಳಿ ಯೆೞುಂದು ವಿಯಾೞಮುರಂಗಿತ್ತು—ನಾವು ಬಂದಿರುವುದು ಅಕಾಲವಲ್ಲ ; ಅಕಾಲದಲ್ಲಿ ಮಿಂದಲು ಹೊರಟ ಏನಾಗುವುದೆಂದು ನಮಗೆ ಗೊತ್ತು ; ನಂದಗೋಪ ಅಕಾಲದಲ್ಲಿ ಯಮುನಾ ಸ್ನಾನಕ್ಕೆ ಹೋದಾಗ, ಜಲಾಧಿದೇವತೆಗಳು ಅವನನ್ನು ವರುಣ ಲೋಕಕ್ಕೆ ಒಯ್ದರು. ಅದು ನಮಗೆ ಗೊತ್ತು ; ನಿನ್ನ ಕೃಷ್ಣ ಹೋಗಿ ಅವನನ್ನು ಹಿಂದಕ್ಕೆ ಕರತರಬೇಕಾಯಿತು. ಹೊರಗೆ ಬಂದು ನೋಡು ; **ಶುಕ್ರೋದಯವಾಗಿದೆ ;** ಗುರುವು **ಅಸ್ತಮಿಸಿರುವನು ;** " ಎಂದಳು. ಅದಕ್ಕೆ ಗೋಪಿಯು " ಕಳ್ಳ ಶುಕ್ರ ಅವನನ್ನು ನಂಬುವುದೆಂತು ; ಅಲ್ಲದೆ ನಿಮಗೆ ನೋಡಿದ್ದೆಲ್ಲಾ ಶುಕ್ರನಂತೆಯೇ ಕಾಣುತ್ತದೆ. ಕೃಷ್ಣನಲ್ಲಿಗೆ ಹೋಗುವ ಆತುರದಲ್ಲಿ ಇದು ಸಹಜ ;

ಗುರುವು ಮೋಡದಲ್ಲಿ ಮುಚ್ಚಿ ಹೋಗಿರಬಹುದು" ಎಂದಾಗ ಗೋದೆಯು ಬೆಳಗಾಗಿದ್ದಕ್ಕೆ ಬೇರೆ ಕಾರಣ ಕೊಡುವಳು.

ಪುಳ್ಳುಂ ಶಿಲಂಬಿನಕಾಣ್—ಪಕ್ಷಿಗಳು ಕೂಗುತ್ತಿವೆ ಬಂದು ನೋಡು;" ಆರನೇ ಪದ್ಯದಲ್ಲೂ ಹೀಗೆಯೇ ಹೇಳಿದ್ದರೂ ಇಲ್ಲಿ ಅರ್ಥ ಬೇರೆ. ಅಲ್ಲಿ ಗೂಡಿನಲ್ಲಿದ್ದು ಶಬ್ದ ಮಾಡುತ್ತಿದ್ದವು; ಇಲ್ಲಿ ಹೊರ ಬಂದು ಹೊಲಗಳಲ್ಲಿ ಶಬ್ದ ಮಾಡುತ್ತಿವೆ. ಇಷ್ಟು ಹೇಳಿದರೂ ಗೋಪಿಯು ಏಳಲಿಲ್ಲ; "ಆಗಾಗ ಮಾತನಾಡುತ್ತಿರುವಳು; ಇವಳ ಕೃಷ್ಣ ಪ್ರೇಮದಿಂದ ಭಾವನಾ ಪ್ರಪಂಚದಲ್ಲಿರುವಳು ಎಲೆ; ಗೋಪಿ

ಪೋದರಿ ಕಣ್ಣಿನಾಯ್—1) (ಪೋದು–ಅರಿ ಕಣ್ಣಿ) ನಿನಗೆ ಬೆಳಗಾಗಿರುವುದು ಗೊತ್ತು ಕಣೆ–ಸುಮ್ಮನೇ ಮಲಗಿರುವೆ;

2) ನಿನ್ನ ಕಣ್ಣು ಅರಳಿರುವುದು ನಮಗೆ ತಿಳಿಯದೆಂದಿರುವೆಯೇನು; ಹೂವಿನಲ್ಲಿ ಮಕರಂದವನ್ನು ಕುಡಿಯುತ್ತಾ ಮತ್ತು ಬಂದಿರುವ ದುಂಬಿಯಂತೆ ನೀನು ಕೃಷ್ಣಾಮೃತವನ್ನು ಕುಡಿದು ಮತ್ತನ್ನು ಹೊಂದಿರುವೆ; (ಪೋದು–ಪುಷ್ಪ, ಅರಿ–ದುಂಬಿ–ಹೂವಿನಲ್ಲಿರುವ ದುಂಬಿಯಂತೆ ಕಣ್ಣುಳ್ಳವಳು;

3) ಹೂವಿನಂತೆ ಸುಂದರವಾದ ಮತ್ತು ದುಂಬಿಯಂತೆ ಚಂಚಲವಾದ ನಿನ್ನ ಕಣ್ಣನ್ನು ನೋಡುತ್ತಿರುವೆವು ಕಣೆ

4) ನೋಡು, ನಿನ್ನ ಕಣ್ಣಿನ ಸೊಬಗನ್ನು ನೋಡಿ, ನಾಚಿಕೆಯಿಂದ, ಮತ್ತು ಅಸೂಯೆಯಿಂದ ಹೂವುಗಳು ಶತ್ರುಗಳಂತಿವೆ (ಅರಿ ಎಂದರೆ ಶತ್ರು.)

ಇದೆಲ್ಲಾ ನಿನ್ನ ವೇಷ; ಎದ್ದು ಬಾ

ಕುಳ್ಳಕ್ಕುಳಿರ ಕುಡ್ಯೆಂದು ನೀರಾಡಾದೆ—ತಂಪಾಗಿ ಅವಗಾಹನ ಸ್ನಾನ ಮಾಡದೇ

ಪಳ್ಳಿಕ್ಕಿಡತ್ತೀಯೋ—ಹೀಗೆಯೇ ಮಲಗಿರುವೆಯೇನು?

ಪಾವಾಯ್—ಅಯ್ಯೋ ಹೆಣ್ಣೆ, **ನೀ**—ನೀನು

ನನ್ನಾಳಾಲ್—ಇದು ಒಳ್ಳೆದಿನವಾದ್ದರಿಂದ, **ಕಳ್ಳಂತವಿರ್ನ್ದ** ಕಪಟವನ್ನು ಬಿಟ್ಟು **ಕಲಂದು** ನಮ್ಮೊಡನೆ ಕಲೆತು ಬಂದರೆ **ಏಲೋರೆಂಪಾಯ್**

ಸ್ವಾಪದೇಶ

ಪುಳ್ಳಿವಾಯ್ ಕೀಂಡಾನ್—ಬಕಪಕ್ಷಿಯಂತಿರುವ ನಾಸ್ತಿಕರನ್ನು ನಾಶ ಮಾಡಿದ; ಸಮಯಕಾದು, ಹೇತುವಾದಾದಿಗಳಿಂದ ಪರಪಕ್ಷ ನಿರಸನ ಮಾಡಲುದ್ಯುಕ್ತರಾದವರು ಬಕರು;

ನಾಸ್ತಿಕಾ ಭಿನ್ನಮರ್ಯಾದಾ ಬೈಡಾಲವ್ರತಿಕಾ ಶಕಾ।
ಹೈತುಕಾ ಬಕವೃತ್ತೀಂಶ್ಚ ವಾಜಾತ್ಪ್ರೇಣಾಪಿ ನಾರ್ಚಯೇತ್

ಎಂದಿರುವಂತೆ ಪರಮ ಸಾಧುವಾಗಿ, ತಪಸ್ಸು ಮಾಡುವಂತಿದ್ದು, ಚಿಕ್ಕಮೀನು ಕಾಲಿಗೆ ಸುತ್ತಿಕೊಂಡರೆ ಸುಮ್ಮನಿದ್ದು ಮೋಸ ಹೋಗಿ ಒಂದು ದೊಡ್ಡ ಮೀನು ಕಾಲಿಗೆ ಬಂದು ಸೇರಿದರೆ ಅದನ್ನು ಹಿಡಿದು ನುಂಗುವ ಸ್ವಭಾವ ಬಕಪಕ್ಷಿಯದು; ಅದರಂತಿರುವರೂ ಬಕರೇ; ಅವರ ಬಾಯಮುಚ್ಚಿಸಲು ಶಕ್ತನಾದ; ಮತ್ತು

ಪೊಲ್ಲಾವರಕ್ಕನೈ ಕ್ಕಿಳ್ಕಿಕ್ಕಳೈಂದಾನೈ—
ದಶೇಂದ್ರಿಯಾನನಂ ಘೋರಂ ಯೋ ಮನೋರಜನೀಚರಂ।
ವಿವೇಕಶರಜಾಲೇನ ಶಮಂ ನಯತಿ ಯೋಗಿನಾಂ॥

ಎಂದಿರುವಂತೆ ಮನಸ್ಸು ರಾವಣ; ಅವನಿಗೆ ಹತ್ತು ಇಂದ್ರಿಯಗಳೆಂಬ ತಲೆಗಳು; ಅವನನ್ನು ವಿವೇಕವೆನ್ನುವ ಬಾಣಸಮೂಹದಿಂದ ಅಡಗಿಸಿದವನು ಆಚಾರ್ಯ—ಅಂತಹವನ

ಕೀರ್ತಿನ್ಮೈ ಪಾಡಿಪ್ಪೋಯ್—ಕೀರ್ತಿಯನ್ನು ಹಾಡುತ್ತಾ

ಪಿಳ್ಳೈ . . . . ಪುಕ್ಕಾರ್—ಎಲ್ಲಾ ಶಿಷ್ಯರೂ ಕಾಲಕ್ಷೇಪಗೊಷ್ಠಿಯನ್ನು ಸೇರಿರುವರು;

ವೆಳ್ಳಿ ಎೞುಂದದು—ಸತ್ತ್ವೋದ್ರೇಕವುಂಟಾಗಿದೆ; **"ಉಪಾದಾನಕಾಲಃ ಸಂಪ್ರಾಪ್ತಃ."** ವೈದಿಕ ಸಂಪ್ರದಾಯದಂತೆ, ತ್ರೈವರ್ಣಿಕರು ಅಂದರೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಬಂದು ದಿನದ ಪೂರ್ವಾರ್ಧವನ್ನು ಐದು ಭಾಗವಾಗಿ ವಿಂಗಡಿಸಿಕೊಂಡು, ಆ ಐದು ಕಾಲದಲ್ಲಿ 1) ಅಭಿಗಮನ, 2) ಉಪಾದಾನ, 3) ಇಜ್ಯಾ, 4) ಸ್ವಾಧ್ಯಾಯ ಮತ್ತು 5) ಯೋಗ–ಎನ್ನುವ ಅನುಷ್ಠಾನ ಪರರಾಗಿರಬೇಕು; ಬೆಳಗಿನಝಾವದಲ್ಲಿ ಎದ್ದು ಸೂರ್ಯೋದಯಕ್ಕೆ ಮುಂಚೆ ಸುಪ್ರಭಾತ ಮತ್ತು ನಿರ್ವೇದಕಾರಿಕೆಯನ್ನು ನಿಧಾನವಾಗಿ ಹೇಳಿ ಮನಸ್ಸಿಗೆ ಶಾಂತಿ ತಂದುಕೊಂಡು ಸಂಧ್ಯಾವಂದನಾದಿಗಳನ್ನು ಮಾಡಿ ಪರಮಾತ್ಮನ ಆರ್ಚಾಮೂರ್ತಿಗೆ ಆರ್ಚನಾದಿಗಳನ್ನು ಮಾಡಬೇಕು. ಇದು ಸುಮಾರು 8 ಘಂಟೆಗೆ (ಬೆಳಗ್ಗೆ) ಮುಗಿಯುತ್ತದೆ. **ಇದು ಅಭಿಗಮನಕಾಲ.** ಎರಡನೇಕಾಲ **ಉಪಾದಾನ;** ಈ ಪದದ ಸಾಮಾನ್ಯಾರ್ಥ ಯಾಚನೆ. ಪಾರಮಾರ್ಥಿಕ ಜೀವನ ನಡೆಯಿಸಲಪೇಕ್ಷಿಸುವವನು ಸೇವಾವೃತ್ತಿಯನ್ನು ಮಾಡಕೂಡದೆಂದಿದೆ. ತಾನು ಚೆನ್ನಾಗಿ ವಿದ್ಯೆಯನ್ನು ಕಲಿತು ಅದನ್ನು ಶಿಷ್ಯರಿಗೆ ಹೇಳಿಕೊಡಬೇಕು. ಆದರೆ ವೇದಾಂತ ವಿದ್ಯೆಯನ್ನು ಒಂದು ನಿಯಮದಲ್ಲೇ ಕೇಳಬೇಕು. ಅದನ್ನು ಹೇಳಿಕೊಡುವಾಗ ಶಿಷ್ಯರು ತಂದುಕೊಡುವ ಧಾನ್ಯಾದಿರೂಪ ಕಾಣಿಕೆಯನ್ನು ಸ್ವೀಕರಿಸಿ ಅವರಿಗೆ ಬಹುಪ್ರೀತಿಯಿಂದ **"ಸಹನಾವವತು, ಸಹನೌಭುನಕ್ತು"** ಎಂದು ವೇದವು ಹೇಳುತ್ತಿರುವಂತೆ, ತಾನು ಅನುಭವಿಸಿ ಶಿಷ್ಯರಿಗೆ ಹೇಳಿಕೊಡಬೇಕು. **ಇದು ಉಪಾದಾನಕಾಲ.** ಬೆಳಿಗ್ಗೆ 8 ರಿಂದ 11 ಅಥವಾ 11–30 ವರಿಗೂ ಈ ಕಾಲ. ಮೂರನೇಕಾಲ **ಇಜ್ಯಾ** (11–30 ರಿಂದ 1 ಅಥವಾ 1–30) ಪರಮಾತ್ಮನಿಗೆ ಪೂಜೆಮಾಡಿ,

ಶಿಷ್ಯರು ತಂದುಕೊಟ್ಟ ಅಕ್ಕಿ ಮೊದಲಾದವುಗಳಿಂದ ಪತ್ನಿಯಾದವಳು ಸಿದ್ಧಪಡಿಸಿದ ಅನ್ನವನ್ನು, ಪರಮಾತ್ಮನಿಗೆ ನಿವೇದನ ಮಾಡಬೇಕು. ಪರಮಾತ್ಮನಿಗೆ ನಿವೇದನೆ ಮಾಡದೇಇರುವ ಪದಾರ್ಥಗಳನ್ನು ತಿನ್ನಲೇಕೂಡದು; ನಿವೇದನೆ ಮಾಡಿದ ಅನ್ನವನ್ನು ಅನ್ನವೆಂದು ಹೇಳುವ ಸಂಪ್ರದಾಯವಿಲ್ಲ. ಅದು "ಅಡಿಶಿಲ್ ಅಥವಾ ಪ್ರಸಾದ"; ಅನ್ನ ಮತ್ತೆ ಬಡಿಸುವಾಗ "ಅನ್ನ ಬೇಕೆ" ಎನ್ನಕೂಡದು. "ಪ್ರಸಾದಂ ಪ್ರಸಾದಂ" ಎನ್ನಬೇಕು. ಊಟವಾದಮೇಲೆ ಮತ್ತೊಬ್ಬರನ್ನು ನಿಮಗೆ ಊಟವಾಯಿತೆ ಎಂದು ಕೇಳಬೇಕಾದರೆ "ಅಂತರ್ಯಾಮಿ ನಿವೇದನ ಮಾಚ್ಚುದಾ," ಅಥವಾ "ನಿವೇದನ ಮಾಚ್ಚುದಾ" ಎಂದು ಕೇಳುವುದೇ ಸಂಪ್ರದಾಯ. ನಾಲ್ಕನೇ ಕಾಲ **ಸ್ವಾಧ್ಯಾಯ.** (3ರಿಂದ 6–15ರವರಿಗೆ) ಈ ಕಾಲದಲ್ಲಿ ವಿದ್ಯಾರ್ಥಿದೆಶೆಯಲ್ಲಿರುವರು ಓದುವ ಕಾಲ; ಜ್ಞಾನಿಗಳು ರಾಮಾಯಣ ಭಾರತಾದಿಗಳನ್ನು ಪಠನಮಾಡಿ ಅರ್ಥಹೇಳಿ ಪರಮಾತ್ಮನ ಗುಣಾದಿಗಳನ್ನು ಅನುಸಂಧಾನ ಮಾಡುವ ಕಾಲವಿದು; ಇದಾದಮೇಲೆ ಕೊನೆಯಕಾಲ **ಯೋಗ**–ಸಾಯಂಸಂಧ್ಯಾವಂದನಾದಿಗಳನ್ನು ಮಾಡಿ, ಆಹಾರ ಸೇವನೆಮಾಡಿ ವಿದ್ಯಾರ್ಥಿಗಳು ಓದುತ್ತಲೂ, ವಯಸ್ಸಾದವರು ದ್ವಯಮಂತ್ರಾರ್ಥಾನುಸಂಧಾನ, ವೈಕುಂಠಗದ್ಯ, ಉತ್ತರಾಯಣಗತಿ ಚಿಂತನಾದಿಗಳಲ್ಲಿ ಕಾಲಕಳೆದು ರಾತ್ರಿ 9 ಅಥವಾ 9–30ಗೆ ಮಲಗಬೇಕು. ಮಲಗುವಾಗ

ಕ್ಷೀರಸಾಗರತರಂಗಶೀಕರಾ
ಸಾರತಾರಕಿತಚಾರುಮೂರ್ತಯೇ ।
ಭೋಗಿಭೋಗಶಯನೀಯಶಾಯಿನೇ
ಮಾಧವಾಯ ಮದುವಿದ್ವಿಷೇ ನಮಃ ॥

ಎಂದು ಹೇಳಿಕೊಂಡು ಅವನನ್ನೇ ಚಿಂತಿಸುತ್ತಾ ನಿದ್ದೆಹೋಗಬೇಕು.—ಒಳ್ಳೆಕಾಲದಲ್ಲಿ ಇದು ಸಾಧ್ಯವಿತ್ತು. ಈಗ ಇದು ಯಾರಿಗೂ, ವೈದಿಕರಿಗೂ ಲೌಕೀಕರಿಗೂ ಸಾಧ್ಯವಿಲ್ಲ. ಯಥಾಶಕ್ತಿ ಯಥಾನುಕೂಲ ಮಾಡಿದರೂ ಸಾಕು. ಶಾಸ್ತ್ರವೇ ಅದಕ್ಕೆ ಅವಕಾಶ ಕೊಟ್ಟಿದೆ. ಬಹುಜನ ಅಭಿಗಮನ ಮತ್ತು ಉಪಾದಾನವನ್ನು ಸಾಂಗವಾಗಿ ಮಾಡಬಹುದು. ಉಪಾದಾನವೆಂದರೆ ಇವರ ವಿಷಯದಲ್ಲಿ ಕಾಲಕ್ಷೇಪ. ಆದರೆ ಕಾಲವನ್ನು ಸಂಕೋಚಮಾಡಿ ಅದರಲ್ಲೆ ಇಜ್ಯಾಜ್ಯವನ್ನು ಮುಗಿಸಬಹುದು. ಸ್ವಾಧ್ಯಾಯಕ್ಕೆ ಅವಕಾಶವೇ ಇಲ್ಲ. ಅನುಕೂಲವಿದ್ದಾಗ ಮಾಡಬಹುದು. ಯೋಗಕಾಲ ಎಲ್ಲರ ಕೈಯಲ್ಲೂ ಇದೆ.

ಇಲ್ಲಿ ಒಬ್ಬ ಪ್ರಧಾನಶಿಷ್ಯ ಮಿಕ್ಕವರಲ್ಲಿ ಆಚಾರ್ಯಸ್ಥಾನಕ್ಕೆ ಯೋಗ್ಯತೆಯುಳ್ಳವನನ್ನು ಕರೆಯುತ್ತಿರುವುದರಿಂದ **"ಉಪಾದಾನಕಾಲಃ ಸಂಪ್ರಾಪ್ತಃ"** ಎಂದು ಕರೆದಿರುವನು; **"ಅಭಿಗಮನಕಾಲಃ ಅತೀತಃ"** ಎಂದು ತಿಳಿಸಲು

"ವಿಯಾಖ್ಯಂ ಉರಂಗಿತ್ತು" ಎಂದನು. ಮತ್ತೊಂದರ್ಥದ "ಬೃಹಸ್ಪತಿಯು ಪ್ರಚಾರಕ್ಕೆ ತಂದ ಚಾರ್ವಾಕಮತವು ಖಂಡನವಾಯಿತು.

ಪುಳ್ಳುಂ ಶಿಲಂಬಿನಕಾಣ್—1) ಮಾತನಾಡುವರೆಲ್ಲರೂ ಎದ್ದುಹೋದರು; ಅಥವಾ "ಪುಳ್ಳುಂ" ಅಂದರೆ ಹಂಸ, ಗರುಡ ಮತ್ತು ನವಿಲು; ಈ ಪಕ್ಷಿಗಳು ಪರಮಭಾಗವತರಿಗೆ ಉಪಲಕ್ಷಣಗಳು; ಪರಮಭಾಗವತರ ವಿಷಯವಾಗಿ ವಿಮರ್ಶೆ ನಡೆಯುತ್ತಿದೆ.

ಪೋದರಿಕ್ಕಣ್ಣಿನಾಯ್—ಕಾಲಕ್ಷೇಪ ಕಾಲವನ್ನು ಅರಿತವನೇ!

ಕುಳಿ . . . ಡಾದೆ—ಸಂಸಾರತಾಪವು ತೀರುವಂತೆ, ಬ್ರಹ್ಮತೀರ್ಥದಲ್ಲಿ

ವಿಷ ಬ್ರಹ್ಮಪ್ರವಿಷ್ಟೋಸ್ಮಿ ಗ್ರೀಷ್ಮೆ ಶೀತಮಿವ ಹ್ರದಂ

ಎಂದಿರುವಂತೆ ಅವಗಾಹ ಸ್ನಾನಮಾಡಿ

ಪಳ್ಳಿಕ್ಕಿಡತ್ತೀಯೋ—ಧ್ಯಾನಾಸಕ್ತನಾಗಿರುವೆಯೇನು?

ಪಾವಾಯ್—ಪರಮ ಸಾಧುವೇ

ನೀ, ನನ್ನಾಳಾಲ್—ಸದಾಚಾರ್ಯನನ್ನು ಹೊಂದಲು ಯೋಗ್ಯವಾದ ದಿನವಾದುದರಿಂದ

ಕಳ್ಳಂ ತವಿರ್ನ್ದು—

ಯೋನ್ಯಥಾಸಂತಮಾತ್ಮಾನಂ ಅನ್ಯಥಾ ಪ್ರತಿಪದ್ಯತೇ ॥
ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥

ಭಾರತ–ಉದ್ಯೋಗ 42–35

ಎಂದಿರುವಂತೆ "ನಾನು ಸ್ವತಂತ್ರ, ನನ್ನದು" ಎನ್ನುವ ಕಳ್ಳತನವನ್ನು ಬಿಟ್ಟು, **ಕಲಂದು** ನಮ್ಮೊಡನೆ ಕೂಡಿದರೆ **ಏಲೋರೆಂಪಾವಾಯ್.**

॥ ಶ್ರೀಮತೇ ಪುಂಡರೀಕಾಕ್ಷಾಯ ನಮಃ ॥

ಉಂಗಳ್ ಪುಳ್ಳಕ್ಕಡೈ ತೋಟ್ಟತ್ತು ವಾವಿಯುಳ್
ಶೆಂಗಳ್ನೀರ್ವಾಯ್ ನೆಕಿಳ್ನಾರ್ಂಬಲ್ವಾಯ್ ಕೂಂಬಿನಕಾಣ್
ಶೆಂಗಲ್ಪೊಡಿ ಕೂರೈವೆಣ್ಪಲ್ ತವತ್ತವರ್
ತಂಗಳ್ ತಿರುಕ್ಕೋಯಿಲ್ ಶಂಗಿಡುವ್ವಾ ಪೋಕಿನ್ರಾರ್
ಎಂಗಳೈ ಮುನ್ನಮೆಳ್ಪುವ್ವಾ ವಾಯ್ ಪೇಶುಂ
ನಂಗಾಯ್ ಎಳ್ಂದಿರಾಯ್ ನಾಣಾದಾಯ್ ನಾವುಡೈಯಾಯ್
ಶಂಗೊಡು ಶಕ್ಕರವೇಂದುಂ ತಡಕ್ಕೈರ್ಯ
ಪಂಕಯಕಣ್ಣಾನೈ ಪಾಡೇಲೋರೆಂಪಾವಾಯ್ ॥ ೧೪ ॥

"ಎಂಗಳೈ ಮುನ್ನಮೆಳ್ಪುವಾ ವಾಯ್ ಪೇಶುಂ," "ನಂಗಾಯ್" "ನಾಣಾದಾಯ್," "ನಾವುಡೈಯಾಯ್" ಎನ್ನುವ ನಾಲ್ಕು ವಿಶೇಷಣಗಳಿಂದ, ಬಹುಚುರುಕಾದ, ವಾಕ್ಚಾತುರ್ಯವುಳ್ಳ ಧೈರ್ಯಶಾಲಿನಿ ಗೋಪಿಕೆಯು ಎಬ್ಬಿಸಲ್ಪಡುವಳು ಈ ಪಾಶುರದಲ್ಲಿ.

ಉಂಗಳ್ . . . ಯುಳ್—ನಿಮ್ಮ ಹಿತ್ತಲಿನ ತೋಟದ ಭಾವಿಯಲ್ಲಿ

ಶೆಂಗಳ್ನೀರ್ ವಾಯ್ ನೆಕಿೞ್ನ್ದು—ಕಮಲಪುಷ್ಪವು ಅರಳಿ

ಆಂಬಲ್ವಾಯ್ ಕೂಂಬಿನಕಾಣ್—ನಿಲೋತ್ಪಲ ಅಥವಾ ಕುಮುದಿನೀ ಹೂವು ಅರಳಿದ್ದು ಈಗ ಬಾಯಿ ಮುಚ್ಚಿಕೊಂಡಿದೆ.

ಕಮಲಿನಿ ಹೂವು ಸೂರ್ಯನನ್ನು ನೋಡಿ ಅರಳುವುದು; ಹಾಗೆಯೇ ರಾತ್ರಿಯಲ್ಲಿ ಚಂದ್ರನನ್ನು ನೋಡಿ ಕುಮುದಿನಿ ಹೂವು ಅರಳುವುದು. ಕತ್ತಲಾಗುತ್ತಲೆ ಕಮಲವು ಅರಳಿದ್ದು ಮುಚ್ಚುವುದು; ಸೂರ್ಯೋದಯವಾಗುತ್ತಲೆ ಕುಮುದಿನಿಯು ಮುಚ್ಚಿಕೊಳ್ಳುವುದು. ಅಲಂಕಾರ ಶಾಸ್ತ್ರದಲ್ಲಿ ಅದಕ್ಕಾಗಿಯೇ ಕಮಲಿನಿಯನ್ನು ಸೂರ್ಯನ ಪ್ರಿಯೆಯೆಂದೂ ಕುಮುದಿನಿಯನ್ನು ಚಂದ್ರನ ಪ್ರಿಯೆಯೆಂದೂ ಬಣ್ಣಿಸುವುದುಂಟು.

ಇಲ್ಲಿ ಕಮಲ ಮತ್ತು ಕುಮುದಪುಷ್ಪಗಳ ವಿಕಾಸ ಮತ್ತು ಸಂಕೋಚವನ್ನು "ರಾತ್ರಿಯು ಚೆನ್ನಾಗಿ ಕಳೆದು ಪೂರ್ಣ ಸೂರ್ಯೋದಯವಾಗಿದೆ" ಎಂದು ತಿಳಿಸುವುದಕ್ಕಾಗಿ ಹೇಳಿರುವಳು. ಅಲ್ಲದೆ ಈ ಸಾದೃಶ್ಯದಿಂದ "ಎಲೇ ಗೋಪಿ, ಕೃಷ್ಣನನ್ನು ಇನ್ನು ಕಾಣಲಾರವೆಲ್ಲಾ ಎಂದು ಕತ್ತಲು ಕವಿದು, ಮುಚ್ಚಿಹೋಗಿದ್ದ ಮುಖ ಕಮಲವು ಈಗ ಅವನ ಸಂಕಲ್ಪ ಸೂರ್ಯೋದಯವಾಗಿ ಅರಳಿದೆ; ಈಗ ಸ್ವಾಭಾವಿಕವಾಗಿ ಅರಳುವ ನಿನ್ನ ಮುಖ ಕುಮುದಿನಿಯಂತಿರಕೂಡದು, ಎದ್ದು ಬಾ" ಎನ್ನುವ ಅಭಿಪ್ರಾಯವನ್ನು ತಿಳಿಸಿರುವಳು. **"ಉಂಗಳ್"** ಎಂದು ಗೋದೆಯು ಗೋಪಿಯನ್ನು ಕರೆದಿದ್ದು ಅವಳು ಭಾಗವತೋತ್ತಮೆಯಾದುದರಿಂದ; ಹಿಂದೆ ಎಬ್ಬಿಸಲ್ಪಟ್ಟ ಎಂಟು ಗೋಪಿಯರನ್ನೂ ಏಕವಚನದಲ್ಲಿ ಕರೆದು, ಇವಳನ್ನು ಗೌರವವಾಗಿ ಕರೆದಿರುವುದರಿಂದ ಇವಳು ಅವರೆಲ್ಲರಿಗಿಂತಲೂ ಉತ್ತಮಳು.

ಗೋಪಿಯು ಕಮಲಲೋಚನೆ, ಚಂದ್ರವದನೆ ಎನ್ನುವ ರೂಪಕಾಲಂಕಾರವನ್ನು ಮನಸ್ಸಿನಲ್ಲಿಟ್ಟು "ಸಖಿಯರೇ, ನಾನು ನೆನ್ನೆ ನಿಮ್ಮನ್ನು ನಾನೇ ಎಬ್ಬಿಸುವೆನೆಂದು ಹೇಳಿದ್ದೆ; ಆ ಸಂತೋಷದಲ್ಲಿ ನೀವು ನನಗಿಂತ ಮುಂಚೆ ಎದ್ದರೂ ನನ್ನನ್ನು ಎಬ್ಬಿಸುವುದು ಬಹು ಸುಲಭವೆಂದು ಅರಳಿದ ಕಣ್ಣುಳ್ಳವರಾಗಿ ಬಂದಿರಿ; ನಿಮ್ಮ ಕಣ್ಣಿನಿಂದ ಹೊರಬಂದ ಕಾಂತಿಯು ಸೂರ್ಯನ ಬೆಳಕೆಂದು ತಿಳಿದು ಕಮಲವು ಅರಳಿದೆ; ಅಯ್ಯೋಪಾಪ ಕುಮುದಿನಿಯು ಮುಸುಟಿಕೊಂಡಳು. ಇಲ್ಲಿ ಬಂದ ಮೇಲೆ ನಾನು ಇನ್ನೂ ಮಲಗಿರುವುದನ್ನು ಕಂಡು ಬಾಯಿಮುಚ್ಚಿಕೊಂಡಿರಿ; ಅದ

ರಿಂದ ಕಾಂತಿ ಬರುವುದು ನಿಂತು ಚಂದ್ರ ಮುಳುಗಿದನೆಂಬ ಭ್ರಮೆಯೇ ಕಾರಣ ಅದಕ್ಕೆ; ಕಮಲಕ್ಕೂ, ಕುಮುದಕ್ಕೂ ಭ್ರಮೆ ಸಹಜ; ಅವಕ್ಕೆ ಬುದ್ಧಿ ಇಲ್ಲ; ನಿಮಗ್ಯಾಕೆ ಈ ಭ್ರಮೆ? ಸೂರ್ಯೋದಯವಾಗದಿದ್ದರೂ ಎದ್ದು ಬಂದಿರುವಿರಿ." ಎಂದಾಗ ಗೋದೆಯು "ಸಖಿ ನಾನು ಹೇಳಿದ್ದು **"ತೋಟ್ಟತ್ತುವಾವಿಯುಳ್"** ಅದೂ **"ಪುಕ್ಕಿರುಕ್ಕುಡೈ ತ್ತೋಟ್ಟತ್ತು ವಾವಿಯುಳ್"**; ಮನೆ ಮುಂದಿನ ತೋಟವಲ್ಲ; ಯಾರೂ ಪ್ರವೇಶಿಸಲಾಗದಂತೆ ಕಾವಲಿರುವ ಹಿತ್ತಲು; ಎಲ್ಲಾ ಕಡೆಯೂ ಹೀಗೆಯೇ ಆಗಿದೆ; ನಿಮ್ಮ ಹಿತ್ತಲಲ್ಲಿಯೂ ಹೀಗೆಯೇ ಆಗಿದೆ ಎಂದು ಊಹಿಸಿ ಹೇಳಿದೆ. ಹಲ್ಲುಜ್ಜಲು ನೀವು ಹಿತ್ತಲಿಗೆತಾನೇ ಹೋಗುವಿರಿ; ಬೇಕಾದರೆ ಹೋಗಿನೋಡಿ; ಭಾವಿಯಿಂದ ನೀರು ಸೇದಿಕೊಳ್ಳುವಾಗಲೂ ನೋಡಿ" ಎಂದಳು. ಇಲ್ಲಿ ಭಾವಿ ಎಂದರೆ ಸೇದು ಭಾವಿಗಿಂತಲೂ ಇಳಿ ಭಾವಿಯೇ ಸರಿಯಾದರ್ಥ. ಇಲ್ಲದಿದ್ದರೆ "ಭಾವಿಯಲ್ಲಿರುವ ಕಮಲ" ಎಂದು ಗೋದೆಯು ಹೇಳುತ್ತಿರಲಿಲ್ಲ.

ಇಷ್ಟನ್ನು ಗೋದೆಯು ಹೇಳಿದಮೇಲೆ ಗೋಪಿಯು ತನ್ನ ಕೊಠಡಿ ಕಿಟಕಿ ಬಾಗಿಲಿಂದ ಹಿತ್ತಲುಕಡೆ ನೋಡಿದಳು. ಪೂರ್ವಾಭಿಮುಖವಾದ ಮನೆಯ ಹಿತ್ತಿಲಿಗೆ ಇನ್ನೂ ಸೂರ್ಯನ ಬೆಳಕು ಪ್ರಸರಿಸಿದ್ದಿಲ್ಲ; ಕತ್ತಲೆಯೇನೋ ಇರಲಿಲ್ಲ; ಅದನ್ನು ನೋಡಿ "ಇನ್ನೂ ಚೆನ್ನಾಗಿ ಬೆಳಗಾಗಿಲ್ಲವಲ್ಲ" ಎಂದಳು. ಅದಕ್ಕೆ ಗೋದೆ

ಶೆಂಗಲ್ಪೊಡಿ ಕೂರೈ ವೆಣ್ಪಲ್ ತವತ್ತವರ್—ಕಾವೀ ವಸ್ತ್ರವನ್ನು ಉಟ್ಟು ಬಿಳುಪಾದ ಹಲ್ಲುಗಳುಳ್ಳ ತಪಸ್ವಿಗಳು

ತಂಗಳ್ ತಿರುಕ್ಕೋಯಿಲ್ ಶಂಗಿಡುವಾ ಪೋಕಿನ್ರಾರ್—ತಮ್ಮ ತಮ್ಮ ಗುಡಿಯಬಾಗಿಲ ಬೀಗಗಳನ್ನು ತೆಗೆಯಲು ಹೋಗುತ್ತಿದ್ದಾರೆ ಎಂದಳು. ಇಲ್ಲಿ ಹೇಳಲ್ಪಟ್ಟ ಸನ್ಯಾಸಿಗಳಾರೆನ್ನುವ ವಿಷಯದಲ್ಲಿ ವ್ಯಾಖ್ಯಾನಕಾರರಲ್ಲಿ ಅಭಿಪ್ರಾಯ ಭೇದವಿದೆ.

1) ನಿಜವಾದ ವೈರಾಗ್ಯವಿಲ್ಲದೇ ಜನರನ್ನು ವಂಚಿಸುವುದಕ್ಕಾಗಿ ಪೂಜೆಗೆಂದು ಹೊರಟಿರುವ ಪರಮತಾಮಸರು ಎಂದು ಎಂಬಾರ್ ಸ್ವಾಮಿಗಳ ಅಭಿಪ್ರಾಯ;

2) ರಂಗರಾಮಾನುಜರು "ಇವರು ಶೂದ್ರ ಸನ್ಯಾಸಿಗಳು" ಎಂದಿರುವರು;

3) ಸಾತ್ವಿಕ ವೈಷ್ಣವ ಸನ್ಯಾಸಿಗಳೆನ್ನುವುದು ತಿರುಮಲೈ ನಂಬಿಯವರ ಅಭಿಪ್ರಾಯ.

ಎಂಬಾರ್ ಸ್ವಾಮಿಗಳು ಪ್ರಬಂಧ ಕಾಲಕ್ಷೇಪವನ್ನು ತಿರುಮಲೈ ನಂಬಿಯವರಲ್ಲಿ ಮಾಡಿದವರಾದರೂ ಅವರಿಗಿಂತ ಬೇರೆ ಅಭಿಪ್ರಾಯ ಕೊಟ್ಟಿರುವರು. ಇವರಿಬ್ಬರೂ ತಾವು ಹೇಳಿರುವ ಅರ್ಥಕ್ಕೆ ವ್ಯಾಖ್ಯಾನವನ್ನು ಸರಿಯಾಗಿ ತಿಳಿಸಿಲ್ಲ. ರಂಗರಾಮಾನುಜರು ತಮ್ಮ ವ್ಯಾಖ್ಯಾನಕ್ಕೆ ಕಾರಣ ಕೊಡುವಾಗ ಹೀಗೆ ಹೇಳಿರುವರು "ಸನ್ಯಾಸಿಗಳಿಗೆ ಮೂರು ಬೆಳ್ಳಗಿರಬೇಕು ಹಲ್ಲು ಯಜ್ಞೋಪವೀತ, ಮತ್ತು ತ್ರಿದಂಡದಲ್ಲಿ ಇಟ್ಟುಕೊಳ್ಳುವ ಜಪವಸ್ತ್ರ; ಇಲ್ಲಿ ಹೇಳಿರುವುದು ಹಲ್ಲು ಮಾತ್ರ; ಅಲ್ಲದೆ

ಮಾಹಪತ್ಯಂ ಯತಿ ಕುರ್ಯಾತ್ ವಿಷ್ಣುಪೂಜಾಭಿವೃದ್ಧಯೇ

ಎಂದು ವಿಷ್ಣು ತಿಲಕ ಸಂಹಿತೆಯಲ್ಲಿ ಹೇಳಿರುವುದರಿಂದ ಇವನೇನೋ ವೈಷ್ಣವ ಸನ್ಯಾಸಿ ಆದರೆ ಶೂದ್ರ ಸನ್ಯಾಸಿ; ವೈಷ್ಣವ ಬ್ರಾಹ್ಮಣಸನ್ಯಾಸಿಗೆ ಸ್ವಂತ ಅನುಕೂಲಾದಿಗಳನ್ನು ಕಲ್ಪಿಸಿಕೊಳ್ಳುವುದರಲ್ಲಿ ಸ್ವತಃ ಅಧಿಕಾರವಿಲ್ಲ; ತಮ್ಮ ಬಟ್ಟೆಯನ್ನು ಒಗೆದುಕೊಳ್ಳುವುದು; ನೀರು ಸೇದಿಕೊಳ್ಳುವುದು; ಆಪತ್ಕಾಲದಲ್ಲಿ ಇವನ್ನು ಮಾಡಿಕೊಂಡರೂ ಗುಡಿಯ ಅಧಿಕಾರಹೊಂದಿ ಬೀಗದಕೈಯನ್ನು ತನ್ನಲ್ಲೇ ಇಟ್ಟುಕೊಳ್ಳುವುದು ಸರ್ವಥಾ ಇಲ್ಲ. ಆದ್ದರಿಂದ ಇವನು ವೈಷ್ಣವ ಶೂದ್ರ ಸನ್ಯಾಸಿ"

ತಾಮಸ ಸನ್ಯಾಸಿಯಾಗಿ ಕಪಟಿಯಾದರೆ ಅವನ ವರ್ತನವನ್ನು ನಂಬಲಾಗುವುದಿಲ್ಲ; ಸಾತ್ವಿಕನಾದರೆ ಅವನಿಗೆ ಕಾಲನಿಯಮವಿಲ್ಲ; ಯಾವಾಗಲೂ ಭಗವಂತನ ಸೇವೆಯಲ್ಲೇ ನಿಂತಿರುವನು; ಆದ್ದರಿಂದ ಈ ಸನ್ಯಾಸಿಗಳು ಗುಡಿಯ ಬಾಗಿಲು ತೆಗೆಯಲು ಹೊರಟಿರುವುದು ಬೆಳಗಾಗಿದ್ದಕ್ಕೆ ಗುರುತಲ್ಲ–ಎಂದೇ ಗೋಪಿಯು ತಿಳಿದಿರಬೇಕು. ಇಲ್ಲದಿದ್ದರೆ ಎದ್ದು ಬರುತ್ತಿದ್ದಳು. ಇವಳು ಇನ್ನೂ ಮಲಗಿರುವುದನ್ನು ನೋಡಿ ಗೋದೆಯು" ಗೋಪಿ, ನಾವು ಹೇಳಿದ್ದು ಸುಳ್ಳಾಗಿರಲಿ.

ಎಂಗಳೈ ಮುನ್ನಮೆಳ್ಪುವ್ವಾ ವಾಯ್ ಪೇಶುಂ ನಂಗಾಯ್

ನೀವೇ ಬಂದು ನಮ್ಮನ್ನು ಎಬ್ಬಿಸುವೆನೆಂದಿರಿಲ್ಲಾ; ಹಾಗೆ ಮಾಡುವಕಾಲವಾದರೂ ಬಂದಿಲ್ಲವೇ? ನಿಮ್ಮ ಮಾತು ನಿಜವಾಯಿತೆ, ಹೇಳಿದಂತೆ ನಡೆಯದೇ ಹೋದಿರಲ್ಲಾ ಎನ್ನುವ

ನಾಣ್ಣಾದಾಯ್—ನಾಚಿಕೆಯೂ ಇಲ್ಲವೆ "ನಿಮಗೆ ಎಂದಿದ್ದಕ್ಕೆ ಗೋಪಿಯು "ಏನೇನೊ ಹೇಳ ಬೇಡ್ರಿಕಣ್ರೆ; ನಾನು ಬಂದು ಎಬ್ಬಿಸುವವರಿಗೂ ನೀವು ಸುಮ್ಮನಿರಬೇಕಿತ್ತು; ಈಗ ನೀವೇ ಬಂದು ನನಗೆ ತೊಂದರೆ ಕೊಟ್ಟು ನನ್ನನ್ನೇ ದೂಷಿಸುವಿರಿ; ಇದು ಬಹು ಚೆನ್ನಾಗಿದೆಯಮ್ಮ" ಎಂದಳು. ಗೋದೆಗೆ ಮುಗುಳ್ನಗೆ ಬಂದು ಹೇಳಿದಳು

ನಾವುಡೈಯಾಯ್—ಮಾತಾಡುವುದನ್ನು ಚೆನ್ನಾಗಿ ಕಲಿತಿರುವಿರಿ; ಎಷ್ಟಾದರೂ ನೀವು ಚೆನ್ನಾಗಿ ತಿಳಿದವರು; ಸದ್ಭಾವನೆಯಿಂದಲೇ ಬಂದೆವು; ಈಗ ಇದೆಲ್ಲಾ ಬೇಡ; ತಾವು ಬರುವಿರೋ ಇಲ್ಲವೊ? "ಎಂದಿದ್ದಕ್ಕೆ ಗೋಪಿಯು" ಸರಿ, ಎದ್ದೆ, ಏನುಮಾಡೋಣ ಹೇಳಿ" ಎಂದಳು. ಅದಕ್ಕೆ ಗೋದೆಯು

ಶಂಗೊಡು ಶಕ್ಕರಂ ಏಂದುಂ ತಡಕ್ಕೈಯರ್ ಪಂಗಯಕ್ಕರ್ಕಣ್ಣಾನೈ ಪಾಡ—ಎಂದಳು. ಪಾಂಚಜನ್ಯವೆನ್ನುವ ಶಂಖದೊಡನೆ ಸುದರ್ಶನ ಚಕ್ರವನ್ನು ಧರಿಸಿರುವಕೈಗಳುಳ್ಳ ಪುಂಡರೀಕಾಕ್ಷನಾದ ಶ್ರೀಕೃಷ್ಣನನ್ನು ಹಾಡುವುದಕ್ಕಾಗಿ ಬನ್ನಿ; ಇದು ಚತುರ್ಭುಜಕ್ಕೆ ಸೂಚಕ; ಇವನೇ ಪರಮಾತ್ಮನೆಂದು ತೋರಿಸುವ ಗುರುತು. ಆವಿರ್ಭವಿಸುವಾಗಲೇ ತಂದೆ ತಾಯಿಯರಾದ ವಸುದೇವ ದೇವಕಿಯರಿಗೆ ಶಂಖ ಚಕ್ರಧಾರಿಯಾಗಿ ನಾಲ್ಕು ಭುಜಗಳಿಂದ ಸೇವೆ ಕೊಟ್ಟನು; ತಕ್ಷಣ ಮರೆಸಿಕೊಂಡು ಕಂಸವದೇವರಿವಿಗೂ ಹಾಗೆ ತೋರ್ಪಡಿಸಿಕೊಳ್ಳಲಿಲ್ಲ. ಆದರೂ, ಅಕ್ರೂರನು

ಕಂಸನಲ್ಲಿಗೆ ಇವನನ್ನು ಒಯ್ಯುವಾಗ ಅವನಿಗೆ ನೀರಿನಲ್ಲಿ ತನ್ನ ನಿಜ ಸ್ವರೂಪವನ್ನು ತೋರಿದನು; ಶಿಶುಪಾಲ ವಧೆಯಾದಾಗ ಚತುರ್ಭುಜತ್ವ; ಅರ್ಜುನನಿಗೆ ಯಾವಾಗಲೂ ಹಾಗೆಯೇ ಸೇವೆ ಕೊಡುತ್ತಿದ್ದನೆಂದು

ಕೀರೀಟಿನಂ ಗದಿನಂ ಚಕ್ರಹಸ್ತಂ ಇಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ।
ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮೂರ್ತೇ॥

ಎನ್ನುವ ಅವನ ಮಾತಿನಿಂದಲೇ ತಿಳಿಯಬಹುದು. ಒಟ್ಟನಲ್ಲಿ ಈ ಅವತಾರದಲ್ಲಿ ಭಕ್ತರಿಗೆ ಚತುರ್ಭುಜನಾಗಿಯೂ ಮಿಕ್ಕವರಿಗೆ ಸಾಮಾನ್ಯನಾಗಿಯೂ ಕಾಣುತ್ತಿದ್ದನು. ಗೋಪಿಯರಿಗೂ ಚತುರ್ಭುಜನಾಗಿಯೇ ಸೇವೆಕೊಡುತ್ತಿದ್ದ. ಇವನೇ ಉಪನಿಷತ್ತಿನ ಅಂತರಾದಿತ್ಯ ವಿದ್ಯೆಯಲ್ಲಿ

ಕಪ್ಯಾಸಂ ಪುಂಡರೀಕಮೇವಮುಕ್ಷಿಣೀ

ಎಂದು ಸ್ತುತಿಸಲ್ಪಡುವ ಉಪಾಸ್ಯದೈವ. ಆರನೇ ಪದ್ಯದಿಂದ ಹದಿನೈದು ಪದ್ಯ ಪೂರ್ತಿ ಎಬ್ಬಿಸಲ್ಪಡುವ ಹತ್ತು ಗೋಪಿಯರನ್ನು ಎಬ್ಬಿಸುವಾಗ ಅವರವರ ಮನಃಪಾಕಕ್ಕೆ ಅನುಗುಣವಾಗಿ, ಅವರವರ ಭಕ್ತಿಗೆ ವಿಷಯವಾದ ಪರಮಾತ್ಮನ ಆಕಾರವನ್ನೇ ಹೇಳಿರುವುದನ್ನು ನಾವು ಎಷ್ಟು ಸೂಕ್ಷ್ಮದೃಷ್ಟಿಯಿಂದ ನೋಡಿದರೂ ಅಷ್ಟು ಪ್ರಿಯವಾಗಿದೆ. ಇದು ಇಷ್ಟೆಂದು ಹೇಳುವುದು ಸಾಧ್ಯವಿಲ್ಲ. ಪರತತ್ವದ ಸ್ವಾಭಾವಿಕ ರೂಪ **ನೀಲಮೇಘಶ್ಯಾಮತ್ವ**; ನೀಲವರ್ಣವು ನಾರಾಯಣನಿಗಲ್ಲದೆ ಮತ್ತಾರಿಗೂ ಇಲ್ಲ. ಇದು ಪೂರ್ಣತ್ವ ದ್ಯೋತಕ; ಯೋಗಿಗಳಿಗೆ ಅಂತರ್ಹೃದಯದಲ್ಲಿ ಕಾಣುವ ರೂಪ; ಅವತಾರಗಳಲ್ಲೆಲ್ಲಾ ಇವನ ಪುಂಡರೀಕ ನಯನತ್ವವು ಯಾವಾಗಲೂ ಅವನನ್ನು ತೋರಿಕೊಡುತ್ತಿತ್ತು. ಇದನ್ನು ಅನುಭವಿಸುವಾಗ ಯಾಮುನಾಚಾರ್ಯರು

ಕಃ ಶ್ರೀಃ ಶ್ರಿಯಃ ಪರಮಸತ್ವಸಮಾಶ್ರಯಃ ಕಃ
ಕಃ ಪುಂಡರೀಕನಯನಃ ಪುರುಷೋತ್ತಮಃ ಕಃ ।
ಯಸ್ಯಾಯುತಾಯುತಶತಾಂತಕಲಾಂಶಕಾಂಶೇ
ವಿಶ್ವಂ ವಿಚಿತ್ರಚಿದಚಿತ್ಪವಿಭಾಗವೃತ್ತಂ ॥ 2

ಎಂದಿರುವರು.

ಸ್ವಾಪದೇಶ

ಉಂಗಳ್–ಯುಳ್ (1) ಪ್ರಬಂಧಗಳಲ್ಲಿ ಮೋಕ್ಷಕ್ಕೆ "ವೀಡು ಮನೆ" ಎಂದು ಹೆಸರಿದೆ. ಆ ಮನೆಯ "ಪುಗ್ಗುವ್ಕ್ಕಡೈ" ಹಿತ್ತಲು ಸಂಸಾರ; ಅಲ್ಲಿರುವ ತೋಟ ಸುಖ ದುಃಖ ಫಲ ಕೊಡುವ ಶರೀರ; ಅಲ್ಲಿ ಭಾವಿ ಹೃದಯ; ಈ ಹೃದಯದಲ್ಲಿ

"ಶೆಂಗಣ್ಣೀರ್‌ವಾಯ್ ನೆಕ್ಕಿಣ್ಣಂದ್ರು" ಅಹಿಂಸೆ ಮೊದಲಾದ ಎಂಟು ಪುಷ್ಪಗಳು ಅರಳಿವೆ.

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾ ಪುಷ್ಪಂ ಕ್ಷಮಾ ಪುಷ್ಪಂ ವಿಶೇಷತಃ ॥
ಜ್ಞಾನಂ ಪುಷ್ಪಂ ತಪಃ ಪುಷ್ಪಂ ಧ್ಯಾನಂ ಪುಷ್ಪಂ ತಥೈವ ಚ ।
ಸತ್ಯಮಷ್ಟವಿಧಂ ಪುಷ್ಪಂ ವಿಷ್ಣೋಃ ಪ್ರೀತಿಕರಂ ಭವೇತ್ ॥

ಎಂದು ರಹಸ್ಯತ್ರಯಸಾರ—ಮೂಲಮಂತ್ರಾಧಿಕಾರದಲ್ಲಿ ಹೇಳಲಾಗಿದೆ. ಇಲ್ಲಿ ಎಬ್ಬಿಸಲ್ಪಡುವ ಶಿಷ್ಯನ ಹೃದಯದಲ್ಲಿ ಅಹಿಂಸಾದಿ ಸದ್ಗುಣಗಳು ಅರಳಿವೆ.

ಆಂಬಲ್‌ವಾಯ್ ಕೂಂಬಿನಕಾಣ್—ಇಂದ್ರಿಯ ಸ್ವಾತಂತ್ರ್ಯವು ಅಡಗಿ ನೀನು ಜಿತೇಂದ್ರಿಯನಾಗಿರುವಿ.

2) **ಉಂಗಳ್ ಪುಗಳ್ಪಕ್ಕಡೈ**–ಅಥರ್ವಣವೇದ; ಅದರ **ವಾವಿಯುಳ್**–ಉಪನಿಷತ್ತಿನಲ್ಲಿ, **ಶಂಗಣ್ಣೀರ್** ಮೂಲಮಂತ್ರದ, **ವಾಯ್ ನೆಕ್ಕಿಣ್ಣಂದ್ರು**–ಅರ್ಥವು ಪ್ರತಿಪಾದಿಸಲ್ಪಟ್ಟು, ಆಂಬಲ್ **ವಾಯ್ ಕೂಂಬಿನಕಾಣಿ**—ಇಂದ್ರಿಯಗಳು ಅಡಗಿವೆ. ಇಲ್ಲಿ ಆಚಾರ್ಯರು ಅಥರ್ವಣವೇದದ ಉಪನಿಷತ್ತುಗಳಾದ "ಪ್ರಶ್ನ, ಮುಂಡಕ, ಮಾಂಡೂಕ್ಯ ಮತ್ತು ಅಥರ್ವಶಿಖ" ವೆನ್ನುವ ನಾಲ್ಕು ಉಪನಿಷತ್ತುಗಳನ್ನು ಕಾಲಕ್ಷೇಪ ಹೇಳುತ್ತಿರುವರು–" ಎನ್ನುವ ಅರ್ಥವನ್ನು ತೆಗೆದುಕೊಳ್ಳಬೇಕು.

ಶೆಂಗಲ್ . . . . ಪೋಕಿನ್ರಾರ್—ಸನ್ಯಾಸಿಗಳು ಕಾಲಕ್ಷೇಪ ಸಭಾ ಬಾಗಿಲನ್ನು ತೆಗೆಯಲು ಹೊರಟಿರುವರು, ಹಿಂದೆ ಹೇಳಿದಂತೆ ಇಲ್ಲಿ ಸನ್ಯಾಸಿಗಳು ವೈಷ್ಣವ ಶೂದ್ರಸನ್ಯಾಸಿಗಳು; ಇವರಿಗೆ ಉಪನಿಷತ್ತಿನ ಕಾಲಕ್ಷೇಪವನ್ನು ಕೇಳುವ ಅಧಿಕಾರವಿಲ್ಲ; ಆದ್ದರಿಂದ ಇವರಗೆ ತಮಿಳು ಪ್ರಬಂಧ ಕಾಲಕ್ಷೇಪಕ್ಕೆ ಅಧಿಕಾರವುಂಟು. ಅದರಿಂದ ಸ್ವಾಪದೇಶದಲ್ಲಿ **ಉಂಗಳ್ . . . ಕಾಣ್** ಎನ್ನುವುದಕ್ಕೆ ಹೇಳಿದ ಮೊದಲಿನ ಅರ್ಥವನ್ನು ಸೇರಿಸಿಕೊಳ್ಳಬೇಕು. ಎರಡನೇ ಅರ್ಥವನ್ನು ತೆಗೆದುಕೊಂಡರೆ ಆಗ ಇಲ್ಲಿನ ಅರ್ಥವಿದು "ಶಿಷ್ಯೋತ್ತಮರೇ, ಆಚಾರ್ಯನು ಉಪನಿಷತ್ಕಾಲಕ್ಷೇಪ ಹೇಳುತ್ತಿರುವರು; ಅವರ ಪ್ರತಿನಿಧಿಯಾಗಿ ತಾವು ವೈಷ್ಣವ ಶೂದ್ರ ಸನ್ಯಾಸಿಗಳಿಗೆ ಪ್ರಬಂಧ ಕಾಲಕ್ಷೇಪ ಹೇಳಲು ಏಳೋಣಾಗಲಿ; ಅವರು ಕಾಲಕ್ಷೇಪ ಸಭಾ ಬಾಗಿಲನ್ನು ತೆಗೆಯಲು ಹೊರಟಿರುವರು."

ಎಂಗಳೈ . . . ಎಳ್ಗುಂದಿರಾಯ್—ತಾವು ಎಂದಿಗೂ ಪರಮಾತ್ಮ ಜ್ಞಾನದಲ್ಲಿ ಮುಂದೆ ಎದ್ದಿರುವರು; ತಾವು ಎದ್ದು ನಮ್ಮನ್ನು ಎಬ್ಬಿಸಿದಮೇಲೆ ಏಳುವವರು ನಾವು; ಇಲ್ಲಿ **ನಂಗಾಯ್, ನಾಣಾದಾಯ್, ನಾವುಡೈಯಾಯ್,** ಎನ್ನುವ ಮೂರು ವಿಶೇಷಣಗಳಿಂದ ಎಬ್ಬಿಸಲ್ಪಡುವ ಶಿಷ್ಯನು ಪರಿಪೂರ್ಣನೆಂದು ತಿಳಿಯ

ಬಹುದು; ಪರಿಪೂರ್ಣ ಹೆಂಗಸನ್ನೇ **ನಂಗಾಯ್** ಎನ್ನುವೆವು; ಜ್ಞಾನ, ಅನುಷ್ಠಾನ ಮತ್ತು ವೈರಾಗ್ಯದಲ್ಲಿ ಪರಿಪೂರ್ಣನಾದ ಶಿಷ್ಯನೇ ನಂಗಾಯ್; **ನಾಣ್** ಎಂದರೆ ಅಹಂಕಾರ; ಅದಿಲ್ಲದವನು **ನಾಣಾದಾಯ್;** ನಾಲಿಗೆ ಹೊಂದಿರುವುದಕ್ಕೆ ಪ್ರಯೋಜನ ಭಗವನ್ನಾಮ ಸಂಕೀರ್ತನ; ಅದರಲ್ಲೇ ನಿರತರಾದುದರಿಂದ **"ನಾವುಡೈಯಾಯ್"**

ಶಂಗೊಡು . . . ಕ್ಕೈಯ್ಯ—ಶಂಖ ಚಕ್ರಧಾರಿಯಾಗಿ ಶ್ರೀವೈಷ್ಣವಾಚಾರ್ಯೋತ್ತಮನಾಗಿ

ಪೆಂಗಳಂ. ಶ್ಣನೈ—ಪುರುಷಕಾರನಾದ ಆಚಾರ್ಯನನ್ನು ಪಾಡ–ಹಾಡಲು ದಯಮಾಡಿಸಬೇಕು–**ಏಲೋರೆಂಪಾವಾಯ್**

॥ ಶ್ರೀಮನ್ನಾಥಮುನಯೇ ನಮಃ ॥

ಎಲ್ಲೇ ಇಳಂಕಿಳಿಯೇ ಇನ್ನಮುರಂಗುದಿಯೋ
ಶಿಲ್ಲೆನ್ರಳ್ಪ್ಪಾಯೇನ್ನಿ ನಂಗೈಮಿರ್ ಪೋದರುಕಿನ್ರೇ
ವಲ್ಲೆ ಯ್ಯು ಕಟ್ಟುರೈಕಳ್ ಪಂಡೇ ಯ್ಯು ವಾಯರಿದುಂ
ವಲ್ಲೀರ್‌ಕಳ್ ನೀಂಗಳೇ ನಾನೇ ತಾನಾಯಿಡಕ
ಒಲ್ಲೆ ನೀ ಪೋದಾಯ್ ಉನಕ್ಕೆನ್ನ ವೇರುಡೈಯೈ
ಎಲ್ಲಾರುಂ ಪೋಂದಾರೋ ಪೋಂದಾರ್‌ಪೋಂದೆಣ್ಣಿಕ್ಕೊಳ್
ವಲ್ಲಾನೈ ಕೊನ್ನಾನೈ ಮಾತ್ತಾರೈ ಮಾತ್ತಾಮಿಕ್ಕ
ವಲ್ಲಾನೈ ಮಾಯನೈ ಪಾಡ–ಏಲೋರೆಂಪಾವಾಯ್ ॥ ೧೫ ॥

ಈ ಪದ್ಯದಲ್ಲಿ ಎಬ್ಬಿಸಲ್ಪಡುವ ಗೋಪಿಯು ಭಾಗವತರಲ್ಲಿ ಅತ್ಯುತ್ತಮಳು. ಭಾಗವತ ಮತ್ತು ವೈಷ್ಣವ ಇವೆರಡೂ ಪರ್ಯಾಯ ಪದಗಳು. ಹಿಂದಿನ ಶ್ಲೋಕದಲ್ಲಿ ಗೋದೆಗೂ, ಆ ಗೋಪಿಗೂ ನಡೆದ ಸಂವಾದವನ್ನು ಕೇಳಿ "ಶಂಗೊಡು ಶಕ್ಕರಂ ಎಂದುಂ ತಡಕ್ಕೈಯ್ಯ, ಪಂಗಯಕ್ಕಣ್ಣ" ಎನ್ನುವ ನಾಮಗಳನ್ನು ಅರ್ಥದೊಡನೆ ಸವಿಯುತ್ತಾ, ಗಿಣಿಯಂತೆ ಇಂಪಾದ ಸ್ವರದಲ್ಲಿ ಹಿಮ್ಮೇಳ ಹಾಡುತ್ತಾ ತನ್ನನ್ನೇ ಮರೆತು ಧ್ಯಾನಮಾಡುತ್ತಿರುವ ಗೋಪಿ ಇವಳು.

ಎಲ್ಲಾ ಗೋಪಿಯರಂತೆ ಇವಳೂ ಶ್ರೀಕೃಷ್ಣನೇ ಪರಮಾತ್ಮಾ ಭಗವಂತ ಎನ್ನುವ ಮಹಾ ವಿಶ್ವಾಸವುಳ್ಳವಳು. ಅಷ್ಟು ಮಾತ್ರವಲ್ಲ. (ವಿ–ಥರ್ಮೋತ್ತರ ಮತ್ತು ಭಾರತ–ಆಶ್ವ 9–31)

ಶ್ರುತಿಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ತಿಷ್ಠತಿ ।
ಆಜ್ಞಾಚ್ಛೇದೀ ಮಮ ದ್ರೋಹಿ ಮದ್ಭಕ್ತೋಪಿ ನ ವೈಷ್ಣವಃ ॥

ಅಂದರೆ "ಶ್ರುತಿಯಲ್ಲೂ ಸ್ಮೃತಿಯಲ್ಲೂ ಹೇಳಿರುವ ಅಹಿಂಸಾ ಧರ್ಮದಮೇಲೆ ನಿಂತಿರುವ ಸರ್ವಭೂತ ಹಿತಚಿಂತನೇ ಮತ್ತು ತನ್ನ ಆತ್ಮೋದ್ಧಾರಕ್ಕೆ ಮಾಡಬೇಕಾದ ತಪಸ್ಸು ಮೊದಲಾದ ಧರ್ಮ–ಇವು ನನ್ನ ಆಜ್ಞೆ; **ಈ ಆಜ್ಞೆ**ಯನ್ನು ಯಾವನು ಉಲ್ಲಂಘಿಸುವನೋ ಅವನು ನನ್ನ ಭಕ್ತನಾದರೂ ವೈಷ್ಣವನಾಗಿರಲು ಯೋಗ್ಯನಲ್ಲ ಎಂದು ಪರಮಾತ್ಮನೇ ಹೇಳಿರುವಂತೆ ಯಾರ ಮನಸ್ಸನ್ನೂ ನೋಯಿಸಲಪೇಕ್ಷಿಸದ ವೈಷ್ಣವ ಸರ್ವೋತ್ತಮೆ. ಶೈವ, ಶಾಂಕರ, ಬೌದ್ಧ, ಜೈನ ಅನ್ನುವ ಪದಗಳಂತಲ್ಲ ವೈಷ್ಣವ ಪದ. ವಿಷ್ಣುವೇ ಪರಮಾತ್ಮನೆಂದು ತಿಳಿದು ಅವನಲ್ಲಿ ವಿಶ್ವಾಸವಿಟ್ಟು, ಅವನಲ್ಲಿ ಪ್ರಪನ್ನನಾಗಿ ಭಕ್ತಿಯಿಂದ ಅವನ ಮತ್ತು ಭಾಗವತರಸೇವೆ ಮಾಡುವವನೇ ವೈಷ್ಣವ.

ವಿಷ್ಣುವೇ ಪರತತ್ವ; ಅವನೇ ಉಪಾಯ ಮೋಕ್ಷಕ್ಕೆ ಮತ್ತು ಅವನೇ ಪುರುಷಾರ್ಥ ಅಂದರೆ ಮುಕ್ತಿಯಾದ ಮೇಲೆ ಅನುಭವಿಸಲ್ಪಡುವ ಆನಂದ ವಸ್ತು. ಈ ಆನಂದವು ಅನುಭವವಾಗಿ ಕೋಡೀ ಹರಿದು ಅವನ ಮತ್ತು ಅವನ ಭಕ್ತರ ಕೈಂಕರ್ಯ ಅಂದರೆ ಸೇವೆಯಲ್ಲಿ ಪೂರ್ತಿಗೊಳ್ಳುವುದು. ಜೀವನು ಆತ್ಮವಾದರೂ, ಅವನಿಗೂ ಆತ್ಮವಾದುದು ದೈವ. ಆದು ವಿಷ್ಣುವಲ್ಲದೇ ಮತ್ತಾವುದೂ ಅಲ್ಲ. ಪರಮಾತ್ಮನಿಗೆ ಯಾವ ಲಕ್ಷಣವಿರಬೇಕೋ ಅದೆಲ್ಲವೂ ವಿಷ್ಣು ಶಬ್ದದಲ್ಲೇ ಅಡಗಿದೆ. ಹೀಗಿದ್ದರೆ ಅದಕ್ಕೆ ಯೌಗಿಕಾರ್ಥವೆಂದು ಹೆಸರು. ಶಬ್ದಾರ್ಥಕ್ಕೂ ಆ ಶಬ್ದಾರ್ಥ ಕೊಡುವ ಹೆಸರಿನಿಂದ ವಾಡಿಕೆಯಾಗಿ ಕರೆಯುವ ವಸ್ತುವಿಗೂ ಸಂಬಂಧವಿಲ್ಲದಿದ್ದರೆ, ಅದಕ್ಕೆ "ರೂಢಿ" ಎನ್ನಲಾಗಿದೆ. ಸುಂದರರಾಜವೆನ್ನುವನು ಕುರೂಪಿಯಾಗಿರುವಂತೆ. ಕೆಲವು ಪದಗಳು **ಯೋಗರೂಢ**ವಾಗಿವೆ. ಅಂದರೆ ವಾಡಿಕೆಯಾಗಿ ಕರೆಯುವ ಹೆಸರಿನಂತೆ ಇರುವ ವಸ್ತು **ಯೋಗರೂಢ**. ಹೀಗೆ ಪರಮಾತ್ಮ ವಸ್ತುವನ್ನು ಯೋಗರೂಢಾರ್ಥ ಹೇಳುವ ಶಬ್ದ ಅಥವಾ ಪದವು ಶಿವ, ರುದ್ರ, ಬ್ರಹ್ಮಾ, ಹಿರಣ್ಯಗರ್ಭ ಮೊದಲಾದವುಗಳಲ್ಲ; ಇವು ಆಯಾ ದೇವತೆಗಳ ರೂಢಿ ಶಬ್ದಗಳು. **ವಿಷ್ಣು ಪದವೇ ನಾರಾಯಣ ಪದದಂತೆ** ಯೋಗರೂಢ. ಆದರೆ ನಾರಾಯಣ ಪದದಲ್ಲಿ ಸಕಲ ಶಾಸ್ತ್ರಾರ್ಥವೂ ಇದೆ. ಇದನ್ನು ಕಾಲಕ್ಷೇಪದಲ್ಲಿ ತಿಳಿಯಬಹುದು. ಪರಮಾತ್ಮನ ಸ್ವರೂಪ, ರೂಪ, ಗುಣ ವಿಭೂತಿ, ಲೀಲಾ ಇವೆಲ್ಲವೂ ನಾರಾಯಣ ಶಬ್ದದಲ್ಲಿ ಅಡಗಿದೆ. ಈ ನಾರಾಯಣನ ಧರ್ಮವೂ, ಮಿಕ್ಕ ಯಾವ ದೇವತೆಯಲ್ಲಿಲ್ಲದಿರುವ ಧರ್ಮವೂ ಈ ವಿಷ್ಣು ಶಬ್ದದಲ್ಲಿ ಅಡಗಿದೆ. ಆದ್ದರಿಂದ ಪ್ರಪನ್ನರಾದ ಭಕ್ತರಿಗೆ ದೈವವು ನಾರಾಯಣನೆನ್ನುವುದಕ್ಕಿಂತ ವಿಷ್ಣುವೆನ್ನುವುದೇ ಸಂಪ್ರದಾಯ. ಅದೇ ಅರ್ಥದಲ್ಲಿ ಭಗವಂತನ ಸ್ವೀಕೃತ ಕಿಂಕರನಿಗೆ ವೈಷ್ಣವನೆಂದು ಹೆಸರು. ನಾನು ವಿಷ್ಣುವಿನ ಕಿಂಕರನೆಂದು ಕೊಂಡರೆ ಹಾಗೆ ಆಗ

ಲಾರೆವು. ಅವನಲ್ಲಿ ಪ್ರಪನ್ನನಾಗಿ, ಭಕ್ತಿಯಿಟ್ಟು ತ್ಯಾಗಾತ್ಮಕ ಬುದ್ಧಿಯುಳ್ಳವನಾದರೆ ಆಗ

ತತ್ಪೋ ಪಾಯಪ್ರಭೃತಿವಿಷಯೇ ಸ್ವಾಮಿದತ್ತಾಂ ಸ್ವನಿಷ್ಠಾಂ ।
ಶೇಷಾಂ ಕೃತ್ವಾ ಶಿರಸಿ ಕೃತಿನಃ ಶೇಷಮಾಯುರ್ನಯಂತಿ ॥

ಎಂದು ನಿಗಮಾಂತ ದೇಶಿಕರು ಹೇಳಿರುವಂತೆ ಪರಮಾತ್ಮನೇ ನಮಗೆ ಸಕಲ ದೈವೀ ಸಂಪತ್ತನ್ನು ಕೊಟ್ಟು ನಾವು ಯಾವ ಕೈಂಕರ್ಯಕ್ಕೆ ಯೋಗ್ಯರೆಂದು ತಾನೇ ನಮ್ಮ ಹೃದಯಲ್ಲಿ ಪ್ರಕಾಶಕೊಡುವನು.

ಪರಮ ವೇದಾಂತಿಯ ದೈವ ನಾರಾಯಣ; ಆ ವೇದಾಂತಿಯು ಪ್ರಪನ್ನನಾಗಿ ಭಕ್ತನಾದರೆ ಅದೇ ನಾರಾಯಣ ವಿಷ್ಣುವಾಗಿರುವನು. ಜ್ಞಾನಿಗಳಿಗೆ ನಾರಾಯಣ; ಕಿಂಕರರಿಗೆ ವಿಷ್ಣು; ಪಾರಮಾರ್ಥಿಕ ತತ್ವದ ಹೆಸರು ನಾರಾಯಣ; ಪಾರಮಾರ್ಥಿಕ ಧರ್ಮಪರಾಯಣ ದೈವ ವಿಷ್ಣು; ಪರಮಾರ್ಥ ಮುಕ್ತಿ ಭೋಗ್ಯ ದೈವ ಶ್ರೀಮನ್ನಾರಾಯಣ.

ಇದನ್ನು ಚೆನ್ನಾಗಿ ತಿಳಿದವರು ಭೀಷ್ಮರು; ಧರ್ಮ ಪರಾಯಣರು; ಅವರು ದೈವವನ್ನು ಸ್ತುತಿಸುವಾಗ ಹೇಳಿದ್ದು ನಾರಾಯಣ ಸಹಸ್ರನಾಮವಲ್ಲ; ಅದು ವಿಷ್ಣು ಸಹಸ್ರನಾಮ, ಇದರಲ್ಲಿ 2ನೇ ನಾಮವಾಗಿಯೂ, 259 ನಾಮವಾಗಿಯೂ ಮತ್ತು 663 ನಾಮವಾಗಿಯೂ ವಿಷ್ಣುವನ್ನು ಸ್ತೋತ್ರಮಾಡಿರುವರು. ಮೂರು ಕಡೆಯಲ್ಲೂ ಬೇರೆಬೇರೆ ಅರ್ಥದಲ್ಲಿ ಹೇಳಿರುವರು. ಸಹಸ್ರನಾಮ ಭಾಷ್ಯದಲ್ಲಿ ಅದನ್ನು ನೋಡಬಹುದು.

ಒಟ್ಟನಲ್ಲಿ ಪ್ರಪನ್ನನಾದ ಮೇಲೆ ಎಲ್ಲರಿಗೂ ದೈವ ವಿಷ್ಣು; ಕೈಂಕರ್ಯ ಯೋಗ್ಯತೆಯುಳ್ಳವನು ವೈಷ್ಣವ. **ಈ ವೈಷ್ಣವ ಧರ್ಮ** ಪ್ರದೀಪವೇ ಗೋದೆಯ **ಈ 30** ಹಾಡುಗಳು; **ಈ** ಪ್ರದೀಪವನ್ನು ನಂದಾದೀಪವನ್ನಾಗಿ ಮಾಡಿರುವುದು ಈ 15ನೇ ಹಾಡು. ಆಚಾರ್ಯರು ಹೇಳುವಂತೆ **ತಿರುಪ್ಪಾವೈಯಲ್ಲಿ ತಿರುಪ್ಪಾವೈ ಈ 15ನೇ ಪದ್ಯ.** ಇಲ್ಲಿ ವೈಷ್ಣವ ಧರ್ಮವು ಬಹಳ ಸಂಗ್ರಹವಾಗಿದ್ದರೂ ವಿಶಾಲ ದೃಷ್ಟಿಗೆ ಹೆಬ್ಬಾಗಿಲಂತಿದೆ.

ವೈಷ್ಣವನೆಂದರೆ ಮುಕ್ತಪ್ರಾಯನೇ–ಅವನಿಗೆ ಮತ್ತೆ ಜನ್ಮವಿಲ್ಲ; ನರಕಾದಿ ದರ್ಶನವಿಲ್ಲ. ಭಾರತ ಯುದ್ಧದಲ್ಲಿ ಭೀಷ್ಮರು ಮರಣಶಯ್ಯೆಯಲ್ಲಿದ್ದಾಗ ನಕುಲನು ಅವರಲ್ಲಿ ಬಂದು ಗೂಢಾರ್ಥವನ್ನು ಕೇಳಿದನು; ಅದನ್ನೇ ಪುಲಸ್ತ್ಯರು ಪರಾಶರರಲ್ಲಿ ಕೇಳಿದಾಗ ಅದನ್ನು ಹೀಗೆ ಹೇಳಿದರು—

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ ವದತಿ ಯಮಃ
ಕಿಲ ತಸ್ಯ ಕರ್ಣಮೂಲೇ! ಪರಿಹರ ಮಧುಸೂದನ
ಪ್ರಪನ್ನಾ ಪ್ರಭುರಹಮನ್ಯನೃಣಾಂ ನವೈಷ್ಣವಾನಾಂ

—ವಿ–ಪು III, 7, 14

"ಪುಲಸ್ತ್ಯ, ಯಮ, ಪಾಶಹಸ್ತದಿಂದ ಹೊರಟ ತನ್ನ ಭಟನನ್ನು ನೋಡಿ, ಅವನ ಕಿವಿಯಲ್ಲಿ ಮತ್ತೊಬ್ಬರಿಗೆ ತಿಳಿಯದಂತೆ ಹೇಳಿದ "ಎಲೋ, ನೀನು ವೈಷ್ಣವರಲ್ಲಿಗೆ ಹೋಗಬೇಡ; ಅವರು ನಮ್ಮವರಲ್ಲ; ವೈಷ್ಣವರಲ್ಲದವರು ನನ್ನ ಸಾಮ್ರಾಜ್ಯಕ್ಕೆ ಸೇರಿದವರು" ಎಂದು; ಆಗ ಆ ಭಟ "ಸ್ವಾಮಿ ವೈಷ್ಣವರನ್ನು ನಾನು ಹೇಗೆ ಕಂಡು ಹಿಡಿಯುವುದು" ಎಂದು ಕೇಳಿದ. ಆಗ ಯಮ ಹೇಳಿದ ಮಾತಿದು

ನ ಚಲತಿ ನಿಜಧರ್ಮತೋ ಯಃ ಸನುಮತಿಃ ಆತ್ಮಸುಹೃದ್ವಿಪಕ್ಷಪಕ್ಷೇ।
ನ ಹರತಿ ನ ಚ ಹಂತಿ ಕಿಂಚಿದುಚ್ಚೈಃ ಸಿತಮನಸಂ ತಮವೈಹಿ ವಿಷ್ಣುಭಕ್ತಂ

"ವೈಷ್ಣವನೆಂದರೆ ಶುದ್ಧವಾದ ಮನಸ್ಸುಳ್ಳವನು" ಶುದ್ಧ ಮನಸ್ಸುಳ್ಳವನೆಂದರೆ ಆತ್ಮಗುಣವುಳ್ಳವನು. ನಿಗಮಾಂತ ದೇಶಿಕರು "ಸ್ವನಿಷ್ಠಾಭಿಜ್ಞಾನ" ವೆನ್ನುವ ರಹಸ್ಯದಲ್ಲಿ ಅದನ್ನು ಹದಿನೇಳು ಗುಣಗಳನ್ನಾಗಿ ತೋರಿಸಿಕೊಟ್ಟಿರುವರು.

(ಟಪ್ಪಣಿ 19 ನೋಡಿ)

ಇಂತಹ ಆತ್ಮಗುಣ ಪೂರ್ತಿಯುಳ್ಳ ಗೋಪಿಕೆಯೇ ಇಲ್ಲಿ ಎಬ್ಬಿಸಲ್ಪಡುವವಳು. ಅವಳನ್ನು ಗೋದೆಯು **"ಎಲ್ಲೇ, ಇಳಂಕಿಳಿಯೇ"** ಎಂದು ಮೊದಲು ಕರೆದಳು. "ಎಲ್ಲೆ" ಎಂದರೆ "ಲೇ" ಎನ್ನುವಂತೆ ಸಂಬೋಧನೆ;

ಹಂಡೇ ಹಂಜೇ ಹಲಾಹ್ವಾನೇ ನೀಚಾಂ ಚೇಟೀಂ ಸಖೀಂ ಪ್ರತಿ

ಎಂದು ಅಮರಕೋಶದಲ್ಲಿ ಹೇಳಿರುವಂತೆ ನೀಚ ಸೇವಕಿಯನ್ನು ಕರೆಯಬೇಕಾದರೆ, "ಹಂಡೆ, ಹಂಜೆ, ಹಲ" ಎಂದು ಕರೆಯುವ ವಾಡಿಕೆ. ಈ "ಹಲ" ಸಂಬೋಧನೆಯು ಆಂಗ್ಲ ಸಂಸ್ಕೃತಿಯಲ್ಲಿ "Hollo" ಎಂದು ಗೌರವ ವಾಚಕವಾಗಿದೆ. ಸಂಸ್ಕೃತದ ಅಪಭ್ರಂಶವದು. ಇಲ್ಲಿರುವ ಗೋಪಿಯು ಚೇಟಿಯಲ್ಲ; ಅದಕ್ಕಾಗಿ "ಎಲ್ಲೇ" ಎಂದರೆ "ಸಖಿಯೆ" ಎಂದು ಕರೆದು "ಇಳಂಕಿಳಿಯೇ" ಎಂದಳು; "ನನ್ನ ಮುದ್ದುಗಿಣಿಯೇ" ಎಂದು ಪ್ರೀತಿಯಿಂದ ಕೂಡಿದ ಮಾತಿದು; ಗಿಣಿಯನ್ನು ಪಂಜರದಲ್ಲಿಟ್ಟು ನಮಗೆ ಪ್ರಿಯವಾದುದನ್ನು ಅದಕ್ಕೆ ಹೇಳಿಕೊಟ್ಟು ಅದನ್ನೇ ಅದರಿಂದ ಕೇಳುವುದೆಂದರೆ ಬಹು ಇಷ್ಟ. "ಲೀಲಾ ಶುಕದಂತೆ ಪರಮಾತ್ಮನಿಗೆ ಪ್ರಿಯಳಾಗಿ ನಮಗೂ ಪ್ರಿಯಳಾದವಳೇ; ತಾನು ಕೇಳುವುದಕ್ಕೆ ಇಷ್ಟವಾದುದನ್ನೆಲ್ಲಾ ಪರಮಾತ್ಮನು ನಿನಗೆ ಹೇಳಿಕೊಟ್ಟಿರುವನು. ನಿನ್ನನ್ನು ಮುಂದೆ ಬಿಟ್ಟುಕೊಂಡು ನಿನ್ನಿಂದ ಅವನ ನಾಮಗಳನ್ನು ಹಾಡಿಸಿ ಹೋದೆವೆಂದರೆ ಅವನು ನಮಗೆ

ಸುಖವಾಗಿ ಪ್ರಸನ್ನನಾಗುವನು; ಎನ್ನುವುದೇ ಗೋದೆಯು ಹೀಗೆ ಕರೆದುದಕ್ಕೆ ಅರ್ಥ.

ಇದನ್ನು ಕೇಳಿ ಗೋಪಿಯು ಹೀಗೆ ಯೋಚಿಸಿದಳು. "ಈಗ ಇವರು ನನ್ನನ್ನು ಕರೆಯಲು ಬಂದಿರುವರು. ಮಗ್ಗಲುಮನೆ ಗೋಪಿಯನ್ನು ಕರೆದಾಗ "ನಾಣಾದಾಯ್, ನಾವುಡ್ಡೈಯಾಯ್" ಎಂದರು; ನಾನು ಸುಖವಾಗಿ ನೆನ್ನೆ ರಾತ್ರಿ ಊಟ ಮಾಡಿ ವಿಳ್ಕೈದೆಲೆ ಹಾಕಿಕೊಂಡು ಸುಪ್ಪತ್ತಿಗೆ ಮೇಲೆ ಇರುವುದನ್ನು ಕಂಡು ಏನು ತಿಳಿದುಕೊಳ್ಳುವರೋ; ಕೃಷ್ಣನನ್ನೇ ಮರೆತಿರುವಳಿವಳೆಂದುಕೊಳ್ಳುವರೇನೋ? ನಾನು ಅವನ ನಾಮವನ್ನೇ ಹಿಮ್ಮೇಳ ಹಾಡುತ್ತಿದ್ದುದನ್ನು ಕೇಳಿಸಿಕೊಂಡರೋ ಇಲ್ಲವೋ? ಸ್ವಲ್ಪ ಸುಮ್ಮನಿದ್ದು ನೋಡೋಣ" ಎಂದು ಹಾಗೆಯೇ ಇವಳಿರಲು ಗೋದೆಯು

ಇನ್ನಮುರಂಗುದಿಯೋ—ಏನೇ, ಈಗತಾನೇ ಹಾಡುತ್ತಿದ್ದೆ; ಅಷ್ಟರಲ್ಲಿ ನಿದ್ದೆಯೇ? **ಇನ್ನೂ ಮಲಗಿರುವೆಯೇನು** (ಅಥವಾ ಎದ್ದಿರುವೆಯೋ)—ಇಲ್ಲಿಯ ಗೋಪಿ ಪರಮ ಭಾಗವತೆ. ಇವಳಾದಮೇಲೆ ಮತ್ತಾವ ಗೋಪಿಯನ್ನು ಗೋದೆಯು ಎಬ್ಬಿಸಲಿಲ್ಲ. ಗೋದೆಯು ಇವಳನ್ನೇ ಅವಲಂಬಿಸಿರುವಳು. ಇವಳಂತಾಗಬೇಕೆನ್ನುವುದೇ ಎಲ್ಲಾ ವೈಷ್ಣವರ ಆಸೆ. ನಿಗಮಾಂತದೇಶಿಕರು

" ಆತ್ಮಾಪಹಾರರಸಿಕೇನ ಮಯೈವ ದತ್ತಂ
ಅನ್ಯೈರಧಾರ್ಯಮಧುನಾ ವಿಬುಧೈಕನಾಥ।
ಸ್ವೀಕೃತ್ಯ ಧಾರಯಿತುಮರ್ಹಸಿ ಮಾಂ ಸ್ವಕೀಯಂ
ಚೋರೋಪನೀತನಿಜನೂಪುರವತ್ ಸ್ವಪಾದೇ ॥ ದೇ–ಪಂ

"ದೇವ, ನಿನ್ನ ವಸ್ತುವಾದ ನನ್ನನ್ನು ನನ್ನದೆಂದು ಕದ್ದು ಅದನ್ನು ಇಟ್ಟುಕೊಳ್ಳಲಾರದೆ, ಕಳ್ಳನು ಕದ್ದ ವಸ್ತುವನ್ನು ಯಜಮಾನನಿಗೇ ಒಪ್ಪಿಸುವಂತೆ ನಿನಗೆ ಒಪ್ಪಿಸಿರುವೆನು"

ಪ್ರಹ್ಲಾದ, ಗೋಕುಲ, ಗಜೇಂದ್ರ, ಪರೀಕ್ಷಿತಾದ್ಯಾಃ
ತ್ರಾತಾಸ್ತ್ವಯಾ ನನು ವಿಪತ್ತಿಷು ತಾದೃಶೀಷು।
ಸರ್ವಂ ತದೇಕಮುಪರಂ ಮಮ ರಕ್ಷಣಂ ತೇ
ಸಂತೋಲ್ಯತಾಂ ತ್ರಿದಶನಾಯಕ ಕಿಂಗರೀಯಃ ॥ ದೇ–ಪಂ

"ನನ್ನಂತೆ ಪ್ರಹ್ಲಾದ, ಗೋಕುಲ ಗೋಪಗೋಪಿಯರು, ಗಜೇಂದ್ರ, ಪರಿಕ್ಷಿತ್—ಇವರೇ ಮೊದಲಾದವರು ನಿನ್ನಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು; ಅವರೆಲ್ಲರನ್ನೂ ರಕ್ಷಿಸಿ ನನ್ನನ್ನು ರಕ್ಷಿಸುವುದು ನಿನಗೆ ಹೊರೆಯೆ, ದೇವ!

ನೀಡೋದರಾನ್ನಿಪತಿತಸ್ಯ ಶುಕಾರ್ಭಕಸ್ಯ
ತ್ರಾಣೇನ ನಾಥ ವಿಹರ್ಷ ಇವ ಸಾರ್ವಭೌಮಃ ।
ಆದಾಯ ಗೋಪನಗರಾಧಿಪತೇ ಸ್ವಯಂ ಮಾಂ
ಕ್ರೀಡಾದಯಾವ್ಯತಿಕರೇಣ ಕೃತಾರ್ಥಯ, ತ್ವಂ ॥

ದೇಹ—ಸ್ತು 19

"ಗೂಡಿನಿಂದ ಹೊರಬಿದ್ದ ಗಿಣಿಯನ್ನು ಹಿಡಿದು ಅದನ್ನು ಪಾಲನಮಾಡಿ ವಿಹರಿಸುವ ಮಹಾರಾಜನಂತೆ ನನ್ನನ್ನು ಲೀಲಾಶುಕವನ್ನಾಗಿ ಸ್ವೀಕರಿಸು"

ಲೀಲಾಶಕುಂತಮಿವ ಮಾಂ ಸ್ವಪದೋಪಲಬ್ಧೈ
ಸ್ವೈರಂ ಕ್ಷಿಪ್ತ ದುರಿತಪಂಜರತೋ ಗುಣಸ್ಥಂ ।
ತತ್ತಾದೃಶಂ ಕಮಪಿ ಗೋಪಪುರೀವಿಹಾರಿ
ಸಂತೋಷಮುಲ್ಲಲಯ ಸಾಗರಸಂಭವಾಯಾಃ ॥

ದೇಹ—ಸ್ತು 20

"ಇಷ್ಟು ದಿನಗಳು ಪಾಪವೆನ್ನುವ ಪಂಜರದಲ್ಲಿದ್ದೆ; ಪ್ರಪನ್ನನಾಗಿ ಅಲ್ಲಿಂದ ಹೊರ ಬಿದ್ದ ಗಿಣಿ ನಾನು; ಈಗ ನಿನ್ನ ಲೀಲಾಶುಕ; ನನಗೆ ಒಳ್ಳೆಯದನ್ನು ಕಲಿಸಿ ನಿನ್ನ ಪತ್ನಿ ಲಕ್ಷ್ಮೀದೇವಿಗೆ ಸಂತೋಷಬರುವಂತೆ ಮಾಡು; ಅವಳು ನನ್ನ ತಾಯಿ; ಮರೆಯಬೇಡ."

ಸಂರಕ್ಷಣೀಯಮುಮುರಾಧಿಪತೇ ತ್ವಯೈವ
ದೂರ ಪ್ರಯಾತಮಪಿ ದುಸ್ತ್ಯಜಗಾಢಬಂಧಂ ।
ಆಕೃಷ್ಟವಾನಸಿ ಭವಾ ಅನುಕಂಪಮಾನಃ
ಸೂತ್ರಾನುಬದ್ಧಶಕನಿಕ್ರಮತಃ ಸ್ವಯಂ ಮಾಂ ॥

—ದೆ—ಪಂ

"ನಾನು ಪ್ರಪನ್ನನಾಗುವುದಕ್ಕೆ ಮುಂಚೆಯೂ ಗಿಣಿಯೇ; ಆದರೆ ಲೀಲಾ ಶುಕವಲ್ಲ, ಗೂಡನ್ನು ಬಿಟ್ಟು ದಾರಿ ತಪ್ಪಿದ್ದ ಗಿಣಿ; ಆಗಲೂ ನೀನು ನನ್ನನ್ನು ದಾರ ಕಟ್ಟಿ ಪಟದಂತೆ ಆಡಿಸುತ್ತಿದ್ದೆ. ಈ ಲೀಲಾ ರಸ, ಪ್ರಪಂಚವನ್ನಾಳುವ ಪ್ರಭುವಿನ ಆಟ, ಸಾಕು; ನನ್ನನ್ನು ಲೀಲಾ ಶುಕವನ್ನಾಗಿ ಈಗಲಾದರೂ ಪರಿಗ್ರಹಿಸಿ, ನಿನಗೆ ಬೇಕಾದದ್ದನ್ನೆಲ್ಲಾ ಹೇಳಿಕೊಟ್ಟು, ಕೇಳಿ ಸಂತೋಷಪಡು"

ಸೋತ್ರಂ ಮಯಾ ವಿರಚಿತಂ ತ್ವದಧೀನವಾಚಾ
ತ್ವತ್ಪ್ರೀತಯೇ ವರದ ಯತ್ತದಿದಂ ನ ಚಿತ್ರಂ ।

ಅವರ್ಜಯಂತಿ ಹೃದಯಂ ಖಲು ಶಿಕ್ಷಕಾಣಾಂ
ಮುಂಜಾನಿ ಪಂಜರಶಕುಂತವಿಜಲ್ಪಿತಾನಿ ॥

—ವ—ಪಂ 2

"ನೀನು ಹೇಳಿ ಕೊಟ್ಟಂತೆ ಹಾಡಿರುವೆನು; ಅದರಿಂದ ಸಂತೋಷ ಪಡುವನು ನೀನೆ; ನಾನು ಈಗ ನಿನ್ನ ವಾತ್ಸಲ್ಯವೆನ್ನುವ ಪಂಜರದಲ್ಲಿರುವ ಸಾಕು ಗಿಣಿಯಲ್ಲವೇ?

ಇಂತಹ ಭಾವವನ್ನೆಲ್ಲಾ ನೆನೆದುಕೊಳ್ಳಲೆಂದು ಗೋದೆಯು ಗೋಪಿಯನ್ನು **"ಇಳಂಕಿಳಿಯೇ"** ಎಂದು ಕರೆದು ಏಳದಿರಲು **"ಇನ್ನಮುರಂಗುದಿಯೋ"** ಎಂದು ಮತ್ತೂ ಕರೆದಳು. ಈ ಎರಡನೇ ಮಾತು ಗೋಪಿಗೆ ಹಿಡಿಸಲಿಲ್ಲ "ಇವಳೇ ನನಗೆ ಶಂಗೊಡು ಶಕ್ಕರವೇಂದುಂತಡಕ್ಕೈಯ್ಯ, ಪಂಗಯಕ್ಕಣ್ಣ" ಎಂದು ಜ್ಞಾಪಕ ಕೊಟ್ಟು ಅವನನ್ನೇ ನಾನು ಮನಸ್ಸಿನಲ್ಲಿ ಸವಿಯುತ್ತಿರುವಾಗ ಹೀಗೆ ಹೇಳುವುದೇ? ನಾನು ಅವನನ್ನು ಅನುಭವಿಸುತ್ತಿರುವಾಗ ಏಕೆ ತೊಂದರೆ ಕೊಡುವರೆಂದು ಯೋಚಿಸಿ

ಶಿಲ್ ಎನ್ರು ಅೞೈಯೇನ್ಮಿ—ಎಂದಳು. **"ಶಿಲ್"** ಎಂದು ಕರ್ಕಶವಾಗಿ ಕರೆಯಬೇಡವಮ್ಮ"; "ಹಾಗಾದರೆ ನಾವು ಕರೆದಿದ್ದು ನಿನಗೆ ಹಿತವಾಗಲಿಲ್ಲವೇನು? ನಿನಗೇನು ಅಂತಹ ಅನುಭವವಾಗುತ್ತಿದೆ" ಎಂದು ಗೋದೆಯು ಕೇಳಿದಾಗ

ನಂಗೈಮಾರ್ ಪೋದರುಕಿನ್ರೇ—"ಅಕ್ಕಂದಿರಾ, ಇಗೋ ಬಂದೆ, ಸ್ವಲ್ಪ ತಾಳಿ" ಎಂದಳು ಗೋಪಿ. ಗೋದೆ ಮೊದಲಾದವರನ್ನು ಕುರಿತು **"ಶಿಲ್ ಎನ್ರು ಅೞೈಯೇನ್ಮಿ"** ಎಂದು ಹೇಳಿದ್ದು ತಪ್ಪು; ಇದು ಭಾಗವತ ಧರ್ಮವಲ್ಲ ಹಾಗೆ ಹೇಳಿಬಾರದಾಗಿತ್ತು—ಎನ್ನುವುದೇ ಗೋಪಿಯ ಅಭಿಪ್ರಾಯ. ಇದನ್ನು ತಿಳಿದೂ ತಿಳಿಯದವಳಂತೆ ಗೋದೆಯು

ವಲ್ಲ್ಲೈ ಉನ್ ಕಟ್ಟುರೈಕಳ್—ನಿನ್ನ ಚಮತ್ಕಾರೋಕ್ತಿಗಳನ್ನು ನಾವು ಬಲ್ಲೆವು ಕಣೆ—ಎಂದಳು. ಗೋಪಿಕೆ ನಿಜವಾಗಿಯು ಸ್ವಲ್ಪ ಮುನಿಸು ಬಂತು; ಹೇಳಿದಳು "ಏನ್ರಮ್ಮ ನಾನು ಹಾಗೆ ಹೇಳಿದ್ದು ನಿಮಗೆ ಹಿತವಾಗದಂತೆ?" ಅದಕ್ಕೆ ಗೋದೆ ಹೇಳಿದ್ದು.

ಪಂಡೇ ಉನ್ ವಾಯ್ ಯರಿದುಂ—ನಿನ್ನ ಬಾಯಿ ನಮಗೆ ಮೊದಲೇ ಗೊತ್ತು ಕಣೆ" ಎಂದು; ಗೋಪಿಗೆ ಸಹಿಸಲಾಗಲಿಲ್ಲ; ನಿಜವಾಗಿಯೂ ಸಿಟ್ಟು ಬಂತು; ಕ್ಷಮೆ ತಪ್ಪಿತು; ಹೇಳಿದಳು.

ವಲ್ಲೀರ್ ಕಳ್ ನೀಂಗಳೇ—ನನಗಿಂತಲೂ ಬಾಯಿಯಲ್ಲಿ ನೀವೇ ಗಟ್ಟಿಗರಮ್ಮಾ" ಎಂದಳು. ಎಂದದ್ದೇ ಯೋಚಿಸಿದಳು "ಏನಿದು ನನ್ನ ಬುದ್ಧಿ? ನಾನು

ಭಾಗವತೆಯರನ್ನು ಹೀಗೆ ಹೇಳಬಹುದೇ? ತಪ್ಪು ತಪ್ಪು ತಪ್ಪು ತಪ್ಪು; ಹೇಳ ಬಾರದಾಗಿತ್ತು. ಇದು ವೈಷ್ಣವ ಧರ್ಮವಲ್ಲವೆಂದು ತಿಳಿದು

ನಾನೇ ತಾನಾಯ್ ಇಡುಕ—ಎಂದಳು; ತಪ್ಪಾಯಿತಮ್ಮ; ನಾನು ನಿಮ್ಮನ್ನು ಹೇಳಬಾರದಾಗಿತ್ತು; **ನನ್ನ ಬಾಯಿಯೇ ಕೆಟ್ಟದು** ಎಂದಳು, ಹೀಗೆ ಹೇಳುವುದರಿಂದ ಭಾಗವತಾಪಚಾರವು ತೀರುವುದೆಂದು ತೋರಿಕೊಟ್ಟಳು ಗೋಪಿ.

ಅಜ್ಞಾನಾದ ಥವಾಜ್ಞಾನಾತ್ ಅಪರಾಧೇಷು ಸತ್ಸ್ವಪಿ ।
ಸ್ಯಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಂ ॥

ವಂಗಿ–ಕಾರಿಕೈ

ಎನ್ನುವ ನಿಯಮದಂತೆಯೂ

ಅನುತಾಪಾದುಪರಮಾತ್ ಪ್ರಾಯಶ್ಚಿತ್ತೋನ್ಮಖತ್ವತಃ ।
ತತ್ಪೂರಣಾಚ್ಚಾಪರಾಧಾಃ ಸರ್ವೇ ನಶ್ಯಂತಿ ಪಾದಶಃ ॥

ಎನ್ನುವ ಕ್ರಮದಲ್ಲಿ

ರೂಕ್ಷಾಕ್ಷರಾಣಿ ಶೃಣ್ವನ್ವೈ ತಥಾ ಭಾಗವತೇರಿತಾ ।
ಪ್ರಣಾಮಪೂರ್ವಕಂ ಕ್ಷಾಂತ್ಯಾ ಯೋ ವದೇದ್ವೈಷ್ಣವೋ ಹಿ ಸಃ ॥

ಎನ್ನುವ ಲೈಂಗಪುರಾಣ ವಚನದಂತೆ ನಮ್ಮ ಸ್ವರೂಪವನ್ನು ಕಾಪಾಡಿಕೊಳ್ಳ ಬೇಕಾದರೆ ಕ್ಷಾಂತಿಯನ್ನು ತಂದುಕೊಂಡು ಕ್ಷಮಾಪಣೆಯನ್ನು ಕೇಳಬೇಕು. ಇದನ್ನು ತನ್ನ ಆಚರಣೆಯಿಂದ ತೋರಿಕೊಟ್ಟಳು ಗೋಪಿ.

ಮುನಿಸು ಎಲ್ಲರಿಗೂ ಕೆಟ್ಟದು; ಎಲ್ಲಾ ಅನರ್ಥಕ್ಕೂ ಇದೇ ಮೂಲ; ಇದು **ಎಷ್ಟಿದ್ದರೆ ಅಷ್ಟು** ಅಹಂಕಾರ ಮಮಕಾರವಿದೆಯೆಂದು ತಿಳಿಯಬೇಕು. ವೈಷ್ಣವನಿ ಗಂತೂ ಇದಕ್ಕಿಂತ ಶತ್ರು ಬೇರೆ ಇಲ್ಲವೇ ಇಲ್ಲ. ಅದಕ್ಕಾಗಿಯೇ ಧರ್ಮರಾಜ ಹೇಳಿದ

ಅಪರಾದಿನಿ ಚೇತ್ ಕ್ರೋಧಃ ಕ್ರೋಧೇ ಕ್ರೋಧಃ ಕಥಂ ನ ತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸರ್ವೇಷಾಂ ಪರಿಪಂಥಿನಿ ॥

"ಅಪಕಾರಮಾಡುವರಲ್ಲಿ ಕೋಪಬರುವುದು ಸಹಜವಲ್ಲವೆ; ಎಲ್ಲರಿಗೂ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆನ್ನುವ ಪುರುಷಾರ್ಥಕ್ಕೆ ಅಡ್ಡಿ ತರುವುದು ಕೋಪ ವೆಂದು ತಿಳಿದೂ ತಿಳಿದೂ ಕೋಪದಮೇಲೆ ನಿನಗೆ ಏಕೆ ಕೋಪ ಬಾರದು" ಎಂದು. ಹಾಗೆ ಗೋಪಿಯು ತನ್ನ ಕೋಪಕ್ಕೆ ತಾನೇ ಮರುಗಿ

"ನಾನೇ ತಾನಾಯ್ಯಿಡಗ" ಎಂದಳು. ಇದರಿಂದ ಭಾಗವತಾ ಪಚಾರವು ತೀರುವುದೆಂದೂ ಅವರು ಇದನ್ನು ಕೇಳಿ ಸಂತೋಷಪಡುವರೆಂದೂ ನಂಬಿದಳು." ಹೌದು

ತಸ್ಯಾದ್ವಿಷ್ಣುಪ್ರಸಾದಾಯ ವೈಷ್ಣವಾ ಪರಿತೋಷಯೇತ್ ।
ಪ್ರಸಾದಸುಮುಖೋ ವಿಷ್ಣುಃ ತೇನೈವ ಸ್ಯಾನ್ನಸಂಶಯಃ ॥

—ಇತಿ–ಸಮು

ನಾನು ವೈಷ್ಣವೆ; ವಿಷ್ಣುವಿಗೆ ನನ್ನ ಶ್ರೀಕೃಷ್ಣನಿಗೆ ಪ್ರಿಯಳಾಗಬೇಕು; ಅವನಿಗೆ ತನ್ನ ಭಕ್ತರೆಂದರೆ ಇಷ್ಟ; ಅವರನ್ನು ಸಂತೋಷಪಡಿಸದೆ ಅವನೆಂತು ಪ್ರಸನ್ನ ನಾದಾನು" ಎಂದು ತಿಳಿದೇ **"ನಾನೇ ತಾನಾಯ್ ಯಿಡುಗ"** ಎಂದಳು. ಇವಳು ಹೀಗೆ ಮಾಡಿದ್ದು ಸರಿಯೆನ್ನುವುದಕ್ಕೆ ಉದಾಹರಣೆಯೂ ಇದೆ.

ಪ್ರಸಾದಯಾಮಾಸ ಭವೋ ದೇವಂ ನಾರಾಯಣಂ ಪ್ರಭುಂ ।
ಶರಣಂ ಚ ಜಗಾಮಾದ್ಯಂ ವರೇಣ್ಯಂ ವರದಂ ಹರಿಂ ॥

ಮಹಾ ಬಾ–ಶಾಂ–352–64

ರುದ್ರ, ಪ್ರಭುವಾದ ನಾರಾಯಣನನ್ನು ಕ್ಷಮಾಪಣೆ ಕೇಳಿ ಪ್ರಸನ್ನನಾಗು ವಂತೆ ಮಾಡಿದ ಮತ್ತು ಅವನಲ್ಲಿ ಶರಣುಹೋದ.

ವೈಷ್ಣವ ಧರ್ಮವನ್ನು ಈ ವಿಷಯದಲ್ಲಿ ಸಂಗ್ರಹ ಮಾಡಿದರೆ ಅದು ಇಷ್ಟು—

1) ತಮ್ಮ ದೋಷವನ್ನು ತಿಳಿದು ಪರಿಹಾರಮಾಡಿಕೊಳ್ಳಬೇಕು;
2) ತಮ್ಮ ತಪ್ಪನ್ನು ಮತ್ತೊಬ್ಬರು ತಿಳಿಸಿದರೆ ಕೃತಜ್ಞತೆ ತೋರಿ ಪರಿಹಾರ ಮಾಡಿಕೊಳ್ಳಬೇಕು;
3) ತಪ್ಪು ಮಾಡದೇ ಇದ್ದರೂ ಸಹಿಸಿಕೊಳ್ಳಬೇಕು.

ನಿಗಮಾಂತ ದೇಶಿಕರಿಗೆ ಕೆಲವು ಭಾಗವತರು ಅವಮಾನಮಾಡಲು ತಮ್ಮ ಪಾದರಕ್ಷೆಗಳನ್ನು ತೋರಣವಾಗಿ ಮಾಡಿ ಅವರ ಮನೆ ಬಾಗಿಲಿಗೆ ಕಟ್ಟಿದರು. ಹೊರಗಿನಿಂದ ಮನೆಗೆ ಬರುವಾಗ ನೋಡದೆ ಅದು ಇವರ ತಲೆಗೆ ತಗುಲಿತು. ವಿಷಯ ತಿಳಿಯತು; ಎಷ್ಟಾದರೂ ಕಟ್ಟಿದವರು ಭಾಗವತರು; ಅವರು ಒಳ್ಳೆಯದನ್ನೇ ಮಾಡಿದರು; ಇಲ್ಲದಿದ್ದರೆ ಅವರ ಪಾದುಕಾ ಧೂಳಿ ನನ್ನನ್ನು ಪಾವನಮಾಡುತ್ತಿತ್ತೆ; ಎಂದುಕೊಂಡು

ಕರ್ಮಾವಲಂಬಿನಃ ಕೇಚಿತ್ ಕೇಚಿತ್ ಜ್ಞಾನಾವಲಂಬಿನಃ ।
ವಯಂ ತು ಹರಿದಾಸಾನಾಂ ಪಾದರಕ್ಷಾವಲಂಬಕಾಃ ॥

ಎಂದು ಹೇಳಿಕೊಂಡರು. ಇದನ್ನು ಕೇಳಿದ ಭಾಗವತರಿಗೆ ನಾಚಿಕೆಯಾಯಿತು ಮತ್ತು ಇವರ ವೈಷ್ಣವತ್ವಕ್ಕೆ ಸಂತೋಷಪಟ್ಟರು.

ವೈಷ್ಣವನಿಗೆ ಜ್ಞಾನವು ಪಕ್ವವಾಗಿರಬೇಕು. ಕೋಪವೇ ಬರಕೂಡದು; ಬಂದರೂ ಸಹಿಸಿಕೊಳ್ಳಬೇಕು. ಹಾಗೆಯೇ ಶ್ರೀಕೃಷ್ಣನೂ ಗೀತೆಯಲ್ಲಿ ಹೇಳಿರುವನು.

ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶಃ ।
ಇಂದ್ರಿಯೋಣೇಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥
II ಅಧ್ಯಾಯ

ಆಮೆಯು ತನ್ನ ತಲೆಕಾಲುಗಳನ್ನು ಇಷ್ಟವಿಲ್ಲದಾಗ ಒಳಗೆ ಎಳೆದುಕೊಳ್ಳುವಂತೆ, ಬಾಯನ್ನು ತಡೆದು ಶಾಂತನಾಗಿ ಕ್ಷಮೆಯನ್ನು ಯಾಚಿಸುವುದೇ ವೈಷ್ಣವ ಧರ್ಮ. **"ನಾನೇ ತಾನಾಯ್ ಇಡುಗ"**—ಇದು ಎಲ್ಲಾ ವೈಷ್ಣವ ಧರ್ಮಕ್ಕೂ ಉಪ ಲಕ್ಷಣ. ಇಷ್ಟು ಹೇಳಿಕೊಂಡ ಮೇಲೂ ಗೋಪಿಯು ಹೊರ ಬರಲಿಲ್ಲ. ಕಾರಣ ವೇನಿರಬಹುದು? ಇರಲಿ ನೋಡುವ ಎಂದು ಗೋದೆಯು

ಒಲ್ಲೈ ನೀ ಪೋದಾಯ್ ಉನಕ್ಕೆನ್ನ ವೇರುಡೈಯೈ—ಎಂದಳು, "ಗೋಪಿ, ಬೇಡಾಕಣೆ; ಹೊರಗೆ ಬಾರೆ; ನಿನಗೆ ಇದು ಯಾವ ಅನುಭವವೇ?" ಅದಕ್ಕೆ ಗೋಪಿ

ಎಲ್ಲಾರುಂ ಪೋಂದಾರೋ—ಎಲ್ಲರೂ ಹೊರಟಿರುವರೇನು? ಎಂದು ಕೇಳಿದಳು.

ಪೋಂದಾರ್ ಪೋಂದು ಎಣ್ಣಿಕ್ಕೊಳ್—ಎಲ್ಲರೂ ಹೊರಟಿರುವರು. ಬೇಕಾದರೆ ಹೊರಗೆ ಬಂದು **ಎಣ್ಣಿಸಿಕೊ** ಎಂದಳು ಗೋದೆ. ಅದಕ್ಕೆ ಗೋಪಿ "ಸರಿ, ನೀವು ಹೇಳಿದ್ದನ್ನೇ ನಂಬುತ್ತೇನೆ; ಭಾಗವತರು ಎಂದಿಗೂ ಸುಳ್ಳಾಡುವುದಿಲ್ಲ." ಎಂದಳು.

ಅವನಡಿಯಾರ್ ಇದು ಶೆಯ್ಯಾರ್ ಶೆಯ್ದಾಲುಂ ನನ್ರೇ ಶೆಯ್ದಾರ್
—ಪೆ–ತಿ;

ಎಂದು ಕುಲಶೇಖರ ಪೆರುಮಾಳವರ ತಿಳಿವಿನಂತೆ ತಿಳಿವುಳ್ಳವಳಿದಳು. ಗೋದೆಗೆ ಇದನ್ನು ಕೇಳಿ ಸಂತೋಷ. "ಈ ಗೋಪಿ ಮಿಕ್ಕಗೋಪಿಯರಂತಲ್ಲ; ಎಲ್ಲವನ್ನೂ ತಿಳಿದವಳು; ಕೃಷ್ಣನೆಂದರೆ ಇವಳಿಗೆ ಪಂಚಪ್ರಾಣ; ಪರಮಾತ್ಮನ ಕಲ್ಯಾಣ ಗುಣಗಳನ್ನೆಲ್ಲಾ ಸಂಗ್ರಹಮಾಡಿ, ಅಂತಹವನನ್ನು ಹಾಡೋಣ ಬಾ ಎಂದು ಕರೆ ಯೋಣವೆಂದು ನೆನೆದು

ವಲ್ಲಾನೈ ಕೊನ್ನಾನೈ ಮಾತ್ತಾರೈ ಮಾತ್ತಳಿಕ್ಕ ವಲ್ಲಾನೈಮಾಯನೈ ಪಾಡ—ಎಂದಳು. ಬಲಿಷ್ಠವಾದ ಕುವಲಯಾ ಪೀಡವೆನ್ನುವ ಕಂಸನ ಆನೆಯನ್ನು ಕೊಂದವನೂ, ಶತ್ರುಗಳ ಬಲವನ್ನು ನಾಶಮಾಡಬಲ್ಲವನೂ ಮತ್ತು ಮಾಯಾ ಚೇಷ್ಟಿತನೂ ಆದ ಶ್ರೀಕೃಷ್ಣನನ್ನು ಹಾಡುವುದಕ್ಕಾಗಿ–ಬಾ. ಇದು ಮೇಲಿನ ಅರ್ಥ. ಇದಕ್ಕೇ ವಿಶೇಷಾರ್ಥವೂ ಉಂಟು. ಇಲ್ಲಿ ಪರಮಾತ್ಮನಿಗೆ ಮೂರು ವಿಶೇಷಣಗಳಿವೆ. ಇಲ್ಲಿಗೆ ಸರಿಯಾಗಿ ಪೂರು ಪರ್ವಗಳು ಮುಗಿದಿವೆ.

ಮೊದಲಿನ ಐದು ಪದ್ಯಗಳಲ್ಲಿ ಹೇಳಲ್ಪಟ್ಟ ದೈವ **"ವಲ್ಲಾನೈ ಕೊನ್ರವ್"** ಬಲವುಳ್ಳದುದನ್ನು ಕೊಂದವನು. ಜೀವವನ್ನು ಸಂಸಾರಕ್ಕೆ ಎಳೆದು

ಯಯಾ ಕ್ಷೇತ್ರಜ್ಞಶಕ್ತಿಸ್ಸಾ ವೇಷ್ಟಿತಾ ನೃಪ ಸರ್ವಗಾ ।
ಸಂಸಾರತಾಪಾನಖಿಲಾ ಅವಾಪ್ನೋತ್ಯತಿಸಂತತಾ ॥
ತಯಾ ತಿರೋಹಿತತ್ವಾಚ್ಚ ಶಕ್ತಿಃಕ್ಷೇತ್ರಜ್ಞಸಂಜ್ಞಿತಾ ।
ಸರ್ವಭೂತೇಷು ಭೂಪಾಲ! ತಾರತಮ್ಯೇನ ವರ್ತತೇ ॥

ಎಂದು ವಿಷ್ಣು ಪುರಾಣದಲ್ಲಿ ಹೇಳಿರುವಂತೆ (VI, 7, 62–63) ಸಂಸಾರ ಸುಖ ದುಃಖದಲ್ಲೇ ತೊಳಲುತ್ತಾ ಅನೇಕ ಕಷ್ಟಪರಂಪರೆಗೆ ಒಳಗಾಗುವಂತೆ ಮಾಡಿರುವುದು ಪ್ರಕೃತಿ–ಈ ದೇಹ; ಈ ಪ್ರಕೃತ್ಯಾತ್ಮಭ್ರಾಂತಿ, ದೇಹವೇ ಆತ್ಮವೆನ್ನುವ ಭ್ರಮೆಯು ಅಹಂಕಾರವಾಗಿ ನಮ್ಮಲ್ಲಿದೆ. ಅದೇ ನನ್ನದು ಎನ್ನುವ ಮಮಕಾರವನ್ನು ಬೆಳೆಸಿದೆ. ಈ ಅಹಂಕಾರವೇ "ವಲ್ಲ–ಆನ್ಯೆ" ಮತ್ತಗಜ; ಅದನ್ನು ನಾಶ ಮಾಡುವವನು ಪರಮಾತ್ಮನೇ. ಮೊದಲಿನ ಐದು ಪದ್ಯಗಳ ಕೊನೆಯಲ್ಲಿ ಶರಣಾಗತಿಯನ್ನು ಮಾಡಿರುವುದರಿಂದ ಈ ಅಹಂಕಾರವನ್ನು ಮುರಿದ ಪರಮಾತ್ಮನೇ **"ವಲ್ಲಾನೈ ಕೊನ್ರವ್"**

ಎರಡನೇ ಐದು ಪದ್ಯಗಳಲ್ಲಿ ವರ್ಣಿತನಾದ ದೈವ **"ಮಾತ್ತಾರೈ ಮಾತ್ತಳಿಕ್ಕ ವಲ್ಲವ್"**; ಪ್ರಪನ್ನರಾಗಿ ಭಕ್ತಿ ಹುಟ್ಟಿದರೂ ಅದು ತ್ಯಾಗರೂಪದಲ್ಲಿಲ್ಲದೆ ಇರುವವರಿಗೆ ದೈವವು ಆತ್ಮಗುಣಪೂರ್ತಿಗಾಗಿ ಹೋರಾಡುತ್ತಿರುವ ಅವರ ಇಷ್ಟವನ್ನು ತುಂಬುವ ಪರಮಾತ್ಮನಾಗಿರಬೇಕು. ಇವರಿಗೆ "ಜೀವನಾದ ನಾನು ಶರೀರ, ಇಂದ್ರಿಯ, ಮನಸ್ಸು ಮತ್ತು ಪ್ರಾಣಕ್ಕಿಂತಲೂ ಭಿನ್ನ" ನೆನ್ನುವ ಜ್ಞಾನವು ಚೆನ್ನಾಗಿ ಬೆಳೆದಿದ್ದರೂ ತಾವು ಪರಮಾತ್ಮನಿಗೆ ಶೇಷರೆನ್ನುವ ಭಾವವು ಪಕ್ವವಾಗಿಲ್ಲ. ಅಹಂಕಾರವು ಸಡಿಲವಾಗಿದ್ದರೂ ನಾಶವಾಗಿಲ್ಲ: ಸ್ವಾಭಿಮಾನವನ್ನು ಬಿಡಿದವರಿವರು. ಇವರು **"ಮಾತ್ತಾರ್;"** ಆ ಭಾವವನ್ನು ಅವರಲ್ಲಿ ಹೋಗಲಾಡಿಸಿ ಭಕ್ತಿಯನ್ನು

ತ್ಯಾಗಾತ್ಮಕವಾಗಿ ಮಾಡಿ (" ಮಾತ್ತಿ ") ಅಹಂಕಾರವು ಪೂರ್ತಿ ಹೋಗುವಂತೆ ಮಾಡುವವನೇ ದೈವ (" ಅಹ್ಗಿಕ್ಕ ವಲ್ಲರ್ವ ")—ಅತಿಸುಲಭನು ;

ಮೂರನೇ ಪರ್ವದಲ್ಲಿರುವವರ ದೈವ **" ಮಾಯರ್ ;"** ಮೊದಲನೇ ಪರ್ವದಲ್ಲಿರುವವರ ದೈವವೂ "ಮಾಯರ್" ಐದನೇ ಪದ್ಯ ನೋಡಿ) ; ಅಲ್ಲಿ ಅವನು ಆಶ್ಚರ್ಯ ಚೇಷ್ಟಿತ ; ಪ್ರಕೃತಿಗೆ ಯಜಮಾನ ; ಸರ್ವಶಕ್ತ ; **" ಮಾರ್ಜ–ಮಾನೇ " " ಯಾ–ಪ್ಪಾಪಣೆ "** ಎನ್ನುವ ಎರಡು ಕ್ರಿಯಾಪದಗಳಲ್ಲಿ ಅರ್ಥವನ್ನೊಳಗೊಂಡ ಪದ ಅದು ; ಕಠಿಣ ಹೃದಯರಾದ ನಮ್ಮನ್ನು ತಿದ್ದಿ ಶರಣಾಗತಿಯಲ್ಲದೆ ಮೋಕ್ಷಕ್ಕೆ ಬೇರೇ ಉಪಾಯವೇ ಇಲ್ಲವೆಂದು ತಿಳಿವುಕೊಟ್ಟು ನಮ್ಮನ್ನು ತನ್ನವನ್ನಾಗಿ ಮಾಡಿಕೊಳ್ಳುವ ದೈವ **" ಮಾಯರ್ "** ; ಇಲ್ಲಿಯೂ ಅವನು ಮಾಯನೇ, ಆಶ್ಚರ್ಯ ಜೇಷ್ಟಿತನೇ ; ಹಾಗೆ ಸೇರಿಸಿಕೊಂಡವರನ್ನು **" ಮಾತ್ತಿ "** ಆತ್ಮಗುಣ ಪೂರ್ತಿಯುಳ್ಳವರನ್ನಾಗಿ ಮಾಡಿ, " ನಾವು ಚಿಕ್ಕವರು ಬುದ್ಧಿಯಿಲ್ಲದವರು " ಎನ್ನುವುದನ್ನು ಗಮನಿಸದೆ ನಮ್ಮೊಡನೆ ಪರಮಹಿತ ಬಂಧುವಾಗಿ ಕಲೆತು ತನ್ನ **ಸೌಶೀಲ್ಯಗುಣವನ್ನು** ಪ್ರಕಾಶ ಪಡಿಸಿ **" ಮಾಯರ್ "** ಆದವನು.

ಪ್ರಪತ್ತಿಗೆ ವಶನಾಗಿ ಸುಲಭನಾದ ದೈವ ಮಾಯರ್ ; ಮೊದಲನೇ ಐದು ಪಾಶುರಗಳಲ್ಲಿ ಕಂಡುಬಂದ **" ಮಾಯರ್ "** ಸುಲಭನು ; ಈ ಸೌಲಭ್ಯದಿಂದ ನಮ್ಮ ಭಕ್ತಿಯು ಬೆಳೆಯುವಂತೆ ಮಾಡಿ ತ್ಯಾಗಾತ್ಮಕವಾಗಿ ಮಾಡುವ ದೈವ **" ಮಾತ್ತಿ ಅಹ್ಗಿಕ್ಕ ವಲ್ಲರ್ವ "** ಎರಡನೇ ಐದು ಪದ್ಯಗಳಲ್ಲಿ ತೋರಿಕೊಂಡವನು ; ಮೂರನೇ ಪರ್ವದವರ ದೈವ **ಸುಶೀಲ " ಮಾಯರ್."**

ಸ್ವಾಪದೇಶ

ಇಲ್ಲಿ ಎಬ್ಬಿಸಲ್ಪಡುವ ಭಾಗವತ ವೈಷ್ಣವರಲ್ಲಿ ಅತಿ ಉತ್ತಮ. ಕುಮಾರಿಲರಿಗೆ ಪ್ರಭಾಕರರಂತೆಯೂ, ನಿಗಮಾಂತ ದೇಶಿಕರಿಗೆ ನಯನಾಚಾರ್ಯರಂತೆಯೂ, ರಾಮಾನುಜರಿಗೆ ಕೂರತ್ತಾಳ್ವಾನಂತೆಯೂ ಆಚಾರ್ಯನಾಗಿರಲು ಯೋಗ್ಯತೆ ಇದ್ದು, ತನ್ನ ಆಚಾರ್ಯ ಭಕ್ತಿಗೆ ಪರವಶನಾಗಿ, ಅವರನ್ನೇ ಧ್ಯಾನಿಸುತ್ತಾ ಆನಂದಾನುಭವಸಾಗರದಲ್ಲಿ ಮುಳುಗಿರುವ ಶಿಷ್ಯೋತ್ತಮ ; ಪರಮ ವೈಷ್ಣವಧರ್ಮ ಪರಿಪಾಲನೆ ಮಾಡುತ್ತಿರುವ ಪರಮೈಕಾಂತೀ ; ಇವನೇ **" ಇಳಂಕಿಳಿ "** ; ಇವನನ್ನು ಬೆಳೆಸಿ ತನ್ನ ವಿದ್ಯೆಯನ್ನೆಲ್ಲಾ ಕಲಿಸಿ ಅವನ ಪಾಂಡಿತ್ಯಕ್ಕೆ ತಾನೇ ಮರುಳಾಗಿ ಹಿಗ್ಗುತ್ತಿರುವ ಆಚಾರ್ಯನೇ **" ವಲ್ಲನ್ನೈ ಕೊನ್ನಾನ್ನೈ ಮಾತ್ತಾರೈ ಮಾತ್ತಹ್ಗಿಕ್ಕವಲ್ಲನ್ನೈ, ಮಾಯನ್ನೈ "** ಎಂದು ಸ್ತೋತ್ರಕ್ಕೆ ಪಾತ್ರನಾದವನು.

ಇಲ್ಲಿಯೂ **" ನಾನೇ ತಾನಾಯ್ ಇಡುಕ "** ಎನ್ನುವವಾಕ್ಯವೇ ಜೀವಾಳ ; ಮಾಡಿದ ತಪ್ಪನ್ನು ಒಪ್ಪಿಕೊಳ್ಳುವವರು ಕೆಲವರು ; ಕೆಲವರು ಶ್ರಮದಿಂದ ಅರ್ಥ ಮಾಡಿಕೊಂಡು ತಪ್ಪನ್ನು ಒಪ್ಪಿಕೊಳ್ಳುವವರು ; ಮತ್ತೆ ಕೆಲವರು ಮಾಡಿ ತಕ್ಷಣವೇ ತಮ್ಮ ತಪ್ಪನ್ನು ತಿಳಿದು ಕ್ಷಮೆ ಕೇಳಿಕೊಳ್ಳುವವರು ; ಇಲ್ಲಿರುವ ಶಿಷ್ಯ ಈ ಮೂರು ವಿಧ ಭಾಗವತರಿಗಿಂತಲೂ ಉತ್ತಮನು ; ತಪ್ಪನ್ನು ಮಾಡದೇ ಇದ್ದರೂ ಭಾಗವತರ ಮನಸ್ಸನ್ನು ನೋಯಿಸದಿರಲು ಪ್ರಣಾಮಪೂರ್ವಕವಾಗಿ ಶಾಂತಿಯಿಂದ ಮಾತನಾಡಿಸುವವನು ; ಭಾಗವತ ಸಮೃದ್ಧಿಯಿರುವೆಡೆ ತನಗೆ ಸಕಲ ಸೌಭಾಗ್ಯವೆನ್ನುವ ಭಾವವುಳ್ಳವನಾದ್ದರಿಂದ " ಏಲ್ಲಾರುಮ್ಪೊಂದಾರೋ " ಎಂದು ಕೇಳಿ ತೃಪ್ತನಾಗುವ ಭಾಗವತನಿಲ್ಲ ; ಆದ್ದರಿಂದ ಇವನನ್ನು ಎಬ್ಬಿಸಿದ ಮೇಲೆ ಮತ್ತಾರನ್ನೂ ಎಬ್ಬಿಸುವ ಪ್ರಸಂಗವೇಯಿಲ್ಲ.

॥ ಶ್ರೀಮತೇ ಶಠಗೋಪಾಯ ನಮಃ ॥

ಭಾಗ ೪

ಮೊದಲಿನ ಮೂರು ಪರ್ವಗಳಲ್ಲಿ ಅಂದರೆ ಐದೈದು ಪದ್ಯಗಳ ಮೂರು ಘಟ್ಟಗಳಲ್ಲಿ ಹೇಳಿರುವವರ್ಥವಿಷ್ಟು.

ಮೊದಲಿನ ಐದುಪದ್ಯಗಳಲ್ಲಿ ಪರಮಾತ್ಮನಲ್ಲಿ ಶರಣು ಹೋಗುವಷ್ಟು ಜ್ಞಾನವು ಬೆಳೆದು ಶರಣಾಗತಿಯನ್ನೂ ಮಾಡಿಯಾಯಿತು. (i) ನಂದ . . . ಕುಮರ್ (ii) ಏರಾರ್ನ್ದ . . . . ಶಿಂಗಂ (iii) ಕಾರ್ಮೆನಿ (iv) ಶೆಂಗಣ್ (v) ಕತಿರ್ . . . ತಾನ್ ಎನ್ನುವ ವರ್ಣನೆಗಳಿಂದ ಪರಮಾತ್ಮನ ಸೌಶೀಲ್ಯ, ಸೌಲಭ್ಯ, ಗಾಂಭೀರ್ಯ, ಸೌಂದರ್ಯ ಮತ್ತು ಪಕ್ಷಪಾತವಿಲ್ಲದಿರುವುದು ಇಷ್ಟೂ ಮೊದಲನೇ ಪದ್ಯದಲ್ಲಿರುವ ಅರ್ಥ. ಎರಡನೇ ಪದ್ಯದಲ್ಲಿ "**ಪಾರ್** . . . . ಎನ್ನುವುದರಿಂದ ಅವನ ದಯಾಗುಣವು ಹೇಳಿಯಾಯಿತು. ಮೂರನೇ ಪದ್ಯದಲ್ಲಿ "ಓಂಗಿ . . . . ಉತ್ತಮನ್ ಎನ್ನುವುದರಿಂದ ಅವನೇ ಲೋಕ ಪ್ರಭುವೆಂದು ನಿಶ್ಚಯವು ಕೊಡಲ್ಪಟ್ಟಿತು. ನಾಲ್ಕರಲ್ಲಿ ಅವನ ಅಂತರ್ಯಾಮಿ ವೈಭವವನ್ನು ತಿಳಿಸಿಯಾಯಿತು. ಇಷ್ಟಾದಮೇಲೆ ಈ ಗುಣಗಳುಳ್ಳ ದೈವವು "**ಮಾರ್ಯ**" ಅವನೇ ಪರಮೇಶ್ವರ; ಈಗ ಅವನೇ ಶ್ರೀಕೃಷ್ಣನಾಗಿ ಅವತರಿಸಿರುವನು; ಅವನಲ್ಲಿ ಶರಣು ಹೋದರೆ ಸಾಕು ಸಕಲ ಕಾರ್ಯ ಸಿದ್ಧಿಯೂ ಆಗುವುದಲ್ಲದೆ ಮುಕ್ತಿಗೂ ಬುತ್ತಿ ಕಟ್ಟಿಯಾಗುತ್ತದೆ ಎಂದು ಸಾಧಿಸಲ್ಪಟ್ಟಿದೆ; ಈ ಅರ್ಥವು.

ಕಣ್ಣನಲ್ಲಾಲ್ ಇಲ್ಲೈ ಕಂಡೀರ್ ಶರಣ್ ಅದು ನಿರ್ಕವಂದು
ಮಣ್ಣಿನ್ ಭಾರಂ ನೀಕ್ಕುದರ್ಕೇ ವಡಮಧುರೈ ಪಿರಂದಾನ್
ತಿಣ್ಣಮಾ ನುಮ್ಮುಡೈಮೈ ಯುಂಡೇಲವನಡಿ ಶೇರ್ತುಳ್ಳಮಿನೋ
ಎಣ್ಣವೇಂಡಾ ನುಮ್ಮದು ವಾದು ಮವನನ್ರಿ ಇಲ್ಲೈಯೇ

ಎನ್ನುವ ಶಠಗೋಪರ ಅನುಭವವಕ್ಕೆ ಮತ್ತು ಉಪದೇಶಕ್ಕೆ ಸರಿಯಾಗಿದೆ. ಮತ್ತು

ಮುಮುಕ್ಷರ್ವೈ ಶರಣಮಹಂ ಪ್ರಪದ್ಯೇ

ಎನ್ನುವ ಶ್ವೆ—ಉಪನಿಷತ್ತಿನ ವಾಕ್ಯ ಮತ್ತು ವಿಧಿಗೂ ಹೊಂದುತ್ತದೆ.

ಎರಡನೇ ಐದು ಪದ್ಯಗಳಲ್ಲಿ ಅಂದರೆ 6 ರಿಂದ 10 ಪೂರ್ತಿ ಪದ್ಯಗಳಲ್ಲಿ ಪ್ರಪನ್ನನಿಗೆ ಭಕ್ತಿಯಿಂದ ಪರಮಾತ್ಮನನ್ನು ಹೊಂದಲು ಅಪೇಕ್ಷೆಯು ಹುಟ್ಟಬೇಕಾದರೆ ನಾವು ಪ್ರಪಂಚ ವಿಷಯದಲ್ಲಿ ಆಸೆಯನ್ನು ತೊರೆದು, ಈ ಪ್ರಪಂಚವು ಪರಮಾತ್ಮನ ಸಂಕಲ್ಪಕ್ಕೆ ಅನುಗುಣವಾಗಿದೆಯೆಂದು ಮನಗಂಡು ಅದರಲ್ಲಿ ದ್ವೇಷಭಾವವಿಡದೆ,

ತನಗೆ ಏನಾದರೂ ಅದು ತನ್ನ ಕರ್ಮಕ್ಕೆ ಅನುಗುಣವಾಗಿದೆ, ಯಾರೂ ಏನನ್ನೂ ಪರಮಾತ್ಮನ ಸಂಕಲ್ಪವಿಲ್ಲದೆ ಮಾಡಲಾರರು; ಅವರಲ್ಲಿ ದ್ವೇಷ ಮತ್ತು ಕೋಪವನ್ನು ಇಡಬಾರದು ಎಂದು ನಿಷ್ಕರ್ಷಕ್ಕೆ ಬರಲು ಪರಮಾತ್ಮನನ್ನು ಹೇಗೆ ಚಿಂತಿಸಿ ಅವನ ನಾಮಗಳನ್ನು ಹಾಡಬೇಕು ಎನ್ನುವುದು ತಿಳಿಸಲ್ಪಟ್ಟಿದೆ.

ದೃಷ್ಟಾದೃಷ್ಟಸ್ವಭರವಿಗಮೇ ದತ್ತದೃಷ್ಟಿಃ ಪ್ರಪನ್ನಃ

ಎಂದು ನಿಗಮಾಂತದೇಶಿಕರು ತಿಳಿಸಿರುವಂತೆ "**ದೃಷ್ಟಸ್ವಭರವಿಗಮ**" ದಲ್ಲಿ ಕಣ್ಣಿಟ್ಟಿರುವ ಪ್ರಪನ್ನ ಈ ಐದು ಪದ್ಯಗಳಲ್ಲಿ ಹೇಳಲ್ಪಟ್ಟಿರುವನು. ಗೋಪಿಯರೂ ಅಂತಹವರೇ. "**ದೃಷ್ಟಸ್ವಭರವಿಗಮ**" ವೆಂದರೆ ಲೌಕಿಕಜೀವನ ಎಂದರೆ ದೇಹಯಾತ್ರೆಯ ವಿಷಯದಲ್ಲಿ ನಮ್ಮ ಕೈ ಏನೂ ಸಾಗಲಾರದು; ಹುಟ್ಟುವುದಕ್ಕೆ ಮುಂಚೆಯೇ ಪರಮಾತ್ಮನು ನಿಶ್ಚಯಿಸಿರುವ ಸುಖ ದುಃಖ, ಏರು ತಗ್ಗು, ಸಿರಿತನ, ಬಡತನ ಇವನ್ನು ನಾವು ಸ್ವಾಭಾವಿಕವಾಗಿ ಹೊಂದುತ್ತೇವೆ ಎನ್ನುವ ಭಾವ ಬಿಡುವುದು. ಇದರೊಡನೆ (6) ಪೆಯ್ . . . ವಿತ್ತಿನೈ (7) ನಾರಾಯಣನ್ ಮೂರ್ತಿ ಕೇಶವನ್ (8) ಮಾವಾಯ್ . . . ದೇವನೈ (9) ಮಾಮಾಯನ್ . . . ವೈಕುಂದನ್ ಮತ್ತು (10) ನಾತ್ತತ್ತುಳ್ಳnಯ್‌ಮುಡಿ ನಾರಾಯಣನ್ ಎನ್ನುವ ಭಗವಂತನ ನಾಮಗಳ ಮಹಿಮೆಯನ್ನು ಅರಿತು ಅವನಲ್ಲಿ ಪ್ರೀತಿಯಿಡುವಂತಾಗಬೇಕು.

ಮೂರನೇ ಐದು ಪದ್ಯಗಳಲ್ಲಿ "**ಅದೃಷ್ಟಸ್ವಭರವಿಗಮ**" ದಲ್ಲಿ ಕಣ್ಣುಳ್ಳವನಾಗಿ ಪರಮಾತ್ಮನಲ್ಲಿ ಹುಟ್ಟಿದ ಭಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. "**ಅದೃಷ್ಟಸ್ವಭರವಿಗಮ**" ವೆಂದರೆ, ಆತ್ಮಯಾತ್ರೆಯು ಪರಮಾತ್ಮನ ಅಧೀನ; ಆತ್ಮವೆಂದು ತಿಳಿದ ನಾವು ಶರೀರಬಿಡುವುದಕ್ಕೆ ಮುಂಚೆ, ಆತ್ಮಗುಣಗಳಾದ ಅಭಯ, ದಯಾ, ಪ್ರಸನ್ನತೆ, ನಿತ್ಯಸಂತೋಷ ಮೊದಲಾದುವುಗಳನ್ನು ಬೆಳೆಸಿಕೊಳ್ಳಲು ನಮ್ಮ ಪ್ರಯತ್ನವಿಲ್ಲದೇ ಪರಮಾತ್ಮನೇ ಕೊಡುವನೆನ್ನುವ ಭಾವ ಹೊಂದುವದು. ಇದರೊಡನೆ ಭಕ್ತಿ ಬೆಳೆಯಲು (11) ಮುಕಿರ್‌ವಣ್ಣನ್ (12) ಶಿಲತ್ತಿನಾಲ್. . . ಇನಿಮಾನೈ (13) ಪುಳ್ಳಿನ್ . . . . ನೈ (14) ಶಂಗೊಂಡು . . . . ಕಣ್ಣಾನೈ (15) ವಲ್ಲಾನೈ . . . . ಮಾಯನೈ ಎನ್ನುವ ಭಗವತ್ಸಂಕೀರ್ತನ ಮತ್ತು ಅರ್ಥಾನುಸಂಧಾನ ಇವುಗಳಿಂದ ಅವನನ್ನು ಬಿಟ್ಟಿರಲಾರದ ಮನೋಧರ್ಮವನ್ನು ಹೊಂದಬೇಕು.

ಮೊದಲಿನ ಐದು ಪದ್ಯಗಳಲ್ಲಿ ಮಹಾವಿಶ್ವಾಸಕ್ಕೆ ಬೇಕಾದ ಪರಮಾತ್ಮ ನಿಷ್ಕರ್ಷೆಯೂ, ಎರಡನೇ ಐದರಲ್ಲಿ ಭಕ್ತಿ ಹುಟ್ಟುವ ಅವನ ಅನುಸಂಧಾನವೂ ಮೂರನೇಯದರಲ್ಲಿ ಆ ಭಕ್ತಿಯನ್ನು ಬೆಳೆಸುವ ಗುಣಗಾನವೂ ಹೇಳಲ್ಪಟ್ಟವೆ.

ಇನ್ನು ಪರಮಾತ್ಮನಲ್ಲಿಗೆ ಹೋಗಿ ಅವನಲ್ಲಿ ಪ್ರಾರ್ಥಿಸುವುದೊಂದೇ ಬಾಕಿ. ಆದರೆ ಅದು ಅಷ್ಟು ಸುಲಭವಲ್ಲ; ಅವನಲ್ಲಿಗೆ ಹೋಗುವುದೆಂತು ಎಂದು ಯೋಚಿಸಿ

ಅವನಿಗೆ ಪ್ರಿಯರಾಗಿಯೂ ಮತ್ತು ಅನುಬಂಧಿಗಳಾಗಿಯೂ ಇರುವರ ಮೂಲಕವೇ ಹೋಗಬೇಕೆನ್ನುವ ಶಾಸ್ತ್ರಮರ್ಯಾದೆಯಂತೆ ಅನುಬಂಧಿಗಳನ್ನು ಎಬ್ಬಿಸಿ ಅವರನ್ನು ಪ್ರಾರ್ಥಿಸುವ ಪದ್ಯಗಳೇ 15 ರಿಂದ 20 ಪೂರ್ತಿ ಇರುವವು.

ಮೊದಲು ಬಾಗಿಲು ಕಾಯುವವರನ್ನು ಎಬ್ಬಿಸುವಳು ಗೋದೆ.

ನಾಯಕನಾಯ್ ನಿನ್ರ ನಂದಗೋಪನುಡೈಯ
ಕೋಯಿಲ್‌ಕಾಪ್ಪಾನೇ ಕೊಡಿತ್ತೋನ್ರುಂ ತೋರಣ
ವಾಶಲ್ ಕಾಪ್ಪನೇ ಮಣಿಕ್ಕದವಂ ತಾಳ್ ತಿರವಾಯ್
ಅಯರ್ ಶಿರುಮಿಯರೋಮುಕ್ಕು ಅರೈಪರೈ
ಮಾಯ್ ಮಣಿವಣ್ಣ ನೆನ್ನೈಲೇ ವಾಯ್ ನೇರ್ನ್ದ್
ತೂಯೋಮಾಯ್ ವಂದೋಂ ತುಯಿಲೆೞ ಪಾಡುವಾ
ವಾಯಾಲ್ ಮುನ್ನಮುನ್ನಂ ಮಾತ್ತಾದೇ ಅಮ್ಮಾ ನೀ
ನೇಶನಿಲೈಕ್ಕದವಂ ನೀಕ್ಕು—ಏಲೋರೆಂಪಾವಾಯ್ ॥ ೧೬ ॥

ಗೋದೆಗೆ ಗೋಪಿಕಾಬಾಲೆಯರ ಭಾವವು ಬಂದು ನಂದ ಗೋಕುಲದಲ್ಲಿ ಶ್ರೀಕೃಷ್ಣನನ್ನು ಎಬ್ಬಿಸುವಂತೆ ಆದರೂ ತಾನು ಗೋದೆಯಾಗಿ ಪ್ರತಿದಿನವೂ ವಟ ಪತ್ರಶಾಯಿಯ ಗುಡಿಗೆ ಹೋಗುತ್ತಿದ್ದುದನ್ನು ಅವಳು ಮರೆತಿರಲಿಲ್ಲ. ಆ ವಟಪತ್ರ ಶಾಯಿಯೇ ಶ್ರೀಕೃಷ್ಣನೆಂದು ಅವಳಿಗೆ ತೋರಿ, ಆಗಮಶಾಸ್ತ್ರದಲ್ಲಿ ಹೇಳಿರುವಂತೆಯೇ ಅವನನ್ನು ಎಬ್ಬಿಸಲು ಹೊರಟು ಮೊದಲು ದ್ವಾರಪಾಲಕರನ್ನು ಎಬ್ಬಿಸುವಳು ಮತ್ತು ಪ್ರಾರ್ಥಿಸುವಳು ಈ ಪಾಶುರದಲ್ಲಿ. ಅರ್ಚಾಮೂರ್ತಿಯನ್ನು ಹೇಗೆ ಸಮಿಾಪಿಸಬೇಕೆನ್ನುವ ವಿಷಯದಲ್ಲಿ ಆಗಮ ಶಾಸ್ತ್ರಕ್ಕೆ ಅನುಗುಣವಾಗಿ ಹೀಗೆ ಹೇಳಲಾಗಿದೆ.

ಸ್ಮೇರಾನನಾಕ್ಷಿಕಮಲೈರ್ನಮತಃ ಪುನಾರ್ನಾ
ದಂಷ್ಟ್ರಾಗದಾಭ್ರುಕುಟಿಭಿಃ ದ್ವಿಷತೋ ಧುನಾರ್ನಾ
ಚಂಡಪ್ರಚಂಡನುಖತಃ ಪ್ರಣಮಾಮಿ ರಂಗ
ದ್ವಾರಾವಲೀಷು ಚತಸೃಷ್ವಧಿಕಾರಭಾಜಃ

—ರಂ—ರಾ—ಸ್ತ 37

"ಭಗವಂತನಲ್ಲಿ ಭಕ್ತಿಯುಳ್ಳವರಲ್ಲಿ ಪ್ರಸನ್ನವದನರಾಗಿಯೂ, ನಾಸ್ತಿಕರಲ್ಲಿ ಭಯಂಕರ ದೃಷ್ಟಿಯಿಂದಲೂ ನೋಡುವ ರಂಗನಾಥನ ಅರಮನೆಯ ನಾಲ್ಕು

ಬಾಗಿಲು ಕಾಯುತ್ತಿರುವವರನ್ನು ನಮಸ್ಕರಿಸುತ್ತೇನೆ" ಎಂದು ಮೊದಲು ದ್ವಾರ ಪಾಲಕರನ್ನು ನಮಸ್ಕರಿಸಿ ಹೋಗಬೇಕೆನ್ನುವ ನಿಯಮದಂತೆ ಗೋದೆಯೂ ಮೊದಲು ಅವರನ್ನು ಪ್ರಾರ್ಥಿಸುವಳು. ಮೊದಲು ಹೊರಬಾಗಿಲು ಕಾಯುವವ ನನ್ನು ಪ್ರಾರ್ಥಿಸುವಳು.

ನಾಯಕನಾಯ್—ಗೋಕುಲಕ್ಕೆ ನಾಯಕ ನಂದಗೋಪ; ಲೋಕನಾಯಕ ನಾದ ಶ್ರೀಕೃಷ್ಣನಿಗೆ ನಾಯಕನಾದುದು ಎಷ್ಟು ಜನ್ಮಗಳ ಸುಕೃತವಿಶೇಷವೊ ಎನ್ನುವ ಭಾವವೂ ಇದರಲ್ಲಿ ಅಡಗಿದೆ; ಗೋಪಿಯರೊಡನೆ ಸೇರಕೂಡದೆಂದು ಶ್ರೀಕೃಷ್ಣನಿಗೆ ಆಜ್ಞೆಯಿಟ್ಟ ಇವನೇ ಈಗ ಅವರೊಡನೆ ಸೇರಲು ಅನುಮತಿಯನ್ನೂ ಕೊಟ್ಟವನಲ್ಲವೇ ನಾಯಕ; ಅಲ್ಲದೆ ತಾನು ಪರಮಾತ್ಮನಾದರೂ ನಂದಗೋಪನನ್ನು ತನ್ನ ನಾಯಕನೆಂದು ಸ್ವೀಕರಿಸಿದ್ದು ಮತ್ತೂ ವಿಶೇಷ; ಅವನಿಗೆ ನಾಯಕನಾದವನು ನಮಗೂ ಅಂದರೆ ಅವನ ದಾಸಿಯರಾದ ನಮಗೂ ನಾಯಕ; ಭಕ್ತ ಪರಾಧೀನ ಪರ ಮಾತ್ಮ; ಭಕ್ತರನ್ನು ನಾಯಕರನ್ನಾಗಿ ಸ್ವೀಕರಿಸುವವನವನು; ನಂದಗೋಪನು ದೊರೆ ಮಾತ್ರನಲ್ಲ; ನಮ್ಮ ಆತ್ಮಕ್ಕೂ ಒಡೆಯ ಎನ್ನುವುದೇ ಗೋದೆಯು "ನಾಯಕ ನಾಯ್" ಎಂದು ಹೇಳಿದ ಮಾತಿನ ಅರ್ಥ. ಹೀಗಿರುವುದಕ್ಕೆ ಭಾಗವತ ಶೇಷತ್ವ ವೆಂದು ಹೇಳಲಾಗಿದೆ. ಆೞ್ವಾರ್ರರಿಗೆ ಸ್ತ್ರೀಭಾವ ಬಂದರೂ ಕೆಲವು ವೇಳೆ ಮಾತ್ರ ಅದು ಪೂರ್ಣವಾಗಿರುತ್ತಿತ್ತು. ಸ್ತ್ರೀ ಭಾವವೆಂದರೆ—(1) **ಅನನ್ಯಾರ್ಹಶೇಷತ್ವ** ಪರಮಾತ್ಮನಲ್ಲದೆ ಬೇರೆ ಯಾವ ದೇವತೆಗೂ ತಾನು ಅಧೀನನಲ್ಲನೆನ್ನುವ ಭಾವ; (2) **ತತ್ಪಾರತಂತ್ರ್ಯ** — ಅವನಿಗೆ ಪೂರ್ಣ ಅಧೀನನೆನ್ನುವ ನಿಶ್ಚಯ; (3) **ತದೇಕಭೋಗತ್ವ** — ಅವನನ್ನು ಅನುಭವಿಸುವುದಲ್ಲದೆ ಬೇರೆ ಯಾವ ಭೋಗ ವನ್ನೂ ಅಪೇಕ್ಷಿಸದಿರುವುದು; ಮತ್ತು (4) **ತದ್ವಿರಹಾಸಹತ್ವ** — ಅವನನ್ನು ಬಿಟ್ಟು ಒಂದು ಕ್ಷಣವೂ ಇರಲಾರದಂತಿರುವುದು. ಈ ಸ್ತ್ರೀ ಭಾವವು ಸ್ವತಃ ಸ್ತ್ರೀ ಯಾಗಿ ಗೋಪಿಕಾ ಭಾವ ತಾಳಿದ ಗೋದೆಯಲ್ಲಿ ಪೂರ್ಣವಾಗಿ ಸ್ವಾಭಾವಿಕವಾಗಿ ಭಾಗವತ ಶೇಷತ್ವದಲ್ಲಿ ನಿಲ್ಲುವಂತೆ ಮಾಡಿ "ನಾಯಕನಾಯ್" ಎಂದು ನಂದ ಗೋಪನನ್ನು ನೆನೆಯುವಂತೆ ಮಾಡಿತು. ಪರಮಾತ್ಮನು ಭಕ್ತವತ್ಸಲನೆನ್ನುವ ಭಾವದಲ್ಲಿ ತೊಯ್ದು ಹೇಳಿದ ಮಾತಿದು.

ರಾಮನು ಲಂಕೆಯಿಂದ ಪುಷ್ಪಕ ವಿಮಾನದಲ್ಲಿ ಬರುವಾಗ ಅಯೋಧ್ಯೆಯನ್ನು ದೂರದಿಂದ ನೋಡಿ ಸೀತೆಯನ್ನು ಕುರಿತು

ಏಷಾ ಸಾ ದೃಶ್ಯತೇsಯೋಧ್ಯಾ ರಾಜಧಾನೀ ಪಿತುರ್ಮಮ ।
ಅಯೋಧ್ಯಾಂ ಕುರು ವೈದೇಹಿ ಪ್ರಣಾಮಂ ಪುನರಾಗತಾ ॥

ರಾ – ಯು. 126–57

" ಸೀತೆ, ಇದು ನನ್ನ ತಂದೆಯ ರಾಜಧಾನಿ, ಅಯೋಧ್ಯೆ; ಮತ್ತೆ ನೀನು ಇಲ್ಲಿಗೆ ಬಂದಿರುವೆ; ಅಯೋಧ್ಯೆಗೆ ನಮಸ್ಕರಿಸು " ಎಂದನು. ಇದು ಮನುಷ್ಯನೆಂದೇ ಹೇಳಿಕೊಂಡ ರಾಮನ ಮಾತು. ಇಲ್ಲಿ ಶ್ರೀಕೃಷ್ಣನು ತಾನೇ ಪರಮಾತ್ಮನೆಂದು ತೋರಿಕೊಂಡು, ನಂದಗೋಪರನ್ನು ನಾಯಕನನ್ನಾಗಿ ಮಾಡಿದ್ದು ನಮಗಾಗಲ್ಲವೆ ಎನ್ನುವ ಕೃತಜ್ಞತಾಭಾವವೂ ಸೇರಿದೆ ಈ ಮಾತಿನಲ್ಲಿ.

ನಿನ್ರ—ಶ್ರೀಕೃಷ್ಣನು ಇವನಲ್ಲಿಗೆ ಬಂದು ಸೇರಿದಮೇಲೆ ನಾಯನಾದವನಲ್ಲ; ನಾಯಕಪಟ್ಟಕ್ಕೆ ಯೋಗ್ಯತೆಯುಳ್ಳವನಾಗಿರುವವನು. ಹಾಗಿದ್ದುದರಿಂದಲೇ ಶ್ರೀಕೃಷ್ಣನು ಮಥುರೆಯಿಂದ ಇಲ್ಲಿಗೆ ಬಂದು ಅವನ ಅಧೀನವಾಗಿ ಬೆಳೆದನು. ಪರಮಾತ್ಮನಿಗೆ ಪಕ್ಷಪಾತವಿಲ್ಲ ಕ್ರೌರ್ಯವಿಲ್ಲ **(ವೈಷಮ್ಯನೈಘೃಣ್ಯೇ–ನ)** ವೆಂದು ಶಾಸ್ತ್ರವು ಹೇಳುತ್ತಿದೆ. ಆ ಗುಣಗಳು ಇವನಲ್ಲಿದ್ದು ಆಸ್ತಿಕಶಿರೋಮಣಿಯಾಗಿ ಎಲ್ಲರಿಗೂ ಪ್ರಿಯನಾದ್ದರಿಂದ ಇವನು ನಿತ್ಯನಾಯಕ. ಪ್ರಜೆಗಳು ಕೃಷ್ಣನಮೇಲೆ ದೂರು ಹೇಳಿ ಗೋಪಿಯರೊಡನೆ ಸೇರಿಸಬೇಡಿ ಎಂದಾಗ ಹಾಗೆಯೇ ಆಜ್ಞೆಯಿತ್ತನು; ಈಗ ಅವರ ಇಷ್ಟದಂತೆಯೇ ಗೋಪಿಕೆಯರೊಡನೆ ಸೇರಲು ಅನುಮತಿಯಿತ್ತನು; ಪ್ರಜೆಗಳ ಇಷ್ಟವೇ ತನ್ನದೆನ್ನುವನೇ ನಾಯಕ; ಈ ಗುಣ ಇವನಿಗೆ ಹುಟ್ಟಿನಿಂದಲೇ ಬಂದುದು. ಅಲ್ಲದೆ ಆತ್ಮಗುಣವುಳ್ಳವನು

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ ಗೀ V 14

" ನಾನು ಮಾಡುವವನು ಎನ್ನುವ ಕರ್ತೃತ್ವ, ಇದು ನನ್ನ ಕೆಲಸ, ಇದರಿಂದ ನನಗೆ ಈ ಪ್ರಯೋಜನ ಎನ್ನುವ ಭಾವವಿಲ್ಲದವನೇ ತನಗೆ ತಾನು ಪ್ರಭು " ಎಂದಿರುವಂತೆ ಇವನಿಗೆ ಇವನೇ ಪ್ರಭುವಾಗಿದ್ದುದರಿಂದ ಇವನು **" ನಿನ್ರ ನಾಯಕ್ಕ "**. ಅಲ್ಲದೆ ಇವನು

ನಂದಗೋಪ್ಪ—ಎಲ್ಲರನ್ನೂ ರಕ್ಷಿಸುವವನು (ಗೋಪತಿ) ಮತ್ತು ಎಲ್ಲರಿಗೂ ಬಹುಪ್ರಿಯನಾದವನು (ನಂದಯತಿ). ಅಂತಹ

ನಂದಗೋಪನುಡೈಯ ಕೋಯಿಲ್ ಕಾಪ್ಪಾನೇ — ನಂದ ಗೋಪನ ಅರಮನೆ ಗುಡಿಗೆ ಸಮಾನ; ಅದನ್ನು ಕಾಯುವವನು ಪೂಜ್ಯನೇ; ನಂದಗೋಪ ಭಾಗವತ; ಅವನಿಗೂ ಪ್ರಿಯವಾದ ನಂಬಿಕಸ್ತ ಬಾಗಿಲು ಕಾಯುವವ; ಅವನಲ್ಲಿ ಗೌರವವಿಟ್ಟರೆ ಪರಮಾತ್ಮನಿಗೆ ಮತ್ತೂ ಪ್ರಿಯ. ಹಿಂದೆ ಭೃಗು ಮಹರ್ಷಿಯು ಬ್ರಹ್ಮ ವಿಷ್ಣು ರುದ್ರರಲ್ಲಿ ಯಾರು ಪರಮಾತ್ಮನೆಂದು ನಿಶ್ಚಯಿಸಲು ಹೊರಟರು (ಇತಿಹಾಸ ಸಮುಚ್ಚಯ 30-100) ಬ್ರಹ್ಮ ರುದ್ರರನ್ನು ಪರೀಕ್ಷೆ ಮಾಡಿ ವಿಷ್ಣುವು ಯೋಗನಿದ್ದೆಯಲ್ಲಿದ್ದುದನ್ನು ತಿಳಿಯದೆ ತನ್ನನ್ನು ಉಪೇಕ್ಷಿಸಿರುವನೆಂದು ತಿಳಿದು ಕೋಪದಿಂದ ಕಾಲಿನಿಂದ ಒದ್ದರು. ವಿಷ್ಣುವು ಎಚ್ಚೆತ್ತವನಾಗಿ " ಸ್ವಾಮಿ, ಅಪಚಾರ

ವಾಯಿತು ಕ್ಷಮಿಸಬೇಕು " ಎಂದು ಕ್ಷಮಾಪಣೆ ಕೇಳುವನಂತೆ ಅವರ ಕಾಲನ್ನು ತನ್ನಲ್ಲಿ ಒತ್ತಿಕೊಂಡು ಭೃಗುವಿನ ಕಾಲಿನಲ್ಲಿದ್ದ ಕಣ್ಣನ್ನು ಇಲ್ಲವಾಗಿಸಿದನು. ಭೃಗುವು ವಿಷ್ಣುವೇ ಪರದೈವವೆಂದು ನಿಶ್ಚಯಿಸಿ ಹೊಂಟುಹೋದರು. ಈ ಪ್ರಸಂಗದಲ್ಲಿ ಪರಮಾತ್ಮ ಆಡಿದಮಾತಿದು.

ಘ್ನನ್ತಂ ಶಪಂತಂ ಪರುಷಂ ವದಂತಂ
ಯೋ ಬ್ರಾಹ್ಮಣಂ ನ ಪ್ರಣಮೇತ್ ಯಥಾಹಂ ।
ಸ ಪಾಪಕೃತ್ ಬ್ರಹ್ಮದವಾಗ್ನಿ ದಗ್ಧಃ
ವಧ್ಯಶ್ಚ ದಂಡ್ಯಶ್ಚ ನ ಚಾಸ್ಮದೀಯಃ ॥

" ಬ್ರಾಹ್ಮಣಂ (ಬ್ರಹ್ಮ ಅಣತಿ, ಬ್ರಾಹ್ಮಣ) ಭಾಗವತನನ್ನು ಯಾವನು ನಾನು ಮಾಡಿದಂತೆ ನಮಸ್ಕರಿಸುವುದಿಲ್ಲವೋ ಅವನು ಶಿಕ್ಷೆಗೆ ಅರ್ಹನು; ಅವನು ನನ್ನವನಲ್ಲ " ಅದಕ್ಕಾಗಿಯೇ ಕುಲಶೇಖರರು

ತ್ವದ್ಭೃತ್ಯ ಭೃತ್ಯಪರಿಚಾರಕ ಭೃತ್ಯ ಭೃತ್ಯ
ಭೃತ್ಯಸ್ಯ ಭೃತ್ಯ ಇತಿ ಸ್ಮರ ಲೋಕನಾಥ

" ಪರಮಾತ್ಮ, ನಿನ್ನ ಭೃತ್ಯರ ಸಂತತಿಯಲ್ಲಿ ಏಳನೇಯವನನ್ನಾಗಿ ನನ್ನನ್ನು ಸ್ಮರಿಸಿಕೊ" ಎಂದರು. ಪರಮಾತ್ಮನಿಗೆ ತನ್ನ ಭಕ್ತರೆಂದರೆ ಬಹುಪ್ರಿಯ. ಅರ್ಜುನ ಭಕ್ತ. ಸುಭದ್ರೆಯನ್ನು ಮದುವೆಯಾಗಲಪೇಕ್ಷಿಸಿದಾಗ, ದುರ್ಯೋಧನನಿಗೆ ನಿಶ್ಚಯವಾಗಿದ್ದ ಅವಳೊಡನೆ ಓಡಿಹೋಗುವಂತೆ ಮಾಡಿದವ ಕೃಷ್ಣ. ಅವಳನ್ನು ಅವನಿಗೆ ಅವನು ಗಂಟು ಹಾಕಿದ್ದನು. ಹಾಗೆಯೇ ಸಹಾಯಮಾಡಿದನು. ಅರ್ಜುನನು ಮಾಡಿದ್ದೂ ತಪ್ಪಲ್ಲ. ನಮಗೆ ಹಾಗೆ ತೋರಬಹುದು. **" ಅವನಡಿಯಾರ್ ಇದು ಶೆಯ್ಯಾರ್ ಶೆಯ್ದಾಲುಂ ನನ್ನೈ ಶೇಯ್ದಾರ್ "** ಎಂದು ಆಳ್ವಾರ್ರು ಹೇಳಿದಂತೆ ಅರ್ಜುನನು ಭಕ್ತ; ಭಾಗವತ, ಅವನು ಮಾಡಿದ್ದು ಯಾವತ್ತಿಗೂ ತಪ್ಪಲ್ಲ, ಅರ್ಜುನನಂತೆ ಭಾಗವತ ನಂದ ಗೋಪ; ಅವನ ಸೇವೆಮಾಡುವವನು ಮತ್ತೂ ಪೂಜ್ಯ. ಆದ್ದರಿಂದ ಅವನನ್ನು ಹೆಸರಿನಿಂದಲೂ ಕರೆಯಲಿಲ್ಲ ಗೋದೆ. ಇದು ವೈಷ್ಣವ ಧರ್ಮ.

ಏಕಾಂತೀ ವ್ಯಪದೇಷ್ಟವ್ಯಃ ನೈವ ಗ್ರಾಮುಕುಲಾಧಿಭಿಃ ।
ವಿಷ್ಣುನಾ ವ್ಯಪದೇಷ್ಟವ್ಯಃ ತಸ್ಯ ಸರ್ವಂ ಸ ಏವ ಹಿ ॥

—ವಿ–ಪು I, 6, 36

ಇದೇ ಅದಕ್ಕೆ ಪ್ರಮಾಣ.

ತೋರಣವಾಶಲ್ ಕಾಪ್ಪಾನೇ—**"ತೋರಣೋಽಸ್ತ್ರೀ ಬಹಿರ್ದ್ವಾರಂ"** ಎನ್ನುವ ನಿಘಂಟುವಿನಂತೇ ತೋರಣವೆಂದರೆ ಹೊರಬಾಗಿಲು; "ಅದನ್ನು ಕಾಯುವ

ನಾಯಕನೇ" ಎಂದು ಹಿಂದಿನ ಸಂಬೋಧನೆಯೊಡನೆ ಸೇರಿಸಿಕೊಳ್ಳಬೇಕೆನ್ನುವರು ಕೆಲವು ವ್ಯಾಖ್ಯಾನಕಾರರು. ಮತ್ತೆ ಕೆಲವರು, "ಇವನು ಶ್ರೀಕೃಷ್ಣನ ಅಂತಃಪುರದ ಬಾಗಿಲು ಕಾಯುವವನು" ಎನ್ನುವರು; ಸಾಮಾನ್ಯವಾಗಿ ಈಯರ್ಥವನ್ನೇ ಆಚಾರ್ಯರು ಆದರಿಸಿರುವರು. ಮುಂದಿನವಾಕ್ಯವೇ ಇದಕ್ಕೆ ಆಧಾರ.

ಮಣಿಕ್ಕದವುಂ ತಾಳ್ ತಿರವಾಯ್—ಮಣಿಗಳಿಂದ ಅಲಂಕರಿಸಲ್ಪಟ್ಟ ಬಾಗಿಲನ್ನು ತೆಗಿ; ಒಂಭತ್ತನೆಯ ಪದ್ಯದಲ್ಲಿ ಶ್ರೀಕೃಷ್ಣನ ಪ್ರಜೆ ಒಬ್ಬಗೋಪಿಗೆ "ತೂಮಣಿಮಾಡಂ" ಇರುವಾಗ ಇವನಿಗೆ "ಮಣಿಕ್ಕದವು" ಇರುವುದು ಏನೂ ಆಶ್ಚರ್ಯವಿಲ್ಲ. ಹಾಗೆ ಇಬ್ಬರು ಬಾಗಿಲು ಕಾಯುವವರನ್ನು ಗೋದೆಯು ಕರೆದಳೆಂದು ತಿಳಿದರೆ, ಮತ್ತು ಮುಂದಿನ ವಾಕ್ಯವಾದ "ವಾಯಾಲ್ ಮುನ್ನಮುನ್ನಂ ಮಾತ್ತಾದೆ." ಎನ್ನುವುದರೊಡನೆ ಸಮಂಜಸವಾಗಿ ಅರ್ಥಮಾಡಿಕೊಳ್ಳಬೇಕಾದರೆ, ನಡುವಿನಲ್ಲಿ ಏನೇನೋ ಸಂವಾದವಾಗಿರಬೇಕೆಂದು ಊಹಿಸಲೇಬೇಕು. ಅದು ಹೀಗಿರಬಹುದು.

ಬಾ–ಕಾಯುವನ—ಒಳಗೆ ಹೋಗಬೇಡಿ; ಭಯವಿಲ್ಲವೆ ನಾನಿರುವೆನೆಂದು?

ಗೋದೆ—ಭಯನಾಶಕನಲ್ಲಿಗೆ ಹೊಗಲು ನಮಗೇನು ಭಯ

ಬಾ-ಕಾ—ಇದು ರಾಮಾವತಾರವಲ್ಲ; ಕೃಷ್ಣಾವತಾರ; ಕೃಷ್ಣನಿಗೆ ಶತ್ರುಗಳು ಜಾಸ್ತಿ; ನಿಮ್ಮರೂಪವೇ ಮೋಸವಾಗಿರಬೇಕು.

ಗೋ—ನಾವು ಸ್ತ್ರೀಯರು

ಬಾ-ಕಾ—ಪೂತನಿಯೂ ಸ್ತ್ರೀಯಾಗಿ ನಿಮ್ಮಂತೆಯೇ ಬಂದಳು

ಗೋ—ಅವಳು ವಯಸ್ಸಾದವಳು; ನಾವು ಚಿಕ್ಕವರು(ಆಯರ್ ಶಿರುಮಿಯರ್)

ಬಾ-ಕಾ—ವತ್ಸಾಸುರನೂ ಚಿಕ್ಕವನಾಗಿಯೇ ಬರಲಿಲ್ಲವೆ?

ಗೋ—ಅವನು ಒಬ್ಬಂಟಿಗನಾಗಿ ಬಂದ; ನಾವು ಒಟ್ಟಿಗೆ ಬಂದಿರುವೆವು.

ಬಾ-ಕಾ—ಜನಸ್ಥಾನದಲ್ಲಿ ರಾಕ್ಷಸರೆಲ್ಲರೂ ಒಟ್ಟಿಗೆ ಬರಲಿಲ್ಲವೆ? ಹಾಗೆ ನೀವೇಕೆ ಬಂದಿರಬಾರದು.

ಗೋ—ನಾವು ಆದರಂತೆ ಬಂದಿಲ್ಲ; ಅಲ್ಲದೆ ಶ್ರೀಕೃಷ್ಣನು

ಆಯರ್ ಶಿರುಮಿಯರೋಮುಕ್ಕು—ಗೋಪಬಾಲಿಕೆಯರಾದ ನಮಗೆ

ಅರೈ ಪರೈ—ನಮ್ಮ ಇಷ್ಟಾರ್ಥವನ್ನು ಕೊಡುವುದಾಗಿ (ಶಬ್ದಮಾಡುವ ಸಾಧನ)

ಮಾರ್ಯ ಮಣಿವಣ್ಣ—ಮಾಯಾಚೇಷ್ಟಿತ ನೀಲಮಣಿ ವರ್ಣನಾದ ಶ್ರೀಕೃಷ್ಣ

ನೆನ್ನೆಲೇ ವಾಯ್ ನೆರ್ನ್ದ—ನೆನ್ನೆಯೇ ವಾಗ್ದಾನಮಾಡಿದ್ದ–ಅದರಂತೆ ಬಂದಿರುವೆವು-ಅಲ್ಲದೆ.

ತೂಯೋಮಾಯ್ ವಂದೋಂ—ಪರಿಶುದ್ಧ ಮನಸ್ಸಿನಿಂದಲೇ ಬಂದಿರುವೆವು; ಮತ್ತು

ತುಯಿಲೆಳ್ಪ ಪಾಡುವಾರ್—ಸುಪ್ರಭಾತವನ್ನು ಹಾಡಲು ಬಂದಿರುವೆವು

ಬಾ-ಕಾ—ಇವಾವುದನ್ನೂ ಶ್ರೀಕೃಷ್ಣನು ನಮಗೆ ಹೇಳಿಲ್ಲ; ನಿಮ್ಮನ್ನು ಒಳಗೆ ಬಿಡಲಾರೆವು–ಎನ್ನುವಷ್ಟರಲ್ಲಿ

ಗೋ—**ವಾಯಾಲ್ ಮುನ್ನಮುನ್ನಂ ಮೂತ್ತಾದೆ**—ಬಾಯಿಂದ ನಮ್ಮನ್ನು ತಡೆಯಬೇಡ; ಹರಮಾತ್ಮನ ಸಂಕಲ್ಪಕ್ಕೆ ವಿರುದ್ಧವಾಗಿ ನಡೆದರೆ ಏನಾಗುವುದೆಂದು ಸ್ವಲ್ಪ ಯೋಚನೆಮಾಡು; ವಿಭೀಷಣನ ಶರಣಾಗತಿ ಪ್ರಸಂಗವನ್ನು ಜ್ಞಾಪಿಸಿಕೊ.

"ವಧ್ಯತಾಮೇಷ ತೀವ್ರೇಣ ದಂಡೇನ ಸಚಿವೈ ಸ್ಸಹ"

ಎಂದು ಸುಗ್ರೀವ ಮೊದಲಾದವರು ಹೇಳಿದ್ದು ನಡೆಯಿತೇ?

ಇದನ್ನು ಕೇಳಿ ಕಾವಲುಗಾರನು ಮಾತನಾಡದೆ ಯೋಚಿಸುತ್ತಿರಲು

ಅಮ್ಮಾ—ನೀನು ಒಳ್ಳೆಯವ, ನಮಸ್ಕಾರವಪ್ಪ. ಎಂದಳು—ಹೊರ ಬಾಗಿಲು ಕಾಯುವವನು ಅಂತಃಪುರ ಬಾಗಿಲುಕಾಯುವವನ ಅನುಮತಿಯನ್ನು ಕೇಳಿ ಒಳಗೆ ಬಿಟ್ಟನೆಂದು ನೆನೆಯಬೇಕು. ಗೋಪಿಯರು ಒಳಗೆ ಹೋದರು. ಅತಃಪುರದ ಬಾಗಿಲು ಕಾಯುವವನನ್ನು ಕುರಿತು

ನೇಶನಿಲೈಕ್ಕದವುಂ ನೀಕ್ಕು—ಭದ್ರವಾದ ಅಂತಃಪುರದ ಬಾಗಿಲನ್ನು ತೆಗಿ, ಯಾವ ಸಂಶಯವೂ ಬೇಡ, ನೀನು ಯೋಚನೆಮಾಡುತ್ತಿರುವಂತೆ ಮೋಸಗಾರರಾಗಿದ್ದರೆ ನಿಮ್ಮನ್ನು ನಿಗ್ರಹಮಾಡಲು ಎಷ್ಟರಲ್ಲಿತ್ತು. ನಾವು ಖಂಡಿತವಾಗಿಯೂ ಗೋಪಬಾಲಿಕೆಯರು. ಹಿಂದಿನ ಪ್ರಸಂಗವೆಲ್ಲವೂ ನಿನಗೆ ತಿಳಿದೇ ಇದೆ. ನಮ್ಮನ್ನು ಒಳಗೆ ಬಿಟ್ಟರೇನೆ

ಎಲ್ ಓರ್ ಎಂಪಾವಾಯ್—ನಮ್ಮ ವ್ರತವೂ ಅದ್ವಿತೀಯವಾಗುವುದು.

ಸ್ವಾಪದೇಶ

ನಾಯಕ....ಡೈಯ—ಲೋಕ ನಾಯಕನಾಗಿ ನಮ್ಮೆಲ್ಲರಿಗೂ ನಂದಕನೂ, ರಕ್ಷಕನೂ ಆಗಿರುವ ಶ್ರೀಮನ್ನಾರಾಯಣನ

ಕೋಯಿಲ್—ವಾಸಸ್ಥಾನವಾದ ಮೂಲಮಂತ್ರವನ್ನು

ಕಾಪ್ಪಾನೇ—ಕಾಪಾಡುತ್ತಿರುವ ಆಚಾರ್ಯನೇ

ಕೊಡಿ . . . ಕಾಪ್ಪಾನೇ—ಗರುಡಧ್ವಜವು ಪ್ರಕಾಶಿಸುವ ಮತ್ತು ತೋರಣಗಳಿಂದಲಂಕೃತವಾದ ವೈಕುಂಠದ ಬಾಗಿಲು ಕಾಯುವವನೇ; ಶಿಷ್ಯರಿಗೆ ಮೋಕ್ಷದ ದಾರಿ ತೋರಿಸಿ ಪರಮಾತ್ಮನು ಸಿಗುವ ಅಂತರ್ಹೃದಯವನ್ನು ಮಂಗಳ ಸೂಚನೆಗಳಿಂದ ಬಿಚ್ಚಿ ತೋರಿಸಿ ವೈಕುಂಠದಬಾಗಿಲು ಚೆನ್ನಾಗಿ ಕಾಣುವಂತೆ ಮಾಡುವವನು ಆಚಾರ್ಯ; ಅಂತಹ ನೀನು

ಮಣಿ . . . ವಾಯ್—ಮಣಿ ಎನ್ನುವುದು ಉಪಲಕ್ಷಣ; ಒಂದು ಪದವನ್ನು ಹೇಳಿದಾಕ್ಷಣ ಆದರ ಅರ್ಥಕ್ಕೆ ಸಂಬಂಧಪಟ್ಟವುಗಳೆಲ್ಲವೂ ಜ್ಞಾಪಕಕ್ಕೆ ಬರುತ್ತವೆ. ಹಾಗೆ ಅರ್ಥವು ಗೋಚರವಾದರೆ ಅದಕ್ಕೆ ಉಪಲಕ್ಷಣ ಎಂದು ಹೆಸರು. ಮಣಿಯು ನಮ್ಮ ಮನಸ್ಸನ್ನು ಸೆಳೆಯುವಂತೆ ನಮ್ಮನ್ನು ಸಂಸಾರಕ್ಕೆ ಎಳೆದಿರುವ ಪ್ರಕೃತಿಯೇ ಮಣಿ; ಈ–ವಾ–ಉಪನಿಷತ್ತು "ಇದನ್ನು ಹಿರಣ್ಮಯ ಪಾತ್ರೆ" ಎಂದಿರುತ್ತದೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ।
ತತ್ತ್ವಂ ಪೂರ್ಷ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ

ಎನ್ನುವ ಮಂತ್ರದಲ್ಲಿ "**ಹಿರಣ್ಮಯ ಪಾತ್ರ**" ವೆಂದರೆ ಮನಸ್ಸು; ಪ್ರಕೃತಿಯ ಉತ್ತಮ ಮೋಹಕ ಒಂದು ರೂಪ; ಅಂತಹ ಮಣಿಯಂತಿರುವ ಹೃದಯ ಬಾಗಿಲನ್ನು ತೆಗೆದು ಆತ್ಮದರ್ಶನವನ್ನು ದಯಪಾಲಿಸು.

ಆಯರ್ . . . ಕ್ಕು—ಬಾಲಕರಾಗಿಯೂ, ಪರತಂತ್ರರಾಗಿಯೂ ಇರುವ ನಮಗೆ ತಮ್ಮಿಂದಲೇ

ಅರೈ ಪರೈ—ನಮಗೆ ಸಕಲ ಸೌಭಾಗ್ಯವನ್ನು ಕೊಡುವುದಾಗಿ

ಮಾಯ್ ಮಣಿವಣ್ಣ—ಪರಮಾತ್ಮನು

ನೆನ್ನೆಲೇ ವಾಯ್ ನೆರ್ನ್ದ—ಮೊದಲೇ ಮಾತು ಕೊಟ್ಟಿರುವನು

1) **ಆಚಾರ್ಯಾದೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪತ್**
—ಛಾ. ಉ

2) **ಆಚಾರ್ಯವಾ ಪುರುಷೋ ವೇದ** ,,

3) **ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನಸೇವಯಾ ।**
ಉಪದೇಕ್ಷಂತಿ ತೇ ಜ್ಞಾನಂ ಜ್ಞಾನಿನ ಸ್ತತ್ತ್ವದರ್ಶಿನಃ ॥
—ಭ–ಗೀ IV

4) **ಆಚಾರ್ಯಾಣಾಮಸಾವಸಾವಿತ್ಯಾಭಗವತ್ತಃ** —ತೈ ಪ್ರ

ಎನ್ನುವ ಪ್ರಮಾಣಗಳನ್ನು ಕೊಟ್ಟು ತಿಳಿಸಿರುವನು. ಆಚಾರ್ಯನೆನ್ನುವ ಪದಕ್ಕೂ ಅದೇ ಅರ್ಥ

ಆಚಿನೋತಿ ಹಿ ಶಾಸ್ತ್ರಾರ್ಥಾ ಆಚಾರೇ ಸ್ಥಾಪಯತ್ಯಪಿ ।
ಸ್ವಯಮಾಚರತೇ ಯಸ್ಮಾತ್ ತಸ್ಮಾದಾಚಾರ್ಯ ಉಚ್ಯತೇ ॥

ಶಾಸ್ತ್ರವೆಂದರೆ ವೇದ ಮತ್ತು ಅದಕ್ಕನುಗುಣವಾದ ಇತಿಹಾಸ ಪುರಾಣ ಮತ್ತು ಶ್ರೀ ಸೂಕ್ತಗಳು. ಅವುಗಳರ್ಥವನ್ನು ಚೆನ್ನಾಗಿ ಹೇಳಿಕೊಟ್ಟು ತಾನೂ ಅದರಂತೆ ನಡೆದು ನಮಗೆ ಆಚಾರವನ್ನು ಹೇಳಿಕೊಡುವವನೇ ಆಚಾರ್ಯ. ಅಂತಹ ಆಚಾರ್ಯರ ಮೂಲಕ ನಾವು ಪರಮಾತ್ಮನಲ್ಲಿ ಶರಣು ಹೋದರೆ ನಮ್ಮನ್ನು ರಕ್ಷಿಸುವನಲ್ಲದೆ ನಮಗೆ ತಾನಾಗಿಯೇ ವೇದಾಂತ ಜ್ಞಾನವು ನೆಲೆಯೂರಿ ನಿಲ್ಲುವಂತೆ ಮಾಡುವನೆಂದು "**ಯೋಗಕ್ಷೇಮಂ ವಹಾಮ್ಯಹಂ**" ಎಂದು ಪರಮಾತ್ಮನೇ ಹೇಳಿರುವನು,

ಆದ್ದರಿಂದ

ತುಯಲೆಳ್ಪ ಪಾಡುವಾರ್—ನಮ್ಮ ಕರ್ಮ ಮತ್ತು ಅಜ್ಞಾನವೆನ್ನುವ ನಿದ್ದೆಯಿಂದ ಏಳಲು ತಮ್ಮನ್ನು ಹಾಡಲು ಬಂದಿರುವೆವು "**ಗುರುಂ ಪ್ರಕಾಶಯೇದ್ವೀರ್ಯಾ**" ಎಂದಿರುವಂತೆ ತಮ್ಮನ್ನು ಸ್ತೋತ್ರ ಮಾಡುವುದೇ ನಮಗೆ ಪುರುಷಾರ್ಥ; ತಾವೇ ನಮಗೆ ಸರ್ವಸ್ವ; ಶಠಗೋಪರ ವಿರಹವನ್ನು ತಿಳಿಸಿ ಪರಮಾತ್ಮನ ಮನಸ್ಸು ಕರಗುವಂತೆ ಮಾಡಿದವರು ಆಚಾರ್ಯರಲ್ಲವೇ. —ತಿ.ಮೊ VII, 2 ಪೂರ್ತಿ

ಆದ್ದರಿಂದ

ಮಾತ್ತಾದೆ—ತಮ್ಮಲ್ಲಿಗೆ ಬರಲು ನಮ್ಮನ್ನು ತಡೆಯಬೇಡಿ

ಅಮ್ಮಾ—ನಮ್ಮ ಸ್ವಾಮಿಯೇ

ನೇಶ . . . ನೀಕ್ಕು—ಆತ್ಮದರ್ಶನಕ್ಕೆ ಪ್ರತಿಬಂಧಕವಾದ ನಮ್ಮ ಅಜ್ಞಾನ ಬಾಗಿಲನ್ನು ತೆಗೆಯಿರಿ

ಏಲೋರ್ ಎಂಪಾವಾಯ್

ಇಲ್ಲಿ ಒಂದು ಸಂದೇಹ ತೋರಬಹುದು. ಇಷ್ಟು ಗಹನ ಮತ್ತು ಗೂಢವಾದ ಅರ್ಥವನ್ನಿಟ್ಟು ಕೇವಲ ಬಾಲಿಕೆಯಾದ ಗೋದೆಯು ಹಾಡಲು ಸಾಧ್ಯವೇ ಎಂದು

ವೇದಶಾಸ್ತ್ರರಥಾರೂಢಾಃ ಜ್ಞಾನಖಡ್ಗಧರಾದ್ವಿಜಾಃ ।
ಕ್ರೀಡಾರ್ಥಮಪಿ ಯದ್ಬ್ರೂಯುಃ ಸ ನೋ ಧರ್ಮಸ್ಸನಾತನಃ ॥

ಎನ್ನುವ ಪ್ರಮಾಣದಂತೆ ವೇದ ನಿಷ್ಣಾತರ ಬಾಯಲ್ಲಿ ಬರುವುದೆಲ್ಲಾ ಧರ್ಮವಾಗುವಾಗ, ಜಗನ್ಮಾತೆ ಭೂದೇವಿಯೆ ಗೋದೆಯಾಗಿ ಬಂದು ಶಾಸ್ತ್ರಾರ್ಥವನ್ನು ತಿಳಿಸುವುದು

ಅಸಂಭವವೇನೂ ಅಲ್ಲ. ಧಾತುವಾಳವು ಸಾಮಾನ್ಯ ಲೋಹವನ್ನು ಚಿನ್ನವನ್ನಾಗಿ ಮಾಡುವಂತೆ ಪಾಮರರನ್ನು ಪರಮ ವೇದಾಂತಿಗಳನ್ನಾಗಿ ಮಾಡಲು ಇವಳು ತನ್ನ ಪದ್ಯಗಳಲ್ಲಿ ವಿಶೇಷಾರ್ಥಗಳಲ್ಲಿಟ್ಟೇ ಹಾಡಿರುವಳು. ಹಾಗಿರದಿದ್ದರೆ ಎಂಟು ವರ್ಷದ ಬಾಲಿಕೆ ಇಷ್ಟು ಸುಂದರ ಹಾಡುಗಳನ್ನು ಹಾಡುವುದೆಂದರೇನು?

ಅಂಬರಮೇ ತಣ್ಣೀರೇ ಶೋರೇ ಅರಂ ಶೆಯ್ಯುಂ
ಎಂ ಪೆರುಮಾ ನಂತಗೋಪಾಲಾ ಎೞುಂದಿರಾಯ್
ಕೊಂಬಲಾರ್ಕೆಲ್ಲಾಂ ಕೊೞುಂದೇ ಕುಲವಿಳಕ್ಕೇ
ಎಂ ಪೆರುಮಾಟ್ಟಿ ಯಶೋದಾಯ್ ಅರಿವುರಾಯ್
ಅಂಪರಮೂಡರತ್ತು ಓಂಗಿ ಉಲಕಳಂದ
ಉಂಬರ್ ಕೋಮಾನೇ ಉರಂಗಾದೆೞುಂದಿರಾಯ್
ಶೆಂಪೊ ೞಿಲಡಿಚ್ಚಿಲ್ವಾ ಬಲದೇವಾ
ಉಮ್ಮಿಯುಂ ನೀಯುಂ ಉರಂಗೇಲೋರೆಂಪಾವಾಯ್ ॥ ೧೭ ॥

ಹಿಂದಿನ ಪಾಶುರದಲ್ಲಿ ಗೋಪಿಕೆಯರು ಕಾವಲುಗಾರರ ಅನುಮತಿಯಿಂದ ಅರಮನೆಯೊಳಗೆ ಮತ್ತು ಅತಃಪುರಕ್ಕೆ ಬಂದಾಯಿತು. ಗೋದೆಯ ಭಾವಬಂಧದಲ್ಲಿ ಮೊದಲು ನಂದಗೋಪ, ಅವನಾದಮೇಲೆ ಯಶೋದೆ, ನಂತರ ಶ್ರೀಕೃಷ್ಣ ಕೊನೆಯಲ್ಲಿ ಬಲರಾಮನು ಮಲಗಿರುವಂತೆ ತೋರಿತು. ಅದರಂತೆ ಮೊದಲು ನಂದಗೋಪನನ್ನು ಎಬ್ಬಿಸುವಳು ಸುಪ್ರಭಾತದಿಂದ. ತನ್ನ ಮಗ್ಗಲಲ್ಲಿ ವೇಲಾಯುಧವನ್ನಿಟ್ಟುಕೊಂಡು ಮಲಗಿರುವಂತೆ ಕಂಡಳು. (ಒಂದನೇ ಪಾಶುರ ನೋಡಿ) ಯೋಚಿಸಿದಳು "ಆಹಾ, ನಂದಗೋಪನಿಗೆ ಕೃಷ್ಣನಲ್ಲಿ ಎಷ್ಟು ಮೋಹ; ಅವನು ಪರಮಾತ್ಮನೆಂದು ತಿಳಿದೂ ಅವನನ್ನು ರಕ್ಷಿಸುವ ಹೊಣೆ ತನ್ನದೆಂದು ಭಾವಿಸಿರುವನಲ್ಲಾ?" ಎಂದು ನೆನೆಯುತ್ತಲೇ ಇವಳಿಗೆ ತನ್ನ ತಂದೆ ಪೆರಿಮಾೞ್ವಾರ್ರರ ನನಸು ಬಂದಿರಬೇಕು. ಅವರೂ ಕೂಡ ಕೃಷ್ಣನನ್ನು ತಾಯಿಯ ಭಾವದಲ್ಲಿ ಅನುಭವಿಸಿ, ಪಲ್ಲಾಂಡು, ನೀರಾಟ್ಟಂ, ಪೂಚ್ಚೂಟ್ಟಲ್, ಕಾಪ್ಪಿಡಲ್ ಹಾಡಿದರು. ಹಾಗೆಯೇ ನಂದಗೋಪನ ಪ್ರೇಮ. ಮತ್ತೆ ಯೋಚಿಸಿದಳು "ನಂದಗೋಪನಿಗೆ ಬಾಣಾಸುರನ ವೃತ್ತಾಂತವೂ ನೆನಪಿಗೆ ಬಂದಿರಬೇಕು. ಅದಕ್ಕಾಗಿಯೇ ಹೀಗೆ ಮಲಗಿರಬೇಕು. ಬಾಣಾಸುರನ ಮಗಳು ಉಷೆ ಕೃಷ್ಣನ ಮೊಮ್ಮೊಗ ಅನಿರುದ್ದನಲ್ಲಿ ಮೋಹಗೊಂಡಳು. ಅವಳ ಸಖಿ ಚಿತ್ರಲೇಖೆ ತನ್ನ ಮಾಯಾಬಲದಿಂದ ಅನಿರುದ್ದನನ್ನು ಕರೆದೊಯ್ದಳಲ್ಲವೆ? ಹಾಗೆ ಯಾರಾದರೂ ನನ್ನ ಕೃಷ್ಣನನ್ನು ಕರೆದೊಯ್ದರೆ ಗತಿ? ಅದಕ್ಕಾಗಿ ಅವನನ್ನು

ರಕ್ಷಿಸಲು ವೇಲಾಯುಧವನ್ನು ಸಿದ್ಧವಾಗಿಯೇ ಇಟ್ಟುಕೊಳ್ಳುವೆನೆಂದು ಯೋಚಿಸಿ ಹಾಗೆಯೇ ಇರುವನು. ಮತ್ತು ಎಲ್ಲರಿಗೂ ತನ್ನಲ್ಲಿ ಸೌಹಾರ್ದವಿದ್ದರೆ ತನ್ನ ಮತ್ತು ಕೃಷ್ಣನ ಗೋಜಿಗೆ ಅವರು ಬರಲಾರದೆಂದು ನೆನೆದು ತೃಪ್ತಿಯಾಗುವಂತೆ ಬಟ್ಟೆಬರೆ ದಾನಮಾಡಿರಬೇಕು. ಕೃಷ್ಣನಿಗೆ ಯೋಗ್ಯನಾದ ತಂದೆ ಇವನು" ಎಂದುಕೊಂಡು ಅದಕ್ಕೆ ತಕ್ಕಂತೆ ಅವನಿಗೆ ಸುಪ್ರಭಾತವನ್ನು ಹೇಳಿದಳು.

ಅಂಬರಮೇ ತಣ್ಣೀರೇ ಶೋರೇ ಅರಂ ಶೆಯ್ಯುಂ ಎಂ ಪೆರುಮಾ ನಂದ ಗೋಪಾಲಾ ಎೞುಂದಿರಾಯ್—ವಸ್ತ್ರವನ್ನೂ, ಶೀತೋದಕವನ್ನೂ, ಅನ್ನವನ್ನೂ ದಾನಮಾಡುವ, ನಮ್ಮಸ್ವಾಮಿಯಾದ ನಂದಗೋಪಾಲನೇ, ನಿನಗೆ ಸುಪ್ರಭಾತ.

ಅಂಬರಮೇ—ಪ್ರಪಂಚದಲ್ಲಿ ಎಲ್ಲರೂ ನೋಡುವುದು ಬಟ್ಟೆ. ಬಟ್ಟೆ ಚೆನ್ನಾಗಿದ್ದರೆ ಗೌರವಿಸುವರು.

ವಸ್ತ್ರೇಣ ವಪುಷಾ ವಾಚಾ ವಿದ್ಯಯಾ ವಿನಯೇನ ಚ ।
ವಕಾರಪಂಚಕೈರ್ಹೀನಃ ನರೋ ನಾಯಾತಿ ಗೌರವಂ ॥

ಎಂದಿರುವಂತೆ, ಎಲ್ಲರೂ ನೋಡುವುದು ಮೊದಲು ಬಟ್ಟೆ, ಆ ಮೇಲೆ ಅವನ ರೂಪು ಅದಾದಮೇಲೆ ಮಾತು, ವಿದ್ಯೆ ಕೊನೆಯದಾಗಿ ವಿನಯ. ಸಾಮಾನ್ಯ ಆಕರ್ಷಣಕ್ಕೆ ವಸ್ತ್ರ ಬೇಕು; ಕಲೆತು ಇರಬೇಕಾದರೆ ರೂಪ; ಸ್ನೇಹ ಬೆಳೆಯಬೇಕಾದರೆ ಮಾತು; ಸ್ನೇಹವು ಗೌರವವಾಗಬೇಕಾದರೆ ವಿದ್ಯೆ; ಸಹಬಾಳ್ವೆ ನಡೆಸಬೇಕಾದರೆ ವಿನಯ. ಅಂತೂ ಎಲ್ಲರನ್ನೂ ಮೊದಲು ಆಕರ್ಷಿಸುವುದು ಬಟ್ಟೆ. ಅದನ್ನು ಯಥೇಚ್ಛೆಯಾಗಿ ದಾನಮಾಡಿ ಎಲ್ಲರಿಗೂ ಪ್ರಿಯವಾದವನು ನಂದಗೋಪ.

ಭಾರತ ಮತ್ತು ಭಾಗವತದಲ್ಲಿ ನಂದಗೋಪನು ವಸ್ತ್ರದಾನಮಾಡಿದ ಪ್ರಸಂಗವೇ ಇಲ್ಲ. ಹಾಗಿದ್ದರೂ ಗೋದೆಯು ಹೇಳಿರುವಳು. ಅದನ್ನು ಏಕೆ ಹೇಳಬೇಕು? ಅದು ಒಂದು ದೊಡ್ಡ ವಿಷಯವೇ? ಹಾಗೆ ದಾನಮಾಡದಿದ್ದರೆ ಹೀಗೆ ಎಲ್ಲರಿಗೂ ಪ್ರಿಯವಾಗುತ್ತಿದ್ದನೇ ಎನ್ನುವುದೇ ಅವಳ ಊಹೆ. ಬರೀ ಬಟ್ಟೆಗಳನ್ನು ದಾನ ಮಾಡುತ್ತಿದ್ದುದು ಮಾತ್ರವಲ್ಲ, ಅದಕ್ಕಾಗಿ ಬೇರೇ ಮಂಡಿಯನ್ನೇ ಇಟ್ಟಿದ್ದ. **ಅಂಬರ ಮೇ** ಎಂದು "ಏ" ಕಾರದಿಂದ ಆ ಅರ್ಥ ಬರುತ್ತದೆ.

ಹಾಗೆಯೇ ತಣ್ಣೀರನ್ನೂ ದಾನಮಾಡುತ್ತಿದ್ದ. ಧನುರ್ಮಾಸದಲ್ಲಿ ಅದೂ ನೀರು ಸಮೃದ್ಧಿ ಇರುವ **ನಂದ** ಗೋಕುಲದಲ್ಲಿ ತಂಪಾದ ನೀರನ್ನು ದಾನಮಾಡುವ ಪ್ರಸಂಗವೇ ಇಲ್ಲದಿದ್ದರೂ ಹೀಗೆ ಏಕೆ ಹೇಳಿರುವಳು? ಯಾವ ವ್ಯಾಖ್ಯಾನಕಾರರೂ ಇದಕ್ಕೆ ಹೆಚ್ಚುಗಮನಕೊಟ್ಟಂತಿಲ್ಲ. ಇದು ಸಾಮಾನ್ಯ ವಿಷಯವೆಂದು ಉಪೇಕ್ಷಿಸಿರಬೇಕು. ಅನ್ನವನ್ನು ತೃಪ್ತಿಯಾಗಿ ಕೊಡುತ್ತಿದ್ದ **(ಶೋರೇ)**. ಅದರೊಡನೇ ಸುಗಂಧ ಪರಿಮಳ ಪ್ರಿಯ ನೀರನ್ನೂ ತೃಪ್ತಿಯಾಗುವ ರೀತಿಯಲ್ಲಿ ಕೊಡುತ್ತಿದ್ದ.

ಮುಖ್ಯವಾಗಿ ಇವನು ಬಹು ಉದಾರಿ. ಪ್ರಪಂಚದಲ್ಲಿ ಮುಖ್ಯವಾಗಿ ಎಲ್ಲರಿಗೂ ಬೇಕಾದದ್ದು ಅನ್ನ, ನೀರು ಮತ್ತು ಬಟ್ಟೆ. ಇಷ್ಟು ಇಲ್ಲದೆ ಜೀವಿಸಲೇ ಸಾಧ್ಯವಿಲ್ಲ. ಯಾರೂ ಕಷ್ಟಪಡದೆ ಜೀವಿಸಲು ಎಲ್ಲರಿಗೂ ಅನ್ನ, ನೀರು ಮತ್ತು ಬಟ್ಟೆ ವಸತಿಯನ್ನು ಏರ್ಪಡಿಸಿದ್ದ ನಂದಗೋಪ.

ಅಲ್ಲದೆ ಇವನು ಕೃಷ್ಣನ ತಂದೆಯಲ್ಲವೇ? ಕೃಷ್ಣ ಬಟ್ಟೆ ನೀರು ಮತ್ತು ಅನ್ನವನ್ನು ತನ್ನ ಭಕ್ತರಿಗೆ ಕೊಟ್ಟಪ್ರಸಂಗವು ನೆನಪಿಗೆ ಬಂದು, ತಂದೆಯ ಗುಣವೇ ಇವನಲ್ಲಿ ಬಂದಿರಬೇಕು ಎನ್ನುವುದೂ ಅವಳ ಊಹೆಯಾಗಿರಬೇಕು. ದ್ರೌಪದಿಯ ಮಾನಕಾಪಾಡಲು ಕೃಷ್ಣ ಅನಂತವಾಗಿ ಬಟ್ಟೆಗಳನ್ನುಕೊಟ್ಟ; ಭಾರತ ಯುದ್ಧದಲ್ಲಿ ನೀರಿಗೆ ಕಷ್ಟಬಂದಾಗ ಭೂಮಿಯಿಂದ ಗಂಗೆಯನ್ನು ಎಬ್ಬಿಸಿದ; ದೂರ್ವಾಸರ ಶಾಪಕ್ಕೆ ಅಂಜಿ ಇವನಲ್ಲೇ ಮೊರೆಯಿಟ್ಟ ದ್ರೌಪದಿಗೆ ನೆರವಾಗಿಬಂದು ಅವರೆಲ್ಲರ ಉದರವು ತಾನೇ ತುಳುಕಾಡುವಂತೆ ಮಾಡಿದ. ಈ ಮೂರು ನಿದರ್ಶನಗಳು ಅವನು ಪರಮಾತ್ಮನೆಂದು ತೋರಿಕೊಟ್ಟವು. ಅವನೇನೋ **ಎಂ ಪೆರುಮ್ಮಾ.** ಅಂತಹ ವನನ್ನು ನಮಗೆ ಕೊಡಲು ಮನಸ್ಸುಮಾಡಿದ ನಂದಗೋಪ ನಿಜವಾಗಿಯೂ **ಎಂ ಪೆರುಮ್ಮಾ** ನಮ್ಮ ಸ್ವಾಮಿ. ದಶರಥ ರಾಮ ಲಕ್ಷ್ಮಣರನ್ನು ಸ್ವಲ್ಪಕಾಲ ವಿಶ್ವಾಮಿತ್ರರಿಗೆ ಕೊಡಲು ಸಮ್ಮತಿಸಲೇ ಇಲ್ಲ. ವಸಿಷ್ಠರ ಬಲವಂತಕ್ಕೆ ಅವರನ್ನು ಕಳುಹಿಸಿಕೊಟ್ಟ. ಹಾಗೆಯೇ ನಮ್ಮ ಸ್ವಾಮಿ ನಂದಗೋಪ? ಅಲ್ಲ. ಸತ್ಯವಾಗಿಯೂ ಇವನೇ **"ಎಂಪೆರುಮ್ಮಾ".** ದಶರಥನಿಗೆ ರಾಮನಲ್ಲಿರುವುದಕ್ಕಿಂತಲೂ ನಂದಗೋಪನಿಗೆ ಕೃಷ್ಣನಲ್ಲಿ ಪ್ರೀತಿಯೇನೂ ಕಮ್ಮಿ ಇರಲಿಲ್ಲ. **"ಉಣ್ಣುಂ ಶೋರುಂ ಪರುಕು ನೀರ್ ತಿನ್ನುಂ ವೆತ್ತಲೈ ಎಲ್ಲಾಂ ಕಣ್ಣ"** ಎಂದು ಶತಗೋಪರು ಹೇಳಿಕೊಂಡಂತೆ ನಂದಗೋಪನಿಗೆ ಕೃಷ್ಣನೇ ಎಲ್ಲಾ. ಅಂತಹ ಪ್ರಿಯನಾದ ಕೃಷ್ಣನನ್ನು ನಮಗೆ ಕೊಡಲು ತಾನೇ ಮನಸ್ಸು ಮಾಡಲಿಲ್ಲವೇ? ಇವನಲ್ಲವೇ **"ಎಂಪೆರುಮ್ಮಾ."**

ಗೋದೆಯ ಅಂತರಂಗಕ್ಕೆ ಇಳಿದರೆ ವೇದಾಂತದ ಸಾರವನ್ನೇ **"ಅಂಬರಮೇ, ತಣ್ಣೀರೇ, ಶೋರೇ"** ಎನ್ನುವ ಮೂರು ಪದಗಳಿಂದ ಹೇಳಿರುವಳೆಂದು ಚೆನ್ನಾಗಿ ತೋರುವುದು. ಛಾ–ಉ–ನಲ್ಲಿ ಸದ್ವಿದ್ಯೆ ಎನ್ನುವ ಭಾಗವಿದೆ. ಅಲ್ಲಿ ಪರಮಾತ್ಮನನ್ನು "ಸತ್" ಎಂದು ಕರೆದು, ಅವನೇ ಜಗತ್ತಿಗೆ ಉಪಾದಾನ ಕಾರಣನೂ, ನಿಮಿತ್ತ ಕಾರಣನೂ ಎಂದು ಹೇಳಲಾಗಿದೆ. ಮಡಕೆಗೆ ಮಣ್ಣು ಉಪಾದಾನ ಕಾರಣ; ಕುಂಬಾರ ನಿಮಿತ್ತಕಾರಣ. ಪ್ರಪಂಚಕ್ಕೆ ಎರಡೂ ಇವನೇ. ಇವನೇ ಪ್ರಪಂಚವಾಗಿಯೂ, ಅದಕ್ಕೆ ಬೇರೆಯಾಗಿಯೂ ಇರುವನು. ಇವನು ಮೊದಲು ತೇಜಸ್ಸು, ನೀರು ಮತ್ತು ಅನ್ನವನ್ನು **"ತೇಜೋಬನ್ನ"** ಸೃಷ್ಟಿಸಿ ಅವಾಗಿ ನಿಂತನು. ಬಟ್ಟೆಯೇ ತೇಜಸ್ಸು ಕೊಡುವುದು. ತೇಜೋಬನ್ನವೇ ಅಂದರೆ

"ಅಂಬರಮೇ, ತಣ್ಣೀರೇ, ಶೋರೆ" ನಮಗೆ ಈಗ ಕೃಷ್ಣ. ಅಲ್ಲದೆ ಶ್ರುತಿಯು ಮುಂದೆ ಸಾಗಿ

ಅನ್ನಮಯಂ ಹಿ ಸೌಮ್ಯ ಮನಃ, ಆಪೋಮಯಃ ಪ್ರಾಣಃ, ತೇಜೋಮಯೀ ವಾಕ್

ಎಂದಿದೆ. ನಮ್ಮ ದೇಹದಲ್ಲಿ ನಮ್ಮ ಮನಸ್ಸು ಶಾಂತವಾಗಿ, ಕೃಷ್ಣ ಸಿಗುವನಲ್ಲಾ ಎನ್ನುವ ನಂಬಿಕೆಯಿಂದ ಪ್ರಾಣ ಬಂದು ವಾಕ್ ಸ್ವಾತಂತ್ರ್ಯ ಸಿಗುವಂತೆ ಮಾಡಿದವನು ನಂದಗೋಪ; ಅವನಲ್ಲವೇ ಅಂದರೆ ನಮಗೆ ತೇಜೋಬನ್ನನಾದ ಕೃಷ್ಣನನ್ನು ಕೊಟ್ಟು ಎಲ್ಲಾ ಸೌಭಾಗ್ಯಕ್ಕೆ ಕಾರಣನಾದವನಲ್ಲವೇ **"ಎಂ ಪೆರುಮ್ಮಾ"**

ಹೀಗೆ ನಂದಗೋಪನಿಗೆ ಸುಪ್ರಭಾತವನ್ನು ಹೇಳಿ ಮುಂದೆ ಯಶೋದೆಗೆ ಸುಪ್ರಭಾತ ಹೇಳುವಳು ಗೋದೆ.

ಗೋದೆಯ ಮನದಲ್ಲಿ ನಂದಗೋಪನ ವಿಷಯವಾಗಿ ತೋರಿದ ಊಹೆಗಳೆಲ್ಲಾ ಕಲ್ಪನೆ ಅಸಂಭವವೆಂದು ಹೇಳುವವರುಂಟು. ಇಲ್ಲಿರುವುದು ಚಿಕ್ಕ ವಯಸ್ಸಿನ ಕೃಷ್ಣ. ನಂದಗೋಪನ ನೆನಪಿನಲ್ಲಿ ಬಾಣಾಸುರ ವೃತ್ತಾಂತ, ಕೃಷ್ಣನು ಬಟ್ಟೆ, ನೀರು ಮತ್ತು ಅನ್ನವನ್ನು ಕೊಟ್ಟದ್ದು ಅವನ ಉತ್ತರ ವಯಸ್ಸಿನಲ್ಲಿ. ಅವು ಇಲ್ಲಿ ಅಸಂಗತವಾಗಿ ತೋರುವುದು ಸಹಜ. ಆದರೆ ಭಾವ ಬಂಧವಿರುವವರಿಗೆ ಇದು ಅಷ್ಟೇನೂ ಅಸಮಂಜಸವಲ್ಲ. ಸಾಮಾನ್ಯ ಜೀವನದಲ್ಲಿ ಕಾಲಮಾನಕ್ಕೆ ಹಿಂದು ಮುಂದುಂಟು. ಕೃಷ್ಣ ಭಾವದಲ್ಲಿ ತನ್ನನ್ನೇ ಮರೆತಿದ್ದರೂ, ಕೃಷ್ಣಾವತಾರದ ಎಲ್ಲಾ ಪ್ರಸಂಗಗಳೂ ಎದ್ದು ಕಣ್ಣುಮುಂದೆ ನಿಲ್ಲುತ್ತವೆ. ಆ ಭಾವದಲ್ಲಿ ಪ್ರಸಂಗಗಳ ಹಿಂದುಮುಂದಿಲ್ಲ. ಬಹು ಪ್ರಿಯವಾದದ್ದೇ ಮುಂದು, ಅದಕ್ಕೆ ಕಮ್ಮಿಯಾದದ್ದು ಹಿಂದು. ಇಲ್ಲಿ ಪ್ರೇಮವೇ ಅಳತೆ, ಕಾಲವಲ್ಲ. ಭಾವಬಂಧದ ಮಹಿಮೆಯೇ ಅದು. **ಪ್ರೇಮ ದೃಷ್ಟಿಯಿಂದ ಹೇಳಿದ ಮಾತುಗಳನ್ನು ಚಾರಿತ್ರಕ ದೃಷ್ಟಿಕೋಣದಿಂದ ನೋಡಕೂಡದು.** ವಟಪತ್ರಶಾಯಿ ದೇವನೇ ಕೃಷ್ಣನೆಂದೂ ತಾನು ಗೋಪಬಾಲಿಕೆಯಲ್ಲಿ ಅವನಿಗೆ ಬಹು ಪ್ರಿಯವಾದವಳೆಂದೂ, ತಾನಿರುವುದು ದ್ವಾಪರಯುಗ ಧನುರ್ಮಾಸ ಮತ್ತು ನಂದಗೋಕುಲದಲ್ಲಿಂದೂ ಭಾವವು ತುಂಬಿಬಂದು ನೋಡುವವರೆಗೆ ಹುಚ್ಚಳೆಂದು ಕಾಣುವಂತೆ ಮಾಡಿಸಿದ ಪ್ರೇಮಮಯ ಅಲೌಕಿಕ ವರ್ತನವೇ ಗೋದೆಯ ಭಾವ ಬಂಧ. ಅದರಲ್ಲಿ ನಂದಗೋಪನು ತನ್ನವನಂತೆ ಕಂಡಿದ್ದಲ್ಲದೆ, ನಂದಗೋಕುಲದವರೆಲ್ಲರೂ ಮುಖ್ಯವಾಗಿ ಯಶೋದೆ ಮತ್ತು ಬಲರಾಮರು ತನ್ನ ಆಪ್ತ ಬಂಧುಗಳೆಂದೂ ಕಂಡಿದ್ದೂ ಸ್ವಾಭಾವಿಕ.

ಕೊಂಬನಾರ್ಕೆಲ್ಲಾಂ ಕೊಮ್ಬುಂದೇ ಕುಲವಿಳಕ್ಕೇ ಎಂಪೆರುಮಾಟ್ಟಿ ಯಶೋದಾಯ್ ಅರಿರಾಯ್—ಹೆಂಗಸರಿಗೆಲ್ಲಾ ಮುಖ್ಯಳಾದವಳೇ, ಗೋಕು

ಲಕ್ಕೆ ದೀಪದಂತಿರುವವಳೇ, ನಮ್ಮೆಲ್ಲರಿಗೂ ನಾಯಕಿಯೆ, ನಿನಗೆ ಸುಪ್ರಭಾತ ಎಚ್ಚರವಾಗು.

ಕೊಂಬನಾರ್ಕ್ಕು—ಕೃಶೋದರಿಯರಾದ ಗೋಪಿಕಾಸ್ತ್ರಿಯರಿಗೆ **ಕೊಳ್ಗುಂದೇ** ಯಜಮಾನಿ; ಐದುಲಕ್ಷ ಗೋಪಿಯರಲ್ಲಿ ಯಾರಿಗೆ ಕಷ್ಟಬಂದರೂ ಅದು ಇವಳ ಮೊಖದಲ್ಲಿ ಕಾಣುತ್ತಿತ್ತು; ಸಂತೋಷವನ್ನು ಕಂಡರೂ ಹಾಗಾಗುತ್ತಿತ್ತು. ಕೌಸಲ್ಯೆ ದೇವಕಿಯರಿಗೆ ಹಾಗಾಗುತ್ತಿರಲಿಲ್ಲ. ಕೃಷ್ಣಪ್ರೇಮದಲ್ಲಿ ತೊಯ್ದು ನಿಂತಿದ್ದ ಅವಳು ಇವಳಿಗೆ ನಂದಾದೀಪವಾಗಿ ಕಂಡಳು. ನಂದುಗೋಪಾಲ **"ಎಂ ಪೆರುಮ್ಮಾ;"** ಇವಳು **"ಎಂ ಪೆರುಮಾಟ್ಟಿ"** "ನಂದಗೋಪನೇನೋ ಸಮ್ಮತಿಸಿರುವನು. ನೀನೂ ಕೃಷ್ಣನನ್ನು ನಮಗೆ ಕೊಡಲು ಮನಸ್ಸು ಮಾಡಬೇಕು; ಏಳು; ಎದ್ದರೆ ಮಾತ್ರ ಸಾಲದು; ದಾರಿತೋರಬೇಕು." ಆದ್ದರಿಂದಲೇ ಇವಳನ್ನು **"ಎೞುಂದಿರಾಯ್"** ಎನ್ನದೆ **"ಅರಿವುರಾಯ್"** "ಜ್ಞಾನದೃಷ್ಟಿಯಿಂದ ನೋಡು; ಆಗ ನಾವು ಕೃಷ್ಣ ಪ್ರೇಮದಲ್ಲಿ ಹೇಗೆ ತೊಯ್ದಿರುವೆ ವೆಂದೂ ನಿನಗೆ ತಿಳಿಯುವುದು; ನಮ್ಮಲ್ಲಿ ಕರುಣ ವಿಡುವಂತೆ ಮಾಡುವುದು."

ಇವಳೂ ಪ್ರಸನ್ನಳಾದಳು. ಕೃಷ್ಣನನ್ನು ಕಂಡಳು ಗೋದೆ. ತನಗೆ ನಿಧಿಯೇ ಸಿಕ್ಕಿತೆಂದು ಹಿಗ್ಗಿ ಅವನು ಮಲಗಿರುವ ರೀತಿಯಲ್ಲಿ ಇವನು ಪರದೈವವೆಂದು ಕಂಡು ಬಂದು ಅವನಿಗೆ ಸುಪ್ರಭಾತ ಹೇಳಿ ಎಬ್ಬಿಸುವಳು.

ಅಂಬರಮೂಡರತ್ತು ಓಂಗಿ ಉಲಗಳಂದ ಉಮ್ಬರ್ ಗೋಮಾನೇ ಉರಂಗಾದೆೞುಂದಿರಾಯ್—ಆಕಾಶದಲ್ಲಿ ಅಂಡಕಟಾಹವನ್ನು ತೂತುಮಾಡಿ ಎತ್ತರವಾಗಿ ಬೆಳೆದು, ಲೋಕಗಳನ್ನೆಲ್ಲಾ ಅಳೆದುಕೊಂಡ, ನಿತ್ಯ ಸೂರೀಶ್ವರನೇ ನಿದ್ದೆ ಮಾಡದೇ ಏಳು, ಇಲ್ಲಿ ವಾಮನ—ತ್ರಿವಿಕ್ರಮಾವತಾರವನ್ನೆಲ್ಲಾ ನೆನೆದುಕೊಳ್ಳುವಂತೆ ಮಾಡಿರುವಳು (3ನೇ ಪದ್ಯವನ್ನು ನೋಡಿ.) ಅಲ್ಲಿ ಇವನು **"ಉತ್ತಮ್ಮ"** ಇಲ್ಲಿ **"ಅಂಬರಮೂಡರತ್ತು . . . ಉಮ್ಬರ್ ಗೋಮ್ಮಾ** ವೇದ ಅದರಲ್ಲೂ ಋಗ್ವೇದದಲ್ಲಿ ಅನೇಕ ದೇವತೆಗಳ ವರ್ಣನೆಯಿದೆ. ಒಬ್ಬರ ಮಹಿಮೆ ಮತ್ತೊಬ್ಬರಲ್ಲೂ ಇರುವಂತಿದೆ. ಆದರೆ ವಿಶ್ವವನ್ನು ತನ್ನ ಮೂರು ಹೆಜ್ಜೆಯಿಂದ ಅಳೆದೆಕೊಂಡ ಕೀರ್ತಿ ಒಬ್ಬನಿಗೆ ಮಾತ್ರ ಸಂದಿದೆ.

ತದಸ್ಯ ಪ್ರಿಯಮಭಿಪಾಥೋ ಅಸ್ಯಾಂ; ನರೋ ಯತ್ರ ದೇವ
ಯವೋ ವಯಂತಿ; ಉರುಕ್ರಮಸ್ಯ ಸ ಹಿ ಬಂಧುರಿತ್ಥಾ
ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ ಋ–ಸಂ I, 154,5

ವಿಷ್ಣುದೇವನೊಬ್ಬನೇ ವಿಕ್ರಮಣ ಮಾಡಿದವನು; ಇವನು ತ್ರಿಮೂರ್ತಿಗಳಲ್ಲಿ ಒಬ್ಬನೆಂದು ಕಂಡರೂ ಈ ತ್ರಿವಿಕ್ರಮಣದಿಂದ ಮಿಕ್ಕ ಇಬ್ಬರಿಗಿಂತ ಹೆಚ್ಚಿನವನೆಂದು

ತೋರಿಕೊಂಡನು. ತ್ರಿವಿಕ್ರಮಾವತಾರ ಮಾಡಿದ್ದು ಬಲಿಚಕ್ರವರ್ತಿಗಾಗಿ. ಅದರಿಂದ ವಿಷ್ಣುವೇ ಪರದೈವವೆಂದು ಅವನಿಗೆ ಕಂಡಿತು.

ಶಂಖಚಕ್ರಗದಾಪದ್ಮೈರಂಕಿತಂ ಪಾದಪಂಕಜಂ ।
ಶರಚ್ಚಂದ್ರಪ್ರತೀಕಾಶನಖರಾಜಿವಿರಾಜಿತಂ ॥
ಶುರಾಸುರೈರ್ವಂದ್ಯಮಾನಂ ಋಷಿಭಿಶ್ಚಿಂತಿತಂ ಸದಾ ।
ಮೂರ್ಧಾನಂ ಮಾಮಕಂ ದೇವ ತಾವಕಂ ಮಂಡಯಿಷ್ಯತಿ ॥

ಎರಡು ಪಾದಗಳಿಂದ ಲೋಕಗಳನ್ನೆಲ್ಲಾ ಅಳೆದುಕೊಂಡು ಮೂರನೇ ಪಾದವನ್ನು ಎಲ್ಲಿಡಲಿ ಎಂದಾಗ ಹೇಳಿದ ಮಾತಿದು. ಇವನು ಕೊಟ್ಟಿರುವ ಲಕ್ಷಣಗಳು ಪರದೈವವನ್ನು ತೋಸಿಸುತ್ತವೆ. ಅದಕ್ಕಾಗಿಯೇ ಅವನ ಮೂರನೇ ಪಾದವನ್ನಿಡಲು ತನ್ನ ತಲೆಯನ್ನು ತೋರಿದ ಬಲಿ. ಶತ ಗೋಪರು ತನ್ನ ಯೋಗಾನುಭವದಲ್ಲಿ ತ್ರಿಮೂರ್ತಿಗಳಲ್ಲಿ ಯಾವನಿಗೆ ಔಜ್ವಲ್ಯವಿರುವುದೋ ಅವನೇ ಪರಮಾತ್ಮನೆಂದು ಹೇಳಿರುವರು.

ಒನ್ರೆನ ಪಲವೆನ ವರಿವರ ವಡಿವಿನುಳ್ ನಿನ್ರು ನನ್ರೆಲ್ಲಿಲ್
ನಾರಣ್ ನಾನ್ಮುಕ್ಕ ಅರ್ಕ ಎನ್ರುಮಿವರೈ ಒನ್ರ ನುಮ್ಮನತ್ತು
ವೈತ್ತು ನುಮ್ಮಿಶುಪಶೈ ಯರತ್ತು ನನ್ರೆನ ನಲಂ ಶೆಯ್ವದವನಿಡೈ
ನುಮ್ಮುಡೈ ನಾಳೀ ತಿ. ಮೊ I, 5,

ಎಂದೂ ಹಾಡಿರುವರು. ಶ್ರುತಿಯಲ್ಲಿ ತ್ರಿವಿಕ್ರಮಾವತಾರವೊಂದರಿಂದಲೇ ಪರತ್ವವು ಸ್ಥಾಪಿಸಲ್ಪಟ್ಟಿದೆ. ಆ ಮಂತ್ರಗಳನ್ನು ವಿಪರೀತವಾಗಿ ಅರ್ಥಮಾಡುವರೂ ಉಂಟು. ಬೃ-ಉ,ನಲ್ಲಿ ಈ ವಿಪರೀತಾರ್ಥಕ್ಕೇ ಅವಕಾಶವೇ ಇಲ್ಲ. ಅಲ್ಲಿ (VI, 4, 23) ಪರಮಾತ್ಮನನ್ನು ಶ್ರುತಿಯು

ಏಷ ಬ್ರಹ್ಮಲೋಕಃ ಸಮ್ರಾಟ್ ಇತಿ ಹೋವಾಚ ಯಾಜ್ಞವಲ್ಕ್ಯಃ

ಎಂದು ಯಾಜ್ಞವಲ್ಕ್ಯರ ಅಧಿಕಾರವಾಣಿಯಿಂದ ತೋರಿಸಿದೆ. ಆ ಪ್ರಕರಣದಲ್ಲಿ **"ಏಷಃ"** ಎನ್ನುವುದನ್ನು ಮೊದಲು ವಿವರಿಸಿ ಪರತ್ವವನ್ನು ಸ್ಥಾಪಿಸಿದೆ.

1) **ಪ್ರಾಣೇಂದ್ರಿಯಗಳಿಗೆ ಶಕ್ತಿ ಕೊಡುವವನು**
2) **ಅಕಾಮಃ ನಿಷ್ಕಾಮಃ ಆಪ್ತಕಾಮಃ ಆತ್ಮಕಾಮಃ ನ ತಸ್ಯ ಪ್ರಾಣಾ ಉತ್ಕ್ರಾಮಂತಿ, ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ**
3) **ಸಃ ವಿಶ್ವಸೃಕ್ ಸ ಹಿ ಸರ್ವಸ್ಯ ಕರ್ತಾ ತಸ್ಯ ಲೋಕಃ ಸ ಉ ಲೋಕ ಏವ**

4) ಪ್ರಾಣಸ್ಯ ಪ್ರಾಣಂ ಉತ ಚಕ್ಷುಷ ಶ್ಚಕ್ಷುಃ ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ವಿದುಃ ತೇ ನಿಚಿಖ್ಯುಃ ಬ್ರಹ್ಮ ಪುರಾಣ ಮಗ್ರ್ಯಂ (18)

5) ಮನಸ್ಯೇನಾನುದ್ರಷ್ಟವ್ಯಂ

6) ಸ ವಾ ಏಷಃ ಮಹಾನಜ ಆತ್ಮಾ ಯೋಯಂ ವಿಜ್ಞಾನಮಯಃ ಪ್ರಾಣೇಷು ಯ ಏಷಃ ಆಂತರ್ಹೃದಯೇ ಆಕಾಶಃ ತಸ್ಮಿನ್ ಶೇತೇ

7) ಸರ್ವಸ್ಯ ವಶೀ ಸರ್ವಸ್ಯೇಶಾನಃ ಸರ್ವಸ್ಯಾಧಿಪತಿಃ

8) ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಶಂತಿ ಯಜ್ಞೇನ ದಾನೇನ ತಪಸಾಽನಾಶಕೇನ

9) ಏತಮೇವ ಪ್ರವ್ರಾಜಿನೋ ಲೋಕಮಿಚ್ಛಂತಃ ಪ್ರವ್ರಜಂತಿ

10) ಏಷಃ ಬ್ರಹ್ಮಲೋಕಃ ಸಮ್ರಾಟ್

ಈ ಶ್ರುತಿ ವಾಕ್ಯಗಳಿಗೆ ಇತಿಹಾಸ ಪುರಾಣ ಉದಾಹರಣೆಗಳಿಂದ ಶುದ್ಧವಾಗಿ ಅರ್ಥ ಮಾಡಬೇಕು. ವೇದ ಮತ್ತು ಉಪನಿಷತ್ತುಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಕೊಟ್ಟಿರುವ ವ್ಯಾಸರೇ ಹಾಗೆ ಹೇಳಿರುವರು.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ವೇದಃ ಮಾಮಯಂ ಪ್ರತರಿಷ್ಯತಿ ॥

ಆ ಇತಿಹಾಸಪುರಾಣಗಳಲ್ಲಿ ಬಂದಿರುವ ವಿಶ್ವಚರಿತ್ರೆಯಲ್ಲಿ ತೋರುವ ಒಂದೇ ಒಂದಂಶವೆಂದರೆ ಬ್ರಹ್ಮನಿಗೂ ರುದ್ರನಿಗೂ ಕಷ್ಟವೊದಗಿದ್ದು, ವಿಷ್ಣುವಿಗೆ ಯಾವ ಕಷ್ಟವೂ ಬರದೇ ಇದ್ದುದು, ಬ್ರಹ್ಮರುದ್ರರ ಕಷ್ಟವನ್ನು ವಿಷ್ಣುವೇ ಪರಿಹರಿಸಿದ್ದು. ಆದರ ಆಧಾರದಮೇಲೆ

ಸ್ವರಕ್ಷಣೇಷ್ವಶಕ್ತಸ್ಯ ಕೋ ಹೇತುಃ ಪರರಕ್ಷಣೇ

ಎನ್ನುವ ನ್ಯಾಯದಂತೆ ವಿಷ್ಣುವೇ ಪರಮಾತ್ಮಾ ಅವನೇ ಬ್ರಹ್ಮವೆಂದು ಉಪನಿಷತ್ತು ಹೇಳುವ ದೈವವೆಂದು ನಿರ್ಧರಿಸಬೇಕು. ಅದಕ್ಕಾಗಿಯೇ ಭೀಷ್ಮರು ಶ್ರೀಕೃಷ್ಣನನ್ನು ಕುರಿತು

ರಾಜಾಧಿರಾಜಸ್ಸರ್ವೇಷಾಂ ವಿಷ್ಣುರ್ಬ್ರಹ್ಮಮಯೋ ಮಹಾ ।
ಈಶ್ವರಂ ತಂ ವಿಜಾನೀಮಃ ಸ ಪಿತಾ ಸ ಪ್ರಜಾಪತಿಃ ॥

ಎಂದಿರುವರು. ಈ ರಾಜಾಧಿ ರಾಜತ್ವವೂ, ಈಶ್ವರತ್ವವೂ ಕಂಡಿದ್ದು ತ್ರಿವಿಕ್ರಮಾವತಾರದಲ್ಲಿ. ಅದನ್ನು ನಿಗಮಾಂತದೇತಿಕರು ವರ್ಣಿಸುವಾಗ

ನಿಮ್ನೋನ್ನತವಿಭಾಗಾನಾದರೇಣ ಸರ್ವೇಷಾಂ ಶಿರಸಿ ಕೃತಪದನ್ಯಾಸತ್ವಂ

ಎಂದಿರುವರು. ಯಾಮುನಾಚಾರ್ಯರೂ

ಕದಾ ಪುನ ಶ್ಶಂಖರಥಾಂಗಕಲ್ಪಕಧ್ವಜಾರವಿಂ-
ದಾಂಕುರವಜ್ರಲಾಂಛನಂ ।
ತ್ರಿವಿಕ್ರಮ ತ್ವಚ್ಚರಣಾಂಬುಜದ್ವಯಂ
ಮದೀಯಮೂರ್ಧಾನಮಲಂಕರಿಷ್ಯತಿ ॥

(ಸ್ತೋ–ರ–31)

ಎಂದು ಪ್ರಾರ್ಥಿಸಿರುವರು. ಮಹಾಭಾರತದಲ್ಲಿ ಭೀಷ್ಮರು ಶರತಲ್ಪದಲ್ಲಿ ಮಲಗಿರುವಾಗ ಧರ್ಮನಂದನನಿಗೆ ಸಹಸ್ರನಾಮವನ್ನು ಉಪದೇಶಿಸಿದರು. ಪರಮಾತ್ಮನನ್ನು ಮೊದಲು "ವಿಶ್ವಂ" ಎಂದು ಉಪದೇಶಿಸಿ ಅನಂತರ "ವಿಷ್ಣು" ಎಂದು ಉಪದೇಶಿಶಿದರು. "ವಿಶ್ವಂ" ಎಂದರೆ ಪರಮಾತ್ಮನು ಪ್ರಪಂಚರೂಪದಲ್ಲಿರುವವನೆಂದರ್ಥವಲ್ಲ. "ಅಶು, ಪ್ರಶಿ, ಲಟಿ, ಕಟಿ, ಖಟಿ, ವಿಶಿಭ್ಯಃ ಕ್ವನ್" ಎನ್ನುವ ವ್ಯಾಕರಣ ನಿಯಮದಂತೆ "ವಿಶ್–ಪ್ರವೇಶನೇ" ಎನ್ನುವ ಕ್ರಿಯಾಪದಕ್ಕೆ "ಸರ್ವಾವಯವದಲ್ಲೂ ಪ್ರವೇಶಿಸುವುದು" ಎನ್ನುವ ಅರ್ಥ ಕೊಡಲು "ವ" ಪ್ರತ್ಯಯವು ಸೇರಿ "ವಿಶ್ವ" ಪದವಾಗಿದೆ. ಪರಮಾತ್ಮ ಪೂರ್ಣ ಆದ್ದರಿಂದ ವಿಶ್ವ. ಈ ಅರ್ಥವನ್ನು ಗೋದೆಯು (1) ಅಂಬರ ಮೂಡರತ್ತು (2) ಉಂಬರ್‌ಗೋರ್ಮಾ ಎನ್ನುವ ಎರಡು ವಿಶೇಷಣಗಳಿಂದ ತಿಳಿಸಿರುವಳು. ಬ್ರಹ್ಮಾಂಡದಲ್ಲಿ ಬ್ರಹ್ಮ ರುದ್ರರು ವಿಷ್ಣುವಿಗೆ ಸಮನಾಗಿ ಕಂಡರೂ ಅಂಡ ಕಟಾಹವನ್ನು ಛೇದಿಸಿದವನು ವಿಷ್ಣುವೆಂದೇ ಋಗ್ವೇದ ಮಂತ್ರದಿಂದ ತಿಳಿಯುವುದರಿಂದ ಅವನೇ ಪರಮಾತ್ಮ ಎಂದು ಅವಳು ಸಂಗ್ರಹವಾಗಿ ತಿಳಿಸಿರುವಳು.

ಇಲ್ಲಿ ಶ್ರೀಕೃಷ್ಣನನ್ನು ಎಬ್ಬಿಸುವಂತೆ ಅರ್ಥಮಾಡುವುದು ಸರಿಯಲ್ಲ; ಅವನ ಅನುಬಂಧಿಗಳನ್ನು ಎಬ್ಬಿಸಿಯಾದಮೇಲೆ ಅವನನ್ನು ಎಚ್ಚರಗೊಳಿಸುವುದೇ ಉಚಿತ; ಅಲ್ಲದೆ 22ನೇ ಪಾಶುರದಲ್ಲಿ ಪರಮಾತ್ಮನು ಮಂಚದಮೇಲೆ ಮಲಗಿರಲು ರಾಜಾಧಿರಾಜರು ಅವನ ಪಾದದ ಕೆಳಗೆ ಸೇವೆಮಾಡುತ್ತಿರುವಂತೆ ಹೇಳಿದೆ—ಎಂದು ಆಕ್ಷೇಪಿಸಿದರೆ ಆಗ

ಅಂಬರಮೂಡರತ್ತು–ಓಂಗಿ–ಉಲಗಳಂದ–ಉಂಬರಕೋ

ಅಂದರೆ ಶ್ರೀಕೃಷ್ಣ; ಅವನನ್ನು ಧನವಾಗಿಯುಳ್ಳವನು "ಕೋರ್ಮಾ." ತಮಿಳಿನಲ್ಲಿ "ಕೋ" ಎಂದರೆ ಪ್ರಭು. ಧೀರ್ಮಾ, ಧನವಾ ಎನ್ನುವಂತೆ "ಕೋರ್ಮಾ" ಅಂದರೆ "ಪರಮಾತ್ಮನಾದ ಶ್ರೀಕೃಷ್ಣನನ್ನೇ ನಿಧಿಯಾಗಿಯುಳ್ಳ ಬಲರಾಮನೇ ನಿದ್ದೆಯಿಂದ ಎದ್ದೇಳು." ಅವನು ಏಳದಿರಲು

ಶಂಪೊ ಕೞಲಡಿ ಚ್ಚೆಲ್ವಾ ಬಲದೇವಾ ಉಮ್ಬಿಯುಂ ನೀಯುಂ ಉರಂಗು ಎಂದಳು. ಕೆಂಪಾದ ರಮ್ಯವಾದ ಪಾದಭೂಷಣ ವೀರಗೊಲಸುಳ್ಳ ಬಲರಾಮನೇ ನಿನ್ನ ತಮ್ಮನೂ ನೀನೂ ಏಳಿರಿ. ಈ ಅರ್ಥವನ್ನೇ ಊರ್ಜಿತಗೊಳಿಸಿದರೆ ಆಗ **" ಅಂಬರಮೂಡರತ್ತು "** ಎನ್ನುವುದಕ್ಕೆ " ಅಂಬು = ಸಮಷ್ಟಿಜಲದ, ಅರಂ = ಬಾಗಿಲಿನ, ಊಡು = ಮಧ್ಯ ಭಾಗವನ್ನು ಅರತ್ತು = ಕತ್ತರಿಸಿ " ಎಂದು ಅರ್ಥವನ್ನೂ ಹೇಳಬಹುದು.

ಹೀಗೂ ಹೇಳುವುದುಂಟು. ಮೊದಲು ಕೃಷ್ಣನನ್ನು ಎಬ್ಬಿಸಲೆಂದೇ ಸುಪ್ರಭಾತ ಹೇಳಿದಳು. ಅವನು ಏಳಲಿಲ್ಲ " ನನ್ನ ಅಣ್ಣನನ್ನು ಎಬ್ಬಿಸದೇ ನಾನು ಏಳುವುದೆಂತು ? ದೊಡ್ಡವರಿಗೆ ಮಂಗಳಾಶಾಸನಮಾಡಿಯಾದಮೇಲೆ ಚಿಕ್ಕವರನ್ನು ಎಬ್ಬಿಸಬೇಕು." ಎಂದು ನೆನೆದು ಕೃಷ್ಣನು ಏಳಲಿಲ್ಲವೇನೋ ಎಂದು ಊಹಿಸಿ " ಬಲದೇವ, ನೀನು ಆದಿಶೇಷ, ನಾನಾರೂಪದಲ್ಲಿ ಪರಮಾತ್ಮನ ಸೇವೆ ಮಾಡುತ್ತಿರುವ ಮಹಾನುಭಾವ; ಕೈಂಕರ್ಯ ಲಕ್ಷ್ಮೀ ನಿನಗೆ ಮಿಾಸಲು ; ದೇವಕೀ ಗರ್ಭದಲ್ಲಿ ಮೊದಲು ನೀನು ಕಾಲಿಟ್ಟು ಅದನ್ನು ಶುದ್ಧಿಮಾಡಿದೆ. ಇಲ್ಲದಿದ್ದರೆ ಮೊದಲಿನ 6 ಮಕ್ಕಳಗತಿಯೇ ಪರಮಾತ್ಮನಿಗೆ ಬರುತ್ತಿತ್ತು. ನೀನು ಮೊದಲು ಏಳು ನೀನು **" ಶಂ–ಪೊ–ಕೞಲ್ ಅಡಿಚ್ಚೆಲ್ವ್ "** –ಅನಂತರ ನಿನ್ನ ತಮ್ಮನನ್ನು ಎಬ್ಬಿಸಿಕೊಡು . . . **ಏಲೋರ್ ಎಂ ಪಾವಾಯ್**

ಸ್ವಾಪದೇಶ

ಹಿಂದಿನ ಪಾಶುರದಲ್ಲಿ ಬ್ರಹ್ಮಾನುಭವಕ್ಕೆ ಯಾವಾಗಲೂ ಒದಗುವ ತೊಂದರೆಗಳನ್ನು ಹೋಗಲಾಡಿಸಲು ಆಚಾರ್ಯರನ್ನು ಪ್ರಾರ್ಥಿಸಿಯಾಯಿತು. ಅವರ ಕೃಪೆಯಿಂದ ಮೂಲಮಂತ್ರವೂ ಅದು ಸಿದ್ಧಿಸಿದಮೇಲೆ ಪರಮಾತ್ಮನೂ ಪ್ರಸನ್ನನಾಗುವನೆನ್ನುವವರ್ಥವು ಇಲ್ಲಿ ಹೇಳಲಾಗುತ್ತದೆ.

ಅಂಬರಮೇ—" ಓಂ ನಮೋ ನಾರಾಯಣಾಯ " ಎನ್ನುವ ಮೂಲಮಂತ್ರದಲ್ಲಿ ಪ್ರಣವವನ್ನು ಸ್ತ್ರೀಯರು ಉಚ್ಚರಿಸಕೂಡದೆಂದು ಶಾಸ್ತ್ರವಿದೆ. ಇದಕ್ಕೆ ಕಾರಣ ಅವರು ಉತ್ತಮ ಜೀತನರೆನ್ನುವುದೇ. ಪ್ರಣವದಲ್ಲಿ " ಅ, ಉ, ಮತ್ತು ಮ " ಕಾರವಿವೆ. ಉಕಾರವು ಲಕ್ಷ್ಮೀವಾಚಕ. ಸ್ತ್ರೀಯರೆಲ್ಲರೂ ಲಕ್ಷ್ಮೀಸ್ವರೂಪಿಣಿಯರಾದ್ದರಿಂದ ಆ " ಉ " ಕಾರವನ್ನು ಉಚ್ಚರಿಸುವ ಪ್ರಸಂಗವೇ ಇಲ್ಲ, ಅದಕ್ಕಾಗಿಯೇ ಹಾಗೆ ಹೇಳಲಾಗಿದೆ. ಪುರುಷರೆಲ್ಲರಿಗೂ ಪರಮಾತ್ಮ ಭಕ್ತಿಯಲ್ಲಿ ಸ್ತ್ರೀ ಭಾವ ಬರುವುದು ಒಂದು ಪುಣ್ಯವಿಶೇಷದಿಂದ. ಆದ್ದರಿಂದ ಪರಮಾತ್ಮನ ಭಕ್ತಿಯಲ್ಲಿ ತೊಯ್ದವರೆಲ್ಲರಿಗೂ " ಅಂ ನಾರಾಯಣ " ಎನ್ನುವುದೇ ಮಂತ್ರವಾಗುತ್ತದೆ. **" ಅಂ**

ಪರಮೇ " ಎಂದರೆ " ಪರಮಾತ್ಮನಿಗೆ ನಾವೆಲ್ಲರೂ ಶೇಷಭೂತರು ಎನ್ನುವ ತತ್ವವನ್ನೂ.

ತಣ್ಣೀರೇ—ಆ ಪರಮಾತ್ಮನೇ ಸಮಷ್ಟಿ ಜಲ ರೂಪದಲ್ಲಿದ್ದು ಜೀವರು ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ, **ಹಿತ** ಅಂದರೆ ಮೋಕ್ಷಕ್ಕೆ ಕಾರಣನು ಎಂದೂ,

ಶೋರೇ—" ಅಹಮನ್ನ ಮಹೆಮನ್ನ ಮಹಮನ್ನಂ " ಎಂದು ತೈತ್ತರೀಯೋಪನಿಷತ್ತು ಹೇಳಿರುವಂತೆ ಅವನೇ ಪುರುಷಾರ್ಥವೆಂದೂ

ಅರಂ ಶೆಯ್ಯುಂ—ಧರ್ಮೋಪದೇಶ ಮಾಡುವ

ನಂದಗೋಪಾಲಾ—ನಂದತಿ, ನಂದಯತಿ, ಗೋಪತಿ, ಗಾಂಪಾತಿ–ಎನ್ನುವ ವರ್ಥಕೊಡುವ ನಂದಗೋಪಾಲ ಶಬ್ದ ವಾಚ್ಯನೇ

ಎೞುಂದಿರಾಯ್—ತಮ್ಮ ಸಮಾಧಿಯಿಂದ ಹೊರ ಮುಖರಾಗಬೇಕು ತಾವು

ಎಂಬೆರುಮಾ—ಸರ್ವೋಪಕಾರಕರು, ಆನಂದ ಸ್ವರೂಪರು, ವೇದರಕ್ಷಕರು ಪರಮಾತ್ಮನಂತೆ

ಕೊಂಬ . . . ಅರಿವುರಾಯ್—ಸ್ತ್ರೀಯರು ಕೃಶೋದರಿಯರಂತೆ, ಮೂಲಮಂತ್ರವು ಸಕಲವೇದಾರ್ಥ ಸುಂದರವಾದ ಸ್ವಲ್ಪ ಅಕ್ಷರವುಳ್ಳಮಂತ್ರ. " ಆಚಾರ್ಯರಿಂದ ಉಪದೇಶಿಸಲ್ಪಟ್ಟ ಮೂಲಮಂತ್ರವೇ, ಪ್ರಸನ್ನವಾಗು "

ಮಂತ್ರಾಣಾಂ ಪರಮೋ ಮಂತ್ರಃ ಗುಹ್ಯಾನಾಂ ಗುಹ್ಯಮುತ್ತಮಂ ।
ಪವಿತ್ರಂ ಚ ಪವಿತ್ರಾಣಾಂ ಮೂಲಮಂತ್ರ ಸ್ಸನಾತನಃ ॥

ಎಂದು ನಾರದೀಯ ಸಂಹಿತೆಯೂ (I, 11)

ಭೂತ್ವೋರ್ಧ್ವಬಾಹುರತ್ರಾದ್ಯ ಸತ್ಯಪೂರ್ವಂ ಬ್ರವೀಮಿ ತೇ
ಹೇ ಪುತ್ರ ಶಿಷ್ಯಾಃ ಶೃಣುತ ನ ಮಂತ್ರೋಽಷ್ಟಾಕ್ಷರಾತ್ಪರಃ

ಎಂದು ನರಸಿಂಹ ಪುರಾಣವೂ (18–32) ಹೇಳಿರುವಂತೆ ಮೂಲಮಂತ್ರಕ್ಕೆ ಸಮನಾದುದು ಯಾವ ಮಂತ್ರವೂ ಇಲ್ಲ. ಅಲ್ಲದೆ ಪೆರಿಯ ತಿರುಮೊೞಿಯಲ್ಲಿ (I, 1, 9) **" ಕುಲಂ ತರುಂ ಶೆಲ್ವಂ ತಂದಿಡುಂ "** ಎಂದಿರುವಂತೆ ಈ ಮಂತ್ರವೇ **" ಕುಲವಿಳಕ್ಕು "** ಈ ಮಂತ್ರ ದೇವತೆಯು ಸ್ತ್ರೀಯಾಗಿರುವುದರಿಂದ **" ಎಂಪೆರುಮಾಟ್ಟಿ "** **" ತಸ್ಯ ನಾಮ ಮಹದ್ಯಶಃ "** (ತೈ–ನಾ) ಎಂದು ಶ್ರುತಿಯು ಹೇಳಿರುವಂತೆ ಪರಮಾತ್ಮನಿಗೆ " ಯಶಸ್ " ಎಂದೂ ಹೆಸರುಂಟು. ಅವನನ್ನು ನಮಗೆ ಕೊಡುವುದು ಮೂಲಮಂತ್ರ ; ಆದ್ದರಿಂದ ಅದು **" ಯಶೋದಾಯ್ "**

ಹೀಗೆ ಆಚಾರ್ಯನನ್ನೂ, ಮೂಲಮಂತ್ರವನ್ನೂ ಪ್ರಾರ್ಥಿಸಿಯಾದ ಮೇಲೆ ಮುಂದಿನ ವಾಕ್ಯದಿಂದ ಮಂತ್ರಾರ್ಥವು ಪ್ರಸನ್ನವಾಗುವಂತೆ ಪ್ರಾರ್ಥಿಸಲಾಗಿದೆ.

ಅಂಬರ . . . ಎೞುಂದಿರಾಯ್—ವಾಮನನು ಪರಮಾತ್ಮ; ವಿಶ್ವವು ಅವನ ಉದರದಲ್ಲಿದೆ; ಇವನೇ ಪ್ರಣವ ಸ್ವರೂಪ; ಅದರಲ್ಲಿ ಸಕಲಾರ್ಥವೂ ಅಡಗಿದೆ; ಪ್ರಣವ ವಾಚ್ಯನೇ ನಾರಾಯಣ; **"ನಾರಾಯಣ ಏವೇದಂ ಸರ್ವಂ"** ಎಂದು ಉಪನಿಷತ್ತು ಹೇಳುತ್ತಿರುವಂತೆ ವಾಮನನೇ ತ್ರಿವಿಕ್ರಮನಾಗಿ ವಿಶ್ವವನ್ನು ಅಳೆದನು; ತ್ರಿವಿಕ್ರಮನಾಗಿ ಬಲಿಯನ್ನು ಅಡಗಿಸಿದನು; **"ನಮಃ"** ಶಬ್ದವು ನಮ್ಮ ಅಹಂಕಾರ ಮಮಕಾರಗಳನ್ನು ಅಡಗಿಸುವುದು; ಆದ್ದರಿಂದ ತ್ರಿವಿಕ್ರಮನೇ ಮೂಲ ಮಂತ್ರಾರ್ಥ; "ಮಂತ್ರಾರ್ಥವೇ ಪ್ರಸನ್ನವಾಗು"

ಶೆಂಪೊ . . . ಉರಂಗು—"ಮೂಲ ಮಂತ್ರಾರ್ಥಸಾರವೇ ನೀನು ಅರ್ಥ ದೊಡನೆ ನನ್ನಲ್ಲಿ ಜಾಗೃತವಾಗು." ಭಗವತ್ಕೈಂಕರ್ಯವೇ ಮೂಲಮಂತ್ರಾರ್ಥ; ಇದಕ್ಕೆ ಮಿಗಿಲಾದುದು ಯಾವುದೂ ಇಲ್ಲ. ತಿರುಮಂಗೈ ಆೞ್ವಾರ್ರು ತನ್ನ ಪೆರಿಯ ತಿರುಮೊೞಿಯಲ್ಲಿ (VIII, 10, 3) ಹೀಗೆ ಹಾಡಿರುವರು.

ಮತ್ತುಮೋರ್ ದೈವಮುಳದೆನ್ರಿರುಪ್ಪಾರೋ
ಡುತ್ತಿಲೀನುತ್ತದು ಮುನ್ನಡಿಯಾರ್ಕಡಿಮೈ
ಮತ್ತೆಲ್ಲಾಂ ಪೇಶಿಲುಂ ನಿ ತಿರುವೆಟ್ಟೆೞುತ್ತುಂ
ಕತ್ತು ನಾ ಕಂಡ ಪುರತ್ತುರೈ ಮುಮ್ಮಾನೇ—

ಉಂದು ಮದಕಳಿತ್ತ ಓಡಾದ ತೋಳ್ ವಲಿಯ್
ನಂದಗೋಪಾರ್ಕ ಮರುಮಗಳೇ ನಪ್ಪಿನ್ನಾಯ್
ಕಂದಂ ಕಮೞುಂ ಕುೞಲೀ ಕಡೈ ತಿರವಾಯ್
ವಂದೆಂಗುಂ ಕೋೞಿ ಯಳೈತ್ತನ ಕಾಣ್ ಮಾದವಿ
ಪಂದಲ್ ಮೇಲ್ ಪಲ್ ಕಾಲ್ ಕುಯಿಲಿನಂಗಳ್ ಕೂವಿನ ಕಾಣ್
ಪಂದಾರ್ವಿರಲಿ ಯ್ಯು ಮ್ಮೈತ್ತುನನ್ ಪೇರ್ ಪಾಡ
ಶೆಂತಾಮರೈಕ್ಕೈಯಾಲ್ ಶೀರಾರ್ವಳೈಯೊಲಿಪ್ಪ
ವಂದು ತಿರವಾಯ್ ಮಕಿೞ್ನ್ದೇಲೋರೆಂಪಾವಾಯ್ ॥ ೧೪ ॥

ಇಲ್ಲಿಂದ ಮುಂದಿನ ಮೂರು ಪದ್ಯಗಳಲ್ಲಿ ನೀಳಾದೇವಿಯು ಎಬ್ಬಿಸಲ್ಪಡುವಳು. ನಂದಗೋಪ, ಯಶೋದೆ ಮತ್ತು ಬಲರಾಮರು ಕೃಷ್ಣನಿಗೆ ಅನುಬಂಧಿಗಳು ಮತ್ತು ಪ್ರಿಯರಾದವರಾದರೆ ಶ್ರೀಕೃಷ್ಣನಲ್ಲಿಗೆ ನಮ್ಮನ್ನು ಒಯ್ಯುವರು, ಅವನು ನಮ್ಮನ್ನು ಒಪ್ಪುವಂತೆ ಮಾಡುವರು ಮತ್ತು ಅವನಿಗೂ ಬಹು ಪ್ರಿಯರಾಗಿರುವವರು ಮೂರು

ದೇವಿಯರೇ. ಶ್ರೀ, ಭೂ, ನೀಳಾದೇವಿಯರಾದವಿವರು ಪುರುಷಕಾರರು. ಪುರುಷ ಸೂಕ್ತದಲ್ಲಿ ಪುರುಷಕಾರರಾದ ಈ ಮೂವರಲ್ಲಿ ಶ್ರೀ ಮತ್ತು ಭೂ ದೇವಿಯರನ್ನು ಮಾತ್ರ "ಪತ್ನೀ" ಎಂದು ಹೇಳಲಾಗಿದೆ. **"ಪತ್ಯುರ್ನೋ ಯಜ್ಞಸಂಯೋಗೇ"** (ಪಾ. IV, 1, 33) ಎನ್ನುವ ವ್ಯಾಕರಣ ನಿಯಮದಂತೆ ಪತಿ ಎಂದರೆ ಪ್ರಭು ವಾದವನಿಗೆ ಅವನು ಒಳ್ಳೆ ಕೆಲಸಗಳಲ್ಲಿ ಅನ್ವಯಿಸುವವರನ್ನು ತಿಳಿಸಲು "ಪತಿ" ಎನ್ನುವ ಶಬ್ದಕ್ಕೆ "ನ್" ಪ್ರತ್ಯಯವನ್ನು ಸೇರಿಸಬೇಕು. ಅಂದರೆ **"ಪುರುಷಕಾರ ರಾಧವರನ್ನು ವೇದವು "ಪತ್ನೀ" ಎಂದಿರುತ್ತದೆ.** "ಹ್ರೀಶ್ಚತೇಲಕ್ಷ್ಮೀಶ್ಚ ಪತ್ನ್ಯೌ" ಎನ್ನುವ ಪುರುಷಸೂಕ್ತ ಮಂತ್ರದಿಂದ "ಹ್ರೀ" ಎಂದರೆ ಭೂದೇವಿ, ಮತ್ತು ಲಕ್ಷ್ಮೀ ಎಂದರೆ "ಶ್ರೀ"; ಈ ಇಬ್ಬರು ದೇವಿಯರು ಪುರುಷಕಾರರು. ಇವರಿಬ್ಬರಲ್ಲಿ ನಾವು ಶರಣು ಹೋಗಿ ಅವರ ಅನುಗ್ರಹದಿಂದ ಮಾತ್ರ ಪರಮಾತ್ಮನಿಗೆ ಒಪ್ಪಿಗೆಯಾಗುವೆವು. ಹೀಗಿದ್ದರೂ ನೀಳಾದೇವಿಯನ್ನು ಪ್ರಧಾನ ಪುರುಷಕಾರ ಳೆನ್ನಾಗಿ ಭಾವಿಸಿ ಮೂರುಪದ್ಯಗಳಲ್ಲಿ ಅವಳನ್ನು ಎಬ್ಬಿಸಿ ಪ್ರಾರ್ಥಿಸುವಳು ಗೋದೆ. ಅಲ್ಲದೆ ಈ ತಿರುಪ್ಪಾವೈ 30 ಪದ್ಯಗಳಲ್ಲಿ ಈ 18ನೇ ಪದ್ಯವು ರಾಮಾನುಜನಿಗೆ ಬಹು ಪ್ರಿಯವಾದುದು. ಅದಕ್ಕಾಗಿಯೇ ಇವರ ಜ್ಞಾನಪುತ್ರರೂ ಮುಂದಿನ ಆಚಾರ್ಯರೂ ಆದ ಪರಾಶರಭಟ್ಟರು ಮಂಗಳ ಪದ್ಯದಲ್ಲಿ ಇವಳನ್ನೇ ಪ್ರಧಾನವಾಗಿ ಹೇಳಿರುವರು. ಅಲ್ಲದೇ ಶಠಗೋಪರೇ ಮೊದಲಾದ ಆೞ್ವಾರ್ರುಗಳು ಶ್ರೀ ಮತ್ತು ಭೂ ದೇವಿಯರಿ ಗಿಂತಲೂ ನೀಳಾದೇವಿಯನ್ನೇ ಹೆಚ್ಚಾಗಿ ಸ್ತೋತ್ರಮಾಡಿರುವರು. ತಮಿಳಿನಲ್ಲಿ ಇವಳು "ನಪ್ಪಿನ್ನೈಪಿರಾಟ್ಟಿ" ಇವಳ ಸ್ವರೂಪವನ್ನು 18ನೇ ಪದ್ಯದಲ್ಲೂ, ರೂಪ ಲಾವಣ್ಯಾದಿಗಳನ್ನು 19ರಲ್ಲೂ ಮತ್ತು ಗುಣಗಳನ್ನು 20 ರಲ್ಲೂ ಸಂಗ್ರಹವಾಗಿ ಹೇಳಿ, "ನೀಳಾ ತತ್ವ" ವೆಂದರೆ ಯಾವುದೆಂದು ಗೋದೆಯು ನಮಗೆ ತಿಳಿಸಿರುವಳು.

ಪುರುಷಕಾರರಲ್ಲಿ ಶ್ರೀದೇವಿಯೇ ಪ್ರಧಾನ. ವೇದದಲ್ಲಿ ಶ್ರೀಸೂಕ್ತ, ಶ್ರದ್ಧಾ ಸೂಕ್ತ, ಮೇಧಾಸೂಕ್ತ, ಉತ್ತರ ನಾರಾಯಣ [illegible]ಕೌಶೀತಕೀ ಬ್ರಾಹ್ಮಣ ಮೊದಲಾ ದುದು ಇವಳ ಮಹಿಮೆಯನ್ನು ಹೇಳುತ್ತಿವೆ. ಸ್ಮೃತಿಗಳಲ್ಲಿ ಮಹಾಭಾರತ, ಬ್ರಾಹ್ಮ ಪುರಾಣ, ಅಹಿರ್ಬುಧ್ನ್ಯಸಂಹಿತೆ ಮೊದಲಾದುವು ಸಾಮಾನ್ಯವಾಗಿ ಹೇಳಿರುವುದನ್ನು ವಿಷ್ಣುಪುರಾಣವು ಬಹು ವಿಸ್ತಾರವಾಗಿ ಹೇಳಿ ಅವಳನ್ನು ಕೊಂಡಾಡಿದೆ. ಕೊಂಡಾ ಡಿರುವುದಲ್ಲದೆ ಅವಳ ಸ್ವರೂಪ, ರೂಪ, ಗುಣ, ವಿಭೂತಿಗಳನ್ನು ಹೇಳಿದೆ. ಇದರಲ್ಲಿನ

ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃಶ್ರೀರನಪಾಯಿನೀ ।
ಯಥಾ ಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ ॥

ಎನ್ನುವ ಶ್ಲೋಕವೂ, ಬ್ರಾಹ್ಮಪುರಾಣದ

ಪ್ರಾಣಾಖ್ಯಾ ಮಂತ್ರಮಾತಾ ಚ ವಿಶ್ವಸ್ಯ ಜನನೀ ಧ್ರುವಾ
ಭಗವದ್ವಾಸುದೇವಸ್ಯ ನಿತ್ಯೈವೈಷಾಽನಪಾಯಿನೀ ।
ಏಕೈವ ವರ್ತತೇ ಭಿನ್ನಾ ಜ್ಯೋತ್ಸ್ನೇವ ಹಿಮದೀಧಿತೇಃ ॥
ತಸ್ಮಾತ್ ಪ್ರೀತಾ ಜಗನ್ಮಾತಾ ಶ್ರೀರಸ್ಯಾಚ್ಯುತವಲ್ಲಭಾ ।
ಸುಪ್ರೀತಾ ಶ್ಶಕ್ತಯಸ್ತಸ್ಯ ಸಿದ್ಧಿಮಿಷ್ಟಾಂ ದಿಶಂತಿ ಚ ॥

ಎನ್ನುವ ಶ್ಲೋಕಗಳು ಮಂತ್ರಗಳಂತಿವೆ. ತಿರುಪ್ಪಾವೈ 20ನೇ ಪದ್ಯದಲ್ಲಿ ನೀಳಾ ದೇವಿಯನ್ನೇ "ತಿರು" ಅಂದರೆ "ಶ್ರೀ" ದೇವಿಯೆಂದು ಗೋದೆಯು ಕರೆದಿರುವಳು. ಆದ್ದರಿಂದ ಶ್ರೀದೇವಿಯೆಂದು ಕೆಲವರು ಅಭಿಪ್ರಾಯ ಪಟ್ಟಿರುವರು.

ಆದರೆ ಶ್ರೀಕೃಷ್ಣನ ಚರಿತ್ರೆಯ ನೀಳಾದೇವಿಯು ಅವನಿಗೆ ಬಹುಪ್ರಿಯವಾದವಳು. ನೀಳಾದೇವಿಯು ಕೃಷ್ಣನನ್ನು ಮದುವೆಯಾದದ್ದು ಭಾಗವತದಲ್ಲಿಲ್ಲ, ವಿಷ್ಣು ಪುರಾಣದಲ್ಲೂ ಇಲ್ಲ. ಹರಿವಂಶದಲ್ಲಿದೆಯೆಂದು ಅಪ್ಪಯ್ಯ ದೀಕ್ಷಿತರು ಯಾದವಾಭ್ಯುದಯ ವ್ಯಾಖ್ಯಾನದಲ್ಲಿ ಹೇಳಿರುವರು. ನೀಳಾ ಕೃಷ್ಣರು ಹಗಲಲ್ಲಿ ಮಕ್ಕಳಂತಿದ್ದು ರಾತ್ರಿಯಲ್ಲಿ ಯೌವನರೂಪದಲ್ಲಿ ವಿಹರಿಸುತ್ತಿದ್ದರೆಂದು ಹೇಳಲಾಗಿದೆ. ಆದ್ದರಿಂದ ಶ್ರೀ ದೇವಿಗಿಂತಲೂ ನೀಳಾದೇವಿಯ ಪಾತ್ರವು ಆಳ್ವಾರ್ರುಗಳಿಗೆ ಹೆಚ್ಚಾಗಿ ಕಂಡಿದೆ.

ಇವಳು ಯಶೋದೆಯ ಸಹೋದರ ಕುಂಭದೇವನ ಮಗಳು. ಚಿಕ್ಕವಯಸ್ಸಿನಿಂದಲೂ ಯಶೋದೆಗೆ ಅಚ್ಚುಮೆಚ್ಚಾದವಳು. ಬಹುಸುಂದರಳು. ಆಳ್ವಾರ್ರುಗಳು ಶ್ರೀಕೃಷ್ಣ ಸಾಕ್ಷಾತ್ಕಾರದಲ್ಲಿ ಇವಳನ್ನೂ ಕಂಡೆ ಅವಳಿಗೆ ಅಷ್ಟುಪ್ರಾಶಸ್ತ್ಯ ಕೊಟ್ಟಿರುವರು. ಇವಳು ಶ್ರೀಯಂತೆಯೂ ಅಲ್ಲ ಭೂದೇವಿಯಂತೆಯೂ ಅಲ್ಲ. ಶ್ರೀಯೊಡನೆ ನಮ್ಮನ್ನು ಸೇರಿಸಲು ಭೂದೇವಿಯು ನಮಗೆ ಪುರುಷಾಕಾರ; ಆ ಶ್ರೀದೇವಿಯು ನಮ್ಮನ್ನು ಪರಿಗ್ರಹಿಸಿ ನಮಗೆ ಜ್ಞಾನಬಲವನ್ನುಕೊಟ್ಟು ಮುಕ್ತಿಯೋಗ್ಯರನ್ನಾಗಿ ಮಾಡಿ ಪರಮಾತ್ಮನಲ್ಲಿ ಶರಣು ಹೋಗುವಂತೆ ಮಾಡುವಳು. ಹಾಗೆ ನಾವು ಶರಣು ಹೋದ ಮೇಲೆ ಪರಮಾತ್ಮನು ನಮ್ಮ ದೋಷಗಳನ್ನು ನೋಡದೆ ತನ್ನಲ್ಲಿ ನಮ್ಮನ್ನು ಸೇರಿಸಿಕೊಳ್ಳುವ ಪ್ರೇಮ ಮೂರ್ತಿಯನ್ನಾಗಿ ಮಾಡುವವಳು ನೀಳಾದೇವಿ. ಶ್ರೀದೇವಿಗೆ ಸಖಿಯಂತೆ ಭೂದೇವಿ, ದೂತಳಂತೆ ನೀಳಾದೇವಿ. ಪ್ರಪತ್ತಿಯನ್ನೇ ನಂಬಿ ಪ್ರಪನ್ನರಾದ ನಮಗೆ ಭೂದೇವಿಯ ಪುರುಷಕಾರತ್ವವು ಫಲವಾಗಲು ನೀಳಾದೇವಿಯೊಬ್ಬಳೇ ನಮಗೆ ಈಗ ದಿಕ್ಕಾಗಿರುವುದರಿಂದ, ಶ್ರೀವೈಷ್ಣವ ಸಿದ್ಧಾಂತದಲ್ಲಿ ಇವಳಿಗೇ ಪ್ರಾಶಸ್ತ್ಯವಿದೆ.

ಇದರಿಂದ ಶ್ರೀ ದೇವಿಯ ಪ್ರಾಶಸ್ತ್ಯವು ಕಮ್ಮಿಯೆಂದರ್ಥವಲ್ಲ. ಶ್ರೀ ದೇವಿಯು ಇಲ್ಲದ ಸ್ಥಳವಿಲ್ಲ. ಪರಮಾತ್ಮನಂತೆ ಇವಳೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವಳು. ಜೀವಗೋಷ್ಠಿಗೆ ಸೇರಿರುವ ಭೂದೇವಿ ಮತ್ತು ನೀಳಾದೇವಿಯರಲ್ಲೂ ಇವಳು ಪರಮಾತ್ಮನಂತೆ ವ್ಯಾಪಿಸಿಕೊಂಡಿರುವಳು. ಹಾಗಿದ್ದು ಪ್ರಧಾನಪುರುಷಕಾರಳಾಗಿರುವಳು. ನಾವು ಪರಮಾತ್ಮನಲ್ಲಿ ಶರಣುಹೋಗಲು ಭೂದೇವಿಯ ಮೂಲಕ ಕೆಲಸ ಮಾಡುವಳು. ಪ್ರಪನ್ನರಾದಮೇಲೆ ನೀಳಾದೇವಿಯಮೂಲಕ ಪರಮಾತ್ಮಾನುಭವವನ್ನು ತನ್ನೊಡನೆ ಸೇರಿಸಿ ಕೊಡುವಳು. ಅದಕ್ಕಾಗಿಯೇ 20 ನೇ ಪದ್ಯದಲ್ಲಿ ನೀಳಾದೇವಿಯನ್ನೇ "ತಿರುವೇ ತುಯಿಲೆಳ್ಗಿಯ್" ಎಂದು ಪ್ರಾರ್ಥಿಸಿರುವಳು ಗೋದೆ.

ಎಲ್ಲೆಲ್ಲಿ ಭೂ ದೇವಿಯನ್ನೂ ನೀಳಾದೇವಿಯನ್ನೂ ಸ್ಮರಿಸುವೆವೋ ಅಲ್ಲೆಲ್ಲಾ ಶ್ರೀದೇವಿಯೇ ಪ್ರಧಾನ ಪುರುಷಕಾರ. ಇವಳೇ ಪರಮಾತ್ಮನ ಶಕ್ತಿ ಸ್ವರೂಪಿಣಿ. ಅವನು ಲೋಕದ ಪ್ರಭುವಾಗಿಯೂ, ಅದರ ರಕ್ಷಕ ಅಂದರೆ ಮೋಕ್ಷದ ಹಾದಿ ತೋರಲು ದಯಾಸ್ವರೂಪಿಣಿ ಶ್ರೀಯಾಗಿಯೂ ಎರಡು ರೂಪದಲ್ಲಿರುವನು. ಇವೆರಡು ರೂಪಗಳೂ ಶಾಶ್ವತ. ಅದಕ್ಕಾಗಿಯೇ ನಿಗಮಾಂತದೇಶಿಕರು "ದೈವತಂದಂಪತೀನಃ" ಎಂದಿರುವರು. ಈ ಗುಹ್ಯಾರ್ಥವನ್ನು ಬೃ–ಉ–ತ್ತಿನ ಪುರುಷವಿದ್ಯಾದಲ್ಲಿ ನೋಡಬಹುದು (III, 4.) ಅದು ಹೀಗಿದೆ.

1) **ಆತ್ಮೇವೇದಮಗ್ರ ಆಸೀತ್ ಪುರುಷವಿಧಃ** — ಎನ್ನುವುದರಿಂದ ಪ್ರಾರಂಭವಾಗುತ್ತದೆ ಈ ಪ್ರಕರಣ. ಪರಮಾತ್ಮನು ನಿರಾಕಾರನಾಗಿ ಎಲ್ಲವನ್ನೂ ಪೂರ್ಣವಾಗಿ ವ್ಯಾಪಿಸಿಕೊಂಡಿದ್ದರೂ ಪುರುಷಾಕಾರದಲ್ಲೇ ಶಾಶ್ವತವಾಗಿರುವನು. ಜಗತ್ತು ಹುಟ್ಟುವುದಕ್ಕೆ ಮುಂಚೆಯೂ ಹಾಗಿರುವನು.

2) **ಸೋಬಿಭೇತ್**—ಅವನು ಹೆದರಿದನು; ತಾನು ಸೃಷ್ಟಿಮಾಡಲಿರುವ ಪ್ರಪಂಚದಲ್ಲಿ ತನಗೆ ಪಕ್ಷಪಾತೀಯೆನ್ನುವ ಅಪಕೀರ್ತಿ ಎಲ್ಲಿ ಬರುವುದೋ ಎನ್ನುವ ಅವನ ಕರುಣೆಯೇ ಆ ಹೆದರಿಕೆಗೆ ಕಾರಣ.

3) **ಸ ವೈ ನೈವ ರೇಮೆ; ದ್ವಿತೀಯಮೈಚ್ಛತ್**—ಅವನು ಸಂತೋಷಪಡಲಿಲ್ಲ; ನಾನು ಜಗತ್ತನ್ನು ಸೃಷ್ಟಿಮಾಡಿ ಅದಕ್ಕೆ ನಿಷ್ಪಕ್ಷಪಾತಿ ಪ್ರಭುವೆನ್ನಿಸಿಕೊಳ್ಳುವುದಕ್ಕೆ ಮುಂಚೆ, ತಾನೇ ರಕ್ಷಕನೆಂದು ತೋರಿಕೊಳ್ಳಲು ತನಗೆ ಅಧೀನವಾದ ಜಗತ್ತಿಗೆ ಕೇವಲ ರಕ್ಷಕವಾದ ಎರಡನೇ ರೂಪವನ್ನ ಪೇಕ್ಷಿಸಿದನು. ಹೀಗೆ ಎರಡಾಗಿ ಜಗತ್ತಿನ ಸೃಷ್ಟಿಯೇ ಸಕಲ ಚೇತನರ ರಕ್ಷಣಕ್ಕಾಗಿಯೆಂದು ತೋರಿಸಿ ಸೂಕ್ಷ್ಮರೂಪದಿಂದ ಸ್ಥೂಲ ರೂಪದಲ್ಲಿ ಸೃಷ್ಟಿಮಾಡಿ ನಾನಾ ನಾಮರೂಪಗಳನ್ನೂ ಕೊಟ್ಟನು.

4) **ಸ ಏಷಃ ಇಹ ಪ್ರವಿಷ್ಟಃ ಆನಖಾಗ್ರೇಭ್ಯಃ**—ಈ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳನ್ನೂ ಈ ಎರಡು ರೂಪಗಳಿಂದಲೂ ಪೂರ್ಣವಾಗಿ ಪ್ರವೇಶಿಸಿನಿಂತನು; ಅಂದರೆ ಪ್ರಾಣಕೊಟ್ಟನು; ಇಂದ್ರಿಯಗಳನ್ನು ಕೊಟ್ಟನು ಆದ್ದರಿಂದ ಅವನನ್ನು

5) **ಆತ್ಮೇತ್ಯೇವೋಪಾಸೀತ**—ಆತ್ಮ ಎಂತಲೇ ಉಪಾಸನೆ ಮಾಡಬೇಕು. "**ಆಪ್‌ಇ್–ವ್ಯಾಪ್ತೌ**" ಮತ್ತು "**ಅತ–ಸಾತತ್ಯಗಮನೆ**" ಎನ್ನುವ ಎರಡು

ಕ್ರಿಯಾಪದದಿಂದ ಬರುವ ಅರ್ಥವನ್ನೊಳಗೊಂಡ "ಆತ್ಮಾ" ಎಂದು ಇವನನ್ನು ಧ್ಯಾನ ಮಾಡಬೇಕು. ಹಾಗೆ ಧ್ಯಾನಮಾಡಿದವರಿಗೆ ಈ ಆತ್ಮವು ಶ್ರೀಮನ್ನಾರಾಯಣ ಎಂದು ಕಾಣದಿರದು. ಅವನನ್ನು ಅನುಭವಿಸಬೇಕಾದರೆ ಉಪಾಸನೆಯನ್ನು ತೀವ್ರ ಗೊಳಿಸಿ

6) **ಆತ್ಮಾನಮೇವ ಪ್ರಿಯಮುಪಾಸೀತ**—ಆ ಶ್ರೀಮನ್ನಾರಾಯಣನೇ ನಮಗೆ ಪ್ರಿಯವಾದವನು; ಪ್ರೀತಿಪಾತ್ರನು; ಪ್ರೀತಿಯೇ ಆಕಾರಗೊಂಡ ನೀಳಾ ದೇವಿಯೊಡನಿರುವವನು ಎಂದು ಗೋಚವಾಗುವಂತೆ ಧ್ಯಾನಮಾಡಬೇಕು. ಕೊನೆ ಯದಾಗಿ

7) **ಆತ್ಮಾನಮೇವ ಲೋಕ ಉಪಾಸೀತ**—ಎಲ್ಲವೂ ನಮಗೆ ಪ್ರಿಯನಾದ ಶ್ರೀಮನ್ನಾರಾಯಣನೇ ಎಂದು ಉಪಾಸನೆಯು ಪೂರ್ಣವಾಗಬೇಕು. ಹೀಗೆ ಏಳು ಪರ್ವದಲ್ಲಿ ಉಪದೇಶಕೊಟ್ಟು "ದೈವವು ಇರುವುದು ಒಂದೇ; ಅದೇ ಇದೆಲ್ಲವೂ ಆಯಿತು" ಎನ್ನುವುದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಲು

ಅತ್ಮೈವೇದಯರ್ಗ ಆಸೀದೇಕ ಏವ

ಎಂದು ಹೇಳಿ ಪ್ರಕರಣವು ಮುಗಿದಿದೆ. ಇದರ ಆಧಾರದ ಮೇಲೆಯೇ ವೇದವ್ಯಾಸರೂ ಕೂಡ ತಮ್ಮ ಬ್ರಹ್ಮಸೂತ್ರದಲ್ಲಿ "**ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ**" (IV, 1, 3) ಎಂದಿರುವರು.

ಈಗ ಮೊದಲು ಪ್ರಪನ್ನರಾದ ನಮ್ಮನ್ನು ಪರಮಾತ್ಮನಲ್ಲಿಗೆ ಕರೆದೊಯ್ಯುವ ನೀಳಾದೇವಿಯ ಸ್ವರೂಪವನ್ನು ತಿಳಿಸಿ ನಮ್ಮ ಪರವಾಗಿ ಅವಳನ್ನು ಪ್ರಾರ್ಥಿಸುವಳು.

ಉಂದು ಮದಕಳಿತ್ತ—ಸುರಿಯುತ್ತಿರುವ ಮದ ಜಲವುಳ್ಳ ಆನೆಗಳನ್ನು ತಳ್ಳುವಷ್ಟು ಬಲವುಳ್ಳವನೂ, ಅವುಗಳನ್ನು ಹೊಂದಿರುವವನೂ

ಓಡಾದ ತೋಳ್ ವಲಿಯ—ಯುದ್ಧದಲ್ಲಿ ಹಿಮ್ಮೆಟ್ಟದಂತೆ ಭುಜಬಲವುಳ್ಳ ವನೂ ಆದ

ನಂದಗೋಪ—ನಂದ ಗೋಪಾಲನ

ಮರು ಮಗಳೀ ನಪ್ಪಿನ್ನಾಯ್—ಸೊಸೆಯಾದ ಒಳ್ಳೀ ಕೇಶರಾಶಿಯುಳ್ಳ ನಪ್ಪಿನ್ನೆಪ್ಪದೇವಿಯೇ

ನಂದಗೋಕುಲದಲ್ಲಿ ಮದಿಸಿದ ಆನೆಗಳಿದ್ದುದಕ್ಕೆ ಎಲ್ಲೂ ಪ್ರಮಾಣವಿಲ್ಲ. ಆದರೆ ಗೋದೆಯು ಹೇಳಿರುವಳು. ಆದ್ದರಿಂದ ಇದ್ದರೂ ಇದ್ದಿರಬಹುದು. ಇರಲಿಲ್ಲ ವೆಂದರೆ ಮದಿಸಿದ ಆನೆಗಳನ್ನು ತಳ್ಳುವಷ್ಟು ಬಳವುಳ್ಳವನೆನ್ನುವರ್ಥಮಾಡಬಹುದು.

ನಂದ ಗೋಕುಲದಲ್ಲಿ ಶ್ರೀಕೃಷ್ಣನು ಅವತರಿಸಿದಮೇಲೆ ಎಲ್ಲಾ ಗೋಪಿಕೆ ಯರೂ ತಾವು ನಂದಗೋಪನ ಸೊಸೆಯೆನ್ನಿಸಿಕೊಳ್ಳಲಪೇಕ್ಷಿಸಿದರು. ನಂದಗೋಪನ

ಸೊಸೆ ಎಂದು ಗೋದೆಯು ಅವಳನ್ನು ಕರೆದಿದ್ದು ಅವಳ ಪ್ರೀತಿಯನ್ನು ಸಂಪಾದಿ ಸಲು. ಹುಟ್ಟಿದಾಗಲಿಂದ ಯಶೋದೆಯು ಇವಳನ್ನು ತನ್ನ ಸೊಸೆಯನ್ನಾಗಿ ಮಾಡಿ ಕೊಳ್ಳಬೇಕೆಂದಿದ್ದಳು. ಗೋದೆಯ ಬಾಯಿಂದಲೂ ಇದನ್ನು ಕೇಳಿ ಅವಳು ಸಂತೋಷ ಪಟ್ಟಿರಬೇಕು. ಇದನ್ನು ಕೇಳಿ ಅವಳು ಹಾಸಿಗೆಯಮೇಲಿದ್ದು ಕುಳಿತದ್ದನ್ನು ಕಂಡು ಗೋದೆಯು

ನಪ್ಪಿನ್ನಾಯ್—ಒಳ್ಳೆ ಜಡೆಯುಳ್ಳ ನೀಳಾದೇವಿಯೇ

ಕಂದಂ ಕಮಝ್ಗುಂ ಕುಳಲೀ—ಪರಿಮಳಸೂಸುತ್ತಿರುವ ಕೇಶರಾಶಿಯುಳ್ಳವಳೇ

ಕಡೈ ತಿರವಾಯ್—ಕೊನೆಯ ಬಾಗಿಲನ್ನು ತೆಗಿ—ಎಂದಳು. ಅವಳು ಕಿಟಕಿಯ ಕಡೆ ನೋಡಿ "ಇನ್ನೂ ಬೆಳಗಾಗಿಲ್ಲವೆ" ಎಂದು ಸಂಜ್ಞೆಮಾಡಲು, ಆಗ ಗೋದೆಯು

ವಂದೆಂಗುಂ ಕೋಳ್ಗಿ ಅಝ್ಗತ್ತನ—ತಮ್ಮಗೂಡುಗಳಿಂದ ಹೊರಬಂದು ಕೋಳಿಗಳು ಎಲ್ಲಾ ದಿಕ್ಕುಗಳಲ್ಲಿಯೂ ಕೂಗುತ್ತಿವೆ.

ಕಾಣ್—ಹೊರಗೆ ನೋಡು—ನಿನಗೇ ಕಾಣುವುದು." ಎಂದಳು ನೀಳಾ ದೇವಿಯು ಹೊರಗೆ ನೋಡಿ ಕತ್ತಲಾಗಿದ್ದುದನ್ನು ಕಂಡು "ನಿಮ್ಮ ಶಬ್ದಕ್ಕೆ ಅವು ಹೊರಬಂದಿವೆ" ಎಂದು ಸೂಚಿಸಿದಳು. ಅದಕ್ಕಾಗಿ ಗೋದೆಯು ಬೆಳಗಾಗಿದೆ ಎನ್ನುವುದಕ್ಕೆ ಬೇರೆ ಚಿಹ್ನೆಯನ್ನು ಕೊಡುವಳು.

ಮಾಧವಿ ಪಂದಲ್ ಮೇಲ್ ಪಲ್ಕಾಲ್ ಕುಯಿಲಿನಂಗಳ್ ಕೂವಿನ ಕಾಣ್—ಮಾಧವೀಲತೆಯಿಂದ ಅಲಂಕೃತವಾದ ಚಪ್ಪರದಮೇಲೆ ಕುಳಿತು ಮತ್ತೆ ಮತ್ತೆ ಕೋಗಿಲೆ ಸಮೂಹಗಳು ಕೂಗುತ್ತಿರುವವು—ನೋಡು.—ಇದಕ್ಕೂ ಬರಲಿಲ್ಲ ನೀಳೆ.

ಪಂದಾರ್ ವಿರಲಿ—ನಿನ್ನ ಕೈಯಲ್ಲಿ ಚೆಂಡು ಹಿಡಿದಿರುವುದು ನಮಗೆ ಕಾಣು ತ್ತಿದೆ. ನೀನು ಎದ್ದಿದ್ದರೂ ಏಕೆ ಒಂದು ಬಾಗಿಲು ತೆಗೆಯುವುದಿಲ್ಲ? ಎಂದಳು ಗೋದೆ.

ಕೈಯಲ್ಲಿ ಚೆಂಡುಹಿಡಿದಿರುವುದು ನೀಳಾದೇವಿಯ ಗುರುತು. ಪರಮಾತ್ಮನಿಗೆ ಪ್ರಪಂಚವೇ ಒಂದು ಆಟದ ಬೈಲು—ಲೀಲಾವಿಭೂತಿ; ವೈಕುಂಠವು ನಿತ್ಯವಿಭೂತಿ. ಲೀಲಾವಿಭೂತಿಯು ಚಂಡಾಗಿ ಪರಮಾತ್ಮನ ಕೈಯಲ್ಲಿದ್ದು ಈಗ ಇವಳ ಕೈಯಲ್ಲಿದೆ. ಪ್ರಭುವಾಗಿ ಅವರವರ ಕರ್ಮಾನುಸಾರ ಫಲಕೊಟ್ಟು ಆಳುವ ಪರಮಾತ್ಮನ ಕೈಯಿಂದ ಕಿತ್ತು ತನ್ನ ಕೈಯಲ್ಲಿಟ್ಟಿರುವುದರ ಅರ್ಥ "ಸ್ವಾಮಿ ನಿಮಗೆ ಚೇತನರು ಚೆಂಡಾಗಿ ಆಟದ ಸಾಮಾನಾಗಿದ್ದೆ, ನಾನಿರುವಾಗ ಅವರೊಡನೆ ನೀವು ಆಟವಾಡಬೇಕಾಗಿಲ್ಲ. ತಮಗೆ ಅವು ಪ್ರಿಯವಾಗಬೇಕು. ಇಲ್ಲಿ ನೋಡಿ, ನನಗಾಗಿ ಅವರ ತಪ್ಪೆಲ್ಲವನ್ನೂ ಮರೆತು ಪ್ರೀತಿಯಿಂದ ಕಾಣಿರಿ" ಎಂದು ಚೆಂಡನ್ನು ಬೆರಳುಗಳಿಂದ ಘಟ್ಟಿಯಾಗಿ

ಹಿಡಿದಿರುವುದರ ಅರ್ಥವನ್ನು ವ್ಯಾಖ್ಯಾನಕಾರರು ವಿವರಿಸಿರುವರು. ಗೋದೆ ಮೊದಲಾದವರು ಕಿಟಕಿಯಿಂದ ಇವಳು ಒಂದು ಕೈಯಿಂದ ಚೆಂಡನ್ನೂ ಮತ್ತೊಂದು ಕೈಯಿಂದ ಶ್ರೀಕೃಷ್ಣನನ್ನೂ ಹಿಡಿದಿರುವುದನ್ನು ಕಂಡು "ಅಮ್ಮಾ, ನಿನ್ನಗಂಡ ಶ್ರೀಕೃಷ್ಣ ನೆನ್ನೆ ರಾತ್ರಿ ನಿನ್ನೊಡನೆ ಚೆಂಡಾಡಿ ಸೋತ. ಇಂದು ನಿನ್ನ ಕೈಯ್ಯಲ್ಲಿ ಆ ಚೆಂಡಿರಲು ಅದೇ ಕಾರಣವಿರಬೇಕು. ಆದರೂ ನಾವು ನೀನೇ ಗೆದ್ದವಳು ಎಂದು ಹೇಳದಂತಿರುವೆಯಲ್ಲಾ ನೀನು ಕೃಷ್ಣನ ವಶಳಾಗಿರುವಂತಿದೆ. ಅದಕ್ಕಾಗಿ ಬರಲಾರದವಳಾಗಿರುವೆ. ಅವನೇ ಗೆದ್ದವನಂತಿದೆಯಲ್ಲಾ. ಹಾಗೆ ಅವನನ್ನು ಗೆದ್ದರೂ ಅವನಿಗೆ ಸೋತಿರುವೆ. ಹೀಗಿರುವುದು ನಿನಗೂ ಪ್ರಿಯವೆಂದು ಚೆನ್ನಾಗಿ ಕಾಣುತ್ತದೆ. ಆದ್ದರಿಂದ ನಿನಗೆ ಪ್ರಿಯವಾಗುವಂತೆಯೇ

ಉಯ್ ಮ್ಮೈತ್ತುನ್ ಪೇರ್ ಪಾಡ — ನಿನ್ನ ಪ್ರಿಯನ ಕೀರ್ತಿಯನ್ನು ಹಾಡುವುದಕ್ಕಾಗಿ

ವಂದು ತಿರವಾಯ್—ಬಂದು ಬಾಗಿಲು ತೆಗಿ ಎಂದಳು. ಅದಕ್ಕೆ ನೀಳೆಯು "ನೀವೇ ಬಾಗಿಲು ತಳ್ಳಿ ತಾನೇ ತೆಗೆದುಕೊಳ್ಳುತ್ತದೆ" ಎಂದು ಸೂಚಿಸಿದಾಗ ಅವಳು **ಶೆಂ ತಾಮರೈಕ್ಕೈಯಾಲ್ ಶೀರಾರ್ ವಳೈ ಯೊಲಿಪ್ಪ ಮುಕಿಳ್ನುನ್ದು ತಿರವಾಯ್** ಎಂದಳು. "ಕೆಂದಾವರೆಯಂತಿರುವ ನಿನ್ನ ಕೈಯಿಂದ ಸುಂದರವಾಗಿ ಕಾಣುವ ನಿನ್ನ ಕೈ ಬಳೆಗಳು ಗಿಲಗಿಲಸುವಂತೆ ಸಂತೋಷದೊಡನೆ ಬಂದು ಬಾಗಿಲನ್ನು ನೀನೇ ತೆಗಿ" ಸಾದೃಶ್ಯ ಕೊಡುವಾಗ ಕಮಲದಂತೆ ಕಣ್ಣು, ಕಮಲದಂತೆ ಪಾದವೆಂದು ಹೇಳುವುದು ಹೆಚ್ಚು. ಕಮಲದಂತೆ ಕೈಯೆನ್ನುವುದು ಅಪರೂಪ. ಕಮಲವು ಅತಿ ಬಿಳುಪಲ್ಲ. ಬಿಳುಪು ಪಕ್ಷಪಾತವಲ್ಲದ ಶುದ್ಧ ಜ್ಞಾನವನ್ನೂ, ಅತಿ ಕೆಂಪು ಕೋಪವನ್ನೂ ಸೂಚಿಸುತ್ತದೆ. ಕೋಪವೆನ್ನುವುದೇ ಇಲ್ಲದೆ ಪ್ರೇಮಭರಿತ ದೃಷ್ಟಿಯುಳ್ಳವನು ಪರಮಾತ್ಮ. ಅವನು ಪುಂಡರೀಕಾಕ್ಷ. ಅವನಿಗೆ ತಕ್ಕ ಸತಿಯಾಗಿ ಪ್ರೇಮಮಯ ಹಸ್ತವುಳ್ಳವಳು ನೀಳೆ. ವಿಶ್ವವನ್ನು ಚೆಂಡಾಗಿ ತನ್ನ ಕೈಗೆ ತೆಗೆದುಕೊಂಡು ಅದನ್ನು ಲಾಲಿಸುವ ಕೈ **"ಶೆಂತಾಮರೈಕ್ಕೈ"**. ಪರಮಾತ್ಮನನ್ನು ಪ್ರೇಮಮಯನನ್ನಾಗಿಸಿರುವುದು ಇವಳ **"ಶೀರಾರ್ ವಳೈ"** ಶೃಂಗಾರ ರಸದಲ್ಲಿ ತೊಯ್ದು ಭಾವನಾ ಪ್ರಪಂಚದಲ್ಲಿ ವಿಹರಿಸುವ ಭಾವುಕರಿಗೆ ಈ ಎರಡುಪದಗಳ ಅರ್ಥವು ಬೇರೆ ಪ್ರಪಂಚವನ್ನೇ ಸೃಷ್ಟಿಸುತ್ತದೆ. "ಅಮ್ಮಾ ನಿನ್ನ ಪ್ರೇಮಮಯ ಹಸ್ತದಿಂದ ನೀನೇ ಬಾಗಿಲು ತೆಗಿಯಬೇಕು. ಬಾಗಿಲನ್ನು ತಳ್ಳಿ ನಾವು ಒಳಗೆ ಬಂದರೆ ಪರಮಾತ್ಮನು ನಮ್ಮನ್ನು ಮನ್ನಿಸನು. ನೀನೇ ನಮ್ಮನ್ನು ಅವನಲ್ಲಿಗೆ ಕರೆದೊಯ್ಯಬೇಕು. ನಾವು ಪ್ರಪನ್ನರಾದರೂ ನಿನ್ನವರೆಂದು ನೀನು ತೋರಿಕೊಟ್ಟರೆ ಮಾತ್ರ ನಮಗೆ ಪ್ರಸನ್ನವದನಾಂಬುಜ ಕೃಷ್ಣ ಸಿಗುವನು." ಈರೀತಿಯ ಅರ್ಥವನ್ನು ಅನುಸಂಧಾನ ಮಾಡಿದರೆ ನೀಳಾದೇವಿಯ ಸ್ವರೂಪವು ಕಾಣುವುದು. ಈ ಪಾಶುರದ ಅರ್ಥವನ್ನು ಹೇಳುವುದಕ್ಕಿಂತ ನೆನೆಯುವುದರಲ್ಲೇ ಹೆಚ್ಚು ಮಾಧು

ರ್ಯವಿದೆ. ಈ ಪಾಶುರವು 18 ನೆಯದಾಗಿರುವುದರಲ್ಲೂ ಒಂದು ಅತಿಶಯವಿದೆ. ಜ್ಞಾನದ ಏಳು ಪರ್ವಗಳನ್ನು ದಾಟಿ ಏಳು ವಿಧ ಭಕ್ತಿಯಿಂದ ಪರಮಾತ್ಮನನ್ನು ಕಂಡು ಋಷಿಗಳು

ಭೂರ್ಭುವಸ್ಸುವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ।
ತಾಸಾಮುಹಸ್ಮೈತಾಂ ಚತುರ್ಥೀಂ॥
ಮಾಹಾಚಮಸ್ಯಃ ಪ್ರವೇದಯತೇ ಮಹ ಇತಿ; ತದ್ಬ್ರಹ್ಮ; ಸ ಆತ್ಮಾ

ಎಂದು ವೇದಮಂತ್ರವನ್ನು ಉದ್ಘೋಷಿಸುವುದು 18ನೇ ಪರ್ವದಲ್ಲಿ. ಬ್ರಹ್ಮ, ಆತ್ಮಾ ಎಂದು ಉಪನಿಷತ್ತು ಪರಮಾತ್ಮನನ್ನು ಹೇಳುತ್ತಿದ್ದರೂ ಅವನು "ಮಹಃ"; ತನಗೆ ಸಮರೂ, ಮೇಲಿನವರೂ ಇಲ್ಲದ ಅನ್ಯಾದೃಶ ಪ್ರೇಮಮಯ ತತ್ವವೆಂದು ಅನುಭವದಿಂದ ಮಾತ್ರ ಹೇಳುವಂತಾಗುವುದು 18 ನೇ ಪರ್ವದಲ್ಲಿ. ಈ 18ರಲ್ಲಿ ಗುಟ್ಟಿದೆ, ಅದನ್ನು ತಿಳಿದೇ ವ್ಯಾಸರು ಮಹಾಭಾರತವನ್ನು 18 ಪರ್ವದಲ್ಲಿ ಕೊಟ್ಟಿರುವರು; ಭಗವದ್ಗೀತೆಯೂ 18 ಅಧ್ಯಾಯವುಳ್ಳದ್ದು; ಮಹಾಭಾರತ ಯುದ್ಧ 18 ದಿನಗಳು ನಡೆದು ಧರ್ಮ ಸ್ಥಾಪನೆಯಾಯಿತು; ರಾಮಾಯಣದಲ್ಲಿ ಪ್ರತಿಯೊಂದು 18 ಅಧ್ಯಾಯದಲ್ಲಿ ಒಂದು ವಿಶೇಷ ಹಂತವಿದೆ. ಇದೇ 18ನೇ ಪಾಶುರವನ್ನು ಹಾಡುತ್ತಾ ಅನುಸಂಧಾನ ಮಾಡಿ ಮುಗಿಸಿದಮೇಲೆ ರಾಮಾನುಜರಿಗೆ ಮೂಲಮಂತ್ರೋಪದೇಶವಾಯಿತು. **ಏಲೋರೆಂಪಾವಾಯ್.**

ಸ್ವಾಪದೇಶ

ಆಚಾರ್ಯ ಕೃಪೆ, ಮಂತ್ರದೇವತೆ, ಆ ಮಂತ್ರಾರ್ಥ ದೈವವನ್ನು ಪ್ರಾರ್ಥಿಸಿದಮೇಲೆ ಈ ಪಾಶುರದಲ್ಲಿ ಮೇಧಾಸೂಕ್ತ ಪ್ರತಿಪಾದ್ಯಳಾದ ಶ್ರೀದೇವಿಯನ್ನು ಪ್ರಾರ್ಥಿಸಲಾಗುತ್ತದೆ.

ಉಂದು . . . ತ್ತ—ಮತ್ತಗಜದಂತಿರುವ ಪರಮಾತ್ಮನನ್ನು ತನ್ನವನನ್ನಾಗಿ ಮಾಡಿಕೊಂಡವನಾದ

ಓಡಾದ . . . ರ್ಯ—ನಾಸ್ತಿಕರ ವಾದಕ್ಕೆ ಜಗ್ಗದ ಜ್ಞಾನಬಲವುಳ್ಳವನಾದ

ನಂದಗೋಪಾರ್ಲ—ಆಚಾರ್ಯನ

ಮರುಮಗಳೇ—ಸೊಸೆಯಾದ ಶ್ರೀದೇವಿಯೇ—

ಶ್ರೀಕೃಷ್ಣನಿಗೂ ಮದಿಸಿರುವ ಆನೆಗೂ ಬಹು ಸಾಮ್ಯವಿದೆ—

1) ಆಚಾರ್ಯನ ಹೃದಯದಲ್ಲಿ ಕಟ್ಟಲ್ಪಡುವವನು
2) ತನ್ನನ್ನು ಏರಲು ಎಡಕಾಲನ್ನು ತೋರುವನು
3) ಮಾವಟಿಗನಂತೆ ಆಚಾರ್ಯನ ಮಾತನ್ನು ಮಾತ್ರ ಕೇಳುವನು
4) ಅನ್ನ ಪಾನಾದಿಗಳೂ ಅವನಧೀನ
5) ಭಕ್ತರ ದೋಷಗಳೆನ್ನುವ ಮಣ್ಣನ್ನು ತಾನು ಪರಿಶುದ್ಧನಾಗಿ ಎರಚಿ ಕೊಳ್ಳುವನು
6) ತಿರುಪತಿ ಮೊದಲಾದ ವನ ಗುಡ್ಡಗಳಲ್ಲಿರುವನು
7) ಔದಾರ್ಯವೆನ್ನುವ ಒಂದೇ ಕೈ ಇವನಿಗೆ
8) ತನಗೆ ಕೊಟ್ಟದ್ದನ್ನು ಮಾವಟಿಗ ಆಚಾರ್ಯನಿಗೆ ಕೊಡುವನು

ಇಂತಹ ಪರಮಾತ್ಮನನ್ನು ವಶಮಾಡಿಕೊಂಡಿರುವ ಆಚಾರ್ಯ ಯಾವ ನಾಸ್ತಿಕವಾದಕ್ಕೂ ಬಗ್ಗದ ಜ್ಞಾನ ಪ್ರಕಾಶವುಳ್ಳವನು. ಆಚಾರ್ಯ ಲಕ್ಷಣವನ್ನು ಇಷ್ಟು ಹೇಳುವಾಗ ಗೋದೆಯ ಹೃದಯದಲ್ಲಿದ್ದವರು ಇವಳ ತಂದೆ ಪೆರಿಯಾಳ್ವಾರ್ರು. ಇವರು ಶ್ರೀಕೃಷ್ಣನನ್ನು ತನ್ನ ಯಶೋದಾ ಭಾವ ಬಂಧದಲ್ಲಿ ಮಗನನ್ನಾಗಿ ಕಂಡು "ಅಪ್ಪಾ, ನಿನಗೆ ಎಣ್ಣೆ ಹಚ್ಚುವೆನು; ಕಾಡಿಗೆ ಇಡುವೆನು ಬಾ" ಎಂದು ಹಾಡಿ ಹಾಡಿ ಆನಂದ ತಂದಿಲರಾಗಿದ್ದುದನ್ನೇ ನೋಡುತ್ತಿದ್ದ ಇವಳಿಗೆ ಶ್ರೀದೇವಿಯು ಸೊಸೆಯಾಗಿ ತನಗೆ ಅತ್ತಿಗೆಯಾಗಿ ಕಂಡಳು. ಅದಕ್ಕಾಗಿಯೇ "**ಮರುಮಗಳೇ**" ಎಂದು ಕರೆದಳು.

ನಪ್ಪಿನ್ನಾಯ್—ಶ್ರೀದೇವಿಯು ಮೊದಲು ಮೇಲೆ ಪರಮಾತ್ಮನು ನಮ್ಮಲ್ಲಿಗೆ ಬರುವ ನಾದ್ದರಿಂದ ಶ್ರೀದೇವಿ "**ನಪ್ಪಿನ್ನೈ**" ಪಿನ್ನೈವರುಂ ನಲ್ಲವಳ್" ಇವಳು ದಯಾ ಸ್ವರೂಪಿಣಿ. ಇವಳಿಟ್ಟಿರುವ ಅಂಗಡಿ ವೇದ. ಇದರಲ್ಲಿ ತನ್ನನ್ನೇ ಆಶಿಸಿ ಬರುವ ಭಕ್ತರಿಗಾಗಿ ನೀಲನೇಘಶ್ಯಾಮನೆನ್ನುವ ನೀಲಮಣಿಯನ್ನು ಕಾಣುವಂತೆ ಇಟ್ಟಿರುವಳೆಂದು ನಿಗಮಾಂತದೇಶಿಕು

ಪರಿಮಿತಫಲಸಂಗಾತ್ ಪ್ರಾಣಿನಃ ಕಂಪಚಾನಾಃ
ನಿಗಮವಿಪಣಿ ಮಧ್ಯೇ ನಿತ್ಯ ಮುಕ್ತಾನುಷಕ್ತಂ
ಪ್ರಸಧನಮನುಕಂಪೇ ಪ್ರಾಪ್ತವತ್ಯಾಭವತ್ಯಾ
ವೃಷಗಿರಿಹರಿನೀಲಂ ವ್ಯಂಜಿತಂ ನಿರ್ವಿಶಂತಿ ॥ ದ–ಶ–39

ಎಂದು ಹಾಡಿರುವರು.

ಕಂದಂ ಕವುಳ್ಗಂ ಕುಳಲೀ—"**ಶಿರಃ ಸುರಭಿತಂ ಮುದಾ ಪ್ರಣಯಸಾ ಶಬದ್ಧಂ ಮನಃ**" ಎನ್ನುವಂತೆ ಸೂಸುವ ಸುವಾಸನೆಯಿಂದ ತನ್ನ ಮಕ್ಕಳಾದ ಚೇತನರಿಗೆ ಸಕಲಸೌಭಾಗ್ಯ ಕೊಡುವವಳೇ

ಕಡೈ ತಿರವಾಯ್—ನಿನ್ನ ಮುಂದಿನ ಬಾಗಿಲನ್ನು ತೆಗಿ. ಮೇಧಾಶಕ್ತಿಯಿಂದ ನಮ್ಮ ಮನಸ್ಸು ತುಂಬುವಂತೆ ಮಾಡು. **ಪುರುಷಕಾರರಲ್ಲಿ ಭೂದೇವಿಯು ಪ್ರತಿಭೆಯನ್ನೂ ಶ್ರೀದೇವಿಯು ಮೆಧೆಯನ್ನೂ ನೀಳಾದೇವಿಯು ಪ್ರೇಮವನ್ನೂ ಕೊಡುವರು.** ಪ್ರತ್ಯಕ್ಷಜ್ಞಾನದಿಂದ ನಾವು ಬೆಳೆಸಿಕೊಳ್ಳುವ ಜ್ಞಾನ, ಮತಿ ಮತ್ತು ಬುದ್ಧಿ. ಬುದ್ಧಿಯು ಬೆಳೆದಂತೆಲ್ಲಾ ಜ್ಞಾನದಾಹವು ಹೆಚ್ಚಿ ಮನಸ್ಸು ಕಾರ್ಪಣ್ಯವನ್ನು ಹೊಂದಿದಂತೆಲ್ಲಾ ಭೂದೇವಿಯ ಕೃಪೆಯಿಂದ ಪ್ರತಿಭೆಯೂ ತೋರುತ್ತದೆ. "ಭಾಃ" ಎಂದರೆ ಜ್ಞಾನತೇಜಸ್ಸು, ಬುದ್ಧಿ. ಅದನ್ನು ಎದಿರುಗೊಳ್ಳಲು ಮನಸ್ಸಿನ ಒಳಗಿನಿಂದ ಬಂದು, ಮನಸ್ಸಿನಲ್ಲಿ ತುಂಬಿರುವ ಬುದ್ಧಿ ಮಣಿಗಳನ್ನು ಹಾರವನಾಗಿಮಾಡಬಲ್ಲ ಜ್ಞಾನ "**ಪ್ರತಿ-ಭಾ.**" ಆಂಗ್ಲಭಾಷೆಯಲ್ಲಿ ಇದಕ್ಕೆ **Inspiration** ಎನ್ನಲಾಗಿದೆ. ಇದೂ ಲೌಕೀಕ ಜ್ಞಾನವಾದರೂ ಮನಸ್ಸಿನಲ್ಲಿ ಕೂಡಿರುವ ಬುದ್ದಿಗಳೆಲ್ಲವನ್ನೂ ಒಂದನ್ನಾಗಿ ಮಾಡುವ ಬೆಳಕು. ವೇದಾಂತ ವಿಷಯದಲ್ಲೂ ಮೊದಲು ಪ್ರತಿಭೆಯು ಲೌಕಿಕವಾಗಿ ಆಯಾ ಸಿದ್ಧಾಂತದಲ್ಲೇ ತೊಯ್ದು ನಾವು ನಿಲ್ಲುವಂತೆ ಮಾಡುತ್ತದೆ. ಇಂತಹ ಪ್ರತಿಭೆಯಿಂದಲೇ ಲೋಕದಲ್ಲಿ ಅನೇಕ ಸಿದ್ಧಾಂತಗಳು ಎದ್ದಿವೆ. ಆಯಾಸಿದ್ಧಾಂತದಲ್ಲಿ ಬುದ್ಧಿಯನ್ನು ಬೆಳೆಸಿಕೊಂಡ ನಾವು ಆ ದಾರಿಯಲ್ಲೇ ನಡೆದು ಮುಂದೆ ಸಾಗಬೇಕು. ಅಲ್ಲೇ ನಿಲ್ಲಬಾರದು. ಹಾಗೆ ಮುಂದೆ ಸಾಗುವಾಗಲೇ ನಮಗೆ ಶ್ರೀತತ್ವವು ಗೋಚರವಾಗಿ ಅವಳಲ್ಲಿ ನಾವು ಶರಣು ಹೋದರೆ, ಅವಳು ನಮಗೆ ಒಂದು ಅನ್ಯಾದೃಶ, ಅಲೌಕಿಕ, ವೇದ ಮಂತ್ರಾರ್ಥಸದೃಶ, ಜ್ಞಾನ ದೀಪ್ತಿಯನ್ನು ಕೊಡುವಳು. ಅದೇ **ಮೇಧಾ** (ಅಂದರೆ **Revelation.**) ಇದರಿಂದ ಯಾವ ಸಿದ್ಧಾಂತದಲ್ಲೂ ನಮಗೆ ದ್ವೇಷವು ಬರದೆ, ಪರಮವೇದಾಂತದಲ್ಲಿ ಆಯಾಸಿದ್ಧಾಂತಗಳ ಸ್ಥಾನ ಮಾನಗಳು ತೋರುವವು. ಇದರ ಬಲದಿಂದ ನಾವು ಮುಂದೆ ಸಾಗಿದರೆ ನಮ್ಮ ಆತ್ಮವು ಪ್ರೇಮಮಯವಾಗಿ "ಸರ್ವ ಭೂತಹಿತೇರತಾಃ" (ಭ-ಗಿ V, XII)

ಎಂದು ಶ್ರೀಕೃಷ್ಣನು ಹೇಳಿರುವಂತೆ ಜೀವನವೇ ರಸಮಯವಾಗುವುದು. ಹೀಗಾಗುವುದು ನೀಳಾದೇವಿಯ ಕೃಪೆಯಿಂದ. ಈ ರೀತಿಯರಸಮಯ ಜೀವನಕ್ಕಾಗಿ ಶಿಷ್ಯನು ಮೇಧಾಶಕ್ತಿಯನ್ನು ಕೊಡುವಂತೆ ಶ್ರೀದೇವಿಯನ್ನು ಪ್ರಾರ್ಥಿಸಿರುವನು.

ಪರಮಾತ್ಮನೇ ಈ ಮೂರು ದೇವಿಯರ ಮೂಲಕ ಪ್ರತಿಭೆ, ಮೇಧೆ, ಪ್ರೇಮವನ್ನು ಕೊಡುವನೆನ್ನುವುದು ಭಗವದ್ಗೀತೆಯ ಸಾರೋಪದೇಶ. "ಅಹಮಾತ್ಮಾಗುಡಾಕೇಶ" (X–20) ಎಂದು ಉಪನಿಷತ್ತು ಹೇಳಿರುವಂತೆ ಹೇಳಿ.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾ ಮುಪಯಾಂತಿ ತೇ ॥
ತೇಷಾಮೇವಾನುಕಂಪಾರ್ಥಂ ಅಹ ಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥಃ ಜ್ಞಾನದೀಪೇನ ಭಾಸ್ವತಾ ॥

"ಆರ್ಜುನ! ಯಾವಾಗಲೂ ನನ್ನೊಡನೆ ಸೇರಿ ಪ್ರೇಮಮಯರಾಗಲು ಅಪೇಕ್ಷಿಸುವವರಿಗೆ ನಾನೇ ಪ್ರೀತಿಯಿಂತ ಹಾಗಿರಲು ಮೊದಲುಬೇಕಾಗುವ ಬುದ್ಧಿ ಸಂಪತ್ತನ್ನು ಅಂದರೆ ಪ್ರತಿಬೆಯನ್ನು ಕೊಟ್ಟ, ಅವರ ಮೇಲಿನ ಅನುಕಂಪದಿಂದ, ಅವರಿಗೆ ಆತ್ಮವಾಗಿದ್ದುಕೊಂಡು, ನಾನು ನನ್ನದು ಎನ್ನುವ ಚಿಕ್ಕ ಭಾವಗಳನ್ನು ತೊಲಗಿಸಿ ಪ್ರಪಂಚವನ್ನು ರಸಮಯವಾಗಿ ನೋಡದಂತೆ ಮಾಡಿರುವ ಅಜ್ಞಾನವನ್ನು ಹೋಗಲಾಡಿಸುವ ಮೇಧಾ ಎನ್ನುವ ಪ್ರಕಾಶಮಯ ಜ್ಞಾನ ಬೆಳಕನ್ನು ಕೊಡುವೆನು." ಎಂದಿರುವನು ಶ್ರೀಕೃಷ್ಣ. ಇಲ್ಲಿ "ಭೂ, ಶ್ರೀ ಮತ್ತು ನೀಳಾದೇವಿಯರಿಂದ" ಎಂದು ಹೇಳದಿದ್ದರೂ ಅದೇ ಅರ್ಥ. ಹಿಂದೆ ವಾಮದೇವರೆನ್ನುವ ಮಹಾಯೋಗಿಗಳಿದ್ದರು. ತನ್ನ ಯೋಗದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡರು. ತನ್ನನ್ನೇ ಮರೆತರು. ಆಗ ಪರಮಾತ್ಮನೇ ಅವರಂತೆ ಅವರಲ್ಲಿದ್ದು "ಅಹಂ ಸೂರ್ಯಃ ಅಹಂ ಚಂದ್ರಃ" ಎಂದರು. ಧ್ಯಾನದ ಮಹಿಮೆಯೇ ಅದು. ಹಾಗಿರುವಲ್ಲಿ ಶ್ರೀಕೃಷ್ಣನೇ ಭೂ, ಶ್ರೀ ಮತ್ತು ನೀಳಾದೇವಿಯರಲ್ಲಿದ್ದು ತಾನೇ ಎಲ್ಲವನ್ನೂ ಮಾಡುವನೆಂದಿರುವುದು ಯೋಗಸ್ವರೂಪ ತಿಳಿದವರಿಗೆ ಸಹಜವಾಗಿಯೇ ಕಾಣುತ್ತದೆ. ಆದರೆ ಉಪದೇಶ ಕಾಲದಲ್ಲಿ ಪ್ರಾರ್ಥನೆ ಮಾಡುವಾಗ ಬಿಚ್ಚಿ ಅವರವರು ಮಾಡುವುದನ್ನು ಬೇರೆಬೇರೆಯಾಗಿಯೇ ಹೇಳಬೇಕು. ಉಪದೇಶ ಮತ್ತು ಪ್ರಾರ್ಥನೆಗೂ ಮತ್ತು ತುದಿ ಮುಟ್ಟಿದ ಅನುಭವಕ್ಕೂ ಇದೇ ವ್ಯತ್ಯಾಸ. ಇಲ್ಲಿ ಶಿಷ್ಯನು ಶ್ರೀದೇವಿಯನ್ನು, ಮೇಧಾಶಕ್ತಿಯನ್ನೂ ಕೊಡುವಂತೆ ಪ್ರಾರ್ಥಿಸಿರುವುದು ಸರಿಯಾಗಿದೆ.

ವಂದು, ಎಂಗುಂ ಕೋಳ್ಳಿ ಅಳ್ಳತ್ತನ ಕಾಣ್—ಕೋಳ್ಳಿ ಎಂದರೆ ಭಾಗವತರು ಮುಂಜಾನೆ ಕೋಳಿ ಎದ್ದು ಕೂಗುವುದು; ಭಾಗವತರು ಬ್ರಾಹ್ಮ ಮುಹೂರ್ತವಾದ ಅದೇ ಕಾಲದಲ್ಲಿದ್ದು "ಸುಪ್ರಭಾತ ಮತ್ತು ನಿರ್ವೇದಕಾರಿಕೆ"ಗಳನ್ನು ಮನಸ್ಸಿಗೆ ಹಿತವಾಗುವಂತೆ. ಹಾಡುವರು. ಕೋಳಿ ತಿಪ್ಪೆ ಗುಂಡಿಯಲ್ಲಿ ತನಗೆ ಬೇಕಾದ್ದನ್ನು ಆರಿಸಿಕೊಳ್ಳುವುದು; ಭಾಗವತರು ತಿಪ್ಪೆ ಗುಂಡಿಗೆ ಸಮನಾದ ಈ ಶರೀರದಲ್ಲಿ ಆತ್ಮವನ್ನೇ ಹುಡುಕುವರು; ಎಲ್ಲರಿಗೂ ಎಚ್ಚರವಾಗಲೆಂದು ಅದು ಕೂಗುವುದು; ಎಲ್ಲರಿಗೂ ಜ್ಞಾನ ಬರಲೆಂದು ಇವರು ಘೋಷದೊಡನೆ ನಿಧಾನವಾಗಿ ಹಾಡುವರು. ಆದ್ದರಿಂದ ಇವರು ಕೋಳಿಗಳಂತೆ ಮಾತ್ರರಲ್ಲ; ಕೋಗಿಲೆಯಂತೆಯೂ ಇರುವರು.

ಮಾಧವಿ ಪಂದಲ್ . . . ಕಾಣ್—ಕೋಗಿಲೆಯು ಇಂಪಾಗಿ ಹಾಡುವಂತೆ ಭಗವಂತನ ಗುಣಗಳನ್ನು ಮಾಧವ ವಿಷಯವಾದ ಸ್ಮೃತಿಗಳೆನ್ನುವ ಚಪ್ಪರಗಳ ಮೇಲಿದ್ದು, ಅನೇಕ ಪ್ರಕಾರವಾಗಿ ಹಾಡುತ್ತಿರುವರು. ಇಲ್ಲಿ ಆಚಾರ್ಯರು ಭಾಗವತರನ್ನು ವರ್ಣಿಸುವಾಗ,

"ಕೊಕ್ಕುಪ್ಪೋಲ್ ಅನನ್ಯದೇವತಾಪರರಾಯ್
ಕೋಳ್ಳಿಪ್ಪೋಲ್ ಮೂನ್ರು ಮಂತ್ರಂಗಳುಡೈಯ
ಸಾರಜ್ಞರಾಯ್, ಉಪ್ಪುಪ್ಪೋಲ್ ತಲ್ಲೀನರಾಯ್
ಉಮ್ಮಿಪ್ಪೋಲ್ ಕೃಷ್ಣಸಾರೂಪ್ಯರಾಯಿರುಕ್ಕುಮವರ್ ಭಾಗವತರ್"

ಎಂದಿರುವರು.

ಪಂದಾರ್ ವಿರಲಿ—ಪ್ರಪಂಚವೇ ಪರಮಾತ್ಮನ ಲೀಲಾವಿಭೂತಿಯೆಂದು ತೋರಿಸಲು ವಿಶ್ವವನ್ನೇ ತನ್ನ ಕೈಯಲ್ಲಿಟ್ಟುಕೊಂಡಿರುವ ಶ್ರೀದೇವಿಯೇ—
"ಉರ್ . . . ಪಾವಾಯ್"

ಕುತ್ತು ವಿಳಕ್ಕೆರಿಯ ಕೋಟ್ಟುಕ್ಕಾಲ್ ಕಟ್ಟಿಲ್ ಮೇಲ್
ಮೆತ್ತೆನ್ನ ಪಂಚಶಯನತ್ತಿನ್ ಮೇಲೇರಿ
ಕೊತ್ತಲರ್ ಪೂಂಕುೞಲ್ ನಪ್ಪಿನ್ನೈ ಕೊಂಗೈಮೇಲ್
ವೈಕ್ಕುತ್ತಿಕ್ಕಿಡಂದ ಮಲರ್ ಮಾರ್ಬಾ ವಾಯ್ ತಿರವಾಯ್
ಮೈತ್ತಡಂ ಕಣ್ಣಿನಾಯ್ ನೀ ಉರ್ ಮಣಾಳನೈ
ಎತ್ತನೈ ಪೋದುಂ ತುಯಿಲ್ವೊ ವೊಟ್ಟಾಯ್ ಕಾಣ್
ಎತ್ತನೈಯೇಲುಂ ಪಿರಿವಾತ್ತಕಿಲ್ಲಾಯಾಲ್
ತತ್ತುವಮನ್ರು ತಕವೇಲೋರೆಂಪಾವಾಯ್ ॥ ೧೯ ॥

ಹಿಂದಿನ ಪದ್ಯದಲ್ಲಿ ನೀಳಾದೇವಿಯ ಸ್ವರೂಪವು ನಾಲ್ಕುಪದಗಳಿಂದ ಹೇಳಲ್ಪಟ್ಟಿತು. ಪರಮಾತ್ಮನಿಗೆ ಆಟದ ಚೆಂಡಿನಂತಿರುವ ಈ ಪ್ರಪಂಚವನ್ನು ಅವನ ನಿಷ್ಠುರ ಆಳ್ವಿಕೆಯಿಂದ ತಪ್ಪಿಸಿ ತನ್ನಕೈಗೆ ತೆಗೆದುಕೊಂಡು (**ಪಂದಾರ್ ವಿರಲಿ**) ತನ್ನ ಸೌಂದರ್ಯಕ್ಕೂ ಹಾವಭಾವಕ್ಕೂ ಬೆರಗಾಗುವಂತೆ ಅವನನ್ನು ಮಾಡಿ (**ಶೀರಾರ್ ವಳೈ ಯೊಲಿಪ್ಪ**) ಪರಮಸಂತುಷ್ಟಳಾಗಿ (**ಮುಕಿೞಂದು**) ತನ್ನನ್ನು ಆಶ್ರಯಿಸುವ ಜೀತನರಿಗೆ ಅಭಯ ಹಸ್ತಕೊಡುವ (**ಶೆಂತಾಮರೈ ಕೈಯಾಲ್**) ತತ್ವವೇ ನೀಳಾ. ನಮ್ಮ ಅಂಜಲಿಗೆ ಕರಗಿಹೋಗುವ ಸ್ವಭಾವದವಳೆಂದು ಈ ಪದ್ಯದಲ್ಲಿ ಹಾಡುತ್ತಾಳೆ ಗೋದೆ.

ಕುತ್ತು ವಿಳಕ್ಕೆರಿಯ—ನಂದಾದೀಪವು ಉರಿಯುತ್ತಿರಲು

ಕೋಟ್ಟುಕ್ಕಾಲ್ ಕಟ್ಟಿಲ್ ಮೇಲ್—ಆನೆಯ ದಂತಗಳಿಂದ ಮಾಡಲ್ಪಟ್ಟ ಕಾಲುಗಳುಳ್ಳ ಮಂಚದಮೇಲೆ

ಮೆತ್ತೆನ್ನ ಪಂಚಶಯನತ್ತಿನ್ ಮೇಲ್—ಮೃದುವಾದ ಐದು ಗುಣಗಳುಳ್ಳ ಹಾಸಿಗೆಯಮೇಲೆ

ಏರಿ–ಹತ್ತಿ, ಕೊತ್ತಲರ್‌ಪೂಂಕು�ழಲ್ — ಗೊಂಚಲಾಗಿ ಅರಳಿದ ಹೂಗಳಿಂದ ಶಿಂಗರಿಸಿದ ಕೂದಲುಳ್ಳ, **ನಪ್ಪಿನ್ನೈ**–ನೀಳಾದೇವಿಯ, **ಕೊಂಗೈ ಮೇಲ್**–ಮೊಲೆಯಮೇಲೆ, **ವೈತ್ತುಕ್ಕಿಡಂದ**–ಇಟ್ಟಿರುವ, **ಮಲರ್‌ಮಾರ್ಬಾ**–ಅರಳಿದ ವಕ್ಷಸ್ಥಳವುಳ್ಳವನೇ, **ವಾಯ್‌ತಿರವಾಯ್**–ಮಾತನಾಡು. ಅವನು ಏಳದಿರಲು, ನಮ್ಮ ಪ್ರಾರ್ಥನೆಯಿಂದ ಇವನು ಇನ್ನೂ ಪ್ರಸನ್ನನಾಗಲಿಲ್ಲವೆಂದು ತಿಳಿದು ನೀಳೆಯನ್ನೇ ಮತ್ತೆ ಪ್ರಾರ್ಥಿಸುವಳು ಗೋದೆ.

ಮೈತಡಂ ಕಣ್ಣಿನಾಯ್—ಕಾಡಿಗೆ ಹಚ್ಚಿ ವಿಶಾಲವಾಗಿ ಕಾಣುವ ಕಣ್ಣುಳ್ಳವಳೇ, **ನೀ**–ನೀನು, **ಉಮಣಾಳನೈ**–ನಿನ್ನ ಗಂಡನನ್ನು, **ಎತ್ತನೈಪೋದುಂ**–ಎಷ್ಟು ಹೊತ್ತಾದರೂ, **ತುಯಿಲೆழ**–ನಿದ್ದೆಯಿಂದ ಏಳಲು, **ಒಟ್ಟಾಯ್‌ಕಾಣ್**–ಅವಕಾಶ ಕೊಡದಂತಿದೆ, **ಎತ್ತನೈಯೇಲುಂ**–ಸ್ವಲ್ಪವೂ, **ಪಿರಿವು**–ಅವನನ್ನು ಬಿಟ್ಟಿರಲು, **ಆತ್ತಕಿಲ್ಲಾಯಾಲ್**–ಆಗದಂತಿರುವೆಯಲ್ಲಾ–ಹಾ–ಅಮ್ಮಾ, ಇದು **ತತ್ತುವಮನ್ರು**–ನಿನ್ನ ಸ್ವರೂಪವಲ್ಲ; **ತಕವನ್ರು**–ಸ್ವಭಾವವಾದ ದಯೆಯೂ ಅಲ್ಲ—

ಇಷ್ಟು ಮೇಲಾಗಿ ತೋರುವವರ್ಥ. ಇಲ್ಲಿ ವಿಶೇಷಾರ್ಥವೂ ಇದೆ. ಹಿಂದಿನ ಪದ್ಯದಲ್ಲಿ ಹೇಳಿದಂತೆ ಗೋದೆಯನ್ನು ಮುಂದೆ ಬಿಟ್ಟು ಗೋಪಿಕೆಯರು ಗೋಗರೆದ ಮೇಲೆ ನೀಳೆಯು ಹೊರಡಲು ಎದ್ದಾಗ ಅವಳನ್ನು ತಡೆದು ತನ್ನ ಪಕ್ಕದಲ್ಲಿ ಕೃಷ್ಣನು ಮಲಗಿಸಿಕೊಂಡಿದ್ದನ್ನು ಕಿಂಡಿಯಿಂದ ಕಂಡು, "ಕೃಷ್ಣಾ, ಇದೇನು? ನಮ್ಮಿಂದ ಏನು ಅಪರಾಧವಾಗಿದೆ? ನೀಳೆಯು ನಿನಗೆ ಮಾತ್ರ ಪ್ರಿಯಳೇನು? ನಮ್ಮ ತಾಯಲ್ಲವೇ ಅವಳು? ನೀವಿಬ್ಬರೂ ಇರುವಾಗ ನಂದಾದೀಪವನ್ನು ಹಿಡಿದಿರಲೂ ನಮಗೆ ಅವಕಾಶವಿಲ್ಲವೆ? ನಾವು ಪ್ರಪತ್ತಿಮಾಡಿದವರು; **ತೂಯೋಮಾಯ್ ವಂದೋಂ, ತುಯಿಲೆழ ಪಾಡುವಾರ್** ಹೀಗಿದ್ದರೂ ನೀನು ಒಲಿಯದಿರಲು ಕಾರಣವೇನು? ಬಾಯಿಬಿಟ್ಟು ಹೇಳು **(ವಾಯ್ ತಿರವಾಯ್)** ಎಂದಳು. ಯೋಚಿಸಿದಳು. ಕಾರಣವೇನಿರಬಹುದು? ಹೌದು,

ನಾಹಂ ತು ಸಖ್ಯೋ ಭಜತೋಪಿ ನೂನಂ
ಭಜಾಮ್ಯಮೀಷಾ ಮನುವೃತ್ತಿಸಿದ್ಧಯೇ ।
ಯಥಾಽಧನೋ ಲಬ್ಧಧನೇ ವಿನಷ್ಟೇ
ತಚ್ಚಿಂತಯಾನ್ಯನ್ನಿಭೃತಂ ನ ವೇದ ॥

—ಭಾಗ X, 32, 20

ಎಂದು ಅವನೇ ನಮ್ಮೆಲ್ಲರಿಗೂ ಹೇಳಿರುವನಲ್ಲವೇ? ಹಣ ಕಳಗೊಂಡವನ್ನು ಅದರ ಚಿಂತೆಯಲ್ಲೇ ಇರುವಂತೆ ಶ್ರೀಕೃಷ್ಣನನ್ನು ಕಳೆದುಕೊಂಡಿರುವ ನಾವು ಅವನನ್ನೇ ಚಿಂತಿಸುತ್ತಿರಲೆಂದು ಹೀಗೆ ಮಾಡಿರಬಹುದು. ಆದರೆ ಈ ಪರಿಹಾಸ ಎಲ್ಲಿಯವರಿಗೆ?

ಅವನನ್ನು ಬಿಟ್ಟು ಒಂದುಕ್ಷಣವೂ ಇರಲಾರದವರಾದ ನಮ್ಮನ್ನೇ ಇವನು ಹೀಗೆ ಮಾಡುವುದು? ನಮ್ಮ ತಾಯಿಯನ್ನೇ ಕೇಳಿಕೊಳ್ಳೋಣವೆಂದು ಮತ್ತೆ ಅವಳ ದಯಾ ಸ್ವಭಾವವನ್ನೂ ಪರಮಾತ್ಮನು ಅವಳಲ್ಲಿಟ್ಟಿರುವ ಪ್ರೀತಿಯನ್ನೂ ಕೊಂಡಾಡುವರು. ವೇದಾಂತ ಕನ್ನಡಿಯಿಂದ ಕಾಣುವವರ್ಥವಿದು. ಮೊದಲಿನ ನಾಲ್ಕು ಪಾದಗಳು ಶ್ರೀಕೃಷ್ಣನೇ ಪರಮಾತ್ಮನೆಂದು ನಿಶ್ಚಯಿಸಿವೆ. ಕೊನೆಯ ನಾಲ್ಕು ಪಾದಗಳು ನೀಳೆಯೇ ಪ್ರಪನ್ನರಾದವರಿಗೆ ದಿಕ್ಕು ಎಂದು ದೃಢಪಡಿಸಿವೆ.

ಪರಮಾತ್ಮ ವರ್ಣನೆ

ಕುತ್ತುವಿಳಕ್ಕೆರಿಯ — ನಂದಾದೀಪವು ಉರಿಯುತ್ತಿದೆ. ಈ ದೀಪದಲ್ಲಿ ಐದು ಮೊಖವಿದೆ. ಐದು ವಿಧ ಜ್ಞಾನವು ಪ್ರಕಾಶಿಸುತ್ತಿದೆ. 1) ಶ್ರುತಿ 2) ಸ್ಮೃತಿ 3) ಇತಿಹಾಸ ಪುರಾಣ 4) ಪಾಂಚರಾತ್ರ ಮತ್ತು 5) ಪೂರ್ವಾಚಾರ್ಯ ಸೂಕ್ತಿ. ಇವೆಲ್ಲದರ ಒಟ್ಟಿನಿಂದ ಒಂದಾಗಿ ಬೆಳಗುವ ಮೇಧಾಜ್ಞಾನವು ನಂದಾದೀಪವಾಗಿ ಉರಿಯುತ್ತಿದೆ.

ಕೋಟ್ಟುಕ್ಕಾಲ್ ಕಟ್ಟಿಲ್ ಮೇಲ್—ಆನೆಯ ದಂತಗಳಿಂದ ಮಾಡಿದ ಕಾಲುಗಳುಳ್ಳ ಮಂಚದ ಮೇಲೆ–ಪರಮಾತ್ಮನು, ಅಹಂಕಾರ ಮಮಕಾರಗಳಿಂದ ತುಂಬಿ ತುಳುಕಿ ಪ್ರಳಯದಲ್ಲಿ ಆನೆಯಂತೆ ನಾಶವಾಗಿ, ಮತ್ತೆ ಹಿಂದಿನ ನೆನಪನ್ನೇ ಮುಂದಾಗುವಂತೆ 1) ವರ್ಣಾಶ್ರಮಧರ್ಮ 2) ನಾಲ್ಕು ವಿಧ ಸೃಷ್ಟಿ–ದೇವ, ಮನುಷ್ಯ, ತಿರ್ಯಕ್, ಸ್ಥಾವರ 3) ನಾಲ್ಕು ಯುಗಧರ್ಮ 4) ನಾಲ್ಕು ವಿಧ ಪುರುಷಾರ್ಥ 5) ನಾಲ್ಕು ಗತಿ, ಸಂಸಾರ, ಯಾಮ, ಧೂಮ, ಅರ್ಚಿರಾದಿ ಮತ್ತು ನಾಲ್ಕು ವಿಧ ಕರ್ಮ, ಧ್ಯಾನ, ಯಜನ್ನ, ಅರ್ಚನ ಮತ್ತು ನಾಮ ಸಂಕೀರ್ತನ, ಎನ್ನುವಂತೆ ನಾನಾ ಬಣ್ಣದ ಬೆಲೆ ಬಾಳುವ ನಾಲ್ಕು ಕಾಲುಗಳ ಮೇಲೆ ಕಟ್ಟಿರುವ ವಿಶ್ವವೆನ್ನುವ ಮಂಚದ ಮೇಲೆ

ಪಂಚಶಯನತ್ತಿ ಮೇಲೇರಿ—

ಶೈತ್ಯ–ಸೌಂದರ್ಯ–ಸೌಂಗಂಧ್ಯ–ಧಾವಲ್ಯ–ಮೃದು–ಭಾವತಃ ।
ಅನುಷ್ಣಾ–ಶೀತ–ಸುರಭಿ–ವಿಸ್ತೃತ–ಭಾವತಃ ।
ಪಟ್ಟ–ಪ್ರಸೂನ–ಕಾರ್ವಾಸ–ಪ್ರವಾಳ–ಮೃದುಕಂಬಳೈಃ ।
ಪಂಚಾತ್ಮಕಂ ವಿಭುಃ ಪ್ರಾಜ್ಞಾಃ ಶಯನಂ ತದಿಹೋದಿತಂ ॥

ಎಂದು ಹೇಳಿರುವಂತೆ ಹಂಸ ತೂಲಿಕಾತಲ್ಪದ ಮೇಲೆ ಹತ್ತಿ ಪರಮಾತ್ಮನಲ್ಲಿ ದಿವ್ಯ ರೂಪ, ದಿವ್ಯಸ್ಪರ್ಶ ಮತ್ತು ದಿವ್ಯ ಶಬ್ದಗಳಿವೆಯೆಂದು ವೇದವು ಹೇಳುತ್ತದೆ.

ಪ್ರಪಂಚವನ್ನು ಅವನು ಪೂರ್ಣವಾಗಿ ವ್ಯಾಪಿಸಿಕೊಂಡಿರುವುದರಿಂದ ಅವನ ಈ ದಿವ್ಯ ಗುಣಗಳು ಪ್ರಪಂಚದಲ್ಲೂ ಕಂಡಿವೆ ಪರಮಾತ್ಮನ **ಮಧುರ ಭಾವದಲ್ಲಿ** (ಟಪ್ಪಣಿ 21) ಗೋಪಿಯರಿಗೆ.

ಕೊತ್ತಲರ್ ಪೂಂಕುಳಲ್ ನಪ್ಪಿನ್ನೈ ಕೊಂಗೈಮೇಲ್—ಗೊಂಚಲು ಗೊಂಚಲಾಗಿ ಪರಿಮಳ ಹೂವನ್ನು ಮುಡಿಸಿಕೊಂಡಿರುವ ನೀಳಾದೇವಿಯ ಮೊಲೆಯಮೇಲೆ—

ಆಸ್ಫೋಟಯಂತಿ ಪಿತರಃ ಪ್ರನೃತ್ಯಂತಿ ಪಿತಾಮಹಾಃ ।
ವೈಷ್ಣವೋ ನಃ ಕುಲೇ ಜಾತಃ ಸ ನಸ್ಸಂತಾರಯಿಷ್ಯತಿ ॥

ಎಂದು ವರಾಹಪುರಾಣದಲ್ಲಿ ಹೇಳಿರುವಂತೆ ಒಬ್ಬ ವೈಷ್ಣವ ಅಂದರೆ ಪ್ರಪನ್ನನಿಂದ ಅವನವಂಶದವರೆಲ್ಲರೂ ಮೋಕ್ಷ ಹೊಂದುವರು; ವಂಶವೆನ್ನುವ ದಾರದಲ್ಲಿ ಕಟ್ಟಲ್ಪಟ್ಟು ಗೊಂಚಲು ಗೊಂಚಲಾದ ಅರಳಿದ ಹೂವಿನಂತಿರುವ ಚೇತನರನ್ನು, ಲಕ್ಷ್ಮಿಯಿಂದ ಪರಮಾತ್ಮನಿಗೆ ಅರ್ಪಿಸಲ್ಪಟ್ಟವೆನ್ನುವ ಅಭಿಮಾನದಿಂದ, ಅವನಿಂದಲೇ ಪಡೆದು ತಲೆಯಲ್ಲಿ ಮುಡಿಸಿಕೊಂಡಿರುವ ನೀಳಾದೇವಿಯ,

ಸಂಗೀತಮುಪಿ ಸಾಹಿತ್ಯಂ ಜಗನ್ಮಾತುಸ್ತನದ್ವಯಂ

ಎಂದಿರುವಂತೆ ಪ್ರೇಮಮಯ ಸಂಗೀತಸಾಹಿತ್ಯಭಾಂಡಾಗಾರವಾದ ವೇದವೆನ್ನುವ ಮೊಲೆಯ ಮೇಲು ಭಾಗವಾದ ಉಪನಿಷತ್ತಿನಲ್ಲಿ

ವೈತ್ತುಕ್ಕಿಡಂದ ಮಲರ್ ಮಾರ್ಬಾ—ಮಲಗಿ ಅರಳಿದ ಹೃದಯವುಳ್ಳ ಕೃಷ್ಣ

ನೀಳಾವರ್ಣನೆ

ಹೀಗೆ ಲಕ್ಷ್ಮೀಕೃತ್ಯದಲ್ಲಿ ಭಾಗಿನಿಯಾಗಿರುವ ನೀಳೆಯನ್ನು ಪರಮಾತ್ಮನೊಡನೆ ಕೂಡಿಸಿ ತೋರಿಸಿ ಎರಡನೇ ನಾಲ್ಕುಪಾದಗಳಿಂದ ಆವಳ ಸ್ವತಂತ್ರ ಕೃತ್ಯವನ್ನು ತಿಳಿಸುವರು ಗೋಪಿಕೆಯರು.

ಮೈತ್ತಡಂ ಕಣ್ಣಿನಾಯ್—ಅಂಜನವನ್ನು ಹಚ್ಚಿ ಕಣ್ಣಿಗೆ ಕಾಣದ ನಿಧಿಯನ್ನು ಕಾಣುವಂತೆ, ಕಾಡಿಗೆ ಹಚ್ಚಿಕೊಂಡು, ಸರ್ವಜ್ಞತೆಯನ್ನು ಹೊಂದಿ ಪರಮಾತ್ಮನ ಸಂಕಲ್ಪವನ್ನು ಅರಿತು, ಅವನನ್ನು ಬಿಟ್ಟಿರಲಾರದೆ, ನಮ್ಮನ್ನು ಅವನಲ್ಲಿಗೆ ಕರೆದೊಯ್ಯಲು ಹಿಂಜರಿಯುತ್ತಿರುವವಳೇ —

ನೀ . . . ಕಾಣ್—**ಎತ್ತನೈ . . . ಯಾಲ್**—

ಪರಮಾತ್ಮನಿಗೆ ನಿನ್ನಲ್ಲಿ ಪೂರ್ತಿ ಮೋಹ ಬರುವಂತೆ ನೀನು ಇನ್ನೂ ಹಾವಭಾವವನ್ನು ತೋರಿಸಿಲ್ಲ. ಅವನ **ಸಂಭೋಗ ಶೃಂಗಾರದಲ್ಲಿರದೆ ವಿಪ್ರಲಂಭ ಶೃಂಗಾರದಲ್ಲಿರುವೆಯಲ್ಲಾ ?** (ಟಪ್ಪಣಿ 22) ನೀನು ಪರಮಾತ್ಮನೊಡನೆ ಐಕ್ಯ ಭಾವವನ್ನು ಹೊಂದಿದರೆ ಆಗ ಆ ಸಂಭೋಗದಲ್ಲಿ ತನ್ನನ್ನೇ ತಾನು ಮರೆತು ನಿನ್ನ ದೃಷ್ಟಿಯಿಂದ ನಮ್ಮನ್ನು ನೋಡಿ ನಮ್ಮಲ್ಲಿಗೆ ತಾನೇ ಬರುವನು. ಹಾಗೆ ನೀನು ಇನ್ನೂ ಮಾಡಿಲ್ಲ.

ತತ್ತುವಮನ್ರು—ಇದು ನಿನ್ನ ಸ್ವರೂಪಕ್ಕೆ ವಿರುದ್ಧವಾಗಿದೆ.

ತಕವುಅನ್ರು—ನಿನ್ನದಯಾ ಸ್ವಭಾವವೂ ಅಲ್ಲ.

ಏಲೋರ್ ಎಂಪಾವಾಯ್

ಸ್ವಾಪದೇಶ

ಆಚಾರ್ಯ ಸಂತತಿಯಲ್ಲಿ ನಾವು ಶ್ರೀದೇವಿಯನ್ನು ನೆನೆದ ಮೇಲೆ ಶ್ರಿಯಃಪತಿಯನ್ನು ನೆನೆಯುವೆವು. ಹಿಂದಿನ ಪದ್ಯದಲ್ಲಿ ಶ್ರಿಯಃಪತಿಯನ್ನು ಪ್ರಾರ್ಥಿಸುವನು ಶಿಷ್ಯನಾದವನು. ಮತ್ತು ಅವನ ಕೃಪೆಗೆ ಪಾತ್ರನಾಗುವುದಕ್ಕೆ ಕಾರಣನಾದ ತನ್ನ ಸಾಕ್ಷಾದಾಚಾರ್ಯನನ್ನು ಪ್ರಾರ್ಥಿಸುವನು.

ಹಿಂದಿನ ಪದ್ಯದಲ್ಲಿ **ನಪ್ಪಿನ್ನೈ** ಎಂದರೆ ಶ್ರೀದೇವಿ. ಇಲ್ಲಿ ನಪ್ಪಿನ್ನೈ ಅವಳ ಅವತಾರ ಸ್ವರೂಪನಾದ ಆಚಾರ್ಯ.

ಕುತ್ತು . . . ಎರಿಯ—ನಂದಾದೀಪದಂತೆ ನಿತ್ಯವಾಗಿ ವೇದವು ಪಾರಮಾರ್ಥಿಕ ತತ್ವವನ್ನು ಬೆಳಗುತ್ತಿರುವಲ್ಲಿ—ಪರಾಶರಭಟ್ಟರು

ಹರ್ತುಂ ಶಮಃ ಸದಸದೀಶವಿವೇಕ್ತುಮಿಾಶಃ
ಮಾನಂ ಪ್ರದೀಪಮಿವ ಕಾರುಣಿಕೋ ದದಾತಿ

ಎಂದು ಹೇಳಿರುವಂತೆ ವೇದಾರ್ಥವು ಒಂದು ಪ್ರದೀಪ.

ಕೋಟ್ಟು . . . ಏರಿ—

ಕದಾ ಪುನಃ ಶಂಖರಥಾಂಗಕಲ್ಪಕಧ್ವಜಾರ
ವಿಂದಾಂಕುಶವಜ್ರಲಾಂಛನಂ ।
ತ್ರಿವಿಕ್ರಮ ! ತ್ವಚ್ಚರಣಾಂಬುಜದ್ವಯಂ
ಮದೀಯಮೂರ್ಧಾನಮಲಂಕರಿಷ್ಯತಿ ॥

—ಸ್ತೋ–ರ 31

ಎಂದು ಯಾಮುನಾಚಾರ್ಯರು ಹೇಳಿರುವಂತೆ **ಕೋಡು**–ಶಂಖ ಚಕ್ರಾದಿ ರೇಖೆಗಳಿಂದ ಕೂಡಿರುವ, **ಕಾಲ್**–ಪರಮಾತ್ಮನ ಪಾದಾರವಿಂದವನ್ನು, **ಕಟ್ಟಿಲ್**–ಆಶ್ರಯಿಸಿದುದರಿಂದ, **ಮೇಲೇರಿ**–ಎಲ್ಲರಿಗೂ ಮೇಲ್ಪಟ್ಟವರಾದ

ಪಂಚ . . . ಏರಿ—

ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂ ಚೈವ ತಥಾ ಪ್ರಾಪ್ತಿವಿರೋಧಿ ಚ ॥

ಎಂದಿರುವಂತೆ ಅರ್ಥಪಂಚಕವನ್ನು ಚೆನ್ನಾಗಿ ತಿಳಿದವರಾದ—ವೇದಾಂತದಲ್ಲಿ ತಿಳಿಯ ಬೇಕಾದವು ಐದು—(1) ಪರಮಾತ್ಮನೇ ನಾವು ಶಾಶ್ವತವಾಗಿ ಹೊಂದಬೇಕಾಗಿರುವ ತತ್ವ (2) ಅವನನ್ನು ಹೊಂದುವವನಾದ ನಾನು ಶರೀರಕ್ಕಿಂತಲೂ ಭಿನ್ನನಾದವನು (3) ಅಂಥ ನಾನು ಅವನನ್ನು ಹೊಂದಲು ಭಕ್ತಿಯನ್ನೋ, ಪ್ರಪತ್ತಿಯನ್ನೋ ಮಾಡಬೇಕು (4) ಹೀಗೆ ನಾನು ಇಷ್ಟು ದಿನಗಳು ಮಾಡದಿರಲು ಪ್ರತಿಬಂಧಕವೇನು ಎಂದು ತಿಳಿಯಬೇಕು ಮತ್ತು ಕೊನೆಯದಾಗಿ (5) ಮೋಕ್ಷವೆಂದರೇನು? ಇಷ್ಟನ್ನೂ ಚೆನ್ನಾಗಿ ತಿಳಿದವನು ಆಚಾರ್ಯ.

ಕೊತ್ತಲರ್ ಪೊಂಕುೞಲ್—ಹಿಂದೆ ಹೇಳಿದಂತೆ (14ನೇ ಪಾಶುರ ನೋಡಿ) ಅಹಿಂಸೆ ಮೊದಲಾದ ಎಂಟು ಪುಷ್ಪಗಳು ಅರಳಿರುವುದರಿಂದ ಅಹಂಕಾರ ಮಮಕಾರವನ್ನು ಬಿಟ್ಟಿರುವ

ನಪ್ಪಿನ್ನೈ—ಶ್ರೀದೇವಿಗೆ ಮುಂದೆ ಬರುವವರಾದ ಆಚಾರ್ಯರ

ಕೊಂಗೈಮೇಲ್ವೈತ್ತು—ಜ್ಞಾನ ಮತ್ತು ಭಕ್ತಿಗಳನ್ನು ಆಶ್ರಯಿಸಿ

ಕಡಂದಮಲರ್‌ಮಾರ್ಬಾ—ಸಂತೋಷದಿಂದಿರುವ ಶ್ರಿಯಃಪತಿಯೇ

ವಾಯ್‌ತಿರವಾಯ್—

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೆ ।
ಅಭಯಂ ಸರ್ವಪಾಪೇಭ್ಯೋ ದದಾಮ್ಯೆತದ್ವ್ರತಂ ಮಮ ॥

ಎಂದು ರಾಮನಾಗಿಯೂ

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಎಂದು ಕೃಷ್ಣನಾಗಿಯೂ

ಸ್ಥಿತೇ ಮನಸಿ ಸುಸ್ವಸ್ಥೇ ಶರೀರೇ ಸತಿ ಯೋ ನರಃ ।
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ।
ತಮ್ಮೇವಂ ಮ್ರಿಯಮಾಣಂ ತು ಕಾಷ್ಠಪಾಷಾಣಸನ್ನಿಭಂ ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ ॥

ಎಂದು ವರಾಹಮೂರ್ತಿಯಾಗಿಯೂ

ಹೇಳಿರುವ ಮಾತುಗಳು ನನ್ನಲ್ಲಿ ಅರಳುವಂತೆ ಮಾಡುವೆನೆಂದು ಬಾಯಿಬಿಟ್ಟು ಹೇಳು.—**ಇಲ್ಲಿಯವರಿಗೂ ಪರಮಾತ್ಮನಲ್ಲಿ ಪ್ರಾರ್ಥನೆ.**

ಮೈತಡಂಕಣ್ಣಿನಾಯ್—ಪರಮಾತ್ಮನೆನ್ನುವ ಅಂಜನದಿಂದ ವಿಸ್ತಾರವಾದ ಜ್ಞಾನ ಚಕ್ಷುಸ್ಸುಳ್ಳವನೇ

ನೀ ಉನ್ ಮಣಾಳನೈ—ನಿನ್ನ ಸ್ವಾಮಿಯಾದ ಶ್ರಿಯಃಪತಿಯು

ಎತ್ತನೈ . . . ಕಾಣ್—ಇಷ್ಟುದಿನಗಳಾದರೂ ನನ್ನನು ಕಟಾಕ್ಷಿಸಲು ಯೋಗನಿದ್ದೆಯಿಂದ ಎದ್ದುಬರಲು ಅವಕಾಶಕೊಡುತ್ತಿಲ್ಲವೇ?

ಎತ್ತನೈ . . . ಯಾಲ್—ಅವನನ್ನು ಬಿಟ್ಟಿರಲು ನಿಮ್ಮಿಂದ ಆಗುವುದಿಲ್ಲವೇ? ನಮಗೂ ಸ್ವಲ್ಪ ಬಿಟ್ಟುಕೊಡಲಾಗುವುದಿಲ್ಲವೇ?

ತತ್ತುವಮನ್ರು ತಕವುಅನ್ರು—ಇದು ತಮ್ಮ ಸ್ವರೂಪಕ್ಕೂ ಸ್ವಭಾವಕ್ಕೂ ಸರಿಯಾದುದಲ್ಲ; ತಾವು ಪ್ರಸನ್ನರಾಗಬೇಕು—**ಏಲೋರೆಂಪಾವಾಯ್**

ಮುಪ್ಪತ್ತುಮೂವರಮರರ್ಕು ಮುನ್ ಶೆನ್ರು
ಕಪ್ಪಂ ತವಿರ್ಕ್ಕುಂ ಕಲಿಯೇ ತುಯಿಲೆೞnಯ್
ಶೆಪ್ಪಮುಡೈಯಾಯ್ ತಿರಲುಡೈಯಾಯ್ ಶೆತ್ತಾರ್ಕ್ಕು
ವೆಪ್ಪಂ ಕೊಡುಕ್ಕುಂ ವಿಮಲಾ ತುಯಿಲೆೞnಯ್
ಶೆಪ್ಪೆನ್ನ ಮ್ಮೆಮುಲೈ ಶೆವ್ವಾಯ್ ಶಿರುಮರುಂಗಲ್
ನಪ್ಪಿನ್ನೈ ನಂಗಾಯ್ ತಿರುವೇ ತುಯಿಲೆೞnಯ್
ಉಕ್ಕಮುಂ ತಟ್ಟೊೞಿಯುಂ ತಂದು ಉನ್‌ಮಣಾಳನೈ
ಇಪ್ಪೋದೇ ಎಮ್ಮೈ ನೀರಾಟ್ಟು ಏಲೋರೆಂಪಾವಾಯ್ ॥ ೨೦ ॥

ಹಿಂದಿನ ಪದ್ಯದಲ್ಲಿ ಕೃಷ್ಣನೊಡನೆ ನೀಳೆಯನ್ನು ಎದ್ದುಬರುವಂತೆ ಗೋಪಿಕೆಯರು ಗೋಗರೆದರೂ ಅವನು ಬರಲಿಲ್ಲ, ಅವಳೂ ಇಲ್ಲ. ನಾವೇನಾದರೂ ತಪ್ಪು ಮಾಡಿರುವೆವೋ ಎಂದು ಯೋಚಿಸಿದರು. ಹೌದು, ನೀಳೆಯು ಸಂತೋಷದಿಂದ ಬಂದು ಬಾಗಿಲು ತೆಗೆಯದಂತೆ ತಡೆದನೆಂದು ಕೃಷ್ಣನನ್ನು ದೂಷಿಸಿದೆವು. ಅವನು ಹಾಗಿದ್ದರೂ ತಾಯಿಯಾದ ಇವಳು ಬರದೇ ಇದ್ದುದು ತಪ್ಪು ಎಂದು ನೀಳೆಯನ್ನೂ ದೂಷಿಸಿದೆವು. ಪ್ರಪನ್ನರಾಗಿ ಶಾಂತಚಿತ್ತರಾಗಿರಬೇಕಾದವರು ಯೋಚನೆಮಾಡದೆ ಇಬ್ಬರನ್ನೂ ಅಲ್ಲಗಳೆದಿದ್ದು ಎಂದಿಗೂ ಸರಿಯಲ್ಲ. ನಮ್ಮ ಬುದ್ಧಿಯು ಇನ್ನೂ ಪಕ್ವವಾಗಿಲ್ಲವೆಂದೇ ಕೃಷ್ಣ ನೀಳೆಯನ್ನು ಬಿಟ್ಟುಕೊಡಲಿಲ್ಲ. ಅವನು ಅಪೇಕ್ಷಿಸದೆ

ಅವಳು ಹೇಗೆತಾನೇ ಬಂದಾಳು? ಇದನ್ನು ನಾವು ಯೋಚಿಸದೆ ಇಬ್ಬರನ್ನೂ ಹೀಯಾಳಿಸಿದೆವು. ಇದು ಸರ್ವಥಾ ತಪ್ಪು. "ಸ್ವಾಮಿ ನಿನ್ನನ್ನು ಅನುಭವಿಸಲು ಉಪಾಯವನ್ನು ನೀನೇ ತೋರಬೇಕು. ನಾವು ಅನನ್ಯಗತಿಕರು" ಎಂದು ಈಗ ಪ್ರಾರ್ಥಿಸುತ್ತಾರೆ ಗೋಪಿಕೆಯರು. ಇದೇ ಮುಖ್ಯಾರ್ಥ ಈ ಪದ್ಯದಲ್ಲಿಂದು ಎಲ್ಲಾ ವ್ಯಾಖ್ಯಾನಕಾರರೂ ಹೇಳಿರುವರು.

ತಾವು ಅವನನ್ನೇ ನಂಬಿ ಅವನನ್ನೇ ಆಶ್ರಯಿಸಿರುವೆವೆಂದು ತೋರಿಕೊಳ್ಳಬೇಕೆಂದು ಅವರು ನಿಶ್ಚಯಿಸಿದರು. ಗೋದೆಯ ಹೃದಯವೇ ಅವರದು. ಹೌದು, ಪೆರಿಯಾಳ್ವಾರ್ರಿಗೆ, ಅವರ ಈ ತೆರನಾದ ಭಾವವನ್ನು ಕಂಡು ಗರುಡನ ಮೇಲೆ ಸೇವೆಕೊಟ್ಟ; ಪಲ್ಲಾಂಡು ಹಾಡಿಸಿಕೊಂಡ; ಕೃಷ್ಣನಾಗಿ ಬಂದು "ನೀರಾಟ್ಟಂ, ಪೂಚೂಟ್ಟಲ್, ಕಾಪ್ಪಿಡಲ್" ಹಾಡಿಸಿಕೊಂಡ; ಹಾಗೆಯೇ ಅಕ್ರೂರನಿಗೂ ನೀರಿನಲ್ಲಿ ಸ್ನಾನ ಮಾಡುತ್ತಿರುವಾಗ, ತಾನು ದಡದಲ್ಲಿದ್ದರೂ, ನೀರಿನಲ್ಲಿ ಬೇರೇ ರೂಪದಲ್ಲಿ ತೋರಿಕೊಂಡ; ದುರ್ಯೋದನನ ಆಸ್ಥಾನದಲ್ಲಿ ಅನೇಕ ಕೃಷ್ಣರಾದ. ನಾನಾರೂಪವನ್ನು ಒಂದೇಕಾಲದಲ್ಲಿ ತೆಗೆದುಕೊಳ್ಳಬಲ್ಲ ನಮ್ಮ ಕೃಷ್ಣ.

ನ ತಸ್ಯ ಪ್ರಾಕೃತಾ ಮೂರ್ತಿಃ ಮಾಂಸಮೇದೋಸ್ಥಿ ಸಂಭವಾ।
ಯೋಗಿತ್ವಾಚ್ಛೇಶ್ವರತ್ವಾಚ್ಚ ಸರ್ವರೂಪಧರೋ ಹರಿಃ॥

ಎಂದಲ್ಲವೇ ವರಾಹಪುರಾಣದಲ್ಲಿ (75–42) ಹೇಳಿದೆ. ಈಗ ಕೃಷ್ಣನು ಎಲ್ಲಿಯಾದರೂ ಇರಲಿ ನಮಗಾಗಿ ನೀಳಿಯೊಡನೆ ಬಂದೆ ಬರುವನು. ಅದಕ್ಕೆ ಅವನಲ್ಲೇ ನಾವು ಎಲ್ಲಾ ಆಲಂಬನವನ್ನೂ ಇಡಬೇಕು–ಎಂದು ನಿರ್ಧಾರಕ್ಕೆ ಬಂದು ಪ್ರಾರ್ಥಿಸುತ್ತಾರೆ.

ಮುಪ್ಪತ್ತುಮೂವರಮರರ್ಕು ಕಪ್ಪಂ ತವಿರ್ಕ್ಕುಂ ಕಲಿಯೇ ತುಯಿಲೆಳ್ಳಯ್॥

33 ಕೋಟಿ ದೇವತೆಗಳಿಗೆ ಮುಂದೆ ಹೋಗಿ ಅವರ ಕಂಪ ಅಂದರೆ ನಡುಕವನ್ನೂ ಮತ್ತು ಕಪ್ಪವನ್ನೂ ತಪ್ಪಿಸಿದ ಸಮರ್ಥನೇ ನಿದ್ದೆಯಿಂದೆದ್ದೇಳು. ಪ್ರಭುಗಳಾಗಿರುವ ದೇವತೆಗಳು 33–ಆದಿತ್ಯರು 12, ರುದ್ರರು 11, ವಸುಗಳು 8, ಅಶ್ವಿನೀ ದೇವತೆಗಳು 2. ಪ್ರತಿಯೊಬ್ಬರ ಕೆಳಗೂ ಅನೇಕ ದೇವತೆಗಳಿರುವರು. ಇವರೆಲ್ಲರಿಗೂ ಆಗಾಗ ಅಸುರರಿಂದ ಕಷ್ಟವೊದಗುತ್ತಇವೆ. ಇತಿಹಾಸ ಪುರಾಣಗಳಲ್ಲಿ ಇವರ ಕಷ್ಟವನ್ನು ತಪ್ಪಿಸಲು ರುದ್ರನು ಪ್ರಯತ್ನಪಟ್ಟು ವಿಫಲನಾದುದಕ್ಕೆ ನಿದರ್ಶನಗಳು ಅನೇಕವಿವೆ. ಅಂತಹ ಸಂದರ್ಭಗಳಲ್ಲಿ ಅವರೆಲ್ಲರ ನಡುಕವನ್ನು ಹೋಗಲಾಡಿಸಿ, ಅವರೇ ವಿಶ್ವಕ್ಕೆ ಪ್ರಭುಗಳೆಂದು ಯಜ್ಞ ಯಾಗಾದಿಗಳಿಂದ, ಅವರು ತೆಗೆದುಕೊಳ್ಳುತ್ತಿದ್ದ ಕಪ್ಪ ಕಾಣಿಕೆಗಳನ್ನು ತಪ್ಪುವಂತೆ ಮಾಡಿದ ನಾರಾಯಣನೇ ಈಗ ಕೃಷ್ಣನಾಗಿರುವನು. ಇವನು ಸರ್ವಸಮರ್ಥನು--ಕಲಿ–ಎಂದು ಹೇಳಿ "ಸ್ವಾಮಿ, ನಿದ್ದೆಯಿಂದ ತಿಳಿದೇಳಬೇಕು" ಎಂದು ಪ್ರಾರ್ಥಿಸಿದರು.

ಪರಮಾತ್ಮನಲ್ಲಿ ಆರು ಗುಣಗಳಿವೆ, ಮಿಕ್ಕ ದೇವತೆ, ಮಾನವ, ರಾಕ್ಷಸರಲ್ಲಿರುವ ಒಳ್ಳೆಗುಣಗಳೆಲ್ಲಾ ಈ ಆರು ಗುಣಗಳಿಂದ ಬಂದ ಭಿಕ್ಷೆ. ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸೆನ್ನುವ ಈ ಆರು ಗುಣಗಳಲ್ಲಿ ಶಕ್ತಿಯೊಂದನ್ನೇ ಪ್ರಧಾನವಾಗಿ ಎತ್ತಿತೋರಿಸಿರುವರು–ಎನ್ನುವರು ಕೆಲವರು. ಅದು ಹಾಗಲ್ಲ.

ಪರಮಾತ್ಮನು ಜ್ಞಾನ ಸ್ವರೂಪನು; ಜ್ಞಾನ ಸ್ವಭಾವವುಳ್ಳವನು. ಈ ಸ್ವಭಾವ ಜ್ಞಾನವೇ ಕಾರ್ಯರೂಪದಲ್ಲಿ, ಬಲ, ಐಶ್ವರ್ಯ, ವೀರ್ಯ, ಶಕ್ತಿ ಮತ್ತು ತೇಜಸ್ಸೆಂದು ಬೇರೆ ಐದು ರೂಪಗಳಲ್ಲಿ ತೋರಿಕೊಳ್ಳುವವು. ಇಂತಹ ಷಾಡ್ಗುಣ್ಯ ಪರಿಪೂರ್ಣನಾದ ಶ್ರೀಮನ್ನಾರಾಯಣನೇ ಜಗತ್ತಿಗೆ, ಮಡಕೆಗೆ ಕುಂಬಾರನಂತೆ ನಿಮಿತ್ತ ಕಾರಣನೂ, ಮಣ್ಣಿನಂತೆ ಉಪಾದಾನ ಕಾರಣನೂ ಆಗಿರುವನು. ಅವನಿಲ್ಲದೆ ಯಾವುದೂ ಇಲ್ಲ. ಹಾಗಿದ್ದರೂ ತಾನು ಯಾವತ್ತಿಗೂ ಬೇರೆಯಾಗಿಯೇ ಇದ್ದುಕೊಂಡು, (1) ಜೀವ (2) ವಿಶ್ರಪ್ರಕೃತಿ (3) ಶುದ್ಧಸತ್ವ (4) ಕಾಲ ಮತ್ತು (5) ಧರ್ಮಭೂತ ಜ್ಞಾನವೆನ್ನುವ ಐದು ಪದಾರ್ಥಗಳನ್ನು ಬೇರೆಯಾಗಿಯೇ ಶಾಶ್ವತವಾಗಿಟ್ಟಿರುವನು, ಇವನೂ ಸೇರಿ ಈ ಆರು ಪದಾರ್ಥಗಳಿಗೆ ಶ್ರೀವೈಷ್ಣವ ಸಿದ್ಧಾಂತದಲ್ಲಿ ದ್ರವ್ಯಗಳೆಂದು ಹೆಸರು. ಈ ಆರು ದ್ರವ್ಯಗಳಲ್ಲದೆ 10 ಅದ್ರವ್ಯಗಳಿವೆ. (1) ಸತ್ವ (2) ರಜಸ್ಸು (3) ತಮಸ್ಸು (4) ಶಬ್ದ, (5) ಸ್ಪರ್ಶ (6) ರೂಪ (7) ರಸ (8) ಗಂಧ (9) ಸಂಯೋಗ ಮತ್ತು (10) ಶಕ್ತಿ ಎನ್ನುವವೇ ಈ ಹತ್ತು. ಹೀಗೆ ದ್ರವ್ಯ ಮತ್ತು ಅದ್ರವ್ಯವೆಂದು ವಿಭಾಗಗೊಂಡ ಈ 16 ಪದಾರ್ಥಗಳ ಸ್ವರೂಪ ಮತ್ತು ಸ್ವಭಾವವನ್ನು ತಿಳಿದರೇನೇ ನಮ್ಮ ಸಿದ್ಧಾಂತವು ಅರ್ಥವಾಗುವುದು. ಅದೆಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಿಲ್ಲ. ಆದರೂ ಈ ಪಾಶುರದ ಮಹಿಮೆಯನ್ನು ತಿಳಿಯಲು ಪ್ರಧಾನವಾಗಿ ಎರಡನ್ನು ಮಾತ್ರ ಹೇಳಲಾಗುತ್ತದೆ.

ಯಾವುದು ತಾನು ಉಪಾದಾನಕಾರಣವಾಗಿ ಉಳಿದು, ತನ್ನಿಂದ ಉಪಾದೇಯವಾಗಿ ಅನಂತರೂಪದಲ್ಲಿ ಬೆಳೆಯಬಲ್ಲದೋ ಅದೇ ದ್ರವ್ಯ; ಹಾಗಿಲ್ಲದ್ದು ಅದ್ರವ್ಯ. **(ಉಪಾದಾನತ್ವಂ ದ್ರವ್ಯತ್ವಂ; ಅವಸ್ಥಾನತ್ವಂ ಉಪಾದಾನತ್ವಂ; ಆಗಂತುಕ ಅಪೃಥಕ್ ಸಿದ್ಧಧರ್ಮಃ ಅವಸ್ಥಾ। ಅನುಪಾದಾನತ್ವಂ ಅದ್ರವ್ಯತ್ವಂ)** ಧರ್ಮಭೂತಜ್ಞಾನದ ಒಂದು ರೂಪ ಶಕ್ತಿ; ಷಾಡ್ಗುಣ್ಯದಲ್ಲಿ ಅಡಗಿರುವುದು; **"ಜಗತ್ಕೃತಿಭಾವೋಯಸ್ಯಾಶಕ್ತಿಃ ಪರಕೀರ್ತಿತಾ"** ಎನ್ನುವುದೇ ಅದರ ಲಕ್ಷಣ; ಈ ಶಕ್ತಿಯು ಒಂದು ದ್ರವ್ಯವಿಶೇಷ. ಅದ್ರವ್ಯವಾದ ಶಕ್ತಿಯೂ ಒಂದಿದೆ. **"ಕಾರ್ಯೋಪಯೋಗಿ ಕಾರಣಾಂತರ್ಗತ—ಅದ್ರವ್ಯವಿಶೇಷಃ"** ಎನ್ನುವುದು ಅದರ ಲಕ್ಷಣ. ಪರಮಾತ್ಮನ ನಿತ್ಯಸಂಕಲ್ಪದಿಂದ, ಸ್ವಾಭಾವಿಕವಾಗಿ ಜಡವಾದ ಕಾಲವು ಜಡವಾದ ವಿಶ್ರಪ್ರಕೃತಿಯೊಡನೆಯೂ, ಜಡವಲ್ಲದ ಧರ್ಮಭೂತಜ್ಞಾನವು ಜೀವನೊಡನೆಯೂ, ಜಡವಲ್ಲದ ಶುದ್ಧಸತ್ವವು ಪರಮಾತ್ಮನೊಡನೆಯೂ ಸೇರಿ,

ದ್ರವ್ಯಗಳು ಚಿತ್ತು, ಅಚಿತ್ತು ಮತ್ತು ಈಶ್ವರರೆಂದು ಮೂರೇ ತತ್ವಗಳಾಗಿವೆ. ಈ ಮೂರರಲ್ಲೂ ಈಶ್ವರನೇ ಎಲ್ಲವನ್ನೂ ವ್ಯಾಪಿಸಿಕೊಂಡಿರುವುದರಿಂದ (ನೀರಿನಲ್ಲಿ ಸಕ್ಕರೆಯಂತೆ) ತತ್ವವು ಒಂದೇ ಎಂದು ವೇದವು ಹೇಳುತ್ತಿದೆ. ಅದ್ರವ್ಯಗಳಲ್ಲಿ ಸತ್ವ, ರಜಸ್ಸು ಮತ್ತು ತಮಸ್ಸು, ಮಿಶ್ರಪ್ರಕೃತಿಯ ಬಿಚ್ಚಲಾರದ ಗುಣವಾಗಿಯೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಹಾಗೆಯೇ ಆಕಾಶ, ವಾಯು, ಅಗ್ನಿ, ಜಲ ಮತ್ತು ಮಣ್ಣಿನ ಗುಣಗಳಾಗಿಯೂ ಅವನ ಸಂಕಲ್ಪದಿಂದಿವೆ. ಇನ್ನು ಉಳಿದಿರುವುದು ಸಂಯೋಗ ಮತ್ತು ಶಕ್ತಿ ಎನ್ನುವ ಎರಡು ಅದ್ರವ್ಯಗಳು; ಇವುಗಳ ಸ್ವರೂಪ ಮತ್ತು ಸ್ವಭಾವಗಳನ್ನು ಸ್ವಲ್ಪ ವಿಸ್ತಾರವಾಗಿ ತಿಳಿಯಬೇಕು.

ಇವೆರಡರಲ್ಲಿ "ಸಂಯೋಗ" ವೆನ್ನುವ ಅದ್ರವ್ಯವನ್ನು ತಿಳಿಯುವುದು ಕಷ್ಟ. ಇದೊಂದು ಪದಾರ್ಥ ಇರುವ ವಸ್ತು. ಇದಿಲ್ಲದಿದ್ದರೆ ಎರಡು ವಸ್ತುಗಳ ನಡುವೆ ಅಂತರಾಳವಿಲ್ಲದೆ ಒಟ್ಟಿಗೆ ಇರಲೇ ಸಾಧ್ಯವಿಲ್ಲ. ಈಶ್ವರನು ಜೀವನೊಡನೆ, ಜೀವನು ಮಿಕ್ಕ ಜೀವರೊಡನೆ, ಜೀವ ಶರೀರದೊಡನೆ ಇರಲೇ ಸಾಧ್ಯವಿಲ್ಲ. ಎರಡನ್ನು ಅಂತರಾಳವಿಲ್ಲದೆ ಒಟ್ಟುಗೂಡಿಸಿ, ಅವೆರಡರೊಡನೆ ತಾನೂ ಅಂತರಾಳವಿಲ್ಲದೆ ಸೇರಿರಲು ಕಾರಣವಾದ ವಸ್ತುವೇ ಸಂಯೋಗ. ಇದನ್ನು ಅನುಮಾನದಿಂದ ತಿಳಿಯಲು ಸಾಧ್ಯವೇ ವಿನಹ ಕೈತೋರಿಸಿ ತಿಳಿಸುವ ಪದಾರ್ಥವಲ್ಲವಿದು. ಇದು ನಿತ್ಯವಸ್ತುಗಳ ಜೋಡಣೆಯಲ್ಲಿ ನಿತ್ಯವಾಗಿಯೂ, ಮಿಕ್ಕೆಡೆ ಅನಿತ್ಯವಾಗಿಯೂ ಇದೆ. ತರ್ಕಶಾಸ್ತ್ರ ಜ್ಞಾನ ಬೆಳೆದಿರುವವರಿಗೆ ಈ ಪದಾರ್ಥದ ಸ್ವರೂಪ ಮತ್ತು ಸ್ವಭಾವವು ತಿಳಿಯುವುದು. ಸಾಮಾನ್ಯ ಬುದ್ಧಿಗೆ ತಿಳಿಸುವುದಾದರೆ, **ಇದು ಎರಡು ವಸ್ತುಗಳ ನಡುವಣ ಸ್ನೇಹವಿಶೇಷ**. ಲೋಕದಲ್ಲಿ ನಮಗೆ ಪ್ರೀತಿಯ ಅನುಭವವಿರುವುದು ಇದರಿಂದಲೇ. ಈಶ್ವರನೂ, ಪ್ರಪಂಚವೂ ಒಟ್ಟುಗೂಡಿರುವುದೂ, ಜೀವನೊಡನೆ ಅವನ ಜ್ಞಾನವು ಸೇರಿರುವುದೂ, ಈ ಜ್ಞಾನವು ಪರಮಾತ್ಮನೊಡನೆ ಕೂಡಿರುವುದೂ ಈ ಸಂಯೋಗದಿಂದಲೇ. ವಿಶ್ವದಲ್ಲಿ ಪ್ರಕೃತಿ, ಪುರುಷ, ಈಶ್ವರವೆನ್ನುವ ಮೂರು ತತ್ವಗಳನ್ನೂ ಕೂಡಿಸಿರುವುದು ಈ ಸಂಯೋಗವೇ. ಪ್ರಕೃತಿಯಲ್ಲಿ 24 ತತ್ವಗಳಿವೆ. (1) ಅವ್ಯಕ್ತ (2) ಮಹತ್ತು (3) ಅಹಂಕಾರ (4) ಮನಸ್ಸು (5–14) ಹತ್ತು ಇಂದ್ರಿಯಗಳು (15–24) ಪಂಚ ಮಹಾಭೂತಗಳು ಮತ್ತು ಪಂಚ ವಿಷಯಗಳು ಅಂದರೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳು—ಇವೇ ಆ 24 ತತ್ವ. ಪ್ರತಿಯೊಂದು ತತ್ವಕ್ಕೂ ಒಂದೊಂದು ಚೇತನ ಉಸ್ತುವಾರಿ ನೋಡುತ್ತಿದೆ. ಈ ಚೇತನಗಳಿಗೆ ಅಧಿದೇವತೆಗಳೆಂದು ಹೆಸರು. ಹಾಗೆಯೇ ಪ್ರತಿ ಚೇತನನ ಸ್ವರೂಪಕ್ಕೆ ನಾರಾಯಣನೂ, ಸ್ವಭಾವವಾದ ಜ್ಞಾನಕ್ಕೆ ಶ್ರೀದೇವಿಯೂ, ಪ್ರೇಮಕ್ಕೆ ನೀಳಾದೇವಿಯೂ, ವಿರಕ್ತಿಗೆ ಭೂದೇವಿಯೂ ಅಧಿದೇವತೆಗಳೆಂದು ಸಿದ್ಧಾಂತದ ಗುಹ್ಯೋಪದೇಶವಾಗಿದೆ. ಚೇತನರ ಜ್ಞಾನದಲ್ಲಿ ಪ್ರೇಮ ಬೆಳೆದು, ಪ್ರಕೃತಿ ಸಂಬಂಧವಿದ್ದರೂ ಅದನ್ನು ಸ್ನೇಹದಿಂದ ನೋಡುವಂತೆ ಮಾಡುವವಳು ಸಂಯೋಗವೆಂಬ ಅದ್ರವ್ಯದ

ಅಧಿದೇವತೆಯಾದ ನೀಳಾದೇವಿಯೆಂದು ಬಹು ಸೂಕ್ಷ್ಮದೃಷ್ಟಿಯುಳ್ಳವರಿಗೆ ತಿಳಿಯುವುದು. ಹಾಗೆಯೇ ಶಕ್ತಿ ಎನ್ನುವ ಅದ್ರವ್ಯಕ್ಕೆ ಅಧಿದೇವತೆಯಾಗಿ ಪರಮಾತ್ಮನ ಶಕ್ತಿ ಸ್ವರೂಪಿಣಿಯಾಗಿರುವವಳೇ ಶ್ರೀದೇವಿ. ಶ್ರೀ ಭೂದೇವಿಯರಿರುವೆಡೆಯೆಲ್ಲಾ ನೀಳಾದೇವಿಯು ಇರುವಳು. ಅದಕ್ಕಾಗಿಯೇ ಇವಳನ್ನು ಶ್ರೀ ಭೂದೇವಿಯರಿಗಿಂತ ಬೇರೆಯಾಗಿ ವೇದವು ಹೇಳುತ್ತಿಲ್ಲ. ಭೂದೇವಿಯು ಇಲ್ಲಿ ಗೋದೆಯಾಗಿರುವಳು. ಆ ಕಾರಣದಿಂದಲೇ ಈ ಪದ್ಯದಲ್ಲೂ ನೀಳಾದೇವಿಯನ್ನು ಅವಳು "ತಿರು" ಅಂದರೆ "ಶ್ರೀ" ಎಂದೇ ಕರೆದಿರುವಳು. ಪರಮಾತ್ಮನು "ಕಲಿ" ಅಂದರೆ ಸರ್ವಶಕ್ತನು ಮತ್ತು ಶಕ್ತಿ ಸ್ವರೂಪಿಣಿಯಾದ ಶ್ರೀಯೊಡನೆ ಕೂಡಿರುವವನು. ಅವನ ತೇಜಸ್ಸು ನಮ್ಮಲ್ಲಿ ಎಷ್ಟು ಬೆಳೆಯುವುದೋ ಅದಕ್ಕನುಗುಣವಾಗಿ, ಶಕ್ತಿಯಾಗಿ ಶ್ರೀದೇವಿಯು ತೋರುವಳು. ಪರಮಾತ್ಮನನ್ನು ಕುರಿತ ಜ್ಞಾನದಿಂದಲೇ ಜೀವನು ಕ್ರಮೇಣ ಪಕ್ವವಾಗುವನು. ಇದು ಪರಮಾತ್ಮನ ಅನುಮತಿಯಿಂದ ಶ್ರೀದೇವಿಯು ಕೊಡುವ ಜ್ಞಾನಬಲ. ಆದ್ದರಿಂದ ಕೃಷ್ಣನೇ "ಕಲಿ."

ಹೀಗೆ ಹೇಳುವಾಗ ಗೋದೆಯ ಸ್ಮೃತಿಯಲ್ಲಿ ಎರಡು ಉದಾಹರಣೆಗಳು ಇದ್ದಿರಬೇಕು. (1) ರಾಮಾಯಣ ಉತ್ತರಕಾಂಡ 8, 3ರಲ್ಲಿ ಹೇಳಿರುವ ಪ್ರಕರಣ; ಮತ್ತು (2) ಭಾಗವತ VIII, 4ರಲ್ಲಿ ಬರುವ ಇತಿಹಾಸ.

ರಾಮಾಯಣದಲ್ಲಿ ಬರುವ ಕಥೆಯಿತು. ಲಂಕೆಯ ರಾಕ್ಷಸರಿಂದ ದೇವತೆಗಳಿಗೆ ಕಷ್ಟವೊದಗಿದಾಗ, ಅವರ ಶರಣಾಗತಿಗೆ ಫಲವಾಗಿ ಪರಮಾತ್ಮನು ಉಪೇಂದ್ರಾವತಾರವನ್ನು ಮಾಡಿ ಆ ರಾಕ್ಷಸರನ್ನು ಸದೆಬಡೆದು ಓಡಿಸಿಯೂ ತೃಪ್ತನಾಗದೆ ಲಂಕೆಯ ಕಡೆಗೆ ಓಡುತ್ತಿದ್ದ ಅವರನ್ನು ಹಿಂಬಾಲಿಸುತ್ತಿದ್ದುದನ್ನು ಕಂಡ ರಾವಣನ ತಾತ ಮಾಲ್ಯವಂತನು—

नारायण न जानीषेक्षात्रं धर्मं सनातनं ।
अयुद्धमनसोः भगर्ना अस्मा हन्सि यथेतरः ॥

"ನಾರಾಯಣ, ಸಾಮಾನ್ಯಮಾನವನಂತೆ ನೀನು ನಷ್ಟತೇಜಸುಳ್ಳ ನಾವು ಓಡಿಹೋಗುತ್ತಿದ್ದರೂ ಓಡಿಸಿಕೊಂಡು ಬರುತ್ತಿರುವೆ; ನಿನಗೆ ಕ್ಷತ್ರಿಯ ಧರ್ಮವೇ ತಿಳಿದಂತಿಲ್ಲ" ಎಂದಾಗ, ನಾರಾಯಣನು

युष्मत्तो भव भीतानां देवानां वै मुयाभयं ।
राक्षसोत्सादनं दत्तं तदेतदनुपालयते ॥
प्राणैरपि प्रियं कार्यं देवानां हि सदा मुया ।
सोहं वो निहनिष्यामि रसातलगतानपि ॥

"ಮಾಲ್ಯವಂತನೆ, ದೇವತೆಗಳಿಗೆ ನಾನು ಅಭಯಕೊಟ್ಟಿರುವೆನು. ನಿಮ್ಮನ್ನು ನಾಶಮಾಡುವೆನೆಂದು ಮಾತುಕೊಟ್ಟಿರುವೆನು; ಅದನ್ನೇ ಈಗ ಮಾಡುತ್ತಿರುವೆನು; ಅವರಿಗೆ ಹಿತಮಾಡುವುದೇ ನನ್ನ ಕರ್ತವ್ಯ, ನನಗೆ ಜಾತಿಯಿಲ್ಲ; ಕುಲವಿಲ್ಲ. ಆಶ್ರಿತ ಸಂರಕ್ಷಣವೇ ನನ್ನ ಧರ್ಮ; ಆದ್ದರಿಂದ ರಸಾತಲಕ್ಕೆ ಹೋದರೂ ನಿಮ್ಮನ್ನು ಬಿಡದೆ ಕೊಲ್ಲುವೆನು" ಎಂದನು—ಆದ್ದರಿಂದ ಇವನೇ "**ಕಲಿ.**" (2)

ಮತ್ತೊಂದು ಇತಿಹಾಸ ಗಜೇಂದ್ರಮೋಕ್ಷ. ದ್ರಾವಿಡ ದೇಶದಲ್ಲಿ ಪಾಂಡ್ಯ ದೊರೆ ಇಂದ್ರದ್ಯುಮ್ನನೆನ್ನುವನು ವಿಷ್ಣುಭಕ್ತ. ಒಂದು ದಿನ ಇವನು ಇಂದ್ರಿಯ ಗಳನ್ನು ಅಡಗಿಸಿ, ಮೌನವ್ರತವನ್ನು ತಾಳಿ, ಮಲಯಪರ್ವತದಲ್ಲಿ ಹರಿಯನ್ನು ಪೂಜಿಸಿದನು. ಯಾದೃಚ್ಛಿಕವಾಗಿ ಅಲ್ಲಿಗೆ ಮಹಾಮುನಿ ಅಗಸ್ತ್ಯರು ಬಂದರು. ಅವರು ಬಂದಿದ್ದನ್ನು ಇವನು ಗಮನಿಸಲಿಲ್ಲ. ಗೌರವಿಸಲಿಲ್ಲ, ಅಷ್ಟಕ್ಕೆ ಕೋಪ ಗೊಂಡು "ನೀನು ಮದಿಸಿದ ಆನೆಯಾಗು" ಎಂದು ಶಪಿಸಿದರು. ಅದರಂತೆ ಇವನು ಸಲಗನಾಗಿ ತನ್ನ ಆನೆ ಗುಂಪಿನೊಡನೆ ಇಷ್ಟಬಂದಂತೆ ಮಲಯಪರ್ವತದಲ್ಲಿ ತಿರುಗುತ್ತಿರಲು ಒಂದುದಿನ ಬಿಸಿಲಿನಲ್ಲಿ ದಣಿದು ಹತ್ತಿರದಲ್ಲಿದ್ದ ಸರೋವರದಲ್ಲಿ ತೃಪ್ತಿಯಾಗಿ ನೀರು ಕುಡಿದು, ಎರಚಿಕೊಂಡು ಸಂತೋಷದಿಂದಿರುವಾಗ, ಅಲ್ಲಿದ್ದ ಒಂದು ಮೊಸಳೆ ಇವನ ಕಾಲನ್ನು ಹಿಡಿದು ಎಳೆಯಲು ಪ್ರಾರಂಭಿಸಿತು. ಎರಡಕ್ಕೂ ಯುದ್ಧ ನಡೆಯಿತು. ಮೊಸಳೆಯು ಸೋಲುವಂತೆ ಕಾಣಲಿಲ್ಲ. ದಿಕ್ಕು ತೋರಲಿಲ್ಲ ಆನೆಗೆ. ಕಂಡಕಂಡ ದೇವತೆಯನ್ನು ಪ್ರಾರ್ಥಿಸಿತು. ಯಾರೂ ಸಹಾಯಕ್ಕೆ ಬರಲಿಲ್ಲ; ಬರಲು ಸಮರ್ಥರಾಗಲಿಲ್ಲ. ಆಗ ಪರಮಾತ್ಮನಿಗೆ ಮೊರೆಯಿಟ್ಟಿತು.

ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಂ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥
ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನಂತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥
ನಮ ಆತ್ಮ ಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥

ಹೀಗೆ ಗೋಗರೆದಿದ್ದಕ್ಕೆ ಮರುಳಿ ಪರಮಾತ್ಮನು ಗರುಡಾರೂಢನಾಗಿ ಬಂದು ಮೊಸಳೆ ಯನ್ನು ಕೊಂದು ರಕ್ಷಿಸಿದನು. ಗಜೇಂದ್ರನನ್ನು ಹಿಡಿದಿದ್ದ ಮೊಸಳೆ ಶಾಪಕ್ಕೊಳ ಗಾಗಿದ್ದ ಒಬ್ಬ ಗಂಧರ್ವ, ಗಂಧರ್ವನಾದ ಇವನು ಒಂದುಕಾಲದಲ್ಲಿ ಒಂದು ಸರೋ ವರದಲ್ಲಿ ತನ್ನ ಹೆಂಗಸರೊಡನೆ ಜಲಕ್ರೀಡೆಯಾಡುತ್ತಿದ್ದ. ಅಲ್ಲಿಗೆ ದೇವಲರು ಬಾಯಲು ಬಂದರು. ಆಟಕ್ಕಾಗಿ ಅವರನ್ನು ಕಾಲು ಹಿಡಿದು ನೀರಿಗೆಳೆದ ಈ ಗಂಧರ್ವ. ಅದಕ್ಕೆ ಕೋಪಗೊಂಡು ಅವರು "ನೀನು ಮೊಸಳೆಯಾಗು" ಎಂದು

ಶಾಪಕೊಟ್ಟರು. ಆ ಮೊಸಳೇ ರೂಪದಲ್ಲಿದ್ದ ಗಂಧರ್ವನಿಗೂ ಶಾಪ ವಿಮೋಚನೆ ಯಾಯಿತು.

ಹೀಗೆ ಮತ್ತಗಜದ ಮತ್ತು ಮೊಸಳೆಯ ಶಾಪವನ್ನು ಬಿಡಿಸಲು ಸಮರ್ಥ ನಾದ ನಾರಾಯಣನೇ ಈಗ ನಮ್ಮ ಕೃಷ್ಣ. **ಅವನೇ ಕಲಿ.** ನಿಗಮಾಂತದೇಶಿಕರು ಗಜೇಂದ್ರ ಮೋಕ್ಷವನ್ನು ಸಂಗ್ರಹವಾಗಿ ಗರುಡ ಪಂಚಾಶತ್ ಎನ್ನುವ ಸ್ತೋತ್ರದ 47ನೇ ಶ್ಲೋಕದಲ್ಲಿ ಕೊಟ್ಟಿರುವರು. (3)

(1) ಚತುರ್ಮುಖ ಬ್ರಹ್ಮನ ಯಾಗದಲ್ಲಿ ಇಂದ್ರಾದಿಗಳ ಸ್ಥಾನದಲ್ಲಿ ತಾನೇ ಬಂದು ಹವಿಸ್ಸನ್ನು ತೆಗೆದುಕೊಂಡನು. ಹಸ್ತಿಗಿರಿ ಮಹಾತ್ಮ್ಯೆಯಲ್ಲಿ ಬರುವ ಕಥೆ ಇದು. ನಿಗಮಾಂತ ದೇಶಿಕರು ವರದ ಪಂಚಾಶತ್—ಎನ್ನುವ ಸ್ತೋತ್ರದ 8ನೇ ಶ್ಲೋಕದಲ್ಲಿ ಇದನ್ನು ತಿಳಿಸಿರುವರು. (2) ಶ್ರೀಕೃಷ್ಣನು ಗೀತೆಯಲ್ಲಿ

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥

"ಅರ್ಜುನ, ಎಲ್ಲಾ ಯಜ್ಞಗಳಲ್ಲಿಯೂ ಹವಿಸ್ಸನ್ನು ಕೊಡುವವನೂ ನಾನೇ ತೆಗೆದು ಕೊಳ್ಳುವವನೂ ನಾನೇ. ನನ್ನ ಈ ವಿಷಯವನ್ನು ಅರಿಯದೆ ಎಲ್ಲರೂ ಕೆಟ್ಟು ಹೋಗುತ್ತಿರುವರು" ಎಂದು ಹೇಳಿಕೊಂಡಿರುವರು. (3) "**ಈಶಾವಾಸ್ಯ ಮಿದಂ ಸರ್ವಂ**" ಎಂದು ಮೊದಲನೇ ಉಪನಿಷತ್ತು ಹೇಳಿ ಪರಮಾತ್ಮನೇ ಎಲ್ಲ ವನ್ನೂ ವ್ಯಾಪಿಸಿಕೊಂಡು ಎಲ್ಲವೂ ಆಗಿರುವನೆಂದು ಸಾರಿದೆ. (4) ಕೇನೋಪನಿಷತ್ತಿ ನಲ್ಲಿ ಯಕ್ಷನಾಗಿ ದೇವತೆಗಳಿಗೆ ತೋರಿಕೊಂಡು ಅವರೆಲ್ಲರ ಶಕ್ತಿಯು ತನ್ನಿಂದಲೇ ಬಂದುದೆಂದು ತೋರಿಕೊಟ್ಟಿರುವನು. (5) ಬ್ರಹ್ಮದೇವನು ಕರುಗಳನ್ನೂ ಗೋಪಾಲ ಬಾಲಕರನ್ನೂ ತನ್ನ ಮಾಯಾಬಲದಿಂದ ಕಾಣದಂತೆ ಮಾಡಿದಾಗ, ಅವನ ಸ್ಥಾನ ವನ್ನೇ ಕಿತ್ತುಕೊಂಡು, "ಇನ್ನುಮೇಲೆ ನಿನಗೆ ಎದಿರು ನಿಲ್ಲುವುದಿಲ್ಲ" ವೆಂದು ಹೇಳಿಸಿ ಅವನ ಪಟ್ಟವನ್ನು ಅವನಿಗೇ ಕೊಟ್ಟವ ಶ್ರೀಕೃಷ್ಣ. (6) ಗೋವರ್ಧನ ಪರ್ವತ ವೃತ್ತಾಂತದಲ್ಲಿ, ಕೊನೆಗೆ ಇಂದ್ರನು ಸೋತು "ನೀನೇ ಜಗತ್ತಿಗೆ ದೊರೆ" ಎಂದು ಪಟ್ಟಾಭಿಷೇಕ ಮಾಡಲಿಲ್ಲವೇ? ಇವನೇ ಸರ್ವಸಮರ್ಥ—**ಕಲಿಯೇ ತುಯಿಲೆ ೞnಯ್**

ಶೆಪ್ಪಮುಡೈಯಾಯ್—ತನ್ನನ್ನು ರಕ್ಷಿಸಿಕೊಳ್ಳಲು ತಾನೇ ಸಮರ್ಥನು. ಇವನಿಗೆ ಯಾರಸಹಾಯವೂ ಬೇಡ. ನೆನೆದಂತೆ ಮಾಡಬಲ್ಲವನಿವ. ವೇದವು ಈ ಗುಣದಿಂದಲೇ ಇವನನ್ನು "ಸತ್ಯ ಸಂಕಲ್ಪಃ" ಎಂದಿದೆ. ಎಲ್ಲರನ್ನೂ ಉದ್ಧಾರ ಮಾಡ ಬೇಕೆನ್ನುವುದೇ ಇವನ ಸಂಕಲ್ಪ. ಶಿಷ್ಟರಿಗೆ ಪ್ರಿಯನಾಗಿ ದುಷ್ಟರಿಗೆ ಶಿಕ್ಷಕ ನಾಗಿದ್ದರೂ, ಶಿಕ್ಷಿಸುವುದು ಅವರ ಒಳ್ಳೆಯದಕ್ಕೆ. (4)

ಕಠಿಣಪ್ರಕೃತಿಗಳುಕ್ಕು ಕಶೈ ಕಾಟ್ಟುವಾರೈ ಪ್ಪೋಲೆ
ಅರ್ವ ಹಣ್ಣುಗಿರ ಶಿಷ್ಟೈಗಳಿಲ್ಲಾಂ ಶರಣ್ಯಪ್ರಸಾದಫಲಂ

ಎಂದಿರುವರು ನಿಗಮಾಂತದೇಶಿಕರು. ಆದ್ದರಿಂದ ಸತ್ಯ ಸಂಕಲ್ಪನೆಂದರೆ ದಯಾಮಯ. ರಾವಣನನ್ನು ಯುದ್ಧದಲ್ಲಿ ಸೋಲಿಸಿ ಇಂದು ಹೋಗಿ ನಾಳೆ ಬಾ ಎಂದಿದ್ದೂ, ತಲೆ ಕೈಗಳನ್ನು ಒಂದೊಂದನ್ನಾಗಿ ಕತ್ತರಿಸಿದ್ದೂ ಕರುಣೆಯಿಂದಲೇ, ಸತ್ಯ ಸಂಕಲ್ಪನಕರುಣೆಯೇ ಕರುಣೆ. ಮಿಕ್ಕವರ ಕರುಣೆ ಹೆಸರಿಗೆ ಮಾತ್ರ. ಫಲಸ ಬೇಕಾದರೆ ಪರಮಾತ್ಮನ ಸಂಕಲ್ಪವಿರಬೇಕು. ಭರತನು ಎಷ್ಟೋ ಕೇಳಿಕೊಂಡ, ಹಠಹಿಡಿದ, ಊರಿಗೆ ಹೋಗುವುದಿಲ್ಲವೆಂದ. ಆದರೂ

ಮನಸಾ ಪೂರ್ವಮಾಸಾದ್ಯ ವಾಚಾ ಪ್ರತಿಗೃಹ್ಯ ಶರ್ವಾ

ಎಂದಿರುವಂತೆ ತನ್ನ ಸಂಕಲ್ಪವನ್ನೇ ಸಾಧಿಸಿಕೊಂಡ ರಾಮ, ಪಾಂಡವರು ದುರ್ಯೋಧನನೊಡನೆ ಕಾಲು ಮಾಡಿಕೊಳ್ಳಲು ಕೃಷ್ಣನನ್ನು ದೂತನನ್ನಾಗಿ ಕಳುಹಿದರು. **"ಮಯ್ಯೆವೇತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯ ಸಾಚಿನ್"** ಎಂದು ಅವನೇ ಗೀತೆಯಲ್ಲಿ ಹೇಳಿಕೊಂಡಂತೆ, ತನ್ನ ಇಷ್ಟದಂತೆ ನಡೆಯಲು ದಾರಿಯನ್ನು ಕಲ್ಪಿಸಿಕೊಂಡ. ಇವನಲ್ಲವೆ

"ಶೆಪ್ಪಮುಡೈಯವ್ನ"

ತಿರಲುಡೈಯಾಯ್—ಸತ್ಯ ಸಂಕಲ್ಪನಾಗಿರಲು ಬೇಕಾದ ತೇಜಸ್ಸುಳ್ಳವನೇ. ತೇಜಸ್ಸೆಂದರೆ "ಪರಾಭಿಭವಸಾಮರ್ಥ್ಯ"

"ಸಹಕಾರ್ಯನಪೇಕ್ಷಾ ಯಾ ತತ್ತೇಜಸ್ಸಮುದಾಹೃತಂ;"—ಎಲ್ಲರ ತೇಜಸ್ಸನ್ನೂ ಅಡಗಿಸಬಲ್ಲ, ಯಾರ ಸಹಾಯವನ್ನೂ ಅಪೇಕ್ಷಿಸದ ಒಂದು ಮಹತ್ವ. ಮಹಾಭಾರತ ಯುದ್ಧದಲ್ಲಿ ಅರ್ಜುನನನ್ನು ಕೊಲ್ಲುವುದಕ್ಕಾಗಿಯೇ ಕರ್ಣ ಶಕ್ತ್ಯಾಯುಧವನ್ನು ಸಂಪಾದಿಸಿದ್ದ. ಅದನ್ನು ವಿಧಿಯಿಲ್ಲದೆ ಘಟೋದ್ಗಜನ ಮೇಲೆ ಬಿಡುವಂತೆ ಮಾಡಿದ ಕೃಷ್ಣ. ಸೈಂಧವ ಅಂದರೆ ಜಯದ್ರಥನನ್ನು ಎಷ್ಟುಗುಟ್ಟಾಗಿ ದುರ್ಯೋಧನನು ರಕ್ಷಿಸಿದರೂ, ಸೂರ್ಯನು ಮುಳುಗುವುದಕ್ಕೆ ಮುಂಚೆಯೇ, ಅಸ್ತವಾಗುವಂತೆ ತನ್ನ ಚಕ್ರದಿಂದ ಸೂರ್ಯನನ್ನು ಮರೆಸಿ, ಮೋಸಮಾಡಿ, ಅವನು ಹೊರಬಂದಮೇಲೆ ಅಸ್ತವಾಗಿಲ್ಲವೆಂದು ತೋರಿಸಿ ಕೊಲ್ಲಿಸಲಿಲ್ಲವೆ? 8 ದಿನಗಳ ಯುದ್ಧವಾದಮೇಲೆ ಭೀಷ್ಮರ "ಪಾಂಡವರನ್ನು ಇಂದು ನಾಶಮಾಡುವನೆಂದ" ಪ್ರತಿಜ್ಞೆಯನ್ನು ಸುಳ್ಳಾಗಿಸಿದವನಲ್ಲವೇ ಇವನು; ನಾಗಾಸ್ತ್ರದಿಂದ ಅರ್ಜುನನನ್ನು ರಕ್ಷಿಸಲಿಲ್ಲವೆ? ದುರ್ವಾಸರ ಗರ್ವಭಂಗಮಾಡಿ ದುರ್ಯೋಧನನ ತಲೆ ಕುಗ್ಗುವಂತೆ ಮಾಡಲಿಲ್ಲವೆ. ಇದಲ್ಲವೆ **"ತಿರಲ್"** ಇವನಲ್ಲಲ್ಲದೆ ಮತ್ತಾರಲ್ಲಿದೆ ಇದು. ಇವನೇ ದೈವ.

ಶೆತ್ತಾರ್ಕ್ಕು ವೆಪ್ಪಂ ಕೊಡುಕ್ಕುಂ ವಿಮಲಾ ತುಯಿಲ್ಗೊನೆಯ್—ಶತ್ರುಗಳಿಗೆ ಭಯವನ್ನುಂಟುಮಾಡಿದರೂ ನಿರ್ಮಲ ಸ್ವಭಾವದವನಾಗಿಯೇ ಇರುವವನೇ

ನಿದ್ದೆಯಿಂದೇಳು. **"ನಮೋದ್ವೇಷ್ಯೋಸ್ತಿನಪ್ರಿಯಃ"** ಎಂದಿರುವಂತೆ ಇವನಿಗೆ ಸ್ವತಃ ಶತ್ರುಗಳಿಲ್ಲ, ಪ್ರಿಯರಿಲ್ಲ. ಇವನಲ್ಲಿ ಪ್ರೀತಿಯಿಟ್ಟವರು ಇವನಿಗೂ ಪ್ರಿಯ. ಇಲ್ಲದವರು ಶತ್ರುಗಳು. **"ಕ್ಷಿಪಾಮ್ಯಜ ಸ್ರಮುಶುಬಾನಾಸುರೀಷ್ವೇವ ಯೋನಿಷು"** ಎಂದಿರುವಂತೆ ಅವರನ್ನು ಅವನು ಶಿಕ್ಷಿಸುವುದೂ ಅವರಿಗೆ ಒಳ್ಳೆಯದಕ್ಕಾಗಿಯೇ. ಆದರಿಂದ ಅವನು ಎಂದಿಗೂ ಅಮಲನು.

ಇಷ್ಟು ಪರಮಾತ್ಮನನ್ನು ಸ್ತೋತ್ರ ಮಾಡಿದ ಮೇಲೆ ಅವನು ಪ್ರಸನ್ನನಾಗಿ ನೀಳೆಯನ್ನು ಬಿಟ್ಟುಕೊಟ್ಟನು. ಅದನ್ನು ಕಂಡು ಗೋಪಿಕೆಯರು ಅವಳನ್ನು ಪ್ರಾರ್ಥಿಸುವರು ಜಯವಾಯಿತೆನ್ನುವ ಹಿಗ್ಗಿನಿಂದ. ಹಿಂದಿನ ಪದ್ಯದಂತೆ ಈ ಪದ್ಯದಲ್ಲೂ ಮೊದಲಿನ ನಾಲ್ಕು ಪಾದಗಳಲ್ಲಿ ಶ್ರೀಕೃಷ್ಣನನ್ನೂ, ಕೊನೆಯ ನಾಲ್ಕು ಪಾದಗಳಲ್ಲಿ ನೀಳೆಯನ್ನೂ ಪ್ರಾರ್ಥಿಸಿರುವರು ಗೋಪಿಕೆಯರು. 18ನೇ ಪದ್ಯದಲ್ಲಿ ನೀಳಾತತ್ವದ ಸ್ವರೂಪವನ್ನು ತಿಳಿಸಿ, 19ರಲ್ಲಿ, ಪರಮಾತ್ಮನ ಸಂಕಲ್ಪವಿಲ್ಲದೆ ಅವಳು ಪ್ರಸನ್ನಳಾಗಲಾರಳೆಂಬ ಅವಳ ಸ್ವಭಾವವನ್ನು ತಿಳಿಸಿದ ಮೇಲೆ ಈ ಪದ್ಯದಲ್ಲಿ ಅವಳ ಗುಣವನ್ನು ತಿಳಿಸುವುದಕ್ಕೆ ಮೊದಲು ಪರಮಾತ್ಮನ ಗುಣ ಶೋಧನೆ ಮಾಡಿ ಅವನೊಬ್ಬನೇ **"ಕಲಿ"** ಎಂದು ಸಮರ್ಥಿಸಿಯಾಯಿತು. ಇನ್ನು ಅವಳನ್ನು ಪ್ರಾರ್ಥಿಸಬೇಕು. ಪರಮಾತ್ಮನು **"ಕಲಿ"** ಎನ್ನುವ ಒಂದು ಮಾತಿನಲ್ಲೇ ಇವಳ ಗುಣವೂ ತಿಳಿಸಲ್ಪಟ್ಟಿದೆ. ಹಿಂದೆ ಹೇಳಿರುವಂತೆ 16 ಪದಾರ್ಥಗಳು ಪ್ರಧಾನವಾಗಿ ಮೂರು ತತ್ವಗಳಾಗಿವೆ. ಪ್ರಕೃತಿ ಪುರುಷ ಪರಮಾತ್ಮನೆನ್ನುವ ಈ ಮೂರು ತತ್ವಗಳಲ್ಲಿ ಒಂದೇ ಆಗಿರುವುದೇ ಪರಮಾತ್ಮ. ಇವನು ಪೂರ್ಣ ವಸ್ತು. ಇವನಿಲ್ಲದೆಡೆಯಿಲ್ಲ. ಇವನೇ ಶ್ರೀಮನ್ನಾರಾಯಣ. ಶ್ರೀ ಮತ್ತು ನಾರಾಯಣರಲ್ಲಿರುವುದು ಒಂದೆ ಸಂಕಲ್ಪವಾದರೂ ಕೇವಲ ರಕ್ಷಕ ದೈವವಾಗಿ ಶ್ರೀದೇವಿಯಿರುವುದರಿಂದ, ಜೀವರ ಪರಿಷ್ಕಾರವು ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧವಿಲ್ಲದೆ ಶ್ರೀದೇವಿಯ ತಾಯಿ ಹೃದಯವನ್ನು ಅನುಸರಿಸಿ ಭೂ ಮತ್ತು ನೀಳಾದೇವಿಯರು ಚೇತನರನ್ನು ಪರಿಷ್ಕರಿಸುವರು. ಪ್ರತಿಭೆಯಿಂದ ಪರಿಷ್ಕರಿಸಿ ಶ್ರೀದೇವಿಗೆ ಒಪ್ಪಿಸುವವಳು ಭೂದೇವಿ. ಅವರನ್ನು ಸ್ವೀಕರಿಸಿ ಮೇದಾಶಕ್ತಿಯಿಂದ ಸರ್ವಭೂತ ಹಿತರನ್ನಾಗಿ ಶ್ರೀದೇವಿಯು ಮಾಡಿ ಪ್ರೇಮಮಯರಾಗಿಸಿದ ಮೇಲೆ ಪರಮಾತ್ಮನಿಗೆ ಒಪ್ಪುವ್ಗೆಯಾಗಲು ನೀಳಾ ದೇವಿಯು ನಮ್ಮನ್ನು ಅವನಲ್ಲಿಗೆ ಒಯ್ಯುವಳು. ನೀಳಾದೇವಿಯಲ್ಲೂ ಭೂದೇವಿಯಲ್ಲೂ ಪರಮಾತ್ಮನು ವ್ಯಾಪಿಸಿರುವಂತೆ ಶ್ರೀದೇವಿಯೂ ವ್ಯಾಪಿಸಿರುವಳು. ರಕ್ಷಕ ದೃಷ್ಟಿಯಲ್ಲಿ ನೀಳಾದೇವಿಯು ಶ್ರೀದೇವಿಯೇ. ಆದರೂ ಅವಳು ಬೇರೆ ಚೇತನ. ಶ್ರೀದೇವಿಗೆ ದೂತ ಸ್ಥಾನದಲ್ಲಿದ್ದರೂ ಪರಮಾತ್ಮನ ಮಡದಿಯೂ ಆಗಿರುವಳು. "ಶಕ್ತಿ" ಎನ್ನುವ ಅದ್ರವ್ಯವು ನಾರಾಯಣನಿಗೆ ಸೇರಿ ಅವನ ಸೊತ್ತು. ಅವನಿಂದ ಶ್ರೀದೇವಿಯ ಸೊತ್ತೂ ಆಗಿದೆ. ಹಾಗೆಯೇ ಭೂದೇವಿ ಮತ್ತು ನೀಳಾದೇವಿಯರೂ ಇವರಿಬ್ಬರ

ಸೊತ್ತು. "ಕಲಿ" ಎಂದು ಹೇಳಿ ನಾರಾಯಣನನ್ನು ಶ್ರೀಮನ್ನಾರಾಯಣ ಎಂದು ಅರ್ಥವನ್ನು ಪರಿಷ್ಕರಿಸಿ, ಅಂತಹ ಶ್ರೀಮನ್ನಾರಾಯಣನಿಗೆ ಪೂರ್ಣ ಅಧೀನವಾಗಿ ಪುರುಷಕಾರಳೆಂದು ಈಗ ನೀಳಾದೇವಿಯ ಗುಣವನ್ನು ಕೊಂಡಾಡುವರು ಗೋಪಿಕೆಯರು.

ಪರಮಾತ್ಮನಲ್ಲಿ ಸಂಯೋಗವೆಂಬ ಅದ್ರವ್ಯದೊಡನೆ ಶಕ್ತಿ ಎನ್ನುವ ಅದ್ರವ್ಯವೂ ಸೇರಿ ಅವನು ನಿರುಪಾಧಿಕ ಸರ್ವಶಕ್ತನಾಗಿ ಬೃ–ಉ–ನ ಪುರುಷವಿದ್ಯೆಯಲ್ಲಿ ಹೇಳಿರುವಂತೆ ಶ್ರೀ ಭೂ ನಿಳಾ ಸಮೇತ ನಾರಾಯಣನೆಂಬ ಪರಮಾತ್ಮನಾಗಿರುವನು ಮತ್ತು ತನ್ನ ಶಕ್ತಿ ಎನ್ನುವ ಗುಣವಿಶೇಷದಿಂದ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನಾಗಿ, ರಕ್ಷಕನಾಗಿ ಇರುವನು. ಶಕ್ತಿವಿಶಿಷ್ಟಾದ್ವೈತವೆನ್ನುವ ಶೈವಸಂಪ್ರದಾಯದಲ್ಲಿ ಶಕ್ತಿಯು ಪಾರ್ವತೀ ರೂಪದಲ್ಲಿ ಜಗತ್ತಿನ ಸೃಷ್ಟಿ ಸ್ಥಿತಿ ಲಯಕ್ಕೆ ಕಾರಣವಾಗಿದೆ. ಹಾಗಿದ್ದರೂ ಆ ಶಕ್ತಿಯು ಕೊನೆಯಲ್ಲಿ ಪರಮಶಿವನಲ್ಲಿ ಐಕ್ಯವಾಗಿ ಶುದ್ಧಾದ್ವೈತವಾಗಿ ನಿಲ್ಲುವುದು. ಶಕ್ತಿವಿಶಿಷ್ಟಾದ್ವೈತ ಮತ್ತು ಶಂಕರರ ಶುದ್ಧಾದ್ವೈತ ಇವೆರಡೂ ಸಮಾಧಿಯೆನ್ನುವ ಯೋಗಾನುಭವದಮೇಲೆ ವೇದಾಂತವನ್ನು ಕಲ್ಪಿಸಿಕೊಂಡಿರುವವು. ನಮ್ಮ ಸಿದ್ಧಾಂತವಾದ ವಿಶಿಷ್ಟಾದ್ವೈತದಲ್ಲಿ ಅದ್ರವ್ಯ ಶಕ್ತಿಯೂ ಶ್ರೀದೇವಿಯೂ ಪರಮಾತ್ಮನ ಸೊತ್ತುಗಳು; ಪರಮಾತ್ಮನೊಬ್ಬನೇ ಜಗತ್ತಿನ ಸೃಷ್ಟಿ ಸ್ಥಿತಿಲಯಕ್ಕೆ ಕಾರಣ. ಶ್ರೀದೇವಿಯು ಶಕ್ತಿದೇವತೆಯಾದರೂ ಪರಮಾತ್ಮನಿಗೆ ಭೂ ನೀಳಾ ದೇವಿಯರೊಡನೆ ಅಧೀನರಾಗಿದ್ದರೂ ಭೂ ಮತ್ತು ನೀಳಾದೇವಿಯರಿಗೆ ಪರಮಾತ್ಮನಂತೆ ಅಂತರ್ಯಾಮಿಯಾಗಿರುವವಳು. ಇದೇ ವೇದಾಂತದ ಪರಮಾವಧಿ ಉಪದೇಶ. ಅದು ಈ ಪದ್ಯದೊಡನೆ ಕೊನೆಗೊಂಡಿದೆ. ಪ್ರಪನ್ನರಾಗಬೇಕಾದರೆ ಇಷ್ಟು ತಿಳಿಯಲೇ ಬೇಕು. ತಿಳಿದು ಪ್ರಪನ್ನರಾದಮೇಲೆ, ನಮಗೆ ಕೊನೆಯ ಪುರುಷಕಾರಳು, ಶ್ರೀದೇವಿಯಿಂದ ಆವಿಷ್ಟಳಾದ ನೀಳಾದೇವಿಯೇ. ಅವಳನ್ನು ಈಗ ಎಬ್ಬಿಸುವಳು.

ಶೆಪ್ಪೆನ್ನ ಮೆನ್ಮುಲೈ—ಕಲಶದಂತೆ ಇದ್ದು ಜೋಲುಬೀಳದೇ ಇರುವ ಮತ್ತು ಮೃದುವಾದ ಮೊಲೆಯುಳ್ಳವಳೇ! ಮೊಲೆಯೆಂದಾಕ್ಷಣ ಕಾಮದ ದೃಷ್ಟಿಯನ್ನು ಹೊಂದಬಾರದು. ಶೃಂಗಾರಮಯ ಭಾವನೆಯು ತಲೆದೋರಬೇಕು. ನಮ್ಮ ಸಿದ್ಧಾಂತವೇ ಶುದ್ಧಾಂತ ಸಿದ್ಧಾಂತ. ಶುದ್ಧಾಂತವೆಂದರೆ ರಾಣಿವಾಸ. ನಾವೆಲ್ಲರೂ ಪರಮಾತ್ಮನ ರಾಣಿವಾಸದಲ್ಲಿರುವ ಅವನ ಪ್ರಿಯೆಯರು. ಪ್ರಪನ್ನರಾಗಿ ಪರಮಾತ್ಮನಲ್ಲಿ ಭಕ್ತಿಪರವಶನಾದವನಿಗೆ ಸ್ತ್ರೀಭಾವವು ಸಹಜವಾಗುವುದರಿಂದ ಅವನಿಗೆ ಹೇಳಿದ ಮಾತಿದು. ಸ್ತ್ರೀಯರು ತಮ್ಮ ಕುಚಕ್ಕೆ ಮೋಹಗೊಳ್ಳುವುದಿಲ್ಲ. ಪುರುಷಭಾವದಲ್ಲಿರುವವರಿಗೆ ಹೇಳಿದ ವರ್ಣನೆಯಲ್ಲ ಇದು. ಪರಮಾತ್ಮ ನೀಳೆಯ ಮೊಲೆಯ ಮೇಲೆ ಮಲಗಿದ್ದ. ಅವನು ಎದ್ದು ನೀಳೆಯನ್ನು ನಮಗಾಗಿ ಬಿಟ್ಟುಕೊಟ್ಟಾಗ

ಕಂಡಿತು ಗೋಪಿಯರಿಗೆ "ಇವಳು ಶೆಪ್ಪೆನ್ನ ಮೆನ್ಮುಲೈ" ಯವಳೆಂದು. ಹಿಂದೆ ಹೇಳಿದಂತೆ ಇವಳ ಎರಡು ಸ್ತನ ಸಂಗೀತ ಮತ್ತು ಸಾಹಿತ್ಯ. ಪರಮಾತ್ಮನ ಕೃಪೆಯು ಕುದುರಿದಮೇಲೆ ತಕ್ಷಣ ಗೋಪಿಯರಿಗೆ ಅವನನ್ನು ಹಾಡೋಣವೆನ್ನಿಸಿತು. ಅದಕ್ಕೆ ಸರಿಯಾದ ಸಾಹಿತ್ಯವೂ ಕಣ್ಣುಮುಂದೆ ನಿಂತಿತು. ಈ ಎರಡು ಕುಚಗಳೇ ಅವರಿಗೆ ಕಂಡಿದ್ದು. 21ನೇ ಪಾಶುರದಿಂದ 30 ಪೂರ್ತಿ ಇರುವ ಸಾಹಿತ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು.

ಶೆವ್ವಾಯ್—ಇವರಿಗೆ ಕಂಡಿದ್ದು ಇಷ್ಟುಮಾತ್ರವಲ್ಲ; ಅವಳ ಕೆಂಪಾದ ಬಾಯಿ ಅಂದರೆ ತುಟಿಯೂ ಕೂಡ. ಪರಮಾತ್ಮನು ಮುತ್ತಿಕ್ಕಿರದಿದ್ದರೆ ಕೆಂಪಾಗಿರುತ್ತಿತ್ತೇನು? ಇಲ್ಲ.

ಶಿರುಮರುಂಗುಲ್—ಸೊಂಟವೂ ಬಹುಸಣ್ಣ. ಅವನು ಅದನ್ನು ತಬ್ಬಿದ್ದ. ಆಗ ಕಂಡಿರಲಿಲ್ಲ. ಈಗ ಕಂಡಿತು.

ನಪ್ಪಿನ್ನೈ ನಂಗಾಯ್ ತಿರವೇ ತುಯಿಲೆಳnಯ್—ಹೀಗೆ ಬಹು ಸುಂದರಿಯಾಗಿ ಕಾಣುವ ನೀಳೆಯೇ! ಈಗ ನೀನು ನಿಜವಾಗಿ ಶ್ರೀದೇವಿಯೆ; ಇಲ್ಲಿಗೆ ನಾವು ಕೃತಾರ್ಥರಾದೆವು, ನಿದ್ದೆ ಬಿಟ್ಟೆದ್ದು ಬಾ.

ಇಲ್ಲಿ ನೀಳೆಯ ಕುಚ, ಬಾಯಿ ಮತ್ತು ಸೊಂಟಮಾತ್ರ ವರ್ಣತವಾಗಿವೆ, ಮಕ್ಕಳಿಗೆ ಬೇಕಾದದ್ದು ಮೊಲೆಹಾಲು. ಚೇತನರಾದ ನಾವೆಲ್ಲರೂ ಶಿಶುಗಳು. ನಮಗೆ ಮೊದಲು ಕಾಣುವುದು ಮೊಲೆಮಾತ್ರ. ಪರಮಾತ್ಮನಿಗೆ ಬೇಕಾದದ್ದು ಅವಳ ಸುಮಧುರ ತುಟಿಗಳು. ಹೀಗೆ ನಮಗೂ ಪ್ರಿಯಳಾಗಿ ಪರಮಾತ್ಮನಿಗೂ ವಲ್ಲಬೆಯಾಗಿ ಕಂಡಮೇಲೆ ಅವಳ ಪುರುಷಕಾರತ್ವವು ಪಲಿಸುವುದೆನ್ನುವುದಕ್ಕೆ ಸ್ತ್ರೀತ್ರ ಪರಿಪೂರ್ಣತೆಯು ಸೊಂಟದಲ್ಲಿ ಕಂಡಿತು. ಇವಳ ಸಾನ್ನಿಧ್ಯವು ನಮಗೆ ಲಭಿಸಿತೆನ್ನುವ ಹಿಗ್ಗಿನಿಂದ ಹೇಳಿದಮಾತುಗಳಿವು. ನೀಳೆಗೆ ಮಾರುಹೋದ ಕೃಷ್ಣ. ಅವನು ಇನ್ನು ಸಿಕ್ಕಿದಂತೆಯೇ, ಅವನಲ್ಲೇ ಗೋಗರೆಯುತ್ತಿದ್ದರೆ ಅವನು ಸಿಗುತ್ತಿರಲಿಲ್ಲ. ಗೋಪಿಯರಂತೆ ತಿಳಿದೇ ಆಚಾರ್ಯರು ಸೀತಾದೇವಿಯನ್ನು ಪ್ರಾರ್ಥಿಸಿರುವರು.

ಮಾತಃ ಮೈಥಿಲಿ ರಾಕ್ಷಸೀ ಸ್ತ್ವಯಿ ತಥೈವಾರ್ದ್ರಾಪರಾಧಾ ಸ್ತ್ವಯಾ ।
ರಕ್ಷಂತ್ಯಾ ಪವನಾತ್ಮಜಾತ್ ಲಘುತರಾ ರಾಮಸ್ಯ ಗೋಷ್ಠೀಕೃತಾ ॥
ಕಾಕಂ ಕಂಚ ವಿಭೀಷಣಂ ಶರಣಮಿತ್ಯುಕ್ತಿಕ್ಷಮೌ ರಕ್ಷತಃ ।
ಸಾ ನಸ್ಸಾಂದ್ರಮಹಾಗಸಃ ಸುಖಯತು ಕ್ಷಾಂತಿಸ್ತವಾಕಸ್ಮಿಕೀ ॥

"ತಾಯಿ ಸೀತೆ, ನಿನ್ನಲ್ಲಿ ಎಷ್ಟು ತಪ್ಪು ಮಾಡಿದ್ದರೂ, ನೀನು ರಾಕ್ಷಸಿಯರನ್ನು ಮನ್ನಿಸಿ ಕಾಪಾಡಿದೆ ಆಂಜನೇಯನಿಂದ. ಇದರಿಂದ ಆಶ್ರಿತರಕ್ಷಣದಲ್ಲಿ ನಿನ

ಗಿಂತ ರಾಮ ಹಿಂದೆ ಬಿದ್ದ. ಅಂತಹ ಮಹಿಮೆಯುಳ್ಳ ನಿನ್ನನ್ನೇ ನಂಬಿರುವೆನು ನನಗೆ ಸುಖ ಕೊಡು" ಎಂದು ಕೇಳಿಕೊಂಡಿರುವರು.

ಇಲ್ಲಿ ಪ್ರಾರ್ಥಿಸಿರುವರು ಗೋಪಿಕೆಯರು. ಅವರ ಹೃದಯವನ್ನು ಬಿಚ್ಚಿ ಹೇಳಿರುವರು ಆಚಾರ್ಯರು. ಗೋದೆಯನ್ನು ಮುಂದೆ ಬಿಟ್ಟುಕೊಂಡು ಬಂದಿರುವರು ಇವರು. ಭೂದೇವಿಯೇ ಇವಳು. ನಮಗಾಗಿ ಇವಳ ಅವತಾರ. ಈಗ ನೀಳಾದೇವಿಯೂ ಪ್ರಸನ್ನಳಾಗಿರುವಳು. ಶ್ರೀದೇವಿಯ ಪ್ರಧಾನಪುರುಷಕಾರವಿಲ್ಲದೆ ಗೋದೆಯು ನಮಗೆ ಹಾಡಿ ಕೊಡುತ್ತಿದ್ದಳೇ?

ಆದ್ಯಾಪರಾದಿನಿ ಜನೇಷ್ವಭಿರಕ್ಷಣಾರ್ಥಂ
ರಂಗೇಶ್ವರಸ್ಯ ರಮಯಾ ವಿನಿವೇದ್ಯಮಾನೇ ।
ಪಾರ್ಶ್ವೇ ಪರತ್ರ ಭವತೀ ಯದಿ ತತ್ರ ನ ಸ್ಯಾತ್
ಪ್ರಾಯೇಣ ದೇವಿ ವದನಂ ಪರಿವರ್ತಿತಂ ಸ್ಯಾತ್ ॥

"ಹೇ ದೇವಿ, ತಪ್ಪಲ್ಲೇ ತೋಯ್ದಿರುವ ಜೀವಿಗಳ ಪರವಾಗಿ ವಾದಿಸಲು ನೀನು ವೈಕುಂಠದಲ್ಲಿ ಪರಮಾತ್ಮನ ಮಗ್ಗುಲಲ್ಲಿರದಿದ್ದರೆ ಅವನು ನಮ್ಮ ಕಡೆಯೇ ನೋಡುತ್ತಿರಲಿಲ್ಲ" ಎಂದು ಗೋದೆಯನ್ನು ಪ್ರಾರ್ಥಿಸಿರುವರು ನಿಗಮಾಂತ ದೇಶಿಕರು. ಇಲ್ಲಿ ಗೋದೆಯ ಪುರುಷಕಾರದಲ್ಲಿ ಶ್ರೀ ಮತ್ತು ನೀಳಾದೇವಿಯರೂ ಭಾಗವಹಿಸಿರುವರೆಂದೇ ಇಲ್ಲಿನ ಮಹತ್ವ.

ಇಷ್ಟು ಹೇಳಿಕೊಂಡಮೇಲೆ ನೀಳೆಯು "ನಿಮಗೇನು ಈಗ ಬೇಕು" ಎಂದು ಕೇಳಿದಾಗ, ಗೋಪಿಕೆಯರು

ಉಕ್ಕಮುಂ ತಟ್ಟೊಳಿಯುಂ ತಂದು ಉಮ್ಮ ಮಣಾಳನೈ ಇಪ್ಪೋದೇ ಎಮ್ಮೈ ನೀರಾಟ್ಟು ಎಂದರು. "ಅಮ್ಮಾ ನಮಗೆ ಬೀಸಣಿಗೆ ಮತ್ತು ಕನ್ನಡಿಯನ್ನು ಕೊಟ್ಟು ನಿನ್ನ ಗಂಡನಾದ ಕೃಷ್ಣನಲ್ಲಿ ಈಗಲೇ ನಾವು ಮುಳುಗಿ ಆನಂದ ಪಡುವಂತೆ ಮಾಡು." ಬೀಸಣಿಗೆ ಇಷ್ಟು ದಿನಗಳೂ ಅವನಿಲ್ಲದೆ ನಾವು ಅನುಭವಿಸಿದ ತಾಪವನ್ನು ಹೋಗಲಾಡಿಸಲು; ಕನ್ನಡಿ ಅವನ ಕರುಣಾಮಯ ರೂಪವನ್ನು ಕಾಣಲು ಎನ್ನುವುದು ಅವರ ಅಭಿಪ್ರಾಯ. ಏಲೋರೆಂಪಾವಾಯ್.

ಸ್ವಾಪದೇಶ

ಪ್ರಥಮಾಚಾರ್ಯನಾದ ನಾರಾಯಣನನ್ನು ಎಬ್ಬಿಸಿ ಅವನ ಅನುಗ್ರಹವನ್ನು ಸಂಪಾದಿಸಿಕೊಟ್ಟು ತಮ್ಮ ನೇರ ಆಚಾರ್ಯನನ್ನು ಎಬ್ಬಿಸಾಯಿತು ಹಿಂದಿನ ಪದ್ಯದಲ್ಲಿ. ಈಗ ಅವನನ್ನೇ ಪ್ರಾರ್ಥಿಸುವರು ವಿಶೇಷಾನುಗ್ರಹಕ್ಕಾಗಿ.

ಮುಪ್ಪತ್ತು . . . ಎೞುನಯ್— 33 ದೇವತೆಗಳು ಪರಮಾತ್ಮನ ಕಿಂಕರರು. ಮಾನವರ ಸಾಮಾನ್ಯ ಜೀವನದಲ್ಲಿ ಅವರ ಪ್ರತಾಪವೇ ಹೆಚ್ಚು. ಹಾಗಿರುವಾಗ ಆಚಾರ್ಯನು ಮುಂದೆ ಬಂದು, **ಶಿಷ್ಯರನ್ನು** ಪ್ರಪನ್ನರಾಗುವಂತೆ ಮಾಡಿ, **ಮೋಕ್ಷವನ್ನು** ಸಾಧಿಸಿಕೊಟ್ಟಮೇಲೆ ಅವರ ಪ್ರತಾಪವು ಸಾಗದಂತೆ ಮಾಡಿದ, ಸರ್ವಶಕ್ತನಾದ ಆಚಾರ್ಯನೇ, ಏಳು.

ಶೆಪ್ಪಮುಡೈಯಾಯ್—ಆರ್ಜವ ಗುಣವುಳ್ಳವನೇ, ವೇದಪ್ರಮಾಣ ಬಲದಿಂದ ನಾಸ್ತಿಕರನ್ನು ಜಯಿಸಲು ಯಾರ ಸಹಾಯವನ್ನೂ ಅಪೇಕ್ಷಿಸದವನೇ

ತಿರಲುಡೈಯಾಯ್—**"ಕರಗ್ರಹವಿಜಕ್ಷಣೋ ಜಯತಿ ಲಕ್ಷ್ಮಣೋsಯಂ ಮುನಿಃ"** ಎಂದು ನಿಗಮಾಂತ ದೇಶಿಕರು ರಾಮಾನುಜರ ವಿಷಯದಲ್ಲಿ ಹೇಳಿರುವಂತೆ ಸಂಸಾರಕೂಪದಿಂದ ನಮ್ಮನ್ನು ಮೇಲೆತ್ತಲು ಬೇಕಾದ ತೇಜಸ್ಸುಳ್ಳವನೇ.

ಶೆತ್ತಾರ್ಕ್ಕು ವೆಪ್ಪಂ ಕೊಡುಕ್ಕುಂ—ದಂಭದರ್ಪವಿನಾಶಕನೇ

ವಿಮಲಾ—ಪರಿಶುದ್ಧಾತ್ಮನೇ, **ತುಯಿಲೆೞುನಯ್.**

ಶೆಪ್ಪೆನ್ನ . . . ಎೞುನಯ್—ಸ್ತ್ರೀಭಾವವನ್ನು ತಾಳಿ, ಭಕ್ತಿಸ್ವರೂಪನಾಗಿ ಉದಾರಿಯಾಗಿ, ಕಲ್ಯಾಣಗುಣ ಪೂರ್ತಿಯಿಂದ, ಶ್ರೀದೇವಿಯಂತೆ ಆರು ವಿಧ ರಕ್ಷಕ ಗುಣವುಳ್ಳವನೇ (ಪೀಠಿಕೆ ನೋಡಿ).

ಉಕ್ಕಮುಂ ತಟ್ಟೊಳಿಯುಂ ತಂದು—ದ್ವಯಾರ್ಥವನ್ನೂ ಮೂಲ ಮಂತ್ರಾರ್ಥವನ್ನೂ ನಮಗೆ ಕೊಟ್ಟು **ನೀ . . . . ಪಾವಾಯ್.**

ಭಾಗ ೫

ಮೊದಲಿನ ಐದು ಪದ್ಯಗಳಲ್ಲಿ ಗೋದೆಯು ಪರಮಾತ್ಮನಲ್ಲಿ ಕೂಡಲು ಎಲ್ಲಾ ಗೋಪಿಯರನ್ನೂ ಕರೆದಳು. ಎರಡನೇ ಐದು ಪದ್ಯಗಳಲ್ಲಿ ಹಾಗೆ ಕೂಡಿಕೊಂಡವರ ಲ್ಲಿಲ್ಲದ ಶ್ರೀಕೃಷ್ಣನುಭವದಲ್ಲಿ ಹೊಸಬರಾದ ಐವರನ್ನು ಕರೆದು ಎಬ್ಬಿಸಿ ತನ್ನ ಕೂಟಕ್ಕೆ ಸೇರಿಸಿಕೊಂಡಳು. ಮೂರನೇ ಐದು ಪದ್ಯಗಳಲ್ಲಿ ಅವನಿಗೆ ಪ್ರಿಯರಾದ ಐವರನ್ನೂ ಸೇರಿಸಿಕೊಂಡಮೇಲೆ ನಾಲ್ಕನೇ ಐದು ಪದ್ಯಗಳಲ್ಲಿ ಪರಮಾತ್ಮನ ಅನು ಬಂಧಿಗಳಾಗಿ ಪುರುಷಕಾರರಾದವರನ್ನು ಪ್ರಾರ್ಥಿಸಿಕೊಂಡರೂ ಅವರಲ್ಲಿ ನೀಳೆಯೇ ತಮಗೆ ಬೇಕಾದ ಪರಮಾತ್ಮಾನುಭವವನ್ನು ಕೊಡುವಳೆಂದು ಮನಗಂಡು ಅವಳೇ ಶ್ರೀದೇವಿ ಎಂದೂ ಕರೆದಳು. ಶ್ರೀದೇವಿಯೇ ಸಕಲ ಚೇತನರ ಸೌಭಾಗ್ಯದೇವತೆ ರಕ್ಷಕದೈವ. "ಶ್ರೀ" ಎನ್ನುವ ಪದವೇ ಆ ಅರ್ಥವನ್ನು ಕೊಡುತ್ತದೆಂದು ಅವಿರ್ಬುಧ್ನ್ಯ ಸಂಹಿತೆಯು ತಿಳಿಸಿರುತ್ತದೆ.

ಶೃಣಾತಿ ನಿಖಿಲಾನ್ ದೋಷಾನ್ ಶ್ರೀಣಾತಿ ಚ ಗುಣೈರ್ಜಗತ್ ।
ಶ್ರೀಯತೇ ಚಾಖಿಲೈ ರ್ನಿತ್ಯಂ ಶ್ರಯತೇ ಚ ಪರಂ ಪದಂ ॥

ಶೃಣೋತಿ ಶ್ರಾವಯತ್ಯೇಷಾ ತಸ್ಮಾಚ್ಛ್ರೀರಿತಿ ಕಥ್ಯತೇ ॥

1) ಶೃಣಾತಿ–ನಮ್ಮ ದೋಷಗಳೆಲ್ಲವನ್ನೂ ಹೋಗಲಾಡಿಸುವಳು. ಆದ್ದರಿಂದ ಅವಳು " ಶ್ರೀಃ "

2) ಶ್ರೀಣಾತಿ–ನಾವು ಸದ್ಗುಣಗಳಿಂದ ಕೂಡಿರುವಂತೆ ಮಾಡುವಳು. ಆದ್ದರಿಂದ ಅವಳು " ಶ್ರೀಃ "

3) ಶ್ರೀಯತೇ–ಆ ಕಾರಣದಿಂದಲೇ ಎಲ್ಲರೂ ಅವಳನ್ನೇ ಆಶ್ರಯಿಸುವರು; ಆದ್ದರಿಂದಲೂ ಅವಳು " ಶ್ರೀಃ "

4) ಶ್ರಯತೇ ಚ ಪರಂಪದಂ–ಮುಕ್ತಿಸ್ಥಾನದಲ್ಲೂ ತಾನು ಪರಮಾತ್ಮನೊಡನಿದ್ದು ಮುಕ್ತರಾದಮೇಲೆ ನಮ್ಮೆಲ್ಲರ ಸೇವೆಯನ್ನು ಸ್ವೀಕರಿಸಲು ಅಲ್ಲಿ ಶಾಶ್ವತವಾಗಿರುವಳಾದ್ದರಿಂದಲೂ ಅವಳು " ಶ್ರೀಃ "

5) ಶೃಣೋತಿ—ನಮ್ಮೆಲ್ಲರ ಪ್ರಾರ್ಥನೆಯನ್ನು ಲಾಲಿಸುವಳಾದ್ದರಿಂದಲೂ ಅವಳು " ಶ್ರೀಃ ".

6) ಶ್ರಾವಯತಿ—ನಮ್ಮ ಪ್ರಾರ್ಥನೆಯನ್ನು ಕೇಳಿದ್ದಲ್ಲದೆ ಪರಮಾತ್ಮನಿಗೂ ತಿಳಿಸಿ ಅವನು ಪ್ರಸನ್ನನಾಗುವಂತೆ ಮಾಡುವಳಾದ್ದರಿಂದ ಅವಳು " ಶ್ರೀಃ "

ಈ ಶ್ರೀದೇವಿಯು ಮೇಲೆ ಹೇಳಿದ ಮೊದಲನೇ ಪರಿಷ್ಕಾರವನ್ನು (ಶೃಣಾತಿ) ಭೂದೇವಿಯಿಂದ ಮಾಡಿಸಿ, ಎಲ್ಲರೂ ತನ್ನನ್ನೇ ಆಶ್ರಯಿಸುವಂತಿದ್ದು (ಶ್ರೀಯತೆ), ಅವರು ಆಶ್ರಯಿಸಿ ಪ್ರಾರ್ಥಿಸಿಕೊಳ್ಳುವುದನ್ನು ಲಾಲಿಸಿ (ಶೃಣೋತಿ) ಪರಮಾತ್ಮನಿಗೆ ತಿಳಿಸಿ ಅವನು ಪ್ರಸನ್ನನಾಗುವಂತೆ ಮಾಡಿ (ಶ್ರಾವಯತಿ), ನಮ್ಮಲ್ಲಿ ಸದ್ಗುಣಗಳು ತಲೆದೋರುವಂತೆ ಮಾಡಿ (ಶ್ರೀಣಾತಿ), ಪರಮಾತ್ಮನಿಗೆ ಒಪ್ಪುಗೆಯಾಗುವಂತೆ ಮಾಡಿ ಪರಮಾತ್ಮನೊಡನೆ ಯಾವಾಗಲೂ ಮುಕ್ತಿಸ್ಥಾನದಲ್ಲಿರುವಳು (ಶ್ರೀಯತೆ). ಆದರೆ ಗೋದೆಯು 20ನೇ ಪದ್ಯದಲ್ಲಿ ನೀಳೆಯೇ ಶ್ರೀದೇವಿಯೆಂದಿರುವಳು. ಅದರ ಅರ್ಥವಿದು. ಪ್ರೇಮಸ್ವರೂಪಿಣೀ ನೀಳೆ. ಪರಮಾತ್ಮ ಪ್ರೇಮಮಯ. ತಾನು ನಿರಾಕಾರನಾಗಿದ್ದರೂ, ದಿವ್ಯಮಂಗಳ ವಿಗ್ರಹದೊಡನೆ ಮುಕ್ತಿಸ್ಥಾನದಲ್ಲಿರುವುದಲ್ಲದೆ, ಆ ದಿವ್ಯಮಂಗಳವಿಗ್ರಹದಿಂದಲೇ, ಬೀಜವು ಮರವನ್ನು ಬಿಚ್ಚಿ ಬೆಳಸುವಂತೆ ಸಂಸಾರ ಚಕ್ರವನ್ನು ನಿರ್ಮಿಸುವುದೂ, ಅದನ್ನು ಕಾಪಾಡುವುದೂ, ಪ್ರಳಯದಲ್ಲಿ ತನ್ನಲ್ಲಿ ಸೇರಿಸಿಕೊಳ್ಳುವುದೂ ಪ್ರೇಮದಿಂದಲೇ. ಆದರೆ ಸಾಮಾನ್ಯ ಬೀಜದಂತೆ ಮರವಾಗಿ ಬೇರೆ ಉಳಿಯದಂತಲ್ಲ ಇವನು. ತಾನು ತಾನಾಗಿಯೇ ಉಳಿದು ಮರವಾಗಿ ಆದರೊಳಗೆ ಹಾಲಿನಲ್ಲಿ ಸಕ್ಕರೆಯಂತೆ ಇರುವುದು ಪ್ರೇಮದಿಂದ. ಭೂದೇವಿಯೂ ಶ್ರೀದೇವಿಯೂ ಪುರುಷಕಾರರಾಗಿರುವುದೂ ಪ್ರೇಮದಿಂದಲೇ. ಸಕಲ ಚೇತನರಲ್ಲಿ ಸ್ವಾಭಾವಿಕವಾಗಿರುವ ಆಸೆ, ಕಾಮ, ಮೋಹವೆಲ್ಲವೂ ಪ್ರೇಮದ ಆಕಾರಭೇದವೇ. ಪ್ರಪಂಚವು ಆಗಿ, ಇದ್ದು ಅಳಿಯುವುದೂ ಪ್ರೇಮದಿಂದಲೇ. ಚೇತನನು ಒಳ್ಳೆಯವನಾಗಿ ಪರಮಾತ್ಮನಲ್ಲಿ ಶರಣು ಹೋಗುವುದೂ ಪ್ರೇಮದಿಂದಲೇ. ಹಾಗೆ ಶರಣು ಹೋಗದೆ ಸಂಸಾರ ಸುಖದಲ್ಲೇ ತೊಳಲುತ್ತಿರುವುದೂ ಪ್ರೇಮದಿಂದಲೇ. ಆದರೆ ಆ ಪ್ರೇಮ ಕೇವಲ ಶಾರೀರವಾಗಿ ರಾಗವಾಗಿಯೂ ಮಾನಸಿಕವಾಗಿ ಆಸೆಯಾಗಿಯೂ, ಜ್ಞಾನಪಾಕದಲ್ಲಿ ಭಕ್ತಿಯಾಗಿಯೂ ಇರುವುದು. ಆದ್ದರಿಂದ ಪ್ರೇಮವೇ ಸರ್ವಸ್ವ. ಪರಮಾತ್ಮನು ಪರಮಾತ್ಮನಾಗಿರುವುದು ಪ್ರೇಮದಿಂದ. ಪ್ರಪಂಚವೆಲ್ಲವೂ ಅವನ ಪ್ರೇಮವಸ್ತು. ನಾವೆಲ್ಲರೂ ಅವನಿಗೆ ಪ್ರಿಯರಾಗಿರುವುದು ಪ್ರೇಮದಿಂದ. ಆದರೆ ಮೈಲಿಗೆಯಲ್ಲಿರುವೆವು. ಅದನ್ನು ಹೋಗಲಾಡಿಸುವರು ಭೂದೇವಿ, ಶ್ರೀದೇವಿ. ಹಾಗೆ ಮೈಲಿಗೆ ಹೋದಮೇಲೆ ನಾವು ಭಗವಂತನ ಅನುಭವದಲ್ಲಿರುವಂತೆ ಮಾಡುವುದು ಪ್ರೇಮ–ಶುದ್ಧ ಪ್ರೇಮ. ಪ್ರೇಮದ ಚರಿತ್ರೆಯೇ ಜೀವನ, ಪ್ರೇಮದ ನಂದಾದೀಪವೇ ಮುಕ್ತಿ, ಅದೇ ಬ್ರಹ್ಮಾನಂದ. ಬೆಂಕಿಯಿದೆ. ಅದರ ಶಾಖ ಬೇರೆ ಬೇರೆ ಕಟ್ಟಿಗೆಯಲ್ಲಿ ಬೇರೆ ಬೇರೆ ಪ್ರಮಾಣದಲ್ಲಿದೆ. ಆಲದ ಕಟ್ಟಿಗೆಯಿಂದ ಬೇಳೆಯನ್ನು ಬೇಯಿಸಲು ಸಾಧ್ಯವೇ ? ಹಾಗೆ ಸಾಂಸಾರಿಕ ಪ್ರೇಮದಿಂದ ಮೋಕ್ಷವನ್ನು ಹೊಂದಲಾಗುವುದಿಲ್ಲ. ರಾಗಾತ್ಮಕ ಪ್ರೇಮವು ಸಂಕುಚಿತವಾಗಿದ್ದು ದ್ವೇಷಕ್ಕೂ ಎಡೆಕೊಟ್ಟಿರುತ್ತದೆ. ಭೂದೇವಿಯಿಂದ ನಾವು ಬುದ್ಧಿವಂತರಾಗಿ ಪಾರಮಾರ್ಥಿಕದಲ್ಲಿ ವಿಶ್ವಾಸವುಳ್ಳವರಾಗುವುದೂ ಈ ಪ್ರೇಮದ ಪರಿಷ್ಕಾರವೇ. ಭೂದೇವಿಯಲ್ಲಿರುವುದು ಮೂಕ

ಪ್ರೇಮ. ಶ್ರೀದೇವಿಯು ಜ್ಞಾನಾಧಿದೇವತೆಯಾದ್ದರಿಂದ ಅವಳಿಂದ ಅದು ಶಾಂತ ಪ್ರೇಮವಾಗುತ್ತದೆ. ಭೂದೇವಿಯಿಂದ ನಾವು ಸಂಗೀತ, ನರ್ತನ, ಕವಿತೆ, ನವರ ಸಾಸ್ವಾದಗಳಲ್ಲಿ ಇಳಿದು ಜೀವನವನ್ನೇ ರಸಮಯವಾಗಿ ಮಾಡಿಕೊಳ್ಳುವೆವು. ಶ್ರೀ ದೇವಿಯಿಂದ ನಮ್ಮಲ್ಲಿ ಭಕ್ತಿಯು ಪ್ರಾಕೃತಿಕ ಉಲ್ಲಾಸವನ್ನು ತೊರೆದು, ಏಕಾಂತ ಜೀವನ, ಜ್ಞಾನಾಧಿಕರೂ ನಿರ್ವೇದಾಧಿಕರೂ, ವೈರಾಗ್ಯಾಧಿಕರೂ ಆದ ಭಾಗವತರ ಸತ್ಕಾರ ಸಲ್ಲಾಪ ಮತ್ತು ಸಹವಾಸದಲ್ಲಿ ಇರುವಂತಾಗುತ್ತದೆ. ಇಲ್ಲಿಯವರಿಗೂ ಪ್ರೇಮವು ಭೂ ಮತ್ತು ಶ್ರೀದೇವಿಯರಲ್ಲೇ ಅಡಗಿರುವುದರಿಂದ, ಅದರ ಪೂರ್ಣ ಸ್ವತಂತ್ರಸ್ವರೂಪವೂ ನಮಗೆ ಕಾಣುವುದಿಲ್ಲ. ಇಲ್ಲಿಂದ ಮುಂದೆ ಪರಮಾತ್ಮನನ್ನು ನಾವು ಅನುಭವಿಸಲು ಸಮರ್ಥರಾದಾಗ, ನೋಡುವ, ಜಗನ್ಮೋಹಿನೀ ರೂಪದಲ್ಲಿ ಕಾಣುವ ದೈವವೇ ನೀಳಾದೇವಿ. ಶ್ರೀದೇವಿಯನ್ನೂ ನಾವು ನೋಡಿದಮೇಲೆ ಕಾಣುವ ದೈವ ಇವಳು. ಯೋಗದೃಷ್ಟಿಯ ಅಂತಿಮ ಪರ್ವದಲ್ಲಿ ಕಾಣುವ ದೇವತೆ. ಪರಮಾತ್ಮನನ್ನು ನಮಗೆ ತೋರಿಸದಂತೆ ಮರೆಯಾಗಿರುವ ಕೊನೆಯ ಪರದೆಯನ್ನು ಬಿಚ್ಚುವವಳಿವಳು. ಸ್ವಾರ್ಥಭಕ್ತಿ ಭೂದೇವಿಯಿಂದ; ನಿಸ್ವಾರ್ಥಭಕ್ತಿ ಶ್ರೀದೇವಿ ಯಿಂದ, ಪ್ರೇಮಮಯ ಶಾಶ್ವತ ತ್ಯಾಗಾತ್ಮಕ ಭಕ್ತಿ ನೀಳಾದೇವಿಯಿಂದ. ಪ್ರೇಮ ವಿಲ್ಲದೆ ವೇದಾಂತವೇ ಇಲ್ಲ. ರಸಿಕರಲ್ಲದವರು ಎಂದಿಗೂ ವೇದಾಂತಿಗಳಾಗಲಾರರು. ಆಚಾರ್ಯರೆಲ್ಲರೂ ಈಯರ್ಥವೆಲ್ಲವನ್ನೂ ಮೂಲಮಂತ್ರವಾದ "ಓಂ" ಎನ್ನುವ ಪ್ರಣವಾರ್ಥದಲ್ಲಿ ಸೇರಿಸಿರುವರು. ಆದ್ದರಿಂದ ಎಲ್ಲಾ ವ್ಯಾಖ್ಯಾನಕಾರರೂ 21ನೇ ಪದ್ಯದ ಪೀಠಿಕೆಯಲ್ಲಿ "ನೀಳಾದೇವಿಯು ಪ್ರಸನ್ನಳಾಗಿ ಪರಮಾತ್ಮನಲ್ಲಿಗೆ ಗೋದೆ ಯೊಡನೆ ಎಲ್ಲಾ ಗೋಪಿಯರನ್ನೂ ಕರೆದೊಯ್ಯಲು ಅವರೊಡನೆ ಕೂಡಿಕೊಂಡಳು" ಎಂದಿರುವರು.

ಇಲ್ಲಿಂದ ಮುಂದೆ 21–25 ಪದ್ಯಗಳಲ್ಲಿ, ಮೂಲಮಂತ್ರದ "ನಮಃ" ಎನ್ನುವ ಶಬ್ದದ ಅರ್ಥವೂ, 26–30 ಪದ್ಯಗಳಲ್ಲಿ "ನಾರಾಯಣಾಯ" ಎನ್ನುವ ಶಬ್ದಾರ್ಥವೂ ಹೇಳಲ್ಪಡುತ್ತವೆ. ಪ್ರಪನ್ನನಾದವನು ದಿನವೂ ಮೂಲಮಂತ್ರವಾದ ಅಷ್ಟಾಕ್ಷರಿಯನ್ನು ಜಪಿಸಿ ಅದರ ಅರ್ಥವನ್ನು ಅನುಸಂಧಾನ ಮಾಡಬೇಕೆನ್ನುವ ನಿಯಮವಿದೆ. ಇದರ ಬಲದಿಂದ ನಮಗೆ ಸಕಲ ವೇದಾಂತಸಾರವು ಗೋಚರ ವಾಗುವುದಲ್ಲದೆ ನಮ್ಮ ಆತ್ಮವೇ ರಸಮಯವಾಗುವುದು. ಪ್ರಪಂಚವೆಲ್ಲವೂ ಪ್ರಿಯವಾಗುವುದು. ಆದರೆ ಹಾಗಾಗುವುದು ನಮಗಾಗಲ್ಲ. ವೈರಾಗ್ಯವೆಂದರೆ ತನಗೆ ಯಾವುದೂ ಬೇಕಿಲ್ಲವೆನ್ನುವ ಭಾವನೆ. ತನಗಲ್ಲದ್ದು ಪರರಿಗಾಗಿ ಬೇಕೆನ್ನು ವುದೇ ಪ್ರೇಮ. 5ನೇ ಪದ್ಯದಲ್ಲಿ "ತೂಯೋಮಾಯ್‌ವಂದು," 16ನೇ ಪದ್ಯದಲ್ಲಿ "ತೂಯೋಮಾಯ್‌ವಂದೋಂ" ಎಂದು ಗೋದೆಯು ಹೇಳಿರುವುದು ಈ ಅರ್ಥ ದಲ್ಲೇ. ಜ್ಞಾನದೃಷ್ಟಿಯಿಂದ ವೇದಾಂತವನ್ನು ಹಿಂದಿನ 20 ಪದ್ಯಗಳಲ್ಲಿ ಹೇಳಿ, ಅದರ ರಸಾಸ್ವಾದವನ್ನು ಮುಂದಿನ ಐದು ಪದ್ಯಗಳಲ್ಲಿ ಕೊಡುವಳು ಗೋದೆ. ವೇದಾಂತ

ಸಂಗೀತಕ್ಕೆ ಸಾಹಿತ್ಯ ಈ ಐದು ಪದ್ಯಗಳಲ್ಲಿವೆ. ಪ್ರಣವವೇ ವೇದಾಂತ ಸಂಗೀತ– ವೇದದ ಸಂಗೀತ ಸಾಮವೇದ. ಸಾಮವೇದದಲ್ಲೂ ತುಳುಕುವ ಬಳಕುವ ಮೂರ್ಛೆ ಪ್ರಣವ. ಛಾಂದೋಗ್ಯೋಪನಿಷತ್ತು ಈ ಅರ್ಥದಿಂದಲೇ "ಓಮಿತ್ಯೇತದಕ್ಷರ ಮುದ್ಗೀಥಮುಪಾಸೀತ . . . ಸಏಷ ರಸಾನಾಂ ರಸತಮಃ ಪರಮಃ ಪರಾರ್ಧ್ಯಃ" ಎಂದು ಹೇಳಿದೆ. ಯಮ ನಚಿಕೇತನಿಗೆ ಮೊದಲು ಉಪದೇಶಿಸಿದ್ದು

ಸರ್ವೇ ವೇದಾಃ ಯತ್ಪದಮಾಮನಂತಿ
ತಪಾಂಸಿ ಸರ್ವಾಣಿ ಚ ಯದ್ವದಂತಿ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ
ಪದಂ ಸಂಗ್ರಹೇಣ ಬ್ರವೀಮಿ "ಓಂ" ಇತ್ಯೇತತ್ ॥

ಎಂದು; ತೈತ್ತರೀಯ ಶಿಷ್ಟಾವಲ್ಲಿಯು "ಓಮಿತಿ ಬ್ರಹ್ಮ" ಎಂದು ಹೇಳಿದೆ. ಯೋಗಿ ಯಾದವನು ಕೊನೆಯ ಪರ್ವದಲ್ಲಿಯಾದರೂ "ಓಂ" ಎಂದು ಹೇಳಿಕೊಂಡು ಅರ್ಥಮಯನಾಗಿ ಪರಮಾತ್ಮನಲ್ಲಿ ಕೂಡಿಕೊಳ್ಳಬೇಕು ಎಂದು ಹೇಳಿದೆ ತೈತ್ತರೀಯ ನಾರಾಯಣೋಪನಿಷತ್ತು ಕೊನೆಯ ಮಂತ್ರವಾಗಿ. ಈ ಮಹಿಮೆಯುಳ್ಳ ಪ್ರಣವ ರಸಾನುಭವದಿಂದ ಬರುವ ಪಾಕವೇ "ನಮಃ" ಎನ್ನುವ ಶಬ್ದದಲ್ಲಿ ಅಡಗಿದೆ. ಅದರ ಅರ್ಥವಿಸ್ತಾರವೇ ಮುಂದಿನ ಐದು ಪದ್ಯಗಳಲ್ಲಿದೆ.

ಏತ್ತ ಕಲಂಗಳ್ ಎದಿರ್ ಪೊಂಗಿ ಮೀದಳಿಪ್ಪ
ಮಾತ್ತಾದೇ ಪಾಲ್ ಶೋರಿಯುಂ ವಳ್ಳಲ್ ಪೆರುಂ ಪಶುಕ್ಕಳ್
ಆತ್ತ ಪ್ಪಡೈತ್ತಾನ್ ಮಗನೇ ಅರಿವುರಾಯ್
ಊತ್ತಮುಡೈಯಾಯ್ ಪೆರಿಯಾಯ್ ಉಲಕಿನಿಲ್
ತೋತ್ತಮಾಯ್ ನಿನ್ರ ಶುಡರೇ ತುಯಿಲೆ೪nಯ್
ಮಾತ್ತಾರುನಕ್ಕು ವಲಿತೊಲೈಂದು ಉನ್ ವಾಶಲ್ ಕಣ್
ಆತ್ತಾದು ವಂದು ಉನ್ನಡಿಪಣಿಯುಮಾಪ್ಪೋಲೇ
ಪೋತ್ತಿ ಯಾಂ ವಂದೋಂ ಪುಕ೪ಂದು ಏಲೋರೆಂಪಾವಾಯ್
॥ ೨೧ ॥

ಏತ್ತ ಕಲಂಗಳ್ ಎದಿರ್ ಪೊಂಗಿ ಮೀದಳಿಪ್ಪ—ಉದಾರಿಗಳಾದ, ಜಾತಿ ಹಸುಗಳನ್ನು

ಆತ್ತ ಪ್ಪಡೈತ್ತಾನ್ ಮಗನೇ—ಹೆಚ್ಚಾಗಿ ಹೊಂದಿರುವ ನಂದಗೋಪನ ಮಗನೇ

ಅರಿವುರಾಯ್—ಕಣ್ಣು ಬಿಚ್ಚಿ ನಮ್ಮನ್ನು ನೋಡು. ನಿದ್ದೆಯಿಂದ ತಿಳಿದೆದ್ದು ಏಳು ಎನ್ನುವುದಿಲ್ಲ ನಾವು. ನಿನಗೆ ಎಲ್ಲಿದೆ ನಿದ್ದೆ. ನೀನು ಜನ್ಮ ತಾಳಿದ್ದು ನಮ್ಮನ್ನು ನೋಡುವುದಕ್ಕಲ್ಲವೇ ? ವೈಕುಂಠದಲ್ಲಿ, ಕ್ಷೀರಾಬ್ಧಿಯಲ್ಲಿ ನಿನ್ನ ದಯೆ, ಸೌಶೀಲ್ಯ ಮತ್ತು ಸೌಲಭ್ಯಗಳಿಗೆ ಪಾತ್ರರಿಲ್ಲವೆಂದಲ್ಲವೇ ನೀನು ನಂದಗೋಪನ ಮಗನಾಗಿ ಬಂದಿರುವೆ. ನಿನ್ನ ಪೂರ್ಣ ಕೃಪೆಗೆ ಪಾತ್ರನಾದವನು ನಂದಗೋಪ. ಹಾಗಿಲ್ಲದಿದ್ದರೆ ಮಧುರೆಯಲ್ಲಿ ಹುಟ್ಟಿ ಇಲ್ಲಿಗೆ ಬರುತ್ತಿದ್ದೆಯೇನು ? ನೀನು ಬಂದೆ. ಇಲ್ಲಿ ಎಲ್ಲವೂ ತುಂಬಿತುಳುಕಿತು. ಯಾರೂ ಕೇಳದೆ ಹೀಗೆ ಬಂದವನು ನಿನ್ನನ್ನೇ ಅರಿಸಿಬಂದಿರುವ ನಮ್ಮನ್ನು ನೋಡು.

ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ವಿಕ ಸ್ಸ ತು ವಿಜ್ಞೇಯಃ ಸ ವೈ ಮೋಕ್ಷಾರ್ಥಚಿಂತಕಃ ॥

ಎಂದು ವ್ಯಾಸರು ಹೇಳಿದಂತೆ (ಬಾ–ಶಾಂ 358–73, 77 ಟಪ್ಪಣಿ 20) ನಾವು ನಿನಗಾಗಿಯೇ ಇರುವಂತೆ ಮಾಡಿಯೂ ನಮ್ಮನ್ನು ನೀನು ನೋಡದಿರುವಂತೆ ನಾವು ಮಾಡಿರುವುದಾದರೂ ಏನು ? ವಾಲ್ಮೀಕಿಯು

ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ।
ನಿಂದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತಿ ॥

ಎಂದು ನೀನು ರಾಮನಾಗಿದ್ದಾಗ ನಿನ್ನನ್ನು ನೆನೆಸಿಕೊಂಡು ಹೇಳಿದಂತಿದೆ ನಮ್ಮ ಸ್ಥಿತಿ. ನಾವೇ ನಮಗೆ ಬೇಡವಾಗಿದೆ. ನಾವಿರುವುದು ನಿನಗಾಗೆಂದು ತಿಳಿದ ಮೇಲೆ ನಿನ್ನಲ್ಲಿಗೆ ಬಂದಿರುವೆವು. ಪ್ರಪನ್ನ ಭಕ್ತರು ನಾವು. ನಿನ್ನನ್ನು ಆಶ್ರಯಿಸಿ ನಿನ್ನನ್ನೇ ನಂಬಿ ನಿನ್ನನ್ನೇ ಕೂಡಲು ಬಂದಿರುವರು ನಾವು. ಧ್ಯಾನದಲ್ಲಿ ನಿನ್ನನ್ನು ನೋಡಿದಮೇಲೆ ನಿನ್ನಲ್ಲಿ ಭಕ್ತಿಯಿಟ್ಟವರಂತಲ್ಲ ನಾವು. ಅಂತಹವರಲ್ಲಿ ಉತ್ತಮ ರಾದ ಭೀಷ್ಮರಿಗೂ ನೀನು ದರ್ಶನ ಕೊಟ್ಟು ಕಣ್ಣು ಬಿಟ್ಟು ನೋಡಿದೆ.

ಯಂ ಯೋಗಿನಃ ಪ್ರಾಣವಿಯೋಗಕಾಲೇ
ಯತ್ನೇನ ಚಿತ್ತೇ ವಿನಿವೇಶಯಂತಿ ।
ಸ ತಂ ಪುರಸ್ತಾತ್ ಹರಿವಿಾಕ್ಷಮಾಣಃ
ಪ್ರಾಣಾ ಜಹೌ ಪ್ರಾಪ್ತಫಲೋ ಹಿ ಭೀಷ್ಮಃ ॥

ಬಾ–ಶಾಂ 46–109

ಎಂದು ವ್ಯಾಸರು ಹೇಳಿರುವಂತೆ ಭೀಷ್ಮರಿಗೆ ನಿನ್ನನ್ನು ಕೂಡಿಕೊಳ್ಳುವ ಫಲವನ್ನು ಕೊನೆಯಲ್ಲಿ ಕೊಟ್ಟಂತೆ ನಮಗೆ ಆಗಬೇಡ. ನಾವು ಭಕ್ತಿಯೋಗಿಗಳಲ್ಲ. ನಾವು

ಪಶುಗಳು. ಹಾಲು ಕರೆಯದ ಪಶುಗಳಲ್ಲ, ಹೃದಯವೆಂಬ ತಂಬಿಗೆ ತುಂಬಿ ಕೋಡಿ ಹರಿಯುವಂತೆ ಪ್ರೇಮದಲ್ಲಿ ತೋಯ್ದಿರುವವರು ನಾವು. ನಮಗೆ ಒಡೆಯ ನಾದ ನಂದಗೋಪನ ಮಗನಾಗಿ ನಮ್ಮನ್ನು ಕಣ್ಣು ಬಿಚ್ಚಿ ನೋಡದಿರುವುದು ಸರಿಯಲ್ಲ. ತಿಳಿದುಕೋ (ಅರಿವುರಾಯ್).

"**ಅರಿವುರಾಯ್**" ಎನ್ನುವುದಕ್ಕೆ "ಕಣ್ಣುಮುಚ್ಚಿಪ್ಪಾರ್" "ಅರಿಂದು ಕ್ಕೊಳ್" ಎನ್ನುವವೆರಡರ್ಥವನ್ನೂ ಕೂಡಿಸಿ ಹೇಳಿದ ಮಾತಿದು. ಹೀಗೆ ತಿಳಿದರೇನೇ ಮುಂದಿನ ಸಂಬೋಧನೆಯು ಚೆನ್ನಾಗಿ ಅರ್ಥವಾಗುವುದು.

ಊತ್ತುಮ್ಬುಡೈಯಾಯ್ ಪೆರಿಯಾಯ್ ಉಲಕಿನಿಲ್ ತೋತ್ತ ಮಾಯ್ ನಿನ್ರೆಶುಡರೇ ತುಯಿಲೆಳುnಯ್—"ನಾನಾರೂಪದಲ್ಲಿ ಹುಟ್ಟಿ, ನಾನಾ ರೂಪದಲ್ಲಿ ಹರಿದು, ಹರಿಯುತ್ತಲೇ ಇರುವುದಕ್ಕೆ ಕಾರಣವಾದ, ಚಿಲುಮೆಯಂತೆ ಮೂಲಾಧಾರವಾದವನೇ, ಹುಟ್ಟಿ ಹರಿದು ಹರಿಯುತ್ತಿರುವ ಪ್ರಪಂಚಕ್ಕೆ ದೊಡ್ಡ ವನೇ, ಹಾಗೆ ದೊಡ್ಡವನಾಗಿದ್ದು ಆ ಪ್ರಪಂಚವನ್ನು ಕಾಪಾಡುವ ಹೊಣೆ ಹೊತ್ತು ಅದಕ್ಕಾಗಿ ಇಲ್ಲಿ ಬಂದು ತೋರಿಕೊಂಡ ಬೆಳಕೇ, ನಮ್ಮನ್ನು ಉಪೇಕ್ಷಿಸುವ ನಿದ್ದೆ ಯಿಂದೆದ್ದು ಬಾ. ನಿನಗೆ ನಿದ್ದೆಯಿಲ್ಲ. ತಮೋಗುಣವು ನಿನ್ನಲ್ಲಿ ಎಲ್ಲಿಬರಬೇಕು. ಹಾಗಿದ್ದರೂ ಕಣ್ಣುಮುಚ್ಚಿರುವೆ. ನಿದ್ದೆಯಿಂದಲ್ಲ. ನಮ್ಮನ್ನು ನೋಡಕೂಡದೆಂದೋ ನಮ್ಮನ್ನು ಉಪೇಕ್ಷಿಸುವುದಕ್ಕೋ ಹೀಗಿರುವೆ. ನಮ್ಮನ್ನು ನೋಡದಂತೆ ನಾವೇನೂ ಮಾಡಿಲ್ಲ. ನಾವು ನಿನ್ನಲ್ಲಿ ಪ್ರೀತಿಯಿಟ್ಟು ನಿನ್ನಲ್ಲೇ ಮುಳುಗಿರುವೆವು.

ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಂ

ಎಂದು ನೀನೇ ಹೇಳಿರುವಂತೆ ನೀನು ನಮಗೆ ಪ್ರಸನ್ನನಾಗುವುದೇ ನಿನ್ನ ದೊಡ್ಡ ಸ್ತಿಕೆ (ಪೆರಿಯಾಯ್); ಇನ್ನೂ ಏನೇನನ್ನೋ ಮನಸ್ಸಿನಲ್ಲಿಟ್ಟು ಇಲ್ಲಿ ತೋರಿಕೊಂಡಿರುವೆ. ನೀನು ಏಳಲೇ ಬೇಕು; ಎದ್ದೇಳು"

"**ಊತ್ತಂ**" ಅಂದರೆ ಚಿಲುಮೆ, ಧಾರಾಪ್ರವಾಹಕ್ಕೆ ಮೂಲ, ಸ್ರೋತ, ಪ್ರಸ್ರವಣ ಬುಗ್ಗೆ; ಈ ಪದದಲ್ಲೇ ಅಡಗಿದೆ ವೇದಾಂತದ ಸಾರವೆಲ್ಲಾ. ತಾನೇ ಚಿಲುಮೆಯಾಗಿ, ಅಲ್ಲಿಂದ ನೀರಿನಂತೆ ಪ್ರಪಂಚವಾಗಿ ಹರಿದು ಕೊನೆಯಲ್ಲಿ ಸಮುದ್ರ ದಂತೆ ನೀಲಮೇಘಶ್ಯಾಮನಾದ ತನ್ನಲ್ಲೇ ಸೇರಿಕೊಳ್ಳುವನು. "ಕುಂಟೆಯಂತೆ ಕೊಳದಂತೆ ಅಷ್ಟಕ್ಕೆ ನಿಲ್ಲುವ ಜಲಾಶಯವಲ್ಲ ನೀನು. ಪ್ರೇಮದಿಂದ ಹೊರಹೊಮ್ಮಿ ಧಾರೆಯಾಗಿ ಹರಿದು ಹೋಗಿ ನಿನ್ನಲ್ಲೇ ಸೇರಿಕೊಳ್ಳುವುದು ಅಲ್ಲಲ್ಲಿ ನಮಗೆ ತಂಪು ಮಾಡುವುದಕ್ಕಾಗಿ.

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಂ ಅಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

—ಗೀ–IV–5

ಎಂದು ನೀನೇ ಹೇಳಿರುವಂತೆ ನಮ್ಮಲ್ಲಿ ತೋರಿಕೊಂಡ ಮಹನೀಯನು ನೀನು, ಏಳು" ಎಂದಳು ಗೋದೆ.

ಗೋದೆಯೇ ಕೃಷ್ಣನಿಗೆ ಪ್ರಿಯಳು. ಭೂದೇವಿಯಲ್ಲವೇ ಅವಳು? ಈಗ ಶ್ರೀ ಮತ್ತು ನೀಳಾದೇವಿಯರೊಡನೆಯೂ ಕೂಡಿರುವಳೆಂದರೆ ಹೇಳಬೇಕೆ? ಕೃಷ್ಣ ಮುಚ್ಚಿದ್ದ ಕಣ್ಣನ್ನು ತೆರೆಯದೆ ಕೇಳಿದ "ನಿಮಗೆ ಈಗ ಏನುಬೇಕು" ಎಂದು. ಆಗ ಗೋದೆ ಹೇಳಿದಳು.

ಮಾತ್ತಾರ್ ಉನಕ್ಕು ವಲಿತುಲೈಂದು ಉಂ ವಾಶಲ್‌ಕಣ್ ಆತ್ತಾದು ವಂದು, ಉನ್ನಡಿಪಣಿಯುಮಾಪ್ಪೋಲೇಪೊತ್ತಿಯಾಂವಂದೋಂಪುಕಳ್ಂದು ಎಂದು; **ಮಾತ್ತಾರ್**–ನಿನ್ನ ಶತ್ರುಗಳು, **ವಲಿತುಲೈಂದು**–ಸೋತು ಹೋಗಿ **ಉಂವಾಶಲ್‌ಕಣ್**–ನಿನ್ನ ಅರಮನೆ ಬಾಗಿಲಿನಲ್ಲಿ, **ಆತ್ತಾದು ವಂದು**–ನಿನ್ನನ್ನು ಬಿಟ್ಟರಲಾರದೇ ಬಂದು, **ಉಂ**–ನಿನ್ನ, **ಅಡಿ ಪಣಿಯುಮಾಪ್ಪೋಲೆ**–ಪಾದಸೇವೆ ಮಾಡುವಂತೆ **ಯಾಂ ವಂದೋಂ**–ನಾವು ಬಂದೆವು. ಸುಮ್ಮನೆ ಬರಲಿಲ್ಲ; **ಪೋತ್ತಿ ವಂದೋಂ**–ಪೂಗಳಲು ಬಂದೆವು. **ಪುಕಳ್ಂದು ವಂದೋಂ**–ನಿನಗೆ ಮಂಗಳ ಕೋರಿ ಬಂದೆವು. ಮಂಗಳಾಶಾಸನ ಮಾಡಲು ಬಂದೆವು. ಪರಶುರಾಮ–ನಿನ್ನನ್ನು ಎದುರಿಸಿ ನಿಂತು ಆದದ್ದೇನು? ತೇಜಸ್ಸನ್ನು ಕಳೆದುಕೊಂಡ; ಕಾಕಾಸುರ? ರಾಮನಲ್ಲಿ ತಪ್ಪುಮಾಡಿದ. ಬ್ರಹ್ಮಾಸ್ತ್ರವು ಅಟ್ಟಿಬಂತು. ಎಲ್ಲಾ ದೇವತೆಗಳನ್ನೂ ಕೇಳಿಕೊಂಡ. ಸಾರ್ಥಕವಾಯಿತೇನು? ಇಲ್ಲ. ನಿನ್ನಲ್ಲಿಗೆ ಓಡಿಬಂದ, ನೀನೇ ಅವನಿಗೆ ಗತಿಯಾಗ ಬೇಕಾಯಿತು. ಇದೆಲ್ಲಾ ನಮಗೆ ಗೊತ್ತು. ಇವರೆಲ್ಲರೂ ತಪ್ಪುಮಾಡಿ ನಿನ್ನಲ್ಲಿಗೆ ಬಂದರು. ನಾವು ತಪ್ಪುಮಾಡದೇ ಬಂದಿರುವೆವು. ಮಾಡಿದ್ದರೂ ತಿಳಿಯದೇ ಮಾಡಿರುವೆವು. ನಿನ್ನ ಗುಣಕ್ಕೆ, ನಿನ್ನ ಹಿರಿಮೆಗೆ ಮನಸೋತು ಅವನ್ನು ನಿನ್ನಲ್ಲೇ ಹೇಳಿಕೊಂಡು ಸಂತೋಷಪಡಲು (ಮಗಿಳ್ನ್ದು) ಏಲೋರ್ ಎಂಪಾವಾಯ್.

ಸ್ವಾಪದೇಶ

ಏತ್ತ . . . ಮಗನೇ—"ಏತ್ತ" ಎನ್ನುವ ಪದಕ್ಕೆ ಮೂರರ್ಥವಿದೆ. (1) ತಕುಂದದು–ಯೋಗ್ಯವಾದುದು (2) ಉಯರ್‌ನ್ದದು–ಉತ್ತಮವಾದುದು ಮತ್ತು (3) ವಾಂಗಿಕ್ಕೊಂಡದು–ತೆಗೆದುಕೊಂಡದ್ದು.

"ತಕುಂದದು" ಎನ್ನುವ ಅರ್ಥದಲ್ಲಿ, ಏತ್ತ–ಯೋಗ್ಯವಾದ, ಕಲಂಗಳ್–ಹಾಲು ಕರೆಯುವ ತಂಬಿಗೆಯಂತಿರುವ ಹೃದಯವುಳ್ಳ ಭಕ್ತರನ್ನೂ, ಹೃದಯವುಳ್ಳವರನ್ನೂ. ಹೃದಯವೆಂದು ಕರೆಯುವದು ಒಂದು ಅಲಂಕಾರ; ಎದಿರ್‌ಪೊಂಗಿ–ಉಕ್ಕಿ ಬಂದು, ವಿಾದಳಿಪ್ಪ–ಹರಿಯುವಂತೆ, ಮಾತ್ತಾದೆ ಪಾಲ್‌ಶೊರಿಯುಂ–ಪರಮಾತ್ಮನ ಗುಣ

ಗಾನವೆನ್ನುವ ಹಾಲನ್ನು ಧಾರೆಯಾಗಿ ಸುರಿಸುವ, ವಳ್ಳಲ್–ಉದಾರಿಗಳಾದ, ಪೆರುಂ ಪಶುಕ್ಕಳ್–ಜಾತಿ ಹಸುಗಳಂತಿರುವ ಭಾಗವತರನ್ನೂ, ಆತ್ತ ಪ್ಪಡೈತ್ತಾರ್–ಹೆಚ್ಚಾಗಿ ಹೊಂದಿರುವ ಶಠಗೋಪರ ಅಥವಾ ವಿಷ್ಣುಚಿತ್ತರ, ಮಗನೇ–ಮಗನಾಗಿರುವ ಕೃಷ್ಣನೇ, ಅರಿವುರಾಯ್–ಪ್ರಸನ್ನನಾಗು.

ಭಕ್ತರೆಂದರೆ ಪರಮಾತ್ಮನಲ್ಲಿ ತೊಯ್ದು, ಹೃದಯ ತುಂಬಿ ಹಾಡಿದ ಆಳ್ವಾರ್ರುಗಳು; ಇವರು ಹನ್ನೆರಡು ಜನರು (1) ಪೊಯ್‌ಕೈಮುನಿ (ಸರಸ್ ಆಳ್ವಾರ್) (2) ಪೂತತ್ತಾರ್ (ಭೂತಾಳ್ವಾರ್) (3) ಪೇಯ್ ಆಳ್ವಾರ್ (ಮಹದಾಳ್ವಾರ್) (4) ತಿರುಮಳಿಶೈ (ಭಕ್ತಿಸಾರ) (5) ನಮ್ಮಾಳ್ವಾರ್ (ಶಠಗೋಪ) (6) ತಿರುಪಾಣ್ ಆಳ್ವಾರ್ (ಯೋಗಿವಾಹ) (7) ಪೆರಿಯಾಳ್ವಾರ್ (ವಿಷ್ಣುಚಿತ್ತ) (8) ಆಂಡಾಳ್ (ಗೋದೆ) (9) ಕುಲಶೇಖರ (10) ತೊಂಡರಡಿಪ್ಪೊಡಿ (ಭಕ್ತಾಂಘ್ರಿರೇಣು) (11) ಮಂಗಯರ್‌ಕೋ ಅಥವಾ ತಿರುಮಂಗೈ ಆಳ್ವಾರ್ (12) ಇವರೊಡನೆ ಆಳ್ವಾವಾರ್ರೆಂದು ಪರಿಗಣಿಸಲ್ಪಟ್ಟ ಶಠಗೋಪರ ಸಾಕ್ಷಾತ್ ಶಿಷ್ಯರಾದ ಮಧುರಕವಿ. ಸಂಪ್ರದಾಯದಲ್ಲಿ ಶಠಗೋಪರು ಆತ್ಮವೆಂದೂ ಮಿಕ್ಕವರು ಅವರ ಶರೀರವೆಂದೂ ತಿಳಿಯಲಾಗಿದೆ.

ಭೂತಂ ಶಿರೋ ಹೃದಯಮಹಾಹ್ವಯಮಕ್ಷಿಯುಗ್ಮಂ
ಭಟ್ಟಾರ್ಯಮಾಸ್ಯಮಥ ಭಾರ್ಗವಮಸ್ಯ ಕಂಠಂ ।
ಬಾಹೂ ವದಂತಿ ಕುಲಶೇಖರ–ಯೋಗಿವಾಹೌ
ದೋರ್ಮಧ್ಯನಾಭಿಚರಣಾನಿತರಾರ್ ಶಠಾರೇಃ ॥

ಶಠಗೋಪರು ಆತ್ಮ; (1) ಭೂತತ್ತಾಳ್ವಾರ್ ಶಿರಸ್ಸು (2) ಸರಸ್ ಆಳ್ವಾರ್ ಮತ್ತು (3) ಮಹದಾಳ್ವಾರ್ ಇವರಿಬ್ಬರೂ ಎರಡು ಕಣ್ಣುಗಳು; (4) ವಿಷ್ಣುಚಿತ್ತರು ಮುಖ (5) ಭಕ್ತಿಸಾರರು ಕತ್ತು (6) ಕುಲಶೇಖರರು ಮತ್ತು (7) ತಿರುಪ್ಪಾಣಾಳ್ವಾರ್ರು—ಇವರಿಬ್ಬರೂ ಎರಡು ಕೈಗಳು (8) ಎರಡು ತೋಳುಗಳ ನಡುವೆ ಇರುವ ಎದೆ, ಹೃದಯ; ಮತ್ತು ನಾಭಿ ಅಂದರೆ ಹೊಕ್ಕಳಾಗಿರುವರು ತಿರುಮಂಗೈ; ಎರಡು ಕಾಲುಗಳು (9) ತೊಂಡರಡಿಪ್ಪೊಡಿ ಮತ್ತು (10) ಮಧುರಕವಿ; (11) ಗೋದೆಯು ವಿಷ್ಣುಚಿತ್ತರಲ್ಲೇ ಸೇರಿರುವಳು. ಹೀಗೆ ಹನ್ನೊಂದು ಭಕ್ತರನ್ನೊಳಗೊಂಡ ಶಠಗೋಪರಿಗೆ ಮಗನಂತೆ ವಿಧೇಯನಾಗಿ ನಾನಾ ರೂಪಗಳಲ್ಲಿ ತೋರಿಕೊಂಡ ಪರಮಾತ್ಮ.

ಗೋದೆಯ ಮನಸ್ಸಿನಲ್ಲಿ ಅವಳ ತಂದೆಯೂ ಇದ್ದಿರಬಹುದು. ಅವರಿಗೆ ಶ್ರೀಕೃಷ್ಣ ಮಗನಂತೆ ತೋರಿ ಹಾಡಿಸಿಕೊಂಡ. ನಾಥಮುನಿ ಮೊದಲಾದ ಆಚಾರ್ಯರು ಭಾಗವತರು. ಇವರು ಪರಮಾತ್ಮನನ್ನು ಹಾಡಬೇಕಾದರೆ ಮೊದಲು ವಿಷ್ಣುಚಿತ್ತರ ಪಲ್ಲಾಂಡನ್ನು ಹಾಡಿಯೇ ಮುಂದೆ ಸಾಗುವರು.

ಭಾಗವತರೆಂದರೆ ಪ್ರಪನ್ನರೂ ಆಗಬಹುದು. ಇವರೆಲ್ಲರೂ ಭಗವಂತನ ಆರಾಧನೆಯಲ್ಲಿ ಗೋದೆಯು "**ಶಿತ್ತಂಶಿರುಕಾಲೆ**" ಎನ್ನುವ ಎರಡು ಹಾಡುಗಳನ್ನೂ, ವಿಷ್ಣುಚಿತ್ತರ "**ಪಲ್ಲಾಂಡ**"ನ್ನೂ ಕೊನೆಯಲ್ಲಿ ದಿನವೂ ಹಾಡುವರು. ಗೋದೆಯನ್ನು ಕೂಡಿ ಇವರನ್ನು ನೆನೆಯದ ಭಾಗವತರಿಲ್ಲ. ಆದ್ದರಿಂದ ವಿಷ್ಣುಚಿತ್ತರು "**ಪೆರುಂ ಪಶುಕ್ಕಳ್ ಆತ್ತುಪ್ಪಡೈತ್ತಾರ್.**" "**ಪಶುಕ್ಕಳ್**" ಎಂದರೆ ಆಚಾರ್ಯರು (11ನೇ ಪಾಶುರದ ಸ್ವಾಪದೇಶವನ್ನು ನೋಡಿ.)

ಶಠಗೋಪರು,

ಅರುಳ್ ಪೆರುವಾರಡಿಯಾರ್ ತಮ್ಮಡಿಯೆನೇರ್ಕ್ಕು ಆಗ್ಗಿಯರ್ಗಾ
ಅರುಳ್ ತರುವಾನಮ್ಮೈಕಿನ್ರ್ಗ ಅದು ನಮದು ವಿದಿವಕ್ಕೈಯೇ ।
ಇರುಳ್ ತರು ಮಾಞಾಲತ್ತುಳ್ ಇನಿ ಪ್ಪಿರವಿ ಯರ್ಗಾ ವೆಂಡೇ೯
ಮರುಳೊಗ್ಗಿ ನೀ ಮಡನೆಂಜೇ ವಾಟ್ಟಾತ್ತ್ಗಾ ಆಡಿ ವಣಂಗೇ ॥

—ತಿರುಮೊ X, 6, 1

ಎನ್ನುವ ಪದ್ಯದಲ್ಲಿ ಪರಮಾತ್ಮನು ಮಗನಂತೆ ತನ್ನ ಆಧೀನವಾಗಿರುವನು— ಎಂದಿರುವರು. "ನಮದುವಿದಿವಕ್ಕೈಯೇ" ಎನ್ನುವುದಕ್ಕೆ ಈ ಅರ್ಥವನ್ನೇ ರಾಮಾನುಜರು ಹೇಳಿದರೆಂದು ಸಂಪ್ರದಾಯವಿದೆ.

(ii) "ಏತ್ತ" ಎನ್ನುವುದಕ್ಕೆ "ಉತ್ತಮವಾದುದು" ಎನ್ನುವ ಆರ್ಥದಲ್ಲಿ, ಏತ್ತ—ಉತ್ತಮವಾದ, ಕಲಂಗಳ್—ಶಿಷ್ಯರಿಗೆ, ಎದಿರ್...ಶೊರಿಯುಂ—ತುಂಬಿತುಳುಕಿ ಆನಂದವು ಕೋಡಿ ಹರಿಯುವಂತೆ ಉಪದೇಶ ಧಾರೆಯನ್ನು ಕೊಡುವ, ವಳ್ಳಲ್ ... ತ್ತ್ಗಾ—ಉದಾರಿಗಳಾದ ಆಚಾರ್ಯರನ್ನೇ ತನ್ನ ಭಕ್ತರಾಗಿಯುಳ್ಳ ಶಠಗೋಪರಿಗೆ ಮಗನೇ—ಮಗನಂತಿರುವವನೇ—ಶ್ರೀಕೃಷ್ಣ !

(iii) ವಾಂಗಿಕ್ಕೊಂಡದು—ಎನ್ನುವ ಮೂರನೇ ಅರ್ಥದಲ್ಲಿ, **ಏತ್ತ . . . . ಮಗನೇ**—ತನ್ನಿಂದ ಉಪಕಾರ ಹೊಂದಲು (ಏತ್ತ), ಇಂದ್ರಾದಿಗಳು (ಕಲಂಗಳ್) ಎದಿರ್‌ಪೊಂಗಿ— ಒಬ್ಬರಮೇಲೊಬ್ಬರು ಮೇಲೆ ಬಿದ್ದರೂ (ಮಿಾದಳಿಪ್ಪ) ಅವರಿಗೆ **ಮಾತ್ತಾದೇ ಪಾಲ್ ಶೊರಿಯುಂ**—ಧಾರೆಯಾಗಿ ಅನುಗ್ರಹಮಾಡುವ, ವಳ್ಳಲ್— ಪ್ರಭಾವಶಾಲಿಯಾದ ಶ್ರೀಕೃಷ್ಣ, ಅವನೇ ಪೆರುಂ ಪಶುಕ್ಕಳ್ ಆತ್ತಪಡೈತ್ತಾರ್— ಜ್ಞಾನಿಗಳೂ ಭಕ್ತರೂ ಆದ ಭಾಗವತರನ್ನು ಹೊಂದಿರುವವನು; ಅವನಿಗೆ ವಿಧೇಯನಾದ ಆಚಾರ್ಯನೇ, ಅರಿವುರಾಯ್—ಪ್ರಸನ್ನನಾಗು.

ಊತ್ತಮುಡೈಯಾಯ್—ಚಿಲುಮೆಯಂತೆ ಸತತವಾಗಿ ಅನುಗ್ರಹಮಾಡುವವನೇ—

ಪೆರಿಯಾಯ್—ಪರಮಾತ್ಮನಿಗಿಂತಲೂ ದೊಡ್ಡವನೇ—

ಸಿದ್ಧಿರ್ಭವತಿ ವಾ ನೇತಿ ಸಂಶಯೋಽಚ್ಯುತಸೇವಿನಾಂ ।
ನ ಸಂಶಯೋಸ್ತಿ ತದ್ಭಕ್ತಪರಿಚರ್ಯಾರತಾತ್ಮನಾಂ ॥

—ಶಾಂ–ಸ್ಕೃ 1, 95

ಅಚ್ಯುತನನ್ನು ಸೇವಿಸಿದರೆ ಫಲವು ಸಿಗುವುದೋ ಇಲ್ಲವೋ ಎನ್ನುವ ಸಂಶಯ ಬಂದೇ ಬರುವುದು. ಆದರೆ ಅವನ ಭಕ್ತರನ್ನು ಸೇವಿಸುವವರಿಗೆ ಫಲವು ಸಿಗುವುದೆನ್ನುವದರಲ್ಲಿ ಸಂಶಯವೇ ಇಲ್ಲ. ತಾನು **ಕರ್ಮಾಧ್ಯಕ್ಷ**ನಾದ್ದರಿಂದ ನಾವು ಕೇಳಿದ ಫಲ ಕೊಡಲು ಹಿಂಜರಿಯಬಹುದು. ಆದರೆ ಅವನು ತನ್ನ ಭಕ್ತರ ಮಾತಿಗೆ ಎದಿರು ಹೇಳಲಾರ. "ಜ್ಞಾನೀ ತ್ವಾತ್ಮೈವ ಮೇ ಮತಂ" ಎಂದು ಅವನೇ ಗೀತೆಯಲ್ಲಿ ಹೇಳಿಕೊಂಡಂತೆ ಜ್ಞಾನಿಗಳು ಅಂದರೆ ಭಕ್ತರು ಅವನಿಗೆ ಆತ್ಮದಂತಿರುವರು. ಅವರು ಹೇಳಿದಂತೆ ಅವನು ಕೇಳಲೇಬೇಕು.

ಉಲಕೀಲ್ . . . ಶುಡರೇ—ಪ್ರಪಂಚದಲ್ಲಿ ಪ್ರತ್ಯಕ್ಷದೈವನೇ—**ತುಯಿಲಿ ೞನಯ್, ... ಪುಕೞ್ಂದು**—ಸಮಾಧಿಯಿಂದ ಏಳು, ಬೇರೆ ಬೇರೆ ಸಿದ್ಧಾಂತವನ್ನು ಹೇಳುವವರು ಅದರ ಪರವಾಗಿ ವಾದಿಸುವವರು ನಿನ್ನ ಶತ್ರುಗಳು; ಅವರು ನಿನ್ನಿಂದ ಸೋತು, ತೇಜಸ್ಸನ್ನು ಕಳಿದುಕೊಂಡು, ನಿನ್ನ ಆಶ್ರಯಕ್ಕೆ ಬಂದು ನಿನ್ನ ಪಾದಾರವಿಂದದಲ್ಲಿ ಬೀಳುವಂತೆ, ನಾವೂ ಬಂದಿರುವೆವು ನಿನ್ನ ಕೀರ್ತಿಯನ್ನು ಹಾಡಲು.—

ಹೀಗೆ ಸ್ವಾಪದೇಶದಲ್ಲಿ ಆಚಾರ್ಯ ಪರವಾಗಿ ಹೇಳಿದರೆ ಊತ್ತಮುಡೈಯಾಯ್ ಎನ್ನುವುದರಿಂದ ಕೊನೆಯವರೆಗೆ ಬರುವ ಅರ್ಥವಿದು. ಪರಮಾತ್ಮ ಪರವಾಗಿ ಹೇಳಿದರೆ ಅನ್ಯಾಪದೇಶದಲ್ಲಿರುವ ಅರ್ಥವೇ ಮುಂದಕ್ಕೆ ಸರಿಹೋಗುತ್ತದೆ. ಈ ಎರಡರ್ಥವೂ ಸರಿಹೋದರೂ ಭಗವದಾರಾಧನೆಗಾಗಿ ಆಚಾರ್ಯನು ಎಬ್ಬಿಸಲ್ಪಡುವನೆಂದು ಊತ್ತಮೂರ್ ವೀರರಾಘವಾಚಾರ್ಯರು ಅಭಿಪ್ರಾಯ ಪಟ್ಟಿರುವರು.— ಏಲೋರೆಂಪಾವಾಯ್

ಪರಮಾತ್ಮ ಕಣ್ಣುಬಿಚ್ಚಿನೋಡಲಿಲ್ಲ. ಗೋದೆಯು ಯೋಚಿಸಿದಳು. ಕಾರಣವೇನಿರಬಹುದು? ಪ್ರಸನ್ನನಾಗದಿದ್ದರೆ ನಮಗಾಗಿ ನೀಳೆಯನ್ನು ಬಿಟ್ಟು ಕೊಡುತ್ತಿರಲಿಲ್ಲ. ನಾವು ಮಾಡಿದ ಸ್ತೋತ್ರಕ್ಕೆ ಹಿಗ್ಗಿ ಆನಂದತುಂದಿಲನಾಗಿರುವನೆ? ಇರಬಹುದು. ಪ್ರೇಮಮಯನಿವನು. ಅತಿ ಪ್ರೇಮದಲ್ಲಿ ಭಾವನಾಪ್ರಪಂಚವು ಹಿತವಾಗುವಂತೆ ಎದಿರು ಪ್ರಪಂಚವಿರುವುದಿಲ್ಲ. ಪ್ರೇಮದ ಎಲ್ಲೆ ಮೌನ.

ಮೌನ ಪ್ರಿಯರು. ಪ್ರೇಮಿಗಳು. ಕೃಷ್ಣನು ನಮ್ಮ ಮೇಲಿನ ಆಸೆಯಿಂದ ಹೀಗೆ ಮಾತನಾಡದೆ, ಕಣ್ಣು ತೆರೆಯದೆ ಇರುವನೇ ? ಅಥವಾ ಹೀಗಿರಬಹುದೇ ?

ಪರೀಕ್ಷಾಂ ಚ ಜಗನ್ನಾಥಃ ಕರೋತ್ಯದೃಢಚೇತಸಾಂ ।
ನರಾಣಾಂ ಅರ್ಥವಿಧ್ವಂಸನಿಕಷೇಷು ಜನಾರ್ದನಃ ॥

—ವಿಷ್ಣು—ಧರ್ಮ 74–89

ದೃಢಮನಸ್ಸಿಲ್ಲದವರನ್ನು ಜಗತ್ಪ್ರಭು ಪರೀಕ್ಷಿಸುವನು. ನಮ್ಮ ಆರ್ಥಿಕಸಂಪತ್ತನ್ನು ಹೋಗಲಾಡಿಸಿ ಆ ಸಾಣೇಕಲ್ಲಿನಲ್ಲಿ ಮಾನವರ ಒರೆ ನೋಡುವವನಿವನು. ಅದಕ್ಕಾಗಿಯೇ ಇವನು ಜನಾರ್ದನನಾಗಿರುವುದು (ಜನ್ಯಾ ಅರ್ದಯತಿ ಪೀಡಯತಿ). ತನ್ನನ್ನೇ ನಂಬಿರುವರೋ ಇಲ್ಲವೋ ಎಂದು ನೋಡುವಂತಿದೆ. ಅದನ್ನು ತಿಳಿಸಿದರೆ ವಿಳುವ ನೇನೋ ನೋಡೋಣವೆಂದು ಹಾಡಿದ ಹಾಡಿದು. ಶಾಸ್ತ್ರದಲ್ಲಿ ಅದಕ್ಕೆ " ಅನನ್ಯಾರ್ಹ ಶೇಷತ್ವ" ವೆಂದು ಹೇಳಲಾಗಿದೆ. ಅದೇ ಈ ಪದ್ಯದ ಸಾರ.

ಅಂಗಣ್ ಮಾ ಞಾಲತ್ತರಶರ್ ಅಭಿಮಾನ
ಭಂಗಮಾಯ್ ವಂದು ನಿ೯ ಪಳ್ಳಿ ಕ್ಕಟ್ಟಿಲ್ ಕೀೞ್
ಶಂಗವಿರುಪ್ಪಾರ್ ಪೋಲ್ ವಂದು ತಲೈಪ್ಪೆಯ್ದೋಂ
ಕಿಂಕಿಣಿವಾಯ್ಚ್ಚಿಯ್ದ ತಾಮರೈಪ್ಪೂಪ್ಪೋಲೇ
ಶೆಂಗಣ್ ಶಿರಿಚ್ಚಿರಿದೇ ಯೆಮ್ಮೇಲ್ ವಿೞಿಯಾವೋ
ತಿಂಗಳುಮಾದಿತ್ತಿಯನುಂ ಎೞುಂದಾರ್ ಪೋಲ್
ಅಂಗಣಿರಂಡುಂ ಕೊಂಡು ಎಂಗಳ್‌ಮೇಲ್ ನೋಕ್ಕುದಿಯೇಲ್
ಎಂಗಳ್‌ಮೇಲ್ ಚ್ಚಾಪವಿೞಿನ್ದು ಏಲೋರೆಂಪಾವಾಯ್ ॥ ೨೨ ॥

ಅಂಗಣ್—ರಮ್ಯವಾದ, ಮಾ—ವಿಶಾಲವಾದ ಮತ್ತು ಮಂಗಳಕರವಾದ, ಞಾಲತ್ತು—ಭೂಪ್ರದೇಶದ, ಅರಶರ್—ರಾಜರು, ಅಭಿಮಾನ ಭಂಗಮಾಯ್ ವಂದು—ಇಷ್ಟು ದಿನಗಳೂ ತಾವು ದೊಡ್ಡವರು, ಎಲ್ಲರಿಗೂ ಒಡೆಯರು ಎನ್ನುವ ದುರಭಿಮಾನವನ್ನು ಕಳಕೊಂಡು ಬಂದು, ನಿ೯—ನಿನ್ನ, ಪಳ್ಳಿಕ್ಕಟ್ಟಿಲ್ ಕೀೞ್—ಮಲಗುವ ಮಂಚದ ಕೆಳಗೆ, ಶಂಗವಿರುಪ್ಪಾರ್ ಪೋಲ್—ಒಟ್ಟಿಗೆ ಬಂದಿರುವಂತೆ ವಂದು—ನಾವು ಈಗ ಬಂದು, ತಲೈ ಪ್ಪೆಯ್ದೋಂ—ತಲೆಬಾಗಿ ನಿಂತಿರುವೆವು.

ಭೂಭಾಗವೇ ರಮ್ಯ. ಇದರ ಸೌಂದರ್ಯಕ್ಕೆ ಮಾರುಹೋಗದ ಕವಿಯಿಲ್ಲ. ವಿಶಾಲವಾಗಿರುವುದಲ್ಲದೆ ಮಂಗಳಕರವೂ ಆಗಿದೆ. ಭೂಮಿಯಲ್ಲಿ ಬಾಳಿ, ಕಲಿತು, ಬೆಳೆದರೇನೇ ನಮಗೆ ಮೋಕ್ಷ. ಇದು ಕರ್ಮಭೂಮಿ. ಪ್ರಕೃತಿಯು ತಾಂಡವ

ವಾಡುವ ಬೀಡು. ಹೀಗಿರುವ ಭೂಭಾಗದಲ್ಲಿ ಎಲ್ಲಿಯಾದರೂ ರಾಜನೆನಿಸಿಕೊಂಡವನಿಗೆ ಹೆಮ್ಮೆ ಬರುವುದು ಸಹಜ. ಆ ಹೆಮ್ಮೆಯು ದುರಭಿಮಾನವಾದರೆ ಅದು ನಾಶವಾಗುವುದೂ ನಿಜ. ಅದನ್ನು ನಾಶಮಾಡುವುದರಿಂದಲೇ ಪರಮಾತ್ಮನು ಬುದ್ಧಿ ಕಲಿಸುವನು. ಇದನ್ನು ಚೆನ್ನಾಗಿ ತಿಳಿದು ಅಂತಹ ದೊರೆತನಕ್ಕೆ ಆಸೆಪಡದವರೇ ಮಹಾತ್ಮರು. "ಪ್ರಭುತ್ವದ ಹುಚ್ಚು ಆಜ್ಞಾನದ ಉಡುಗೊರೆ." ಲೋಕಜೀವನದಲ್ಲೇ ಹೀಗಿರುವಾಗ, ವೇದಾಂತಜೀವನದಲ್ಲಿ ಕೇಳಬೇಕೇ ? ಪ್ರಭುವಿನ ನೆರಳಿನಲ್ಲಿ ಬಾಳುವುದಕ್ಕಿಂತ ಹಿರಿದು ಯಾವುದೂ ಇಲ್ಲ. ಕೃಷ್ಣ ಲೋಕಪ್ರಭು, ಸರ್ವಶಕ್ತ, ಆನಂದಮಯ, ಪ್ರೇಮಮಯ. ಅವನನ್ನು ಎಲ್ಲಿ ನೋಡಿದರೂ, ನೋಡುವವರ ದುಃಖವೆಲ್ಲವೂ ತೀರುವುದು, ಸಂಕೋಚ, ಬೇಕು ಎನ್ನುವುದೇ ದುಃಖ, ಶೋಕ. "ಎಲ್ಲವೂ ಆದ, ಎಲ್ಲಕ್ಕೂ ಆಸರೆಯಾದ, ಎಲ್ಲೆಯಿಲ್ಲದ ದೈವ ಕೃಷ್ಣ." ಅವನನ್ನು ನೋಡುವ ಭಾಗ್ಯವೊಂದೇ ಸಾಕು. ನಮ್ಮ ಶೋಕವೆಲ್ಲವೂ ತೀರುವುದು.

ದೃಷ್ಟ ಏವ ಹಿ ನ ಶ್ಲೋಕಂ ತಾರಯಿಷ್ಯತಿ ರಾಘವಃ

ಎಂದು ಅಯೋಧ್ಯಾಪುರನಿವಾಸಿಗಳು ರಾಮನ ವಿಷಯದಲ್ಲಿ ಹೇಳಿದ್ದು ನಿಜ. ನಮ್ಮ ಸುಖ, ಆನಂದ ಅವನಿಂದ. ನಮಗೇಕೆ ದುರಭಿಮಾನ. ಅವನು ಒಲಿದರೆ ಸಾಕು. ನಮಗೆ ಬರುವ ಆನಂದಕ್ಕೆ ಮಿತಿಯಿಲ್ಲ. ದುರಭಿಮಾನದಿಂದ ಎಂದಿಗೂ ಕೇಡು. ಅದರಿಂದ ನಹುಷ ಕೆಟ್ಟ. ನೂರು ಅಶ್ವಮೇಧ ಯಾಗ ಮಾಡಿ ಇಂದ್ರನಾದ. ತಲೆ ತಿರುಗಿತು. ಇಂದ್ರಾಣಿಯನ್ನು ರಾಣಿಯಾಗಬೇಕೆಂದು ಆಸೆಪಟ್ಟ; ಆಜ್ಞೆಯಿತ್ತ. ಯುಕ್ತಾಯುಕ್ತವನ್ನು ಮರೆತ. ಫಲ ? ಋಷಿ ಶಾಪಕ್ಕೆ ತುತ್ತಾಗಿ ಸರ್ಪವಾದ. ರಾವಣ ದುರಭಿಮಾನದಿಂದ ಬಂಧುಮಿತ್ರರೊಡನೆ ಸತ್ತ. ವಿಭೀಷಣ ? ಅಹಂಕಾರ ಬಿಟ್ಟು ರಾಮನನ್ನೇ ನಂಬಿಬಂದ.

ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ

ಎಂದು ಅವನ ವಿಷಯವಾಗಿ ವಾಲ್ಮೀಕಿಯು ಹೇಳಯೇ ಸಂತೋಷಪಟ್ಟ. ವಿಭೀಷಣ ಬದುಕಿದ, ರಾಮನಿಗೆ ಪ್ರಿಯನಾದ. ಇಲ್ಲವಾದರೆ ರಾಮನ ಅರ್ಚಾದೈವವಾದ ರಂಗನಾಥನನ್ನು ಅವನಿಗೆ ಕೊಡುತ್ತಿದ್ದನೇ ?

ಒರು ನಾಯಕಮಾಯ್ ಓಡ ವುಲಕುಡನಾಂಡವರ್
ಕರುನಾಯ್ ಕವರ್ನ್ದ ಕಾಲರ್ ಶಿದೈಕಿಯ ಪಾನ್ಮೈಯರ್
ಪೆರು ನಾಡು ಕಾಣ ವಿನ್ಮೈಯಿಲೇ ಪಿಚ್ಚೈ ತಾಂ ಕೊಳ್ವರ್
ತಿರುನಾರಣ್ ತಾಳ್ ಕಾಲಂಪೆರ ಚ್ಚಿಂತಿತ್ತು ಉಯ್ಮಿನೋ ॥

—ತಿರು. ಮೊ IV, I, 1

ಎಂದರು ಶಠಗೋಪರು. ಪ್ರಪಂಚವೆಲ್ಲವನ್ನೂ ಆಳಿದವರು ಬಿಕಾರಿಗಳಾಗಿ ತಿರಿದರಲ್ಲವೇ ? ಪ್ರಾಕೃತಿಕ ಐಶ್ವರ್ಯ ಎಂದಿಗೂ ಹಾಳಾಗತಕ್ಕದ್ದು. ನಮ್ಮ ನಿತ್ಯ

ಭಾಗ್ಯ ಕೃಷ್ಣ. ಧರ್ಮರಾಯ ರಾಜಸೂಯ ಯಾಗ ಮಾಡಲಣಿಯಾದ. ಅವನು ರಾಜಾಧಿರಾಜನೆನ್ನಿಸಿಕೊಳ್ಳಬೇಕಾಯಿತು. ಪಂಚಪಾಂಡವರೆಂದರೆ ಕೃಷ್ಣನಿಗೆ ಪಂಚಪ್ರಾಣ. ಅವರಿಗೆ ಅವನಿದ್ದರೆ ಸಾಕೆನ್ನುವ ನಂಬಿಕೆ. ಭೀಮನಿಂದ ಜರಾ ಸಂಧನನ್ನು, ಅಜೇಯ ರಾಜಾಧಿರಾಜನೆನಿಸಿಕೊಂಡವನನ್ನು ಕೊಲ್ಲಿಸಿದ. ಅವನು ಸೆರೆಯಲ್ಲಿಟ್ಟಿದ್ದ ರಾಜರೆಲ್ಲರನ್ನೂ ಬಿಡಿಸಿದ. ನಿಮ್ಮ ನಿಮ್ಮ ರಾಜ್ಯಕ್ಕೆ ಹೋಗಿ ಎಂದ. ಹೋದರೇ? ಇಲ್ಲ. ಪರಮಾತ್ಮನನ್ನು ಇವನಲ್ಲಿ ಕಂಡರು. ಇವರು ಒಬ್ಬರೆ ಇಬ್ಬರೆ? 20800 ಜನ ರಾಜರು. ಎಲ್ಲರೂ ತಾವು ದೊರೆಗಳಿನ್ನುವುದನ್ನು ಮರೆತು ಅವನ ಸೇವೆಯಲ್ಲಿ ನಿಂತರು. ಅವರೇ ಹಾಗಾದಮೇಲೆ, ಹೆಂಗಸರಾದ ನಾವು, ಅವನನ್ನೇ ನಂಬಿ ಅವನಿಗಾಗಿಯೇ ಬಂದು ಅವನನ್ನೇ ಕಂಡಮೇಲೆ ನಮಗೆ ಬೇಕಾಗಿರುವುದು ಅವನ ಪ್ರೇಮನೋಟ. ಅದು ಹೇಗಿರಬೇಕೆನ್ನುವೆಯೋ, ಕೇಳು" ಎಂದು " ಕಿಂಕಿಣಿ . . . . ಇಟ್ಟಂದು " ಎಂದಳು ಗೋದೆ.

ಇಲ್ಲಿ ಜರಾಸಂಧನಿಂದ ಪರಾಜಿತರಾದ ರಾಜನ ಸಾದೃಶ್ಯಕೊಟ್ಟು ವೆಂದಾಂತ ಚಿತ್ರವನ್ನೇ ಕಣ್ಣುಮುಂದೆ ಇಟ್ಟಿರುವಳು ಗೋದೆ. ಈ ಉಪಾಖ್ಯಾನವು ಭಾಗವತ X, 73ನೇ ಅಧ್ಯಾಯದಲ್ಲಿದೆ.

ಅಯುತೇ ದ್ವೇ ಶತಾನ್ಯಕ್ಷ್ಟಾ ಲೀಲಯಾ ಯುಧಿ ನಿರ್ಜಿತಾಃ ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾಮಲವಾಸಸಾಃ ॥

ಕ್ಷುತ್ಕ್ಷಾಮಾಃ ಶುಷ್ಕವದನಾಃ ಸಂರೋಧ ಪರಿಕರ್ಶಿತಾಃ ।
ದದೃಶುಸ್ತೇ ಘನಶ್ಯಾಮಂ ಪೀತಕೌಶೇಯವಾಸಸಂ ॥

ಶ್ರೀವತ್ಸಾಂಕಂ ಚತುರ್ಬಾಹುಂ ಪದ್ಮಗರ್ಭಾರುಣೇಕ್ಷಣಂ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಂ ॥

ಪದ್ಮಹಸ್ತಂ ಗದಾಶಂಖರಥಾಂಗೈರುಪಲಕ್ಷಿತಂ ।
ಕಿರೀಟಹಾರಕಟಕ–ಕಟಿಸೂತ್ರಾಂಗದಾರ್ಜಿತಂ ॥

ಭ್ರಾಜದ್ವರಮಣಿಗ್ರೀವಂ ನಿವೀತಂ ವನಮಾಲಯಾ ।
ಪಿಬಂತ ಇವ ಚಕ್ಷುಭ್ಯಾಂ ಲಿಹಂತ ಇವ ಜಿಹ್ವಯಾ ॥

ಜಿಘ್ರಂತ್ರ ಇವ ನಾಸಾಭ್ಯಾಂ ರಂಭತ ಇವ ಬಾಹುಭಿಃ ।
ಪ್ರಣೇಮುಃ ಹತಪಾಪ್ಮಾನೋ ಮೂರ್ಧಭಿಃ ಪಾದಯೋ ರ್ಹರೇಃ ॥

ಪರಮಾತ್ಮನ ಪೂರ್ಣ ಲಕ್ಷಣದೊಡನೆ ಕೃಷ್ಣನನ್ನು ಕಂಡು ಎರಗಿದರು ಅವನ ಪಾದದಲ್ಲಿ. ಮತ್ತು ಹೇಳಿದರು–

ಘ್ನಂತಃ ಪ್ರಜಾಃ ಸ್ವಾ ಅತಿನಿರ್ಘೃಣಾಃ ಪ್ರಭೋ
ಮೃತ್ಯುಂ ಪುರಸ್ತ್ವಾವಿಗಣಯ್ಯ ದುರ್ಮದಾಃ ।
ಕಾಲೇನ ತನ್ವಾ ಭವತೋನುಕಂಪಯಾ
ವಿನಷ್ಟ ದರ್ಪಾ ಶ್ವರಣೌ ಸ್ಮರಾಮು ತೇ ॥

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥

ಈ ನಾಮಗಳೆಲ್ಲವೂ ಅವನು ಪ್ರೇಮಮಯನೆಂದು ಸ್ಥಿರಪಡಿಸುವವು.

ಕೃಷ್ಣ :

ಕೃಷಿ ರ್ಭೂವಾಚಕಶಬ್ದಃ ಣಶ್ಚ ನಿರ್ವೃತಿವಾಚಕಃ ।
ವಿಷ್ಣುಸ್ತದ್ಭಾವಯೋಗಾಚ್ಚ ಕೃಷ್ಣೋ ಭವತಿ ಶಾತ್ವತಃ ॥

ಕೃಷಿ ಎಂದರೆ ಪ್ರಪಂಚ, " ಣ " ಎಂದರೆ ತೃಪ್ತಿ ಹೊಂದುವುದು. ಇವೆರಡು ಪದಗಳೂ ಸೇರಿ ಪ್ರಪಂಚದಲ್ಲಿ ಲೀಲಾರಸವನ್ನನುಭವಿಸುವವನು ಕೃಷ್ಣ; ಇವನು ಅವತಾರ ಮಾಡಿದ ಕೃಷ್ಣ ಮಾತ್ರನಲ್ಲ. ಅವತಾರ ಮಾಡಲು ಕಾರಣಭೂತನಾದ ಪ್ರೇಮಮಯ ಪರಮಾತ್ಮ.

ವಾಸುದೇವ : ಪ್ರಪಂಚ ಎಲ್ಲೆಡೆಯಲ್ಲೂ ವಾಸಿಸುವವನು ವಾಸುಃ; " ದಿವು–ದ್ಯೋತನೇ," " ದಿವು–ಕ್ರೀಡಾಯಾಂ "ಎನ್ನುವ ಎರಡು ಕ್ರಿಯಾಪದದಿಂದ ಬಂದ ದೇವ ಪದಕ್ಕೆ ಅರ್ಥ, ಪ್ರಪಂಚವನ್ನು ತನ್ನಿಂದ ಬೆಳಗಿಸಿ ಅದರೊಡನೆ ಆಡುವವನು.

ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ ।
ತತಸ್ಸ ವಾಸುದೇವೇತಿ ವಿದ್ವದ್ಭಿಃ ಪರಿಕೀರ್ತ್ಯತೆ ॥

ಎಲ್ಲವನ್ನೂ ವ್ಯಾಪಿಸಿಕೊಂಡು ಬೆಳಗಿಸಿ, ಅವುಗಳೊಡನೆ ಇದ್ದು ಆಟವಾಡಿ ಸಂತೋಷಪಡುವ ಪ್ರೇಮಮಯ ಪರಮಾತ್ಮ.

ಹರಿಃ—ಪಾಪವೆಲ್ಲವನ್ನೂ ಹೋಗಲಾಡಿಸುವ ಸಂಕಲ್ಪವುಳ್ಳ ಪ್ರೇಮಮಯ ದೇವ.

ಇಲ್ಲಿ " ಪರಮಾತ್ಮನೇ " ಎನ್ನುವ ಮೊದಲರ್ಧ ಶ್ಲೋಕದ ಕೊನೆಯ ಪದವು ಪ್ರತಿಯೊಂದರಲ್ಲೂ ಸೇರುತ್ತದೆ. ಕೃಷ್ಣಾಯ ಪರಮಾತ್ಮನೇ, ವಾಸುದೇವಾಯ ಪರಮಾತ್ಮನೇ, ಹರಯೇ ಪರಮಾತ್ಮನೇ, ಪ್ರಣತ ಕ್ಲೇಶನಾಶಾಯ ಪರಮಾತ್ಮನೇ, ಗೋವಿಂದಾಯ ಪರಮಾತ್ಮನೇ ನಮೋನಮಃ ಎನ್ನುವುದೇ ಅನ್ವಯ.

ಪ್ರಣತಕ್ಲೇಶನಾಶಃ—ಶರಣುಹೋದವರ ಕ್ಲೇಶಗಳನ್ನು ನಾಶಮಾಡುವವನೇ; ಪ್ರೀತಿಯಿಂದ, ಮಹಾ ವಿಶ್ವಾಸದಿಂದ ಮಾತ್ರ ಶರಣುಹೋಗಲು ಮನ ಬರುವುದು. ತನ್ನಲ್ಲಿ ಪ್ರೀತಿಯಿಟ್ಟವರಲ್ಲಿ ತಾನೂ ಪ್ರೀತಿಯಿಡುವನೆಂದಲ್ಲವೇ ಇವನು—

ಗೋವಿಂದಃ—"ಗೋ" ಎನ್ನುವ ಶಬ್ದಕ್ಕೆ, ಭೂಮಿ, ವಾಕ್ಕು, ದಿಕ್ಕು, ಹೂವು—ಎನ್ನುವ ಅರ್ಥಗಳಿವೆ. "ಗಾಂವಿಂದತಿ—ಗೋವಿಂದಃ" "ಧಾತೂನಾಮನೇಕಾರ್ಥತ್ವಾತ್" ಎನ್ನುವ ನಿಯಮದಿಂದ "ವಿಂದ್" ಎನ್ನುವ ಕ್ರಿಯಾಪದಕ್ಕೆ "ತಿಳಿ, ಲಾಲಿಸು, ಹೊಂದು" ಮೊದಲಾದ ಅರ್ಥಗಳೆಲ್ಲವೂ ಸರಿಹೋಗುತ್ತದೆ. ನಮ್ಮೆಲ್ಲರ ಪ್ರಾರ್ಥನೆಯನ್ನು ಕೇಳಿ, ಭೂದೇವಿಯಿಂದ ಪ್ರತಿಭೆಕೊಟ್ಟು, ವೇದಾಂತಿಗಳನ್ನಾಗಿ ಮಾಡಿ, ನಮ್ಮ ದಿಕ್ಕು ಅಂದರೆ ಗತಿಯನ್ನು ತಾನೇ ನಡೆಯಿಸಿಕೊಟ್ಟು ಪುಷ್ಪದಂತೆ ಅರಳುವ ಪ್ರೇಮಮಯ ದೇವ ಕೃಷ್ಣ. ಇವನು ಒಲಿದರೆ ಸಾಕು, ನಮಗಾಗಿ ಎಲ್ಲವನ್ನೂ ಮಾಡುವನು.

ಭಾರತ ಯುದ್ಧ ತಪ್ಪದಾಯಿತು. ಕೃಷ್ಣನ ಸಹಾಯಬೇಡಲು ಅರ್ಜುನ ದುರ್ಯೋಧನರು ಬಂದರು. ದುರ್ಯೋಧನ ಸ್ವಾಭಿಮಾನಿ; ಕೃಷ್ಣನು ಮಲಗಿ ನಿದ್ದಿಸುತ್ತಿರುವಾಗ, ತಲೆಯ ಹತ್ತಿರ ಕೂತ. ಕೃಷ್ಣನನ್ನೇ ನಂಬಿ ಸ್ವಾಭಿಮಾನ ಬಿಟ್ಟವನು ಅರ್ಜುನ. ಮಂಚದ ಕೆಳಗೆ, ಕೃಷ್ಣನ ಕಾಲಿನ ಕೆಳಗೆ ಕೂತ. ಕೃಷ್ಣನೇ ದೊರಕಿದ ಇವನಿಗೆ. ಕಳ್ಳಪುರಿಯಂತೆ ಸೈನ್ಯಸಿಕ್ಕಿತು ದುರ್ಯೋಧನನಿಗೆ. "ಅರ್ಜುನನಂತೆ ಬಂದವರು ನಾವು" ಎಂದು ಗೋದೆಯ ಮಾತಿನಿಂದ ಅರ್ಥವಾಗುತ್ತದೆ. ಆಗ "ಅಂಗಣ್ಮಾ ಞಾಲತ್ತು ಅರಶರ್" ಪರಮಾತ್ಮ ಕೃಪೆಯಿಂದ ಮಂಗಳವಾದ ಭೂಭಾಗಕ್ಕೆ ಅರಸರಾಗಲಿರುವ ಪಂಚಪಾಂಡವರು ಅರ್ಜುನನ ಮುಖೇನ, "ಅಭಿಮಾನ ಭಂಗ ಮಾಯ್ವಂದು" —ಸ್ವಾಭಿಮಾನವನ್ನು ಬಿಟ್ಟು ಬಂದು, "ಶಂಗ ಮಿರುಪ್ಪಾರ್ ಪ್ಪೋಲ್"—ಶಂಗಂ—ಸಂಗ—ಪಾದವನ್ನು ಆಶ್ರಯಿಸಿದಂತೆ.

ಮತ್ತೊಂದರ್ಥವನ್ನು ಹೇಳಲು ಅಪೇಕ್ಷಿಸಿರಬೇಕು. "ಅಂಗಣ್—ಮಾ—ಞಾಲಂ" ವೈಕುಂಠ; (ಭಾ ಶಾ 96, 4, 6.)

ರಮ್ಯಾಣಿ ಕಾಮಚಾರಾಣಿ ವಿಮಾನಾನಿ ಸಭಾಸ್ತಥಾ ।
ಆಕ್ರೀಡಾ ವಿವಿಧಾ ರಾಜ್ಞ ಮಧ್ವಿನಃ ಶ್ಯಾಮಲೋದಕಾಃ ।
ರುದ್ರಾದಿತ್ಯವಸೂನಾಂ ಚ ತಥಾನ್ಯೇಷಾಂ ದಿವೌಕಸಾಂ ।

ಎಂದಿರುವಂತೆ ಸ್ವರ್ಗ ಲೋಕದ ಸುಖ ಅತಿರಮ್ಯ. ಅಲ್ಲಿ ಸಿಗದ ಭೋಗ ಬೇರೆಡೆಯಿಲ್ಲ. ಅಂತಹ ಭೋಗಗಳೂ ವೈಕುಂಠದಲ್ಲಿ ಸಿಗುವ ಆನಂದದೊಡನೆ ಹೋಲಿಸಿದರೆ, ಅವು ನರಕಪ್ರಾಯವಾಗಿವೆ.

ಏತೆ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ

ಅಂತಹ ವೈಕುಂಠದ "ಅರಶರ್"—ಮುಕ್ತರು. 17 ಪದ್ಯದಲ್ಲಿ ತೋರಿಸಿರುವಂತೆ ಮುಕ್ತನೇ "ಸ್ವರಾಟ್" ತೈ—ಶಿಕ್ಷಾವಲ್ಲಿಯೂ ಕೂಡ "ಆಪ್ನೋತಿಸ್ವಾರಾಜ್ಯಂ" ಎಂದಿದೆ, ಛಾ—ಉ—ತ್ತೂ "ಸಸ್ವರಾಡ್ಭವತಿ" ಎಂದಿದೆ. ಅಂತಹ ಮುಕ್ತರು "ಅಭಿಮಾನ ಭಂಗಮಾಯ್ವಂದು"—ಸಂಸಾರದಿಂದ ಅಹಂಕಾರ ಮಮಕಾರ ಬಿಟ್ಟು ಇಲ್ಲಿಗೆ ಒಂದು, ನಿಪಳ್ಳಿ ಕ್ಕಟ್ಟಿಲ್ ಕೀೞ್ ಶಂಗಮಿರುಪ್ಪಾರ್ ಪೋಲ್—ನಿನ್ನ ಶೇಷಶಯ್ಯೆಯ ಕೆಳಗೆ ಗುಂಪು ಗುಂಪಾಗಿ ಸೇವೆಮಾಡಲು ಇರುವಂತೆ ನಾವು ಬೇರೆ ಯಾವ ಪ್ರಯೋಜನವನ್ನೂ ಅಪೇಕ್ಷಿಸದೆ ಬಂದಿರುವೆವು; ಬಂದು ತಲೆಬಾಗಿ ನಿಂತಿರುವೆವು (ವಂದು ತಲೈ ಪ್ಪೆಯ್ದೋಂ)

ಕಂಕಣ್ಮೆವಾಯ್ ಚೆಯ್ದ ತಾಮರೈ ಪ್ಪೂ ಪ್ಪೋಲೆ—ಅರ್ಥ ಅರಳಿ ಒಳದಿಂಡು ಮಾತ್ರ ಕಾಣುವಂತಾದ ಕಮಲದ ಹೂವಿನಂತೆ (ಪದ್ಮಕಿಂಜಲ್ಕಸನ್ನಿಭಂ) ಶೆಂಗಣ್—ಕೆಂಪಾದಕಣ್ಣುಗಳು, ಶಿರಿಚ್ಚಿರಿದೇ—ಸ್ವಲ್ಪ ಸ್ವಲ್ಪವಾಗಿ, ಎಮ್ಮೇಲ್—ನಮ್ಮ ಮೇಲೆ, ವಿೞಿಯಾವೂ—ಬೀಳಬಾರದೇ? ಕಣ್ಣು ತುಂಬಾ ಅರಳಬಾರದು; ಹಾಗೆ ಅರಳಿದರೆ ಅರ್ಥವೇ ಬೇರೆ; ಆಶ್ಚರ್ಯಪಡುವಾಗ ಕೋಪದಲ್ಲಿ ಹಾಗಾಗುವುದು. ಕೋಪದಿಂದ ಅರಳಿದಾಗ ಕೆಂಪಾಗಿಯೂ ಇರುವುದು. ಹಾಗಿರಕೂಡದು ನಿನ್ನ ಕಣ್ಣುಗಳ. ನಿನಗೆ ನಮ್ಮಲ್ಲಿ ಕೋಪವಿಲ್ಲ; ನೀಳೆಯನ್ನು ಬಿಟ್ಟುಕೊಡಲಿಲ್ಲವೇ ನೀನು? ನಿನಗೆ ಆಶ್ಚರ್ಯ ವಸ್ತುವೆನ್ನುವುದೇ ಇಲ್ಲ; ನೀನೇ ಆಶ್ಚರ್ಯವಸ್ತು ನಮಗೆ; ನಿನ್ನ ಕಣ್ಣು ಕಮಲ ಹೂವಿನ ಬಣ್ಣದಂತಿರಬೇಕು; ಅದೂ ಸ್ವಲ್ಪ ಸ್ವಲ್ಪವಾಗಿ ತೆರೆಯಬೇಕು ಅಂದರೆ ನಿನ್ನದು ಪ್ರೇಮದ ನೋಟವಾಗಿರಬೇಕು. ನಮ್ಮ ಪ್ರಯಾಸವೆಲ್ಲವೂ ಅದಕ್ಕಾಗಿಯೆ; ನಮ್ಮ ಹೃದಯವನ್ನು ತಿಳಿದವನು ನೀನು;

ಕಂಸ ನಿನ್ನನ್ನು ಕೊಲ್ಲಲು ಕೊನೆಗೆ ಕೇಶಿ ಎನ್ನುವ ರಾಕ್ಷಸನನ್ನು ಕಳುಹಿದ; ಅವನೂ ಸತ್ತ; ನಿನ್ನನ್ನು ತಾನೇ ಕೊಲ್ಲಬೇಕೆಂದು ಸಂಚುಮಾಡಿ ನಿನ್ನನ್ನು ಮಧುರೆಗೆ ತರಲು ಅಕ್ರೂರನನ್ನು ಕಳುಹಿದ. ದೂತನಾಗಿ ಹೋಗಲು ಒಪ್ಪಿದ ಅಕ್ರೂರ. ಅವನಿಗೆ ಗೊತ್ತು ಕೃಷ್ಣ ತನ್ನ ಹೃದಯವನ್ನು ನೋಡಬಲ್ಲನೆಂದು. ಹೇಳಿದ

ಸರ್ವಾತ್ಮಾ ಸರ್ವವಿತ್ ಸರ್ವಃ ಸರ್ವಭೂತೇಷ್ವವಸ್ಥಿತಃ ।
ಯೋ ಹ್ಯ ಚಿಂತ್ಯೋಽವ್ಯಯೋ ವ್ಯಾಪೀ ಸ ವಕ್ಷ್ಯತಿ ಮಯಾ ಸಹ ॥
ವಿ-ಪು. V, 17, 9

ಎಲ್ಲರಿಗೂ ಪ್ರಭು; ಎಲ್ಲವನ್ನೂ ತಿಳಿದವನು; ಎಲ್ಲವೂ ಆಗಿರುವನು; ಎಲ್ಲಾ ಭೂತಗಳಲ್ಲಿಯೂ ಇರುವವನು; ಅವನ ಮಹಿಮೆಯನ್ನು ಚಿಂತಿಸಲು ಸಾಧ್ಯವಿಲ್ಲ; ನಮ್ಮನ್ನು ಕೈಬಿಡುವವನಲ್ಲ (ಅವ್ಯಯಃ—ನವೀಯತೇ ವ್ಯಪಗಮ್ಯತೇ ಅಸ್ಮಾತ್),

ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವವನು; ಅವನೇ ನನ್ನೊಡನೆ ಮಾತನಾಡುವನು ಅಂದರೆ ನಾನು ಅವನಿಗೆ ಹೇಳಬೇಕಾದದ್ದು ಏನೂ ಇಲ್ಲ." ಎಂದು; ಮತ್ತೂ ಸಂತೋಷಪಟ್ಟ.

ತಂ ತ್ವದ್ಯ ನೂನಂ ಮಹತಾಂ ಗತಿಂ ಗುರುಂ
ತ್ರೈಲೋಕ್ಯಕಾಂತಂ ದೃಶಿಮನ್ಮಹೋತ್ಸವಂ ।
ರೂಪಂ ದಧಾನಂ ಶ್ರೀಯ ಈಪ್ಸಿತಾಸ್ಪದಂ
ದ್ರಕ್ಷ್ಯೇ ಮಮಾಸನ್ನುಷಸಃ ಸುದರ್ಶನಾಃ ॥

ನ ಮಯ್ಯುಪೇಕ್ಷ್ಯತ್ಯರಿಬುದ್ಧಿಮುಚ್ಯುತಃ
ಕಂಸಸ್ಯ ದೂತಃ ಪ್ರಹಿತೋಪಿ ವಿಶ್ವದೃಕ್ ।
ಯೋಂತರ್ಬಹಿಶ್ಚೇತಸ ಏತದೀಹಿತಂ
ಕ್ಷೇತ್ರಜ್ಞ ಈಕ್ಷತ್ಯಮಲೇನ ಚಕ್ಷುಷಾ ॥

ಅಪ್ಯಂಘ್ರಿಮೂಲೇsವಹಿತಂ ಕೃತಾಂಜಲಿಂ
ಮಾವಿಷ್ಟತಾ ಸಸ್ಮಿತಮಾರ್ದ್ರಯಾ ದೃಶಾ ।
ಸಪದ್ಯಪದ್ವಸ್ತಸಮಸ್ತ ಕಿಲ್ಬಿಷೋ ವೋಢಾ
ಮುದಂ ವೀತ ವಿಶಂಕ ಊರ್ಜಿತಾಂ ॥

ಭಾಗ X, 38, 14, 15, 19.

ನನ್ನ ಕಣ್ಣಿಗೆ ದೊಡ್ಡ ಊಟ ಅವನ ರೂಪು; ಅದನ್ನು ಹೊಂದಲು ಈಗ ಹೋಗುವೆನು; ನಾನೇ ಧನ್ಯ; ಮತ್ತಾರಿಗೆ ಇದು ಸಿಕ್ಕೀತು; ನಿಜವಾಗಿಯು ನಾನು ಕಂಸನ ದೂತನೆಂದು ಅವನು ಉಪೇಕ್ಷಿಸುವುದಿಲ್ಲ ನನ್ನನ್ನು; ಎಲ್ಲವನ್ನೂ ತಿಳಿದವನು ಕೃಷ್ಣ; ಖಂಡಿತವಾಗಿಯೂ ಅವನು ನನ್ನನ್ನು ಪ್ರೀತಿ ಕಣ್ಣಿನಿಂದ ನೋಡುವನು; ನಾನು ಅವನ ಕಾಲಿಗೆ ಎರಗುವೆನು; ಕೈಗೂಪುವೆನು; ಮುಗುಳು ನಗೆಯಿಂದ ನನ್ನನ್ನು ನೋಡುವನು; ನನ್ನ ಪಾಪವೆಲ್ಲವೂ ನಾಶವಾಗುವುದು ನಿಜ; ಇಂದು ನನ್ನ ಮಹೋದಯ ದಿನ ಎಂದು. ಅವನಂತೆ ನಾವೂ ನಿನ್ನನ್ನೇ ನಂಬಿರುವವರು; ಅರ್ಥ ವಿಕಸಿತ. ಸಸ್ಮಿತ, ತೊಯ್ದ ಕಣ್ಣುಗಳಿಂದ ನೋಡು, ಕೃಷ್ಣ!

ತಿಂಗಳುಮಾದಿತ್ತಿಯನುಂ ಎಳ್ಗುಂದಾರ್ ಪೋಲ್—ಚಂದ್ರಸೂರ್ಯರು ಒಟ್ಟಿಗೆ ಉದಯಿಸಿದಂತೆ, ಅಂಗಣ್ ಇರಂಡುಂಕೊಂಡು—ಮಂಗಳವಾದ ನಿನ್ನ ಎರಡು ಕಣ್ಣುಗಳಿಂದ, ಎಂಗಳ್‌ಮೇಲ್ ನೋಕ್ಕುದಿಯೇಲ್—ನಮ್ಮನ್ನು ನೋಡಿದರೆ, ಎಂಗಳ್‌ಮೇಲ್ ಶಾಪಂ ಇಳ್ಗುಂದು—ನಮ್ಮ ಮೇಲಿರುವ ಪಾಪವು ಮತ್ತು ಶಾಪವು ತೀರುವುದು.

ಕೃಷ್ಣ, ನೀನು ಪರಮಾತ್ಮ; ವೇದವು ನಿನ್ನ ಎರಡು ಕಣ್ಣುಗಳು ಚಂದ್ರ ಸೂರ್ಯರೆಂದಿದೆ; ಒಂದು ಕಣ್ಣು ಸುಣ್ಣ ಮತ್ತೊಂದು ಬೆಣ್ಣೆಯೆಂದಲ್ಲ ಅದು ಹೇಳಿರುವುದು; ನಿನ್ನನ್ನು "ಅಕ್ಷರ" ಎಂದು ಮೊದಲು ಹೇಳಿ ನಂತರ "ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ" (ಮುಂ—ಉ II, 1, 4) ಎಂದು ಹೇಳಿದೆ. ಅನುಭವಿಸಿದಷ್ಟೂ ಆನಂದ ಕೊಡುವವನು ನೀನು (ನಕ್ಷರತಿ—ಭೋಗ್ಯತಯಾ ಉಪರ್ಯುಪರಿ ಉಪಚೀಯತೆ); ಪ್ರಪಂಚವನ್ನು ಹುಟ್ಟಿಸಿ ಅದನ್ನು ಕಾಪಾಡುವ ಹೊಣೆ ಹೊತ್ತಿರುವ ಧರ್ಮಸ್ವರೂಪನು (ನಕ್ಷರತಿ ಭಕ್ತೇಭ್ಯಃ); ಸೂರ್ಯನಂತೆ ಪ್ರಭುವಾಗಿ ಕ್ರೂರನಂತೆ ಕಂಡರೂ, ಚಂದ್ರನಂತೆ ತಂಪಾದ ತಾಯಿಯ ಕಣ್ಣು ನಿನ್ನದು. ಆದ್ದರಿಂದ ನಿನ್ನ "ಶೆಂಗಣ್" "ಅಂಗಣ್" ಎಂದು ನಮಗೆ ತಿಳಿದಿದೆ. ನಮಗೆ ತಾಪ ಕೊಡುತ್ತಿರುವ ಸಂಸಾರವನ್ನು ಕೊಟ್ಟವನೂ ನೀನೇ; ಅದನ್ನು ಹೋಗಲಾಡಿಸುವ ತಂಪನ್ನು ಕೊಡುವವನೂ ನೀನೆ. ಸೂರ್ಯನಂತಿರುವ ನಿನ್ನ ಕಣ್ಣುಗಳಿಂದ ನಮ್ಮ ಪಾಪಗಳು ಹೋಗಿ ಶಾಪವು ತೀರುವಂತೆ ಮಾಡು; ಚಂದ್ರನಂತಿರುವ ಕಣ್ಣುಗಳಿಂದ ಆನಂದ ಕೊಡು. ಹೀಗೆ ನೀನು ನಮ್ಮನ್ನು ನೋಡದಿರುವುದರಿಂದಲೇ ನಮಗಿರುವುದು ಪಾಪ ಮತ್ತು ಶಾಪ. ನಾವು ಅನಾದಿ ಕಾಲದಿಂದಲೂ ನಿನ್ನ ಇಷ್ಟದಂತೆ ನಡೆಯದೆ ಪಾಪಿಗಳಾಗಿರುವೆವು. ಅದೇ ನಮ್ಮ ಮೇಲಿರುವ ಶಾಪ; ನಾವೇ ನಮ್ಮ ಮೇಲೆ ಬಿಟ್ಟುಕೊಂಡ ತಾಪ. ಇಷ್ಟು ದಿನಗಳೂ ಇದು ತಾಪವೆಂದು ತಿಳಿಯದಿದ್ದೆವು. ಈಗ ತಿಳಿದಿದೆ. ನಮಗೆ ಶೋಕ ಬಂದಿದೆ. ಅದನ್ನು ನೀನು ನಿನ್ನ "ಶೆಂಗಣ್" ಅನ್ನು "ಅಂಗಣ್" ಆಗಿಸಿಕೊಂಡು ನೋಡಿ, ಹೋಗಲಾಡಿಸು.

ತ್ರಿಲೋಕ ಸಂಚಾರಿ ನಾರದ; ತಪಸ್ಸು ಮಾಡಿದ; ನಿನ್ನನ್ನು ನೋಡಬೇಕೆಂದು ಹಂಬಲಿಸಿದ; ಆಗಲಿಲ್ಲ, ಅವನ ಮನಸ್ಸಿನಲ್ಲಿದ್ದ ಶೋಕ ಹೋಗಲಿಲ್ಲ; ಒಂದು ದಿನ ಸನತ್ಕುಮಾರರು ಯಾವಾಗಲೂ "ತರ ತಿಶೋಕಮಾತ್ಮವಿತ್" ಎನ್ನುವ ವೇದ ವಾಕ್ಯನ್ನೇ ಜಪಿಸುತ್ತಿರುವರು ಎಂದು ಅವನ ಕಿವಿಗೆ ಬಿತ್ತು; ಅವರಲ್ಲಿಗೆ ಓಡಿದ; ಶೋಕ ಹೋಗಿಸಲು ಕೇಳಿಕೊಂಡ; ತನಗೆ ಎಲ್ಲಾ ವಿದ್ಯೆಗಳು ಬಂದರೂ ಶೋಕಹೋಗಿಸಿಕೊಳ್ಳುವ ವಿದ್ಯೆ ತಿಳಿಯದು ಎಂದ. ಕರುಣಿಸಿ ಅವರು ಅವನಿಗೆ ಅದನ್ನು ಉಪದೇಶಿಸಿದರು. ಅದೇ ಭೂಮಾ ವಿದ್ಯೆ. ಅಲ್ಪವಾದುದು ಐಹಿಕ ಮತ್ತು ಆಮುಷ್ಮಿಕ ಸುಖ; ಎಲ್ಲವೂ ಆಗಿ ಎಲ್ಲದರಲ್ಲಿಯೂ ಇದ್ದು ಎಲ್ಲಿಯಿಲ್ಲದವ ಅವ; ಅವನು ಭೂಮಾ "ಭೂಮೈವಸುಖಂ ನಾಲ್ಪೇ ಸುಖ ಮಸ್ತಿ" ಎಂದು ತೋರಿಕೊಟ್ಟರು. ನಾರದ ಪರಮ ಭಕ್ತನಾದ; ಶರಣು ಹೋದ ನಿನ್ನಲ್ಲಿ; ಆಗ ನಿನ್ನ "ಶೆಂಗಣ್" "ಅಂಗಣ್" ಆಗಿ ಕಾಪಾಡಲಿಲ್ಲವೇ?

ಜಾನ ಶ್ರುತಿ ಎನ್ನುವ ಭೊರೆಗೆ ತಾನು ಎಲ್ಲಾ ವೇದಾಂತದ ತಿರಳನ್ನು ತಿಳಿದವನೆನ್ನುವ ಅಭಿಮಾನವಿತ್ತು. ಇಬ್ಬರು ಋಷಿಗಳು ಹಂಸ ರೂಪದಲ್ಲಿ ಬಂದು ಬುದ್ಧಿ ಕಲಿಸಿದರು. ಶೋಕಬಂತು ಅವನಿಗೆ. ರೈಕ್ವರೆನ್ನುವ ಮಹಾತ್ಮರಲ್ಲಿಗೆ ಹೋಗಿ ನಿನ್ನನ್ನು

ಸರಿಯಾಗಿ ತಿಳಿದ; ಭಕ್ತಿತಾಳಿದ; ಶೋಕ ಹೋಯಿತು ಅವನಿಗೆ; ಆಗ ನಿನ್ನ "ಶೆಂಗಣ್" "ಅಂಗಣ್" ಆಗಿ ಕಾಪಾಡಲಿಲ್ಲವೇ?

ಅರ್ಜುನ ಭಾರತ ಯುದ್ಧವೊದಗಿದಾಗ ಹಿಂಜರಿದ. ನೀನು ಅವನನ್ನು ಹೀಯಾಳಿಸಿದೆ; ಬೈದೆ; ನಿನ್ನ ದಾರಿ ಆರ್ಯರು ಆಶ್ರಯಿಸುವದಲ್ಲವೆಂದೆ. ನಿನ್ನಲ್ಲಿ ಅವನಿಗೆ ಬಹು ನಂಬಿಕೆ; ತನ್ನದು ತಪ್ಪು ದಾರಿಯೆಂದು ತಿಳಿದ; ಶರಣು ಹೋದ, ಸರಿಯಾಗಿ ನಿನ್ನನ್ನು ತಿಳಿಯದೇ ಇರುವುದರಿಂದ ಬಂದ ಶೋಕವನ್ನು ಹೋಗಲಾಡಿಸಲು ಬೇಡಿದ. ನೀನು ಗೀತೆಯನ್ನೇ ಉಪದೇಶಿಸಿದೆ. ಕೊನೆಯಲ್ಲಿ

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಎಂದ. ಹಾಗೆಯೇ ನಾವು ನಿನ್ನಲ್ಲಿ ಶರಣು ಹೋಗಿ, ನಿನ್ನನ್ನು ಬಿಟ್ಟಿರಲಾರದೆ, ಅನನ್ಯಶೇಷರಾಗಿ, ಅನನ್ಯಗತಿಕರಾಗಿ, ಅನನ್ಯಪ್ರಯೋಜನರಾಗಿ ಬಂದಿರುವೆವು. "ಶೆಂಗಣ್" ಅನ್ನು "ಅಂಗಣ್" ಆಗಿಸಿಕೊಂಡು ತಾಯಿಯು ಮಕ್ಕಳನ್ನು ನೋಡುವಂತೆ ನೋಡು—ಎಂದಳು ಗೋದೆ. ಈ "ಶೆಂಗಣ್" "ಅಂಗಣ್" ಎನ್ನುವ ಎರಡು ಅರ್ಥ ತುಂಬಿರುವ ಪದಗಳ ವ್ಯಾಖ್ಯಾನಗಳನ್ನು ಆಚಾರ್ಯರು ಬಹು ಹಿತವಾಗಿ ಸಂಗ್ರಹಿಸಿರುವರು.

1) ಎಂಗಳುಡೈಯ ಅಪರಾದಂ ಮೂಡ ಚ್ಚೆಯ್ಯುಂ
ಉನ್ನುಡೈಯ ಅಪರಾಧಸಹತ್ವಂ ತಿರಕ್ಕ ಚ್ಚೆಯ್ಯುಂ

2) ಉನ್ನುಡೈಯ ಸ್ವಾತಂತ್ರ್ಯಂ ಮೂಡ ಚ್ಚೆಯ್ಯುಂ
ಎಂಗಳುಡೈಯ ಅಡಿಕ್ಕಲಂ (ಭರನ್ಯಾಸಂ) ತಿರಕ್ಕ ಚ್ಚೆಯ್ಯುಂ

3) ಎಂಗಳುಡೈಯ ಸ್ವಾತಂತ್ರ್ಯಂ ಮೂಡ ಚ್ಚೆಯ್ಯುಂ
ಉನ್ನುಡೈಯ ಆಶ್ರಿತಪಾರತಂತ್ರ್ಯಂ ತಿರಕ್ಕುಂ ಚ್ಚೆಯ್ಯುಂ

4) ಉನ್ನುಡೈಯ ದಂಡಧರತ್ವಂ ಮೂಡ ಚ್ಚೆಯ್ಯುಂ
ಎಂಗಳುಡೈಯ ಕಾರ್ಪಣ್ಯಂ ದೈನ್ಯಂ ತಿರಕ್ಕ ಚ್ಚೆಯ್ಯುಂ

"ಇದು ತಾ "ಶೆಂಗಣ್ ಅಂಗಣ್" ಆಯ್‌ನೋಕ್ಕುವದಿಲ್ ಅಭಿಪ್ರಾಯಂ"

ಗೋದೆಯು "ಚಾಪಮಿಳ್ಗಂದು" ಎಂದು ಹೇಳಿದಾಗ ಮತ್ತೊಂದು ಇತಿಹಾಸವನ್ನೂ ಜ್ಞಾಪಿಸಲು ಅಪೆಕ್ಷಿಸಿರಬೇಕು. ಹಿಂದ ಕೇದಾರನಾಥ ಈಶ್ವರ ಆದಿ ಚತುರ್ಮುಖ ಬ್ರಹ್ಮನಿಗಿದ್ದ ಐದು ತಲೆಗಳಲ್ಲಿ ಒಂದನ್ನು ಕೋಪದಿಂದ ಹಿಚುಕಿದ. ಕೋಪದಿಂದ ಬ್ರಹ್ಮನು ಅವನನ್ನು ಶಪಿಸಿದ. ಹಿಚುಕಿದ ಕೈಯಲ್ಲಿ ಆ ರುಂಡವು ಅಂಟಿ

ಕೊಂಡಿತು. ಈ ಶಾಪ ಹೋಗಲು ಎಲ್ಲಾ ದೇವತೆಗಳನ್ನು ಕೇಳಿಕೊಂಡ. ಏನೂ ಪ್ರಯೋಜನವಾಗಲಿಲ್ಲ. ಮತ್ತೆ ಬ್ರಹ್ಮನಲ್ಲಿಗೆ ಬಂದು ಶಾಪವಿಮೋಚನೆಗೆ ದಾರಿ ತೋರಬೇಕೆಂದು ಯಾಚಿಸಿದ. "ಈ ನಿನ್ನ ಕೈಯಲ್ಲಿರುವ ಕಪಾಲದಿಂದ ಬಿಕ್ಷೆಯನ್ನು ಯಾಚಿಸು; ಇದರಲ್ಲಿ ಬಿಕ್ಷೆಯಾವಾಗ ನಿಲ್ಲುವುದೋ ಆಗಲೇ ಮುಕ್ತಿ" ಎಂದು. ಸರಿ ಹೊರಟ; ಎಲ್ಲೆಲ್ಲೂ ಯಾಚಿಸಿದ; ಹಾಕಿದ ಬಿಕ್ಷೆಯಲ್ಲವೂ ಕೆವಿ, ಬಾಯಿ, ಮೂಗು, ಕಣ್ಣು ರಂದ್ರದಳಿಂದ ಬಿದ್ದು ಹೋಗುತ್ತಿತ್ತು. ಕೊನೆಯಲ್ಲಿ ಬದರೀನಾಥನಲ್ಲಿಗೆ ಬಂದು ಶರಣುಹೋದ ಯಾಚಿಸಿದ. ಅವನು ತನ್ನ ಹೃದಯದಿಂದ ಅಮೃತ ಧಾರೆಸುರಿಸಿದ. ಕಪಾಲವು ಮಾಯವಾಯಿತು. ಶಾಪವು ಹೋಯಿತು. ಹೀಗೆ ಪರಮಾತ್ಮನಮಗೆ ಜ್ಞಾನ ಮತ್ತು ಪ್ರೇಮವೆನ್ನುವ ಬಿಕ್ಷೆಯನ್ನು ಕೊಟ್ಟರುವನು. ಅವನ್ನು ನಾವು, ಕಣ್ಣು, ಬಾಯಿ, ಕೆವಿ, ಮೂಗುಗಳಿಂದ ಕಳೆದುಕೊಂಡು ಲೌಕಿಕ ಜೀವನದಲ್ಲೇ ಆಸೆ ಇಟ್ಟು, ಶಬ್ದ ಸ್ಪರ್ಶ, ರೂಪ, ರಸ, ಗಂಧಗಳ ಕಡೆಗೆ ಹರಿಯುವಂತೆ ಮಾಡಿಕೊಂಡು ಶಾಪಗ್ರಸ್ತರಾಗಿರುವೆವು. ಪರಮಾತ್ಮನ ಕೃಪಾಕಟಾಕ್ಷ ಬಿದ್ದ ಮೇಲೆಯೇ ಈ ಶಾಪವು ಹೋಗುವುದು.—**ಏಲೋರೆಂಪಾವಾಯ್**

ಸ್ವಾಪದೇಶ

ಒಬ್ಬಪ್ರಧಾನ ಶಿಷ್ಯ ತನ್ನ ಆಚಾರ್ಯನ ಮಹಿಮೆಯನ್ನು ಕೊಂಡಾಡಿ ಪ್ರಾರ್ಥಿಸುವನು.

ಅಂಗಣ್ . . . ಅರಶರ್—ವಿಶಾಲ ಪ್ರಪಂಚದಲ್ಲಿ ಜ್ಞಾನ, ವೈರಾಗ್ಯ, ಭಕ್ತಿಯನ್ನು ಹೊಂದಿ ಪ್ರಪನ್ನರಾದವರು ಯಾವದೇವ ಮಾನವರಿಗೂ ಅಧೀನರಲ್ಲ. ಅವರೇ ಪ್ರಭುಗಳು. ಶಠಗೋಪರು ಅದನ್ನೇ ಹೇಳಿಕೊಂಡು ಹಿಗ್ಗಿರುವರು. ತಿರು, ಮೊ III, 7ನೇ ದಶಕವೆಲ್ಲವೂ ಭಾಗವತರ ಮಹಿಮೆಯನ್ನೇ ಕೊಂಡಾಡಿರುವದು.

ಪಯಿಲುಂ ಶುಡರೊಳಿ ಮೂರ್ತಿಯೈ ಪಂಗಯ ಕ್ಕಣ್ಣನೈ
ಪಯಿಲ ವಿನಿಯ ನಂ ಪಾರ್ಕಡಲ್ ಶೇರ್ನ್ದ ಪರಮನೈ
ಪಯಿಲುಂ ತಿರುವುಡೈಯಾರ್ ಯವರೀಲುಂ ಅವರ್ ಕಂಡೀರ್
ಪಯಿಲಂ ಪಿರಪ್ಪಿಡೈ ತೋರಮ್ಮೈ ಯಾಳುಂ ಪರಮರೇ

1) ಎಮ್ಮೈಯಾಳುಂ ಪರಮರೇ
2) ಎಮ್ಮೈ ಯಾಳುಂ ನಾಥರೇ
3) ಎಮ್ಮೈಯಾಳುಡೈಯಾರ್ಗಳೇ
4) ಎಂ ಪೆರು ಮಕ್ಕಳೇ
5) ನಮ್ಮೈಯ ಅಳಿಕ್ಕುಂ ಪಿರಾಕ್ಕಳೇ
6) ಶನ್ಮಶನ್ಮಾಂತರಂ ಕಾಪ್ಪರೇ

7) ಉಯ್ಯುಕ್ಕೊಳ್ಳಿನ್ರ ನಮ್ಬರೇ—ಎಂದು ಮತ್ತೆಮತ್ತೆ ಪರಮಾತ್ಮನನ್ನು ಅನುಭವಿಸುವಾಗಲೆಲ್ಲಾ ಅವನ ಪಾದಸೇವಕರಾದ ಭಾಗವತರ ಮಹಿಮೆಯನ್ನು ಕೊಂಡಾಡಿರುವರು. ಅಂತಹ ಭಾಗವತ ಭೂಪತಿಗಳು.

ಅಭಿಮಾನ . . . ಪೋಲ್—ಅಹಂಕಾರ ಮಮಕಾರಗಳಿಲ್ಲದೆ ನಿನ್ನ ಪೀಠದ ಕೆಳಗೆ ಗುಂಪುಗುಂಪಾಗಿ ಬಂದು ಸೇರಿರುವಂತೆ ನಾವೂ

ವಂದು ತಲೈಪ್ಪೆಯ್ದೋಂ—ಬಂದು ತಲೆಬಾಗಿ ನಿಂತಿರುವೆವು. ರಾಮಾನುಜರು ಬೀದಿಯಲ್ಲಿ ಹೊರಟರೆ ಅವರ ಹಿಂದೆ 700 ಸನ್ಯಾಸಿಗಳು, ಅವರ ಹಿಂದೆ 72 ಸಿಂಹಾಸನಾಧಿಪತಿಗಳು ಅಂದರೆ ಉಭಯವೇದಾಂತ ಕಾಲಕ್ಷೇಪ ಹೇಳಲು ಸಮರ್ಥರಾದವರು, ಅವರಹಿಂದೆ 1500 ಕಾಲಕ್ಷೇಪ ಹೇಳಿಸಿಕೊಳ್ಳುವ ಶಿಷ್ಯರು ಹೋಗುತ್ತಿದ್ದರಂತೆ. ಹಾಗೆ ಶಿಷ್ಯಸಂಪತ್ತುಳ್ಳ ಆಚಾರ್ಯನೇ ನಿನ್ನಲ್ಲಿ ಬಂದು ಸೇರಿರುವೆವು.

ಕಂಕಿಣಿ . . . ವಿಳಿಯಾವೋ—ಕ್ರಮೇಣ ಅರಳುವ ಕಮಲದಂತೆ ಚಿಕ್ಕ ಚಿಕ್ಕ ಗ್ರಂಥಗಳಿಂದ ಪ್ರಾರಂಭಿಸಿ ನಮಗೆ ಉಪದೇಶವನ್ನು ದಯಪಾಲಿಸಿ. ರಾಮನು 2–3 ಶ್ಲೋಕಗಳಲ್ಲಿ ಶರಣಾಗತಿಯನ್ನು ಪದೇಶಿಸಿದ; ಕೃಷ್ಣ ಅರ್ಜುನನಿಗೆ ಶರಣಾಗತಿ ಧರ್ಮವನ್ನು ಪದೇಶಿಸಲು ಗೀತೆಯನ್ನೇ ಹೇಳಿದ. ಅರ್ಜುನ ಎಲ್ಲವನ್ನೂ ಮರೆತ. ಒಟ್ಟಿಗೆ ಹೇಳಿದ್ದರಿಂದ ಹಾಗಾಯಿತು. ಸ್ವಲ್ಪ ಸ್ವಲ್ಪವಾಗಿ ಹೇಳಿದ್ದರೆ ಅವನು ಮರೆಯುತ್ತಿರಲಿಲ್ಲ. ತಾವು ಸ್ವಲ್ಪ ಸ್ವಲ್ಪವಾಗಿ ಉಪದೇಶಿಸಿ;

ತಿಂಗಳುಂ . . . ಪೋಲ್—ಕೃಪಾ ಪೂರ್ಣ ದೃಷ್ಟಿಯಿಂದ

ಅಂಗಣ್ . . . ಮೇಲ್—ನಮಗೆ ಶ್ರೇಯಸ್ಸನ್ನುಂಟು ಮಾಡುವ ರೀತಿಯಲ್ಲಿ ಉಪದೇಶ ಮಾಡಿದರೆ

ಎಂಗಳ್ . . . ಇಗ್ಗುಂದು—ಆಗ ನಮ್ಮ ಅಜ್ಞಾನ ಮತ್ತು ಮೋಹವೆಲ್ಲವೂ ಅಳಿಸಿ ಹೋಗುವವು. **ಏಲೋರ್ ಎಂಪಾಯ್**

ಗೋದೆಯು ಗೋಪಿಕೆಯರ ಭಾವ ತಾಳಿ ಗೋಪಿವಲ್ಲಿಭನ ವಿರಹದಲ್ಲಿ ವೇದಾಂತದ ಸಾರವನ್ನೇ ಸುರಿದಳು ಮೊದಲಿನ 20 ಪದ್ಯಗಳಲ್ಲಿ. ಕೃಷ್ಣ ಜ್ಞಾನಮಯನಲ್ಲದೆ ಪ್ರೇಮಮಯನೂ ಆಗಿರುವುದರಿಂದಲೇ **ಎಲ್ಲವೂ ಆಗಿ ಎಲ್ಲಕ್ಕೂ ಆಗಿ ಎಲ್ಲೆ ಇಲ್ಲದೆ ಎಮ್ಮವನಾದವ** ಪರಮಾತ್ಮನೆಂದು ಭಾವುಕಳಾಗಿ ವಿರಹಿಣಿಯಾಗಿ ಅವನಿಗೆ ಅರ್ಪಿಸಿದಳು. ಅವನ ಸನ್ನಿಧಿಸಿಕ್ಕಿತು. ಅವನು ಬೇಕು. ಪಡೆಯುವುದೆಂತು? ಹಾಡಲು ಹೊರಟಳು. ಸಂಗೀತಮಯವಾಯಿತು ಅವಳ ಜೀವ. ಪಲ್ಲವಿ ಹಾಡಿದಳು. "ಊತ್ತಮುಡೈಯಾಯ್, ಪೆರಿಯಾಯ್, ಉಲಕಿನಿಲ್ತೇತ್ತಮಾಯ್

ನಿನ್ರ ಶುಡರೇ" ಎಂದು ಸಾಹಿತ್ಯ ಕೂಡಿಸಿದಳು. "ಶೆಂಗಣ್ ಶಿರಿಚ್ಚಿರಿದೇ ಎಮ್ಮೆಲ್ ವಿಳಿಯಾವೊ; ಅಂಗಣ್ ಇರಂಡುಂಕೊಂಡು ಎಂಗಳ್ ಮೇಲ್ ನೋಕ್ಕು" ಎಂದು ಅನುಪಲ್ಲವಿ ಹಾಡಿರಸಕೊಟ್ಟಳು. ಕೃಷ್ಣ ಕಣ್ಣುತೆರೆದು ನೋಡಿ ಮುಗುಳ್ ನಗೆ ಬೀರಿದ; ಕೇಳಿದ; ಏನು ಬೇಕು ನನ್ನಿಂದ ಈಗ; ಹೇಳಿ" ಎಂದ. ಎದ್ದು ಕೂತು ಕೇಳಿದ ಸೊಬಿಗೆ ಸೊಬಗು ಏನು ಕೇಳುಬೇಕೆನ್ನುವುದನ್ನೇ ಮರೆತಳು. ವಿಶ್ವಾಮಿತ್ರನಿಗೆ ಗಂಗಾ ತೀರದಲ್ಲಿ ರಾಮನನ್ನು ನೋಡಿದಾಗ ಆದಂತೆ. (2ನೇ ಪಾಶುರ ವ್ಯಾಖ್ಯಾನ ನೋಡಿ.) ಭಾವನಾ ಪ್ರಪಂಚದಲ್ಲಿ ಮುಳುಗಿದಳು. ಆಹಾ ಏನು ಸೌಂದರ್ಯ. ಕಣ್ಣು ಮುಚ್ಚಿಮಲಗಿದ್ದಾಗ ಇವನಿಗೆ ಎಣೆಯಿಲ್ಲವೆಂದು ತಿಳಿದಿದ್ದೆ. ಈಗ ಎದ್ದು ಕುಳಿತು ಕಣ್ಣು ಅರಳಿಸಿ ಹಾಸ ಬೀರಿದ. ಚಿತ್ರಕೂಟದಲ್ಲಿ ಋಷಿಗಳು ರಾಮನ ಸೌಂದರ್ಯವನ್ನು ಕುಳಿತಾಗ ನೋಡಿ ಹಿಗ್ಗಿದರಂತೆ. ಆದರೆ ನಾನು ನೋಡುತ್ತಿರುವಂತಿರ ಲಾರದು. ಕಪಿಗಳು ದರ್ಭಶಯನದಲ್ಲಿ ಮಲಗಿರುವಾಗ ರಾಮನ ಸೊಬಗನ್ನು ನೋಡಿದ್ದರೂ ನಾನು ನೋಡಿದಂತಿರಲಾರದು. ನನಗೆ ಒಲಿದಂತೆ ಒಲದಿರಲಾರ ಅವರಿಗೆ. ತಾನು ಗೋದೆಯೆನ್ನುವುದನ್ನು ಮರೆತಳು. ತಾನು ಭೂದೇವಿ. ತನಗಾಗೆ ಲೀಲೆಯಾಡಿದ ವರಾಹಸ್ವಾಮಿಯ ನೆನೆಪು ಬಂತು. ಹೌದು ಶತಗೋಪರೂ ನನ್ನಂತೆಯೇ ಅನುಭವಿಸಿದರು (ತಿರು. ಮೊ II, 8, 7)

ಕಿಡಂದು ಇರಂದು, ನಿನ್ರು ಅಳಂದು
ಕೇೞಲಾಯ್ ಕೀೞ್ ಪುಕ್ಕು
ಇಡಂದಿಡುಂ ತನ್ನುಳ್ ಕರಕ್ಕುಂ
ಉಮಿೞ್ರುಂ ತಡಂ ಪೆರುಂ ತೋಳ್ ಆರ
ಕ್ಕೞುವುಂ ಪಾರೆನ್ರುಂ, ಕುಡಂದೈಯಿೞೈ ಮಾಲ್
ಶೆಯ್ಯಿನ್ರ ಮಾಲ್ ಆರ್ ಕಾಣ್ಬಾರೇ

ಶ್ರೀರಂಗ, ಪುಳಿಂಗುಡಿ ಮೊದಲಾದ ದಿವ್ಯದೇಶಗಳಲ್ಲಿ ಮಲಗಿದ್ದು, ವರಗುಣ ಮಂಗೈ ಮೊದಲಾದ ದಿವ್ಯದೇಶಗಳಲ್ಲಿ ಕುಳಿತು, ವೆಂಕಟಾಚಲ ಮೊದಲಾದ ದಿವ್ಯದೇಶಗಳಲ್ಲಿ ನಿಂತು, ವಿಶ್ವವನ್ನಳೆದು, ಭೂಮಿಯನ್ನು ಎತ್ತಿದ ವರಾಹಸ್ವಾಮಿಯಾಗಿ. ಎಲ್ಲರಿಗೂ ಸ್ವಾಮಿ (ಮಾಲ್); ಭೂದೇವಿಯಲ್ಲಿ ತೋರಿದ ವ್ಯಾಮೋಹವನ್ನು (ಮಾಲ್) ಯಾರು ನೋಡಬಲ್ಲರು—ಎಂದರು ಅವರು. ತಾನೇ ಭೂದೇವಿಯೆಂದು ಉಕ್ಕಿಬಂತು ಅಭಿಮಾನ ಗೋದೆಗೆ. ಕೃಷ್ಣ ನನ್ನ ಸ್ವಾಮಿ. ಅವನು ಮಲಗಿರುವಾಗ, ಕಣ್ಣು ಅರಳಿಸಿ ಹಾಸ ಬೀರಿದಾಗ, ಎದ್ದು ಕುಳಿತಾಗ ನೋಡಿದೆ ಚಿಲುವೆನ್ನ. ಇವನು ನಿಂತು ನಡೆಯುವಾಗ ನೋಡಬೇಕು. ಹೃದಯ ತುಂಬಿಬಂತು. ಪಲ್ಲವಿ ಹಾಡಿದ್ದು ಸಾಲದು; ಅನುಪಲ್ಲವಿಯರಸ ಸವಿದಾಯಿತು. ಇನ್ನೂ ಬೇಕು ಮಧು

ರಸ. **"ತವಾಮೃತಸ್ಯಂದಿನಿ ಪಾದಪಂಕಜೇ ನಿವೇಶಿತಾತ್ಮಾ ಕಥಮನ್ಯದಿಚ್ಛತಿ"** ಎಂದು ಯಾಮುನರು ಹಂಬಲಿಸಿದಂತಾಯಿತು ಇವಳಿಗೆ. ಚರಣ ಹಾಡಿದಳು. ಸಾಹಿತ್ಯ ಹರಿಯಿತು ಅದೇ 23ನೇ ಪದ್ಯ.

ಹಿಂದಿನ ಪದ್ಯದಲ್ಲಿ ತಾನು "ಶಿಂಗಣ್" "ಅಂಗಣ್" ಎಂದು ಹೇಳಿದ್ದು ಹಾಗೆಯೇ ಮನಸ್ಸಿನಲ್ಲಿತ್ತು. ಈಗ ತಾನೇ ಹಾಡಿದಂತೆ "ಶಿಂಗಣ್" "ಅಂಗಣ್" ಆಗಿದ್ದುದು ನನ್ನ ಸ್ವಾಮಿ ನರಸಿಂಹನಾಗಿದ್ದಾಗ. ಆ ವಿಗ್ರಹ ಕಣ್ಣುಮುಂದೆ ನಿಂತಿತು ಇವಳಿಗೆ. ಹೌದು. ನರಸಿಂಹನ ನಡೆಯೇ ನಡೆ. ನರಸಿಂಹನಾಗಿ ಬಂದುದೇ ಚಂದ. ಕೋಪದಿಂದ ಕೆಂಡಕಾರಿದ, ನಡೆದ ಸಿಂಹದಂತೆ. ಹಿರಣ್ಯಕಶಿಪು ವಿದ್ದಿಡೆಗೆ; ಪ್ರಹ್ಲಾದನನ್ನು ನೋಡಿ ಹಿಗ್ಗೂ ಬಂದು, ನಡೆಯಲ್ಲಿ ಒಂದು ಎಣೆಯಿಲ್ಲದ ಸೌಂದರ್ಯಬಂದು. ಕಂಬನಿತುಂಬಿದ ಕಣ್ಣಿನಲ್ಲಿ. ಕಂಬದಿಂದ ಬಂದ ನಲ್ಲವೇ? ಹೌದು; ಎಲ್ಲೆಲ್ಲೂ ಇರುವವನು ತಾನೇ ಎಂದು ತೋರಿಕೊಟ್ಟ. ಶೌನಕ ಮತ್ತು ಅಭಿಪ್ರತಾರೀ ಎನ್ನುವ ಇಬ್ಬರು ಋಷಿಗಳು. ಒಂದುದಿನ ಅವರಿಬ್ಬರೂ ಊಟಕ್ಕೆಕುಳಿತಾಗ ಒಬ್ಬ ಬ್ರಹ್ಮಚಾರಿ ಬಂದು ಅನ್ನವನ್ನು ಕೇಳಿದ. ಅವನನ್ನು ನೋಡಿ ಎನೋ ಆಯಿತು ಅವರಿಗೆ. ಪರೀಕ್ಷೆ ಮಾಡಬೇಕೆನ್ನಿಸಿತು. ಅನ್ನ ಕೊಡದೆ ಸುಮ್ಮನೆ ನೋಡಿದರು. ಬ್ರಹ್ಮಚಾರಿ ಸಿಟ್ಟಾದ. ಹೇಳಿದ

ಮಹಾತ್ಮನಃ ಚತುರೋ ದೇವ ಏಕಃ; ಕಃ;ಸ ಜಗಾರ
ಭುವನಸ್ಯ ಗೋಪಾಃ ತಂ ಕಾಪೇಯ ನಾಭಿಪಶ್ಯಂತಿ
ಮರ್ತ್ಯಾಃ ಅಭಿಪ್ರತಾರಿ ಬಹುಧಾ ವಸಂತಂ

ತಾಪೇಯ ಶೌನಕರೆ, ಅಭಿಪ್ರತಾರಿಗಳೇ, ಇರುವ ದೇವ ಒಬ್ಬನೇ ಅವನೇ ಎಲ್ಲವೂ ಆಗಿರುವನು; ನಾನೂ ಅವನೇ, ನೀವೂಅವನೇ; ಅವನದನ್ನು ಅವನಿಗೆ ಕೊಡಲು ಏಕೆ ಹಿಂಜರಿಯುವಿರಿ—ಎಂದು. ಅದಕ್ಕೆ ಶೌನಕರು ಅಭಿಪ್ರತಾರಿಗಳು ನಕ್ಕು ಬ್ರಹ್ಮಚಾರಿ, ನೀನು ತಿಳಿದಂತಲ್ಲ ಇರುವನು ಪರಮಾತ್ಮ. ಕೇಳು

ಆತ್ಮಾ ದೇವಾನಾಂ ಜನಿತಾ ಪ್ರಜಾನಾಂ ಹಿರಣ್ಯದಂಷ್ಟ್ರೋ
ಬಭಸೋಽನುಸೂರಿಃ ಮಹಾಂತಮನ್ಯ ಮಹಿಮಾನ
ಮಾಹುಃಅನದ್ಯಮನೋ ಯದನನ್ನಮತ್ತಿ—

ಪರಮಾತ್ಮನೇ ಪ್ರಪಂಚವಲ್ಲ; ಪ್ರಪಂಚವನ್ನು ಉಂಟುಮಾಡಿದ, ಅದರೊಳಗೆ ಹೊಕ್ಕು, ತಾನು ಸರ್ವಜ್ಞನಾಗಿ (ಅನಸೂರಿಃ) ಕೊನೆಯಲ್ಲಿ ಅದನ್ನೇ ಉಣ್ಣುವನೇ ಪರಮಾತ್ಮ; ಚಿನ್ನದ ಕೋರೆಹಲ್ಲುಳ್ಳವನಿವ; ಇದೇ ಇವನ ಮಹಿಮೆ" ಎಂದು ಹೇಳಿ ಅನ್ನವನ್ನು ಕೊಟ್ಟು ಕಳುಹಿಸಿದರು.

ಹೀಗೆ ಪ್ರಪಂಚದಲ್ಲಿ ಎಲ್ಲೆಡೆಯಲ್ಲೂ ಒಳಹೊಕ್ಕಿರುವನೇ ದೇವ. ನಾವು ಕರೆದಾಗ ಹೊರಬರುವ ಮೋಹನಾಂಗ, ಮೋಹನಗಮನ. ಶಠಗೋಪರು ಹೇಳಲಿಲ್ಲವೇ?

ಎಂಗುಮುಳನ್ ಕಣ್ಣ ಎನ್ನೆ ಮುಗನ್ನೈ ಕಾಯ್ನ್ನ್ದ
ಇಂಗಿಲ್ಲೈಯಾಲ್ ಅರಣಿಯ್ಯ ತೂಣ್ ಪುಡೈಪ್ಪೆ
ಅಂಗಪ್ಪೊಳ್ಳುದೇ ಯವ್ವ ವೀಯು ತ್ತೊನ್ರಿಯ ಎಂ
ಶಿಂಗಿಪ್ಪಿರ್ಗಾ ಪೆರುಮ್ಮೈ ಯಾರಾಯುಂ ಶೀರ್ಕ್ಕತ್ತೇ
—ತಿ. ಮೊ II 8, 9

ಕಾಯ್ನ್ನ್ದ—ದಿಕ್ಕರಿಸಿ, ಪುಡೈಪ್ಪ—ಒದೆಯಲು, ಯಾರಾಯುಂ—ಹೀಗೆಂದು ನಿರ್ಣಯ ಕೊಡಲು, ಶೀರ್ಕ್ಕತ್ತೇ—ಸಾಧ್ಯವಾಗದು. ಆಗಮಾತ್ರ ನರಸಿಂಹನಾಗಲಿಲ್ಲ. ಈಗಲೂ ಯಾವಾಗಲೂ ಇರುವನು. ಆ ರೂಪವೇ ಅವನಿಗೆ ಪ್ರಿಯ ಅವತಾರಗಳಲ್ಲಿ. ರಾಮ ರಾಘವಸಿಂಹ.

ಪರ್ವತಾತಿವ ನಿಷ್ಕ್ರಾಂತಃ ಸಿಂಹೋ ಗಿರಿಗುಹಾಮಿವ

ಎಂದ ಆದಿಕವಿ ವಾಲ್ಮೀಕಿ.

ಅಂಗುಳ್ಯಗ್ರೇಣ ತಾರ್ಹ ಹನ್ಯಾಮಿಚ್ಛ್ಕ ಹರಿಗಣೇಶ್ವರ

"ಸುಗ್ರೀವ, ವಿಭೀಷಣ ನಮ್ಮೊಡನೆ ಸೇರಿ ದ್ರೋಹಮಾಡುವನೆಂದು ಹೆದರುವೆಯೇನು; ನಾನು ಅಪೇಕ್ಷಿಸಿದರೆ ಉಗುರಿನಿಂದ ಕೊಲ್ಲಬಲ್ಲೆ" ಎಂದು ರಾಮ ಹೇಳಿದಾಗ, ತಾನು ನರಸಿಂಹನೆಂದೇ ನೆನೆದ. ನಮ್ಮಕೃಷ್ಣ ಕಮ್ಮಿಯೇನು. ಇವನು ಯಾದವಸಿಂಹ ಎನ್ನುವ ಭಾವನಾಪ್ರಪಂಚದಿಂದಿಳಿದು ಹಾಡಿದಳು ಗೋದೆ.

ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನ್ನಾರಾಯಣ ಸ್ಥಿತಃ

ಎನ್ನುವ ವೇದಮಂತ್ರದ ಅರ್ಥವೇ ಎರಡು ಅವತಾರವಾಗಿದೆ. ಹೊರ ವ್ಯಾಪ್ತಿಯಲ್ಲಿ ತ್ರಿವಿಕ್ರಮನಾಗಿ ತೋರಿದ; ಒಳವ್ಯಾಪ್ತಿಯಲ್ಲಿ ನರಸಿಂಹನಾಗಿ ತೋರಿದ. ಅದಕ್ಕಾಗಿಯೇ ವೇದವು ಈ ಎರಡು ಅವತಾರಗಳನ್ನೇ ತಿಳಿಸಿಬಿಟ್ಟಿದೆ. ತ್ರಿವಿಕ್ರಮನೇ "ಉತ್ತರ್ಮ" ಎಂದು ಹಾಡಿದಳು 3ನೇ ಪದ್ಯದಲ್ಲಿ. ಮತ್ತೆ 17ರಲ್ಲಿ "ಎಂಬರ್ ಗೋರ್ಮಾ" ಎಂದಳು ಅವನನ್ನೇ. ತನ್ನ ಪ್ರಪಂಚವನ್ನು ತಾನೇ ಅಳೆದುಕೊಂಡ ಮಹಿಮೆ ಇವನದು. ನಮಗಾಗಿ ಬರುವನು ನರಸಿಂಹ. ಅದಕ್ಕಾಗಿಯೇ ಭೀಷ್ಮರು ಸಹಸ್ರನಾಮದಲ್ಲಿ "ನಾರಸಿಂಹವಪುಃ" ಎಂದು ಹೇಳಿ ಒಡನೇ "ಶ್ರೀರ್ಮಾ" ಎಂದರು.

ಸಟಾಪಟಲಭೀಷಣೇ ಸರಭಸಾಟ್ಟಹಾಸೋದ್ಭಟೇ
ಸ್ಫುರತ್ಕ್ರಧಿಪರಿಸ್ಫುಟರ್ ಭ್ರುಕುಟಕೇಪಿ ವಕ್ತ್ರೇ ಕೃತೇ।

ದಯೇ ವೃಷಗಿರಿ, ಶಿತುಃ ದನುಜಡಿಂಬದತ್ತಸ್ತನಾ
ಸರೋಜಸದೃಶಾದೃಶಾ ಸಮುದಿತಾಕೃತಿ ರ್ದೃತ್ಯತೆ ॥

—ದ–ಶ 84

ಎಂದು ಹಾಡಿದರು ನಿಗಮಾಂತದೇಶಿಕರು. ಒಡೆಯನಾಗಿ ಸಿಂಹನಾದರೂ ಮಡದಿಗಾಗಿ ನರನಾದನೆಂದರು. " ದೃಶ್ಯತೆ " ಈಗಲೂ ಹಾಗೆಯೇ ಕಾಣುತ್ತಿರುವೆನೆಂದರು. ಅದು ಹೇಗೆ ?

ಡಿಂಬಸ್ಯ ದಾನವಶಿಶೋಃ ಪರಿಪಾಲನಾಯ
ಭದ್ರಾಂ ನೃಸಿಂಹಕುಹನಾಮುಧಿಜಗ್ಮುಷಸ್ತೇ ।
ಸ್ತಂಭೈಕವರ್ಜಮಧುನಾಪಿ ಕರೀಶ ನೂನಂ
ತ್ರೈಲೋಕ್ಯಮೇತದಖಿಲಂ ನರಸಿಂಹಗರ್ಭಂ ॥ —ವ–ಪಂ

ಮೂರು ಲೋಕಗಳೇ ಕಂಬ ; ನಮಗಾಗಿ ಅದರಿಂದ ಕರೆದಾಗ ಬರುವ ದೈವವಿವನು ಎಂದರು. ಮತ್ತೂ ಹೇಳಿದರು.

ದಶಗ್ರೀವಸ್ತಂಭೇರಮುದಲನದುರ್ದಾಂಹೃದಯೇ
ವಿಹಾರಸ್ವಾಚ್ಛಂದ್ಯಾತ್ ವಿಶತಿ ರಘುಸಿಂಹೇ ವನಭುವಂ ।
ಸ್ವವಾತ್ಸಲ್ಯಕ್ರೋಡೀಕೃತಭರತಶಾಬೇವ ಭವತೀ
ನಿರಾಬಾಧಾ" ಪಾದಾವನಿ ನವಿಜಹೌ ಕೋಸಲಗುಹಾಂ

—ಪಾ–ಸ V–18

ರಾವಣನೆನ್ನುವ ಆನೆಯನ್ನು ಕೊಲ್ಲಲು ರಘುಸಿಂಹ ರಾಮ ಕಾಡಿಗೆ ಹೋದ. ಇಚ್ಛೆ ಬಂದಂತೆ ವಿಹರಿಸಿದ ; ಅವನ ಪಾದುಕೆ, ನಡೆಯಲ್ಲಿ ಭಾಗವಹಿಸಿದ ನಮ್ಮ ತಾಯಿ, ವಾತ್ಸಲ್ಯದಿಂದ ಮಗು ಭರತನನ್ನು ಕಾಪಾಡಲು ಅಯೋಧ್ಯೆ ಎನ್ನುವ ಗುಹೆಯನ್ನು ಬಿಟ್ಟು ಬರಲಿಲ್ಲ. ಎಂದು ರಾಮನನ್ನು ರಘುಸಿಂಹನಾಗಿ ಹಾಡಿದರು.

ಗುಹೆಯಿಂದ ಹೊರ ಬರಲಿಲ್ಲ ಪಾದುಕೆ. ಏಕೆ ? ಭರತ ಅಲ್ಲೇ ಇದ್ದ. ಹೃದಯ ಗುಹೆಯನ್ನು ಹೊಕ್ಕು ನಿನ್ನೊಡನಿರಲು ನಮ್ಮಿಂದ ಆಗದು. ನೀನು ಆ ಗುಹೆಯಿಂದ ಹೊರಗೆ ಎದ್ದು ಬಾ ಎಂದಳು ಗೋದೆ.

ಮಾರಿ ಮಲೈ ಮುಳ್ಳಂಜಿಲ್ ಮನ್ನಿ ಕ್ಕಿಡಂದುರಂಗುಂ
ಶೀರಿಯ ಶಿಂಗಂ ಅರಿವುತ್ತು ತ್ತೀ ವಿಳಿತ್ತು
ವೇರಿ ಮಯಿರ್‌ಪೊಂಗ ವೆಪ್ಪಾಂಡು ಪೆರ್ನ್ದ ದರಿ
ಮೂರಿ ನಿಮಿರ್ನ್ದ ಮುಳ್ಳಂಗಿ ಪುರಪ್ಪಟ್ಟು
ಪೋದರುಮಾಪ್ಪೋಲೆ ನೀ ಪೂವೈ ಪ್ಪೂವಣ್ಣಾ ಉ
ಕೋಯಿಲ್ ನಿನ್ರು ಇಂಗನೇ ಪೊಂದರುಳಿ ಕೋಪ್ಪುಡೈಯ
ಶೀರಿಯ ಶಿಂಗಾಶನತ್ತಿರುಂದು ಯಾಂ ವಂದ
ಕಾರಿಯಂ ಆರಾಯ್ನ್ದ ಅರುಳ ಏಲೋರೆಂಪಾವಾಯ್ ॥ ೨೩ ॥

ಮಾರಿ–ಕ್ಷೀರಾಬ್ಧಿಯಲ್ಲಿ, ಮಲೈ–ಶೇಷವೆನ್ನುವ ಬೆಟ್ಟದ, ಮುಳ್ಳಂಜಿಲ್–ಹಾಸಿಗೆಯಲ್ಲಿ, ಮನ್ನಿ–ಲಕ್ಷ್ಮಿಯೊಡನೆ ಹೊಂದಿಕೊಂಡು, ಕಿಡಂದು–ಮಲುಗಿ, ಉರಂಗುಂ–ನಿದ್ರಿಸುವ, ಶೀರಿಯಶಿಂಗಂ–ಕಲ್ಯಾಣಗುಣ ಕೂಡಿರುವ ಸಿಂಹನಾದ ನೀನು, ಅರಿವುತ್ತು–ತಿಳಿವಿನಿಂದ, ಭೂದೇವಿಯಿಂದ ಎಬ್ಬಿಸಲ್ಪಟ್ಟು ಬ್ರಹ್ಮರುದ್ರಾದಿಗಳಿಗೆ ವಚನ ಕೊಡ್ಟು, ತೀವಿಳಿತ್ತು–ಕೆಂಡಕಾರಿ, ವೇರಿಮಯಿರ್–ಸುಗಂಧವುಳ್ಳ ನಿನ್ನ ಕೇಶರಾಶಿ ಕೇಸರಿಯು, ಪೊಂಗ–ಎದ್ದುನಿಲ್ಲಲು, ಎಪ್ಪಾಡುಂ–ಎಲ್ಲೆಲ್ಲೂ, ಪೆರ್ನ್ದ–ಮೈಯಾಡಿಸಿ, ಎದರಿ–ಅಂಗಗಳನ್ನು ಒದರಿ, ಮೂರಿನಿಮಿರ್ನ್ದ–ನೀಳವಾಗಿ ಮೈಮುರಿದು, ಮುಳ್ಳಂಗಿ–ಗರ್ಜಿಸಿ, ಪುರಪ್ಪಟ್ಟು–ಅಲ್ಲಿಂದ ಹೊರಟು, ಪೋದರುಮಾಪ್ಪೋಲೇ–ಬರುವಂತೆ, ನೀಪೂವೈಪೂವಣ್ಣಾ–ಅತಸೀಪುಷ್ಪದಂತೆ ನೀಲವರ್ಣನಾದ ನೀನು, ನಿಕೊಯಿಲ್ನಿನ್ರು–ನಿನ್ನ ಅಂತಃಪುರದಿಂದ, ಇಂಗನೇ ಪೋಂದರುಳಿ–ಇಲ್ಲಿಯವರಿಗೂ ದಯಮಾಡಿಸಿ, ಕೋಪ್ಪುಡೈಯ–ಜಯಭೇರಿ ಸೂಚಿಸುವ, ಶೀರಿಯ ಶಿಂಗಾಶನತ್ತಿರುಂದು–ರತ್ನಖಚಿತ ಸಿಂಹಾಸನದಿಂದ, ಯಾಂ ವಂದ ಕಾರಿಯಂ–ನಾವುಬಂದ ಕೆಲಸವನ್ನು, ಆರಾಯ್ನ್ದ ಅರುಳ್–ಲಾಲಿಸು.

ಪ್ರಪಂಚವನ್ನು ಉಂಟುಮಾಡಿ ಚೇತನರಿಗೆ ಬುದ್ದಿ ಕಲಿಯಲು ಅವಕಾಶ ಕೊಟ್ಟೆ. ಕಷ್ಟ ವೂದಗಿದಾಗ ನಿನ್ನಲ್ಲಿ ಬರಲೆಂದು ಹಾಲುಕಡಲಿಗೆ ಬಂದು ನಿಂತೆ. ನೀನು ನನ್ನ ಮಡದಿ ಲಕ್ಷ್ಮಿಯು ಬೆಂದಾಗಿರುವಂತೆ ಮಲುಗಿದ್ದೆ. ಬ್ರಹ್ಮ ಮೊದಲಾದವರ ಮೊರೆಗೆ ಓಗೊಟ್ಟು ಎದ್ದಿದ್ದಾನೆ ; ಅಲ್ಲಿಂದ ಇಳಿದೆ. ಹಾಗೆಯೇ ಈಗ ನೀನು ಮಂಚದಿಂದ ಎದ್ದು ಸಿಂಹಾಸನದಲ್ಲಿ ಬಂದು ಕೂಡು. ನಾವು ಹೇಳುವುದನ್ನು ಲಾಲಿಸು. ಕೂತಲ್ಲೇ " ಏನುಬೇಕು " ಎನ್ನಬೇಡ ; ಮೊದಲು ನೀನು ನಡೆದು ಬರುವುದನ್ನು ನೋಡಿ ಆನಂದಿಸುವೆವು. ಆಮೇಲೆ ನಮ್ಮ ಪ್ರಾರ್ಥನೆಯೇನೆಂಬುದನ್ನು ಲಾಲಿಸುವಿಯಂತೆ ಎಂದಳು ಗೋದೆ. ಹಾಸಿಗೆಯಿಂದೆದ್ದು ಸಿಂಹಾಸನಕ್ಕೆ ಬಂದು ಕೂತು ಕೇಳುಎಂದಳೀಕೆ ? (ಮೊದಲನೇ ಮಂಗಳಶ್ಲೋಕ ನೋಡಿ.)

ಸಾದೃಶ್ಯ ಕೊಡುವಾಗ ಉತ್ತಮ ವಸ್ತುವನ್ನು ಹೇಳುವುದು ಅಲಂಕಾರಶಾಸ್ತ್ರ ಮರ್ಯಾದೆ. ಪರಮಾತ್ಮನಿಗೆ ಮತ್ತು ಅವನ ನಡೆ ನುಡಿಗೆ ಯಾವುದನ್ನೂ ಸಾದೃಶ್ಯವಾಗಿ ಕೊಡಲು ಸಾಧ್ಯ. ಪ್ರಪಂಚದಲ್ಲಿ ಕಾಣುವ ಚೆಲುವಿಗೆಲ್ಲಾ ಅವನೇ ಮೂಲ. ಅದಕ್ಕಾಗಿಯೇ ವಾಲ್ಮೀಕಿ ರಾಮರಾವಣರ ಯುದ್ಧವನ್ನು ವರ್ಣಿಸುವಾಗ

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ ।
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ॥

ಎಂದ. ಇದಕ್ಕೆ ಅನ್ಯೋನ್ಯಾಲಂಕಾರವೆಂದು ಹೆಸರು.

ಅನ್ಯೋನಂ ನಾಮ ಯತ್ರಸ್ಯಾತ್ ಉಪಕಾರಃ ಪರಸ್ಪರಂ

ಎನ್ನುವುದೇ ಅದರಲಕ್ಷಣ. ಅದರಂತೆ ಕೃಷ್ಣನಿಗೆ ಕ್ಷೀರಾಬ್ಧಿಶಾಯಿಯೇ ಸಮ. ಭೀಷ್ಮರು ರಾಜಸೂಯ ಯಾಗದಲ್ಲಿ ಅಗ್ರಪೂಜೆಗೆ ಕೃಷ್ಣನೇ ಅರ್ಹನೆಂದಾಗ

ರಾಜಾಧಿರಾಜಸ್ಸರ್ವೇಷಾಂ ವಿಷ್ಣು ರ್ಬ್ರಹ್ಮಮಯೋ ಮಹಾ ।
ಈಶ್ವರಂ ತಂ ವಿಜಾನೀಮಃ ಸ ಪಿತಾ ಸ ಪ್ರಜಾಪತಿಃ ॥

—ಬಾ–ಆಶ್ವ 4–3, 13

ಎಂದರು ಇವನು ಯಶೋದೆಗೆ " ಇಳಂಶಿಂಗಂ," ನಮ್ಮೆಲ್ಲರಿಗೂ " ಶೀರಿಯಶಿಂಗಂ." ಇವನು ಕೂಡುವುದು " ಶೀರಿಯಶಿಂಗಾಶನಂ."

ಶೆನ್ರಾಲ್ ಕುಡೈಯಾಂ ಇರುಂದಾಲ್ ಶಿಂಗಾಸನಮಾಂ

ಎಂದು ಪೊಯ್‌ಗೈ ಮುನಿಗಳು ತನ್ನ ತಿರುವಂದಾದಿಯಲ್ಲಿ (53) ಹೇಳಿರುವಂತೆ ಬಲರಾಮ ಆದಿಶೇಷನಾದ್ದರಿಂದ ಅವನೇ ಸಿಂಹಾಸನ. ಅವನೇ ಲಕ್ಷ್ಮಣ, ಅವನೇ ಲಕ್ಷ್ಮಣಮುನಿ ರಾಮಾನುಜ, ಅವರಲ್ಲಿದ್ದು ಶ್ರೀವೈಷ್ಣವರ ಪ್ರಾರ್ಥನೆಯನ್ನು ಕೇಳು ಎಂದು ನಮಗಾಗಿಯೂ ಹಾಡಿರುವಳು ಗೋದೆ. ಕೃಷ್ಣನೇ ಶ್ರೀಮನ್ನಾರಾಯಣ ಅವನೇ ಪರಮಾತ್ಮ, ಮಿಕ್ಕವರಲ್ಲ ಎಂದು ಚರಣ ಹಾಡಿರುವಳು " ಊತ್ತಮುಡೈಯಾಯ್ " ಎನ್ನುವ ಪಲ್ಲವಿಗೆ ಸರಿಯಾಗಿ. ಇವಳ ಮಾತನ್ನು ನಿಗಮಾಂತ ದೇಶಿಕ ಮಾತಿನಲ್ಲಿ ಸಂಗ್ರಹ ಮಾಡಿದರೆ ಅದು ಹೀಗಿದೆ.

ಅತ್ಯೈಕ್ಯಂ ದೇವತೈಕ್ಯಂ ತ್ರಿಕಸಮಧಿಕತಾ ತುಲ್ಯತೈಕ್ಯಂ ತ್ರಯಾಣಾಂ
ಅನ್ಯತ್ರೈಶ್ವರ್ಯಮಿತ್ಯಾದ್ಯನಿಪುಣಭಣಿತೀ ರಾರ್ದ್ರಿಯಂತೇ ನ ಸಂತಃ ।
ತ್ರಯ್ಯಂತೈರೇಕಕಂಠ್ಯೈ ಸ್ತದನಗುಣಮಸುವ್ಯಾಸಮುಖ್ಯೋಕ್ತಿಭಿಶ್ಚ
ಶ್ರೀಮನ್ನಾರಾಯಣಶ್ಚೋ ನ ಪತಿರಖಿಲತನು ರ್ಮುಕ್ತಿ ಮುಕ್ತಿಭೋಗ್ಯಃ ।

—(ರ–ಸಾ–ಪರ)

ಇಲ್ಲಿ ಕೊಟ್ಟಿರುವ ಸಾದೃಶ್ಯದಲ್ಲಿ ಸಿಂಹ ಸಾಮಾನ್ಯ ಸಿಂಹವೆಂದರೆ, ಆಗ, **ಮಾರಿ**–ಮಳೆಗಾಲದಲ್ಲಿ, **ಮಲೈ ಮುಳ್ಳಂಜಿಲ್**–ಬೆಟ್ಟದ ಕಿಬ್ಬರಿಯಲ್ಲಿ, **ಮುನ್ನಿ**–ಹೆಣ್ಣು ಸಿಂಹದೊಡನೆ ನಿದ್ದು–ಮಿಕ್ಕಪದೆಗಳಿಲ್ಲವೂ ಸುಲಭ.

ಸ್ವಾಪದೇಶ

ಒಬ್ಬ ಶಿಷ್ಯ ತನ್ನ ಆಚಾರ್ಯನನ್ನು ತಾವು ಜನ್ಮತಾಳಿರುವುದೇಕೆಂದು ಉಪದೇಶಿಸಿ ಎಂದು ಕೇಳಿಕೊಳ್ಳುವನು.

ಮಾರಿ—ಪ್ರಳಲ ಕಾಲದಲ್ಲಿ

1) **ಪೇಯ್ ಇರುಕ್ಕುಂ ಪೆರು ವೆಳ್ಳಂ ಪೆರು ವಿಶುಂಬಿ ವಿಾದು ಓಡಿ ಪೆರುಕುಂ ಕಾಲಂ**
2) **ಮಣ್ಣಾಡುಂ ವಿಣ್ಣಾಡುಂ ವಾನವರುಂ ದಾನವರುಂ ಮುತ್ತು ಮೆಲ್ಲಾಂ ಉಣ್ಣಾಡ ಪೆರುವೆಳ್ಳಂ**
3) **ನಿಲ್ಲಾಡ ಪೆರುವೆಳ್ಳಂ ನೆಡುವಿಶುಂಬಿ ವಿಾದು ಓಡಿ ಪೆರುಕುಂ ಕಾಲಂ**

ಎಂದು ತಿರುಮಂಗೈ ವರ್ಣಿಸಿರುವ ಪ್ರಳಯ ಕಾಲದಲ್ಲಿ **ಮಲೈ**—ಮುಳುಗಿ ಹೋಗದೇ ಬೆಟ್ಟದಂತೆ ನಿಲ್ಲುವ ವೇದದ

ತಂ ಹ ತ್ರೀಣ್ ಗಿರಿರೂಪಾಣ್ ಅವಿಜ್ಞಾತಾನಿವದರ್ಶಯಾಂಚಕಾರ

ಎಂದು ಭರದ್ವಾಜರು ದೇವೇಂದ್ರನಿಗೆ ವೇದದಲ್ಲಿ ತಿಳಿಸಿರುವಂತೆ ಪ್ರಳಯಕಾಲದಲ್ಲೂ ವೇದವು ನಾಶವಾಗುವುದಿಲ್ಲ. ಅದರ

ಮುಳ್ಳಂಜಿಲ್—ಗುಹೆಯಾದ ಉಪನಿಷತ್ತಿನಲ್ಲಿ

ಮುನ್ನಿ—" **ಅನೀದವಾತಂ ಸ್ವಧಯಾ ತ ದೇಕಂ** " ಎಂದು ಲಕ್ಷ್ಮಿಯೊಡನೆ, " **ಸದೇವ ಸೌಮ್ಯೇದಮಗ್ರ ಆಸೀತ್** " ಎಂದು, ಚಿತ್ತು ಮತ್ತು ಅಚಿತ್ತು ಎನ್ನುವ ಎರಡು ತತ್ವಗಳನ್ನು ತನ್ನಲ್ಲಿ ಅಡಗಿಸಿಕೊಂಡು

ಕಿಡಂದು ಉರಂಗುಂ ಶೀರಿಯಶಿಂಗಂ—ಯೋಗ ನಿದ್ರೆಯಲ್ಲಿರುವ ಸ್ವಾಮಿಯಾದ ಪರಮಾತ್ಮನು

ಅರಿವುತ್ತು–" **ಸ ಈಕ್ಷತ ಇವಾನ್ನು ಸ್ಯಾಜಾಇತಿ,**" " **ಬಹುಸ್ಯಾಂ ಪ್ರಜಾಯೇಯೆಂತಿ** " ಎಂದು ಸಂಕಲ್ಪಿಸಿ

ತೀವಿಳಿತ್ತು—ಏತಾಸಾಂ ಪ್ರತಿ ಬೋಧನಾಯ ಅಭ್ಯಂತರಂ ವಿವಿಶಾನಿ—ಎಂದು ಮೈತ್ರಾಯಣೀಮೋಪನಿಷತ್ತು ಹೇಳುತ್ತಿರುವಂತೆ ಜೀವಾತ್ಮರು ಅನಾದಿ ಅಜ್ಞಾನವೆಂಬ ನಿದ್ದೆಯಿಂದ ಎದ್ದೇಳಲೆಂದು ಸಂಕಲ್ಪಿಸಿ

ವೇರಿಮಯಿರ್ ಪೊಂಗಿ ಎಪ್ಪಾಡುಂ ಪೇರ್ನ್ದು ಉದರಿ—ಎಲ್ಲೆಲ್ಲೂ ವ್ಯಾಪಿಸಿ

ಅನೇನ ಜೀವೇನಾತ್ಮನಾಽನುಪ್ರವಶ್ಯ ನಾಮರೂಪೇ ವ್ಯಾಕರವಾಣಿ ಎಂದು ಛಾ–ಉ–ಹೇಳುತ್ತಿರುವಂತೆ ಜೀವಿರುಗಳ ಮೂಲಕ ವಿಶ್ವವನ್ನು ಪ್ರವೇಶಿಸಿ

ಮೂರಿನಿವಿರ್ನ್ದು—ಕಾರಣ ದೆಶೆಯಲ್ಲಿ ಸೂಕ್ಷ್ಮವಾಗಿದ್ದವನು ಕಾರ್ಯ ದೆಶೆಯಲ್ಲಿ ಸ್ಥೂಲನಾಗಿ

ಮುಳ್ಗಿ—ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ ॥

ಎಂದು ಗೀತೆಯಲ್ಲಿ ಅವನೇ ಹೇಳಿರುವಂತೆ ಡಂಗುರ ಹೊಡೆದುಕೊಂಡು

ಪುಗಪ್ಪಟ್ಟು ಪೊದರುಮಾಪ್ಪೋಲೆ—ಹೊರಟು ಸೃಷ್ಟಿಗೆ ಉಲ್ಮುಖವಾಗಿ ಭಗವತ್ಸಿಂಹವು ಹೋಗುವಂತೆ

ನೀ ಪೂವೈ ಪೂವಣ್ಣ—ಅವನಿಗೆ ಎಣೆಯಾದ, ಅಗಾಧಮಹಿಮನಾದ ಆಚಾರ್ಯ, ನೀನು

ಉನ್ ಕೊಯಿಲ್ ನಿನ್ರು—ನಿನ್ನ ಆಶ್ರಮದಿಂದ

ಇಂಗನೇ ಪೋಂದರುಳಿ—ಇಲ್ಲಿಗೆ ಕಾಲಕ್ಷೇಪಮಾಡುವ ಸಭೆಗೆ ದಯ ಮಾಡಿಸಿ.

ಶೀರಿಯ ಶಿಂಗಾಸನತ್ತಿರುಂದು—ವೇದವೆನ್ನುವ ಸಿಂಹಾಸನದಿಂದ

ಯಾಂವಂದಕಾರಿಯಂ—ನಾವು ಮಾನವರಾಗಿ ಇಲ್ಲಿಗೇ ಬಂದೆವೆಂದು

ಆರಾಯ್ನ್ದು ಅರುಳ್—ನಾವು ತಿಳಿಯಲು ಸಮರ್ಥರಾಗುವಂತೆ ಹೇಳಿ ಅನುಗ್ರಹಿಸಬೇಕು—**ಏಲೋರೆಂಪಾವಾಯ್**

ಹಾಡಿದಳು ಗೋದೆ. ಸಂಗೀತಕ್ಕೆ ಸಾಹಿತ್ಯ ಕೂಡಿತು. ಪಲ್ಲವಿ, ಅನುಪಲ್ಲವಿ ಚರಣದಿಂದ ರಸಮಯವಾಯಿತು ಭಾವ.

ಅಜ್ಞೋ ವದತಿ ವಿಷ್ಣವೇ ಸುಜ್ಞೋ ವದತಿ ವಿಷ್ಣವೇ ।
ನ ತಯೋರಂತರಂ ಹ್ಯಸ್ತಿ ಭಾವಭಾವ್ಯೌ, ಜನಾರ್ದನಃ ॥

ಎನ್ನುವಂತೆ ಗೋಪಿಯರ ಭಾವಕ್ಕೆ ಮಣಿದ ಕೃಷ್ಣ. ಮಂಚದ ಹಾಸಿಗೆಯಿಂದೆದ್ದು ನಡೆದ ಸಿಂಹಾಸನವಿದ್ದೆಡೆಗೆ, ನೋಡಿದಳು ಗೋದೆ. ಹಾ, ಎಷ್ಟು ಸುಂದರನಡೆ ಈ ನಡೆಯ ಭಂಗಿಯನ್ನು ಕಂಡು ಅಪ್ಸರೆಯರು ನಾಚಿದರು. ರಾಮಾನುಜರು ಇದನ್ನು ಕಾಲಕ್ಷೇಪ ಹೇಳುತ್ತಿದ್ದರು. ಭಾವ ತುಂಬಿದ ಅವರಿಗೆ, ರಂಗನಾಥ ತನ್ನಲ್ಲಿಗೆ ಬರುವಂತಾಯಿತು ಅವರಿಗೆ, ಕೊಂಚ ಕಾಲವಾದಮೇಲೆ ಪ್ರಕೃತಿಗೆ ಇಳಿದು ಶಿಷ್ಯರಿಗೆ ಹೇಳಿದರಂತೆ "ಇದೆಲ್ಲಾಂ ಪೆರಿಯಪೆರುಮಾಳಿಡತ್ತಿ ಲಪಾರ್ಕ್ಕಲಾಂ" ಯಾಂವಂದಕಾರಿಯಂ . . ." ಎಂದು ಹೇಳುತ್ತಾ ಹೇಳುತ್ತಾ, ಅವನ ನಡೆಗೆ ಸೋತು " ವಂದಕಾರಿಯಂ . . . ವಂದಕಾರಿಯಂ" ಎನ್ನುತ್ತಲೇ ನಿಂತಳು. ನೋಡಿದ ಕೃಷ್ಣ ಈ ಚಿತ್ರವನ್ನು " ಹೇಳಿ, ಏನದು ಯಾಂ ವಂದಕಾರಿಯಂ " ಎಂದ. ಗೋದೆ, ಮಕ್ಕಳಂತೆ " ನಮಗೆ, ನಮಗೆ ಬೇಕಾದದ್ದು ಬೇಕಾದದ್ದು . . . ಅರುಳ್, ನಿನ್ನ ಕೃಪೆ" ಎಂದಳು ಮೋಹಪರವಶಳಾಗಿ. ಕೃಷ್ಣ ನಕ್ಕ. ಆಗ ಎಚ್ಚರವಾಯಿತು ಗೋದೆಗೆ, ಹೇಳಿದಳು " ಏನಿದು ಕೃಷ್ಣ ಈ ನಗು, ಈ ಮುಗುಳ್ನಗೆ"

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ

ಎಂದು ಸಂಜಯ ಹೇಳಿದಂತೆ, ಆ ಮುಗುಳ್ನಗೆಯಲ್ಲೇ ಗೀತೆಯೆಲ್ಲವನ್ನೂ ಉಪದೇಶಿಸಿದೆ ಅರ್ಜುನನಿಗೆ; ನಮಗೆ ಗೀತೆ ಬೇಡ ನಾವು ಗೋಪಿಯರು; ನಮ್ಮ ಅಂತರಂಗ ನಿನಗೆ ಗೊತ್ತು. ಅಂತರಂಗ ತಿಳಿದೇ ಹೇಳುವವನು ನೀನು.

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ

ಎಂದ ಅರ್ಜುನ. ಹಾಗೆಯೇ ಮಾಡಿದೆ. ಹೇಳಿದೆ.

ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ

" ಅರ್ಜುನ, ಈ ನೋಟ ಮತ್ತೆ ನಿನಗೆ ಸಿಗಲಾರದು; ಈಗ ಎಲ್ಲರೂ ಸೇರಿರುವರು; ನಾಳೆ ಯಾರಿರುವರೋ ಇಲ್ಲವೋ

ಮಯೈವೈತೇ ನಿಹತಾಃ ಪೂರ್ವಮೇವ

ಇವರೆಲ್ಲರೂ ಸತ್ತವರೇ ಎಂದು.

ಕುಚೇಲ ನಿನ್ನಲ್ಲಿಗೆ ಏನೇನೋ ಕೇಳಲು ಬಂದ. ನಿನ್ನನ್ನು ನೋಡಿ ಎಲ್ಲವನ್ನೂ ಮರೆತ. ಆದರೂ ಅವನ ಅಂತರಂಗ ತಿಳಿದು ನೀನೇ ಕೊಡಲಿಲ್ಲವೇ ಅವನಿಗೆ ಅಷ್ಟೈಶ್ವರ್ಯವನ್ನು. ಹಾಗೆಯೇ ನಾವು ಈಗಿರುವೆವು. ಏನು ಕೇಳಲೂ ಬಾಯಿ ಬರದು. ನಿನ್ನ ಕೃಪೆಯೊಂದಿದ್ದರೆ ಸಾಕೆನ್ನಿಸಿದೆ.

ಶರೀರಾರೋಗ್ಯಮೈಶ್ವರ್ಯಂ ಭೋಗಾಂಶ್ಚೈವಾನುಷಂಗಿಕಾ ।
ದದಾತಿ ಧ್ಯಾಯಿನಾಂ ನಿತ್ಯ ಮುಪವರ್ಗಪ್ರದೋ ಹರಿಃ ॥

ಎಂದಿರುವಂತೆ ನಿನ್ನ ಕೃಪೆಯೊಂದೇ ಸಾಕು. ಅದೇ ಎಲ್ಲವನ್ನೂ ಕೊಡಬಲ್ಲದು. ನಿನಗೆ ಏನೂ ಆಗದಿರಲಿ. ನಿನಗೆ ಎಲ್ಲಿಯಾದರೂ ದೃಷ್ಟಿತಾಕೀತು. ಕೈಕೆಯಿಯ ಮಾತಿನಂತೆ ಸುಮಂತ್ರ ರಾಮನನ್ನು ಕರೆಯಲು ಬಂದ. ತಂದೆಯ ಆಜ್ಞೆಯಾಗಿದೆ ಬರಬೇಕು ಎಂದ. ನೀನೇ ರಾಮನಾಗಿದ್ದವನಲ್ಲವೆ? ಹೊರಟೆ. ಸೀತೆಗೆ ಹೊರಡು ವಾಗ ಹೇಳಿದೆ "ಸೀತೆ ನಮ್ಮ ಪಟ್ಟಾಭಿಷೇಕಕ್ಕಾಗಿ ಇರಬಹುದು. ನಾನು ಬರುವ ವರಿಗೂ ನಿನ್ನ ಪರಿವಾರದೊಡನೆ ಇರು. ಬೇಗ ಬಂದುಬಿಡುವೆನು.

ಸಹಂ ತ್ವಂ ಪರಿಪಾರೇಣ ಸುಖಮಾಸ್ವ ರಮಸ್ವ ಚ

ಎಂದೆ. ಅವಳು ಮಹಾದ್ವಾರದವರಿಗೂ ನಿನ್ನೊಡನೆ ಬಂದಳು. ಏನೋತೋ ಚಿತು ಅವಳಿಗೆ.

ಪತಿಸಮ್ಮಾನಿತಾ ಸೀತಾ ಭರ್ತಾರಮನುಸಿತೇಕ್ಷಣಾ ।
ಆದ್ವಾರಮನುನುವವ್ರಾಜ ಮಂಗಳಾನ್ಯಭಿದಧ್ನುಷೀ ॥

—ರಾ–ಅ–16–2

ಎಂದಂತೆ ನೀನು ಅವಳಿಗೆ ನಿನ್ನ ಹಾರಕೊಟ್ಟು ಸನ್ಮಾನಿಸಿದ್ದು ಮಾಡುವುದಕ್ಕೂ ಸೂಚನೆಯೆಂದು ತೋಚಿದೆ. ನಿನಗೆ ಮಂಗಳ ಹಾಡುವೆವು ಎಂದು ಹೇಳಿ ಗೋಪಿ ಯರನ್ನು ಕುರಿತು ಸಖಿಯರೆ ನಾನು ಮಂಗಳ ಹಾಡುವೆನು. ಹಿಮ್ಮೇಳ ಹಾಡಿ ನೀವು ಅವನಿಗೆ ಎಂದಳು;

ಗೋವಿಂದ ರಾಜೀಯ ವ್ಯಾಖ್ಯಾನಕಾರರು ಮೇಲಿನ ರಾಮಾಯಣ ಶ್ಲೋಕಕ್ಕೆ ಅರ್ಥ ಹೇಳುವಾಗ **"ರಾಮಸ್ಯ ಸೌಂದರ್ಯಾ ಕೃತಿ ವಿಶೇಷಾ ಅಲೋಚ್ಯ ಕಿಂ ವಾ ಭವಿಷ್ಯತೀತಿ ಕಲುಷ್ಷಿತಹೃದಯಾ ತಸ್ಮೈ ಮಂಗಳ ಮಾಶಾಸಾನಾ ಅನುವ್ರಜತಿ"** ಎಂದಿರುವರು. ನಮಗೆ ಪ್ರಿಯವಾದವರೊಡನೆ ಯಾವಾಗಲೂ ಇದ್ದರೂ ಕೆಲವುವೇಳೆ ಅದರಲ್ಲಿ ನಡೆನುಡಿಗಳಿಂದ ವಿಶೇಷಾಭಿಮಾನ ಉಕ್ಕಿಬರುವುದು ಜೀವನದಲ್ಲಿ ಕಾಣುವಸಾರ, ಪ್ರೇಮಕ್ಕೆವಿರಗುಕೊಡುವುದು ಪ್ರಿಯವಸ್ತುವಿನ ಹಾವ ಭಾವ. ಹಾಗೆ ಆಯಿತು ಗೋದೆಗೆ. ಹಾಡುವಳು.

ಅನ್ರು ಇವ್ವುಲಕಮಳಂದಾಯ್ ಅಡಿ ಪೋತ್ತಿ
ಶಿನ್ರಂಗು ಶೆನ್ನಿಲಂಗೈ ಶೆತ್ತಾಯ್ ತಿರಲ್ ಪೋತ್ತಿ
ಪೊನ್ನಚ್ಚಕಟಿವುದ್ಯೆತ್ತಾಯ್ ಪುಕ್ಕ್ ಪೋತ್ತಿ
ಕನ್ರು ಕುಣಿಲಾ ವೆರಿಂದಾಯ್ ಕ್ಕಲ್ ಪೋತ್ತಿ
ಕುನ್ರು ಕುಡೈಮಾ ವೆಡುತ್ತಾಯ್ ಗುಣಂ ಪೋತ್ತಿ
ವೆನ್ರು ಪಕೈ ಕೆಡುಕ್ಕುಂ ನಿನ್ ಕೈಯಿಲ್ ವೇಲ್ ಪೋತ್ತಿ
ಎನ್ರೆನ್ರು ಉನ್ ಶೇವಕಮೇ ಯೇತ್ತಿ ಪ್ಪರೈ ಕೊಳ್ವಾನ್
ಇನ್ರು ಯಾಂ ವಂದೋಂ ಇರಂಗು ಏಲೋರ್ಎಂಪಾವಾಯ್ ॥ ೨೪ ॥

ಗೋದೆಯಕುಲ ವಂದಿಮಾಗಧರವಂಶ–ವೇಯರ್‌ಕುಲಂ. ತಂದೆ ವಿಷ್ಣು ಚಿತ್ತರು ಪಲ್ಲಾಂಡು ಹಾಡಿದರೆ ಹರಿಗೆ, ಇವಳು ಮಂಗಳ ಹಾಡುವಳು ಮೊದಲು ಅವನ ಅಡಿದಾವರೆಗೆ. ತಂತ್ರಶಾಸ್ತ್ರದಂತೆ ಪರಮನ ಪವಿತ್ರ ಚರಣಗಳಿರಡು ಜ್ಞಾನ ಭಕ್ತಿಸ್ಥಾನ. ಕೃಷ್ಣನು ನಡೆದುಬಂದಾಗ ಅವಳಿಗೆ ಕಂಡಿದ್ದು ಅವನ ಎರಡು ಪಾದ ಗಳು. ಬಲಪಾದ ಜ್ಞಾನ. ಎಲ್ಲಾ ಜೀವರುಗಳ ಸ್ವರೂಪ ಕೂಡುವ ಸ್ಥಾನ. ಎಡಪಾದ ಅವರೆಲ್ಲರೂ ಅವನಿಗೆ ಸೇರಿದವರು ಅವನಿಗಾಗಿರುವವರೆನ್ನುವ ಸ್ನೇಹ. ಅಂದರೆ ಭಕ್ತಿ ಅವರ ಸ್ವಭಾವ ಪರಿಪಾಕವಾಗಿ ಕೂಡುವ ಸ್ಥಾನ. ಮಂಗಳಾಶಾಸನ ಮಾಡುವವರು ನಾವು. ನಮ್ಮ ಸ್ಥಾನ ಎರಡು ಪಾದಗಳು. ಅವನ್ನು ಒಂದಾಗಿ ಮಂಗಳಾಶಾಸನ ಮಾಡುವಳು ಮೊದಲು.

ಅನ್ರು ಇವ್ವುಲಕಮಳಂದಾಯ್ ಅಡಿ ಪೋತ್ತಿ—ಅಂದು ಈ ಪ್ರಪಂಚ ವನ್ನು ಅಳದೆ; ಆಪಾದವಿದು; ಅಂದಕ್ಕೆ ಮಂಗಳವಾಗಲಿ–ಈ ಪದ್ಯದಲ್ಲಿ ಮೊದಲನೇ ಪಾದದ ಮೊದಲು ಪದ "ಅನ್ರು–ಅಂದು, ಕೊನೆಯಪಾದದ ಮೊದಲು ಪದ "ಇನ್ರು"–ಇಂದು. "ಅನ್ರು" ಎನ್ನುವುದನ್ನು ಮೊದಲಿನ ಐದು ಪಾದಗಳ ಮೊದಲು ಕೂಡಿಸಿಕೊಂಡು ಕೊನೆಯ "ಇನ್ರು" ಎನ್ನುವದೊಡನೆ ಅರ್ಥಮಾಡಿಕೊಳ್ಳಬೇಕು.

"ಅನ್ರುಉಲಕ ಮಳಂದಾಯ್ ಇನ್ರು ಯಾಂವಂದೊ;" ಅನ್ರು ಶಿನ್ರಂಗು . . . ಇನ್ರುಯಾಂವಂದೋಂ"–ಹೀಗೆ.

ಅಂದು ನೀನು ಒಲಿದ ಮನಕ್ಕಾಗಿ ವಾಮನನಾಗಿ ಬಂದು ಬ್ರಹ್ಮಚಾರಿಯಾಗಿ ಯಾಚಿಸಲು ಅವನಲ್ಲಿಗೆ ಹೋದೆ. ಏಕೆ? ಮಹಾಬಲಿಯಿಂದ ಪೀಡಿತರಾದ ದೇವತೆಗಳು

ನಷ್ಟೈಶ್ವರ್ಯಂ ಪುನಃ ಪ್ರಾಪ್ತುಂ ತಮೇವ ಶರಣಂ ಗತಾಃ

ಎಂದಿರುವಂತೆ ನಿನ್ನಲ್ಲಿ ಶರಣುಹೋದರು. ಬಲಿಯು ನಿನ್ನ ಶತ್ರುವಲ್ಲ, ಪ್ರಹ್ಲಾದನ

ಮೊಮ್ಮಗ, ಮೋಸದಿಂದಲೇ ಅವನಿಂದ ತ್ರೈಲೋಕ್ಯವನ್ನು ಮತ್ತೆ ಪಡೆಯಲೆಂದೇ ಏನೂ ತಿಳಿಯದ ಚಿಕ್ಕ, ಬ್ರಹ್ಮಚಾರಿಯಾಗಿ ಬಂದು ಮೂರು ಹೆಜ್ಜೆ ಭೂಮಿಯನ್ನು ಕೇಳಿದೆ. ಶುಕ್ರಾಚಾರ್ಯರು ತಡೆದರು. ಒಂದು ಕಣ್ಣು ಕಳೆದುಕೊಂಡರು. ಬಲಿ ನಿನ್ನ ಮಹಿಮೆಯನ್ನು ತಿಳಿದು ಮಾತುಕೊಟ್ಟಂತೆ ನಡೆದುಕೊಂಡ. ದೇವತೆಗಳಿಗೆ ಅವರ ಐಶ್ವರ್ಯ ಮತ್ತೆ ಸಿಕ್ಕಿತು. ನಿನ್ನನ್ನು ಮರೆತರು ಕೃತಘ್ನರಾದರು. ನಾವು ಹಾಗಲ್ಲ. "ಇನ್ನು ಯಾಂವಂದೋಂ"–ಇಂದು ನಾವು ಬಂದಿರುವೆವು. ಇಂದು ನೀನು ನಮ್ಮ ತಂದೆ ತಾಯಿಯರ ಬಂಧನದಿಂದ ಬಿಡಿಸಿದೆ. ನಾವು ಕೃತಜ್ಞರು ಪಾದವನ್ನು ಆಶ್ರಯಿಸಿರುವೆವು. ಅದು ಶಾಶ್ವತವಾಗಿರಲಿ.

ವಾಮನನಾಗಿ ಬಂದರೂ ಭೂಮಿಯನ್ನು ಅಳೆದುಕೊಳ್ಳುವಾಗ ತ್ರಿವಿಕ್ರಮ ನಾದೆ, ಅಂಡಕಟಾಹ ಬಡದೆ; ಸಮಷ್ಟಿಜಲದಿಂದ ಬ್ರಹ್ಮನು ನಿನ್ನ ಈ ಪಾದವನ್ನು ತೊಳೆದ; ಗಂಗೆ ಹುಟ್ಟಿದಳು; ಮುಂದೆ ಈಶ್ವರನ ತಲೆಯಮೇಲೆ ಅವಳು ಬಿದ್ದು ಅವನನ್ನು ಪಾವನ ಮಾಡಿದಳು. ಅಂತಹ ಪಾದವಿದು; ಅದಕ್ಕೆ ಮಂಗಳವಾಗಲಿ.

ಶೆನ್ರಂಗು ತೆನ್ನಿಲಂಗೈ ಶೆತ್ತಾಯ್ ತಿರಲ್ ಪೋತ್ತಿ—ಲಂಕೆ ರಾವಣನ ರಾಜಧಾನಿ; ಅಲ್ಲಿಗೆ ಹೋಗಿ ಎಲ್ಲವನ್ನೂ ನಾಶಮಾಡಿದೆ. ಆ ತೇಜಸ್ಸು ಶಾಶ್ವತ ವಾಗಿರಲಿ. ನಿನ್ನ "ತಿರಲ್" ತೇಜಸ್ಸು ಕರುಣಾಮಯವಾದುದು; ಅದನ್ನು ಯಾರೂ ಎದುರಿಸಿಲಾರರು; ಹಾಗಿದ್ದರೂ ಅದು ನಿನ್ನನ್ನು ನಂಬಿದವರಿಗೆ ಮಾತ್ರ ವಿದೆ. ಸೀತಗಾಗಿಯಲ್ಲವೆ ಹಾಗೆ ಮಾಡಿದೆ. ನಿಜವಾಗಿಯೂ ನೀನು ರಾವಣನನ್ನು ಕೊಲ್ಲಲಿಲ್ಲ; ಅವನ ಕೆಟ್ಟಗುಣಗಳನ್ನು ಮಾತ್ರ ಹೋಗಿಸಿದೆ. "ತೆನ್ನಿಲಂಗೈ ಕೊಮಾನೈ ಶೆತ್ತಾಯ್ ಅಲ್ಲ್; ತೆನ್ನಿಲಿಂಗೈಮಾತ್ತಿರಂ ಶೆತ್ತಾಯ್" (12 ಪಾಶುರ ನೋಡಿ). ಅಂತಹ ನಿನ್ನ ತೇಜಸ್ಸಿಗೆ ಮಂಗಳವಾಗಲಿ.

ಪೊನ್ನ ಚ್ಚಕಟವುದ್ದೈತ್ತಾಯ್ ಪುಕಳ್ ಪೋತ್ತಿ—ಚಿನ್ನದಂತೆ ಹಿತವಾಗಿ ಕಾಣುವ ಗಾಡಿಯ ರೂಪದಲ್ಲಿ ಬಂದ ಅಸುರನನ್ನು ಕಾಲಿನಿಂದ ಒದ್ದು ಸಾಯಿಸಿದೆ. ಅದೆಂತಹ ಸಾಮರ್ಥ್ಯ ನಿನ್ನ ಪಾದದಲ್ಲಿ; ಅದಕ್ಕೆ ಮಂಗಳವಾಗಲಿ.
ಕಾಲಿನ ಮಹಿಮೆ ತ್ರಿವಿಕ್ರಮಾವತಾರದಲ್ಲಿ; ತೇಜಸ್ಸು ರಾಮಾವತಾರದಲ್ಲಿ; ಸಾಮರ್ಥ್ಯ ಶಕಟಾಸುರನದಲ್ಲಿ. ಅಷ್ಟೇ ಅಲ್ಲ.

ಕನ್ರು ಕುಣಿಲಾ ವೆರಿಳದಾಯ್ ಕಳ್ಳಲ್ ಪೋತ್ತಿ—ವತ್ಸಾಸುರನನ್ನು ಕೈಯಿಂದ ಎಸೆದು, ಮರದಲ್ಲಿ ಕಪಿತ್ಥ (ಬೇಲದ) ಫಲರೂಪದಲ್ಲಿದ್ದ ಅಸುರನನ್ನೂ ಕೊಂದೆ. ಒಂದೇವೇಳೆ ಇಬ್ಬರನ್ನು ಕೊಂದೆ. ವತ್ಸಾಸುರನನ್ನು ಎಸೆದಾಗ ನಿನ್ನ ಪಾದವನ್ನು ಮಡಿಸಿಕೊಂಡೆ. ಆಗ ಅದು ಎಷ್ಟು ಸುಂದರವಾಗಿತ್ತು; ಅದಕ್ಕೆ ಯಾವ ಕೇಡೂ ಬರದಿರಲಿ; ಒಂದು ಮುಳ್ಳಿನಿಂದ ಮತ್ತೊಂದು ಮುಳ್ಳನ್ನು ತೆಗೆದು ಎರಡನ್ನು ಬಿಸಟುವಂತೆ ಮಾಡಿದೆ. ಆ ಪಾದ ಶಾಶ್ವತವಾಗಿರಲಿ.

ಕುನ್ರು ಕುಡೈಯಾಯ್ ವೆಡುತ್ತಾಯ್ ಗುಣಂ ಪೋತ್ತಿ–ಗೋವರ್ಧನ ಪರ್ವತವನ್ನು ಛತ್ರಿಯಂತೆ ಮೇಲೆತ್ತಿದೆ. ಆ ನಿನ್ನ ಗುಣಕ್ಕೆ ಮಂಗಳವಾಗಲಿ. ಗೋಪಕುಲವನ್ನೇ ನಾಶಮಾಡುವೆನೆಂದೆಣಿಸಿದ ಇಂದ್ರ. ಅವನಿಗೆ ಗೋಪಾಲರಿಂದ ಸಲ್ಲುತ್ತಿದ್ದ ಹವಿಸ್ಸು ತಪ್ಪಿದ್ದು ಅವನ ಕೋಪಕ್ಕೆ ಕಾರಣವಾಯಿತು. ನೀನು ಹೇಳಿದಂತೆ ನಡೆದಿದ್ದರು ಗೋಪಾಲರು; ನಿನ್ನ ಸೌಶೀಲ್ಯದಿಂದ ಅವರನ್ನು ರಕ್ಷಿಸಿದೆ. ಅದನ್ನು ತಿಳಿಯದೆ ಇಂದ್ರ ಅವಮಾನಪಟ್ಟ. ಸೋಲನ್ನು ಒಪ್ಪಿಕೊಂಡ. ನೀನೇ ಜಗತ್ಪ್ರಭುವೆಂದು "ಗೋವಿಂದ"ನನ್ನಾಗಿ ಪಟ್ಟಾಭಿಷೇಕ ಮಾಡಿದ. ಆ ಸೌಶೀಲ್ಯ ಗುಣಕ್ಕೆ ಮಂಗಳವಾಗಲಿ. ಸೌಶೀಲ್ಯ ಗುಣವೆಂದರೆ ದೊಡ್ಡವ ಚಿಕ್ಕವರೊಡನೆ ಹಣಗಾರ ದರಿದ್ರನೊಡನೆ ವಿದ್ಯಾವಂತ ಮೂಢರೊಡನೆ ಸಮಭಾವದಲ್ಲಿರುವ ಸ್ನೇಹ ವಿಶೇಷ. ತಾನು ದೊಡ್ಡವ, ಹಣಗಾರ, ವಿದ್ಯಾವಂತನೆಂದು ಭಾವಿಸಿಕೊಳ್ಳದೆ ಎಲ್ಲರಿಗೂ ಸುಲಭನಾಗುವಂತೆ ಮಾಡುವ ಗುಣ ಸೌಶೀಲ್ಯ. ಈ ಗುಣ ಒಬ್ಬನಲ್ಲಿದೆಯೆಂದು ನಾವು ತಿಳಿಯಲು ಮೊದಲು ಅವನು ಸುಲಭನಾಗಿರಬೇಕು. ಸೌಲಭ್ಯ ಮತ್ತು ಸೌಶೀಲ್ಯವೀವೆರಡು ಗುಣಗಳು ಪರಮಾತ್ಮನ ವಿಶೇಷಗುಣಗಳು. ಅವನಲ್ಲಿ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸೆನ್ನುವ ಆರು ಗುಣಗಳು ಸ್ವರೂಪ ನಿರೂಪಕವಾಗಿವೆ. ಆದರೆ ಸ್ನೇಹಬಲದಿಂದ, ನೀಳಾದೇವಿಯ ಪ್ರಭಾವದಿಂದ ಅವೆಲ್ಲವೂ ಸೌಲಭ್ಯ ಸೌಶೀಲ್ಯಗುಣಗಳಾಗಿ ಪ್ರಯೋಜನವಾಗಿವೆ ಭಕ್ತರಿಗೆ. ಇವೆರಡರಲ್ಲೂ ಸೌಶೀಲ್ಯಗುಣಕ್ಕೆ ಎಣೆಯಿಲ್ಲ. ಅದಕ್ಕೆ ಮಂಗಳವಾಗಲಿ.

ವೆನ್ರು ಪಕ್ಕೆ ಕೆಡಕ್ಕುಂ ನಿ ಕೈಯಿಲ್ ವೇಲ್ ಪೋತ್ತಿ—ಎಲ್ಲರನ್ನೂ ಗೆದ್ದು ದ್ವೇಷವನ್ನು ಹಾಳಮಾಡುವ ನಿನ್ನ ಕೈಯಲ್ಲಿರುವ ವೇಲಾಯುಧಕ್ಕೆ ಮಂಗಳವಾಗಲಿ–ಕೃಷ್ಣನು ಯಾವಾಗಲೂ ವೇಲಾಯುಧವನ್ನು ಹಿಡಿದಿದ್ದಕ್ಕೆ ನಿದರ್ಶನವಿಲ್ಲ. ಆದರೆ ಗೋದೆ ಹಾಡಿರುವಳು. ಅದರಲ್ಲಿ ಅರ್ಥವಿರಲೇಬೇಕು. ಷಣ್ಮುಖ ಅಂದರೆ ಸುಬ್ರಹ್ಮಣ್ಯ, ಕಂದಸ್ವಾಮಿ ಎನ್ನಿಸಿಕೊಂಡವನು ತ್ರಿಪುರಾಸುರ ಮರ್ದನಕಾಲದಲ್ಲಿ ಉಪಯೋಗಿಸಿದ ಆಯುಧ ವೇಲಾಯುಧ. ವೈಷ್ಣವ ಸಂಪ್ರದಾಯದಂತೆ ಈ ವೇಲಾಯುಧದಲ್ಲಿ ವಿಷ್ಣುಶಕ್ತಿಯು ಆವಾಹಿತವಾದಮೇಲೆಯೇ ಅಸುರರೆಲ್ಲರೂ ಸಾಯುವಂತಾಯಿತು. ಅದನ್ನು ನೆನೆಸಿಕೊಂಡು ಹೀಗೆ ಹೇಳಿರಬಹುದು. ಅಥವಾ

ಝುಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ।
ಅಧಿಕಂ ಮೇನಿರೇ ವಿಷ್ಣುಂ ದೇವಾಸ್ಸರ್ಷಿಗಣಾಸ್ತಥಾ ॥

—ರಾ–ಬಾ. 75–19–20

ಎಂದು ರಾಮಾಯಣದಲ್ಲಿ ಹೇಳಿರುವಂತೆ ವೇಲಾಯುಧದಿಂದ ಷಣ್ಮುಖನು ಜಯಶೀಲನಾದುದು ವಿಷ್ಣುಬಲದಿಂದ ಎಂದು ತಿಳಿಸಲು ಹೀಗೆ ಹೇಳಿರಬಹುದು. ಇದು

ಕೊನೆಯ ಮಂಗಳಾಶಾಸನವಾದುದರಿಂದ ಈ ಅರ್ಥವೇ ಸಮಂಜಸವಾಗಿ ಕಾಣುತ್ತದೆ.

ಎನ್ರೆನ್ರುಂ ಶೇವಕಮೇ ಏತ್ತಿ ಪರೈ ಕೊಳ್ವಾಂ—ಹೀಗೇ ನಿನ್ನ ಪರಾಕ್ರಮವನ್ನೇ ಸ್ತುತಿಸಿ ನಾವು ನಮ್ಮ ಇಷ್ಟಾರ್ಥವನ್ನು ಹೊಂದಲು

ಇನ್ರು ಯಾಂ ವಂದೋಂ—ಇಂದು ನಾವು ಬಂದಿರುವೆವು.

ಇರಂಗು—ಕೃಪೆಮಾಡು—**ಏಲೋರೆಂಪಾವಾಯ್.**

ಸ್ವಾಪದೇಶ

ಅನ್ರು . . . ಪೋತ್ತಿ—ಅದು ಉಪದೇಶ ಕೊಡುವಾಗ, ಪ್ರಪಂಚ, ಚಿತ್ತು ಮತ್ತು ಅಚಿತ್ತಿನಿಂದ ಕೂಡಿ ಅಳತೆಗೆ ಒಳಪಟ್ಟು (ಪರಿಚ್ಛಿನ್ನವಾಗಿ) ಇದೆ ಎಂದು ನಿನ್ನ ಜ್ಞಾನದಿಂದ, ಆತ್ಮಜ್ಞಾನದಿಂದ ಅಳೆದು, ಅಂತಹ ಪ್ರಪಂಚವು ಪರಮಾತ್ಮನಿಗೆ ಸೇರಿದ್ದೆಂದು ಪರಮಾತ್ಮನಲ್ಲಿ ನಿನಗಿರುವ ಭಕ್ತಿಯಿಂದ ಅಳೆದ ಆಚಾರ್ಯ, ಆ ನಿನ್ನ ಎರಡು ಪಾದಗಳಿಗೆ ಮಂಗಳವಾಗಲಿ; ನೀನು ಭಗವಂತನ ಜ್ಞಾನ–ಭಕ್ತಿಯೆನ್ನುವ ಎರಡು ಪಾದ; ನಾವು ನಿನ್ನನ್ನು ಆಶ್ರಯಿಸಿ ನಿನ್ನ ಪಾದವಾಗಿರುವೆವು; ನಮಗಾಗಿ ನಿನ್ನ ಪಾದ ಶಾಶ್ವತವಾಗಿರಲಿ.

ಪ್ರಪಂಚವು ಎಲ್ಲಿಯುಳ್ಳದ್ದು; ಪರಮಾತ್ಮ ಎಲ್ಲಿ ಇಲ್ಲದವ; ಆದ್ದರಿಂದ ಪರಮಾತ್ಮನೇ ಪ್ರಪಂಚವಾಗಿರುವನು; ಪ್ರಪಂಚವೇ ಪರಮಾತ್ಮನೆನ್ನುವುದು ತಪ್ಪಾಗುವುದು. ಭೃ–ಉಪನಿಷತ್ತು ಇದನ್ನು ಮೂರುಕಡೆ ನಿಶ್ಚಯಿಸಿದೆ.

1) ಅಥಾತ ಆದೇಶಃ, ನೇತಿ ನೇತಿ; ನಹ್ಯೇತಸ್ಮಾದಿತಿ; ನೇತ್ಯನ್ಯತ್ ಪರಮಸ್ತಿ; ಅಥ ನಾಮಧೇಯಂ; ಸತ್ಯಸ್ಯ ಸತ್ಯಂ ಇತಿ; ಪ್ರಾಣಾವೈ ಸತ್ಯಂ ತೇಷಾಮೇವ ಸತ್ಯಂ—**IV, 3, 6 "ನೇತಿ ನೇತಿ"**

ಎಂದರೆ **"ನ ಇತಿ ನ ಇತಿ"–ಇಮುತ್ತಾ ಪ್ರಕಾರ ಮೇವ ನ; "ಅಥ"**–ಹಿಂದೆ ಮೂರ್ತಾಮೂರ್ತ ಬ್ರಹ್ಮ ವಿಚಾರಾನಂತರ ಅಂದರೆ ಮೂರ್ತ ರೂಪದಲ್ಲೂ ಅಮೂರ್ತರೂಪದಲ್ಲೂ ಇರುವ ವಿಶ್ವಾತ್ಮಕ ಬ್ರಹ್ಮ ವಿಚಾರಾನಂತರ, ಆ ಬ್ರಹ್ಮವಸ್ತುವು ಪರಿಚ್ಛಿನ್ನವಾದ ವಿಶ್ವಾಕಾರದಲ್ಲಿರುವುದು ಮಾತ್ರವಲ್ಲ; ಇತಿ–ಇಷ್ಟೆ, ನ–ಅಲ್ಲ; ಪ್ರಪಂಚವು ಸತ್ಯ; ಅದರಲ್ಲಿರುವ ಜೀವತತ್ವವೂ ಸತ್ಯ; ಈ ಸತ್ಯವಸ್ತುವಿಗಿಂತಲೂ ಸತ್ಯವಾದುದು ಪರಮಾತ್ಮ.

2) ಮತ್ತೆ V, 9, 26ರಲ್ಲಿ, ಶಾಕಲ್ಯರೊಡನೆ ಸಂವಾದ ಮಾಡುವಾಗ ಯಾಜ್ಞವಲ್ಕ್ಯರು ಹೇಳಿದ್ದು–

ಸ ಏಷಃ ನೇರೆನೇತೀತ್ಯಾತ್ಮಾ ಅಗೃಹ್ಯೋ ನ ಗೃಹ್ಯತೇ, ಅಶೀರ್ಯೋ ನ ಹಿ ಶೀರ್ಯತೇ; ಅಸಂಗೋ ನ ಸಜ್ಜತೇ, ಅಸಿತೋ ನ ವ್ಯಥತೇ ನ ರಿಷ್ಯತಿ

ಎಷ್ಟು ದೇವತೆಗಳಿರುವರೆನ್ನುವ ಪ್ರಶ್ನೆಯಿಂದ ಪ್ರಾರಂಭವಾದ ಈ ಸಂವಾದವು ಈ ಮಾತಿನಿಂದ ಮುಗಿದಿದೆ. ಪ್ರಪಂಚದ **ಎಲ್ಲಾ** ವಸ್ತುಗಳಿಗೂ ದೇವತಾದಿಗಳಿಗೂ ಸಮಾನ ಪ್ರತಿಷ್ಠೆ ಆಧಾರ ಭೂತನಾಗಿ, ವಿಶ್ವಾತೀತನಾಗುವ ಪರಮಾತ್ಮನೇ ಬ್ರಹ್ಮ.

3) VI, 4, 22ರಲ್ಲಿಯೂ "ನೇತಿ ನೇತಿ" ಎನ್ನುವುದಕ್ಕೆ ಈ ಯರ್ಥವೇ ಬರುತ್ತದೆ.

ವೇದದಲ್ಲಿರುವುದು "ನ ಇತಿ ನ ಇತಿ" ಎಂದು; "ನೇದಮಿತಿ ನೇದಮಿತಿ" ಎಂದಲ್ಲ. **ಈ** ವಿಷಯವನ್ನು ಚೆನ್ನಾಗಿ ಅಳೆದು ತೋರಿಸಿದವನು ಆಚಾರ್ಯ; ಅವನ ಪಾದಕ್ಕೆ ಮಂಗಳವಾಗಲಿ.

ಶೆನ್ರುಂಗು . . .–12ನೇ ಪಾಶುರದಲ್ಲಿ ಹೇಳಿದಂತೆ ಲಂಕೆ ನಮ್ಮ ಶರೀರ; ಹತ್ತು ಇಂದ್ರಿಯಗಳು ಎನ್ನುವ ತಲೆಗಳುಳ್ಳ ಮನಸ್ಸೇ ರಾವಣ–**ಈ** ಹತ್ತು ಇಂದ್ರಿಯಗಳು ಮತ್ತು ಮನಸ್ಸು ಶರೀರಕ್ಕೆ ಆಧೀನವಾಗಿ ಸಂಸಾರದಲ್ಲಿ **ನಾವು** ಮುಳಿಗಿರುವಂತೆ ಮಾಡಿದೆ. ಹಾಗಿರುವುದನ್ನು ನಾಶಮಾಡಿ ಶರೀರವನ್ನು ಬಿಟ್ಟು ಮೋಕ್ಷಹೊಂದಲು ನಮಗೆ ಶರಣುವಾಗಿರುವನುಆಚಾರ್ಯ. ಅವನ ಪಾದಾರವಿಂದವನ್ನು ಆಶ್ರಯಿಸುವುದೇ ನಮಗೆ ಶ್ರೇಯಸ್ಸು, ಅದಕ್ಕೆ ಮಂಗಳವಾಗಲಿ.

ಪೊನ್ನ . . . ಪೋತ್ತಿ—ಶಕಟವೆಂದರೆ ಮನೋರಥ; ಅದರ ಎರಡು ಚಕ್ರ ಅಹಂಕಾರ ಮಮಕಾರ; ಅವನ್ನು ಅದನ್ನೂ ನಾಶಮಾಡಿದವನು ಆಚಾರ್ಯ—ಆಸಾಮರ್ಥ್ಯಕ್ಕೆ ಮಂಗಳವಾಗಲಿ.

ಕನ್ರು . . . ಪೋತ್ತಿ—ಪರಕೀಯರು ಹೇಳುವ ಪ್ರಮಾಣಗಳಿಂದಲೇ ಅವರನ್ನು ಜಯಿಸಬಲ್ಲವನು; ಅವನ ಪಾದಕ್ಕೆ ಜಯ.

ಕುನ್ರು . . . ಪೋತ್ತಿ—ವೇದವೇ ಬೆಟ್ಟ; ವಿವೇಕವೇ ಮೇಘ–ಛತ್ರ. ವೇದ ಪ್ರಮಾಣದಿಂದ ಎಲ್ಲರನ್ನೂ ತನ್ನವಶಮಾಡಿಕೊಂಡು ಬೆಳಗುವ ನಿನ್ನ ಕೀರ್ತಿಗೆ ಜಯವಾಗಲಿ

ವೆನ್ರು . . . ಪೋತ್ತಿ—ರಾಮಾನುಜರು ಯಾದವಪ್ರಕಾಶ ಮೊದಲಾದವರ ದ್ವೇಷವನ್ನು ಹೋಗಲಾಡಿಸಿದಂತೆ, ಪರಪಕ್ಷದವರ ದ್ವೇಷವನ್ನು ಹೋಗಲಾಡಿಸುವ ವೇಲಾಯುಧದಂತೆ ಇರುವ ಆಚಾರ್ಯನಂಥ ನಿನ್ನಬುದ್ಧಿಗೆ ಜಯವಾಗಲಿ.

ಎನ್ರೆನ್ರು . . . ಇರಂಗು—ಏಲೋರೆಂಪಾವಾಯ್.

ಗೋದೆಯು, "**ಅಪ್ಪೋದೈಕ್ಕು ಇಪ್ಪೋದೇ ಶೂಲ್ಲಿ ವೈತ್ತೇ೯; ಉನ್ನೈ ಕ್ಕೊಂಡು ಎನ್ನುಳ್ ವೈತ್ತೇ೯, ಎನ್ನೈಯುಂ ಉನ್ನಿಲ್ ವೈತ್ತೇ೯**" ಎಂದು ತನ್ನ ತಂದೆಯು ಹಾಡಿದಂತೆ ಭಕ್ತಿತುಂಬಿದ ಹೃದಯದಲ್ಲಿ ಐದು ಮುಖದ ವೇದಾಂತ ದೀಪ ಹಚ್ಚಿದಳು. ಮೊದಲಿನ 20 ಪದ್ಯಗಳಲ್ಲಿ. ಕೃಷ್ಣಪ್ರೇಮ ಚಿಲುಮೆಯಿಂದ ಅದಕ್ಕೆ ಧಾರೆಕೊಟ್ಟು ನಂದಾದೀಪವಾಗಿಸಿದಳದನ್ನು 21 ರಲ್ಲಿ, ಆ ಬೆಳಕನಲಿ ಕೃಷ್ಣನ ಮನಮೋಹಕ ಕಡೆನೋಟವನ್ನು ಕೇಳಿ ಕಂಡು ಸವಿದಳು. 22 ರಲ್ಲಿ "ಯದು ಸಿಂಹ, ನರಸಿಂಹನಂತೆ ನಡೆದು ಬಾ ಸಿಂಹಾಸನಕ್ಕೆ ನಮ್ಮ ಮನ ತೋಡಿ ಕೊಳ್ಳುವೆವೆಂದಳು 23ರಲ್ಲಿ. ಹಾಡಿದಳವಳಿಗೆ ಮಂಗಳವ 24ರಲ್ಲಿ. ಮಂಗಳ ಕೋರು ವಳೀಗ ತಮಗೆ 25ರಲ್ಲಿ. ತಂದೆ ಕೃಷ್ಣನನ್ನು "**ಶೋರಾದಕಾದಿಲ್ ಪೆರುಂ ಶುಳ್ಳಿಪ್ಪು**" ಎಂದರು. ಇವಳು ಒಂದು ಮಾತಿನಲ್ಲಿ "ನೆಡುಮಾಲೇ" ಎನ್ನುವಳಿಲ್ಲಿ.

ಒರುತ್ತಿ ಮಗನಾಯ್ ಪಿರಂದು ಓರಿರವಿಲ್
ಒರುತ್ತಿ ಮಗನಾಯ್ ಒಳಿತ್ತು ವಳರ
ತರಿಕ್ಕಿಲಾನಾಕಿ ತ್ತಾ ತೀಂಗು ನಿನ್ನೈಂಕ
ಕರುತ್ತೈ ಪ್ಪಿರ್ಳ್ಳಪ್ಪಿತ್ತು ಕ್ಕಂಜ್ಞ ವಯತ್ತಿಲ್
ನೆರುಪ್ಪೆನ್ನ ನಿನ್ರ ನೆಡುಮಾಲೇ ಮುನ್ನೈ
ಅರುತ್ತಿತ್ತಿ ವಂದೋಂ ಪರೈ ತರುದಿಮಾಕಿಲ್
ತಿರುತ್ತಕ್ಕ ಶೆಲ್ವಮುಂ ಶೇವಕಮುಂ ಮಾಂ ಪಾಡಿ
ವರುತ್ತಮಂ ತೀರ್ನ್ದ ಮಕಿಳ್ಂದು—ಏಲೋರೆಂಪಾವಾಯ್ ॥ ೨೫ ॥

ಒರುತ್ತಿಮಗನಾಯ್ ಪಿರಂದು—ಒಬ್ಬಳ ಮಗನಾಗಿ ಹುಟ್ಟ
ಓರಿರವಿಲ್—ಒಂದು ರಾತ್ರಿಯಲ್ಲಿ
ಒರುತ್ತಿ ಮಗನಾಯ್ಒಳಿತ್ತು ವಳರ—ಮತ್ತೊಬ್ಬಳ ಮಗನಾಗಿ ಗುಪ್ತ ನಾಗಿ ಬೆಳೆಯುತ್ತಿರಲು
ತರಿಕ್ಕಿಲಾನಾಕಿ—ಥರಿಸಲು ಸಮರ್ಥನಾಗದೆ, ತ್ತಾ—ತಾನು
ತೀಂಗು ನಿನ್ನೈತ್ತ ಕರುತ್ತೈ ಪ್ಪಿರ್ಳ್ಳಪ್ಪಿತ್ತು—ಕೆಟ್ಟದ್ದನ್ನು ಬಯಸಿದ ಅಭಿಪ್ರಾಯವನ್ನು ಸುಳ್ಳಾಗಿಸಿ, ಆ
ಕಂಜ್ಞ ವಯತ್ತಿಲ್—ಕಂಸನ ಉದರದಲ್ಲಿ
ನರುಪ್ಪೆನ್ನ ನಿನ್ನ—ಬೆಂಕಿಯಂತೆ ನಿಂತ
ನೆಡುಮಾಲೇ—ವ್ಯಾಮೋಹಶಾಲಿಯೇ, ಉನ್ನೈ—ನಿನ್ನನ್ನು
ಅರುತ್ತಿತ್ತಿ ವಂದೋಂ—ಪ್ರಾರ್ಥಿಸಲು ಬಂದೆವು.

ಈ ಪದ್ಯದ ಅರ್ಥವು "ನೆಡುಮಾಲೇ" ಎನ್ನುವ ಸಂಬೋಧನೆಯಲ್ಲಿ ಅಡಗಿರುವ ರಸಮಯ ಭಾವದಲ್ಲಿ ತೋಯ್ದಿದೆ. "**ಮಾಲೆ**" ಎಂದರೆ "ಪ್ರೇಮಮಯನೆ." "ಪ್ರೇಮವನ್ನು ನಿನ್ನ ಸ್ವರೂಪವೆನ್ನಲೇ," ಎಂದರು. ಸಂಸ್ಕೃತದಲ್ಲಿ "ಸತ್ಯ" ಪದವಿರುವಂತೆ ತಮಿಳಿನಲ್ಲಿ "ನೆಡು" ಪದ. "**ಮಾಲ್**" ಎಂದರೆ (1) ಈಶ್ವರ, (2) ಪ್ರಕಾರ ಅಥವಾ ಸ್ವಭಾವ (3) ಪ್ರಭು (4) ಪ್ರೇಮ (5) ವ್ಯಾಮೋಹ. ನಿನ್ನನ್ನು ಈಶ್ವರನೆನ್ನಲೇ, ನನ್ನ ಸ್ವಾಮಿ ಎನ್ನಲೇ, ಪ್ರೇಮಮಯನೆನ್ನಲೇ, ಪ್ರೇಮವೇ ನಿನ್ನ ಸ್ವಭಾವವೆನ್ನಲೇ ಅಥವಾ ನಮ್ಮಲ್ಲಿ ಮೋಹಗೊಂಡವನೆನ್ನಲೇ" ಎನ್ನುವುದು ಅವಳ ಹೃದಯದ ಆಳ.

ಶಠಗೋಪರು "ನೀಯಲ್ಲೈಯೆ ತಿರುಪೂವಾಯ್ . . . ಎ೯ ನೆಡುಮಾಲಾರ್ಕ್ಕು" (ತಿ. ಮೊ. I 4, 8) ಎಂದು ಇವನನ್ನು ಕರೆದಾಗ "ನನ್ನಿಂದ ದೂರನಾಗಿರುವ ಪ್ರೇಮಮಯನೇ" ಎಂದರು; "ಆದರೆ ಅವನು ತಿರುಮಾಲ್, ಲಕ್ಷ್ಮಿಯಲ್ಲಿ ಮೋಹಗೊಂಡವನು" ಎಂದು ತಿಳಿದೇ (I, 4, 7) ಹಾಗೆ ತಿಳಿದರು. ಯೋಚಿಸಿದರು "ಹೌದು, ಇವನು ತಿರುಮಾಲಾದರೂ ನೆಡುಮಾಲ್ ಆಗಿರುವುದಕ್ಕೆ ಕಾರಣ ವಿರಬೇಕು. ಭಕ್ತರಲ್ಲಿ ಮೋಹವುಳ್ಳವನು; ಪ್ರೇಮವಿಲ್ಲದವರಿಗೆ ದೂರನು "ಶಾರ್ನ್ದ ಇರುವಲ್ವಿನ್ನೈಶರಿತ್ತು . . . ನೆಡುಮಾಲೇ" ಎಂದು ಹಾಡಿದರು. (I, 5, 10.) "ಇವನು ಪ್ರೇಮಮಯನೇನೋ ಅಹುದು. ಅವನಲ್ಲಿ ದೋಷವಿಲ್ಲ. ಹಾಗೆ ಅವನನ್ನು ನಾವು ಕಾಣದಿರುವುದು ನಮ್ಮ ದೋಷದಿಂದ. ಪ್ರೇಮ ಪ್ರವಾಹಕ್ಕೆ ಕಡೆಗಟ್ಟಿರುವರು ನಾವು. ನಾನು ನನ್ನದೆನ್ನುವುದನ್ನು ತೊರೆದು ತೋಡಿಕೊಂಡರೆ ತೋರಿಕೊಳ್ಳುವನು ತಾನೇ" ಎಂದು ನಿಶ್ಚಯಿಸಿ ಹಾಡಿದರು "ಮಾಲ್ ಶೆಯ್ಗಿನ್ರ ಮಾಲ್ ಆರ್ ಕಾಣ್ಬಾರೇ (II, 8, 7)" ಎಂದು. ಸತ್ಯಸಂಕಲ್ಪನಾಗಿರುವಂತೆ ಸತ್ಯಕಾಮನೂ ಆಗಿರುವನು. ಸತ್ಯಕಾಮನೇ ನೆಡುಮಾಲ್. ಪ್ರಪನ್ನರಾಗಿ ಭಕ್ತರಾದವರಿಗೆ ಸುಲಭನೂ ಇತರರಿಗೆ ದುರ್ಲಭನೂ ಆದವನೇ ನೆಡುಮಾಲ್. (ತಿ. ಮೊ I, 3, 1.) ಈ ಅರ್ಥದಲ್ಲೇ ಕೃಷ್ಣನನ್ನು "ನೆಡುಮಾಲೇ" ಎಂದು ಕರೆದಳು.

ಇವಳ ಹೃದಯ ತಿಳಿದೇ ಆಚಾರ್ಯರು ಇದರರ್ಥವನ್ನು ಹೇಳುವಾಗ "**ಈಶ್ವರನುಡೈಯ ಜ್ಞಾನಶಕ್ತ್ಯಾದಿಗಳುಕ್ಕು ರಕ್ಷಣಾರ್ಥತ್ವಮೇ ಸ್ವಾಭಾವಿಕಾಕಾರಂ; ನಿಗ್ರಹಹೇತುತ್ವಂ ಔಪಾಧಿಕಂ**" ಎಂದಿರುವರು. ತನ್ನಲ್ಲಿ ನಮ್ಮನ್ನು ಪ್ರೇಮದಿಂದ ಕೂಡಿಸಿಕೊಳ್ಳುವುದೇ ರಕ್ಷಣೆ; ಅದಕ್ಕಾಗಿಯೇ ಅವನಲ್ಲಿ ಜ್ಞಾನ ಮೊದಲಾದ ಆರು ಗುಣಗಳಿವೆ; ಹಾಗೆ ಅವನು ಮಾಡದಿರುವುವಂತೆಯೂ, ನಮ್ಮನ್ನು ನಿಗ್ರಹಮಾಡುತ್ತಿರುವಂತೆಯೂ, ನಾವು ಕಾಣುವುದು ನಮ್ಮಲ್ಲಿರುವ ದೋಷದಿಂದ. ಅದೇ ತಡೆಗಟ್ಟಿರುವುದು; ಆ ತಡೆಯೇ ಉಪಾಧಿ.

"ನಮ್ಮಿಂದ ಯಾವ ತಡೆಯೂ ಇಲ್ಲ; ನೀನು ಪ್ರಸನ್ನನಾಗಲೇ ಬೇಕು. ನೀನು ನೆಡುಮಾಲ್ ಮರೆಯಬೇಡ" ಎಂದು ಜ್ಞಾನ ತುಂಬಿದ ಪ್ರೇಮದಿಂದ ಕರೆದ ನಾಮವಿದು.

ಒರುತ್ತಿ ಮಗನಾಯ್ ಪಿರಂದು—ಅದ್ವಿತೀಯಳಾದ ದೇವಕಿಗೆ ಮಗಳಾಗಿ ಹುಟ್ಟಿ; ದೇವಕಿಗೆ ಎಣೆಯಿಲ್ಲ; ಇವಳು ಮೊದಲು ಸ್ವಾಯಂಭುವ ಮನುವಿನ ಮಡದಿ; ಗಂಡನೊಡನೆ ಮಕ್ಕಳಿಗಾಗಿ ಹನ್ನೆರಡುಸಾವಿರ ವರ್ಷ ಕಡು ತಪಸ್ಸುಮಾಡಿದಳು. ಪರಮಾತ್ಮ ತೋರಿಕೊಂಡು "ಏನುಬೇಕು" ಎಂದು ಕೇಳಿದ "ಮಾದೃಶೋ ವಾಂ ವೃತಃ ಸುತಃ" ಎಂದು ಕೃಷ್ಣನೇ ಹೇಳಿದಂತೆ ಅವನನ್ನೇ ಅವನಂತಿರುವವನನ್ನೇ ಯಾಚಿಸಿದಳು ಮಗನನ್ನಾಗಿ. ಅವನೇ ಆದ ಮಗನಾಗಿ. ಬೇಕು ಬೇಕು ಬೇಕೆಂದು ಮೂರುಸಲ ಕೇಳಿದ್ದಳು. ಅದಕ್ಕಾಗಿ ಎರಡನೆಯಾವರ್ತಿ ಅವಳು ಅದಿತಿಯಾಗಿದ್ದಾಗ ವಾಮನನಾಗಿ ಅವಳ ಮಗನಾದ. ಈಗ ಇವಳು ದೇವಕಿ. ಕೃಷ್ಣನಾಗಿ ತೋರಿಕೊಂಡ. ಅದ್ವಿತೀಯಳಿವಳು. ವೇದವೂ ಅವಳನ್ನು ಕೃಷ್ಣನೊಡನೆ ನೆನೆಯುತ್ತಿದೆ. "ಬ್ರಹ್ಮಣ್ಯೋ ದೇವಕೀಪುತ್ರೋ ಬ್ರಹ್ಮಣ್ಯೋ ಮಧುಸೂದನೋಂ" ಎಂದು ಸಾರುತ್ತಿದೆ. ಶಿಶುವಾಗಿ ಹುಟ್ಟಲಿಲ್ಲ; ಮಗನಾಗಿಯೇ ಹುಟ್ಟಿದ. ರಾಮನು ಕೌಸಲ್ಯೆಗೆ ಶಿಶುವಾಗಿ ಹುಟ್ಟಿ ಮಗನಾಗಿ ಸೇವೆಮಾಡಿದ; ಹುಟ್ಟುವಾಗಲೇ ತಾಯಿ ದೇವಕಿಗೆ ಸೇವೆ ಮಾಡಿದ ಕೃಷ್ಣ. "ಯದಿ ಕಂಸಾತ್ ಬಿಭೇಷಿ ತ್ವಂ ತರ್ಹಿ ಮಾಂ ಗೋಕುಲಂ ನಯ" ಎಂದು ಹೇಳಿ ಭಯ ತಪ್ಪಿಸಿದ. ಅಂತಹ ಮಗನನ್ನು ಹಡೆದವಳು ಅದ್ವಿತೀಯಳು.

ಓರ್ ಇರವಿಲ್—ರಾತ್ರಿಯೂ ಎಣೆಯಿಲ್ಲದ್ದು. ಅದರ ವರ್ಣನೆ ಭಾಗವತ X, 3 ಅಧ್ಯಾಯದಲ್ಲಿದೆ.

ಅಥ ಸರ್ವಗುಣೋಪೇತಃ ಕಾಲಃ ಪರಮಶೋಭನಃ ।
ಯರ್ಹ್ಯೇವಾಜನಜನ್ಮರ್ಕ್ಷಂ ಶಾಂತರ್ಕಗ್ರಹತಾರಕಂ ॥
ದಿಶಃ ಪ್ರಸೆದುರ್ಗಗನಂ ನಿರ್ಮಲೋಡುಗಣೋದಯಂ ।
ಮಹೀ ಮಂಗಳಭೂಯಿಷ್ಠ ಪುರಗ್ರಾಮವ್ರಜಾಕರಾ ॥
ನದ್ಯಃ ಪ್ರಸನ್ನಸಲಿಲಾ ಹ್ರದಾ ಜಲರುಹಶ್ರಿಯಃ ।
ದ್ವಿಜಾತಿಕುಲಸನ್ನಾದಸ್ತಬಕಾ ವನರಾಜಯಃ ॥
ವಪಾ ವಾಯುಃ ಸುಖಸ್ಪರ್ಶಃ ಪುಣ್ಯಗಂಧವಹಃ ಶುಚಿಃ ।
ಅಗ್ನಯಶ್ಚ ದ್ವಿಜಾತೀನಾಂ ಶಾಂತಾಸ್ತತ್ರ ಸಮೇಧಿತಾಃ ॥
ಮನಾಂಸ್ಯಾಸನ್ ಪ್ರಸನ್ನಾನಿ ಸಾಧೂನಾಮಸುರದ್ರುಹಾಂ ।
ಜಾಯಮಾನೇಽಜನೇ ತಸ್ಮಿನ್ ನೆದುರ್ದುಂದುಭಯೋ ದಿವಿ ॥

ಮುಮುಚುರ್ಮುನಯೋ ದೇವಾಃ ಸುಮನಾಂಸಿ ಮುದಾನ್ವಿತಾಃ ।
ಮಂದಂ ಮಂದಂ ಜಲಧರಾಃ ಜಗರ್ಜುರನುಸಾಗರಂ ॥
ನಿಶೀಥೇ ತಮ ಉದ್ಭೂತೇ ಜಾಯಮಾನೇ ಜನಾರ್ದನೇ ।
ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಸ್ಸರ್ವಗುಹಾಶಯಃ ॥
ಆವಿರಾಸೀದ್ಯಥಾಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ ।

ಒರುತ್ತಿ ಮಗನಾಯ್ ಒಳಿತ್ತು ವಳರ—ಮತ್ತೊಬ್ಬಳಾದ ಯಶೋದೆಗೆ ಮಗನಲ್ಲದಿದ್ದರು ಮಗನೆಂದೇ ನಂಬುವಂತೆ ತೋರಿಕೊಂಡು ಗುಪ್ತನಾಗಿ ಬೆಳೆದ; ಹೆತ್ತವಳೂ ಅನುಪಮಳು; ರಾತ್ರಿಯೂ ಅನುಪಮ; ಸಲಹಿದವಳು ಅನುಪಮಳು, ಕೌಸಲ್ಯೆಯೂ ಪರಮಾತ್ಮನನ್ನು ಹೆತ್ತಳು. ಆದರೆ ಅನುಪಮಳಲ್ಲ. ಲೋಕಪ್ರಿಯ ಕ್ಷತ್ರಿಯೋತ್ತಮ ಮಗ ಬೇಕಿತ್ತು ಅವಳಿಗೆ. ಸೀತೆಯನ್ನಾದರೂ ತ್ಯಜಿಸೇನು ಜನ ವಿರುದ್ಧ ನಡೆಯಲಾರೆನೆಂದ ರಾಮ. ಹಾಗೆಯೇ ಬಿಟ್ಟ—ರಾಮದೂತ ಹನುಮಂತ ಸೀತೆಗೆ ಎಲ್ಲವನ್ನೂ ಅರುಹಿ "ಅಮ್ಮಾ,

ಬ್ರೂಹಿ ಯದ್ರಾಘವೋ ವಾಚ್ಯೋ ಲಕ್ಷ್ಮಣಶ್ಚ ಮಹಾ ಬಲಃ ।
ಸುಗ್ರೀವೋ ವಾಪಿ ತೇಜಸ್ವೀ ಹರಯೋ ವಾ ಸಮಾಗತಾಃ ॥

ರಾಮನಿಗೆ, ಲಕ್ಷ್ಮಣನಿಗೆ ಸುಗ್ರೀವ ಮತ್ತು ವಾನರರಿಗೆ ಏನು ಹೇಳಲಿ" ಎಂದು ಕೇಳಿದ. ಆಗ ಅವಳು

ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ ।
ತಂ ಮಮಾರ್ಥೇ ಸುಖಂ ಪೃಚ್ಛ ಶಿರಸಾ ಜಾಭಿವಾದಯ ॥

"ಆಂಜನೇಯ, ಕೌಸಲ್ಯೆ ಲೋಕ ಪ್ರಭುವಾಗಿರಬೇಕು ತನ್ನ ಮಗನೆಂದಪೇಕ್ಷಿಸಿದಳು (ಮನಸ್ವಿನೀ); ಅಂತಹವನಾಗಿಯೇ ಹೆತ್ತಳು ರಾಮನನ್ನು; ನಾನು ಅವನ ಹೆಂಡತಿಯೆನ್ನುವುದಕ್ಕಿಂತಲೂ ಒಬ್ಬ ಸಾಮಾನ್ಯ ಪ್ರಜೆಯೆಂದಿರುವುದರಲ್ಲಿ ಕ್ಷೇಮವಿದೆ. ನಿನ್ನ ಪ್ರಜೆ ಸೀತಾ ನಿನ್ನ ಸುಖವನ್ನಪೇಕ್ಷಿಸಿದಳೆಂದು ಕೇಳು. ಸಮಿಸಿದೆನೆಂದು ಹೇಳು" ಎಂದು ಹೇಳಿಕಳುಹಿದಳು. ಅಂತಹ ರಾಮನನ್ನು ಹಡೆದು ತಾನು ಸಂತೋಷಪಟ್ಟಳು ಕೌಸಲ್ಯೆ; ಕೃಷ್ಣ ಹಾಗಲ್ಲ. ಪರಮಾತ್ಮನಾಗಿಯೇ ಹುಟ್ಟಿದ.

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುಧಾಯುಧಂ ।
ಶ್ರೀವತ್ಸಲಕ್ಷ್ಮಂ ಗಳಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಂ ॥

ಮಹಾರ್ಹವೈಡೂರ್ಯಕಿರೀಟಕುಂಡಲ
ತ್ವಿಷಾಪರಿಷ್ವಕ್ತಸಹಸ್ರಕುಂತಲಂ ।
ಉದ್ದಾಮ ಕಾಂಚ್ಯಂಗದಕಂಕಣಾದಿಭಿಃ
ವಿರೋಚಮಾನಂ ವಸುದೇವ ಐಕ್ಷತ ॥

ಎಂದು ವ್ಯಾಸರು ಕಂಡರವನನ್ನು. "ಅಜಾಯಮಾನೋ ಬಹುಧಾ ವಿಜಾಯತೇ" ಎಂದು ಪುರುಷಸೂಕ್ತವು ಹೇಳುತ್ತಿರುವಂತೆ ಇವಳು "ಪಿರಂದು" ಎಂದಳು. "ಪಿರವಾದವರ್ ಪಿರಂದಾರ್; ಪಿರಂದೇ ಎನ್ನು ತಾನೇ ಪಿರಂದಾರ್; ಶೋಭನಂ ಶೊಲ್ಲಿಕ್ಕೊಂಡು ಪಿರಂದಾರ್" ಎಂದರು ಆಚಾರ್ಯರು. ದೇವಕಿಯ ಪುಣ್ಯ ಒಂದು ಯಶೋದೆಯ ಪುಣ್ಯ ಮತ್ತೊಂದು. "ಅವತಾರ ರಸಂ ಒರುತ್ತಿಕ್ಕು, ಲೀಲಾರಸಂ ಮತ್ತೊರುತ್ತಿಕ್ಕು" ಎಂದಳವಳು.

ಓರುತ್ತಿ . . . ಒರುತ್ತಿ—ಹಡೆದವಳ ಮತ್ತು ಸಲಹಿದವಳ ಹೆಸರು ಹೇಳಿದರೆ ಎಲ್ಲಿ ಕಂಸ ಬಂದುಬಿಡುವನೋ ಎನ್ನುವ ಭಾವ ಬಂಧದಲ್ಲಿ ಹೇಳಿದ ಮಾತೂ ಆಗಿರಬಹುದು. ಇವಳತಂದೆಯೂ ಹೀಗೆ "ನೀರಾಟ್ಟಂ" ಎನ್ನುವ ಪದ್ಯಗಳಲ್ಲಿ ಕೃಷ್ಣನನ್ನು ಕರೆಯುವಾಗ "ತಿರುವೋಣಂ ನೀ ಪಿರಂದನಾಳ್" ಎಂದರು. ಕೃಷ್ಣ ಹುಟ್ಟಿದ್ದು ರೋಹಿಣೀ ನಕ್ಷತ್ರ, ಈ ಕೃಷ್ಣ ಬೇರೆ ತನಗೆ ಬೇಕಾದ ಕೃಷ್ಣನಲ್ಲವೆಂದು ಕಂಸ ತಿಳಿಯಲೆನ್ನುವ ಮುಗ್ಧ ಹೃದಯವವರದು. ದ್ವಾಪರಯುಗದ ಕೃಷ್ಣ ಹುಟ್ಟಿದ ದಿನ ಶುಭದಿನ. "ಅಷ್ಟಮಿಾ ರೋಹಿಣೀ ಯುಕ್ತಾ ಜಯಂ ತೀತ್ಯಭಿಧೀಯತೇ" ಎಂದಿರುವಂತೆ ಅದು "ಜಯಂತೀ."

ತರಿಕ್ಕಲಾನಾಹಿ . . . ಪ್ಪಿತ್ತು—ಹಾಗೆ ಕೃಷ್ಣನು ಬೆಳೆಯುತ್ತಿರುವುದನ್ನು ಸಹಿಸಲಾರದೆ ಅವನಿಗೆ ಕೇಡುಬಯಸಿ ಮಾಡಿದ ಸನ್ನಾಹವೆಲ್ಲವನ್ನೂ ವಿಫಲಗೊಳಿಸಿದ ಮತ್ತು ಅವನ ಅಭಿಪ್ರಾಯವನ್ನು ಸುಳ್ಳಾಗಿಸಿದ. ಕಂಸ ಮೋಕ್ಷ ಹೊಂದಿದ. ಹಿಂದೆ ಇರುವೆಯ ರಾಜ ತಪಸ್ಸು ಮಾಡಿದನಂತೆ. ಪರಮಾತ್ಮ ಅವನಿಗೆ ಪ್ರತ್ಯಕ್ಷನಾದ. "ವರ ಕೇಳಿಕೋ" ಎಂದ. "ಕಡಿಚ್ಚರ್ವ ಶಾಹಣುಂ" ಎಂದು ಕೇಳಿತದು. "ತಥಾಸ್ತು" ಎಂದ ಪರಮಾತ್ಮ. ಅದರ ಅಭಿಪ್ರಾಯ ತಾನು ಕಚ್ಚುವವನು ಸಾಯಬೇಕೆಂದು. ಆದರೆ ಹೇಳಿದ್ದರ ಅರ್ಥ ಬೇರೆ. ಕಚ್ಚುವವನು ಸಾಯಬೇಕೆಂದು. ಹಾಗೆ ಕಂಸ "ಸಾಯಬೇಕು" ಎಂದ ತಾನು ಸತ್ತ.

ಪರೈತರುದಿಯಾಕಿಲ್—(ನಮ್ಮ) ಇಷ್ಟಾರ್ಥವನ್ನು ಕೊಡುವೆಯಾದರೆ—ಇಲ್ಲಿ ಗೋದೆಯ ಅಭಿಪ್ರಾಯವಿದು. ಕೃಷ್ಣ ಸಿಕ್ಕಿದಮೇಲೆ ಯಾವ ಪುರಷಾರ್ಥವೂ ಬೇಡ. ಏನು ಕೇಳಿದರೂ ತಾವು ಈಗ ಹೊಂದಿರುವುದಕ್ಕಿಂತಲೂ ಕಮ್ಮಿಯಾದುದೇ "ಕೇಳು" ಎಂದು ಅವನ ನಿರ್ಬಂಧ. "ಹಾಗಾದರೆ ಕೇಳುವೆವು" ಎಂದಳು.

ಇಲ್ಲಿ ಆಚಾರ್ಯರು ಪ್ರಸಂಗಕ್ಕೆ ಅನುಗುಣವಾದ ಸಾದೃಶ್ಯ ಕೊಡುವಾಗ "ಇಂಗೆ ಇವಳ್ ಕೆಟ್ಟುಯದು ಪೊನ್ನೈವಿತ್ತು ತವುಡು ವಾಂಗು ವಸು ಪೋಲ್ ಆಕಿರದು" ಎಂದಿರುವರು.

ತಿರುತ್ತಕ್ಕ ಚ್ಚೆಲ್ವಮುಂ ಶೇವಕಮುಂಯಾಂಪಾಡಿವರುತ್ತಮುಂ ತೀರ್ನ್ದುಮಕ್ಕುಂದು—ಶ್ರೀದೇವಿಗೆ ಯೋಗ್ಯವಾದ ಸಂಪ್ಪತ್ತನ್ನೂ, ಮತ್ತು ಪರಾಕ್ರಮವನ್ನೂ ನಾವು ಸಂಕೀರ್ತನಮಾಡಿ, ನಮ್ಮ ವ್ಯಸನವು ತೀರಿ, ಸಂತುಷ್ಟರಾಗುವಂತೆ ಮಾಡು—ಶ್ರೀದೇವಿಗೆ ಯೋಗ್ಯವಾದ ಸಂಪತ್ತು ಶ್ರಿಯಃಪತಿ. "ಕಃ ಶ್ರೀ ಶ್ರಿಯಃ ಪರಮಸತ್ವಸಮಾಶ್ರಯಃಕಃ" ಎಂದು ಯಾಮುನಾಚಾರ್ಯರು ಹೇಳಿರುವರು. ಅವಳ ಮಕ್ಕಳಾದ ಸಕಲ ಚೇತನರೂ ಅವಳಸಂಪತ್ತು. ಆದರೆ ಪರಮಾತ್ಮನಿಗೆ ಅವಿಧೇಯರಾಗಿ ಅಯೋಗ್ಯ ಮಕ್ಕಳಾಗಿರುವೆವು. ಅವಳಿಗೆ ಯೋಗ್ಯರಾಗುವಂತೆ ನಾವು ಆಗಬೇಕು. ಹಾಗೆ ನೀನು ಸಂಕಲ್ಪಿಸಬೇಕು. ನೀನು ದಯಾಮಯನಾಗಬೇಕು.

ಅನುಚರಶಕ್ತ್ಯಾದಿಗುಣಾಮುಗ್ರೇಸರ ಬೋದವಿರಚಿತಾಲೋಕಾಂ ।
ಸ್ವಾಧೀನವೃಷಗಿರೀಶಾಂ ಸ್ವಯಂಪ್ರಭೂತಾಂ ಪ್ರಮಾಣಯಾಮಿ ದಯಾಂ ॥

ಎಂದು ನಿಗಮಾಂತದೇಶಿಕರು (ದ–ಶ) "ಹೇಳಿರುವಂತೆ ನಿನ್ನ ಶಕ್ತಿಮೊದಲಾದ ಆರುವೆ ಗುಣಗಳು ನಿನ್ನ ಪರಾಕ್ರಮ, ಆವು ಇರುವುದು ನಿನ್ನ ದಯಾಗುಣ ನಮ್ಮಲ್ಲಿ ಪ್ರಯೋಜನವಾಗಲು. ಅದನ್ನೂ ನಾವು ಯಾವಾಗಲೂ ಹಾಡುವಂತೆಮಾಡು. ಪ್ರಹ್ಲಾದನಿಗಾಗಿ ನೀನು ನರಸಿಂಹನಾಗಿ ಹಿರಣ್ಯಕಶಿಪುವನ್ನು ಕೊಂದೆ. ಅವನನ್ನು ನಿನ್ನ ತೊಡೆಯಮೇಲೆ ಪ್ರೀತಿಯಿಂದ ಕೂಡಿಸಿಕೊಂಡು ಕೇಳಿದೆ" ನಿನಗೆ ಬೇಕಾದುದನ್ನು ಕೇಳಿಕೊ" ಎಂದು. ಅವನು ಕೇಳಿದ್ದು—

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ
ತ್ವಾಮನುಸ್ಮರತಸ್ಸಾಮೇ ವಿಷಯಾನ್ಮಾಪಸರ್ಪತು

"ದೇವ ಅವಿವೇಕಿಗಳ ಪ್ರೀತಿ ಶಬ್ದ ಸ್ಪರ್ಶಾದಿಸುಖಗಳೆಡೆ ಶಾಶ್ವತವಾಗಿ ನಿಂತಿವೆ. ನನ್ನಲ್ಲಿ ಪ್ರಿತಿಹಾಗಾಗದೆ ನಿನ್ನಲ್ಲೇ ನೆಲೆಸುವಂತೆ ಮಾಡು." ಎಂದು. ನಮ್ಮ ಪ್ರಾರ್ಥನೆಯೂ ಅದೇ. ಅವನಂತೆ ನಾವು ನಿನ್ನಲ್ಲಿ ಶರಣು ಹೋಗಿರುವೆವು. ನಿನ್ನನ್ನು ಬಿಟ್ಟಿರಲಾರದ ಪ್ರಿತಿಯುಳ್ಳವರು. ಶ್ರೀದೇವಿಯು ನಮ್ಮನ್ನು ಯೋಗ್ಯರನ್ನಾಗಿ ಮಾಡಿರುವಳು. ನಮ್ಮಲ್ಲಿ ವಾತ್ಸಲ್ಯವು ನಿನ್ನಲ್ಲಿ ವಾಲ್ಲಭ್ಯವೂ ಇದೆ ಅವಳಿಗೆ. ಇದು ಯಾವತ್ತಿಗೂ ವ್ಯತ್ಯಾಸವಾಗದಿರಲಿ. ನಮಗಾಗಲ್ಲವೇ ನಿನ್ನ ಪರಾಕ್ರಮ. ಅದೂ ಶಾಶ್ವತವಾಗಿದ್ದು ನಮಗೆ ಮಂಗಳವನ್ನೆ ಉಂಟು ಮಾಡುತ್ತಿರಲಿ. ನಾವು ಶಾಶ್ವತವಾಗಿ ಆನಂದದಿಂದಿರುವಂತಾಗಲಿ." ಎಂದಳು.

ಹೀಗೆ 21–25 ಪದ್ಯಗಳಲ್ಲಿ ಮೂಲಮಂತ್ರದಲ್ಲಿ ಎರಡನೇ ಪದವಾದ " ನಮಃ " ಎನ್ನುವುದರ ಅರ್ಥವು ವಿವರಿಸಲ್ಪಟ್ಟಿದೆ. ಪರಮಾತ್ಮನಲ್ಲದೆ ನಮ್ಮದೆನ್ನುವುದು ಯಾವುವೂ ಇಲ್ಲ. ಅವನೇ ಸರ್ವಸ್ವ ನಮಗೆ. ನಮ್ಮನ್ನು ಅವನಿಗೆ ಒಪ್ಪಿಸಿದ ಶ್ರೀದೇವಿಗೂ ಅವನೇ ಸರ್ವಸ್ವ. ಆವಳೂ ನಮಗೆ ಸರ್ವಸ್ವ. ಆವರಿಬ್ಬರಿಂದಲೇ ನಮಗೆ ಆನಂದ. ಇದೇ ಸಾರಾರ್ಥ.

ಸ್ವಾಪದೇಶ

ಒರುತ್ತಿ ಮಗನಾಯ್ ಪಿರಂದು–ಪ್ರಕೃತಿ ಮಂಡಲದಲ್ಲಿ ಹುಟ್ಟಿ, **ಓರ್ ಇರಿವಿಲ್**– ಒಂದು, ಅದ್ವಿತೀಯವಾದ, ಅಗಾಧವಾದ, ಅನಾದಿವಾಸನಾ ಚಕ್ರದಲ್ಲಿ, **ಒರುತ್ತಿ ಮಗನಾಯ್ ಒಳಿತ್ತು ವಳರ**–ತನ್ನ ಜ್ಞಾನಾನಂದ ಸ್ವರೂಪವನ್ನು ತಿಳಿಯದೇ ಬೆಳೆಯುತ್ತಿರಲು, ತರಿಕ್ಕಿಲಾನಾಕಿ–ಸಹಿಸಲಾಗದೆ, ತಾ ತೀಂಗು ನಿನ್ನೆಂದ ಕರುತ್ತೈ–ಪ್ರಪಂಚವು ನನ್ನದೆನ್ನುವ ಕೆಟ್ಟ ಅಭಿಸಂಧಿಯನ್ನು, ಪಿಣಂಪ್ಪಿತ್ತು –ಸುಳ್ಳಾಗಿಸಿ, ಕಂಜ್ಞವಯತ್ತಿಲ್–ಮಹಾಮೋಹವೆಂಬ ಕಂಸನ ಹೃದಯದಲ್ಲಿ, ನೆರುಪ್ಪೆನ್ನ ನಿನ್ನ ಬೆಂಕಿಯಂತೆ ಜ್ಞಾನ ಸ್ವರೂಪನಾಗಿ ನಿಂತ, ನೆಡುಮಾಲೇ–ಶಿಷ್ಯರಾದ ನಮ್ಮಲ್ಲಿ ವ್ಯಾಮೋಹವುಳ್ಳ ಆಚಾರ್ಯ, ಉನ್ನೈ ಅರುತ್ತಿತ್ತು ವಂದೋಂ–ನಿನ್ನನ್ನು ಹುಡುಕಿಕೊಂಡು ಬಂದೆವು; ಪರೈ ತರುದಿಯಾಕಿಲ್ ನಮ್ಮ ಇಷ್ಟಾರ್ಥವನ್ನು ಕೊಡುವುದಾದರೆ, ತಿರುತಕ್ಕ ಚೆಲ್ವಮುಂ–ಲಕ್ಷ್ಮೀದೇವಿಗಿರುವಂತೆ ಕೈಂಕರ್ಯ ಅಂದರೆ ಮೋಕ್ಷ ಸಾಮ್ರಾಜ್ಯಕ್ಕೆ ಯೋಗ್ಯವಾದ ಮನೋಧರ್ಮವನ್ನೂ, ಶೇವಕಮುಂ–ಆ ನಿತ್ಯ ಕೈಂಕರ್ಯವನ್ನೂ ಹೊಂದಲು, ಯಾಂಪಾಡಿ–ನಾವು ಹಾಡಿ, ಅನುಸಂಧಾನಮಾಡಿ, ವರುತ್ತಮುಂ ತೀರ್ನ್ದ–ದುಃಖ ಹೋಗಿ, ಮಕಿೞ್ಂದು ಆನಂದಿಸುವಂತೆ ಅನುಗ್ರಹಮಾಡು.

ಅಥವಾ ಒರುತ್ತಿ ಮಗನಾಯ್ ಪಿರಂದು–ಅಷ್ಟಾಕ್ಷರಿಯಲ್ಲಿ ಹುಟ್ಟಿ, ಓರ್ ಇರವಿಲ್–ನಮಗೆ ತಿಳಿಯದಂತೆ ನಿನ್ನ ಸಂಕಲ್ಪದಿಂದ, ಒರುತ್ತಿ ಮಗನಾಯ್ ಒಳಿತ್ತು ವಳರ್–ದ್ವಯದಲ್ಲಿ ಬೆಳೆಯಲು ಅಥವಾ, ಒರುತ್ತಿ ಮಗನಾಯ್ ಪಿರಂದು –ತಾಯಿಯ ಹೊಟ್ಟೆಯಲ್ಲಿಹುಟ್ಟಿ, ಒರುತ್ತಿ ಮಗನಾಯ್ ಒಳಿತ್ತು ವಳರ್–ತಿರುಮಂತ್ರದಲ್ಲಿ ಬೆಳೆದು

ಮಿಕ್ಕ ಎಲ್ಲಾ ಪದಗಳೆಲ್ಲವು ಮೊದಲಿನ ಅರ್ಥವನ್ನೇ ಉಳ್ಳದ್ದು.

ಇಲ್ಲಿಗೆ ಐದನೇ ಪರ್ವ ಮುಗಿಯಿತು ತಿರುಪ್ಪಾವೈಯಲ್ಲಿ.

ಭಾಗ ೬

ಇನ್ನು ಉಳಿದಿರುವುದು ಕೊನೆಯ ಐದು ಪದ್ಯಗಳು. ಪರಮಾತ್ಮನಲ್ಲಿ ಕೈಂಕರ್ಯವನ್ನು ಯಾಚಿಸುವ ಪದ್ಯಗಳಿವು. ಮೂಲಮಂತ್ರದ ಕೊನೆಯ " ನಾರಾಯಣಾಮ " ಎನ್ನುವ ಪದದಲ್ಲಿ ಅಡಗಿರುವವರ್ಥವನ್ನು ವಿವರಿಸುವ, ಮುಕ್ತಿ ಜೀವನದ ಸವಿಸೂಸುವ ರಸಮಯ ಪದ್ಯಗಳಿವು. ಮೊದಲನೇ ಪದವಾದ ಪ್ರಣವದ ಅರ್ಥವನ್ನು ಮೊದಲಿನ 20 ಪದ್ಯಗಳಲ್ಲಿ ಕಂಡು, ವೇದ ಆದರಲ್ಲೂ ಉಪನಿಷತ್ತುಗಳ ಸಾರವೂ ಇದೇ ಎಂದು ನೋಡಿದ ಹಿಗ್ಗಿನಿಂದ ಜೀವನ ಸಂಗೀತವನ್ನು ಮುಂದಿನ ಐದು ಪದ್ಯಗಳಲ್ಲಿ ಹಾಡಿದಳು ಗೋದೆ. ಇದನ್ನು ಸವಿದು " ನಿನ್ನೈಂದು, ನಿನ್ನೈಂದು, ಉಳಕರೈಂದು, ಉರುಕೆ " ಎಂದು ಶಠಗೋಪರು ತೋಡಿಕೊಂಡಂತೆ (ತಿರು–ಮೊ I, 5,2) ಆಗುವರಿಗೆ ಈ ಕೊನೆಯ ಐದು ಪದ್ಯಗಳಲ್ಲಿ ಅಮೃತಧಾರೆಯೇ ಧರಣಿಗಿಳಿದು ಬಂದಂತೆ ತೋರದಿರದು.

ವೇದಾರ್ಥವೆಲ್ಲವೂ ಪ್ರಣವದಲ್ಲಡಗಿದೆ.

ಸರ್ವೇ ವೇದಾ ಯತ್ಪದಮಾಮನಂತಿ ತಂಪಾಸಿ
ಸರ್ವಾಣಿ ಚ ಯದ್ವದಂತಿ ।
ಯದಿಚ್ಛಂತೋ ಬ್ರಹ್ಮಚರ್ಯಂ ಚ ರಂತಿ ತತ್ತೇ ಪದಂ
ಸಂಗ್ರಹೇಣ ಬ್ರವೀಮಿ–ಓಂ–ಇತ್ಯೇತತ್ ॥

—(ಕಠ–ಉ)

ಎಂದು ಯಮಧರ್ಮರಾಯ ನಚಿಕೇತನಿಗೆ ಉಪದೇಶಿಸಿದ, ಕೃಷ್ಣನೂ ಅರ್ಜುನನಿಗೆ ಅದನ್ನೇ ಹೇಳಿದ (ಗೀ VIII–II.) ಅದರ ಅರ್ಥವನ್ನು ನಮ್ಮ ಬುದ್ಧಿಗೆ ಎಟಗುವಂತೆ ಹಾಡಿಕೊಟ್ಟಳು. ಮೊದಲಿನ 20 ಪದ್ಯಗಳಲ್ಲಿ ಗೋದೆ ಇದರ ಅರ್ಥ ಮತ್ತು ಹಿರಿಮೆಯನ್ನು ತೋರಿಕೊಟ್ಟರುವರು. ಆಚಾರ್ಯರು ಶಾಸ್ತ್ರಗಂಥಗಳಲ್ಲಿ. ಇವೆಲ್ಲವನ್ನೂ ಅರಿತು " ನಮಃ " ಎನ್ನುವ ಭಾವದಲ್ಲಿ ತೋಯ್ದು ನಿಂತಮೇಲೆ ಸವಿಯಲಿರುವ ರಸವು ಇಲ್ಲಿದೆ. ಹಿಂದೆಯೇ ಹೇಳಿದ ಕೃಷ್ಣ " ಗೋಪಿಯರೇ, ನಿಮಗೆ ಬೇಕಾದುದೇನು " ಎಂದು (23ನೇ ಪಾಶುರ.) ಆಗ ಅವರಿಗೆ ಏನೂ ತೋರಲಿಲ್ಲ. ಅವನ ರೂಪು ಮತ್ತು ನಡೆಗೆ ಮರುಳಾಗಿದ್ದರು. ಆದರೂ " ಪೋತ್ತಿಯಾಂವಂದೋಂ (21) " (ಅಂಗಣ್ ಇರಂಡುಂ ಕೊಂಡು ಎಂಗಳ್ ಮೇಲ್ ನೋಕ್ಕು (22) " " ಉನ್ನೈ ಅರುತ್ತಿತ್ತಿ ವಂದೋಂ " ಎಂದಿದ್ದರು. ಇವರ ಅಂತರಂಗ ತಿಳಿದ ಕೃಷ್ಣ ಮತ್ತೆ ಕೇಳಿದ ಅವರ ಹಿರಿಯಾಸೆಯನ್ನ. ಹಿಗ್ಗಿ ಮುಗ್ಗಾದರವರು. ನೋಡಿದರವನ

ಚಿಗುರು ಮೊಗವನ್ನ. ಕಂಡರಲ್ಲಿ ಇಳೆಯ ಬೆಳಗುವ ಹಾಸವನ್ನ. ಅದರ ಹಿಂದೆ ಹಾಸಿನಿಂತ ಜಗದೊಡೆಯನನ್ನು ದಿಟ್ಟಿಸಿನೋಡಿ "ಮಾಲೇ, **ಮಣಿವಣ್ಣಾ**" ಎಂದರೆಲ್ಲರು ವೇದವು ನೊಳಗುವಂತೆ ಗೋದೆಯ ಹಿಂದೆ ಹಿಮ್ಮೇಳವಾಗಿ.

ಮಾಲೇ–ಸವಿಯಖನಿ ಶೃಂಗಾರ ರೂಪನೇ, **ಮಣಿವಣ್ಣಾ**–ನೀಲಮಣಿ ಬಣ್ಣದವನೇ, **ಮಾರ್ಗಳಿ ನೀರಾಡುವಾ**–ನಿನ್ನಲ್ಲಿ ಮುಳುಗಿರಲು ಬಂದಿಹೆವು; ಗೋದೇ ಭೂದೇವಿ; ಅವಳಲ್ಲಡಗಿಹಳು ಶ್ರೀದೇವಿ; ಕೂಡಿರುವಳವಳಲ್ಲೀಗ ನೀಳಾದೇವಿ; ಗೋಪಿಕೆಯರನ್ನು ಬಯ್ದಂತೆ ನಮ್ಮೆಲ್ಲರ ಹೃದಯವೆಳೆದು ನಿಂತಿಹಳೀಗ ಸಾಸಿರನಾಮ ಸವಿಯಖನಿಯ ಮುಂದೆ. "ಇವನು ತಿರುಮಾಲನೇ" ಎಂದು ನೆನೆದಳು; ಅಲ್ಲಿ; ಹಾಗೆ ಅವಳಿಗೆ ಮಾತ್ರವಲ್ಲ ಈಗ ನನಗೂ ಅಹುದೆಂದರಿತಳು. ಇಂತು ಮಾತ್ರನಲ್ಲ; "ಇವನು ನೆಡುಮಾಲೇ" ಎಂದು ಕೇಳಿತು ಮನ. ಅಲ್ಲವೆಂದಳು. ಗೋಪಿಯರಿಗೆ ಅಂದರೆ ತನ್ನ ಕೂಡಿದವರಿಗೆ ಮಾತ್ರ ನೆಡುಮಾಲವನು; ಮತ್ತಾರಿವನೆಂದಿತವಳ ಮನ. ಅರುಹಿದಳದಕೆ "ಮಾಲೇ" ಎಂದು.

ಪ್ರೇಮರಸವೇ ಇಳೆಗಿಳಿದು ಬಂದಿಹುದೆಂದಳು; ಲಕುಮಿಯ ಸೊತ್ತಿವನು; ನನಗಿಹನು ಬೆಳಕಾಗಿ; ಧರೆಗಿಹನು ಪಸಿಯಾಗಿ; ತಿಳಿದರಿಂತು **ವಕುಳಾಭರದೇವ** ಶಠಗೋಪರು. ತುಂಬಿ ಹಾಡಿದರು. "**ಮಾಲ್ ತೆಯ್ಗಿನ್ನ ಮಾಲ್ ಆರ್ ಕಾಣ್ಬಾರೇ**" (ತಿರು–ಮೊ II, 8, 7) ಎಂದು. ಕೇಳಿ ತೋರುವ ಪ್ರೇಮವಲ್ಲವಿವರದು. ಅಮೂರ್ತಪ್ರೇಮವೇ ನಿಂತಿಹುದೀಗ ರೂಪದಲಿ. ಶರಣಾಗತವತ್ಸಲ ರಾಮ. ಏನೂ ಕೇಳದ ಮೋಹಾಕೃತಿ ಕೃಷ್ಣ; ರಾಮನ ವಾತ್ಸಲ್ಯ ಒಂದು ವ್ರತ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ಎಂದವನವನು. ತಾನಾಗಿ ಬಂದವರಿಗೆ ಅಭಯ ಕೊಡುವನವನು; ಬರದೇಮರೆಸಿ ಕೊಂಡವರನ್ನೆಳೆದು ತೋರುವ ವ್ಯಾಮೋಹ ಕೃಷ್ಣನಲ್ಲಿ.

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ ।

ಎಂದು ಹೇಳಿ ದೇವನೆಂದು ತೋರಿಕೊಳ್ಳದವ ರಾಮ;

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

ಎಂದು ಹಾಡಿಕೊಂಡು ಬಂದು

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।

ಎಂದು ಹೇಳಿಕೊಂಡು ದೂರ ಸರಿವರನ್ನೆಳೆಯುವ ವ್ಯಾಮೋಹವುಳ್ಳವ ಕೃಷ್ಣ. ಕೃಷ್ಣನು ಸಿಗುವನೇ ಎಂದಿದ್ದವರು; "ಗೋಪಿಯರಲ್ಲದಿದ್ದರೆ ಇರಲಾರೆನೆಂದು ಎಲ್ಲರಮನ ಸೆಳೆದು ಅವರಲ್ಲಿಗೆ ಬಂದು ನಿಂತಿಹೆನೀಗ ಕೃಷ್ಣ. ಹೊರಟವರು ನಾವಲ್ಲ; ಬಂದವರು ನಾವಲ್ಲ; ಬಂದು ಕಂಡವರು ನಾವಲ್ಲ; ನಾವು ಇವನೇ; ಇವನೇ ನಾವು; ಇವನು "ಮಾಲ್"; ಎಂದರವರು.

ಉದಾರಾಸ್ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ ।

ಎಂದು ಹೇಳಿದವನಲ್ಲವೇ ಇವನು? ಬೆಲೆಗೆ ನಮ್ಮನ್ನು ಅವನು ಪಡೆಯಲಿಲ್ಲ; ಬೆಲೆಯಿಲ್ಲದೆ ಕೊಂಡೆವನನ್ನ; ತೋರಿರುವನೀಗ ತನ್ನ ಮೋಹನ ರೂಪ

ದ್ರಾಕ್ಷ್ವಾಮಧಿಕ್ಷಿಪತಿ ನಿಂದತಿ ಮಾಕರಂದಧಾರಾಂ ಸುದಾರಸಮುರೀಮುದರೀಕರೋತಿ

ಎಂದಿರುವಂತಿಹನಿವನನೀಗ. ಲೀಲಾ ಶುಕರು ಹಾಡಿರು

ಮಾಧುರ್ಯಾದಪಿ ಮಧುರಂ ಮನ್ಮಥತಾತಸ್ಯ ಕಿಮುತಿ ಕೌಶೋರಂ ।
ಚಾಪಾಲ್ಯಾದಪಿ ಚ ಪಲಂ ಜೇತೋ ಮನು ಹರತಿ ಹಂತ ಕಂ ಕುರ್ಮಃ ॥

ಎಂದು. ವೇದವು ಕರೆಯಿತು "ಈಶ, ದೇವ, ಬ್ರಹ್ಮ ಆತ್ಮ, ಭೂತಯೋನಿ, ವೈಶ್ವಾನರ, ಭೂಮಾ, ..." ಎಂದು; ಸರಿಯೆನಸಲಿಲ್ಲವದಕೆ;

ರಸೋ ವೈ ಸಃ ರಸಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ

ಎಂದು ಮೊಳಗಿ ನಿಂತಿತವನಲ್ಲಿ. ಹಾಗೆಯೇ "ನಾರಾಯಣ, ಪರಮನೇ, ಉತ್ತಮನೇ, ನನ್ನಜೀವವೇ, ನನ್ನ ಬೆಳಗೆ, . . ." ಎಂದೆಂದು ನೆನೆದು ನೆನೆದು ಬೇಸರವಾಗಿ ಸಾಸಿರನಾಮದ ಸವಿಯೂಟನೋಟದಲ್ಲಿ ಕಂಡಳು "ಮಾಲೇ" ಎಂದು.

ಅಲಂಕಾರ ಶಾಸ್ತ್ರದಲ್ಲಿ ಒಂಭತ್ತು ರಸಗಳಿವೆ.

ಶೃಂಗಾರ–ಹಾಸ್ಯ–ಕರುಣ–ವೀರ–ರೌದ್ರ–ಭಯಾನಕಾಃ ।
ಭೀಭತ್ಸೋಽದ್ಭುತ–ಶಾಂತೌ– ಚ ಕಾವ್ಯೇ ನವರಸಾಃ ಸ್ಮೃತಾಃ ॥

ಇದನ್ನು ವ್ಯಾಖ್ಯಾನ ಮಾಡುವಾಗ "ಕಾಮಸ್ಯ ಸಕಲಜಾತಿಸುಲಭತಯಾ ಅತ್ಯಂತ ಪರಿಚಿತತ್ವೇನ ಸರ್ವಾ ಪ್ರತಿ ಹೃದ್ಯತೇತಿ ಪೂರ್ವಂ ಶಂಗಾರಸ್ಯ ತದನುಗಾಮಿತ್ವಾದ್ ಹಾಸ್ಯಾದಿನಾಂ ಪಶ್ಚಾನ್ನಿರ್ದೇಶಃ" (ಸಾಹಿತ್ಯ ಬಿಂದುಃ 22) ಎನ್ನಲಾಗಿದೆ. ವೇದವೂ ಕೂಡ "ಕಾಮಸ್ತದಗ್ರೇ ಸಮವರ್ತತಾಧಿ" ಎಂದಿದೆ. ಪರಮಾತ್ಮನು

"ಇಮಾನ್ಸ್ವಜಾ ಇತಿ "ಬಹುಸ್ಯಾಂ ಪ್ರಜಾಯೇಯೇತಿ"
"ಕ್ಷಿಪಾಮ್ಯಜಸ್ರಮಸುಭಾನಾಸುರೀಷ್ವೇವ ಯೋನಿಷು"

ಎಂದಿರುವುದು ಶೃಂಗಾರಕ್ಕೆ ವಶನಾಗಿ.

ಪರಸ್ಪರಾವಲೋಕೇನ ಸ್ಪರ್ಶನಾಲಿಂಗನಾದಿಭಿಃ ।
ಸ್ತ್ರೀಣಾಂ ಚ ಪುರುಷಾಣಾಂ ಚ ಶೃಂಗಾರೋ ಜಾಯತೇ ರಸಃ ॥

ಎನ್ನುವಂತೆ ಶೃಂಗಾರರಸವು ತುಂಬಿ ಬಂದು ನೋಟದಿಂದ ತೃಪ್ತಿಸಾಲದೆ ಹೇಳಿದ ಮಾತು " ಮಾಲೆ " ಎಂದು.

ಶೃಂಗಾರವು ಮನಸ್ಸಿನಲ್ಲಿ ನಿತ್ಯ ನೆಲಸುವ ನಲಿಮೆ. ಕವಿಗಳಿದು ಜೀವರಸ; ಮುನಿಗಳಿಗೆ ಆತ್ಮರಸ. ಶೃಂಗಾರ ಮಿಾರಿದರೆ ಹಾಸ್ಯ; ಇನ್ನೂ ಹೆಚ್ಚಿದರೆ ಕರುಣಾ ರಸ; ಶೃಂಗಾರಕೆ ತಡೆ ಬಂದರೆ ರೌದ್ರ; ಹೊಂದಲುವೀರ; ಅದರ ಹೆಚ್ಚು ಭಯಾನಕ; ನೀಚ ಶೃಂಗಾರ ಭೀಭತ್ಸ; ಗಂಭೀರ ಶೃಂಗಾರ ಅದ್ಭುತ; ಬಟ್ಟಯಿಳಿದು ನಿಂತ ಶೃಂಗಾರ ಶಾಂತಿ. ಇವೆಲ್ಲವನ್ನೂ ಕೂಡಿಸಿ ಹಾಡಿದ ಜಯದೇವ ಗೀತಗೋವಿಂದದಲ್ಲಿ ಇನಿಯಾಗಿ, ರಸಗಳೆಲ್ಲವೂ ಕಳಿತು ಹೊಮ್ಮಿತು ಗೋದೆಯ ಬಾಯಲ್ಲಿ " ಮಾಲೆ " ಎಂದು.

ರಾಮನಲ್ಲಿ ಶೃಂಗಾರ ವಿಕಾಸ ಹೊಂದಿ ಕರುಣಾರಸವಾಯಿತೆಂದ ಭವಭೂತಿ ಉತ್ತರ ರಾಮಚರಿತೆಯಲ್ಲಿ. ಶೃಂಗಾರವು ನವರಸವಾದರೂ ಶೃಂಗಾರವಾಗಿಯೇ ನಿಂತಿದೆ ಕೃಷ್ಣನಾಗಿ ಎಂದಳು ಗೋದೆ. " ಮಾಲೇ " ಎಂದು ಹೇಳಿ ಮೈಮರೆತಳು. ನಕ್ಕ ಕೃಷ್ಣ; ಕೇಳಿದ " ಇದು ನಿಮಗೆ ತಿಳಿದುದೆಂತು " ಎಂದು ಆಗ "ಮಣವಣ್ಣಾ" ಎಂದಳು ಗೋದೆ. ಹುಟ್ಟು ಸಾವಿನ ಕಟ್ಟನಲಿ ಸಿಲುಕಿ ಬೆಂದ ಬಾಳಿನ ನಮಗೆ ಚೆಂದ ತಂದ ಕಂದ ಮಣಿಯೆಂದು ಕಾಣಲಾರದ ಕುಂದುಮಣಿಯೆಂದು ತಿಳಿಯಬೇಡ; ಅರಿತಿರುವೆವು ನಿನ್ನ ಹಿರಿಮೆಯನ್ನ; ತಿಳಿದೆವು ತಿಳಿವು ತುಂಬಿದ ಹೃದಯ ತಂಬಿಗೆಯಲಿ; ಕುಂದಿ ಕಂದಿನ ಕಣ್ಣು, ಕಂಬನಿ ತುಂಬಿ, ಮುಸುಕಿನಲಿ ಕಂಡಿತು ಕಣ್ಮಣಿಯನು; ರೂಪ ಲಾವಣ್ಯದಲ್ಲಿ ಕಂಡೆವು ಕನ್ನಡಿಯಂತೆ ಎಲ್ಲೆಯಿಲ್ಲದವನೆಂದು ದೋಷವಿಲ್ಲವೆಂದು ತೋರಿಸುವ ಬಣ್ಣ ನಿನ್ನದು; ದೋಷ ತೋರಿಸದಿರುವ ಬಣ್ಣ ನಿನ್ನದು; ಮಾಸಿ ಹೋಗದಬಣ್ಣ ನಿನ್ನದು; ಮುಸಿಟನಿಲ್ಲದ ಮುಂಬಣ್ಣ ನಿನ್ನದು; ಹೊಂಬಣ್ಣ ಬಿಟ್ಟು ಮುಂಬಣ್ಣ ಕೂಡುವೆ; ಮತ್ತೆ ಕೂಡುವೆನಯ್ಯ ಮುಂಬಣ್ಣದಲ್ಲಿ ಹೊಂಬಣ್ಣ ಬಿಟ್ಟು ಎಂದಳು ಹಾಡಿನ ಛಂದೋಗ ಕನ್ಯೆ

ಶ್ಯಾಮಾತ್ ಶಬಳಂ ಪ್ರಪದ್ಯೆ ಶಬಳಾತ್ ಶ್ಯಾಮಂ ಪ್ರಪದ್ಯೆ
—ವಾಂ—ಉ VII

ಎಂದು ಹೇಳಿ ನಲಿದಳಿವಳು. ಮುಕುತಿಯಲಿ ಕಂಡಳು ಮುಂಬಣ್ಣವನ್ನ; ಭಕುತಿಯಲಿ ಕಂಡಳು ಹೊಂಬಣ್ಣವನ್ನ. ಎರಡೂ ಅರಿಯದ ನಾವು ತಿಳಿದೆವು ಮಣಿವಣ್ಣನೆಂದು—ಬಿಟ್ಟರಲಾರೆವು ನಿನ್ನನು—ಎಂದಳು ಗೋದೆ.

ಒಡೆಯದ ಮಣಿಯೇ ಚೆಂದ; ಒಡೆದು ನೋಡದ ಮಣಿ ಬಹು ಚಂದ; ಮುಕುತಿಯಲ್ಲಿ ಒಬ್ಬ ಮಣಿವಣ್ಣ; ಭಕುತಿಯಲ್ಲಿ ಅನಂತ ಮಣಿವಣ್ಣ; ನಿನ್ನ ಬಣ್ಣ

ದಲ್ಲಿ ಕಂಡೆವು ಕಣ್ಣಿಗಿನಿಯನನು. ನಮಗಾಗಿ ನೀನು ಹೊಂಬಣ್ಣನಾಗುವಿ. ಕೇಳಿದ ಹನುಮಂತ ಸೀತೆಯನು " ಅಮ್ಮಾ ಏನು ಒಯ್ಯಲಿ ರಾಮ ದೇವನಿಗೆ " ಎಂದು.

ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।
ಊರ್ಧ್ವಂ ಮಾಸಾನ್ನ ಜೀವೇಯಂ ಸತ್ಯೇನಾಹಂ ಬ್ರವೀಮಿ ತೇ ॥
—ರಾ. ಸುಂ 36, 64–65

" ರಾಮ, ದಶರಥಕುಮಾರ, ತಿಂಗಳೊಂದು ಧರಿಸುವೆನು ಜೀವವನು; ನೀನು ಬರದಿದ್ದರೆ ಮಡಿವೆನು ಒಡನೆ–ನನ್ನ ಸತ್ಯದ ಮಾತಿದು " ಎಂದಳು. ರಾಮ ಕೇಳಿದ ಇದನು. ಹೇಳಿದ

ಚಿರಂ ಜೀವತಿ ವೈದೇಹೀ ಯದಿ ಮಾಸಂ ಧರಿಷ್ಯತಿ ।
ಕ್ಷಣಂ ವೀರ ನ ಜೀವೇಯಂ ವಿನಾ ತಾಮಸಿತೇಕ್ಷಣಾಂ ॥
—ಸುಂ–66–10

" ಆಂಜನೇಯ; ಜೀವಿಸಿಯಾಳವಳು ಮಾಸವೊಂದಾದರೂ; ಅವಳ ಬಿಟ್ಟು, ಒಂದು ಕ್ಷಣಮಾತ್ರ ಬದುಕಲಾರೆ ಎಂದುದನ್ನು ಕೇಳಿದ ಪವನಸುತ. " ಸೀತೆಯನ್ನು ಬಿಟ್ಟು ರಾಮನು ಹೇಗೆ ಜೀವಿಸಿರುವನು " ಎಂದು ಆಶ್ಚರ್ಯಪಟ್ಟದ್ದ ಸೀತೆಯನ್ನು ಮೊದಲು ನೋಡಿದಾಗ.

ದುಷ್ಕೃತಂ ಕೃತವಾ ರಾಮಃ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥
—ಸುಂ 15–53

ಎಂದವನಿಗೆ ಈಗ ಅರ್ಥವಾಯಿತು. ರಾಮನ ಹೃದಯ ತುಂಬಿಹಳು ಸೀತೆ. ಅವಳಿಗಾಗುಳಿದಿರುವನು ರಾಮ ಎಂದರಿತ. " ಕೃಷ್ಣ ನಮಗಾಗಿ ನೀನು ಮಣಿವಣ್ಣನಾಗಿರುವೆ; ನೀನು " ಮಾಲೆ ಅಲ್ಲವೆ? " ಎಂದು ಒಟ್ಟುಗೂಡಿಸಿ " ಮಾಲೆ ಮಣಿವಣ್ಣಾ " ಎಂದಳು ಗೋದೆ.

" ಈ ಮಣಿವಣ್ಣ ರೂಪು ಸಾಕು ಕಣ್ಣುಮುಂದೆ ಒಡಲ ಬಿಡುವವರಿಗೆಂದರು ನಿಗಮಾಂತದೇಶಿಕರು.

ಅಧರಾಹಿತಚಾರುವಂಶನಾಳಾಃ ಮುಕುಟಾಲಂಬಿನಮುಯುರಪಿಂಛಮಾಲಾಃ ।
ಹರಿನೀಲಶಿಲಾವಿಭಂಗನೀಲಾಃಪ್ರತಿಭಾ ಸ್ಸಂತು ಮಮಾಂತಿಮೇ ಪ್ರಯಾಣೇ ॥

ಮನಸ್ಸಿನ ಭಾವವೆಲ್ಲವನ್ನೂ ಒಟ್ಟುಗೂಡಿಸುವ ಜ್ಞಾನ ಬೆಳಕು ಪ್ರತಿಭೆ; ಮರಣ ವೇಳೆಯಲ್ಲಿ ನನ್ನ ಭಾವವೆಲ್ಲವೂ ಮಣಿವಣ್ಣ ಭಾವದಲಿ ಒಂದಾಗಿರಲೆಂದರವರು.

ವ್ಯಾಖ್ಯಾನಕಾರರು " ಮಣಿವಣ್ಣಾ " ಎನ್ನುವುದನ್ನು ಬಣ್ಣಿಸುವಾಗ, ಆ ಬಣ್ಣದ ಹತ್ತು ಗುಣಗಳನ್ನು ಹೇಳಿರುವರು.

1) **ಒಶಂದುದು**—ಎಲ್ಲರಿಗೂ ಮೇಲ್ಪಟ್ಟವನಿವನು.— **ನತತ್ ಸಮ ಶ್ಚಾಭ್ಯಧಿಕಶ್ಚ ವಿದ್ಯತೇ; ಈಶಾವಾಸ್ಯಮಿದಂಸರ್ವಂ; "ಯಕ್ಷಃ," "ಅಣೋರಣೀಯಾನ್ಮಹತೋ ಮಹೀಯಾನ್," "ದಿವ್ಯೋಹ್ಯಮೂರ್ತಃ ಪುರುಷಃ," "ಸತ್ಯಂಜ್ಞಾನಮನಂತಂಬ್ರಹ್ಮ"** ಎಂದು ಹೇಳಿ "ಕೊನೆಗೆ **ನೀಲ ತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವಭಾಸ್ವರಾ"** ಎಂದಿದೆ ಮೊದಲಿನ ಏಳು ಉಪನಿಷತ್ತಿನಸಾರ.

2) **ಆಶ್ರಯಂ**—ಎಲ್ಲರಿಂದಲೂ ಆಶ್ರಯಿಸಲ್ಪಡುವವನು;

3) **ಒಟ್ರಿಂದಾರ್ಕ್ಕು ಇಳಮ್ಬೈಯುಂ – ಯನ್ಮುಹೂರ್ತಂಕ್ಷಣಂವಾಗಿ ವಾಸುದೇವೋನ ಚಿಂತ್ಯತೇ ಸಾಹಾನಿಃ ತನ್ಮಹಚ್ಛಿದ್ರಂ ಸಾಭ್ರಾಂತಿಃ ಸಾಚ ವಿಕ್ರಿಯಾ"**

4) **ಕೈಪಟ್ಟಾರ್ಕ್ಕುಪುಣಲುಂ**—ನಾನಾ ಸಂಬಂಧದಲ್ಲಿ ಅನುಭವಿಸಲ್ಪಡುವವನು.

5) **ಪುಣಲಾದಾರ್ಕ್ಕು ಅಟ್ರಿತ್ತು ಉಣಲಾಂಪಡಿ ಇರುಕ್ಕು**—ಸಂಬಂಧ ನೋಡಲಾರದವರಿಗೆ ಸಂಬಂಧ ತೋರಿಸುವವನು;

6) **ಕುಂದಾಳಿಲೇ ಮುಡಿಂದಾಳಲಾಂಕೊಳ್ಳಲಾಂ**—ಅತಿ ಸುಲಭನು

7) **ಪಿರಕ್ಕಾದೇಪಿರಕ್ಕುಮದುಂಇರುಕ್ಕುಮದುಂ**–ಹುಟ್ಟದವನು ಹುಟ್ಟಿ ಇರುವನು

8) **ಅಳವತ್ತವೈಶ್ವರ್ಯತ್ತೈಕೊಡುಕ್ಕುಮವರ್**–ಅಮಿತೈಶ್ವರ್ಯ ಕೊಡುವವನು–ಅಂದರೆ ಆತ್ಮಗುಣಕೊಡುವವನು;

9) **ಕೊಡುತ್ತೋಮೆನ್ರುನಿನೈಕ್ಕಾದವರ್**—ಉದಾರ ಸ್ವಭಾವದವನು;

10) **ನಿಗರಿಲ್ಲಾದವರ್**—ಎಣೆಯಿಲ್ಲದವನು.

ಈ ಆರ್ಥವೆಲ್ಲವನ್ನೂ ಕೂಡಿಸಿದರೆ

ಪ್ರೇಮುದಂ ಚ ಮೇ ಕಾಮುದಂ ಮೇ
ವೇದನಂ ಚ ಮೇ ವೈಭವಂ ಚ ಮೇ ।
ಜೀವನಂ ಚ ಮೇ ಜೀವಿತಂ ಚ ಮೇ
ದೈವತಂ ಚ ಮೇ ದೇವ ನಾಪರಂ ॥ ಕೃ–ಕರ್ಣಾ I, 104

ಎನ್ನುವ ಹೃದಯ ಹಾಡಾಗುವುದು ಲೀಲಾ ಶುಕರಿಗಾದಂತೆ.

ತನಗಾಗಿ ಹಾಡಿಗಳು "**ಮಾಲೇ**" ಎಂದು; ನಮಗಾಗಿ ಹಾಡಿದಳು **"ಮಣಿವಣ್ಣಾ"** ಎಂದು; ಅವಳನೊಡುಗೂಡಿದ ಎಲ್ಲರಿಗಾಗಿ ಹಾಡಿದಳು **"ಮಾಲೇ ಮಣಿವಣ್ಣಾ"** ಎಂದು. ಇದೇ ಆಚಾರ್ಯಾನುಭವ.

ಪ್ರಣಯಿನಮಿವ ಪ್ರಾಪ್ತಂ ಪಶ್ಚಾತ್ತ್ರಿಯಾ ಸ್ವಸಮನ್ವಿತಂ
ಮಹತಿ ಮುಹುರಾಮ್ಯಷ್ಟೇ ಮನಾ ಮಣಿದರ್ಪಣೇ ।
ಪ್ರಪದನಧನಾಸ್ಸಂತಃ ಶುಭೈ ಪ್ರಭುಂ ಪರಿಭುಂಜತೇ
ಪ್ರಸೃಮರ–ಮಹಾಮೋದಸ್ಮೇರಪ್ರಸೂನನಿಭೈಃ ಕ್ರಮೈಃ ॥

ನಾವೆಲ್ಲರೂ ಪರಮಾತ್ಮ ಪ್ರಿಯೆಯರು; ನಾವು ನಮ್ಮನ್ನು ನೋಡಿಕೊಳ್ಳುವ ಮಣಿಗನ್ನಡಿ **ಅಷ್ಟಾಕ್ಷರೀ**; ಅದರಲ್ಲಿ ನಮ್ಮನ್ನು ನೋಡಿಕೊಂಡು, ಅವನಿಗೆ ಪ್ರಿಯವಲ್ಲದ ಅಲಂಕಾರವನ್ನು ಕಿತ್ತೊಗೆದು, ಪ್ರಿಯವಾಗುವಂತೆ ಸಿಂಗರಿಸಿಕೊಂಡು ಅವನು ಬಂದರೆ ಅವನೊಡನೆ ಸತತ ನವನವೋನ್ಮೇಷ ಹಾಸ ಚಿಗುರಿರುವಂತೆ ಮಾಡಿಕೊಳ್ಳಬೇಕು. ಇದೇ ಭಾವಶುದ್ಧಿ; "ತೂಯೋಮಾಯ್‌ವಂದು" (5) "ತೂಯೋಮಾಯ್‌ವಂದೋಂ" (16) ಎಂದು ಗೋದೆಯು ಹೇಳಿದ್ದು ಈಯರ್ಥದಲ್ಲೇ; ಆ ಭಾವಶುದ್ಧಿಯಲ್ಲಿ ಕಾಣುವ ದೇವನೇ "ಮಾಲೇ ಮಣಿವಣ್ಣಾ". ಹಾಗೆ ಹೇಳಿ ಕರೆದಳು ಎಲ್ಲರನ್ನು; "ಮಾರ್ಗಳ್ನೀರಾಡುವ್ವಾ" ಎಂದಳು. "ಬನ್ನಿ ಅವನಲ್ಲಿ ಮುಳುಗುವ" ಎಂದಳು. ಕೃಷ್ಣ ನೋಡಿದ "ಗೋಪಿಯರೆ, ಏನಿದು–ಏನು ಬೇಕು, ಕೇಳಿ" ಎಂದ. ಕೇಳಿದಳಾಗ **ಮೇಲೆಯಾರ್**–ದೊಡ್ಡವರು, ಜ್ಞಾನಿಗಳು, ಎಲ್ಲವನ್ನೂ ತಿಳಿದವರು **ಶೆಯ್‌ವನಗಳ್**–ಮಾಡಿ ತೋರಿಸಿಕೊಟ್ಟ ವ್ರತಗಳಿಗೆ **ವೇಂಡುವನ**–ಬೇಕಾದ ಸಾಮಗ್ರಿಗಳನ್ನು ಇಷ್ಟು ಹೇಳುವಾಗ ಕೃಷ್ಣ ಮುಗುಳ್ನಗುತ್ತಾ ಗೋಪಿಯರನ್ನೇ ನೋಡುತ್ತಿರುವುದನ್ನು ಕಂಡು, "ಏನಿದು ಕೃಷ್ಣ; ನಿನ್ನ ಮನಸ್ಸು ಎಲ್ಲಿದೆ; ನಮ್ಮನ್ನೇ ನೋಡುತ್ತಿರುವೆಯಲ್ಲಾ; ಏನಿದೆ ಅತಿಶಯ ನಮ್ಮಲ್ಲಿ ಇಲ್ಲಿ ನೋಡು, "ಕೇಟ್ಟಯೇಲ್" ನಾವು ಹೇಳುತ್ತಿರುವುದನ್ನು ಗಮನಿಸು–

1) **ಅಥ ಯದಿ ತೇ ಧರ್ಮ ವಿಚಿಕಿತ್ಸಾ ವೃತ್ತವಿಚಿಕಿತ್ಸಾ ವಾ ಸ್ಯಾತ್–ಯೇ ತತ್ರ ಬ್ರಾಹ್ಮಣಾಸ್ಸಮ್ಮರ್ಶಿನಃ ಯಥಾ ತತ್ರ ವರ್ತೇರ್ಕ; ತಥಾ ತತ್ರ ವರ್ತೇಥಾಃ**

ಎಂದು ವೇದವೂ

2) **ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ ॥**

ಎಂದು ಧರ್ಮಶಾಸ್ತ್ರವೂ ಹೇಳಿರುವಂತೆ, ಜ್ಞಾನವೃದ್ಧರು ವ್ರತಕ್ಕೆ ಬೇಕೆಂದಿರುವುದನ್ನು ಹೇಳುವೆವು ಕೇಳು–ಎಂದಳು. ಹೇಳಿದಳು

ಞಾಲತ್ತೈ ಯೆಲ್ಲಾಂ ನಡುಂಗ—ಭೂಮಿಯನ್ನೆಲ್ಲಾ ನಡಿಗಿಸುವಂತೆ, ಮುರಲ್ವನ–ಮೊಳಗುವ, ಪಾಲನ್ನ ವಣ್ಣತ್ತು–ಹಾಲಿನಂತೆ ಬಿಳುಪಾದ, ಉರ್–ನಿನ್ನ, ಪಾಂಚಜನ್ಯಮೆಯೇ ಪೋಲ್ವನ–(ನಿನ್ನ) ಪಾಂಚಜನ್ಯವೆನ್ನುವ ಶಂಖವನ್ನು ಹೋಲುವ, ಶಂಖಂಗಳ–ಶಂಖಗಳೂ, ಪೋಯ್ ಪ್ಪಾಡುಡೈಯನವೇ–ವಿಶಾಲ ಮಧ್ಯಭಾಗವುಳ್ಳ, ಶಾಲಪ್ಪೆರುಂ–ಬಹುದೊಡ್ಡದಾದ, ಪರೈಯೇ–ಭೇರಿ ವಾದ್ಯ

ವನ್ನೂ, ಪಲ್ಲಾಂಡಿಶೈಪ್ಪಾರೇ—ಮಂಗಳಾಶಾಸನಮಾಡುವವರನ್ನೂ, ಕೋಲ ವಿಳಕ್ಕೇ—ಮಂಗಳ ದೀಪವನ್ನೂ, ಕೊಡಿಯೇ—ಬಾವುಟವನ್ನೂ, ವಿತಾನಮೇ—ಮೇಲು ಹೊದಿಕೆಯನ್ನೂ, ಆಲಿನಿಲೈಯಾಯ್—ವಟಪತ್ರಶಾಯಿಯಾದ ಸ್ವಾಮಿಯೇ, ಅರುಳ—ಕೃಪೆಮಾಡಿಕೊಡು.

ಇವೆಲ್ಲವೂ ಭಜನೆಕೂಟಕ್ಕೆ ಬೇಕಾದವು. ಕೃಷ್ಣಕೇಳಿದ "ಗೋಪಿಯರೇ, ನನ್ನಲ್ಲಿರುವುದು ಒಂದು ಶಂಖ; ಅದಕ್ಕೆ ಎಣೆಯಾದುದು ಬೇರೊಂದಿಲ್ಲ. ಅದನ್ನು ಹೇಗೆ ಕೊಡಲಿ. ಮಿಕ್ಕವನ್ನೇನೋ ಕೊಡಬಲ್ಲೆ." ಎಂದು ಅದಕ್ಕೆ ಉತ್ತರ "ಆಲಿ ನಿಲೈಯಾಯ್."—"ಕೃಷ್ಣ, ಮರುಳುಗೊಳಿಸಬೇಡ; ನೀನು ಯಾರು, ಏನೇನು ಕೊಡಬಲ್ಲೆ ಎನ್ನುವುದನ್ನು ಅರಿತಿರುವವರು ನಾವು.

ಬ್ರಹ್ಮಾಂಡಮಂಡಲಮುಭೂದುದರೈಕದೇಶೇ

ಎಂದು ಸ್ಮೃತಿಯು ಮೊಳಗುತ್ತಿರುವುದನ್ನು ನಾವು ಕೇಳುತ್ತಿಲ್ಲವೆಂದರಿತೆಯಾ? ವೈಕುಂಠ ಬಿಟ್ಟು, ಹಾಲಿನ ಕಡಲಿಗಿಳಿದು ಆಲದೆಲೆಯ ಮೇಲೆ ಚಿಕ್ಕಮಗುವಾಗಿ ತೋರಿಕೊಂಡೆ. ನಿನ್ನ ಹೊಕ್ಕಳಿಂದ ಹೊರಬಿತ್ತು ಕಮಲ; ಅರಳಿತದು; ನಾನ್ಮುಗ ಹುಟ್ಟಿದ ಹಿರಣ್ಯಗರ್ಭನಾಗಿ; ಅವನನ್ನು ಬಿಚ್ಚಿದೆ; ಏಳು ಲೋಕವೆದ್ದಿತು; ವಿಶಾಲ ಪ್ರಪಂಚ ಕಂಡಿತು; ಮತ್ತೂ ಏನೇನೋ ಕಂಡಿತು. ಬೆಳಸಿದೆ ಇದನು; ತೋರಿದೆ ಇದನು; ಕಾಡಿದೆ ಇದನು; ನೋಡಿದೆ ಇದನು; ಪೋಷಿಸಿದೆ ಇದನು; ಮತ್ತೆ ಎಳೆದು ಕೊಂಡೆ ಇವೆಲ್ಲವನು. ನೀನು ಏನುತಾನೇ ಮಾಡಲಾರೆ. ಒಂದು ಶಂಖವೇ? ಮೂರು ಶಂಖಗಳನ್ನು ಕೊಡಬಲ್ಲೆ. ಸುಮ್ಮನ್ನೆ ಕೇಳಿರುವೆ ನಮ್ಮನ್ನು ಪರೀಕ್ಷಿಸಲು—ಎಂದಳು.

ನಲಿದು ಹಾಡುವುದೇ ಮೋಕ್ಷಾನಂದ; ಅದು ಇಲ್ಲೇ ಬೇಕೆನುವುದೇ ಗೋದೆಯ ಆಸೆ. ಮನಃಪಾಕಕ್ಕಾಗಿಯಲ್ಲ ಈ ಭಜನೆ. ಪಾಕಗೊಂಡ ಭಕ್ತಿ ಹಾಡು. ಅವನಲ್ಲಿ ಶರಣುಹೋಗಿ, ಕರಣ ಕಳಿತು, ಮನವು ತುಂಬಿನಿಂತ ಹೃದಯಗೀತೆ. ವೇದನಾದಕ್ಕೆ ಹೊಂದಿಕೊಳ್ಳುವ ನಾದವಾಗಲು ಶಂಖಬೇಕು. ಅದಕ್ಕೆ ಮಿರುಗು ಕೊಡುವ ಭೇರಿಬೇಕು; ಹಾಡುವವರು ಒಡನಿರಬೇಕು; ಸಂಘಗಾನ ವಾದರೇನೇ ಹಿತ; ಮುಗಿಲು ಮುಟ್ಟಿದರಲ್ಲವೇ "ಮುಗಿಲ್ ವಣ್ಣ" ನಿಗೆ ತಲಪುವುದು? ದೀಪ ಬೇಕು ಮನದಾರಿ ಬೆಳಗಲು; ಬಾವುಟ ಬೇಕು ನಿಮ್ಮವರು ನಾವೆಂದು ತೋರಲು; ಸುಮಂಗಲಿಯರು ನಾವೆಂದು ತೋರಲು ವಿತಾನಬೇಕು. ನಮ್ಮ ಸೌಮಂಗಲ್ಯ ನಿತ್ಯ; ಅದನ್ನು ಕಾಪಾಡಲು ನಿತ್ಯಮಾಂಗಲ್ಯ ಕೊಡೆಂದು ಕೇಳಿದಳು ಗೋದೆ. ಮುಕ್ತಿಗೆ ಮುಂಚಿನ ಮುಂಬೆಳಕಿಗಾಗಿವು. ಮುಕ್ತಿಯ ಅನುಭವ ಮುಂದಿನ ಪದ್ಯದಲ್ಲಿ... ಏಲೋರೆಂಪಾವಾಯ್.

ಸ್ವಾಪದೇಶ

ಪರಮಾತ್ಮನಿಂದ ಹೊಂದುವ ಫಲವನ್ನು ಆಚಾರ್ಯನಿಂದ ಪಡೆಯಬಹುದು, **"ಪ್ರಿಯೋ ಹಿ ಜ್ಞಾನಿನೋऽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ"** ಎಂದು ಕೃಷ್ಣನ ಮಾತೇ ಇದಕ್ಕೆ ಆಧಾರ.

ಮಾಲೇ—ಶಿಷ್ಯರಾದ ನಮ್ಮಲ್ಲಿ ಮೋಹಗೊಂಡಿರುವವನೇ **ಮಣಿವಣ್ಣಾ**—ಕೌಸ್ತುಭಮಣಿಯಂತೆ ಪರಮಾತ್ಮನ ಹೃದಯದಲ್ಲೇ ವಾಸಮಾಡಿ, ಅವನನ್ನೇ ನೋಡಿ ನೋಡಿ, ಅವನಂತೆ ನೀಲಮೇಘ ಶ್ಯಾಮನಂತೆ ನಮಗೆ ತೋರುತ್ತಿರುವವನೇ.

ಮಾರ್ಗಶ್ನೀರಾಡುವ್ವಾ—ಮೋಕ್ಷಮಾರ್ಗದಲ್ಲಿ ಆಸೆ ಹುಟ್ಟಿ ಅದನ್ನೇ ಚಿಂತಿಸುತ್ತಾ ಮಳುಗಿರುವೆವು. ಪ್ರಪನ್ನನಾದಮೇಲೆ ಉತ್ತರಾಯಣ ಮಾರ್ಗವನ್ನು ಮರಣಪರ್ಯಂತ ನೆನೆಯುತ್ತಿರಬೇಕೆಂದು ಶಾಸ್ತ್ರವು ಹೇಳುತ್ತಿದೆ. ಕೃಷ್ಣನೂ ಕೂಡ **"ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ"**—"ಅರ್ಜುನ, ಮರಣಪರ್ಯಂತ ಯಾವಾಗಲೂ ಪರಮಾತ್ಮನನ್ನು ಕೂಡಿಕೊಳ್ಳಲು ಹೋಗುವ ದಾರಿಯನ್ನೂ, ಬುದ್ಧಿಕೆಡದಂತಿರಲು ಸಂಸಾರಕ್ಕೆ ತಿರಿಗಿಸುವ ದಾರಿಯನ್ನೂ ಚಿಂತಿಸುತ್ತಿರು" ಎಂದಿರುವನು.

ಮೇಲೈ . . . ಕೇಟ್ಪಯೇಲ್—ಅನ್ಯಾಪದೇಶಾರ್ಥವೇ

ಞಾಲತ್ತೈ . . . ಶಂಖಂಗಳ್—ಪ್ರಣವಾರ್ಥದಲ್ಲಿ ವೇದಾಂತವೆಲ್ಲವೂ ಅಡಗಿದೆ. ಶಂಖವೂದಿದರೆ ಹೊರಹೊಮ್ಮುವುದು ಪ್ರಣವ; ಅದರ ಸಾರಾರ್ಥ ಶೇಷತ್ವಜ್ಞಾನ; ನಾವು ಯೋಗದ ಮಹಿಮೆಯಿಂದ ಆತ್ಮಧ್ವನಿಯಾದ ಈ ಪ್ರಣವವನ್ನು ಪ್ರಪಂಚ ತುಂಬಿ ನಿಲ್ಲುವಂತೆ ಮಾಡುವ ಜ್ಞಾನವನ್ನೂ ಪಾಲನ್ನ ವಣ್ಣತ್ತು ಹಾಲಿನಂತಿರುವ, ಹಂಸದಂತಿರುವ (ಪಾಲ್‌ವಣ್ಣಂ, ಅನ್ನವಣ್ಣಂ) ಕ್ಷೀರಾನ್ನದಂತಿರುವ, ಪಾಂಚಜನ್ಯಂ – ಮೂಲಮಂತ್ರಾರ್ಥವನ್ನೂ ಪೋಯ್ . . . ಪರೈಯೇ—ನಮಃ ಎನ್ನುವುದರ ಅರ್ಥವನ್ನೂ, ಪಲ್ಲಾಂಡು ಇಶೈಪ್ಪಾರೇ—ಸತ್ಸಂಗವನ್ನೂ, ಕೋಳವಿಳಕ್ಕೆ—ನಮ್ಮ ಧರ್ಮಭೂತಜ್ಞಾನವು ಪರಮಾತ್ಮ ವಿಷಯದಲ್ಲಿ ನಂದಾದೀಪವಾಗುವಂತೆ ವಿಚಾರ ಧಾರೆಯನ್ನೂ, ಕೊಡಿಯೇ—ಭಾಗವತ ಶೇಷತ್ವ ನೆಲೆಯಾಗಿ ನಮ್ಮಲ್ಲಿ ನಿಲ್ಲುವಂತಹ ಜ್ಞಾನವನ್ನೂ, ವಿತಾನಮೇ—ಅವಿವೇಕವೆನ್ನುವ ದುಃಖ ಮಳೆ ಬೀಳದಿರಲು ಶುದ್ಧ ಜ್ಞಾನ ಬೆಳಕನ್ನೂ, ಆಲಿನಿಲೈಯಾಯ್—ಶಿಷ್ಯರಾದ ನಮಗೆ ನೆರಳು ಕೊಡುವ ಆಸರೆಯಾಗಿ (ಆಲಿ ನಿಲೈಯಿಲ್‌ನಿರ್ವರ್) ಅರುಳ—ಕೃಪೆಮಾಡು—ಎಲೋರೆಂಪಾವಾಯ್—

ಮುಕುತಿಸುಖವನನು ಭವಿಸಬೇಕಿಲ್ಲೀ ಎನಿಸಿದವಳಿಗೆ; ಕೇಳಿದಳು ಮಾಧವನ; ಪಡೆದಳು ಶಂಖವನು ಪತಾಕೆ ವಿತಾನಗಳನು, ನಲಿದು ಹಾಡುವಳೀಗ ಮನದಣಿ ಮದನಪಿತನ ಶೀಲವನು; ಕೂಲವಿಲ್ಲದ ಲೋಕದೊಡೆಯ ಗೋವಿಂದಾ ಎನುವಳು ತನ್ನವನೆನ್ನುವವಭಿಮಾನದಲಿ; ಗೋಪರಿಗೆ ಬೇಕು ಮಳೆ; ಅವರಿಗಾಗಿ ವ್ರತವೆಂದು ತೋರಿದಳು; ಕೇಳಿದಳು ಸಾಧನಗಳನ್ನು ಬಾಯಿಂದ; ಮಾತಿನಲ್ಲಿಟ್ಟಳು ತನ್ನ ಮನದಾಸೆಯನು; ಓಡಿಬಂದಪ್ಪಿದ ಕೃಷ್ಣ ಗಂಡ ಹೆಂಡಿರಂತಾದರಿವರು. ಬಲದ ಪತಿಯ ಹಿಗ್ಗಿನಲ್ಲಿ ಬಲಿಬಾತಳಿನ ಸಗ್ಗದಲಿ ಅರುಹುವಳೀಗ ಮುಕುತಿ ಸಾಮ್ರಾಜ್ಯವನು.

ಕೂಡಾರೈ ವೆಲ್ಲುಂ ಶೀರ್ ಗೋವಿಂದಾ ರ್ಉತನ್ನೈ
ಪಾಡಿ ಪರೈ ಕೊಂಡು ಯಾಂ ಪೆರು ಶಮ್ಮಾನಂ
ನಾಡು ಪುಕ್ಳುಂ ಪರಿಶಿನಾಲ್ ನನ್ರಾಹ
ಶೂಡಕಮೇ ತೋಳ್‌ವಳೈಯೇ ತೋಡೇ ಶೆವಿಪ್ಪೂವೇ
ಪಾಡಕಮೇ ಯೆನ್ರನಯ ಪಲ್‌ಕಲನುಂ ಯಾಮಣಿವೊಂ
ಆಡೈ ಯುಡುಪ್ಪೊಂ ಅರ್ದ ಪಿನ್ನೇ ಪಾಲ್ ಶೋರ
ಮೂಡ ನೆಯ್ ಪೆಯ್ದು ಮುಳ್ಗಂಗೈ ವೞಿವಾರ
ಕೂಡಿ ಇರುಂದು ಕುಳಿರ್ನ್ದ ಏಲೋರೆಂಪಾವಾಯ ॥ ೨೬ ॥

ಕೂಡಾರೈ ವೆಲ್ಲುಂ ಶೀರ್—ತನ್ನನ್ನು ಕೂಡಿಕೊಳ್ಳದವರನ್ನು ಕೂಡಿಸಿಕೊಳ್ಳುವ ಗುಣವುಳ್ಳವನೇ—**ಗೋವಿಂದಾ**—ಗೋವಿಂದನೇ ಈ ಎರಡು ನಾಮಗಳು ಅವನು ಪೂರ್ಣನೆಂದು ತೋರಿಸುವವು. **" ಶೀರ್ "** ಎಂದರೆ ಎಲ್ಲಾ ಕಲ್ಯಾಣ ಗುಣಗಳ ಬೀಡು. ಇದಕ್ಕೆ ಸೌಶೀಲ್ಯವೆಂದು ಹೆಸರು (5 ನೇ ಪದ್ಯನೋಡಿ) ಸರಿಯಾಗಿ **" ಶೀರ್ "** ಎಂದರೆ ಐಶ್ವರ್ಯ ಮತ್ತು ವರದಕ್ಷಿಣೆ. ಇಲ್ಲಿ ಕೃಷ್ಣನೇ ವರ. ನಮ್ಮನ್ನು ಅವರಿಗೆ ಆರ್ಪಿಸಿಕೊಳ್ಳಲು ಅವನಿಗೆ ನಾವು ಕೊಡಬೇಕಾದದಾವುದೂ ಇಲ್ಲ. ಅವನೇ ಮಗ ಕನ್ಯಾದಕ್ಷಿಣೆ; ಅವನೇ ನಮ್ಮ ಐಶ್ವರ್ಯ ಎಂದಳು ಮೊದಲು.

ವಾಲ್ಮೀಕಿಯಲ್ಲಿಗೆ ಬಂದರು ನಾರದರು. ಸನತ್ಕುಮಾರರಲ್ಲಿ ಕಲಿತವರು ನಾರದರು. ಎಲ್ಲರನು ಸೆಳೆವಸುಳಿ ಕೃಷ್ಣ ರಾಮನಾಗಿದ್ದನೆಂದರಿತಿದ್ದವರವರು. ಸತ್ಕರಿಸಿ ಕೇಳಿದರು ವಾಲ್ಮೀಕಿ :

ಕೋನ್ವಸ್ಮಿ ಸಾಂಪ್ರತಂ ಲೋಕೇ ಗುಣವಾ ಕಶ್ಚ ವೀರ್ಯವಾ ।

ಎಂದು. " ಸ್ವಾಮಿ, ಲೋಕದಲೀಗಿರುವ ಮಹಾತ್ಮನಾರು ಅಂದರೆ ಗುಣವಂತನಾರು, ವೀರ್ಯವಿರುವವನಾರು, ಮಿಕ್ಕಗುಣಗಳುಳ್ಳವನಾರು " ಎಂದು ಕೇಳಿದರು.

ಗುಣಗಳಲ್ಲಿ ಎರಡು ವಿಧ; ಸ್ವರೂಪ ತೋರುವ ಗುಣಗಳು ಕೆಲವು; ಅದು ಹೊರ ಹೊಮ್ಮಿ ಸಂಗದಲ್ಲಿ ತೋರುವ ಗುಣಗಳು ಮಿಕ್ಕವು. ಮೊದಲವು ಆತ್ಮಗುಣ, ಮಿಕ್ಕವು ಆತ್ಮೀಯ ಗುಣ. ಇವೆರಡೂ ಕೂಡಿ ಒಂದಾಗಿರುವ ಗುಣ ಸೌಶೀಲ್ಯ. ದೊಡ್ಡವನಾದರೂ ಚಿಕ್ಕವರಿಗೂ ಚಿಕ್ಕವನಾಗಿ ತೋರಿಕೊಳ್ಳುವ ಗುಣವಿದು. ಗುಣಗಳೆಲ್ಲವನ್ನೂ ಒಂದಾಗಿ ಭಾವಿಸಿ ನೋಡಿದರೆ ಅದೇ ಸೌಶೀಲ್ಯ. ಅದನ್ನೇ ಕೇಳಿದರು ವಾಲ್ಮೀಕಿ " ಗುಣವಾ " ಎಂದು. ಪರಮಾತ್ಮನಲ್ಲಿ ಕೂಡಿ ಹೋದವರಿಗೆ ಕಾಣುವ ಗುಣವಿದ್ದು. ಅದನ್ನು ಬಿಚ್ಚಿ ಹೇಳಿರುವಳು ಗೋದೆ **" ಕೂಡಾರೈ ವೆಲ್ಲುಂ ಶೀರ್ "** ಎಂದು. ಕೂಡಿಕೊಳ್ಳದವರನ್ನು ಕೂಡಿಸಿಕೊಳ್ಳುವ ಸೌಶೀಲ್ಯವನ್ನು ಆಚಾರ್ಯರು ಐದು ಬಗೆಯಲ್ಲಿ ಕಾಣುವರು.

1) ಶತ್ರುಗಳನ್ನು ಗೆಲ್ಲುವ ಗುಣವಿದು.

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾ ।
ಮಾಯಯಾಪಹೃತಜ್ಞಾನಾಃ ಆಸುರಂ ಭಾವಮಾಶ್ರಿತಾಃ ॥

—ಭ–ಗೀ–VII

ಎಂದು ಕೃಷ್ಣನು ಹೇಳಿರುವಂತೆ ಪರಮಾತ್ಮನನ್ನು ಜರಿಯುವ ಕೆಟ್ಟವರುನಾಲ್ವರು– ಮೂಢ, ನರಾಧಮ, ಮೋಸಹೋದ ಅಜ್ಞಾನಿ ಮತ್ತು ಬಾಳಿನಲಿ ಬೀಳುಬಿಟ್ಟರುವ ಅಸುರಪ್ರಕೃತಿಯವ. ಮುಂದು ಮುಂದಿನವರು ನೀಚತಮರು. ಎಲ್ಲಕ್ಕೂ ಅಸುರ ಗುಣವೇ ಮೂಲ. ಅರ್ಜುನನಿಗೆ ಕೃಷ್ಣ ಹೇಳಿದ

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ವಿದ್ವಿಷಂತೋಭ್ಯಸೂಯಕಾಃ ॥
ತಾನಹಂ ದ್ವಿಷತಃ ಕ್ರೂರಾ ಸಂಸಾರೇಷು ನರಾಧಮಾ ।
ಕ್ಷಿಪಾಮ್ಯಜಸ್ರಮಶುಭಾ ಆಸುರೀಷ್ವೇವ ಯೋನಿಷು ॥

" ಅರ್ಜುನ, ಅಹಂಕಾರ ತುಂಬಿ, ಕೆಚ್ಚು, ಹೆಮ್ಮೆ, ಆಸೆ, ಕೋಪವನ್ನು ತಾಳಿ, ನನ್ನನ್ನು ತನ್ನಲ್ಲಿ ಪರರಲ್ಲಿ ಕಾಣಲಾರದೇ ಜರಿಯುವವರನ್ನು ಇನ್ನೂ ಕೆಳಮಟ್ಟ ಜೀವಿಕೆಯಲ್ಲಿ ತಳ್ಳುವೆನು. " ಇದು ಹೇಳಿದ್ದು ತಂದೆ ಮಕ್ಕಳನ್ನು " ನೀನು ಹಾಳಾಗಿ ಹೋಗು " ಎಂದು ಬೈದಂತೆ. " ಅಪ್ಪಾ " ಎಂದು ಬಂದೊಡನೆ " ಏನು ನನ್ನ ಕಂದ " ಎನ್ನುವುದಕ್ಕಾಗಿ. ಅದೇ **" ಕೂಡಾರೈ ವೆಲ್ಲುಂ ಶೀರ್ "**; ನಾಸ್ತಿಕರನ್ನು ಗೆಲ್ಲುವ ಗುಣವಿದು.

2) ಆಸ್ತಿಕರಲ್ಲಿ ಕೆಲಪರು ನಾನೇ ಬ್ರಹ್ಮನೆಂದು ತಿಳಿದು ಶಾಂತಿಯಿಲ್ಲದವರು. ತನ್ನ ಯೋಗಾನುಭವದಿಂದ ಶಠಗೋಪರು ಅವರನ್ನು ತೋರಿಸಿ ಹೇಳಿದರು

—(ತಿರು–ಮೊ VIII, 8,9)

ಕೂಡಿತ್ತಾಕಲ್ ನಲ್ಲುರೈಪ್ಪು ಕೂಡಾಮೈಯೈ ಕ್ಕೂಡಿನಾಲ್ ।
ಆಡಲ್ ಪರವೈ ಉಯರ್ಕ್ಕೊಡಿ ಯ್ರ್ ಮಾಯನಾವದು ಅದು ॥
ವೀಡೈ ಪ್ಪಣ್ಣಿ ಯೊರು ಪರಿಶೇ ಎದಿರ್ವುಂ ನಿಕಳ್ವುಂ ಕಳಿವು ಮಾಯ್ ।
ಓಡಿತ್ತಿರಿಯುಂ ಯೋಗಿಗಳುಮುಳರುಮಿಲ್ಲೈಯಲ್ಲರೇ ॥

ಎಂದು. ಜೀವ ದೇವನಾಗುವುದು ಮೊಲಕ್ಕೆ ಕೊಂಬುಬಂದಂತೆ. ಈ ಭಾವವುಳ್ಳ ಯೋಗಿಗಳು ಅಲೆದಾಡುತ್ತಿರುವರು. ಇವರಿಗೆ ಕಷ್ಟ ಪರಂಪರೆಕೊಟ್ಟು, ಮನ ಕಟ್ಟುಬಿಚ್ಚಿ "ನಾನೇ ದೇವನಾದರೆ ಈ ದುಃಖ ನಿನಗೇಕೆ ಬಂದೀತು"? ಎಂದು ತೋರಿಸಿ ತನ್ನನ್ನೇ ನೆನೆಯುವಂತೆ ಮಾಡಿಕೊಳ್ಳುವಗುಣ "ಕೂಡಾರೈವೆಲ್ಲುಂ ಶೀರ್"

ಪರಾಶರಭಟ್ಟರು ಶ್ರೀ ರಂಗನಾಥನೆದುರು ನಿಂತಿದ್ದರೊಂದುದಿನ ಮಜ್ಜನವೇಳೆಯಲಿ. ಕಂಡರಾಗ ದೇವ ಆಣೆಯಿಡಲು ನೀರಿನಲಿ ನಿಂತಂತೆ. "ದೇವ" ಎಂದರು ಕಂಬನಿ ತುಂಬಿ. ಉಕ್ಕಿಬಂತು ಭಾವ. ಕೋಡಿ ಹರಿಯಿತು ಮೇಧೆ. ಬಂದು ಚಿತ್ರವೇ ನಿಂತಿತು ಕಣ್ಣುಮುಂದೆ.

ಶ್ಲೋಕ

ದೇವ ಹೇಳಿದ ನಾಸ್ತಿಕನಿಗೆ	ತ್ವಂ ಮೇ	ನೀನು ನನ್ನವನಯ್ಯ
ನಾಸ್ತಿಕ ಉತ್ತರಿಸಿದ	ಅಹಂ ಮೇ	ನಾನು ನನ್ನವನೇ; ನಿನ್ನವನಲ್ಲ
ದೇವ ಮತ್ತೆ ಹೇಳಿದ	ಕುತಸ್ತತ್	ಅದು ಹೇಗೆ ಹೇಳಯ್ಯ
ನಾಸ್ತಿಕ ಹೇಳಿದ	ತದಪಿಕುತಃ	ಅದಿರಲಿ; ನೀನು ಹೇಳಿದ್ದು ಹೇಗೆ ಹೇಳು ಮೊದಲು
ದೇವ ಮುಂದೆ ಸಾಗೆಂದ	ಇದಂ ವೇದಮೂಲ ಪ್ರಮಾಣಾತ್	ಇದು ನಾನು ಹೇಳಿದ್ದು ವೇದದಾಧಾರದಲಿ
ನಾಸ್ತಿಕ ಜಗ್ಗದೆ ಕೊಟ್ಟ ನುತ್ತರವ	ಏತಚ್ಚಾನಾದಿ ಸಿದ್ಧಾತ್ ಅನುಭವ ವಿಭವಾತ್	ಯೋಗದನುಭವದ ಹಿರಿಮೆಯಿಂದ ಹೇಳಿದ ಮಾತು ನನ್ನದು
ದೇವನಿಗೆ ಸಂಕಟವಾಗಿ ಹೇಳಿದ	ತರ್ಹಿಸಾಕ್ಷ್ರೋಶ ಏವ	ಹಾಗಾದರೆ ಬಂದಿತಯ್ಯ ತಲೆ ಶೂಲೆ, ಅನುಭವವೊಂದನ್ನೇ ನಂಬಿದರೆ
ನಾಸ್ತಿಕ ಎದುರಿಸಿದ	ಕ್ವಾಕ್ಷ್ರೋಶಃಕಸ್ಯ	ಎಲ್ಲಿ ಬಂತದು; ವೇದಕ್ಕೆ ವಿರುದ್ಧವೆಂದು ಎಲ್ಲಿದೆ; ಯಾರು ಹೇಳಿರುವರು

ಆಸೆಯಿಟ್ಟು ಹೇಳಿದ ದೇವ	ಗೀತಾದಿಷು ಮಮ ವಿದಿತಃ	ನನ್ನ ಗೀತೆ ಮೊದಲಾದುದರಲ್ಲಿ ನೋಡು; ತಿಳಿವುದು ನಿನಗೆ
ನಕ್ಕು ಹೇಳಿದ ನಾಸ್ತಿಕ	ಕೋತ್ರ ಸಾಕ್ಷೀ	ಯಾವನಿದಕೆ ಸಾಕ್ಷಿ; ನಿನ್ನ ದೆಂದೇಕೆ ಯಾವನೋ ಹೇಳಿರಬಾರದವನ್ನು
ಗೋಗರೆದು ಹೇಳಿದ ದೇವ	ಸೂಧೀಸ್ಸ್ಯತ್	ಸತ್ಪುರುಷರಿರುವರಯ್ಯ ಸಾಕ್ಷಿ ಹೇಳಲು
ನಾಸ್ತಿಕ ದಿಟ್ಟಿಸಿ ಹೇಳಿದ	ಹಂತತ್ರತ್ಪಕ್ಷಪಾತೀ ಸಃ	ಹಾಗೆ ಹೇಳು; ನಿನ್ನ ಕಡೆಯವರು ನಿನಗಲ್ಲದೆ ಮತ್ತಾರಿಗೆ ಸಾಕ್ಷಿ ಹೇಳಾರು

ಇನ್ನು ಏನು ಹೇಳಬೇಕೆಂದು ತೋರಲಿಲ್ಲ ದೇವನಿಗೆ; ಒದ್ದೆ ಬಟ್ಟೆಯುಟ್ಟ; ಸೊಂಟ ಆಳ ನೀರಿನಲಿನಿಂತ "ಇಗೋನೋಡು ಆಣೆಮಾಡಿ ಹೇಳುವೆನು ನೀನು ನನ್ನವನೇ, ಸತ್ಯ, ಸತ್ಯ, ಸತ್ಯ"—ಆಗ ಆಚಾರ್ಯರೆಲ್ಲರೂ ಓಡಿಬಂದು ಹೇಳಿದರು ನಾಸ್ತಿಕನಿಗೆ "ಏನಯ್ಯ ನಿನಗೆ ಕರುಣೆ ಇಲ್ಲವೆ; ದೇವನಿಂತಿರುವನಯ್ಯ ನೀರಿನಲಿ ನಿನಗಾಗಿ; ನಾವು ಕೊಡುವೆವು ನಿನಗೆ ಸಮಾಧಾನ; ಈಗ ಒಪ್ಪಿಕೊ; ನೀನೊಬ್ಬನಲ್ಲಿ ನಾವೆಲ್ಲರೂ ಅವನ ಸೊತ್ತು" ಎಂದಂತೆ ಕಂಡಿತು ಪರಾಶರರಿಗೆ. ಧರೆಗಿಳಿದರು "ದೇವ, ಏನು ಆತುರ ನಿನಗೆ ನಾನು ನನ್ನವನೆನ್ನುವನನ್ನು ಕೂಡಿಕೊಳ್ಳಲು" ಎಂದು ಹೇಳಿ, ಸುತ್ತಲಿರುವರಿಗೆ ಹೇಳಿದರು

ಇತಿನೃಕಲಹೇನ್ಯೃಗ್ಯಮುಧ್ಯಸ್ಥವತ್ಸಂ

ಹೀಗೆ ದೇವಮಾನವನೊಡನೆ ಹೆಣಗಾಡಿದಂತೆ ಕಂಡೆವಯ್ಯ; ಮಧ್ಯಸ್ಥಿಕೆಗಾಗಿ ಬಂದ ಆಚಾರ್ಯರೊಡನಿರುವ ದೇವನನ್ನು ನೋಡಿದೆನಯ್ಯ"—ಎಂದರು ಪರಾಶರರು. ಅವರು ಕಂಡಿದ್ದು "ಕೂಡಾರೈವೆಲ್ಲುಂಶೀರ್" ಅನ್ನು.

3) ಮೊಗುವಾಗಿದ್ದಾಗ ಗೋಪಿಯರ ಮನೆ ಮನೆಗೆ ಹೋಗಿ ಕಾಡಿದ ಅವರನ್ನು; ನೋಡಿ ನೋಡಿ ಮುನಿದರವರು; ಕಂಡರಾಮೇಲೆ ತಮಗಾಗಿ ಬಂದ ವನವಟ್ಟಿದೆವಲ್ಲ; ಎಂದು; ಅಟ್ಟಿದರೂ ಮತ್ತೆ ಬರವೆನೆಂದು ಕಾದು ಕೂತರು. ವಯಸ್ಸು ಬಂದಮೇಲೂ ಅವನನ್ನು ಬಿಡದವರಾದರು; ಗೋಪರಿಗೆ ಕೋಪ ಕೃಷ್ಣನ ಮೇಲೆ; ಈಗ ಅವರನ್ನೊಲಿಸಿ ನಿಂತ ಕೃಷ್ಣಭಾವದಲಿ ಕಂಡಳು ಗೋದೇ "ಕೂಡಾರೈವೆಲ್ಲುಂ ಶೀರ್" ಎಂದು. "ಕೂಡಿರುವನೀಗ; ಕೇಳುವೆವು ಮನದಾಸೆಯನು; ಮೂಡುವೆವುವನಲ್ಲಿ; ಮಾಡುವೆವು ಸೇವೆಯನ್ನು; ಒಯ್ಯಲಿವ ತನ್ನಲ್ಲಿಗೆ" ಎಂದು ನೆನೆದು "ಗೋವಿಂದಾ ರ್ಯತನ್ನೈಪಾಡಿ . . ." ಎಂದು ನಿವೇದಿಸಿಕೊಂಡಳು.

4) ಆಸ್ತಿಕರಾದರೂ ಕೆಲವರು ಪರಮಾತ್ಮನಿಗೂ ತಮಗೂ ಅಂತರ ಕಂಡು ದೂರ ಸರಿಯುವರು "ದೇವ ನಿನ್ನನ್ನು ನನ್ನವನೆನ್ನುವ ಅಭಿಮಾನದಲಿ ದೂರಿದೆನಯ್ಯ ಕಳ್ಳನೆಂದು; ಕಾಣಲಾರದವನಾದೆನಯ್ಯ ಮೂರು ಲೋಕದೊಡೆಯನೆಂದು; ಕರಗಿ ಹೋಗಿರುವೆನಯ್ಯಾ; ಹರಿದು ಸೇರುವೆನಯ್ಯಾ ಪಾದ ಕಮಲಕೆ; ಇರುವೆನಯ್ಯಾ ನಾನಾಗಿಯೇ; ನೀನಾಗಲು ಬಯಸೆನಯ್ಯಾ; ನಾನು ನಿನ್ನ ನೆನೆವುದೇ ಹೊಲಸು ಕಾಣಯ್ಯ ನಿನಗೆ;" ಎಂದು ದೂರ ಸರಿಯುತ್ತಿದ್ದರೂ ಕೂಡಿಕೊಳ್ಳ ಬಂದುದನ್ನು ಕಂಡರು ಶಠಗೋಪರು (ತಿರು–ಮೊ I, 5, 1–10) ಕಂಡರಿದನು ನಿಗಮಾಂತದೇಶಿಕರು. ಹಾಡಿದರು—

ಪ್ಲದ್ರಾಹ್ವಾನಾಭಿಮುಖ್ಯಾತ್ ನಿಜಮಹಿಮತಿರಸ್ಕಾರಕಾರ್ಚಿಷ್ಮತ್ಪ್ರಿಯತ್ವಾತ್ ।
ಸರ್ವತ್ರಾಪ್ಯಂಘ್ರಿದಾನಾತ್ ಸವಿಧಶಯನತಃ ಸ್ವಾಂಘ್ರಿಸಕ್ತ್ಯೈಕರಸ್ಯಾತ್ ॥
ಗೋಪಾದ್ಯಾಪ್ತೇಃ ಅಶೇಷೇಕ್ಷಣವಿಷಯತಯಾ ಭಕ್ತವಸ್ತುಪ್ರಸಕ್ತೇ ।
ಶ್ಲಿಷ್ಯನ್ನಾಶನ್ಯಪೋಹಾತ್ ತದಹಿತಶಮನಾತ್ ಪ್ರಾಹನಾಥಂ ಸುಶೀಲಂ ॥

"ಕಂಡರಯ್ಯ ನಮ್ಮ ಶಠಗೋಪ, ದೇವ ಸುಶೀಲನೆಂದು ಹತ್ತು ಹಾಡಿನಲಿ ಹಾಡಿದರದನ; ಕೂಡಿಹಾಡಲದನುನಾವೆಂದು; ಬೈದರೂ ಬರುವನವನಮ್ಮಲ್ಲಿಗೆಂದರವರು; ಮಕ್ಕಳಾಟ ಪೂಜೆಯೂ ಸಾಕವಗೆ; ತೋರುವನು ತಾನೇ ಕಾಲನ್ನು ಪೂಜಿಸೆಂದು; ನಮಗಾಗಿ ಬಂದವನವ ಹಾಲು ಕಡಲಿಗೆ; ಕಾಲು ಹಿಡಿದವನ ಕೂಡಿಕೊಳ್ಳುವನಾತ; ಗೋಪರಿಗೆ ತೋರಿಕೊಟ್ಟನು ಹಾಗೆ; ಹಾಗಿರುವರೆಲ್ಲರ ಕಣ್ಣ ಮುಂದೆ ನಿಲ್ಲುವನವ; ಕೂಡಿಕೊಳ್ಳುವನು ಮತ್ತೆ; ಕಿತ್ತೊಗೆವ ಪಾಪವನು; ಮೆತ್ತನಾಗಿಸುವ ಬೇಡದನು" ಎಂದು—

ನಾಥಮುನಿಗಳು ಕಂಡರು ಶಠಗೋಪರನ್ನು ಯೋಗದಲ್ಲಿ; ಕೊಂಡರವರಿಂದ ಮುನಿಗಳೆಲ್ಲರ ಹಾಡನ್ನು; ತಮ್ಮವರು ದೇವನೆದಿರು ಹಾಡಲೆಂದಿಟ್ಟರು ಆಣೆಯನ್ನು: ಅವರ ಶಿಷ್ಯರು ರಾಮಮಿಶ್ರರು; ಅವರ ಶಿಷ್ಯರು ಪುಂಡರೀಕಾಕ್ಷರು; ಅವರಿಂದ ತಿಳಿದರು ನಾಥಮುನಿಗಳ ಮೊಮ್ಮಕ್ಕಳು ಯಾಮುನರು ಎಲ್ಲವನು. ಗುರು ಶಿಷ್ಯನನ್ನು ಶ್ರೀರಂಗನಾಥನಲ್ಲಿಗೆ ಒಯ್ದರು; ಹೇಳಿದರು "ನೋಡಿರಯ್ಯಾ, ಇವನೇ ನಿಮ್ಮ ಕುಲನಿಧಿ" ಎಂದು; ಕಂಡರಾಗ ಬೆಳಕನ್ನು; ನಮಿಸಿದರು ಗುರುವನ್ನು—

ನಮುನ್ಯಾನ್ಯುರವಿಂದಾಕ್ಷಂ ನಾಥಭಾವೇ ವ್ಯವಸ್ಥಿತಂ ।
ಶುದ್ಧಸತ್ವಮಯಂ ಶೌರೇಃ ಅವತಾರಮಿವಾಪರಂ ॥

ಎಂದು ಹೇಳಿಕೊಂಡು ಬಾಗಿದರು, ತಲೆಯನ್ನು ಎತ್ತಿನೋಡಿ ಮುಂದೆ ಕಂಡರು ದೇವನನ್ನು; ಹಾಡಿದರು ಮನತುಂಬಿ

ದಿಗಶುಚಿಮವಿನೀತಂ ನಿರ್ದಯಂ ಮಾಮಲಜ್ಜಂ ।
ಪರಮಪುರುಷ ಯೋಹಂ ಯೋಗಿವರ್ಯಾಗ್ರಗಣ್ಯೈಃ ॥

ವಿಧಿಶಿವಸನಕಾದ್ಯೈಃ ಧ್ಯಾತುಮುತ್ಯಂತದೂರಂ ।
ತವ ಪರಿಜನಭಾವಂ ಕಾಮುಯೇ ಕಾಮುವೃತ್ತಃ ॥

—ಸ್ತೋ–ರ–47

"ಪರಮಪುರುಷ, ಪರಮಯೋಗಿಗಳು, ನಾನ್ಮುಗ, ಮಹಾದೇವ ಮತ್ತು ಸನಕಮೊದಲಾದವರ ಧ್ಯಾನಕ್ಕೂ ಸಿಕ್ಕದ ನಿನ್ನ ದಾಸನಾಗಬೇಕೆಂದಾಶಿಸುವೆನಯ್ಯಾ, ಆಸೆಪಟ್ಟು; ನೀಚನಯ್ಯ ನಾನು; ವಿನಯ ತಿಳಿಯದವನಯ್ಯ ನಾನು; ದಯೆಯಿಲ್ಲದ ಎನಗೆ ಯಾರಲ್ಲೂ; ನಾಚಿಕೆಯಿಲ್ಲದವನಾನು–ಕ್ಷಮಿಸು ದೇವ" ಎಂದು ಕಾಲಿನಲ್ಲಿ ಬಿದ್ದು ಹೊರಳಾಡಿದರು. ಅವರನ್ನೆತ್ತಿ ತಬ್ಬಿದೆ ನೀನು–ಅದಲ್ಲವೇ ನಿನ್ನ "ಕೂಡಾರೈವೆಲ್ಲುಂಶೀರ್" ಎಂದರಾಚಾರ್ಯರು ಗೋದೆಯ ಮನತಿಳಿದು.

5) ಗೋದೆಯ "ಕೂಡಾರೈವೆಲ್ಲುಂಶೀರ್" ಎನ್ನುವ ಹೊಗಳಿಕೆಗೆ ಸೋತ ಕೃಷ್ಣ; ವ್ಯಾಖ್ಯಾನಕಾರರು ಹೇಳುವರಿಲ್ಲಿ; ತನಗೆ ಯೋಗ್ಯರಲ್ಲದರೊಡನೆ ಕೂಡುವುದೆಂತು ಎಂದು ಯೋಚಿಸಿ ಕೇಳಿದ ಗೋಪಿಕೆಯರನ್ನು "ಇಲ್ಲಿ ನೋಡಿ. ಎಲ್ಲರನ್ನೂ ಗೆಲ್ಲುವನು ನಾನು; ಅಬಲೆಯರು ನೀವು; ನೀವು ನನಗೆ ಸರಿಯಲ್ಲ; ನಿಮ್ಮೊಡನೆ ಕೂಡುವುದೆಂತು" ಎಂದು; ಮತ್ತೆ ಹೇಳಿದ "ನೀವು ಹೇಳುವಂತೆ ಇರುವುದು ಹೇಗೆ ಸಾಧ್ಯ (ಇಟ್ಟವ್ರಕ್ಕಾಂಪಡಿ ಇರುಪ್ಪದು ಎಂಗನೇ)" ಅದಕ್ಕೆ ಮತ್ತೆ ಹೇಳಿದಳು ಗೋದೆ "ಕೂಡಾರೈವೆಲ್ಲುಂಶೀರ್" ಎಂದು. "ದೇವ, ಅಡ್ಡದಾರಿಗೆಳೆಯದಿರು ನಮ್ಮ; ತಿಳಿದಿಹೆವು ನಾವು ನಿನ್ನನು; ನೀನು ರಾಮನಾಗಿ ಕಡಲಿಗೆ ಬಂದಾಗ ವಿಭೀಷಣ ಓಡಿಬಂದು ಕೈಮುಗಿದು

ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ ॥

"ಕಪಿಕುಲಮಣಿಗಳೇ, ಸಕಲ ಲೋಕ ಶರಣ್ಯ ಮಹಾತ್ಮ ರಾಮ, ವಿಭೀಷಣನಾದ ನಾನು ಅವನಲ್ಲಿ ಶರಣುಹೋಗಲು ಬಂದಿರುವೆನೆಂದು ಬೇಗ ತಿಳಿಸಿ; ಮತ್ತೆ ನನ್ನನ್ನು ತನ್ನಲ್ಲೇ ಇಟ್ಟುಕೊಳ್ಳಲು ರಾವಣ ಪ್ರಯತ್ನಿಸಿಯಾನು; ನನ್ನ ಬುದ್ಧಿ ಕೆಡುವುದಕ್ಕೆ ಮುಂಚೆ ರಾಘವನಿಗೆ ತಿಳಿಸಿ" ಎಂದ; ನೀನು ಶರಣು ಕೊಟ್ಟಿ; ಯಾರು ಹೇಳಿದರೂ ಕೇಳಲಿಲ್ಲ.

ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ ।
ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ ॥

ಎನ್ನುವ ಅವನ ಮಾತಿಗೆ ಸೋತೆ; ಹಾಗೆ ನಮಗೆ ಸೋತರೆ ನಿನಗೇನು ಬರುವುದುಕುಂದು; ಶಿಶುಪಾಲ ನಿನ್ನೊಡನೆ ಸೇರಲಿಲ್ಲ; ಜರಾಸಂಧ ಜರಿದ; "ನ ನಮೇಯಂ ಚ ಕಸ್ಯಚಿತ್"–ಯಾರಿಗೂ ತಲೆಬಾಗೆವು ನಾವು–ಎಂದರವರು; ರಾವಣನೂ

ಹಾಗೆಯೇ ಹೇಳಿದ. ಆದರೂ ಅವರೆಲ್ಲರನ್ನೂ ಸೇರಿಸಿಕೊಳ್ಳಲಿಲ್ಲವೇ ನಿನ್ನಲ್ಲಿ! ವಾಲ್ಮೀಕಿಯು ನೀನು ರಾಮನಾಗಿದ್ದಾಗ ಹಾಡಿದರು

ಸತ್ಯೇನ ಲೋಕಾ ಜಯತಿ ದೀನಾ ದಾನೇನ ರಾಘವಃ ।
ಗುರೂ ಶುಶ್ರೂಷಯಾ ಧೀರಃ ಧನುಷಾ ಯುಧಿ ಶಾತ್ರವಾ ॥

ಎಂದು; ನಾವು ದೀನರು; ನಿನ್ನನ್ನು ದಾನವಾಗಿ ಕೇಳಲು ಬಂದಿರುವೆವು; ಕೊಡುವುದು ನಿನ್ನ ಸ್ವಭಾವ. ಅಲ್ಲದೆ "ಉನ್ನೈ ಅರುತ್ತಿತ್ತು ವಂದೋಂ" ಎಂದು ಕೇಳಿರುವೆವು ಬೇರೆ. ನಿನಗೂ ನಮಗೂ ಸಂಬಂಧ ಯಾವ ಪ್ರಯೋಜನಕ್ಕೂ ಅಲ್ಲ.

ಸಂಬಂಧೋಪಿ ನ ಸಂಬಂಧಃ ಆತ್ಮನಃ ಪ್ರಾಣಕಾಯಯೋಃ ।
ಪುತ್ರಮಿತ್ರಕಳತ್ರಾದಿಸಂಬಂಧಃ ಕೇನ ಹೇತುನಾ ॥
ಪಿತೃಮಾತೃಸುತಭ್ರಾತೃದಾರಪುತ್ರಾದಯೋಪಿ ವಾ ।
ಏಕೈಕಫಲಲಾಭಾಯ ಸರ್ವಲಾಭಾಯ ಕೇಶವಃ ॥

ಪ್ರಾಣ ಶರೀರದೊಡನೆ ಜೀವನಸಂಬಂಧ ಸಂಬಂಧವೇ ಅಲ್ಲ; ಪ್ರಯೋಜನಕ್ಕಾಗಲ್ಲವೇ ಸಂಬಂಧ; ಪ್ರಾಣಕ್ಕೆ ದೇಹಕ್ಕೆ ಏನು ಪ್ರಯೋಜನ ಜೀವನೊಡನಿರಲು? ಜೀವನಿಗೆತಾನೇ ಏನು ಪ್ರಯೋಜನ; ಕಷ್ಟಪರಂಪರೆ ಪ್ರಯೋಜನವೇ? ಮಗ, ಗೆಳೆಯ, ಮಡದಿಯರೊಡನೆ, ತಂದೆ ತಾಯಿ, ಮಗ, ಒಡಹುಟ್ಟಿದವರ ಸಂಬಂಧ ಒಂದೊಂದು ಫಲಕ್ಕಾಗಿ; ನಿನ್ನೊಡನೆ ನಮ್ಮ ಸಂಬಂಧ ಒಂದು ಫಲಕ್ಕಾಗಲ್ಲ; ಎಲ್ಲಾ ಫಲಕ್ಕಾಗಿರುವ ಕೇಶವ ನೀನು; ಕೇಳದಿದ್ದರೂ ಕೊಡುವವ ನೀನು; ಕೊಡದಿದ್ದರೇನೇ ಏನೋ ಎನಿಸುತ್ತದೆ ನಿನಗೆ"—ಎಂದು ಅರ್ಥವಿಟ್ಟು ಹೇಳಿದಳು **"ಕೂಡಾರೈ ವೆಲ್ಲುಂ ಶೀರ್"** ಎಂದು

ಕೃಷ್ಣನಿಗೆ ಸಂತೋಷವಾಯಿತು. ಕೇಳಿದ "ಸರಿ, ಕೇಳಿರಿ, ಏನುಬೇಕು" ಎಂದು. ಆಗ "ಗೋವಿಂದಾ" ಎಂದಳು ಗೋದೆ. "ಗೋ" ಎಂದರೆ "ಭೂಮಿ ಮಾತು, ವೇದ, ಜ್ಞಾನ, ಹಸು, "ವಿಂದ್" ಎಂದರೆ "ಪಡೆಯುವುದು; ಹೊಂದುವುದು." "ನಮ್ಮ ಬಾಯಿಂದ ಮಾತುಗಳನ್ನು ಹೊರಡಿಸಿ, ನಿನ್ನವರನ್ನಾಗಿ ನೀನೇ ಮಾಡಿಕೊಂಡು, ದೇವ ನೀನು; ಹಾಲುಕಡಲಿನಲ್ಲಿ ನಿಂತು, ಮಾಸಿ ಹೋದ ಮುಖದೊಡನೆ ಬಂದ ಮೂವತ್ತು ಮೂರುಕೋಟಿ ದೇವತೆಗಳಿಂದ ಯಾಚಿಸಲ್ಪಟ್ಟು (ಗಾಂ—ಸ್ಪೋತ್ರಂ, ಎಂದರೆ—ಪ್ರಾಪ್ನೋತಿ) ಮತ್ತೆ ಅವರಿಗಾಗಿ ಅವರದನ್ನು ಹಿಂದಕ್ಕೆ ಕೊಟ್ಟಂತೆ ಮಾಡಿದವನಿಗೆ (ಗಾಂ—ಭೂಮಿ ಎಂದರೆ—ಪ್ರಾಪ್ನೋತಿ) ನಮ್ಮ ಮನದಾಸೆ ತಿಳಿಯದೇ ನಿನಗೆ ಎಂದಳು. ಭೀಷ್ಮರೂ ತನ್ನ ಯೋಗದೃಷ್ಟಿಯಲ್ಲಿ ಅದನ್ನೇ ಕಂಡರು.

ಅನಿರುದ್ಧಃ ಸುರಾನಂದೋ ಗೋವಿಂದೋಃ ಗೋವಿದಾಂ ಪತಿಃ ।

ಎಂದರು; "ನಿನಗೆ ತಡೆತರುವವರು ಯಾರು ದೇವ (ಅನಿರುದ್ಧಃ); ದೇವತೆಗಳಿಗೆ ಸುಖಕೊಡುವನೆಂದು ಸಂಕಲ್ಪಿಸಿದೆ (ಸುರಾನಂದ); ಮೂರುಲೋಕವನ್ನು ಅಸುರರಿಂದ ಕಿತ್ತುಕೊಂಡೆ (ಗೋವಿಂದಃ); ಜ್ಞಾನಿಗಳಿಗೆಲ್ಲರಿಗೂ ಪೂಜ್ಯನಾದೆ (ಗೋವಿಂದಾ ಪತಿಃ") (ಸ—ನಾ 189) ಮತ್ತೆ ನೋಡಿದರು; ಬೇರೆಯಾಗಿ ಕಂಡದೇವ. ಹಾಡಿದರು

ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ —ಸ—ನಾ 843

ಭೂದೇವಿಯನ್ನುದ್ಧಾರಮಾಡಲು ಬಂದ ಮಹಾವರಾಹಸ್ವಾಮಿ ನೀನು; ಹಿರಣ್ಯಾಕ್ಷನಿಂದ ಭೂದೇವಿಯನ್ನು ಸಂರಕ್ಷಿಸಿದೆ (ಗೋವಿಂದಃ,) ಜೇತನರನ್ನು ರಕ್ಷಿಸಿ ಅವರು ವೈಕುಂಠಸೈನ್ಯಕ್ಕೆ ಸೇರಿದಮೇಲೆ ಅವರ ನಾಯಕನಾಗಿರುವೆ (ಸುಷೇಣಃ,) ಶುದ್ಧ ವೀರಾಭರಣಗಳುಳ್ಳವ ನೀನು (ಕನಕಾಂಗದಿಲ);" ಎಂದು ಹಾಗೆ ಕೇಳುವ ಅಭಿಪ್ರಾಯವನ್ನು ಮುಸುಕಿನಲ್ಲಿಟ್ಟು ಹೇಳಿದಳು ಗೋದೆ "ಗೋವಿಂದಾ" ಎಂದು. ತಿಳಿದೂ ತಿಳಿಯದವನಂತೆ ಹೇಳಿದ ಕೃಷ್ಣ "ಬಾಯಿಬಿಟ್ಟು ಕೇಳಿ, ಏನುಬೇಕು" ತಾವೇ ಹೇಳಿಕೊಟ್ಟಮಾತನ್ನು ತನ್ನ ಮಗುವಿನ ಬಾಯಿಂದ ಕೇಳುವ ತಾಯಿಯಂತೆ, ಹೇಳಿದಳಾಗ ಗೋದೆ

ಉಂ ತನ್ನೈ ಪಾಡಿ ಪರೈ ಕೊಂಡು ಯಾಂ ಪೆರುಂ ಶಮ್ಮಾನಂ—ನಿನ್ನನ್ನು ಹಾಡಿ, ಸಾಧನದಿಂದ ನಾವು ಹೊಂದಬೇಕಾದ ಸನ್ಮಾನವಾವುದೆನ್ನುವುದನ್ನು ಕೇಳು ಹಾಗಾದರೆ.—ಇಲ್ಲಿ "ಉನ್ನೈ" ಎಂದಿದ್ದರೆ ಸಾಕಿತ್ತು; ಅದಕ್ಕೆ "ತನ್ನೈ" ಎನ್ನುವುದನ್ನು ಸೇರಿಸಿರುವಳು. "ಪುರುಷಕಾರದೊಡನೆ ನಿನ್ನನ್ನು" ಎನ್ನುವ ಅರ್ಥ ಕೊಡಲು ಹೀಗೆ ಹೇಳಿದಳು. "ನಿನ್ನನ್ನೇ ನಂಬಿದರೆ ಸಾಲದು; ಫಲಕೊಡಲು ಹಿಂಜರಿಯುವೆ; ನಿಷ್ಪಕ್ಷಪಾತಿ ಪ್ರಭು ನೀನು; ಶ್ರೀದೇವಿಯೊಡನಿದ್ದರೆ ನಾವು ಕೇಳುವ ಫಲಸಿಗುವುದು ನಿಜ" ಎನ್ನುವುದಕ್ಕಾಗಿ "ಉಂ ತನ್ನೈ" ಎಂದಳು. ಅಂದರೆ "ದೇವ. ನೀನು ಕೊಡುವುದು "ಮಾನ" ಅಳತೆಮಾತ್ರ; ನಾವು ಪಾಡಿದ ಕರ್ಮದಿಂದ ಅಳತೆ ಮಾಡಿಕೊಡುವ ಫಲ; ಶ್ರೀದೇವಿ ಹಾಗೆ ನೀನು ಮಾಡಲು ಬಿಡಳು; ತುಂಬಿಕೊಡುವಂತೆ ಮಾಡುವಳವಳು; ನಮಗೆ ಸಿಗುವುದು "ಸಮ್ಮಾನ" ಸಂಪೂರ್ಣಮಾನ (ಅಳ್ಳಿಅಳ್ಳಿಕೊಡುಪ್ಪಾಳ್") ಹನುಮಂತನಿಗೆ ಸೀತೆಯು ಕೊಟ್ಟಂತೆ. ರಾಮನಿಗೆ ಪಟ್ಟಾಭಿಷೇಕವಾಯಿತು; ಸನ್ಮಾನವನ್ನು ಪಡೆದರೆಲ್ಲಾ ವಾನರವೀರರು; ಹನುಮಂತನಿಗೆ ತಾನೇ ಕೊಟ್ಟಳು ಸೀತೆ ಬೆಲೆ ಬಾಳುವ ಬಟ್ಟೆಗಳನ್ನು ಆಭರಣಗಳನ್ನು

ಅರಜೇ ವಾಸಸಂ ದಿವ್ಯೇ ಶುಭಾನ್ಯಾಭರಣಾನಿ ಚ ।
ಅವೇಕ್ಷಮಾಣಾ ವೈದೇಹೀ ಪ್ರದದೌ ವಾಯುಸೂನವೇ ॥
—ರಾ—ಯು 131—78

ಈಗ ಕೊಟ್ಟಿದ್ದೆ ಜಾಸ್ತಿ ಎಲ್ಲರಿಗಿಂತ. ಇವನು ನನಗೆ ಬಹು ಪ್ರಿಯವೆಂದೂ ಅದ ಕ್ಕಾಗಿ ಹೆಚ್ಚಾಗಿ ಕೊಡುವೆನೆಂದೂ ತಿಳಿಸಲು ನೋಡಿ ನೋಡಿ ಕೊಟ್ಟಳು; ರಾಜನಾಗಿ ಎಲ್ಲರಿಗೂ ಸನ್ಮಾನ ಕೊಟ್ಟ ರಾಮ; ಪ್ರೀತಿಯಿಂದ ತನ್ನ ಕೈಯಿಂದ ಕೊಟ್ಟಳು ಸೀತೆ ಹನುಮಂತನಿಗೆ ಕೈತುಂಬ. ತೃಪ್ತಿಯಾಗಲಿಲ್ಲ.

ಅವಮುಚ್ಯಾತ್ಮನಃ ಕಂಠಾತ್ ಹಾರಂ ಜನಕನಂದಿನೀ ।
ಆವೈಕ್ಷತ ಹರೀ೯ ಸರ್ವಾ೯ ಭರ್ತಾರಂ ಚ ಮುಹುರ್ಮುಹುಃ ॥
ತಾಂ ಇಂಗಿತಜ್ಞಃ ಸಂಪೇಕ್ಷ್ಯ ಬಭಾಷೇ ಜನಕಾತ್ಮಜಾಂ ॥
ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ।
ಪಾರುಷಂ ವಿಕ್ರಮೋ ಬುದ್ಧಿಃ ಯಸ್ಮಿನ್ನೇತಾನಿ ಸರ್ವಶಃ ॥
ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ ।
ಹನುಮಾಂಸ್ತೇನ ಹಾರೇಣ ಶುಶುಭೇ ವಾನರರ್ಷಭಃ ॥

—ರಾ–ಯು–131, 79–82

ತನ್ನ ಕತ್ತಿನಿಂದ ಹಾರ ತೆಗೆದು ವಾನರ ವೀರರನ್ನೂ ರಾಮನನ್ನೂ ಮತ್ತೆ ಮತ್ತೆ ನೋಡಿದಳು. ರಾಮ ತಿಳಿದ ಇವಳ ಇಂಗಿತವನ್ನ; "ನಿನಗೆ ಯಾರಲ್ಲಿ ತೃಪ್ತಿ ಇದೆಯೋ, ಯಾರಲ್ಲಿ ಪೌರುಷ, ವಿಕ್ರಮ ಮತ್ತು ಬುದ್ಧಿಯು ಒಟ್ಟುಗೂಡಿರು ವುದೋ ಅವನಿಗೆ ಕೊಡು ನಿನ್ನ ಹಾರವನ್ನ" ಎಂದ. ಅವಳಿಗೆ ಕಣ್ಣು ಬಿದ್ದುದು ಆಂಜನೇಯ; ಕೊಟ್ಟಳವನಿಗೆ; ಎಂದೂ ಇಲ್ಲದ ಕಾಂತಿ ಕಂಡಿತವನಲ್ಲಿ. ಇದಲ್ಲವೇ ಸನ್ಮಾನ; ನಮಗೂ ಇಂತಹ ಸನ್ಮಾನ ಬೇಕು ಎಂದಳು ಗೋದೆ.

ಇಲ್ಲಿ ವಾಲ್ಮೀಕಿ "ಸುಶುಭೇ ವಾನರರ್ಷಭಃ" ಎಂದರು. ಅರ್ಥವಿಟ್ಟೇ ಹಾಗೆ ಹೇಳಿದರು. ಎಂದೂ ಇಲ್ಲದ ಕಾಂತಿ ಈಗ ಎಲ್ಲಿಂದ ಬಂತು? ಎಲ್ಲರೂ ನೋಡು ವಂತಾದ ಆಂಜನೇಯ. ಅವನಿಗೂ ಅದು ಕಂಡಿತು. ಇಲ್ಲಿಯವರಿಗೂ ಅವನ ಮನಸ್ಸಿನಲ್ಲಿ ಒಂದು ಸಂಕೋಚ ಕಾಣುತ್ತಿತ್ತು. ರಾವಣ ಸತ್ತ; ಸೀತೆಯನ್ನು ಕರೆತರಬೇಕಿತ್ತು; ಹೊರಡಲು ಅಣಿಯಾದ ಆಂಜನೇಯ; ನನ್ನ ತಾಯಿಯನ್ನು ಕರೆತರಲು ನಾನಲ್ಲದೆ ಮತ್ತಾರಿರುವರು ಅವಳಿಗೆ ಪ್ರಿಯರಾದವರು ಎನ್ನುವ ಅಭಿ ಮಾನವಿತ್ತವನಿಗೆ. ಆದರೆ ರಾಮ "ವಿಭೀಷಣ, ನೀನು ಹೋಗಿಬಾ" ಎಂದು; ರಾಮನಿಗೆ ನನ್ನಲ್ಲಿ ಪ್ರೀತಿ ಹೋಯಿತೇ? ಅವನಿಗೆ ನಾನು ಬೇಡವಾದೆನೇ; ಎಂದು ಮರುಕಗೊಂಡಿತು ಅವನ ಮನ. ಈಗ ಅರ್ಥವಾಯಿತವನಿಗೆ. ಹೌದು; ವಿಭೀ ಷಣ ಹೋಗಿದ್ದೇ ಸರಿ; ಸಕಲೈಶ್ವರ್ಯವೂ ಹಾಳಾಗಿ ಬೆಂದ ಲಂಕೆಗೆ ಧೊರೆಯಾಗ ಲಿರುವನು ವಿಭೀಷಣ; ಏನು ಸುಖಪಟ್ಟಾನು; ಸೀತೆಯ ಕಟಾಕ್ಷ ಬಿದ್ದರೆ ಮತ್ತೆ ಕುದುರುವುದು ಐಶ್ವರ್ಯ ಲಂಕೆಯಲ್ಲಿ ಎಂದು ತಿಳಿದೇ ರಾಮ ವಿಭೀಷಣನನ್ನು

ಕಳುಹಿಸಿದ. ಸೀತೆ ಹಾರ ಕೊಟ್ಟಮೇಲೆ ಇದನ್ನೂ ಕಂಡ ಆಂಜನೇಯ. ಈಯರ್ಥ ವನ್ನೂ ಇಟ್ಟು ಹೇಳಿದ ವಾಲ್ಮೀಕಿ "ಶುಶುಭೇ ವಾನರರ್ಷಭಃ" ಎಂದು.

ನಿಗಮಾಂತ ದೇಶಿಕರೂ ಶ್ರೀದೇವಿಯನ್ನು ಸ್ತೋತ್ರಮಾಡುವಾಗ

ಯಸ್ಯಾಂ ಯಸ್ಯಾಂ ದಿಶಿ ವಿಹರತೇ ದೇವಿ ದೃಷ್ಟಿ ಸ್ತ್ವದೀಯಾ ।
ತಸ್ಯಾಂ ತಸ್ಯಾಂ ಅಹಮುಹಮಿಕಾಂ ತನ್ವತೇ ಸಂಪದೋಘಾಃ ॥

"ದೇವಿ, ನಿನ್ನ ಕಟಾಕ್ಷ ಎಲ್ಲೆಲ್ಲಿ ಬೀಳುವುದೋ, ಅಲ್ಲೆಲ್ಲಾ ಸಿರಿ ತುಂಬಿ ತುಳುಕು ವುದು ಎಂದರು.

ಶ್ರೀದೇವಿಯ ದೃಷ್ಟಿ ಸಿರಿಗೆ ಮಾತ್ರವಲ್ಲ. ಈಶ್ವರ ಸಂಕಲ್ಪ ಪೂರ್ತಿಗೂ ಉಂಟು. ದಶರಥ ಕೈಕೇಯಿಗೆ ವರಕೊಟ್ಟಮೇಲೆ ರಾಮನನ್ನು ಕರೆಯಲು ಸುಮಂತ್ರ ಬಂದ. ಚಕ್ರವರ್ತಿಯ ಆಜ್ಞೆಯಾಗಿದೆ ಅಂದ. ರಾಮ ಹೊರಟ. ಅವನಿಗೆ ಮಂಗಳ ಹಾಡುತ್ತಾ ಬಾಗಿಲುವರಿಗೂ ಬಂದಳು ಸೀತೆ.

ಪತಿಸಮ್ಮಾನಿತಾ ಸೀತಾ ಭರ್ತಾರಮುಸಿತೇಕ್ಷಣಾ ।
ಆದ್ವಾರಮನುವವ್ರಾಜ ಮಂಗಳಾನ್ಯಭಿದಧ್ಯುಷೀ ॥ —ರಾ–ಅ 16–2

ಇವಳು ಮಂಗಳ ಹೇಳಲು ಕಾರಣ ಬೇರೆ. ಅವಳ ಮನಸ್ಸಿನಲ್ಲಿ ನೆನೆದ ಮಂಗಳ ಲೋಕ ಕಲ್ಯಾಣ; ರಾಮನಿಗೆ ಈಗಲೇ ಪಟ್ಟಾಭಿಷೇಕವಾದರೆ, ರಾವಣಾದಿಗಳನ್ನು ಕೊಲ್ಲುವುದೆಂತು? ಬ್ರಹ್ಮ ಮೊದಲಾದವರಿಗೆ ಕೊಟ್ಟ ಮಾತು ಏನಾಗುತ್ತಿದೆ. ಅದ ಕ್ಕಾಗಿ "ಮಂಗಳವಾಗಲಿ ಹೋಗಿ ಬನ್ನಿ" ಎಂದಳು ಸೀತೆ. "ನಿಮಗೆ ಮಂಗಳ ವಾಗಲಿ" ಎನ್ನಲಿಲ್ಲ. "ಲೋಕಕಲ್ಯಾಣವಾಗುವಂತಾಗಲಿ ಹೋಗಿ ಬನ್ನಿ" ಎನ್ನು ವಂತಿತ್ತು ಅವಳ ಮಾತು. ಹಾಗೆಯೇ ಇಲ್ಲಿ ಆಂಜನೇಯನನ್ನು ದಿಟ್ಟಿಸಿನೋಡಿ ಹಾರಕೊಟ್ಟದ್ದು "ಲೋಕಕಲ್ಯಾಣಕ್ಕಾಗಿ ಚಿರಂಜೀವಿಯಾಗಿರು" ಎಂದು ಹರಸಿ ದಳೂ ಕೂಡ. ಅದನ್ನೇ ಹೇಳಿದರು ವಾಲ್ಮೀಕಿ "ಶುಶುಭೇ ವಾನರರ್ಷಭಃ" ಎಂದು.

ಗೋದೆಯು "ಉಙ್ ತನ್ನೈ" ಎಂದಿದ್ದೂ ವಿಶಾಲದೃಷ್ಟಿಯಿಂದ; ಅವಳ ಹೃದಯವೇ ಹೃದಯ; ಇವಳು ಹಾಡಿರುವ ಹಾಡು ಲೋಕಕಲ್ಯಾಣಕ್ಕಾಗಿ ಶಾಶ್ವತ ವಾಗಿ ಉಳಿಯಲಿ ಎನ್ನುವ ಅರ್ಥವನ್ನೂ ಇಟ್ಟಿರುವಳು ತನ್ನ ಮಾತಿನಲ್ಲಿ. ಮತ್ತೂ ಹೇಳಿದಳು "ಕೃಷ್ಣ, ಕೇಳು ನಾವು ಹೊಂದುವ ಸಸ್ಮಾನ ಹೇಗಿರಬೇಕು ಗೊತ್ತೇ?

ನಾಡು ಪುಕಳ್ಂ ಪರಿಶನಾಲ್ ನನ್ರಾಕ–ದೇಶವೆಲ್ಲಾ ಹೊಗಳುವಂತಾಗಿ, ಆ ಹೊಗಳಿಕೆಗೆ ಪಾತ್ರರಾಗುವುದರಿಂದಲೇ, ಒಳ್ಳೊಳ್ಳೆ (ವಸ್ತುಗಳು ಸಿಕ್ಕುವಂತೆ ಮಾಡು.) ನಿನ್ನ ಅನುಗ್ರಹ ಸಿಕ್ಕಿದರೆ ಸಾಕು; ನಮಗೆ ಸಿಕ್ಕದಿರುವುದು ಲೋಕದಲ್ಲಿ ಯಾವುದಿರುವುದು. ನಿನ್ನ ಸಂತೋಷಕ್ಕಾಗಿ ಲೋಕವೇ ನಮ್ಮನ್ನು ಉಪಚರಿಸು

ವುದು. "ಸನ್ಮಾನ ವೆಂದರೂ ಒಂದೇ "ಪರಿಶು" ಎಂದರೂ ಒಂದೆ. "ಯಾಂ ಪೆರುಂ ಶಮ್ಮಾನಂ, ನಾಡು ಪುಕಳ್ವಂ ಪರಿಶು" ಎಂದಳು ಮೊದಲು. "ಅದನಾಲ್ ನನ್ರಾಹ" ಅದರಿಂದ ಚೆನ್ನಾಗಿ ಆಗುವೆವು ನಾವು ಎಂದಳು ಅನಂತರ. ದೊಡ್ಡವರಿಗೆ ಪ್ರಿಯನಾದವನಿಗೆ ಸನ್ಮಾನ ಸಿಗುವುದು ಸಹಜ. ಹಾಗಿರುವುದೇ ಕೀರ್ತಿ. ಅದರಿಂದಲೇ ಕೇಳಪೆ ಕೆಲಸವೆಲ್ಲವೂ ಆಗುತ್ತದೆ. ಹಾಗಿರುವಾಗ, ಕೃಷ್ಣ, ನಿನ್ನ ಅನುಗ್ರಹವಿದ್ದಮೇಲೆ ನಮಗೆ ಯಾವ ಕೊರತೆ ಇರುವುದು ಹೇಳು; ಆದರೂ ನಿನಗಾಗಿ ಕೇಳುವೆವು ಕೇಳು" "ಶೂಡಕಮೇ. . ." ಎಂದು ಪ್ರಾರಂಭಿಸುವಳು.

ಹೀಗೆ ಕೇಳುವಾಗ ಅವಳ ಮನಸ್ಸಿನಲ್ಲಿ ಒಂದು ಪ್ರಸಂಗವು ನೆನಪಿನಲ್ಲಿದ್ದಿರಬೇಕೆಂದು ಆಚಾರ್ಯರು ಹೇಳುವರು.

ಭಾರತ ಯುದ್ಧ ತಪ್ಪದಾಯಿತು. ಕೊನೆಯಬಾರಿ ಕೃಷ್ಣನನ್ನು ನೋಡಲು ಸಂಜಯ ಬಂದ. ಆಗ ಅಭಿಮನ್ಯುವೂ ಬಂದ ಕೃಷ್ಣನನ್ನು ನೋಡಲು. ದ್ವಾರಪಾಲಕರು ಕೃಷ್ಣನಿಗೆ ತಿಳಿಸಿದರು. ಮೊದಲು ಸಂಜಯನನ್ನು ಬಿಡು ಎಂದ. ಅವನು ಕೃಷ್ಣನನ್ನು ನೋಡಿಹೋದಮೇಲೆ, ಅಭಿಮನ್ಯುವನ್ನು ಬಿಡುಎಂದ. ನನಗಿಂತಲೂ ಸಂಜಯ ಪ್ರಿಯನಾದನೇ ಕೃಷ್ಣನಿಗೆ ಎಂದು ದುಃಖ ಅಭಿಮನ್ಯುವಿಗೆ. ಇದನ್ನು ಕಂಡ ಕೃಷ್ಣ ಹೇಳಿದ. "ಅಭಿಮನ್ಯು, ಇಲ್ಲಿಬಾ, ನಾನು ಈಗ ಹೇಗಿರುವೆನೋ ಅದನ್ನು ಹಾಗೇ ಹೋಗಿ ಹೇಳುವನು ಸಂಜಯ; ನನಗೆ ಯಾರು ಪ್ರಿಯರು ಎಂದು ದುರ್ಯೋಧನನಿಗೆ ಕೊನೆಯ ಬಾರಿ ತಿಳಿಯುವುದು. ಅದಕ್ಕಾಗಿ ಹಾಗೆ ಮಾಡಿದೆ" ಎಂದು ಅವನು ಹೇಳಿದಂತೆಯೇ ಆಯಿತು. ಸಂಜಯ ದುರ್ಯೋಧನನಿಗೆ ಹೇಳಿದ ಹಾಗೆಯೇ ವ್ಯಾಸರು ಆಗ ಹೇಳಿರುವ ಮಾತಿದು.

ಯತ್ರ ಕೃಷ್ಣಶ್ಚ ಕೈಷ್ಣಾ ಚ ಸತ್ಯಭಾಮಾ ಚ ಭಾಮಿನೀ।
ಸ ಚಾಭಿಮನ್ಯುರ್ನಯಯೌ ತಂ ದೇಶಮಬಿಜಗ್ಮತುಃ॥

ಸಂಜಯ ಕೃಷ್ಣನನ್ನು ನೋಡಿದಾಗ ಸತ್ಯಭಾಮೆಯ ತೊಡೆಯ ಮೇಲೆ ತಲೆಯಿಟ್ಟು ದ್ರೌಪದಿಯಿಂದ ಪಾದ ಸೇವೆ ತೆಗೆದು ಕೊಳ್ಳುತ್ತಿದ್ದ. ಇದನ್ನು ನೋಡಿಯೇ, ಹಾಗೆಯೇ ಧೃತರಾಷ್ಟ್ರನಿಗೂ ಹೇಳಿದ ಗೀತೆಯ ಕೊನೆಯಲ್ಲಿ ಬೇರೆ ರೀತಿಯಲ್ಲಿ

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾನೀತಿರ್ಮತಿರ್ಮಮ॥

"ನೀನು ಸಿಕ್ಕಿರುವುದೇ ನಮಗೆ ಎಲ್ಲಾ ಸನ್ಮಾನ ಸಿಕ್ಕಿದಂತೆ ಆದರೂ ಕೇಳು ಹೇಳುವೆನು" ಎಂದಳು–"ಶೂಡಕಮೇ . . . . ಎಂದು ಪ್ರಾರಂಭಿಸಿ.

ಶೂಡಕಮೇ–ಹಸ್ತಾಭರಣ, ತೋಳ್ ವಳೈಯೇ–ತೋಳುಬಳೆ, ತೋಡೇ–ಕರ್ಣಾಭರಣ, ಶೆವಿಪ್ಪೂವೇ–ಕರ್ಣಪುಷ್ಪ, ಪಾಡಕಮೇ–ಪಾದಾಭರಣ, ಎನ್ರನೈಯ

ಪಲ್ ಕಲನುಂ–ಎನ್ನುವ ಎಲ್ಲಾ ವಿಧ ಆಭರಣಗಳನ್ನೂ, ಯಾಂ ಅಣಿವೋಂ–ನಾವು ತೊಡುವೆವು; ಆಡೈ ಉಡುಪ್ಪೋಂ–ಬಟ್ಟೆ ಉಡುವೆವು, ಅದ್ದಪಿನ್ನೇ–ಆದಾದಮೇಲೆ, ಪಾಲ್ ಶೋರು–ಹಾಲನ್ನವು, ಮೂಡನೆಯ್ ಪೆಯ್ದು–ಮುಳುಗಿಹೋಗುವಂತೆ ಸಮೃದ್ಧಿಯಾಗಿ ತುಪ್ಪ ಸುರಿದು, ಮುಳ್ಂಗೈ ವಳಿವಾರ–ಮೊಣಕೈಯಲ್ಲಿ ಹರಿಯುವಂತೆ, ಕೂಡಿ ಇರಂದು–ನಾವೆಲ್ಲರೂ ಕಲೆತು, ಕುಳಿರ್ನ್ದ–ಸಂತೋಷಪಡುತ್ತೇವೆ.

ಈಗ ಹೇಳಿರುವ ಆಭರಣ, ಅಲಂಕಾರ ಮತ್ತು ಭೋಗಗಳು ಗೋಪರಿಗೆ ಹಿತವಾದವು. ಅವರಿಗೆ ಹಾಗೆಯೇ ಅರ್ಥವಾಗಲೆಂದು ಆ ಪದಗಳನ್ನೇ ಹೇಳಿ, ತಾವು ಅಪೇಕ್ಷಿಸುವ, ಮುಕ್ತಿ ಸಾಮ್ರಾಜ್ಯವನ್ನೂ ಆ ಪದಗಳಿಂದಲೇ ತೋರಿಸಿರುವಳು. ಕೌಶೀತಕೀ ಉಪನಿಷತ್ತು ಸಂಸಾರ ಬಿಟ್ಟು ಮುಕ್ತಿ ಪಡೆದವ ಏನೇನು ವೈಕುಂಠದಲ್ಲಿ ಹೊಂದುವನೆಂದು ಹೇಳಿದೆ.

ಶರೀರ ಬಿಟ್ಟವನ ದಾರಿ ಇಬ್ಬಗೆ. ಪ್ರಪನ್ನನಾಗದಿದ್ದವ ಸಂಸಾರಕ್ಕೆ ತಿರುಗಬೇಕು. ಅದು ದೇವನ ಸಂಕಲ್ಪ. ಹಿಂತಿರುಗಿಸುವ ದಾರಿ ದಕ್ಷಿಣಾಯನ. ಅದಕ್ಕೆ ಧೂಮಮಾರ್ಗ ಪಿತೃಯಾನವೆಂದೂ ಹೆಸರಿದೆ. ಇವನು ಸೂರ್ಯ ಲೋಕಕ್ಕೆ ಹೋಗದೆ ಚಂದ್ರಲೋಕಕ್ಕೆ ಹೋಗಿ, ಪಿತೃಲೋಕದಿಂದ ಹಿಂತಿರುಗುವನು; ಶರೀರ ಬಿಡುವಾಗ ಹೊಗೆಯ ದಾರಿಯಿಂದ ಹೋಗುವನು; ಹಿಂತಿರುಗುವಾಗ, ಮೇಲಿನ ಲೋಕ (ದ್ಯೌಃ), ಮಳೆ (ಪರ್ಜನ್ಯ,) ಪೃಥಿವೀ, ಬೀಜದಿಂದ ಪುರುಷನಲ್ಲಿ ರೇತಸ್ಸು, ಇವುಗಳೊಡನೆ ಕೂಡಿ, ಐದನೇ ಪರ್ವದಲ್ಲಿ ಹೆಂಗಸಿನ ಗರ್ಭದಿಂದ ಹೊರಬೀಳುವನು. ಈ ವರ್ಣನೆಯನ್ನು ಛಾಂದೋಗ್ಯೋಪನಿಷತ್ತಿನ ಪಂಚಾಗ್ನಿ ವಿದ್ಯೆಯು ಕೊಟ್ಟಿದೆ. ಪ್ರಪನ್ನನಾಗಿ ಮುಕ್ತಿಗೆ ಹೋಗುವನಾದರೆ, ಅವನ ದಾರಿ ಉತ್ತರಾಯಣ; ಅದಕ್ಕೆ ಅರ್ಚಿರಾದಿ ಮಾರ್ಗ ದೇವಯಾನವೆನ್ನುವ ಹೆಸರಿವೆ. ಈ ದಾರಿಯಲ್ಲಿ ಹೊರಟು ಸೂರ್ಯಲೋಕದಿಂದ ವೈಕುಂಠವನ್ನು ಸುತ್ತಿರುವ ವಿರಜಾನದಿಯ ದಡಕ್ಕೆ ಹೋಗುವನು. ವಿದ್ಯುಲ್ಲೋಕವೆನ್ನುವ ಲೋಕದಿಂದಲೇ ಇವನನ್ನು ಪರಮಾತ್ಮನ ಸಂಕಲ್ಪದಿಂದ "ಅಮಾನವ"ನೆನ್ನುವ ವೈಕುಂಠವಾಸಿ ನಿತ್ಯಸೂರಿಯು ಜೊತೆಯಲ್ಲಿ ಬರುತ್ತಿರುವನು. ಮುಕ್ತಿಹೊಂದುವ ಪುರುಷ ವಿರಜೆ ಬಂದೊಡನೆ ಅವನನ್ನು "ಅಮಾನವ" ಮುಟ್ಟುವನು; ಪ್ರಾಕೃತ ಶರೀರ ಬಿಡುವುದು. ಜೀವ ವೈಕುಂಠ ದಡ ಸೇರಿದೊಡನೆ ಅವನಿಗೆ ದಿವ್ಯ ಶರೀರ ಬರುವುದು. ಅಲ್ಲಿಂದ ಮುಂದೆ ಆ ಶರೀರಕ್ಕೆ ಅಲಂಕಾರವಾಗಬೇಕು. ಅವೆಲ್ಲವನ್ನೂ ಕೌಶೀತಕೀ ಉಪನಿಷತ್ತು ಹೇಳುವುದು. "ತಿಲ್ಯ"ವೆನ್ನುವ ದಿವ್ಯ ಮರದಹತ್ತಿರ ಹೋದೊಡನೆ ದಿವ್ಯಗಂಧ ಸೇರುವುದು ಇವನ ಶರೀರವನ್ನು ಅದಕ್ಕೆ ಮುಂಚೆ "ಐರಂಮದೀಯಂ" ಎನ್ನುವ ಸರಸ್ಸಿನಲ್ಲಿ ಮಿಂದು ಬರುವನು.

ತಂ ಪಂಚಶತಾನಿ ಅಪ್ಸರಸಾಂ ಪ್ರತಿಧಾವಂತಿ;
ಶತಂ ಮಾಲಾಹಸ್ತಾಃ, ಶತಮುಂಜನಹಸ್ತಾಃ,
ಶತಂ ಚೂರ್ಣಹಸ್ತಾಃ, ಶತಂ ವಾಸೋಹಸ್ತಾಃ,
ಶತಂ ಫಣಹಸ್ತಾಃ, ತಂ ಬ್ರಹ್ಮಾಲಂಕಾರೇಣ ಅಲಂಕುರ್ವಂತಿ

ಎಂದಿರುವಂತೆ ಆಭರಣ, ಕಾಡಿಗೆ, ಬಟ್ಟೆ, ಹೂಮಾಲೇ ಚೂರ್ಣ (Powder) ಮೊದಲಾದುವನ್ನು ತಂದು ಅಲಂಕರಿಸುವರು ಮುಕ್ತಿಗೆ ಹೋಗುವವನನ್ನು. ಅದನ್ನೇ ಗೋದೆಯು ತನ್ನ ವೇದದ ಮಾತಿನಲ್ಲಿ ಹೇಳಿರುವಳು. ಒಟ್ಟಿನಲ್ಲಿ ನಮಗೆ ಬರಲಿರುವುದು ಸೌಮಂಗಲ್ಯ. ಅದಕ್ಕೆ ಬೇಕಾದುದನ್ನು ತನಗೆ ಬೇಕಾಗುವಂತೆ ಹೇಳಿರುವಳು ಗೋದೆ.—ಏಲೋರೆಂಪಾವಾಯ್.

ಸ್ವಾಪದೇಶ

ಕೂಡಾರೈ ವೆಲ್ಲುಂ ಶೀರ್—ಶಿಷ್ಯರು ತಮ್ಮನ್ನೇ ಕೂಡಿಕೊಳ್ಳುವಂತೆ ಮಾಡುವ ಸೌಶೀಲ್ಯ ಗುಣವುಳ್ಳವನೇ ಬ್ರಹ್ಮಜ್ಞಾನಿಯೇ,

ಉಗ . . . . ನನ್ರಾಹ—ಅನ್ಯಾಪದೇಶದರ್ಥವೇ ಇಲ್ಲ.

ಶೂಡಕಂ—ಕೈಯ್ಯಿಗೆ ಆಭರಣವಾದ ಕೈಂಕರ್ಯ

ತೋಳ್ ವಳೈಯೇ—ಸದಾಚಾರ್ಯರಿಂದ ಬರುವ ಜ್ಞಾನ ಅಥವಾ ತಿರುಮಂತ್ರ.

ತೋಡೇ ಶೆವಿಪ್ಪೂವೇ—ಕಿವಿಗೆ ಭೂಷಣದ್ವಯ ಮಂತ್ರ

ಪಾಡಕ—ಚರಮಶ್ಲೋಕ; ಮೂಲಮಂತ್ರ ಮತ್ತು ದ್ವಯದಲ್ಲಿ ಉಪಾಯ ಮತ್ತು ಫಲವು ಹೇಳಿರುವುದರಿಂದ ಎರಡು ಆಭರಣಗಳು; ಚರಮ ಶ್ಲೋಕದಲ್ಲಿ ಉಪಾಯಮಾತ್ರವಿದೆ. ಆದ್ದರಿಂದ ಒಂದೇ ಆಭರಣ.

ಆಡೈ—ದಿವ್ಯದೇಹ—ವೈಕುಂಠದಲ್ಲಿ ಬರುವ ದೇಹ.

ಪಾಲ್. . . ಕುಳಿರ್ನ್ದು—ಪಾಲ್—ಸರ್ವಜ್ಞನಾಗಿ, ಮೂಡನೆಯ್ಪೆಯ್ದು ಆ ಸರ್ವಜ್ಞತೇ ಸಾರವಾಗಿ ತೆಗೆಯಲ್ಪಟ್ಟು ಕಾಯಿಸಿದ ತುಪ್ಪ—ಭಕ್ತಿ—ಮುಳ್ಗಂಗೈವಳ್ಗಿವಾರ—ಆ ಭಕ್ತಿಯು ಕೈಂಕರ್ಯದಲ್ಲಿ ಹರಿಯುವಂತಾಗಿ, "ಪರಭಕ್ತಿ ಭಕ್ತಿ" "ಪರಜ್ಞಾನ—ಪರಮಭಕ್ತಿ. ಕೃತ—ಪರಿಪೂರ್ಣನವರತ—ನಿತ್ಯ ವಿಶದ ತಮ—ಅನನ್ಯ ಪ್ರಯೋಜನ—ಅನವಧಿಕಾತಿಶಯ—ಪ್ರಿಯ—ಭಗವದನುಭವ—ಜನಿತ—ನಿತ್ಯ—ಕೈಂಕರ್ಯವೆಂದು ರಾಮಾನುಜರು ಹೇಳಿದಂತೆ—ಭಕ್ತಿಯು ಕೈಂಕರ್ಯದಲ್ಲಿ ಪೂರ್ಣವಾಗುತ್ತಿದೆ, ಹಾಗೆ ಕೈಂಕರ್ಯಮಾಡಿ, ಕೂಡಿ ಇರುಂದು—ಪರಮಾತ್ಮನೊಡನಿದ್ದು, ಕುಳಿರ್ನ್ದು—

ನಿತ್ಯಾನಂದವನ್ನನುಭವಿಸಲು, ಆಚಾರ್ಯಸೇವೆ ಎನ್ನುವ ನಮ್ಮ ವ್ರತವು ಸಾಂಗವಾಗಿ ನಡೆಯಲಿ—ಎಂದು ಶಿಷ್ಯ ಆಚಾರ್ಯನನ್ನು ಕುಳಿತು ಹೇಳಿದ ಪ್ರಾರ್ಥನೆ.

ಹಿಂದಿನ ಪದ್ಯದಲ್ಲಿ "ಕೂಡಿ ಇರುಂದು ಕುಳಿರ್ನ್ದ" ಎಂದು ಹೇಳುವಾಗ, ಪರಮಾತ್ಮನ ಸೌಶೀಲ್ಯದಲ್ಲಿ ನಂಬಿಕೆಯಿಟ್ಟು ಹಾಡಿದ್ದಳು. ಈಗ ತೋರಿತವಳಿಗೆ "ನಾನು ಆಸೆಪಟ್ಟಿದ್ದು ಸರಿಯೇ; ಅವನೇನೋ ಸುಶೀಲ; ನಮ್ಮನ್ನು ಬೇಗ ಕೂಡಿಕೊಳ್ಳುವನು; ಆದರೆ ನಾವು ಅದಕ್ಕೆ ಸಮ್ಮತಿಸುವುದು ಯೋಗ್ಯವೇ? ನಮ್ಮ ಎಲ್ಲೆಯಲ್ಲಿ ನಾವಿದ್ದರೇನೇ ಚಂದ; ಆದರೆ ಅವನನ್ನು ಬಿಟ್ಟಿರಲಾರೆವಲ್ಲ; ಮಾಡುವುದೇನು ಈಗ? ಶಠಗೋಪರಿಗಾದಂತೆ ನಾವು ಬೇಡವೆಂದರೂ ಕೂಡಿಕೊಳ್ಳುವುದೇ ಅವನ ಸ್ವಭಾವ; ಹಾಗಿಲ್ಲದಿದ್ದರೆ ಈ ಗೋಪಕುಲಕ್ಕೆ ಅವನು ಬಂದು ನಮ್ಮಂತೆ ಬೆಳೆದು, ಕಲೆತು, ನಲಿಯುತ್ತಿದ್ದನೇ? ನಾವು ಬಿಟ್ಟರೂ ಅವನು ಬಿಡ; ನಾವು ಗತಿಯಿಲ್ಲದವರೆಂದು ತಿಳಿದೇ ಬಂದಿರುವನು. ನಮ್ಮ ನಿಲುವನ್ನು ಬಿಚ್ಚಿ ಹೇಳಿ ಬಿಡೋಣವೆನ್ನಿಸಿತವಳಿಗೆ. ಹಾಡಿದಳು—

ಕರವೈಕಳ್ ಪಿಶೆನ್ರು ಕಾನಂ ಶೇರ್ನ್ದಂಪ್ಪೋಂ
ಅರಿವೊನ್ರು ವಿಲ್ಲಾದ ವಾಯ್ ಕುಲತ್ತು ಉಗ ತನ್ನೈ
ಪಿರವಿ ಪೆರುಂ ತನೈ ಪುಣ್ಣಿಯಂ ಯಾಮುಡೈಯೋಂ
ಕುರೈ ವೊನ್ರು ವಿಲ್ಲಾದ ಗೋವಿಂದಾ ಉಗ ತನ್ನೋಡು
ಉರವೇಲ್ ನಮಕ್ಕು ಇಂಗೆ ಒಳ್ಳಿಕ್ಕ ವೊಳ್ಳಿಯಾದು
ಅರಿಯಾದ ಪಿಳ್ಳೈಗಳೋಂ ಅನ್ಪಿನಾಲ್ ಉಗ ತನ್ನೈ
ಶಿರುಪೇರಳೈತ್ತನವುಂ ಶೀರಿ ಅರುಳಾದೇ
ಇರೈವಾ ನೀ ತಾರಾಯ್ ಪರೈ—ಏಲೋರೆಂಪಾವಾಯ್ ॥ ೨೮ ॥

ಕರವೈಗಳ್ ಪಿಶೆನ್ರು—ಹಸುಗಳ ಹಿಂದೆ ಹೋಗುವವರು **ನಾವು**; ಆಚಾರ್ಯನ ಹಿಂದೆ ಹೋಗುವ ಯೋಗ್ಯತೆಯುಳ್ಳವರಲ್ಲ; ನಾವು ಜ್ಞಾನಿಗಳಲ್ಲ; ಜ್ಞಾನವಿಲ್ಲದವರು ಜ್ಞಾನವಿಲ್ಲದ ಹಸುಗಳ ಹಿಂದೆ ಹೋಗುವವರು; "ಕರವೈಗಳೆ" ಎಂದರೆ ಹಾಲು ಕರೆಯುವ ಹಸುಗಳು; ಆ ಅರ್ಥವನ್ನೂ ಕೂಡಿಸಿಕೊಂಡರೆ, ಹಾಲಿಗಾಗಿ ನಾವು ಆ ಹಸುಗಳ ಹಿಂದೆ ಹೋಗುವವರು ನಾವು; ಇದು ಧರ್ಮವೆಂದು ತಿಳಿದು ಅವುಗಳ ಹಿಂದೆ ಹೋಗುತ್ತಿಲ್ಲ; ಧರ್ಮವೇನೆನ್ನುವುದೇ ನಮಗೆ ತಿಳಿಯದು.

ಕಾನಂ ಶೆಱ್ಱು—ಆ ಹಸುಗಳನ್ನು ಹಿಂಬಾಲಿಸಿ, ಅವನ್ನು ಮೇಯಿಸಲು, ಅವುಗಳ ಹಿಂದೆ ಕಾಡಿಗೆ ಹೋಗುವವರು ನಾವು; ತಪಸ್ಸಿಗಾಗಲ್ಲ; ದಿವ್ಯ ದೇಶಕ್ಕೂ ಅಲ್ಲ. "ಕಾಡಾದರೇನು? ನೈಮಿಶಾರಣ್ಯ ಮೊದಲಾದ ಕಾಡುಗಳಲ್ಲಿ ನಾನು ವೃಕ್ಷವಾಗಿರುವೆನು; ಆ ವೃಕ್ಷಗಳ ಕೆಳಗೆ ತಂಪಾಗಿ ನೀವು ಕೂತು ನನ್ನನ್ನು ನೆನೆದರೆ ಸಾಕು" ಎನ್ನುವೆಯೋ? ಅದೂ ಅಲ್ಲ. ನಾವು

ಉಣ್ಬೋಂ—ತಿನ್ನಲು ಇಲ್ಲಿಂದಲೇ ಬುತ್ತಿಕಟ್ಟಿ ಹೊರಟಿರುವೆವು. ನಿನಗೆ ನಿವೇದನ ಮಾಡಲು ಯೋಗ್ಯವಲ್ಲದ ತಂಗಳನ್ನು ಒಯ್ಯುವೆವು. ಶಾಸ್ತ್ರ ತಿಳಿಯದವರು ನಾವು; ತಿನ್ನುವುದು ಮಾತ್ರ ಗೊತ್ತು; ಹೇಗೆ ತಿನ್ನಬೇಕೆನ್ನುವುದು ನಮಗೆ ತಿಳಿಯದು—ಕಾರಣವೇನೆನ್ನುವೆಯೋ? ಕೇಳು

ಅರಿವೊನ್ರುಮಿಲ್ಲಾದ ವಾಯ್ಕುಲಂ—ಯಾವ ಜ್ಞಾನವೂ ಇಲ್ಲದ ಗೋಪಾಲಕುಲ ನಮ್ಮದು. ಹೀಗಿದ್ದರೂ ನಮ್ಮ ಆಸೆ ಮಾತ್ರ ದೊಡ್ಡದು; ನಿನ್ನೊಡನೆ ಯಾವಾಗಲೂ ಇರಬೇಕೆನ್ನಿಸಿದೆ. ಏಕೆನ್ನುವೆಯೋ

ಆಯ್ಕುಲತ್ತು ಉಱ್ ತನ್ನೈ ಪಿಱವಿಪೆರುಂತನ್ನೈ ಪುಣ್ಣಿಯ ಮಾಂ ಉಡೈಯೋ—ನಮ್ಮ ಕುಲವಾದ ಗೋಪಾಲಕುಲದಲ್ಲಿ ನೀನೇ ಬಂದು ಹುಟ್ಟಿರುವೇ; ಆ ಪುಣ್ಯವನ್ನು ಹೊಂದಿರುವೆವು; ನಮಗಾಗಿ ನೀನೇ ಬಂದಿರುವೆ; ನಾವು ನಿನ್ನನ್ನು ಕೂಡಲು ಅಧಿಕಾರ ಹೊಂದಿರುವೆವು—ಎಂದಳು. ಹೀಗೆ ಹೇಳುವಾಗ ರಾಮಾಯಣದ ಒಂದು ಪ್ರಸಂಗವನ್ನು ಕಣ್ಣಮುಂದೆ ತಂದಿರುವಳು. ರಾಮಾಯಣ ಉತ್ತರ ಕಾಂಡದಲ್ಲಿ ರಾಮನ ಮೋಹನಾಕೃತಿಗೆ ಮನಸೋತು ಋಷಿಗಳೆಲ್ಲರೂ "ರಾಮ ನಿನ್ನ ಆಲಿಂಗನವನ್ನಪೇಕ್ಷಿಸುವೆವು; ಯಾವಾಗ ಅನುಗ್ರಹ ಮಾಡುವೆ" ಎಂದು ಕೇಳಿಕೊಂಡರು. ಅವರ ಅಭಿಪ್ರಾಯವನ್ನು ತಿಳಿದ ರಾಮ. ಋಷಿಗಳು ಕಾಮರೂಪಿಗಳು; ಯೋಗದ ಬಲವಿತ್ತವರಿಗೆ. ಶೃಂಗಾರಮಯವಾಗಿತ್ತು ಅವರ ಮನ; ಅವರು ಹೆಂಗಸರಾಗಿ ರಾಮಪ್ರಿಯನಾಗಿ ಅಪ್ಪಿಕೊಳ್ಳಬೇಕೆಂದಾಶಿಸಿದವರು. ಏಕವತ್ನೀವ್ರತ ತಾಳಿದವ ರಾಮ; ಹೇಳಿದ" ಮುಂದೆ ನಿಮಗೆ ಅವಕಾಶ ಕಲ್ಪಿಸುವೆನು; ನಿಮ್ಮೊಡನೆ ಕೂಡಿಯಾಡಿರುವೆನು; ಈಗ ಆಗದು"ಎಂದ. ಅದನ್ನೇ ಜ್ಞಾಪಿಸಿರುವಳೀಗ ಗೋದೆ. "ಕೃಷ್ಣ ನಿನ್ನ ಸಂಕಲ್ಪದಂತೆ ಋಷಿಗಳಾದ ನಾವೆಲ್ಲರೂ ಪ್ರೇಮಸ್ವರೂಪಿಣಿಯರಾದ ಗೋಪಿಕೆಯರು; ನಮ್ಮನ್ನು ಕೂಡಲೆಂದೇ ನಮ್ಮಲ್ಲಿಗೆ ಬಂದಿರುವೆ. ಇದು ನಮ್ಮ ಪುಣ್ಯ; ನಾವು ಕೂಡಲಾರೆವೆನ್ನಲಾಗುವುದೇ? ಬಿಡುವೆಯಾ ನೀನು ನಿನ್ನ ಮಾತನ್ನು; ಸತ್ಯಸಂಕಲ್ಪನಲ್ಲವೇ ನೀನು; ಸತ್ಯಕಾಮನಲ್ಲವೇ ನೀನು—" ಎಂದಳು. ಒಡನೇ ಅವಳಿಗ ವೇದದ ತಿಳಿವು ಬಂದಂತಾಯಿತು. ಹೌದು ಛಾಂದೋಗ್ಯೋಪನಿಷತ್ತು

ಅಪಹತಪಾಪ್ಮಾ ವಿರಜೋ ವಿಮೃತ್ಯು ವಿಶೋಕಃ ವಿಜಿಘತ್ಸಃ
ಅಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋನ್ವೇಷ್ಟವ್ಯಃ

ಎಂದಿದೆ. "ಪಾಪವಿಲ್ಲದವ, ರಾಗವಲ್ಲವಿವನದು, ಅಳಿವಿಲ್ಲವಿವನಿಗೆ, ಶೋಕ ತಗಲದವ, ಹಸಿವು ಬಾಯಾರಿಕೆ ಇಲ್ಲದವ—ಒಟ್ಟಿನಲ್ಲಿ ದೋಷದ ಗಂಧವೇ ಇವನಲ್ಲಿಲ್ಲ. ಸತ್ಯಕಾಮ ಸತ್ಯಸಂಕಲ್ಪನಾಗಿರುವನು" ಈ ಅರ್ಥವನ್ನು ತನ್ನನುಭವದಲ್ಲಿ ಕಂಡಳು ಗೋದೆ. ದೋಷವಿಲ್ಲದೆ ಆಸೆಯುಳ್ಳವನಿವ ನಮ್ಮಲ್ಲಿ, ತನ್ನ ಸಂಕಲ್ಪದಂತೆ ಬಂದವ ನೀತ. ಮನ ತುಂಬಿಬಂತು ಹಾಡಿದಳು—

ಕುರೈವೊನ್ರುಮಿಲ್ಲಾದ ಗೋವಿಂದಾ—ಎಂದಳು ಬಾಯಿತುಂಬ. ನಿನಗೆ ಯಾವ ಕೊರತೆಯೂ ಇಲ್ಲ; ಪೂರ್ಣನು ನೀನು; ನಿನ್ನ ಮಾತನ್ನು ಉಳಿಸಿಕೊಳ್ಳಲು ಬಂದಿರುವೇ (ಗಾಂ ವಾಚಂ, ವಿಂದತಿ ಸ್ಮರತಿ); ಬಂದಿರುವೆನಲ್ಲಾ, ಎಂದು ಭೂಮಿಯನ್ನು ದುಷ್ಟರಿಂದ ಕಿತ್ತುಕೊಳ್ಳಲು ಬಂದಿರುವೆ (ಗಾಂ—ಭೂಮಿಂ, ವಿಂದತಿ—ಪ್ರಾಪ್ನೋತಿ) ನಿನ್ನ ಮೊದಲ ಉದ್ದೇಶ ನಾವು; ಇಲ್ಲಿ ಬಂದಿರುವೆ ಗೋಕುಲಕ್ಕೆ; ನಮ್ಮನ್ನು ಬಿಟ್ಟುಹೋಗುವೆಯೋ ಎಂದರೆ, ಹಾಗಾಗದು.

ಪರಿತ್ರಾಣಾಯ ಸಾಧೂನಾಂ—ಎಂದು ಹೇಳಿ, ಆಮೇಲೆ **"ವಿನಾಶಾಯ ಚ ದುಷ್ಕೃತಾಂ"** ಎಂದಿರುವನು ನೀನು. ಸರ್ವಶಕ್ತನಾದ ನಿನಗೆ ವೈಕುಂಠದಿಂದಲೇ ಕೆಟ್ಟವರನ್ನು ಕಡುಶಿಕ್ಷೆಗೊಳಗಾಗಿಸುವುದು ಸಾಧ್ಯವಿಲ್ಲವೇನು? ಆದರೆ ನಮ್ಮನ್ನು ಅಲ್ಲಿಗೆ ಒಯ್ಯಲು ಸಾಧ್ಯವಿಲ್ಲವೆನ್ನುವ ಮರುಕದಿಂದ ಇಲ್ಲಿ ನಮ್ಮವನಾಗಿ ಬಾಳಿ ಬದುಕಿರಲು ಬಂದಿರುವೆ. ನಮ್ಮಂತೆಯಲ್ಲ ನೀವು ಬಂದಿರುವುದು "ಅಜಾಯಮಾನೋ ಬಹುದಾ ವಿಜಾಯತೇ" ಎಂದು ಪುರುಷಸೂಕ್ತವು ಹೇಳಿರುವುದನ್ನು ಸತ್ಯವೆಂದು ತೋರಿಸಲು ಬಂದಿರುವೆ.

ಅಜೋಪಿ ಸನ್ ಅವ್ಯಯಾತ್ಮಾ ಭೂತಾನಾಮೀಶ್ವರೋಪಿ ಸನ್ |
ಪ್ರಕೃತಿಂ ಸ್ವಾಮವಷ್ಟಭ್ಯ ಸಂಭವಾಮ್ಯಾತ್ಮಮಾಯಯಾ ||

ಎಂದು ಹೇಳುವುದಕ್ಕೆ ಬಂದಿರುವೆ.

ಉಱ್ ತನ್ನೊಡು ಉರವೇಲ್ ನಮಕ್ಕು ಇಂಗೆ ಒಳ್ಳಿಕ್ಕ ಒಳ್ಳಯಾದು—ನಿನಗೂ ನಮಗೂ ಇರುವಒಡತನ ಇಂದಿನದಲ್ಲ; ಇಲ್ಲಿಮಾತ್ರವಿದ್ದು ಕಳೆದು ಹೋಗುವುದಲ್ಲ; ಯಾವಾಗಲೂ ಎಲ್ಲೆಲ್ಲೂ, ಒಳಗೂ ಹೊರಗೂ ಸುತ್ತಿಕೊಂಡಿರುವ ನಿನಗೆ ನಾವೆಲ್ಲರೂ ಒಡಲಿನಂತಿಹೆವು, "ಉರ್ಪಮಿಶೈ ಉಯಿರಿನ ಕ್ಕರಂದು ಎಂಗುಂ ಪರಂದುಳ್ಳ"—(ತಿರು—ಮೊಳ I, 1,7) ಎಂದು ಯೋಗಾನುಭವದಿಂದರಿತರು ಶತಗೋಪರು; ಅದಿಲ್ಲದೇ ನಾವರಿತಿರುವೆವೀಗ. ಒಲಿದಿರುವುದು ನಿನ್ನ ದೊಡ್ಡತನ; ಸರಿಯುತ್ತಿರುವುದು ನಮ್ಮ ದಡ್ಡತನ; ಮತ್ತೆ ಕೇಳು

ಅರಿಯಾದ ಪಿಳ್ಳೈಗಳೋಂ—ಏನೂ ಅರಿಯದ ಹೆಣ್ಣುಮಕ್ಕಳು ನಾವು; **ಅನ್ಬಿನಾಲ್**—ನಿನ್ನಲ್ಲಿರುವ ಪ್ರೀತಿಯಿಂದ, ನಮ್ಮ ನಿನ್ನ ಅಂತರವನ್ನು ನೋಡದೆ, **ಶಿರಪೇರಾಯ್ಚತ್ತ ನವುಂ**—ಚಿಕ್ಕಚಿಕ್ಕ ಹೆಸರಿನಿಂದ, ಗೋಪಾಲ, ಕಳ್ಳ, ಮೋಸಗಾರ,

ನಾಚಿಕೆಯಿಲ್ಲಿದವನೆ, ಸುಳ್ಳುಗಾರ ಎಂದೆಂದು ಏನೇನೋ ಕರೆದೆವು; ನಿನ್ನ ಹಿರಿಮೆಯನ್ನು ಅರಿಯಲಾರದವರಾದೆವು. ನಿನ್ನನ್ನು ಮಾತ್ರವಲ್ಲ. ನಿನಗೆ ಸೇರಿದವರನ್ನೂ ಕೂಡ "ಪಿಳ್ಳಾಯ್ (6), ಪೆಯ್‌ಪೆಣ್ಣೆ (7), ಕೊತುಕಲಮುಡೈಯಪಾವಾಯ್ (8) ಊಮೈ, ಶಿವಿಡು, ಅನಂದಲ್, ಏಮಪೆರುಂತುಯಿಲವಳ್ (9) ಕುಂಭಕರ್ಣರ್ಕ್ಕು ಪೆರುಂತುಯಿಲ್‌ತಂದಾನೋ ಉನಕ್ಕು (10), ಶಿತ್ತಾದೆ ಪೇಶಾದೆ ಎತ್ತಕ್ಕು ಉರಂಗುವುದು (11), ಇದೆನ್ನಪೇರುರಕ್ಕಂ (12), ಕುಳ್ಳಕುಳಿರನೀರಾಡಾದೇ ಪಳ್ಳಿಕ್ಕಿಡತ್ತಿಯೋ (13), ಎಂಗಳೈ ಮುನ್ನಮೆಳ್ಪುವ್ವಾ ವಾಯ್‌ಪೇಶುನಂಗಾಯ್ (14) ಎಂದು ಏನೇನೋ ಚಿಕ್ಕದಾಗಿ ಕರೆದೆವು. ನಮಗೆ ಸಮನೆಂಬ ಅಜ್ಞಾನದಿಂದ ಏಕವಚನದಲ್ಲಿ ಕರೆದೆವು. ದೂಷಿಸಿದೆವು. ಅರ್ಜುನನೂ ಹಾಗೆಯೇ ಮಾಡಿದ; ವಿಶ್ವರೂಪದಲ್ಲಿ ಕಂಡ ನಿನ್ನ ಹಿರಿಮೆಯನ್ನು; ಬೇಡಿಕೊಂಡ; ತಪ್ಪಾಯಿತೆಂದ; ನೀನು ಮನ್ನಿಸಲಿಲ್ಲವೆ?

ಶೀರಿ ಅರುಳಾದೆ—ಕೋಪಿಸಿಕೊಂಡು, ನಮ್ಮನ್ನು ತಂಪಿನಿಂದ ನೋಡದಿರಬೇಡ. ಎಷ್ಟಾದರೂ ನೀನು ನಮ್ಮ

ಇರೈವಾ—ಒಡೆಯನಲ್ಲವೇ?

ನೀ ತಾರಾಯ್ ಪರೈ—ನೀನೇ ಕೊಡು ನಮಗೆ ಸಾಧನೆಗಳನ್ನು—**ಏಲೋರೆಂಪಾವಾಯ್**—

ಸ್ವಾಪದೇಶ

ಒಬ್ಬ ಶಿಷ್ಯ ತನ್ನ ಮೊದಲಿನ ಸ್ಥಿತಿಯನ್ನೂ, ಜ್ಞಾನ ಬಂದಮೇಲೆ ಬರುವ ಪಶ್ಚಾತ್ತಾಪ, ಅದರಿಂದ ಬರುವ ನಿತ್ಯವಾದ ಆಚಾರ್ಯಸಂಬಂಧವನ್ನೂ ತಿಳಿಸುವನು. ಜ್ಞಾನ ಕೊಡುವನು ಮಾತ್ರ ನಲ್ಲ ಆಚಾರ್ಯ; ಮಿಕ್ಕ ಸಂಪ್ರದಾಯಗಳಲ್ಲಿ ಹಾಗೆಯೇ ಇದೆ. ವೇದವೇ ಹೇಳುತ್ತಿದೆ ಶ್ರೀಮನ್ನಾರಾಯಣನೇ ಮೊದಲನೇ ಆಚಾರ್ಯನೆಂದು ಅವನಿಂದ ಗೀತೆಬಂತು. ಅದರ ಆಧಾರದಮೇಲೆ ವೇದವನ್ನು ಅರ್ಥಮಾಡಿಕೊಳ್ಳಬೇಕೆನ್ನುವುದೇ ಅವನ ಆಜ್ಞೆ.

ವೇದೈಶ್ಚ ಸರ್ವೈರಹಮೇವ ವೇದ್ಯಃ —ಭ–ಗೀ XV, 15

ಎಂದು ಹೇಳಿದ್ದು ಸಾಲದೆ

ಉಪದೆಕ್ಷಂತಿ ತೇ ಜ್ಞಾನಂ ಜ್ಞಾನಿನ ಸ್ತತ್ವದರ್ಶಿನಃ —ಭ–ಗೀ IV, 34

ಎಂದು ನಿಯಮವಿಟ್ಟಿರುವನು. ಅದಕ್ಕಾಗಿಯೇ ವೇದವು

ಆಚಾರ್ಯವಾನಾಮಸಾವಸಾವಿತ್ಯಾಭಗವತ್ತಃ

"ನನಗೆ ಆಚಾರ್ಯರಿವರು; ಅವರಿಗೆ ಇವರು–ಹೀಗೆ, ಆಚಾರ್ಯ ಸಂತತಿಯನ್ನು ಪರಮಾತ್ಮನ ಪರ್ಯಂತ ನೆನೆಯುತ್ತಲೇ ಇರಬೇಕು" ಎಂದಿದೆ. ಶ್ವೇತಕೇತುವಿಗೆ ಅವನ ತಂದೆ ಪರಮಾತ್ಮನನ್ನು ತಿಳಿಸಿ ಕೊನೆಗೆ ಹೇಳಿದರು "ಆಚಾರ್ಯವ್ವಾ ಪುರುಷೋ ವೇದ" ಎಂದು, "ನಚಿಕೇತ ಆಚಾರ್ಯನಲ್ಲಿ ಭಕ್ತಿಯಿಟ್ಟು ಧ್ಯಾನಮಾಡಿದರೆ ನಿನಗೆ ಪರಮಾತ್ಮ ತಿಳಿಯುವನು" ಎಂದು; (ಛಾಂ–ಉ–ಉVI); ಸತ್ಯಕಾಮ ಜಾಬಲ, ವೇದಾಂತವನ್ನು ನಾಲ್ಕು ಜ್ಞಾನಿಗಳಿಂದ ಕಲಿತು ತನ್ನ ಆಚಾರ್ಯರಲ್ಲಿಗೆ ಬಂದರು; "ಶಿಷ್ಯ, ನಿನಗೆ ಎಲ್ಲವೂ ತಿಳಿದಿರುವಂತಿದೆ" ಎಂದರು. ಆಗ ಜಾಬಾಲಿ ಹೇಳಿದರು "ಆಚಾರ್ಯಾದೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪತ್"—"ಸ್ವಾಮಿ, ಆಚಾರ್ಯರಾದ ತಮ್ಮಿಂದ ಕಲಿಯುವ ವಿದ್ಯೆಯೇ ನೆಲೆಯೂರಿ ನಿಲ್ಲುವುದು" ಎಂದು, (ಛಾ–ಉ) ಮುಂಡಕೋಪನಿಷತ್ತು ಹೇಳಿತು "ಸಃ ಗುರುಮೇವ ಅಭಿಗಚ್ಛೆತ್" ಎಂದು–"ಸಂಸಾರದಲ್ಲಿ ಬೆಂದವ ಗುರುವಿನಲ್ಲಿ ಹೋಗಬೇಕೆಂದಿತದು. ಮೊದಲು ಗುರುವಾಗಿ, ಆಚಾರ್ಯನಾಗಿ, ಆ ಮೇಲೆ ನಮಗೆ ಉಪದೇಶಕೊಡುವನು ಬ್ರಹ್ಮಜ್ಞಾನಿ, ಉಪದೇಶ ಮತ್ತು ಜ್ಞಾನಕೊಡದವನು ಆಚಾರ್ಯನಲ್ಲ; ಆಚಾರ್ಯನಾದ ಮೇಲೆ ಉಪದೇಶಕೊಡುವವನು. ಉಪದೇಶ ಮತ್ತು ಜ್ಞಾನಕೊಡುವ ಸಂಬಂಧದಿಂದ ಒಬ್ಬ ಆಚಾರ್ಯನಾಗುವುದಿಲ್ಲ. ಹಾಗೆ ಮಾಡುವವನು ಉಪಾಧ್ಯಾಯ; ಅವರಿಗೆ ಉಪಕಾರಕಾಚಾರ್ಯರೆಂದು ಹೆಸರು. ಗುರುಶಿಷ್ಯ ಸಂಬಂಧ ಶರೀರ ಸಂಬಂಧವಲ್ಲ, ಜ್ಞಾನಸಂಬಂಧವೂ ಅಲ್ಲ, ಆತ್ಮ ಸಂಬಂಧವದು, ಎಂದಿಗೂ ಅಳಿಯದ ಸಂಬಂಧವದು. ಕೂರೇಶರೆನ್ನುವರು ರಾಮಾನುಜರ ಪಟ್ಟ ಶಿಷ್ಯರು. ಅವರಿಗಾಗಿ ತನ್ನ ಕಣ್ಣನ್ನೂ ಕಳಕೊಂಡವರು. ಕ್ರಿಮಿಕಂಠ ಚೋಳ ದೊರೆ ಹಾಗೆ ಶಿಕ್ಷಿಸಿದ್ದ ಅವರನ್ನು. ಅವರಿಗೆ ಅಂತಿಮ ಕಾಲ ಸಮೀಪಿಸಿದ್ದು ತಿಳಿಯಿತು. "ಸ್ವಾಮಿ ನನಗೆ ಅನುಜ್ಞೆಕೊಡಬೇಕು, ಹೋಗುವೆನು" ಎಂದರು. ಅಮಂಗಳವಾಗಿ ಕಂಡಿತು ಆ ಮಾತು ರಾಮಾನುಜರಿಗೆ "ಎಲ್ಲಿಗೆ" ಎಂದರವರು. "ವೈಕುಂಠಕ್ಕೆ ಮೊದಲು ಹೋಗಿ, ತಾವು ಅಲ್ಲಿಗೆ ಬರುವಾಗ ಎದಿರುಗೊಳ್ಳಲು ಏಳು ಪ್ರಾಕಾರದ ಮುಂದೆ ಬಂದು ನಿಲ್ಲಲು, ಹೊರಟು ಬರುವೆನು" ಎಂದರಂತೆ. ಇಂತಹ ಆಚಾರ್ಯ ಸಂಬಂಧ ಪ್ರಪತ್ತಿ ಮಾಡಿದವರಿಗೆ ಬರುವುದು. ಇವರೇ ಮೊದಲು ದೈವ ಶಿಷ್ಯನಿಗೆ. ಆ ಗುರು ಸಂತತಿಯ ಮೂಲಪುರುಷನಾಗಿ ಶ್ರೀಮನ್ನಾರಾಯಣ ಆನಂದಮಯನಾಗಿ ಕಾಣುವನು. ಅದಕ್ಕಾಗಿಯೇ ಶ್ವೇತಾಶ್ವತರ ಉಪನಿಷತ್ತು ಕೊನೆಯ ಮಂತ್ರವಾಗಿ ಹೇಳಿತು.

ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುತಾ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ॥

"ಯಾವನಿಗೆ ದೇವನಲ್ಲಿ ಎಷ್ಟು ಭಕ್ತಿಯಿರುವುದೊ ಅಷ್ಟೆ ಗುರುವಿನಲ್ಲಿದ್ದರೆ ಆಗಮಾತ್ರ ಅವನಿಗೆ ಪರಮಾತ್ಮನು ಗೋಚರವಾಗುವನು. ಅಂತಹವನಿಗಾಗಿ ಹೇಳಿದ್ದು ಇಲ್ಲಿ

ಯವರೆಗೂ ಹೇಳಿದಮಾತುಗಳು"—ಈ ಭಾವದಿಂದ ಒಬ್ಬ ಶಿಷ್ಯ ತನ್ನ ಆಚಾರ್ಯನನ್ನು ಕುರಿತು ಹೇಳಿದಮಾತು ಈ ಪದ್ಯದಲ್ಲಿದೆ.

ಜ್ಞಾನೇನ ಹೀನಃ ಪಶುಭಿಃ ಸಮಾನಃ"—ಎನ್ನುವಂತೆ ಅಜ್ಞಾನವನ್ನು ಹಿಂಬಾಲಿಸಿ. ಸಂಸಾರ ಕಾಡಿಗೆ ಹೋಗಿ ವಿಷಯಗಳೆನ್ನುವ ತಂಗಳನ್ನುಂಡಿರುವವರು ನಾವು; ಅಂತಹ ಅಜ್ಞಾನಿಗಳಾದ ನಮಗೆ ಕುಲಪತಿಯಾಗಿರುವವರು ತಾವು; ಇದು ನಮ್ಮ ಭಾಗ್ಯ; ತಮಗೆ ಯಾವ ಕೊರತೆಯೂ ಇಲ್ಲ; ಪರಮಾತ್ಮಾನುಭವವುಳ್ಳವರು ತಾವು; ನಿಮಗೂ ನಮಗೂ ಯಾವತ್ತಿಗೂ ಸಂಬಂಧವೂ ತಪ್ಪಿದ್ದಲ್ಲ; ನಾವು ಚಿಕ್ಕ ಬುದ್ಧಿಯುಳ್ಳವರು; ತಮ್ಮನ್ನು ದೂಷಿಸಿದೆವು; ತಾವು ಕೋಪಿಸಿಕೊಳ್ಳದಿರಬೇಕು; ನೀವೇ ನಮ್ಮ ದೈವ; ಎಲ್ಲವೂ (ಪರೈ) ತಾವೇ ಎಮಗೆ—ತಾವೇ ಕೊಡಬೇಕು ಎಲ್ಲವನ್ನೂ"—

"ಇರೈವಾ ನೀ ತಾರಾಯ್ ಪರೈ"—ಎನ್ನುವುದನ್ನು ಗಮನಿಸಿದ ಕೃಷ್ಣ. ಭೇರಿ, ಖಂಜರಿ ಮತ್ತು ಮೃದಂಗ ತೆಗೆದುಕೊಟ್ಟು ಹೇಳಿದ "ನೀವು ಕೇಳಿದಿರಿ ಭಜನೆ ಕೂಟಕ್ಕೆ ಬೇಕಾಗುವ ಸಾಧನಗಳನ್ನು; ಇಗೊ ಅವನ್ನು ತೆಗೆದುಕೊಳ್ಳಿ" ಎಂದು. ಅದನ್ನು ತೆಗೆದುಕೊಳ್ಳದೆ ತಮ್ಮ ಮನೋಭೀಷ್ಟ ಇವಲ್ಲವೆಂದು ಹೇಳಲು ಹೊರಟರು, ಇಲ್ಲಿಯವರೆಗೂ ಬಿಚ್ಚಿ ತೋರಿಸಿದ ವೇದಾಂತವನ್ನು ಒಟ್ಟುಗೂಡಿಸಿ, ಚಿಕ್ಕದಾಗಿ ಹೇಳುವಳೀಗ ಗೋದೆ.

ಹಿಂದಿನ ಪದ್ಯದಲ್ಲೇ ಜ್ಞಾಪಿಸಿದಳು "ದೇವ, ನಿನಗೂ ನಮಗೂ ಇರುವ ಸಂಬಂಧ ಈಗ ಬಂದುದಲ್ಲ. ಇದು ನಿತ್ಯವಾದುದು; ನಾವು ಬಿಟ್ಟರೂ ನೀನು ಬಿಡುವಂತಿಲ್ಲ"—ಎಂದು.

ಜೀವನಿಗೂ ಪರಮಾತ್ಮನಿಗೂ ನಿತ್ಯಸಂಬಂಧವಿರುವುದೇ ಹೊರತು ಜೀವನೇ ಪರಮಾತ್ಮನಲ್ಲ, ಪರಮಾತ್ಮನಾಗಲಾರ. ಹಾಲಿನಲ್ಲಿ ಸಕ್ಕರೆಯಂತೆ ಅವನಿರುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳದೆ ಮೋಸ ಹೋಗುವರು ಹಾಗೆ ತಿಳಿಯುವರು. ಕಾಣುವುದು ಇರುವುದು ಅವನೊಬ್ಬನೇ. ಒಡೆಯ ಬಂದ, ಪ್ರಿಯ ಬಂದ, ಬೆಳಕು ಬಂತು ಎನ್ನುವೆವು ನಾವು. ಒಡೆಯನೊಬ್ಬನೇ ಬರುವನೆಂದರ್ಥವಲ್ಲ; ಪ್ರಿಯನಾದವನು ಪ್ರೀತಿವಸ್ತುಗಳೊಡನೆ ಬರುವನು; ಬೆಳಕು ಆನಂದದೊಡನೆ ಬರುವುದು. ಹಾಗೆ ಪರಮಾತ್ಮ ಒಬ್ಬ. ಅದಕ್ಕಾಗಿಯೇ ಹೇಳಿದರು ರಾಮಾನುಜರು "ಸ್ವಾಮಿತ್ವೇನ ಸುಹೃತ್ವೇನ ಗುರುತ್ವೇನ ಚ ಅನುಸಂಧಾಯ" ಎಂದು. ಅವನೊಡನೆ ಒಂದಾಗಿದ್ದು, ಅವನಿಗಾಗಿ ನಿತ್ಯವಾಗಿ ದುಡಿಯುವುದೇ ಮೋಕ್ಷ; ಆತ್ಮದಲ್ಲಿ ಚಿಗುರುವ ಆನಂದವು ಅರಳಿ, ವಾಸನೆ ಸೂಸುವಂತೆ ನಿತ್ಯದುಡಿಮೆಯನ್ನು ಕೊಡು ಎಮಗೆ ಎನ್ನುವಳು ಗೋದೆ.

ಈ ನಿತ್ಯ ದುಡಿಮೆಯ ಹಿಂದೆ ಬೆಳಗುವ ಜ್ಞಾನ ಮುಮ್ಮೊಖವುಳ್ಳಕಂದಿಲು. ಪ್ರಪಂಚಕ್ಕೆ ಮತ್ತು ನಮಗೆ ದೇವ ಇರುವುದು ಮಡಕೆಗೆ ಮಣ್ಣು ಮತ್ತು ಕುಂಭಾರನಂತೆ. ಶಾಸ್ತ್ರದಲ್ಲಿ ಹಾಗಿರುವ ದೇವನನ್ನು ಶೇಷೀ ಎಂದೂ ನಮ್ಮನ್ನು ಶೇಷವೆಂದೂ ಹೇಳಲಾಗಿದೆ. ಆ ದೇವ ಕೃಷ್ಣನಾದಮೇಲೆ, ಬೇರೆ ಯಾರಿಗೂ ನಾವು ಶೇಷರಲ್ಲವೆನ್ನುವ ಭಾವ ಮೊದಲು ಮಾಡಿದರೆ, ಅವನಿಗೇ ಅದೀನರು ನಾವು, ಅವನೇ ನಮಗೆ ಎಲ್ಲಾ ಭೋಗ ಮತ್ತು ಅವನನ್ನು ಬಿಟ್ಟಿರಲಾರೆವು, ಎನ್ನುವ ಭಾವವು ತುಂಬಿ ಉಕ್ಕಿ ಬಂದು ಹರಿದು ದುಡಿಮೆ ಅಂದರೆ ನಿತ್ಯದುಡಿಮೇ, ನಿತ್ಯ ಕೈಂಕರ್ಯದಲ್ಲಿ ನಿಲ್ಲುವುದು. ಪೂರ್ಣಗೊಂಡ ವೇದಾಂತ ಜ್ಞಾನದ ಪ್ರವಾಹವೆಂದರೆ ಆನಂದಮಯ ಕೈಂಕರ್ಯ. ಚಿಕ್ಕದಾಗಿ ಹೇಳಿದರೆ ವೇದಾಂತಜ್ಞಾನದ ಪಾಕ. (1) ಅನನ್ಯಾರ್ಹಶೇಷತ್ವ, ತತ್ಪಾರತಂತ್ರ್ಯ, ತದೇಕಭೋಗತ್ವ ಮತ್ತು ತದ್ವಿರಹಾಸಹತ್ವವೆನ್ನುವ ಭಾವಮಂದಿರದಲ್ಲಿ ತಂಗಿ ಮುಂದೆ ನಿತ್ಯದುಡಿಮೆಯಾಗಿ ಕಾಣುವುದು; ಚಂದ್ರಸೂರ್ಯರಂತೆ, ನಕ್ಷತ್ರ, ಶಿಂಶುಮಾರಚಕ್ರದಂತೆ ನಾವು ಅಂದರೆ ನಮ್ಮ ಸ್ವರೂಪ ಪ್ರವೃತ್ತಿ ಮತ್ತು ನಿವೃತ್ತಿ ಧರ್ಮಪರಿಪಾಲನೆಯಲ್ಲಿ ಪಾಲುಗೊಳ್ಳುವುದೇ ಈ ದುಡಿಮೆ. ಇದನ್ನೇ ಗೋದೆಯು "ಪರೈ" ಎಂದು ಹೆಸರಿಟ್ಟು 1, 16, 20, 25, 26 ಮತ್ತು 28 ರಲ್ಲಿ ಅರ್ಥವನ್ನು ಬೆಳೆಸಿರುವರು.

ತಿತ್ತಂ ಶಿರುಕಾಲೇ ವಂದುನ್ನೈ ಚ್ಛೇವಿತ್ತು ಉನ್
ಪೊತ್ತಾಮರೈ ಯಡಿಯೇ ಪೋತ್ತುಂ ಪೊರುಳ್ ಕೇಳಾಯ್
ಪೆತ್ತಂ ಮೇಯ್ತುಣ್ಣುಂ ಕುಲತ್ತಿಲ್ ಪಿರಂದ ನೀ
ಕುತ್ತೇವಲ್ ಎಂಗಳೈ ಕ್ಕೊಳ್ಳಾಮಲ್ ಪೋಕಾದು
ಇತ್ತೈ ಪರೈಕೊಳ್ವಾನ್ ಅನ್ರು ಕಾಣ್ ಗೋವಿಂದಾ
ಎತ್ತೈಕ್ಕು ಮೇಳ್ಳಿಥ್ರ ಪಿರವಿಕ್ಕುಂ ಉನ್ ತನ್ನೋಡು
ಉತ್ತೋಮೇ ಯಾವೋಮುನಕ್ಕೇ ನಾಮಾಳ್ಚೆಯ್‌ವೊಂ
ಮತ್ತನಂ ಕಾಮಂಗಳ್ ಮಾತ್ತು—ಏಲೋರೆಂಪಾವಾಯ್ ॥ ೨೯ ॥

ಶಿತ್ತಂ ಶಿರುಕಾಲೇ ವಂದು—ಬೆಳಗಿನ ಝೂವದಲ್ಲಿ ನಾವು ಎದ್ದು ಬಂದು, ಉನ್ನೈ ಚ್ಛೇವಿತ್ತು—ನಿನ್ನನ್ನು ಪೂಜಿಸಿ, **ಉನ್ ಪೊತ್ತಾಮರೈ ಅಡಿಯೇ ಪೋತ್ತುಂ ಪೊರುಳ್ ಕೇಳಾಯ್**—ನಿನ್ನ ಬಿನ್ನದ ಬಣ್ಣದಂತೆ ಕೆಂಪಾದ ಕಮಲದಂತಿರುವ ಪಾದವನ್ನೇ ಪೊಗಳುವುದರ ಅರ್ಥವನ್ನು ಕೇಳು, ಇದು ಅವಳು ಮೇಲಿಟ್ಟು ಹೇಳಿದ ಅರ್ಥ. ಗಂಭೀರವಾದ ಒಳರ್ಥವನ್ನೂ ಇಟ್ಟಿರುವಳು ತನ್ನ ಮಾತಿನಲ್ಲಿ.

ಶಿತ್ತಂ ಶಿರು ಕಾಲೇ ವಂದು—ಶಿರುಶಿರುಕಾಲತ್ತಿಲೇ ವಂದು; ಇದನ್ನು ಮೂರುವಾಕ್ಯಗಳನ್ನಾಗಿ ಅಭಿಪ್ರಾಯ ಪಟ್ಟಿರುವಳು

1) ತಿರು ತಿರು ಕಾಲಂ 2) ತಿರುಕಾಲಂ 3) ಕಾಲಂ

1) **ತಿರು ತಿರು ಕಾಲಂ–" ಮುನಿವರ್‌ಗಳುಂ ಯೋಗಿಗಳುಂ–ಮೆಳ್ಳ ವೆೞುಂದು ಹರಿ, ಹರಿ** (6ನೇ ಪಾಶುರ) ಎಂದು ಸುಪ್ರಭಾತ ಹೇಳಿ ಏಳುವ ಕಾಲ; " ಪಂಚಪಂಚ ಉಷಃಕಾಲ" ವೆನ್ನುವ ಕಾಲ; ಸತ್ವಮಯ ಬ್ರಾಹ್ಮೀ ಮುಹೂರ್ತ ಚಿಗರುವ ಕಾಲ, ಬೆಳಗಿನ ರಘಾವ $3\frac{1}{2}$ ಯಿಂದ $4\frac{1}{2}$ ವರೆಗಿನ ಕಾಲ;

2) **ತಿರು ಕಾಲಂ–" ವಾಶನರುಂ ಕುೞಲ್ ಆಚ್ಚಿಯರ್ ಮತ್ತಿನಾಲ್ ಓಶೈ ಪಡುತ್ತ ತಯಿರರವಂ ಕೇಟ್ಟುಂ ಕಾಲಂ** (7 ನೇ ಪಾಶುರ); ಸುಪ್ರಭಾತ ಹೇಳಿದಮೇಲೆ ಪರಮಾತ್ಮನ ಬೆಳಗಿನ ಪೂಜೆ ಅಂದರೆ ಅಭಿಗಮನಕ್ಕೆ **ಅಣಿಮಾಡಿ** ಕೊಳ್ಳುವಕಾಲ; $4\frac{1}{2}$ ಯಿಂದ $5\frac{1}{2}$ ವರೆಗಿನ ಕಾಲ;

3) **ಕಾಲೀವಂದು–" ಶಂಗಲ್ ಪೊಡಿ ಕೂರೈ ವೆಣ್‌ಪಲ್ ತವತ್ತವರ್ ತಿರುಕ್ಕೋಯಿಲ್ ಶಂಗಿಡುವಾ ಪೋಕುಂ ಕಾಲಂ** (14 ನೇ ಪಾಶುರ); ಅಭಿಗಮನಾರಾಧನ ಕಾಲ; $5\frac{1}{2}$ ಯಿಂದ $6\frac{1}{2}$ ವರೆಗಿನ ಕಾಲ;

ಒಟ್ಟನಲ್ಲಿ ರಾತ್ರಿಯ ಕೊನೆಯ ಯಾಮದ ಮೂರು ಘಂಟೆಯ ಕಾಲ ಸತ್ವ ಮಯವಾದ ಕಾಲ; ಬ್ರಾಹ್ಮ ಮುಹೂರ್ತ; ಈ ಕಾಲದಲ್ಲಿ ಬಂದು ನಿನ್ನನ್ನು ಪೂಜಿಸಿ ನಿನ್ನ ಪಾದ ಕಮಲವನ್ನು ಪೊಗಳುವುದರ ಅರ್ಥವನ್ನು ಕೇಳು ಎಂದು ಹೇಳಿ ತನ್ನ ಮನದಲ್ಲಿ ತುಂಬಿರುವ ಅರ್ಥವನ್ನು ಸೂಚಿಸಿರುವಳು.

1) **ತಿರು ತಿರು ಕಾಲಂ**—ತಾನಾಗಿ ಮನಸ್ಸು ಸತ್ವದಿಂದ ಎಚ್ಚತ್ತಿರುವಕಾಲ; ಮನಸ್ಸಿಗೆ ಶಾಂತಿ ತರುವ ಕಾಲ; ಮೊದಲಿನ ಐದು ಪದ್ಯಗಳಲ್ಲಿ ತುಂಬಿಟ್ಟಿರುವ ಅರ್ಥವು ಹಿಡಿಸುವ ಕಾಲ; ನಮ್ಮ ನಿತ್ಯಜೀವನದಲ್ಲಿ ಮಂಗಳ ತರಬಲ್ಲ ಕಾಲ; ಜೀವನವೇ ಬೆಳಗುವಂತೆ ಮಾಡುವ ಬೆಳಕು ತಂದುಕೊಳ್ಳುವ ಕಾಲ; ಮುಂದಿನ ಹಗಲೆಲ್ಲಾ ಪಾವನವಾಗುವಂತೆ ಭಾವ ತಂದುಕೊಳ್ಳುವ ಕಾಲ (ಶಿರಂದ ಶಿರು ಕಾಲ); ಆ ದಿನ ಜನ್ಮ ಸಾರ್ಥಕವಾಯಿತೆಂದು ಮಾಡಿಸುವ ಸಂಕಲ್ಪ ತಾಳುವಕಾಲ ನಿಗಮಾಂತದೇಶಿಕರು ಹೇಳಿದರು—

ಸಮರ್ಥೇ ಸರ್ವಜ್ಞೇ ಸಹಜಸುಹೃತಿ ಸ್ವೀಕೃತಭರೇ
ಯದರ್ಥಂ ಕರ್ತವ್ಯಂ ನ ಪುನರಿಹ ಯತ್ಕಿಂಚದಿಹ ನಃ ।
ನಿಯಚ್ಛಂತಸ್ತನ್ಮಿ ನಿರುಪಧಿಮಹಾನಂದಜಲಧೌ
ಕೃತಾರ್ಥೀಕುರ್ಮಃ ಸ್ವಂ ಕೃಪಣಮಪಿ ಕೈಂಕರ್ಯಧನಿನಃ ॥

" ನಾವು ಭಗವಂತನ ಭಾವವಿಲ್ಲದೆ ಬಡವಾಗಿರುವ (ಕೃಪಣ) ಜೀವನವನ್ನು ದುಡಿಮೆಯ ಸಿರಿಯಿಂದ ಕೂಡಿ (ಕೈಂಕರ್ಯಧನಿನಃ) ಬೆಳಿಗಿಸುವ (ಕೃತಾರ್ಥೀಕುರ್ಮಃ); ಇದಕ್ಕಾಗಿ ಎಲ್ಲಿಯಿಲ್ಲದ ಆನಂದ ಕಡಲಾದವನಲ್ಲಿ ಅಡಗಿರುವ (ನಿಮಚ್ಛಂತಃ . . .

ಜಲದೌ); ಅಡಿಗೂಡಿದವರ ಗೆಳೆಯವವನು ಸರ್ವಜ್ಞ ಸಮರ್ಥ; ಇದಕ್ಕಿಂತ ಹೆಚ್ಚು ಏನು ಬೇಡ ಅವನನ್ನು ಹೊಂದಲು." ಈ ಭಾವದೊಡನೆ ಏಳುವಕಾಲ ತಿರು ತಿರು ಕಾಲಂ;

ಭಗವತಿ ಹತಾ ಪಾರಂ ಗಂತುಂ ಭರನ್ಯಸನಂ ಕೃತಂ
ಪರಿಮಿತಫಲಪ್ರಾಪ್ತ್ಯೈ ಕೃತ್ಯಂ ಪ್ರಹೀಣಮಕೃತ್ಯವತ್ ।
ಭವತಿ ಚ ವಪುರ್ವೃತ್ತಿಃ ಪೂರ್ವಂ ಕೃತೈರ್ನಿಯತಕ್ರಮಾ
ಪರಮಿಹ ವಿಭೋರಾಜ್ಞಾಸೇತುಃ ಬುಧೈಃ ಪರಿಪಾಲ್ಯತೇ ॥

ಅಪಾರ ಮಹಿಮ ಹರಿ; ಅವನದಡಿಧಾವರೆ ಕೂಡಿಯಲ್ಲದೆ ಗತಿಯಿಲ್ಲ ಎಮಗೆ ಅವನನ್ನು ತಿಳಿಯಲು; ಚಿಕ್ಕ ದೊಡ್ಡ ಫಲಕ್ಕಾಗಿ ಬೇರೊಂದಿಲ್ಲ ಸಾಧನ; ಕೂಡಿದ ಮೇಲೆ ಮತ್ತೊಂದಿಲ್ಲ ಮುಕ್ತಿಗಾಗಿ ಸಾಧನ. ಬಡಲು ಬಿಡುವತನಕ ಅವನಿಗಾಗಿ ದುಡಿಯುವುದೇ ಹಿರಿದು ಜೀವಕೆ ಎಂದರು ಶರಣರು.—ಹೀಗೆ ತಿಳಿದು ಜೀವವರಳಿಸುವ ಕಾಲ ತಿರು ತಿರು ಕಾಲಂ

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮುನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಸ್ಸದಾ ॥
—ಇತಿ–ಸಮು 4, 37, 42

ಅರಿವಾಳಿಗಳ ಹೇಳು ಕೇಳುವವ ತಿಳಿದವ; ಹೊಣೆಯಿಲ್ಲದವನಿಗೆ ಮುಪ್ತದಾರಿಯಲಿ; ಚಪಲ ಮಾರಿದ ಮನ ಶಮಗೊಂಡ ನಿಧಿ; ಅದಕ್ಕೆ ತೋರುವುದೇ ಶಾಸ್ತ್ರ—ಅಂತರಂಗ ಗೆಳೆತನ ಬೆಳೆಸುವಕಾಲ

ತಿರು ತಿರು ಕಾಲಂ–ಅದಕ್ಕಾಗಿಯೇ ಹೇಳಿದಳು ಐದನೇ ಪದ್ಯದಲ್ಲಿ **" ತೂಯೋಮಾಯ್ ವಂದು "**–ಎಂದು. ವ್ಯಾಖ್ಯಾನಕಾರರು ಹೇಳಿದರು " ಭಾವ ಶುದ್ಧಿಯೈ ಶೊನ್ನಪಡಿ"–ಎಂದು. ಕೊಚ್ಚೆಗೀಡಾದ ಮನದ ಕಪ್ಪು ಬಾಗಿಲು ಮುಚ್ಚಿ ಕೆಚ್ಚು ಏಳಿಸುವ ಭಾವ ತಂದುಕೊಳ್ಳುವ ಕಾಲ ತಿರು ತಿರು ಕಾಲಂ.

ಹಾಗೆ ಭಾವ ತುಂಬಿಬಂದಮೇಲೆ ಭಕ್ತಿಯಲ್ಲಿ ನೆನೆಯುವ ಕಾಲ ತಿರು ಕಾಲ; " ತೂಯೋಮಾಯ್ ವಂದು "–ಎಂದು ಗೋದೆಯು ಹೇಳಿದ ಕಾಲ (ಐದನೇಪಾಶುರ) ತಿರು ತಿರು ಕಾಲಂ; " ತೂಯೋಮಾಯ್ ವಂದೋಂ " (16ನೇ ಪಾಶುರ) ಎಂದು ಹೇಳಿದ ಕಾಲ ತಿರು ಕಾಲಂ; ಭಕ್ತಿಯು ಹುಟ್ಟಿ ಬೆಳೆದು ಪಕ್ವವಾಗುವ ಕಾಲ; 6ನೇ ಪಾಶುರದಿಂದ 16ನೇ ಪಾಶುರದವರೆಗೆ ಬೆಳೆಸಿ, ಭಕ್ತಿಯಲ್ಲಿ ತೊಯ್ದು ನಿಂತ ಹೊಂಬಣ್ಣಗೊಂಡ ಚೆಂದ ಮನಒಲಿವಕಾಲ ತಿರು ಕಾಲಂ; ಭಕ್ತಿ ಕಂಪಿನಲ್ಲಿ ಅಳಿಸಿ ಹೋಗದ ನೆನಸು, ಬಳಸಿ ಬಾಗುವ ಕಾಲ ತಿರು ಕಾಲಂ; ಕಟ್ಟನಲಿ ಸಿಲುಕದೆ, ಆತ್ಮವನು ಕಟ್ಟ, ದೇವನನು ಮುಟ್ಟಿ, ಗುಟ್ಟನಲಿ ನಲಿವಕಾಲ ತಿರು ಕಾಲಂ;

ಉತ್ಪತ್ತಿಸ್ಥಿತಿನಾಶಾನಾಂ ಸ್ಥಿತೌ ಚಿಂತಾಕುತಸ್ತವ ।
ಯಥೋತ್ಪತ್ತಿ ರ್ಯಥಾನಾಶಃ ಸ್ಥಿತಿಸ್ತದ್ವದ್ಭವಿಷ್ಯತಿ ॥

ಹುಟ್ಟು, ಸಾವು, ಅಳಿವಿಗೇಕೆ ಕೊರಗುವೆ ಮಾನವ? ಕೇಳಿ ನೀನು ಹುಟ್ಟಲಿಲ್ಲ; ನಿನ್ನ ಕೇಳಿ ಒಯ್ಯುವುದಿಲ್ಲ ಇಲ್ಲಿಂದ, ನಿನ್ನನ್ನು ಹಾಗೆ ಏಕೆ ತಿಳಿಯಲಾರೆ ಬಾಳು ನಿನ್ನ ಕೈಯಲ್ಲಿಲ್ಲವೆಂದು.

ಕೃತಕೃತ್ಯಾಃ ಪ್ರತಿಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಂ

ಜಗದೊಡೆಯನಡಿಗೆರಗಿದವರು ಅತಿಥಿಯಂತೆ ತಬ್ಬುವರು ಮೃತ್ಯುವನ್ನು. ಹೇಳಿದರು ಆಚಾರ್ಯರು

1) **ಪ್ರಪತ್ತಿಯಾವುದು ಧನುಷ್ಕನುಡೈಯ ಕುರಿಯ್ಕೈ**
ಅಡಿಕ್ಕುಂ ಕಾಲತ್ತಿಲೇ ಸಾಧ್ಯಂ
2) **ಪ್ರಪತ್ತಿಯಾನ ಪಿನ್ಬು ದೇಹಾವಸಾನತ್ತಳವುಂ ನಡ್ವಿಡಿವು**

ಎಂದು; ಪ್ರಪನ್ನನಾದವನು ನಾನು; ಒಡಲಬಿಡುವವರೆಗೂ ಬೆಳಕು ಬೀರಲಿ ನನ್ನ ಜೀವ; ದೇವ ಕರುಣಿಸಿದನ್ನ –ವೆಂದು ಬೇಡಿಕೊಳ್ಳುವಕಾಲ ಶಿರು ಕಾಲಂ (ಶಿರಂದಕಾಲಂ).

ಖಟ್ವಾಂಗನೆನ್ನುವ ದೊರೆಯಿದ್ದ; ಪರಾಕ್ರಮಶಾಲಿ; ಒಂದು ಕಾಲದಲ್ಲಿ ಇಂದ್ರನಿಗೆ ಸಹಾಯಮಾಡಿದ; ವರಕೇಳೆಂದ ಇಂದ್ರ; "ನನಗೆ ಮರಣ ಬರುವುದಾವಾಗ" ಎಂದು ಕೇಳಿದ ದೊರೆ. "ನಾಳೆಯೇ ನೀನು ಸಾಯುವೆ" ಎಂದ ಇಂದ್ರ; ಸಂತೋಷದಿಂದ ಮಗನಿಗೆ ಪಟ್ಟಗಟ್ಟಿನಿಂತ ಯಮನನ್ನು ದಿಟ್ಟಿಸಲು ಹಾಗೆ ಮನಸ್ಸನ್ನು ನಿಲ್ಲಿಸಿಕೊಳ್ಳುವಕಾಲ ಶಿರು ಕಾಲಂ

"ಶಿರು ಶಿರು ಕಾಲ" ದಲ್ಲಿ, ಕದಡಿದ್ದ ಮನಸ್ಸನ್ನು ಕವುಚಿಹಾಕಿ ಬಿಚ್ಚುಭಾವದಲ್ಲಿ ತಳವೂರಿ ನಿಲ್ಲುವಂತೆ ಮಾಡಿದಮೇಲೆ, **"ಶಿರು ಕಾಲ"** ದಲ್ಲಿ, ಅದರಲ್ಲಿ ಭಕ್ತಿರಸ ತುಂಬಿ ಹಾಡುವಂತೆ ಮಾಡಿದಮೇಲೆ **"ಕಾದಿರುವೆನಯ್ಯ ನಿನಗಾಗಿ ಒಡಲ ಬಿಡಿಸುವತನಕ"** ವೆನ್ನುವ ತಡವಾಗುವ ಗಿಡ ಬೀಳುವನಡು ಮಧ್ಯದಲಿ **"ಇರಲಾರೆ ನಯ್ಯ, ಬದುಕುಬಾಳಿನಯ್ಯ ನಿನ್ನ ತೊರೆದು"** ಎಂದು ದೈವಿಕ ತಾಪದಲಿ ಹೊರಳುವ ಕಾಲ **"ಕಾಲ"** ಹಾಗೆ ಇರುವೆನಯ್ಯ ಎನ್ನುವನು **"ಕಾಲೇ ವಂದು"** ಎನ್ನುತ.

ಆಚಾಸಾರ್ ರಂಗಧುರ್ಯ ದ್ವಯಸಮಧಿಗಮೇ ಲಬ್ಧಸತ್ತಂ ತದಾತ್ವೇ
ವಿಶ್ಲೇಷಾಶ್ಲಿಷಪೂರ್ವೋತ್ತರದುರಿತಭರಂ ಯಾಪಿತಾರಬ್ದದೇಹಂ ।
ತೀತೇಸ್ತ್ವತ್ಕೈಃ ತ್ವಯಾ ವಾ ನಿರವಧಿಕದಯೋದ್ಭೂತದೋಧಾದಿರೂಪಂ
ತ್ವದ್ಯೋಗೈಕಸ್ವಭಾವಂ ದಯಿತಮನು ಚರಂ ತ್ವತ್ಕೃತೇ ಮಾಂ ಕುರುಷ್ವ ॥

—ನ್ಯಾ–ತಿ32

"ರಂಗನಾಥ, ಪಡೆದೆನು ದ್ವಯವನ್ನು ಗುರುವಿನಿಂದ; ಉಳಿದೆನಯ್ಯ ನಿನಗಾಗಿ, ಕಳೆದನಯ್ಯ ದುರಿತವನು; ಕಾದಿರುವೆನಯ್ಯ ನೀನೋನಿನ್ನವರೋ ಬಂದು ಒಯ್ಯಲೀಗು; ಹಂಬಲಿಸುತಹೆನಯ್ಯ ನಿನ್ನೊಡಗೂಡಿಯಿರಲು; ದಾಸನಾಗಿಸಯ್ಯ ನನ್ನನು ಬೇಗ; ನಿನಗಾಗಿ ಮಾಡಯ್ಯ ಇದನು" ಎಂದರು ವೇದಾಂತದೇಶಿಕರು. ನೀನು ಬರುವತನಕ ಕಾದಿರಲಾರೆನಯ್ಯ, ನಾನೇ ನಿನ್ನಲ್ಲಿಗೆ ಬಂದಿಹೆನಯ್ಯ; ಮುಕುತಿಯಲ್ಲಿ ಕೊಡುವುದನ್ನು ಇಲ್ಲೆಕೊಡೆಂದು ಕೇಳಲು ಇಲ್ಲೇಈಗಲೇ ಬಂದೆಹೆನಯ್ಯಾ ಎಂದಿರುವಳು "ಕಾಲೇವಂದು" ಎನ್ನುವ ಎರಡು ಮಾತಿನಿಂದ. "ತುಯಿಲೆಳ್ಪ ಪಾಡುವ್ವಾ" ಎಂದು ಗೋಗರೆದು ಬಾಗಿಲ ಕಾಯುವನ ದೂಡಿ ಬಂದೆನಯ್ಯ; ಕಂಡೆನಯ್ಯ ನಿನ್ನನು ಕಾಡಿಗೆ ಹಚ್ಚಿದ ಕಣ್ಣಿನಲಿ, ನಡೆ ನೋಡಿನಲಿದೆನಯ್ಯ; ಪಾಡಿದೆನು ಮಂಗಳವ, ಕೂಡಿದೆನು ನಿನ್ನನ್ನು; ಪಡೆದನು ಪಯಣ ತಾಲಿಯನು; ಕಾಲಿನಲಿಹೆನೀಗ

ಉನ್ನೈ ಶೇವಿತ್ತು—ನಿನಗಾಗಿ ದುಡಿದು ಬಾಳುನನ್ನು.

ಉಯ್ಯ–ಪ್ಪೋ–ತಾಮುರೈ–ಅಡಿ—ನಾವು ಸತಿಯರು; ನಮಗೆ ಬೇಕು ಚಿನ್ನ ಮತ್ತು ಹೂವು; ಅವು ನಿನ್ನ ಅಡಿಯೇ; ಅಲ್ಲಿರುವೆ ನೀಗ; ಬಿಟ್ಟರಲಾರೆವದನ್ನು ಮತ್ತೆ ಅದನ್ನೇ ಈಗ ಪೊಗಳಲು ಬಂದಿಹೆವು. ಪೋತ್ತುಂ ಪೊರುಳ್ ಕೇಳಾಯ್–ಎತಕ್ಕೆಂದು ಕೇಳು; ಹೇಳುವೆವು. ನಾಲಿಗೆ ತವಗಿಸುವುದು ನವಿಯಲು ನಾಮವನು.

ತ್ವಯ್ಯೇಕಾಂಜಲಿಕಿಂಕರೇ ತನುಭೃತಾಂ ನಿರ್ವ್ಯಾಜಸರ್ವಂಸಹೇ
ಕಲ್ಯಾಣಾತ್ಮನಿ ರಂಗನಾಥ ಕಮಲಾಕಾಂತೇ ಮುಕುಂದೇ ಸ್ಥಿತೇ ।
ಸ್ವಾಮಿನ್ ಪಾಹಿ ದಯಸ್ವ ದೇವ ಶಕುಶಲಿನ್ ಜೀವಪ್ರಭೋ ಭಾವಯ
ಇತ್ಯಾಲಾಪಾಸವಲೇಪಿತುಂ ಪ್ರಲಪಿತುಂ ಜಿಹ್ರೇತಿ ಜಿಹ್ವಾ ಮಮ ॥

ನ್ಯಾ–ತಿ–28

ಕೈಮುಗಿವೆನಿನಗೆ ಕೈಯಾಳಾಗುವ ನೀನು, ಮಂಗಳ ರೂಪನಾಗಿ ಕಣ್ಣು ಮುಂದಿರುವಾಗ, ಎನು ಕೇಳಲೂ ತೋಚದು ದೇವ, ನನ್ನೊಡೆಯ, ಪೊರೆ ನನ್ನನೆಂದು ಕೇಳು ಎಂದು ಹೇಳುತಿ ಹುದು ನಾಲಿಗೆ. ಮತ್ತೇನು ಕೇಳಲಿ. ಇದೇ ನಾವು ನಮ್ಮ ಹಾಡಿಗಾಗಿ ಕೇಳುವ ಫಲ (ಪೋತ್ತುಂ ಪೊರುಳ;) ಜೆನ್ನಾಗಿ ಗಮನಿಸು (ಕೇಳಾಯ್)–ಎಂದಳು ಗೋದೆ.

ಕೃಷ್ಣ ನೋಡಿ ಕೇಳಿ ನಲಿದು "ಮುಚ್ಚಿಲ್ಲದೆ ಬಿಚ್ಚಿ ಹೇಳಿ ಮನದಾಸೆಯನು" ಎಂದು ಕೇಳಿದ. ಆಗ ಹೇಳಿದಳು ಗೋದೆ—

ಪೆತ್ತುಂ ಮೆಯ್ತ್ತು ಉಣ್ಣಿಂ ಕುಲತ್ತಿಲ್ ಪಿರಂದ ನೀ ಕುತ್ತೇವಲ್
ಎಂಗಳೈ ಕೊಳ್ಳಾಮಲ್ ಪೋಕಾದು—ಹಸು ಮೇಯಿಸಿ ಜೀವಿಸುವ (ನಮ್ಮ) ಕುಲದಲ್ಲಿ ಹುಟ್ಟಿರುವ ನೀನು, ನಮ್ಮ ಕೈಂಕರ್ಯವನ್ನು ಕೈಗೊಳ್ಳದೇ ಇರಬಾರದು ಎಂದಳು. "ನೀನು ಹಾಗೆ ಕೈಗೊಳ್ಳದೇ ಹೋದರೆ ನೀನು ಮಾಡಿದ ಉಪಕಾರವೇ

ವ್ಯರ್ಥ; "ಪರಿತ್ರಾಣಾಯ ಸಾಧೂನಾಂ ಎಂದು ಬೇರೆ ಹೇಳಿರುವೆ" ಎಂದು ಅರ್ಥ ವಿಟ್ಟು ಹೇಳಿದ ಮಾತಿದು. ಕೇಳಿದ ಕೃಷ್ಣ. "ಆಗಲಿ, ನೀವು ಮೊದಲಿನಿಂದ ಕೇಳುತ್ತಾ ಬಂದಿರುವುದು ಹಾಡುವ ಸಾಧನ "ಪರೈ". ಇದೋ ತೆಗೆದುಕೊಳ್ಳಿ, ಈ ಭೇರಿಯನ್ನು, ಖಂಜರಿಯನ್ನು, ಮೃದಂಗವನ್ನು, ತಾಳವನ್ನು, ಹಾಡಿರಿ ಇಷ್ಟ ಬಂದಂತೆ; ಕೇಳುವೆನು ಮನದಣಿ, ಕೂಡಿರುವೆ ನಿನ್ನೊಡನೆ" ಎಂದು ಅವನು ಹೇಳಿದುದಕ್ಕೆ ಹೇಳಿದಳು ಗೋದೆ ಇತ್ತೈ ಪರೈ ಕೊಳ್ವಾ ಅನ್ರು—ಇವನ್ನಲ್ಲ ನಾವು ಕೇಳಿದ್ದು; "ಪರೈ" ಎಂದು ಯಾಚಿಸಿದ್ದು; ಇದೇನು ಪರಿಹಾಸ ನಿನ್ನದು; ಪರೋಕ್ಷಪ್ರಿಯಾ ಹಿ ದೇವಾಃ" ಎಂದು ವೇದವು ಮೊಳಗುವಂತೆ ದೇವತೆಗಳೇ ಒಳ ಅರ್ಥವನ್ನು ನೋಡಿ ಹಿಗ್ಗುವರು; ನೀನೋ ದೇವಾದಿದೇವ; ನಾವು "ಪರೈ" ಎನ್ನುವುದಕ್ಕೆ ಹೀಗೆ ಅರ್ಥಮಾಡಿ ಯಾವಾವುದನ್ನೋ ಕೊಡುವುದು ನಿನಗೆ ಸರಿಯೆ? ಯೋಚಿಸು. ನಾವು ಹೇಳಿದ್ದೇನು? ಕಾತ್ಯಾಯನೀ ವ್ರತವನ್ನು ಗೋಪರಿಗೆ ತೋರಿಸಿ ನಿನ್ನಲ್ಲಿ ಮೊದಲು ಯಾಚಿಸಿದೆವು; "ನಾರಾಯಣನೇ ನಮಕ್ಕೇ ಪರೈ ತರುವಾ" ಎಂದೆವು. ಅದರರ್ಥವೇನು ತಿಳಿಯದೇ ನಿನಗೆ? (1 ನೇ ಪಾಶುರ); "ಅರ ಪರೈ ಮಾರ್ಯ ಮಣಿವಣ್ಣ ನೆನ್ನೆ ಲೀ ವಾಯ್ ನೇರ್ನ್ದ್ರ್" (16ನೇ ಪಾಶುರ) ಎಂದು ಹಾಗೆಯೇ ಹೇಳಿದೆವು ಬಾಗಿಲು ಕಾಯುವರಿಗೆ; ಅದನ್ನು ಬಿಚ್ಚಿ "ಉಕ್ಕಮುಂ ತಟ್ಟೊಳಿಯುಂ ತಂದು ಉನ್ ಮಣಾಳನೈ ಇವ್ವೀದೇ ಎಮ್ಮೈ ನೀರಾಟ್ಟು" ಎಂದು ನೀಳೆಯನ್ನು ಕೇಳಿಕೊಂಡಮೇಲೆ ಅವಳು ನಮ್ಮೊಡನೆ ಕೂಡಿಕೊಂಡಿರುವಳು; ಮತ್ತೆ "ಪರೈ ತರುದಿಯಾಕಿಲ್" ಎಂದು ಹೇಳಿ "ತಿರುತ್ತಕ್ಕ ಚ್ಚೆಲ್ವಮುಂ ಶೇವ ಕಮುಂ ಯಾಂ ಪಾಡಿ ವರುತ್ತಮುಂ ತೀರ್ನ್ದ್ರ" (25ನೇ ಪಾಶುರ) ಎಂದು ಕೇಳಿ ಕೊಂಡೆವು; ಶಂಖ ಮೊದಲಾದುವನ್ನೂ ಬೇರೆ ಕೇಳಿದೆವು (26, 27 ಪಾಶುರಗಳು) ಅವನ್ನೂ ಕೊಟ್ಟೆ.

ಮತ್ತೆ ಕೇಳಿದೆವು (28ನೇ ಪಾಶುರದಲ್ಲಿ) "ಇರೈವಾ ನೀ ತಾರಾಯ್ ಪರೈ" ಎಂದು. ಅದರಿಂದಲಾದರೂ ನಿನಗೆ ತೋರಲಿಲ್ಲವೇ ನಮಗೆ ಬೇಕಾದುದೇನೆಂದು" ಎಂದಳು, ಇವರ ಬಾಯಿಂದಲೇ ಕೇಳಬೇಕೆನ್ನುವ ಆಸೆ ಕೃಷ್ಣನಿಗೇ "ನೀವೇಹೇಳಿ" ಎಂದ. ಆಗ ಗೋದೆ "ಕಾಣ್"—ನೀನು ಸರ್ವಜ್ಞ ನೀನೇ ತಿಳಿದುಕೊ" ಎಂದಳು. ಸುಮ್ಮನಿದ್ದ ಕೃಷ್ಣ "ಗೋವಿಂದಾ" ಎಂದು ಎಬ್ಬಿಸಿದಳು ಗೋದೆ. ಮೂರು ವ್ಯಾಖ್ಯಾನಕಾರರು ಇಲ್ಲಿರುವ ರಸವನ್ನು ಬಿಚ್ಚಿಹೇಳಲು ಹಿಂಜರಿದು "ಪರೈ" ಎನ್ನುವುದಕ್ಕೆ ಅರ್ಥವನ್ನು "ದಾಹತ್ತೈ ಛ್ಛಾನ್ನಪಡಿ" ಎಂದಿರುವರು. ನೀರು ಬೇಕೆನ್ನುವ ಬಾಯಾರಿಕೆಯಲ್ಲ ಇದು. ಕಾಮುಕರಿಗೆ ಬರುವ ಕಾಮದ ಬಾಯಾರಿಕೆ. ಶೃಂಗಾರದ ಒಲಿಮೆಯೇ ಕೂಡಿರುವುದಿಲ್ಲಿ. ಬಾಯಿಂದ ಹೇಳಲಾರದ ದಾಹವಿದು. ನಾಯಕಿಯು ನಾಯಕನಲ್ಲಿ ಗೋಗರೆಯುವಂತೆ "ಗೋವಿಂದಾ" ಎಂದಳು ಗೋದೆ. "ಕೃಷ್ಣ, ನಿಜವಾಗಿಯೂ ತಿಳಿಯದೇ ನಿನಗೆ "ಪರೈ" ಎಂದು ಕೇಳಿದ್ದು ಯಾವುದ

ನ್ನೆಂದು; ಎದೆಮುಟ್ಟಿಹೇಳು; ನೀನು ಗೋವಿಂದನಾದುದು ಹೇಗೆ ನೆನೆಸಿಕೊ; ಮಳೆಯಿಲ್ಲ; ಎಲ್ಲೆಲ್ಲೂ ಒರಬಂತು; ಇಂದ್ರವ್ರತಮಾಡಲು ಹೊರಟಿರು; ಅದನ್ನು ತಪ್ಪಿಸಿದೆ; ಗೋವರ್ಧನ ಬೆಟ್ಟಕ್ಕೆ ಪೂಜೆಕೊಡುವಂತೆಮಾಡಿದೆ; ನೀನೇ ತೆಗೆದು ಕೊಂಡೆ. ಅವರು ಕೊಟ್ಟಹವಿಸ್ಸನ್ನು; ಇಂದ್ರರೇಗಿದ ತನಗೆ ಬರುವುದು ತಪ್ಪಿತಲ್ಲಾ ಎಂದು; ಪ್ರಳಯ ಮಳೆ ಕರೆದ; ಬೆಟ್ಟವೆತ್ತಿ ಸಲಹಿದೆ ಎಲ್ಲರನು; ಇಂದ್ರ ಕೆಟ್ಟಿನೆಂದ; ಕಾಲಿಗೆರಗಿದ್ "ಗೋವಿಂದನೆಂದು ಪಟ್ಟಗಟ್ಟಿದ ನಿನಗೆ. ಇವೆಲ್ಲವನ್ನೂ ಏಕೆಮಾಡಿದೆ" ನಮಗಾಗಿ, ನಮ್ಮೊಡನೆ ಕೂಡಲು; ನಾವೂ ಕೂಡಲು ಬಂದಿರುವೆವು; ನೀನಗೂ ದಾಹವಿದೆ; ನಮಗೂ ದಾಹವಿದೆ; ನೀನೂ ಹೇಳಲಾರೆ; ನಾವೂ ಹೇಳಲಾರೆವು; ತಿಳಿದೂ ಕೇಳುವೆಯಲ್ಲಾ; ಇದು ನಿನಗೇ ಒಳ್ಳೆಯದಲ್ಲ; ನೆನೆಸಿಕೊ ಶತಗೋಪರು ನಾಯಕಿಯಾಗಿ ನಿನ್ನಲ್ಲಿ ಬಂದು ಏನು ಹೇಳಿದರೆಂದು. (ತಿರು–ಮೊ VI, 2, 7)

ಕನ್ನಮನ್ರು ಎಂಗಳ್ ಕೈಯಿಲ್ ಪಾವೈ ಪರಿಪ್ಪದು
ಕಡಲ್ ಞಾಲಮುಂಡಿಟ್ಟ
ನಿನ್ನಲಾ ನೆಡಿಯಾಯ್ ಉನಕ್ಕೇಉಂ ಪಿಳ್ಳೈ ಪಿಳ್ಳೈಯೇ
ವನ್ನಮೇ ಶೊಲ್ಲಿ ಯೆಮ್ಮೈ ವಿಳೈಯಾಡುದಿ ಅದು ಕೇಳ್ಕಿಲ್
ಅನ್ನೈಮಾರ್
ತನ್ನಪಾವಮೆನ್ನಾರ್ ಒರುನಾನ್ರು ತಡಿ ಪಿಣಕ್ಕೇ

"ದೇವ, ನೀನು ನಿರ್ಮಲ, ದೊಡ್ಡವನೆಂದು ತೋರಿಸಿಕೊಳ್ಳುವ ಆಸೆ ಬೇರೆ ನಿನಗೆ. (ನೆಡಿಯಾಯ್); ನನ್ನ ಕೈಯಿಂದ ಗೊಂಬೆಯನ್ನು ಕಿತ್ತುಕೊಂಡಿರುವೆ; ನೀನು ಮಾಡಿದ್ದರೂ ಅದು ತಪ್ಪಲ್ಲವೆಂದೆಣಿಸಿರುವೆಯಾ? ನಿನಗೂ ನನಗೂ ನಮ್ಮಿಬ್ಬರ ಏಕಾಂತದಲ್ಲಿ ಏನೇನೋ ಆಗಿದೆ. ನಿನ್ನ ಮೇಲಿನ ಕೋಪದಲ್ಲಿ ನಾನೇನಾದರೂ ಅದನ್ನು ಬಿಚ್ಚಿ ಹೇಳಿದರೆ ನಿನ್ನ ಗತಿಯೇನು; ತಾಯಂದಿರು ಸುಮ್ಮನಿರುವರೇನು? ಇಲ್ಲ; ದೊಣ್ಣೆ ಜಗಳ ತಪ್ಪದು" ಎಂದರಲ್ಲವೇ ಅವರು. ತಾಯಂದರು ಜ್ಞಾನಿ ಗಳು; ತಮ್ಮ ಯೋಗಾನುಭವವನ್ನು ಹೇಗೇಗೋ ಅರ್ಥಮಾಡಿಕೊಂಡಿರುವರು; ನಾನೇ ಪರಮಾತ್ಮನೆನ್ನುವರು ಕೆಲವರು; ಅವನೇ ನಾನೆನ್ನುವರು ಮತ್ತೆ ಕೆಲವರು. ಅವನೇ ಪ್ರಪಂಚವಾಗಿ ಕಾಣುವನೆನ್ನುವರು ಇತರರು; ಹೀಗೆ ಹೇಳಿ ಬೇರೆ ಬೇರೆ ಸಿದ್ಧಾಂತವನ್ನು ಸ್ಥಾಪಿಸಿರುವರು; ಗಂಡಹೆಂಡಿರ ಏಕಾಂತದಂತೆ ಜೀವ ಪರಮಾತ್ಮ ಸಂಬಂಧವೆಂದು ಯಾಜ್ಞವಲ್ಕ್ಯರು ತಮ್ಮ ಧರ್ಮಪತ್ನಿ ಮೈತ್ರೇಯಿಗೆ ಹೇಳಿದುದು ಏಕೆ? ನಮ್ಮ ಗುಟ್ಟು ನಮ್ಮಲ್ಲಿಯೇ ಇರಬೇಕು; ಹೊರಗೆ ಹೇಳಿದರೇ ಕೇಡು. ನಾನೇನೋ "ಪರೈ" ಎಂದು ಕೇಳಿದ್ದಕ್ಕೆ, ಅರ್ಥಮಾಡಿಕೊಂಡು ನಡೆದುಕೊಳ್ಳದೇ, ಬಾಯಿಬಿಟ್ಟು ಹೇಳು ಎನ್ನುವೆಯಲ್ಲ; ಇದು ಸರಿಯೇ" ಎಂದು ಅರ್ಥ ಬರುವಂತೆ "**ಗೋವಿಂದಾ**" ಎಂದಳು ಗೋದೆ. ವೇದಾಂತದರ್ಥದಲ್ಲಿ ಇದು ಪರಭಕ್ತಿ, ಪರ

ಜ್ಞಾನ ಮತ್ತು ಪರಮ ಭಕ್ತಿ (ಪೀಠಿಕೆ 26ರಿಂದ ಮುಂದೆ ನೋಡಿ.) ಒಂದು ಮಾತಿನಲ್ಲಿ ಭಕ್ತಿ. ಸಾಧನವಾಗಿ ಇದು ಭಕ್ತಿಯೋಗ. ಮುಕ್ತಿಯಲ್ಲಿ ಅನುಭವವಾಗಿ ಪರ ಭಕ್ತಿ—ಪರಜ್ಞಾನ—ಪರಮ ಭಕ್ತಿಯ ಸಂತತ ಪ್ರವಾಹ. ಪರಮಾತ್ಮನನ್ನು ನೋಡುವುದು ಪರಭಕ್ತಿ; ಕೂಡುವುದು ಪರಜ್ಞಾನ, ನಮ್ಮನ್ನು ಬಿಟ್ಟು ಅವನು ಕಾಡಿಸಿ ನಿಲ್ಲುವಾಗ ಪರಮ ಭಕ್ತಿ, ಮತ್ತೆ ಹಿಂದಿನ ಸೌಂದರ್ಯ ಲಾವಣ್ಯಗಳಿಗಿಂತ ಹೆಚ್ಚಾಗಿ ತೋರಿಕೊಂಡಾಗ, ಮತ್ತೆ ಪರಭಕ್ತಿ ಪರಜ್ಞಾನ ಮತ್ತು ಪರಮ ಭಕ್ತಿ. ಈ ಮೂರು ಅನುಭವಗಳೂ ಒಟ್ಟುಗೂಡಿ ಅನಂತ ಪರಮಾತ್ಮಾನುಭವಕ್ಕೆ ಕಾರಣವಾಗುತ್ತವೆ. ಪ್ರತಿ ಒಂದು ಅನುಭವದ ಕೊನೆಯ ಪರ್ವ ದಾಹ; ಮತ್ತೆ ನೋಡಬೇಕು, ಹೆಚ್ಚಾಗಿ ಕೂಡಿ ಇರಬೇಕು ಎನ್ನುವ ಜ್ಞಾನಭಕ್ತಿ ಬಾಯಾರಿಕೆ. ವೈಕುಂಠದಲ್ಲಿ ನಮಗೆ ಆಗುವ ನಿತ್ಯ ದಾಹವಿದು. ಯೋಗಮಾರ್ಗದಲ್ಲಿ ಹೋಗುವವರಿಗೆ ಈ ದಾಹ ಬಂದಠಿ ಮಾತ್ರ ಪರಮಾತ್ಮನ ಗುಟ್ಟು ತಿಳಿಯುವುದು. ಒಂದು ಬಾರಿ ಪರಮಾತ್ಮನೊಡನೆ ಪರಜ್ಞಾನಪರ್ವಕ್ಕೆ ಮುಂಚೆಯೇ ಪರಭಕ್ತಿಯನ್ನು ಹೊಂದದೆ ಗೌಣಭಕ್ತಿಯ ಪ್ರಭಾವದಿಂದ ಪರಮಾತ್ಮನೊಡನೆ ಒಂದಾಗಿ ಸಮಾಧಿಯನ್ನು ಹೊಂದಿ ಅದೇ ಪರ ಮಾವಧಿಸ್ಥಾನವೆಂದರಿತವರು ಅಡ್ಡದಾರಿಗೆಳೆಯುವರು ವೇದಾಂತವನ್ನು.

ಸಮಾಧಿಯಲ್ಲಿ ತೃಪ್ತಿ ಹೊಂದುವರಿಗೆ ಜ್ಞಾನ ಮತ್ತು ಭಕ್ತಿದಾಹವಿರ ಲಾರದು; ಜ್ಞಾನದಾಹವು ಬಂದರೆ ಸಮಾಧಿಯಾದಮೇಲೆ ಜ್ಞಾನಕ್ಕೆ ಕಣ್ಣು ನೋಟದ ಶಕ್ತಿ ಬಂದು, ದರ್ಶನ ಸಮಾನಾಕಾರವಾಗಿ ಅದು ಪರಭಕ್ತಿಗೆ ಮೂಲ ವಾಗುತ್ತದೆ. ಆಗ ಭಕ್ತಿದಾಹ ಬಂದು ಪರಜ್ಞಾನ ಬರುತ್ತದೆ. ತೀರಿತು ದಾಹ ವೆನ್ನುವಷ್ಟರಲ್ಲಿ ಕಳಚಿಕೊಳ್ಳುವ ಪರಮಾತ್ಮ; ಪರಮಾಭಕ್ತಿಯಿಂದ ತಪಿಸುವಂತೆ ಮಾಡುತ್ತದೆ ನಮ್ಮ ಭಕ್ತಿದಾಹ. ಹೇಗೆ ಮುಂದೆ ಮುಂದೆ ಸಾಗಿ ನಿತ್ಯದಾಹ ನಿತ್ಯ ತೃಪ್ತಿ ನಿತ್ಯ ವಿರಹ ಪ್ರವಾಹದಲ್ಲಿ ನಮ್ಮನ್ನು ಪರಮಾತ್ಮನ ಕೈಂಕರ್ಯದಲ್ಲಿ ನೆಲೆ ಯಾಗಿ ನಿಲ್ಲಿಸುತ್ತದೆ ನಮ್ಮ ಭಕ್ತಿ ವೈಕುಂಠದಲ್ಲಿ. ಇಲ್ಲಿಯೂ ಹಾಗೆಯೇ ಅನು ಭವಿಸಿದರು ಶಠಗೋಪರು. ತಾಳ ಹಾಕಿ ತಾವೂ ಹಾಡಿದರು ಮಿಕ್ಕ ಆಳ್ವಾರ್ರು. ಹಾಡಿದರು ಮಾತ್ರವಲ್ಲ; ಹೇಳಿದು **" ಬಳ್ಳವಿಲ್ ಕಾಲಮೆಲ್ಲಾಂ ಉಡನಾಯ್ ಮನ್ನಿ ವಳ್ಳವಿಲಾ ವಡಿಮೈ ಶೆಯ್ಯವೆಂಡುಂ ನಾಂ** (ತಿರು–ಮೊಳ್ III, 3, 1) ಎಂದು ಶಠಗೋಪರು. ಜೀವಿಸಿರುವಾಗ ಬರುವ ಭಕ್ತಿ ಬಂದು ಭಾವನಾ ವಿಶೇಷ; ಮುಕ್ತಿಯಲ್ಲಿ ಅದು ನೋಟ, ಊಟ ಮತ್ತು ಆಟ. ಅಂದರೆ ಭಕ್ತಿ ನಿತ್ಯ ದುಡಿಮೆ ಯಾಗಿ ತೋರಿಕೊಳ್ಳುವುದು. (ಇದರ ಇನ್ನೂ ವಿಸ್ತಾರವನ್ನು ತತ್ವ ಮುಕ್ತಾಕಲಾಪ ಜೀವ ಸರ 62, 63, 64, ಶ್ಲೋಕ ಮೊದಲಾದವುಗಳಲ್ಲಿ ನೋಡಬಹುದು.) ಮುಕ್ತಿ ಯಲ್ಲಿ ನಿತ್ಯ ಭಕ್ತಿಯು ನಿತ್ಯ ಕೈಂಕರ್ಯವಾಗಿರುವುದೆನ್ನುವ ವಿಷಯದಲ್ಲಿ ನಿಗಮಾಂತ ದೇಶಿಕರು ಹೀಗೆ ಹೇಳಿರುವರು.

ಕರ್ಮೋಪಾಧಿಕ ಸೇವಾ ಹಿ ಕರ್ಮವೈಚಿತ್ರ್ಯಾತ್ ।
ಪ್ರತಿಕೂಲಾ ಉದಾಸೀನಾ ಕಂಚಿದನುಕೂಲಾ ಚ ।
ಸ್ಯಾತ್ ಇಯಂ ತು ನಿರುಪಾಧಿಕಸ್ವಾಮಿಸೇವಾ ।
ಯಥಾಗಮಂ ನಿರವಧಿಕಸುಖರೂಪಾ—

ಸರ್ವಾರ್ಥ ಸಿದ್ಧಿ–64ನೇ ಶ್ಲೋಕ ಜೀವಸರ–ತತ್ವಮುಕ್ತಾಕಲಾಪ

ಗೋದೆಯು ತನ್ನ ದಾಹವನ್ನು " ಗೋವಿಂದಾ " ಎಂದು ಆರ್ತನಾದದಿಂದ ತಿಳಿಸಿ, ಕೃಷ್ಣ ನಕ್ಕು ಪ್ರಸನ್ನನಾಗಿ ಪ್ರಿಯನಾಗಿ ಕಂಡ ಮೇಲೆ ಹೇಳಿದಳು—

ಎತ್ತೈಕ್ಕುಂ ಏ಴ೇಳು ಪಿರವಿಕ್ಕುಂ ಉನತನ್ನೋಡುತ್ತೋಮೇಯಾ ವೋಂ ಉನಕ್ಕೇಂ ನಾಂ ಆಳ್ಚೆಯ್ವೋಂ—ಎಂದು.

" ದೇವ, ಕಾಲವಿರುವವರಿಗೂ, ನೀನು ಮುಂದೆ ಮುಂದೆ ಹಿಂದಿನಕ್ಕಿಂದ ಮೇಲಾದ ಎಷ್ಟು ರೂಪ ತಾಳುವೆಯೋ, ನಿನ್ನ ಆ ದಿವ್ಯ ಮಂಗಳ ವಿಗ್ರಹಗಳಿಗೆ ಕೂಡಿಕೊಂಡು, ನಿತ್ಯ ದುಡಿಮೆಮಾಡುವೆವು." ಪೂರ್ಣ ಪರಮಾತ್ಮಾನುಭವವೇನೊ ಮೋಕ್ಷ. ಶಾಸ್ತ್ರವು ಅದನ್ನೇ ಹೇಳುತ್ತಿದೆ. ಆದರೆ ಅದು ಅನುಭವವಾಗಿಯೇ ಉಳಿ ಯುವುದಿಲ್ಲ. ಕೈಂಕರ್ಯದಲ್ಲಿ ತೋರಿಕೊಳ್ಳುತ್ತದೆ. ಇದರ ನಿರ್ಣಯವನ್ನು ಒಂದು ಶ್ಲೋಕದಲ್ಲಿ ಕೊಟ್ಟಿರುವರು ನಿಗಮಾಂತದೇಶಿಕರು.

ಸಾಲೋಕ್ಯಾದ್ಯಾಃ ಪ್ರಭೇದಾಃ ನನು ಪರಿಪಠಿತಾಃ
ಕ್ವಾಪಿ ಮೋಕ್ಷಸ್ಯ; ಮೈವಂ ।
ಸಾಯುಜ್ಯಸ್ಯೈವ ತತ್ವಾತ್ ತದಿತರವಿಷಯೀ
ಮುಕ್ತಿಶಬ್ದಸ್ತು ಭಾಕ್ತಃ ॥

ತಸ್ಮಿಂಸ್ತೇ ಚ ತ್ರಯಸ್ಸ್ಯುಃ ತದಪಿ ಚ
ಸಯುಜೋರ್ಭಾವ ಇತ್ಯೈಕರಸ್ಯಂ ।
ಯುಕ್ ಸಾಮ್ಯಂ ಯೋಗಸಾಮ್ಯಾದಿವ
ದಪಟುಧಿಯಾಂ ತಾವತೈವೈಕ್ಯಮೋಹಃ ॥

(ತತ್ವ–ಕಲಾ–ಜೀವ 67)

" ಸಾಲೋಕ್ಯ, ಸಾಮೀಪ್ಯ ಮತ್ತು ಸಾಯುಜ್ಯವೆಂದು ಮೂರು ಬಗೆ ಮೋಕ್ಷವಿರು ವುದೆನ್ನುವರು ಕೆಲವರು; ಅದು ಹಾಗಲ್ಲ; ಸಾಯುಜ್ಯವೊಂದೇ ಮೋಕ್ಷ; ಮಿಕ್ಕ ವೆರಡು ಅಮುಖ್ಯಾರ್ಥ ಅಂದರೆ ಗೌಣಾರ್ಥದಲ್ಲಿ ಮೋಕ್ಷವೆನ್ನಿಸಿಕೊಂಡಿವೆ; ಮುಕ್ತಿಗೆ ಈ ಮೂರು ಪರ್ವಗಳು; ಕೊನೆಯದಾದ ಸಾಯುಜ್ಯದಿಂದಲೇ ಮೋಕ್ಷ; " ಸಯುಕ್ತ್ವಂ " ಎಂದರೆ ಒಟ್ಟುಗೂಡುವುದೇ ಮೋಕ್ಷ. ವೈಕುಂಠದಲ್ಲಿ ಪರಮಾತ್ಮ ನೊಡನೆ ಕೂಡುವ ಸಾಯುಜ್ಯಕ್ಕೆ ಸಮನಾಗಿ ಯೋಗದ ಕೊನೆಯ ಪರ್ವವಾದ

ಸಮಾಧಿಯನ್ನು ಭಾವಿಸಿ, ಹಣ್ಣಾಗದ ಬುದ್ಧಿಯುಳ್ಳವರು "ಜೀವ ಪರಮಾತ್ಮ ಒಂದೇ ಚೈತನ್ಯ" ವೆಂದು ಮೋಹಗೊಂಡಿರುವರು"—ಹೀಗೆ ಸಾಯುಜ್ಯದಿಂದ ಮೋಕ್ಷ ಸಿಕ್ಕಿದಮೇಲೆ ದೊರಕುವ ಆನಂದವು ಅನಂತವಾದುದರಿಂದ, ಪರಮಾತ್ಮನ ನಿತ್ಯ ಕೈಂಕರ್ಯದಲ್ಲಿ ನಿತ್ಯವಾಗಿ ಪೂರ್ತಿಗೊಳ್ಳುತ್ತಿರುವುದು. ಇದನ್ನು ಗೋದೆಯು ಬಹು ಚಂದವಾಗಿ ಹೇಳಿರುವಳು. ವೈಕುಂಠದಲ್ಲಿ ಪರಮಾತ್ಮನ ದಿವ್ಯಮಂಗಳ ವಿಗ್ರಹವು ಒಂದೇ ರೀತಿ ಇದ್ದರೂ, ತೃಪ್ತಿಯಾಗದಂತೆ ಅನಂತ ಆನಂದದಾಯಕ ವಾಗಿರುವುದು. ಗೋದೆಗೆ ಅದೂ ಸಾಲದೆಂದು ತೋರಿದೆ. ಈಗ ಕೃಷ್ಣನಾಗಿ ತೋರಿಕೊಂಡಿರುವ ರೂಪ ವೈಕುಂಠ ರೂಪಕ್ಕಿಂತ ಮಿಗಿಲಾದುದೆಂದು ಅವಳ ಅಭಿಪ್ರಾಯ. ಅಲ್ಲದೆ ವೈಕುಂಠದಲ್ಲಿ ನಾನಾ ರೂಪ ತೆಗೆದುಕೊಳ್ಳುವ ಪ್ರಸಂ ಗವೇ ಇಲ್ಲ ಪರಮಾತ್ಮನಿಗೆ. ಅವತಾರಗಳಲ್ಲಿ ಹಾಗಲ್ಲ. ಆಯಾ ಭಕ್ತರಿಗಾಗಿ ಬೇರೆ ಬೇರೆ ರೂಪ ತಾಳುವುದು ಅವನಿಗೂ ಪ್ರಿಯ. ಹಾಗೆ ಅವನು ತೆಗೆಯುವ ಅನಂತರೂಪಗಳನ್ನು ನೋಡಿ, ಹಿಗ್ಗಿ, ಕೂಡಿ, ಆಡಿ ಇರಬೇಕೆನ್ನುವ ಆಸೆ ತೋರಿರುವಳಿಲ್ಲಿ. ಇಲ್ಲಿ "ಏಳ್ಳೆ ಪಿರವಿ" ಎನ್ನುವುದನ್ನು "ಏಳುಏಳು ಜನ್ಮ ಗಳಲ್ಲಿ ನಿನ್ನೊಡನೆ ಕೂಡಿ ಸೇವೆ ಮಾಡುವೆವು" ಎಂದು ಅರ್ಥಮಾಡುವರುಂಟು. ಅದು ತಿಳುವಾದರ್ಥ. ಅವಳ ಹೃದಯ ತುಂಬಿರುವವರ್ಥ ಬೇರೆ; "ಏಳ್ಳೆಏಳ್ಳೆ ಪಿರವಿ—ಹಿಂದುಹಿಂದಿನ ರೂಪಕ್ಕಿಂತ ಮುಂದುಮುಂದೆ ಅತಿಶಯವಾಗಿ ಕಾಣುವ ಅವತಾರ" ಎಂದು. ರಾಮಾನುಜರೂ ಹೀಗೆಯೇ ಪ್ರಾರ್ಥಿಸಿದರು ರಂಗನಾಥನನ್ನು ಗದ್ಯದಲ್ಲಿ.

ಪರಭಕ್ತಿ–ಪರಜ್ಞಾನ–ಪರಮ ಭಕ್ತಿ–ಕೃತ
ಪರಿಪೂರ್ಣಾನವರತ–ನಿತ್ಯವಿಶದತಮ–
ಅನನ್ಯಪ್ರಯೋಜನ–ಅನವಧಿಕಾತಿಶಯ–
ಪ್ರಿತಿಕಾರಿತ–ಅಶೇಷಾವಸ್ಥೋಚಿತ–
ಅಶೇಷಶೇಷತೈಕರತಿರೂಪ–ನಿತ್ಯ ಕಿಂಕರೋ ಭವಾನಿ

ಎನ್ನುವ ಅವರ ಪ್ರಾರ್ಥನೆಯ ಅರ್ಥವನ್ನು ಹೇಳುವಾಗ ನಿಗಮಾಂತದೇಶಿಕರು—

ಪರಭಕ್ತ್ಯಾದಿಮೂಲತ್ವಂ ಕೈಂಕರ್ಯಸ್ಯ ಯದುಚ್ಯತೇ ।
ಗದ್ಯಾದಿಷು ತದಪ್ಯಾಹುರಪವರ್ಗದಶಾಶ್ರಯಂ ॥
ಉತ್ತರೋತ್ತರಯೋಃ ಸ್ವಾಮಿಸಾಕ್ಷಾತ್ಕರಣಭೋಗಯೋಃ ।
ಪೂರ್ವಪೂರ್ವಕ್ಷಣೇಷ್ಟತ್ವಾತ್ ತತ್ಪೂರ್ವತ್ವಮುದೀರಿತಂ ॥

ಎಂದಿರುವರು. ಪರಭಕ್ತಿ ಮೊದಲಾದುವೇ ಮೂಲವಾಗಿ ಪರಮಾತ್ಮ ಕೈಂಕರ್ಯ ವನ್ನು ರಾಮಾನುಜರು ಯಾಚಿಸಿರುವುದು ವೈಕುಂಠದಲ್ಲಿ; ಅಲ್ಲಿ ಹಿಂದು ಹಿಂದಿನ ರೂಪ ಸಾಕ್ಷಾತ್ಕಾರ ಭೋಗಕ್ಕಿಂತಲೂ ಮುಂದು ಮುಂದಿನ ರೂಪ ಸಾಕ್ಷಾತ್ಕಾರ ಭೋಗದ ಅತಿಶಯವು ಆನಂದ ಮತ್ತು ಕೈಂಕರ್ಯವನ್ನು ಅನಂತವನ್ನಾಗಿ ಮಾಡಿದೆ.

ಈ ತೆರನಾದ ಕೈಂಕರ್ಯ ಇಲ್ಲಿಂದಲೇ ಬೇಕೆಂದು ಯಾಚಿಸಿರುವಳು ಗೋದೆ. ಆದರೆ ಈಗ ನಮಗೆ ಕಾಮವಿದ್ದು ತಡೆತರುವಂತಿದೆ. ಅದಕ್ಕಾಗಿ ಪ್ರಾರ್ಥಿಸಿದಳು ಕೊನೆ ಯವಾಗಿ

ಮತ್ತನಂ ಕಾಮಂಗಳ್ ಮಾತ್ತು—ಮಿಕ್ಕ ಪ್ರಾಕೃತಿಕ ವಿಷಯದಲ್ಲಿ ನಮ ಗಿರುವ ಆಸೆಗಳನ್ನು ಹೋಗಲಾಡಿಸು—ಏಲೋರ್ ಎಂಪಾವಾಯ್.

ಸ್ವಾಪದೇಶ

ಪರಮಾತ್ಮ ಪರವಾಗಿ ಇಲ್ಲಿಯವರಿಗೂ ಹೇಳಿದವೆಲ್ಲಾ ಆಚಾರ್ಯನಿಗೂ ಕೂಡಿ ಬರುತ್ತದೆ. ಶ್ರೀ ವೈಷ್ಣವ ಸಿದ್ಧಾಂತದಲ್ಲಿ ಮುಕ್ತಿಯೋಗ್ಯ ಜೀವ ವೈಕುಂಠಕ್ಕೆ ಹೋದಮೇಲೆ ಮೊದಲು ತನ್ನ ಆಚಾರ್ಯನಿಂದ ಹಿಡಿದು, ಪ್ರಥಮಾಚಾರ್ಯನಾದ ಪರ ಮಾತ್ಮನವರಿವಿಗೂ ಕ್ರಮೇಣ ಹೋಗಿ ಕೊನೆಗೆ ಪರಮಾತ್ಮನಲ್ಲಿ ಕೂಡುವನು. ಅದಕ್ಕಾಗಿಯೇ ಪರಮಾತ್ಮನ ಪಾದ ಶಠಗೋಪರು; ಅವರ ಪಾದ ರಾಮಾನುಜರು; ಅವರ ಪಾದ ತೆಂಗಲೇವಡಗಲೇ ಸಂಪ್ರದಾಯದ ಪ್ರಧಾನಾಚಾರ್ಯರು—ಎಂದು ಗುಡಿಗಳಲ್ಲಿ ಪ್ರತಿಷ್ಠೆಮಾಡುವ ಸಂಪ್ರದಾಯ ಬಿದ್ದಿದೆ. ಆದ್ದರಿಂದ ನಿತ್ಯ ಕೈಂಕರ್ಯ ವೆಂದರೆ ನಿತ್ಯ ಪ್ರಥಮಾಚಾರ್ಯನಾದ ಪರಮಾತ್ಮ ಕೈಂಕರ್ಯ.

ಈ ಪದ್ಯದಲ್ಲಿ ಗೋದೆಯು ಮತ್ತೆ ಕೊನೆಯ ಬಾರಿ ವೇದಾಂತದಲ್ಲಿ ನಾವು ಅರಿಯಬೇಕಾದ ಐದು ವಿಷಯ ಅಂದರೆ ಅರ್ಥಪಂಚಕವನ್ನು ತಿಳಿಸಿರುವಳು.

1) ಪೆತ್ತಂ . . . ಗೋವಿಂದಾ	ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ
2) ಉಣ್ಪೊಣ್ . . . ಪೊತ್ತುಂ, ಉಣ್ ತನ್ನೊಡುತ್ತೂಮೇ ಯಾವೊಂ	ಪ್ರಾಪ್ತುಶ್ಚಪ್ರತ್ಯಗಾತ್ಮನಃ ।
3) ಶಿತ್ತಂ . . . ಸೇವಿತ್ತು	ಪ್ರಾಪ್ಯುಪಾಯಂ
4) ಉನಕ್ಕೇ . . . ವೊಂ	ಫಲಂ ಚೈವ
5) ಮತ್ತ . . . ಮಾತ್ತು	ತಥಾ ಪ್ರಾಪ್ತಿ ವಿರೋಧಿ ಚ

(19 ಪದ್ಯ ನೋಡಿ)

ಈಗ ಕೊನೆಯ ಪದ್ಯ. ಫಲಶ್ರುತಿ ಹೇಳುವ ಪದ್ಯವಿದು. ಇಲ್ಲಿ ವ್ರತಮಾಡಿದ ಗೋಪಿಯರಿಗೆ ಫಲ ಸಿಕ್ಕಿದಂತೆ, ಆ ವ್ರತದ ಅನುಕರಣೆ ಮಾಡಿ ತನ್ನ ಭಾವವೆಲ್ಲ ವನ್ನೂ ಪರಮಾತ್ಮನಿಗೆ 30 ದಿನಗಳಲ್ಲಿ ಅರ್ಪಣೆ ಮಾಡಿದ ಗೋದೆಗೆ ಪರಮಾತ್ಮನು ಸಿಕ್ಕಿದಂತೆ, ಈ ಪಾಶುರಗಳನ್ನು ನಿಯಮದಿಂದ ಅನುಸಂಧಾನ ಮಾಡುವರು ಅದೇ

ಫಲವನ್ನು ಹೊಂದುವರು–ಎಂದು ಹೇಳಿರುವಳು ಗೋದೆ ಈ ಪದ್ಯದಲ್ಲಿ. ಅಂದರೆ ಕಾತ್ಯಾಯಿನೀ ವ್ರತವೂ ಬೇಡ; ಆಂಡಾಳ್ ಮಾಡಿದ ವ್ರತವೂ ಬೇಡ; ಈ 30 ಪಾಶುರಗಳನ್ನು ಪಠನಮಾಡಿದರೆ ಸಾಕು–**ಅರುಳ್ ಪೆರುವರ್, ತಿರುವರುಳ್ ಪೆರುವರ್, ತಿರುಮಾಲ್ ತಿರುವರುಳ್ ಪೆರುವರ್** ಎಂದಿರುವಳು.

ಈ ತಿರುಪ್ಪಾವೈ ಮೊದಲಿನ ಹಾಡು ತಿರುಮಂತ್ರಾರ್ಥವೆಂದೂ ಕೊನೆಯ ಹಾಡು ದ್ವಯಾರ್ಥವೆಂದೂ ಆಚಾರ್ಯರ ಅಭಿಪ್ರಾಯ.

ವಂಗಕ್ಕಡಲ್ ಕಡೈಂದ ಮಾಧವನೈ ಕೇಶವನೈ
ತಿಂಗಳ್ ತಿರುಮುಕತ್ತು ಚ್ಚೇಯಿಳೈಯಾರ್ ಶೆನ್ನಿರೈಂಜಿ
ಅಂಗಪ್ಪರೈಕೊಂಡವಾತ್ತೈ ಯಣಿಪುದುವೈ
ಪೈಂಗಮಲತ್ತಣ್ಡೊರಿಯಲ್‌ಪಟ್ಟರ್‌ಪಿರ್ರಾ ಕೊದೈ ಶೊನ್ನ
ಶಂಗತ್ತಮಿೞ್ತಮಾಲೈಮುಪ್ಪದುಂ ತಪ್ಪಾಮೇ
ಇಂಗಿಪ್ಪರಿಶುರೈಪ್ಪಾರೀರರಂಡುಮಾಲ್‌ವರೈತ್ತೋಳ್
ಶೆಂಗಳ್‌ತಿರುಮುಕತ್ತು ಚ್ಚೆಲ್ವತ್ತಿರುಮಾಲಾಲ್
ಎಂಗುಂ ತಿರುವರುಳ್ ಪೆತ್ತು ಇನ್ಬುರುವರ್–ಎಂಪಾವಾಯ್ ॥ ೩೦ ॥

ವಂಗಕ್ಕಡಲ್ ಕಡೈಂದ–"ವಂಗಂ" ಅಂದರೆ "ಕಲಂಗಳ್", "ಹಣಗು"; ಕಡಲ್–ಸಮುದ್ರ, ಹಡಗುಗಳುಳ್ಳ ಸಮುದ್ರವನ್ನು ಕಡೆದವನಾದ, ಮಾಧವನೈ–ಶ್ರಿಯಃಪತಿಯನ್ನೂ ಮತ್ತು ಕೇಶವನೈ–ಒಳ್ಳೆ ಕೂದಲುಳ್ಳವನಾದವನನ್ನೂ ಮತ್ತು ಬ್ರಹ್ಮ ರುದ್ರರಿಗೆ ಒಡೆಯನಾದವನನ್ನೂ, ತಿಂಗಳ್ ತಿರುಮುಕತ್ತು ಶೇಯಿಳೈಯಾರ್–ಚಂದ್ರನಂತೆ ಮುಖವುಳ್ಳ ಮತ್ತು ರಮ್ಯವಾದ ಆಭರಣವುಳ್ಳ ಸ್ತ್ರೀಯರು, ಶೆನ್ರು–ಬಂದು, ಇರೈಂಜಿ–ಸ್ತೋತ್ರಮಾಡಿ, ಅಂಗೆ–ಆ ಗೋಕುಲದಲ್ಲಿ, ಪರೈಕೊಂಡ–ಫಲವನ್ನು ಹೊಂದಿದ, ಆತ್ತೈ–ಪ್ರಕಾರವನ್ನು, ಅಣಿಪುದುವೈ–ಅಲಂಕಾರವಾದ ಶ್ರೀವಿಲ್ಲಿಪುತ್ತೂರಿನ, ಪೈಂಕಮಲತ್ತಣ್ ತೆರಿಯಲ್-ರಮಣೀಯ ತಾವರೆಮಣಿಗಳಿಂದ ಕಟ್ಟಲ್ಪಟ್ಟ ಶೀತಲಮಾಲೆಯುಳ್ಳ, ಪಟ್ಟರ್‌ಪಿರ್ರಾ–ಶ್ರೀ ವಿಷ್ಣುಚಿತ್ತರ ಮಗಳಾದ, ಗೋದೈ–ಗೋದಾದೇವಿಯು, ಶೊನ್ನ–ಹೇಳಿದ, ಹಾಡಿದ, ಶಂಗತ್ತಮಿೞ್ ಮಾಲೈ–ಉತ್ತಮ ತಮಿಳುಭಾಷೆಯಲ್ಲಿ ಮಾಲೆಯಂತಿರುವ, ಮುಪ್ಪದುಂ–ಮೂವತ್ತು ಪದ್ಯಗಳನ್ನು, ತಪ್ಪಾಮೇ–ತಪ್ಪದೆ, ಇಂಗೇ–ಈ ಭೂಮಂಡಲದಲ್ಲಿ, ಇಪ್ಪರಿಶು–ಈರೀತಿಯಲ್ಲಿ, ಉರೈಪ್ಪಾರ್–ಓದುವವರೋ, ಹಾಡುವವರೋ ಅವರು ಈರಿರಂಡುಮಾಲ್ ವರೈತ್ತೋಳ್–ಪರ್ವತದಂತೆ ವಿಸ್ತಾರವಾದ ನಾಲ್ಕು ತೋಳುಗಳುಳ್ಳ, ಶೆಂಗಣ್–ಕೆಂಪುಕಣ್ಣುಗಳುಳ್ಳ, ತಿರುಮುಕತ್ತು–ದಿವ್ಯ ಮುಖವುಳ್ಳ, ಶೆಲ್ವ–ಉಭಯವಿಭೂತಿ ನಾಥನಾದ, ತಿರುಮಾಲಾಲ್–ಶ್ರಿಯಃ ಪತಿಯಿಂದ, ಎಂಗುಂ–ಸರ್ವತೋ ಮುಖವಾಗಿ, ತಿರುವರುಳ್–ಮಹಾಕೃಪೆಯನ್ನು, ಪೆತ್ತು–ಹೊಂದಿ, ಇನ್ಬು–ಪರಮಾನಂದವನ್ನು, ಉರುವರ್–ಹೊಂದುವರು–ಏಲೋರ್ ಎಂಪಾವಾಯ್—

ವಂಗಕ್ಕಡಲ್—ಎಂದರೆ ಕ್ಷೀರಸಮುದ್ರ; ಅದನ್ನು ಕಡೆದವರು ದೇವತೆಗಳು ಮತ್ತು ದಾನವರು. ಅವರನ್ನು ಬಿಟ್ಟು ನಾರಾಯಣನನ್ನೇ ಸಮುದ್ರ ಕಡೆದವನೆಂದು ಹೇಳಿರುವುದರ ಅರ್ಥ ಬೇರೆ. ಮೊದಲು ಕ್ಷೀರಸಮುದ್ರದಲ್ಲಿ ಹಡಗಿರುವ ಪ್ರಸಂಗವೇ ಇಲ್ಲ; ಒಂದು ದಡದಿಂದ ಮತ್ತೊಂದು ದಡವೊಯ್ಯುವ ಸಾಧನವದು; ಹಾಗೆ ಸಂಸಾರಮಂಡಲವೇ ಈ ದಡಕ್ಷೀರ ಸಮುದ್ರಕ್ಕೆ, ಆ ದಡ ವೈಕುಂಠ; ಇವೆರಡರ ನಡುವೆ ಸೇತುವೆಯಂತಿರುವುದರಿಂದ, "ಹಣಗಿನಂತಿರುವ ಸಮುದ್ರ" ಎಂದಿರುವಳು ಗೋದೆ; ಕ್ಷೀರಸಮುದ್ರವಾದೊಡನೆ ವೈಕುಂಠವಿಲ್ಲ. ಪರಮಾಕಾಶವೊಂದಿರುವುದು; ಅದಾದಮೇಲೆ ವಿರಜಾನದಿಸುತ್ತಿರುವ ವೈಕುಂಠವಿರುವುದು; ಆದರೆ ಕ್ಷೀರಸಮುದ್ರವನ್ನು ಮುಕ್ತಿಗೆ ಹೋಗುವರು ಮಾತ್ರ ದಾಟುವರು; ದಾಟಿಸುವ ಶ್ರೀಮನ್ನಾರಾಯಣ ಅಲ್ಲಿರುವನು; ಆದ್ದರಿಂದ ಅದು ವಂಗಕ್ಕಡಲ್; ಅವನು ವಂಗಕಡಲ್ ಕಡೈಂದ ಮಾಧವ. ಕ್ಷೀರಸಮುದ್ರವನ್ನು ಕಡೆಯುವಂತೆ ಮಾಡಿದವನು ನಾರಾಯಣ; ಎಲ್ಲರಲ್ಲೂ ಪೂರ್ಣವಾಗಿ ವ್ಯಾಪಿಸಿಕೊಂಡು ತನ್ನ ಸಂಕಲ್ಪದಂತೆ ಮಾಡಿಸಿಕೊಳ್ಳುವವನವನು; ದೇವ ದಾನವರು ಸಮುದ್ರಕಡೆದದ್ದು ಅವನಿಗಾಗಿ ತಮಗಾಗಲ್ಲ; ಯಜಮಾನನು ಕೆಂಕರರಿಂದ ಕೆಲಸಮಾಡಿಸಿಕೊಳ್ಳುವಂತೆ ನಾರಾಯಣನ ಕೆಂಕರರು ದೇವದಾನವರು; ಸಮುದ್ರ ಕಡೆದರು ಅವನಿಗಾಗಿ. ತ್ರಿಮೂರ್ತಿಗಳಲ್ಲಿ ಯಾವನು ಪರಮಾತ್ಮನೆಂದು ನಿಶ್ಚಯವಾಗಿದ್ದು ಸಮುದ್ರ ಮಥನವಾದ ಮೇಲೆ. ತಾನೇ ಪರಮಾತ್ಮನೆಂದು ಎಲ್ಲರಿಗೂ ತೋರಿಸಲು ಎಲ್ಲರೂ ಸೇರಿ ಕಡೆಯುವಂತೆ ಮಾಡಿದ; ತಾನೂ ಕೈಹಾಕಿದ ಕಡೆಯಲು ಎಲ್ಲರಂತೆ.

ಶಾಸ್ತ್ರದಲ್ಲಿ ಯಜಮಾನನು ಕೆಲಸ ಮಾಡದಿದ್ದರೂ ಅವನನ್ನು "ಕರ್ತಾ" ಎನ್ನಲಾಗಿದೆ. ನಮ್ಮ ಹಸು ತಪ್ಪುಮಾಡಿ ಮತ್ತೊಬ್ಬರ ಹೊಲದಲ್ಲಿ ಮೆಯ್ದರೆ ಶಿಕ್ಷೆ ನಮಗೆ ಆಗುವುದು. ಅದಕ್ಕೆ ಬಂದ ಹೆಸರು ನಮಗೆ ಮುಖ್ಯ. ಹಾಗೆ ಪರಮಾತ್ಮ ಮುಖ್ಯಕರ್ತಾ. ಅವನನ್ನು "ಪ್ರಯೋಜಕ ಕರ್ತಾ" ಎನ್ನುವುದು ಶಾಸ್ತ್ರ. "ನಾವೆಲ್ಲರೂ ಪ್ರಯೋಜ್ಯ ಕರ್ತೃ"ಗಳು. ಈ ಅರ್ಥದಲ್ಲೂ "ವಂಗ...ರ್ವ" ಎಂದಿರುವಳು ಗೋದೆ.

ಈ ಕ್ಷೀರಸಮುದ್ರವನ್ನು ದಾಟಲು ಯಾವ ಸಂಸಾರಿಗೂ ಸಾಧ್ಯವಿಲ್ಲ, ದೇವಾಸುರ ಜಗಳದಲ್ಲಿ, ಅಸುರರ ಕೈ ಮೇಲಾದಾಗ ಬ್ರಹ್ಮನೇ ಮೊದಲಾದ ದೇವತೆಗಳು ಈ ಸಮುದ್ರದ ಸಂಸಾರದಡಕ್ಕೆ ಬಂದು ಪ್ರಾರ್ಥಿಸುವರೆಂದು ಎಲ್ಲಾ ಸ್ಮೃತಿ ಗ್ರಂಥಗಳೂ ತಿಳಿಸುತ್ತಿವೆ. ದಾನವರು ಅಸುರರು ದೇವತೆಗಳನ್ನು ಪೀಡಿಸಿದ್ದಕ್ಕೆ, ಭಸ್ಮಾಸುರ ಮೊದಲಾದವರು ಕೈಲಾಸಕ್ಕೆ ಬಂದುದಕ್ಕೆ ಅನೇಕ ನಿದರ್ಶನಗಳಿವೆ. ಇವರಾರೂ ಕ್ಷೀರಾಬ್ಧಿಶಾಯಿ ದೇವನಲ್ಲಿಗೆ ಬಂದುದಕ್ಕೆ ಉಪಾಖ್ಯಾನವಿಲ್ಲ. ಆದ್ದರಿಂದ

ಕ್ಷೀರಾಬ್ಧಿಶಾಯಿ ಶ್ರೀಮನ್ನಾರಾಯಣನೇ ಪರದೈವ; ಅದನ್ನು ಕಡೆಯುವಂತೆ ಸಂಕಲ್ಪಿಸಿವದನೂ ಮಾಧವ–ಲಕ್ಷ್ಮೀಪತಿ.

ಜಗತ್ತಿನ ಸೃಷ್ಟಿಪ್ರಕರಣದಲ್ಲಿ ವೈಕುಂಠನಾಥನಾದವನು ನಾಲ್ಕುರೂಪ ತಿಳಿಯುವನೆಂದೂ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನವೆನ್ನುವ ಆ ನಾಲ್ಕುರೂಪಗಳಲ್ಲಿ ಅನಿರುದ್ಧ ದೇವನು ತನ್ನ ನಾಭಿಕಮಲದಿಂದ ನಾನ್ಮುಖನನ್ನು ಸೃಷ್ಟಿಸಿ, ಅವನಿಗೆ ತನ್ನ ಪ್ರದ್ಯುಮ್ನರೂಪದಿಂದ ಅಂತರ್ಯಾಮಿಯಾಗಿದ್ದು, ಅವನ ಮೂಲಕ ಸೃಷ್ಟಿಮಾಡುವನೆಂದು ಇತಿಹಾಸ ಪುರಾಣಗಳಲ್ಲಿ ಹೇಳಿದೆ. ಶ್ವೇತಾಶ್ವತರ ಉಪನಿಷತ್ತೂ ಹೇಳುತ್ತದೆ. ಬ್ರಹ್ಮನಾದಮೇಲೆ ರುದ್ರನನ್ನು ಸೃಷ್ಟಿಸಿ, ಅವನಿಗೆ ಅಂತರ್ಯಾಮಿಯಾಗಿ ಸಂಕರ್ಷಣನಾಗಿರುವನೆಂದೂ ಅದೇ ಸ್ಮೃತಿಯು ಹೇಳಿರುತ್ತದೆ. ಪ್ರಳಯಕಾಲದಲ್ಲಿ ಅಂದರೆ ಚತುರ್ಮುಖ ಬ್ರಹ್ಮನ ದೈನಂದಿನ ಪ್ರಳಯದಲ್ಲಿ ಆಲದೆಲೆಯಮೇಲೆ ಮಗುವಾಗಿ ತಾನು ಮಲಗಿ ಸಕಲ ಲೋಕಗಳನ್ನು ತನ್ನ ಉದರದಲ್ಲಿಟ್ಟುರುವನೆಂದು ಅದೇ ಸ್ಮೃತಿಯು ಹೇಳಿರುವುದು. ಆದ್ದರಿಂದಲೂ ಇವನು "ವಂಗ . . . . ಮಾಧವ"

ಮಾರ್ಕಂಡೇಯರು ಮಹಾ ಮುನಿಗಳು; ನಾನ್ಮುಖನಿಗೆ 100 ವರ್ಷ ಆಯಸ್ಸು ವಿಶೇಷಮಾನದಲ್ಲಿ; ಅದೇ ಮಾನದಲ್ಲಿ ಆ ಮುನಿಗಳಿಗೆ 16 ವರ್ಷ ಆಯಸ್ಸು; ಚತುರ್ಮುಖ ಬ್ರಹ್ಮನ ಎಷ್ಟೋ ದೈನಂದಿನ ಪ್ರಳಯ ನೋಡಿರುವವರು. ಪಾಂಡವರು ವನವಾಸದಲ್ಲಿದ್ದಾಗ ಒಂದುದಿನ ಅವರಲ್ಲಿಗೆ ಇವರು ಬಂದರು. ತಮ್ಮ ಕಷ್ಟವನ್ನು ಅವರಲ್ಲಿ ಪಾಂಡವರು ತೋಡಿಕೊಂಡಾಗ, "ಧರ್ಮರಾಯ, ನೀವೇಕೆ ಚಿಂತಿಸುವಿರಿ; ಪರಮಾತ್ಮನಾದ ಕೃಷ್ಣ ನಿಮ್ಮ ಪಕ್ಷದಲ್ಲಿರುವಾಗ, ನಿಮಗೆ ಯಾವ ಚಿಂತೆಯೂ ಬೇಡ; ನೀವು ಸಂಶಯಪಟ್ಟರೂ ನಾನು ಚಿನ್ನಾಗಿ ಬಲ್ಲೆ ಕೃಷ್ಣನೇ ಪರಮಾತ್ಮನೆಂದು" ಎಂದು ಹೇಳಿ ಸಮಾಧಾನ ಮಾಡಿದರು. ಮತ್ತೆ ಹೇಳಿದರು "ಧರ್ಮನಂದನ, ಒಂದು ಕಾಲದಲ್ಲಿ ತ್ರಿಮೂರ್ತಿಗಳಲ್ಲಿ ಯಾರು ಪರಮಾತ್ಮನೆಂದು ತಿಳಿಯುವ ಪತೂಹಲ ಬಂತು ನನಗೆ. ನಾರಾಯಣ ವರ ಕೊಟ್ಟ; ಅದರಂತೆ ಬ್ರಹ್ಮನ ದೈನಂದಿನ ಪ್ರಳಯದಲ್ಲಿ ನಾನು ಮಾತ್ರ ಉಳಿದು ನೋಡುವಂತಾದೆ. ಆಗ ನೋಡಿದೆ, ಕೇಳು; ನಾರಾಯಣನೊಬ್ಬನೇ ಉಳಿದಿದ್ದನು; ಕ್ಷೀರಸಮುದ್ರದಲ್ಲಿ ಅವನನ್ನು ಶ್ರೀ ಮತ್ತು ಭೂ ಸಮೇತವಾಗಿ ಕಂಡೆ. ಅವನೇ ಜಗತ್ತಿಗೆ ಕಾರಣನೆಂದೂ ಅರಿತೆ. ಅವನೇ ಈಗ ಕೃಷ್ಣನಾಗಿ ಅವತರಿಸಿ ನಿಮಗೆ ಪ್ರಿಯವಾಗಿರುವನು" ಎಂದರು. ಆದ್ದರಿಂದ "ವಂಗ . . . . ಮಾಧವ" ನಾರಾಯಣನೇ.

ಸಮುದ್ರವನ್ನು ದೇವದಾನವರು ಕಡೆದ ಕತೆ ಭಾಗವತ ಮತ್ತು ವಿಷ್ಣುಪುರಾಣ ಇವೆರಡರಲ್ಲೂ ಇದೆ. ಆದರೆ ಕತೆ ಹೇಳುವಾಗ ಸ್ವಲ್ಪ ವ್ಯತ್ಯಾಸವಿದೆ.

ಭಾಗವತ VIII, 7 ಮತ್ತು 8ನೇ ಅಧ್ಯಾಯವಲ್ಲಿ ಕತೆ ಹೀಗಿದೆ. ದೇವದಾನವರು ಸಮುದ್ರ ಕಡೆದರು. ಕಡಗೋಲಾದ ಮಂದರಪರ್ವತ ಮುಳುಗುವಂತಾಯಿತು; ಕೂರ್ಮಾವತಾರ ಮಾಡಿ ಅದನ್ನು ಎತ್ತಿ ಹಿಡಿದ ನಾರಾಯಣ; ಕಡೆಯುತ್ತಿದ್ದಂತೆಯೇ ಹಾಲಾಹಲವಿಷ ಹುಟ್ಟಿತು. ಎಲ್ಲೆಲ್ಲೂ ದಹಿಸುವಂತಾಯಿತು. ಎಲ್ಲರೂ ರುದ್ರನನ್ನು ಕೇಳಿಕೊಂಡರು. ಬ್ರಹ್ಮವಿಷ್ಣು ರುದ್ರರಲ್ಲಿ ರುದ್ರನೇ ಪರದೇವತೆಯೆಂದು ಸ್ತೋತ್ರಮಾಡಿದರು.

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾರ್ಥಾ ವಿಭೋ ।
ಧತ್ಸೇ ಯದಾ ಸ್ವದೃಕ್ ಭೂರ್ಮ ಬ್ರಹ್ಮವಿಷ್ಣುಶಿವಾಭಿದಾಂ ॥

VII, 21

"ಗುಣಮಯಿಯಾದ ನಿನ್ನ ಶಕ್ತಿಯಿಂದ ಪ್ರಪಂಚದ ಸೃಷ್ಟಿ ಸ್ಥಿತಿ ಲಯವನ್ನು ನಿರ್ವಹಿಸಿ, ಮಹಾಮಹಿಮನಾಗಿ ಬ್ರಹ್ಮ ವಿಷ್ಣು ಶಿವನೆನ್ನುವ ಹೆಸರನ್ನು ತಾಳುವವನು ನೀನೇ" ಎಂದರು. ಆಗ ಶಿವ ಪಾರ್ವತಿಯನ್ನು ಕುರಿತು ಹೇಳಿದ

ಅಸಾಂ ಪ್ರಾಣಪರಿಪ್ಲುನಾಂ ವಿಧೇಯಮನುಭಯಂ ಹಿ ನೋ ।
ಏತಾವಾನ್ ಹಿ ಪ್ರಭೋರರ್ಥಾ ಯದ್ದೀನಪರಿಪಾಲನಂ ॥
ಪುಂಸಃ ಕೃಪಯತೋ ಭದ್ರೇ ಸರ್ವಾತ್ಮಾ ಪ್ರೀಯತೇ ಹರಿಃ ।
ಪ್ರೀತೇ ಹರೌ ಭಗವತಿ ಪ್ರೀತೋಽಹಂ ಸಚರಾಚರಃ ॥
ತಸ್ಮಾದಿದಂ ಗರಂ ಭುಂಜೇ ಪ್ರಜಾನಾಂ ಸ್ವಸ್ತಿರಸ್ತು ನೋ । 37–40

"ಪಾರ್ವತಿ, ಜಗತ್ಪರಿಪಾಲನೆ ಪ್ರಭುವಿನ ಇಷ್ಟ; ಇಲ್ಲಿ ವೈರಕ್ಕೆ ಅವಕಾಶವಿಲ್ಲ; ಸತ್ಪುರುಷರಾದವರು ತನ್ನ ಪ್ರಾಣ ಕೊಟ್ಟಾದರೂ ಮತ್ತೊಬ್ಬರನ್ನು ರಕ್ಷಿಸುವರು; ನಾನು ಈ ಹಾಲಾಹಲವನ್ನು ಕುಡಿದರೆ ಸರ್ವಾಂತರ್ಯಾಮಿಯಾದ ಹರಿಯು ಪ್ರೀತನಾಗುವನು; ಅದಕ್ಕಾಗಿ ಇದನ್ನು ಕುಡಿಯುವೆನು; ಎಲ್ಲರಿಗೂ ಮಂಗಳವಾಗಲಿ; ನನಗೂ ಮಂಗಳವಾಗಲಿ" ಎಂದು ಹೇಳಿ ಕುಡಿದ. ಆಗ ಹೇಳಿದರು ಶುಕರು—

ತತಃ ಕರತಲೀಕೃತ್ಯ ವ್ಯಾಪಿ ಹಾಲಾಹಲಂ ವಿಷಂ ।
ಅಭಕ್ಷಯನ್ಮಹಾದೇವಃ ಕೃಪಯಾ ಭೂತಭಾವನಃ ॥ 41

ಭೂತಭೂವನನಾದ ಮಹಾದೇವ ತನ್ನ ಅಂಗೈಯಿಂದ ವಿಷವನ್ನು ತೆಗೆದು ಕುಡಿದ. ಈಶ್ವರ ಮಹಾದೇವ, ದೇವತೆಗಳಿಂದೆಯ; ಮುಖ್ಯಮಂತ್ರಿಯಂತೆ ಇಂದ್ರನಿದ್ದರೆ, ರಾಷ್ಟ್ರಪತಿಯಂತೆ ರುದ್ರ; ಇವನು ಭೂತಭಾವನ; ಇಂದ್ರ ದೇವಭಾವನ; ಪರಮಾತ್ಮ ಹರಿ ಅರ್ಜುನ ಹೇಳಿದಂತೆ "ಭೂತಭಾವನ, ಭೂತೇಶ, ದೇವದೇವ, ಜಗತ್ಪತಿ" (ಭ–ಗೀ X); ಹೀಗೆ ಇವನೇ ಪರಮಾತ್ಮನೆಂದು ತೋರಿಸಲೆಂದೇ ಶ್ರೀದೇವಿಯು ಸಮುದ್ರದಿಂದೆದ್ದು

ತತಶ್ಚಾವಿರಭೂತ್ಸಾಕ್ಷಾತ್ ಶ್ರೀ ರಮಾ ಭಗವತ್ಪರಾ ।
ರಂಜಯಂತೀ ದಿಶಃ ಕಾಂತ್ಯಾ ವಿದ್ಯುತ್ಸೌದಾಮಿನೀ ಯಥಾ ॥

—ಭಾಗ–VIII, 8

ಎಂದಿರುವಂತೆ ನಾಲ್ಕು ದಿಕ್ಕುಗಳನ್ನೂ ಬೆಳಗಿದಳು.

ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ ಸಸುರಾಸುರ ಮಾನವಾಃ ।
ರೂಪೌದಾರ್ಯವಯೋವರ್ಣಮಹಿಮಾಕ್ಷಿಪ್ತ ಚೇತಸಃ ॥

—ಭಾಗ–VIII, 9

ರೂಪ, ಔದಾರ್ಯ, ವಯಸ್ಸು, ಬಣ್ಣ ಮತ್ತು ಮಹಿಮೆಯಿಂದ ಚಕಿತರಾಗಿ ಆಸೆಪಟ್ಟರು.

ವವ್ರೇ ವರಂ ಸರ್ವಗುಣೈರಪೇಕ್ಷಿತಂ ರಮಾ ಮುಕುಂದಂ
ನಿರಪೇಕ್ಷಮೀಪ್ಸಿತಂ । 23

ಆದರೆ ಮುಕುಂದನನ್ನು ಕೂಡಿದಳು.

ವಿಷ್ಣುಪುರಾಣ 1, 8 ಮತ್ತು 9 ನೇ ಅಧ್ಯಾಯದಲ್ಲೂ ಈ ಕತೆ ಇದೆ. "ಇವಳಲ್ಲಿ ಎಲ್ಲರೂ ಆಸೆಪಟ್ಟರು" ಎನ್ನುವ ಭಾಗವತದ ಮಾತನ್ನು ವಿವರಿಸುವಾಗ

ತತಃ ಸ್ಫುರತ್ಕಾಂತಿಮತೀ ವಿಕಾಸಿಕಮಲೇಸ್ಥಿತಾ ।
ಶ್ರೀದೇವೀ ಪಯಸಸ್ತಸ್ಮಾದುತ್ಥಿತಾ ಧೃತಪಂಕಜಾ ॥ 100

ತಾಂ ತುಷ್ಟುವು ರ್ಮುದಾಯುಕ್ತಾ ಶ್ರೀಸೂಕ್ತೇನ ಮಹರ್ಷಯಃ 101

ಸಮುದ್ರದಿಂದ ಎದ್ದು ವಿರಾಜಮಾನಳಾಗಿ ಬಂದ ಶ್ರೀದೇವಿಯನ್ನು ಶ್ರೀಸೂಕ್ತದಿಂದ ಎಲ್ಲರಪರವಾಗಿ ಋಷಿಗಳು ಸ್ತೋತ್ರಮಾಡಿದರು. ಆಗ

ದಿವ್ಯಮಾಲ್ಯಾಂಬರಧರಾ ಸ್ನಾತಾ ಭೂಷಣಭೂಷಿತಾ ।
ಪಶ್ಯತಾಂ ಸರ್ವದೇವಾನಾಂ ಯಯೌ ವಕ್ಷಸ್ಥಲಂ ಹರೇಃ ॥ 106

ದಿವ್ಯ ಮಾಲೆಯನ್ನು ಧರಿಸಿ, ದಿವ್ಯಾಸ್ತ್ರವುಟ್ಟು, ಶುಭ್ರಳಾಗಿ, ಅಲಂಕಾರದಿಂದ, ಎಲ್ಲಾದೇವತೆಗಳೂ ನೋಡುತ್ತಿದ್ದಂತೆ ಹರಿಯ ವಕ್ಷವನ್ನು ಸೇರಿದಳು.

ಇದನ್ನೇ ಗೋದೆಯು "ವಂಗಕ್ಕಡಲ್ ಕಡೈಂದ ಮಾಧವ್" ಎಂದು ಚಿಕ್ಕದಾಗಿ ಹೇಳಿರುವಳು.

ತಿರುಮಂಗೈ ಆಳ್ವಾರ್ರು ಇವನನ್ನು

ವಿಣ್ಣವರಮುದುಣ ಅಮುದಿಲ್ವರುಂ
ಪೆಣ್ಣಮುದುಂಡ ವೆಂಪೆರುಮಾನೇ

ಎಂದರು. "ದೇವತೆಗಳು ಅಮೃತಪಾನಮಾಡಿದರು; ಆ ಅಮೃತದಿಂದ ಎದ್ದು ಬಂದ ಹೆಣ್ಣಮೃತವಾದ ಲಕ್ಷ್ಮಿಯನ್ನು ಅನುಭವಿಸಿದ ನಮ್ಮ ಸ್ವಾಮಿ" ಎಂದರವರು. ಸಮುದ್ರಕಡೆಯುವಾಗ ಅವನ ಸೌಂದರ್ಯವನ್ನು ನೆನೆದು ಗೋದೆಯ ತಂದೆ ವಿಷ್ಣುಚಿತ್ತರು

ಅಪ್ಪನೇ ಅಡಲಾಳಿಯಾನೇ ಆಳಕ್ಕಡಲೇ
ಕಡೈಂದತುಪ್ಪನೇ ಉಂತೋಳಗಳ್ ನಾನ್ಮುಂ
ಕಂಡಿಡ ಕೂಡುಂಗೊಲ್

ಎಂದು ಹೇಳಿಕೊಂಡು ಪರವಶರಾದರು. ಇವರ ಅನುಭವಕ್ಕಿಂತ ಮಿಗಿಲಾಗಿ ಅನುಭವಿಸಿದಳು ಗೋದೆ "ಕೇಶವನೈ"—ಎಂದು. ಬ್ರಹ್ಮರುದ್ರರ ಒಡೆಯಕೇಶವ; ಸಮುದ್ರ ಕಡೆಯುವಾಗ ಬಿಚ್ಚಿದ ಕೂದಲಿನಿಂದ ಎಷ್ಟು ರಮ್ಯನೊ ಇವನು ಎಂದಳು. "ನೀನು ಸೂರ್ಯ, ಗೋಪಿಯರು ಚಂದ್ರಮುಖಿಯರು; ಗೋಕುಲ ನಿನಗೆ ಪ್ರಿಯವಾದ ಸ್ಥಳ; ನಾವು ಬಂದಿರುವೆವು; ನಾನೂ ಬಂದಿರುವೆನು; ನಾನು ವಿಷ್ಣು ಚಿತ್ತರ ಮಗಳೆಂದು ಮರೆಯಬೇಡ; ಹಾಡಿರುವೆನು ನಿನ್ನನ್ನು; ಕೂಡಿರುವೆನು ನಿನ್ನನ್ನು; ಪಾಡಿಸುವೆನಿವರನ್ನು; ಶ್ರಿಯಃ ಪತಿಯೆಂದು ಮರೆಯದಿರು; ಕೃಪೆಮಾಡು ದೇವ" ಎಂದು ಹೇಳುವಂತೆ "ತಿಂಗಳ್ . . . ತಿರುವರುಳ್" ಎಂದು ಹಾಡಿ, "ಬನ್ನಿ ಎಲ್ಲರೂ, ನಾನು ಹೇಳಿಕೊಟ್ಟಂತೆ ಹಾಡಿ; ಹಾಗೆ ಹಾಡುವರೆಲ್ಲರೂ "ತಿರುಮಾಲಾಲ್, ತಿರುವರುಳ್ ಪೆತ್ತು, ಇನ್ಬುರುವರ್" ಎಂದು ಮಂಗಳ ಹಾಡಿರುವಳು ಗೋದೆ—ಏಲೋರೆಂಪಾವಾಯ್

ಸ್ವಾಪದೇಶ

ನಮಗೆ ಪುರುಷಕಾರನಾಗಿ, ಪ್ರಪನ್ನರನ್ನಾಗಿಸಿ ಕೃತಾರ್ಥರನ್ನಾಗಿ ಮಾಡಿದ ಆಚಾರ್ಯೋತ್ತಮನಿಂದ ಸಕಲ ಸೌಭಾಗ್ಯಸಿಗುವುದೆಂದು ಒಬ್ಬ ಶಿಷ್ಯ ಎಲ್ಲರಿಗೂ ಹೇಳಿ ಮಂಗಳ ಹಾಡಿರುವನು

ವೈಕುಂದ ಎನಪದೋರ್ ತೋಣಿ ಪೆರಾದುಲ್ಗಿರ್ರೇ

"ವೈಕುಂಠನಾಥನೇ, ಎಲ್ಲೂಸಿಗದ, ಸಂಸಾರಸಾಗರ ದಾಟಿಸುವದೋಣಿ, ಅವನು ಸಿಗದೆ ತೊಳಲುವೆನಲ್ಲಾ" ಎಂದಳು ಗೋದೆ.

ತ್ವಯ್ಯಂಭುಜಾಕ್ಷಾಖಿಲಲೋಕಧಾಮ್ನಿ ಸಮಾಧಿನಾವೇಶಿತಚೇತಸೈಕೇ ।
ತ್ವತ್ಪಾದಪೋತೇನ ಮಹತ್ಕೃತೇನ ಕುರ್ವಂತಿ ಗೋವತ್ಸಪದಂ ಭವಾಬ್ಧಿಂ ॥

"ದೇವ, ಕಮಲನಯನ, ಲೋಕಗಳ ಬೀಡು ನೀನು; ನಿನ್ನಲ್ಲಿ ಮನವಿಟ್ಟು ಮೈ ಮರೆತು ಕಂಡರು ಕೊನೆಗೆ, ನಿನ್ನ ಪಾದವೇ ದೋಣಿ; ಎಂದೂ ಯಾವಾಗಲೂ ಕೈಬಿಡದ ದೋಣಿ; ಹುಟ್ಟು ಸಾವಿಗಾಚೆ ಒಯ್ಯುವ ದೋಣಿ; ಭವಕಡಲ ಕರುಗೊರ ಸಾಗಿಸುವ ದೋಣಿ" ಎಂದರು ಮುಕ್ಕಣ್ಣ ನಾನ್ಮೊಗ ಮೊದಲಾದ ಮರರು ಕೃಷ್ಣನನ್ನು ದೇವಕೀ ಗರ್ಭದಲ್ಲಿ. ಹಾಗೆ

ವಂಗಂ—ದೋಣಿಯೆಂದು "ಯಸ್ಸೇತುರೀಜಾನಾನಾಮಕ್ಷರಂ ಬ್ರಹ್ಮ ಯತ್ಪರಂ" ಮೊದಲಾದ ಮಂತ್ರಗಳಿಂದ ಸ್ತೋತ್ರ ಮಾಡುತ್ತಿರುವ "ಕಡಲ್"—ವೇದಸಮುದ್ರವನ್ನು ಕಡೈಂದ—ತನ್ನ ಬುದ್ಧಿಯೆನ್ನುವ ಕಡಗೋಲಿನಿಂದ ಕಡೆದವನೂ "ಮಾ–ತರ್ವ"–ತಸ್ಮಾನ್ನಾನ್ಯಸಮೇಷಾಂ ತಪಸಾಮತ್ತಿರಿಕ್ತಮಾಹುಃ" ಎಂದು ತೈತ್ತರಿಯೋಪನಿಷತ್ತು ಹೇಳಿರುವಂತೆ ಉತ್ಕೃಷ್ಟ ತಪಸ್ಸಾದ ಪ್ರಪತ್ತಿಯನ್ನು ಅನು

ಷ್ಮಿಸಿ, ನಮಗೂ ಮಾಡಿಸಿದವನೂ, ಕೇಶವನೈ–ಕೇಶಿ ಎನ್ನುವ ಅಸುರನನ್ನು ಕೃಷ್ಣ ಕೊಂದಂತೆ, ಅಸುರರಂತಿರುವ ಇಂದ್ರಿಯಗಳನ್ನು ಜಯಿಸಿದವನೂ ಆದ ಆಚಾರ್ಯನನ್ನು, ತಿಂಗಳ್‌ತಿರುಮುಕತ್ತು-ಚಂದ್ರನಂತೆ ಶಾಂತಚಿತ್ತರಾದ ಶಿಷ್ಯರೂ, ಶೆಯ್ಯುಳ್ಳಾರ್–ಕಲ್ಯಾಣಗುಣಶಾಲಿಗಳಾಗಿ, ಶೆನ್ನು–ಸಮೀಪಿಸಿ, ಇರೈಂಜಿ–ಸೇವಿಸಿ, ಅಂಗಪ್ಪರೈಗೊಂಡ ವಾತ್ಸ್ಯೆ–ಮೀಮಾಂಸಶಾಸ್ತ್ರದಲ್ಲಿ ಅಂಗಾಧಿಕರಣದಲ್ಲಿ ಹೇಳಿರುವಂತೆ ಶೇಷತ್ವವೆನ್ನುವ ಫಲವನ್ನು ಹೊಂದುವಂತೆ. ಅಣಿ . . . . ಶೊನ್ನ–ಅನ್ಯಾಪದೇಶಾರ್ಥವೇ–ಶಂಕತಮಿಳ್–"ಕಂ" ಬ್ರಹ್ಮ, "ಖಂ" ಬ್ರಹ್ಮ" ಎಂದು ಶ್ರುತಿ ಹೇಳಿರುವಂತೆ ಆನಂದಮಯ ವೈಕುಂಠವನ್ನು ತೋರಬಲ್ಲ ತಮಿಳು ಪದ್ಯಮಾಲೆಯ, ಮುಪ್ಪದುಂ, ಮೂವತ್ತನ್ನು, ತಪ್ಪಾಮೆ ಇಂಗೆ, ಇಪ್ಪರಿಶು, ಉರೈಪ್ಪಾರ್, ಈರಿರಂಡು ಮಾಲ್‌ವರೈತ್ತೋಳ್, ಶೆಂಗಣ್, ತಿರುಮುಕತ್ತು ಚ್ಚೆಲ್ವತಿರುಮಾಲಾಲ್. ತಿರುವರುಳ್ ಪೆತ್ತು–ಇನ್ನುರುವರ್—

ಆಂಡಾಳ್ ತಿರುವಡಿಗಳೇ ಶರಣಂ

ವಾಳ್ಗಿತ್ತಿರುನಾಮಂ

ತಿರುವಾಡಿಪ್ಪೂರತ್ತಿಲ್‌ಶೆಕತ್ತುದಿತ್ತಾಳ್‌ವಾಳ್ಗಿಯೇ
ತಿರುಪ್ಪಾವೈಮುಪ್ಪದುಂ ಶೆಪ್ಪಿನಾಳ್‌ವಾಳ್ಗಿಯೇ
ಪೆರಿಯಾಳ್ವಾರ್‌ಪೆಟ್ರೆಡುತ್ತಪೆಣ್‌ಪಿಳ್ಳೈವಾಳ್ಗಿಯೇ
ಪೆರುಂಬೂದೂರ್‌ಮಾಮುನೈಕ್ಕುಪಿನ್ನಾನಾಳ್‌ವಾಳ್ಗಿಯೇ
ಒರುನೂತ್ತುನಾಲ್ವತ್ತುಮೂನ್ರುರೈತ್ತಾಳ್‌ವಾಳ್ಗಿಯೇ
ಉಯರರಂಗಕ್ಕೇಕಣ್ಣಿಯುಕಂದು ಅಳಿತ್ತಾಳ್‌ವಾಳ್ಗಿಯೇ
ಮರುವಾರುಂತಿರುಮಲ್ಲಿವಳನಾಡಿವಾಳ್ಗಿಯೇ
ವಣ್‌ವುದುವೈನಗರ್‌ಕೋದೈಮಲರ್‌ಪದಂಗಳ್‌ವಾಳ್ಗಿಯೇ

ಪರಾಭವಸಂವತ್ಸರ ಆಷಾಢ ಶುಕ್ಲ ಷಷ್ಠೀ
ಶುಕ್ರವಾರ ಪುಬ್ಬಾ ನಕ್ಷತ್ರಂ

ಎಸ್. ಸಂಪತ್ತೈಯಂಗಾರ್
6, ಚಾಮರಾಜಪೇಟೆ, 6ನೇ ರಸ್ತೆ
ಬೆಂಗಳೂರು–18

ಟಿಪ್ಪಣಿ

ಪುಟ ೩ — ಟಿಪ್ಪಣಿ ೧

ಶ್ರೀಮನ್ನಾರಾಯಣನೇ ಪರಮಾತ್ಮ; ಪ್ರಪಂಚದ ಸೃಷ್ಟಿ ಸ್ಥಿತಿ ಲಯಕ್ಕೆ ಕಾರಣನು; ಸೃಷ್ಟಿ ಮಾಡುವುದು ಜೀತನರ ಉದ್ಧಾರಕ್ಕಾಗಿ; ಅವರು ಪ್ರಪಂಚದಲ್ಲಿ ತಾನು ಇಟ್ಟಿರುವ ನಿಯತಿ ಮತ್ತು ನಿಯಮಗಳನ್ನು ತಮ್ಮ ಬುದ್ಧಿಯಿಂದ ಅರಿತು ಬುದ್ಧಿವಂತರಾಗಿ ತನ್ನನ್ನು ಅರಿಯಲೆಂದು; ಅರಿತು ತನ್ನಲ್ಲಿ ಭಕ್ತಿಯಿಟ್ಟು ಆಶ್ರಸಿದರೆ ಅವರನ್ನು ರಕ್ಷಿಸುವನು ಅಂದರೆ ಬುದ್ಧಿಯನ್ನು ಚಿನ್ನಾಗಿ ಬೆಳೆಸಿ ಅವರನ್ನು ಮೋಕ್ಷಕ್ಕೆ ಯೋಗ್ಯರನ್ನಾಗಿ ಮಾಡಿ ಮೋಕ್ಷವನ್ನು ಕೊಡುವನು.

ಇವನು ಇದಕ್ಕಾಗಿ ನಾಲುವಿಧದಲ್ಲಿ ತನ್ನ ದಿವ್ಯ ದೇಶವಾದ ವೈಕುಂಠದಿಂದ ಇಳಿದುಬರುವನು; ವೈಕುಂಠದಲ್ಲಿರುವ ರೂಪ ಶಾಶ್ವತ; ಇದೂ ಸೇರಿ ಇವನಿಗೆ ಐದುವಿಧ ರೂಪಗಳು. ಒಂದು ದೀಪದಿಂದ ಮತ್ತೊಂದು ದೀಪ ಹಚ್ಚುವಂತೆ ಅವನ ನಾನಾ ರೂಪಗಳಿಗೆ ಮೂಲ ದೀಪ ವೈಕುಂಠ ರೂಪ; ಇವನು ಮೊದಲು ನಾಲ್ಕು ರೂಪ ತಾಳುವನು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎನ್ನುವ ಈ ನಾಲ್ಕು ರೂಪಗಳಿಗೂ ಒಟ್ಟು ವ್ಯೂಹರೂಪಗಳೆಂದು ಹೆಸರು. ವಾಸುದೇವನಾಗಿ ರೂಪವಿಲ್ಲದೆ ಹಾಲಿನಲ್ಲಿ ಸಕ್ಕರೆಯಂತೆ ಪ್ರಪಂಚದ ಅಣುರೇಣುವಿನಲ್ಲಿ ವ್ಯಾಪಿಸಿಕೊಳ್ಳುವನು; ಸಂಕರ್ಷಣನಾಗಿ ರುದ್ರನಿಗೆ ಅಂತರ್ಯಾಮಿಯಾಗಿರುವನು; ಪ್ರದ್ಯುಮ್ನನಾಗಿ ಚತುರ್ಮುಖ ಬ್ರಹ್ಮನಿಗೆ ಅಂತರ್ಯಾಮಿಯಾಗಿರುವನು; ಅನಿರುದ್ಧನಾಗಿ ತ್ರಿಮೂರ್ತಿಗಳಲ್ಲಿ ಒಬ್ಬನಾಗಿ ವಿಷ್ಣುವಾಗಿರುವನು. ವೈಕುಂಠದಲ್ಲಿ ನಿತ್ಯನಾಗಿರುವವನು ಪರವಾಸುದೇವ; ವ್ಯೂಹ ವಾಸುದೇವ ವಿಶ್ವವನ್ನೆಲ್ಲಾ ವ್ಯಾಪಿಸಿಕೊಂಡಿರುವ ರೂಪವಿಲ್ಲದ ದೇವ. ಇವರಿಬ್ಬರಲ್ಲೂ ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸೆನ್ನುವ ಆರು ಗುಣಗಳು ನಿತ್ಯವಾಗಿರುವವು. ಎಲ್ಲಾ ಪದಾರ್ಥಗಳ ಸ್ವರೂಪ ಮತ್ತು ಸ್ವಭಾವ ತಿಳಿಯುವ ಗುಣ ಜ್ಞಾನ; ಇದೇ ಮಿಕ್ಕ ಐದುಗುಣಗಳಿಗೆ ಮೂಲ; ಜ್ಞಾನವು ಕುಗ್ಗದೆ, ಕುಂದದೇ, ಶ್ರಮತಾಳದೇ ಇರುವುದಕ್ಕೆ ಬಲವೆಂದು ಹೆಸರು; ಸ್ವಾತಂತ್ರ್ಯದೊಡನೆ ಎಲ್ಲದಕ್ಕೂ ಕಾರಣನಾಗಿ ಕರ್ತೃವಾಗಿರುವಂತೆ ಮಾಡಿರುವ ಗುಣ ಐಶ್ವರ್ಯ; ವಿಕಾರ ತಾಳದಿಳುವುದು ವೀರ್ಯ; ಜಗತ್ತಿಗೆ ಮೂಲನಾಗಿರುವಂತೆ ಮಾಡಿರುವುದು ಶಕ್ತಿ; ಯಾರಿಗೂ ಜಗ್ಗದ ಮಹತ್ವವೇ ತೇಜಸ್ಸು. ಈ ಆರರಲ್ಲಿ ಸಂಕರ್ಷಣನು ಜ್ಞಾನ ಬಲವನ್ನೂ, ಪ್ರದ್ಯುಮ್ನನು ಐಶ್ವರ್ಯ ವೀರ್ಯವನ್ನೂ, ಅನಿರುದ್ಧನು ಶಕ್ತಿ ತೇಜಸ್ಸನ್ನೂ ಪ್ರಕಾಶಪಡಿಸಿಕೊಂಡು

ಮಿಕ್ಕ ನಾಲ್ಕು ಗುಣಗಳನ್ನು ಅಡಗಿಸಿಕೊಂಡಿರುವರು. ವೇದದ ಪುರುಷಸೂಕ್ತವು ಅನಿರುದ್ಧರೂಪವನ್ನೇ ವರ್ಣಿಸಿರುವುದು; ಇವನೇ ವಿಷ್ಣು; ಇವನಲ್ಲಿಗೇ ಬ್ರಹ್ಮ ರುದ್ರರು ಕಷ್ಟವೊದಗಿದಾಗ ಬರುವರು. ಹೀಗೆ (1) ಪರ ಮತ್ತು (2) ವ್ಯೂಹ ರೂಪಗಳಲ್ಲದೆ (3) ವಿಭವವೆನ್ನುವ ಅವತಾರ ರೂಪಗಳೂ, (4) ಅಂತರ್ಯಾಮಿ ಎನ್ನುವ ಎಲ್ಲಾ ಚೇತನರಲ್ಲಿರುವ ರೂಪಗಳೂ ಮತ್ತು (5) ಭಕ್ತರಿಗಾಗಿ ಗುಡಿ ಮೊದಲಾದುವುಗಳಲ್ಲಿರುವ ವಿಗ್ರಹಗಳಲ್ಲಿ ಕೂಡಿಕೊಳ್ಳುವ ಅರ್ಚಾರೂಪಗಳೂ ಅವನಿಗಿವೆ.

ಪುಟ ೪ — ಟಿಪ್ಪಣಿ ೨

ಪರಮಾತ್ಮನ ಗುಣಗಳು ಎರಡು ವಿಧ–ಮೊದಲನೇ ಟಿಪ್ಪಣಿಯಲ್ಲಿ ಹೇಳಿರುವ ಜ್ಞಾನ, ಬಲ, ಐಶ್ವರ್ಯ, ವೀರ್ಯ ಶಕ್ತಿ ಮತ್ತು ತೇಜಸ್ಸೆನ್ನುವವು ಸ್ವರೂಪ ನಿರೂಪಕ ಗುಣಗಳು ಅಂದರೆ ಸ್ವಸತ್ತಾ ಸಮಕಾಲೀನ ಗುಣಗಳು ಅಂದರೆ ಯಾವ ಗುಣಗಳಿರುವುದರಿಂದ ಅವನ ಸ್ವರೂಪವು ಗೋಚರವಾಗುವವೊ ಅವು; ನಿತ್ಯವಾದ ವಿವು; ಇವು ಒಟ್ಟುಗೂಡಿ ಜೀನರರಾದ ನಮ್ಮೆಲ್ಲರ ವಿಷಯದಲ್ಲಿ ದಯೆಯಾಗಿ ಹರಿದು ನಾನಾಗುಣಗಳಾಗಿ ಕಾಣುತ್ತವೆ. ಇವಕ್ಕೆ ನಿರೂಪಿತ ಸ್ವರೂಪ ಗುಣ ವಿಶೇಷಗಳೆಂದು ಹೆಸರು. ಇವು ವೈಕುಂಠದಲ್ಲಿ ಪ್ರಕಾಶಕ್ಕೆ ಬರುವುದಿಲ್ಲ. ಪ್ರಪಂಚದಲ್ಲಿ ತೊಳಲುತ್ತಿರುವವರ ವಿಷಯದಲ್ಲಿ ಪ್ರಕಾಶವಾಗುತ್ತವೆ. ಇವುಗಳಲ್ಲಿ ಮುಖ್ಯವಾದುವು ಸೌಶೀಲ್ಯ ಮತ್ತು ಸೌಲಭ್ಯ. 8ನೇ ಪದ್ಯ ವ್ಯಾಖ್ಯಾನದಲ್ಲೂ ವಿವರವಿದೆ. ಪುಟ 89.

ಪುಟ ೫ — ಟಿಪ್ಪಣಿ ೩

ಸೌಲಭ್ಯ ಮತ್ತು ಸೌಶೀಲ್ಯ ಗುಣಗಳು ನಿರೂಪಿತ ಸ್ವರೂಪ ಗುಣ ವಿಶೇಷಗಳಲ್ಲಿ ಮುಖ್ಯವಾದುವು. ಸೌಲಭ್ಯವೆನ್ನುವುದನ್ನು ಪುಟ 58 ರಲ್ಲೂ ಸೌಶೀಲ್ಯ ಗುಣ ವಿಮರ್ಶೆಯನ್ನು 60ನೇ ಪುಟದಲ್ಲೂ ನೋಡಬಹುದು.

ಪುಟ ೫ — ಟಿಪ್ಪಣಿ ೪

ಒಂದನೇ ಟಿಪ್ಪಣಿ ನೋಡಿ; ಮತ್ತೆ ಇದರ ವಿವರ 20 ನೇ ಪದ್ಯ ವ್ಯಾಖ್ಯಾನದಲ್ಲಿದೆ.

ಪುಟ ೫ — ಟಿಪ್ಪಣಿ ೫

ನಿಂದಾಸ್ತುತಿ—ಪರಮಾತ್ಮನಲ್ಲಿ ಬಹು ಪ್ರೇಮ ಬಂದು ತಮ್ಮ ಕಷ್ಟಕಾಲದಲ್ಲಿ ಅವನು ತೋರಿಕೊಳ್ಳಲಿಲ್ಲವಲ್ಲಾ ಎನ್ನುವಾಗ, ಅವನ ಭಕ್ತರು ನಿಂದಿಸುವರು, ಅದೂ ಒಂದು ತೆರನಾದ ಸ್ತುತಿಯೇ.

ಪುಟ ೫ — ಟಿಪ್ಪಣಿ ೬

ಪರಮಾತ್ಮನಲ್ಲಿ ಅತಿಯಾಗಿ ಭಕ್ತಿಯಿಟ್ಟವರಿಗೆ ತಾವು ಹೆಂಗಸರೆಂದೂ ಪರ ಮಾತ್ಮನೊಬ್ಬನೇ ಪುರುಷನೆಂದೂ ಭಾವ ಬರುವುದು. (ಪುಟ 14) ಅವನು ಬಾರದೆ ವಿರಹಬರುವುದು ಇದರ ವಿವರ 16ನೇ ಪದ್ಯ ವ್ಯಾಖ್ಯಾನದಲ್ಲಿದೆ. **ರಕ್ಷಕತ್ವ**–20ನೇ ಪದ್ಯ ವ್ಯಾಖ್ಯಾನ, 21ನೇ ಪದ್ಯ ವ್ಯಾಖ್ಯಾನ, 21 ನೇ ಪದ್ಯ ಪೀಠಿಕೆ ನೋಡಿ.

ಪುಟ ೭ — ಟಿಪ್ಪಣಿ ೭

ಶಬ್ದಗಳಿಗೆ ಅರ್ಥ ಹೇಳಬೇಕಾದರೆ ಮೂರು ಕ್ರಮವಿವೆ. (1) ಯೋಗ (2) ರೂಢಿ ಮತ್ತು (3) ಯೋಗರೂಢಿ. ಶಬ್ದದ ಅರ್ಥವು ಆದರಲ್ಲೇ ಇದ್ದರೆ ಅದು ಯೋಗ— ರಾಮ ಎಂದರೆ " ರಮಯತಿ," ಎಲ್ಲರನ್ನೂ ಸಂತೋಷ ಪಡಿಸುವನು–ಎನ್ನುವ ಅರ್ಥವು ಅದರಲ್ಲೇ ಇದೆ. ಇದು ಯೌಗಿಕಾರ್ಥ. ರೂಢಿಯಲ್ಲಿದ್ದು ಅರ್ಥದಲ್ಲಿಲ್ಲದಿದ್ದರೆ ಅದು **ರೂಢಿ.** ಲಕ್ಷ್ಮೀಪತಿ ಎನ್ನುವ ಹೆಸರು ದರಿದ್ರನಿಗಿರುವಂತೆ. ಎರಡೂ ಕೂಡಿದರೆ ಅದು **ಯೋಗರೂಢಿ**—ಕೋಟ್ಯಾಧೀಶ್ವರನಿಗೆ ಲಕ್ಷ್ಮೀಪತಿ ಎನ್ನುವ ಹೆಸರಿರುವಂತೆ. 1೫ ನೇ ಪಾಶುರ ವ್ಯಾಖ್ಯಾನ ನೋಡಿ.

ಪುಟ ೭ — ಟಿಪ್ಪಣಿ ೮

ವ್ರತಸಾದ್ಗುಣ್ಯವೆಂದರೆ, ವ್ರತವು ಅಂಗಲೋಪವಿಲ್ಲದೆ ಶಾಸ್ತ್ರಕ್ಕೆ ಅನುಗುಣವಾಗಿ ನಡೆಯುವಂತಾಗುವುದು.

ಪುಟ ೮ — ಟಿಪ್ಪಣಿ ೯

ಪುರುಷಕಾರ — ಪೀಠಿಕೆಯನ್ನು ನೋಡಿ; ಮತ್ತೆ 18 ನೇ ಪದ್ಯದ ವ್ಯಾಖ್ಯಾನ ನೋಡಿ.

ಪುಟ ೧೦ — ಟಿಪ್ಪಣಿ ೧೦

ಆರ್ಥ ಪಂಚಕ — 19 ನೇ ಪದ್ಯದ ಸ್ವಾಪದೇಶ ನೋಡಿ; ಮತ್ತೆ 29 ನೇ ಪದ್ಯ ಸ್ವಾಪದೇಶ ನೋಡಿ.

ಪುಟ ೨೨ — ಟಿಪ್ಪಣಿ ೧೧

ಅಪರೋಕ್ಷ— ಹೊರಗಡೆ ಪದಾರ್ಥಗಳನ್ನು ನಾವು ನೋಡುವೆವು. ಇದು ಪ್ರತ್ಯಕ್ಷಜ್ಞಾನ; ಕಣ್ಣಿಗೆ ಕಾಣದುದನ್ನೂ ಊಹಿಸುವೆವು ಮತ್ತು ಹಿಂದೆ ನೋಡಿದವನ್ನು ನೆನೆಸಿಕೊಳ್ಳುವೆವು. ಇದು ಪರೋಕ್ಷಜ್ಞಾನ. ಆದರೆ ನಾವು ನಮ್ಮನ್ನು ಯಾವಾಗಲೂ ಇರುವೆವೆಂದೇ ತಿಳಿದಿರುವೆವು. ನಮ್ಮ ಜ್ಞಾನದಿಂದ ಹೀಗೆ ನೋಡು

ವುದಿಲ್ಲ ನಾವು. ಇದು ಸ್ಮೃತಿಯೂ ಅಲ್ಲ. ನಮ್ಮ ಸ್ವರೂಪವೇ ಒಂದು ಬೆಳಕು ಅದರಿಂದ ನಾವಿರುವೆವೆಂದು ಯಾವಾಗಲೂ ತಿಳಿದಿರುವುದರಿಂದಲೇ ಮಿಕ್ಕವಿಷಯಗಳ ಜ್ಞಾನ ಬರುವುದು. ಇದಕ್ಕೆ ಅಪರೋಕ್ಷಜ್ಞಾನ ಅಥವಾ ಆಪರೋಕ್ಷ್ಯವೆನ್ನುವ ಹೆಸರಿದೆ ಶಾಸ್ತ್ರದಲ್ಲಿ.

ಪುಟ ೩೨ — ಟಿಪ್ಪಣಿ ೦೨

ಕೈವಲ್ಯ — ಇದೂ ಒಂದು ತೆರನಾದ ಮೋಕ್ಷ. ಪೀಠಿಕೆಯನ್ನು ಓದಿದ ಮೇಲೆ ನಾವು ತಿಳಿಯಬೇಕಾದ ಹೆಚ್ಚಿನ ಅಂಶವನ್ನು ೨೦ನೇ ಪದ್ಯದವ್ಯಾಖ್ಯಾನದಲ್ಲಿ ಕಾಣಬಹುದು. ವೇದಾಂತದಲ್ಲಿ ತತ್ವಗಳು ಮೂರು–ಚಿತ್ತು, ಅಚಿತ್ತು, ಪರಮಾತ್ಮ. ಪರಮಾತ್ಮನ ವಿಷಯವೇ ಪ್ರಧಾನ ಗೋದೆಯ ಪದ್ಯಗಳಲ್ಲಿ. ಅವನ ವಿಷಯದಲ್ಲಿ ಬೇರೆ ಹೇಳಬೇಕಾಗಿಲ್ಲ. ಚಿತ್ತು ಎಂದರೆ ಜೀವ. ನಾವೆಲ್ಲರೂ ಜೀವರುಗಳೇ. ನಮ್ಮ ಸ್ವರೂಪವೇ ಒಂದು ತೇಜಸ್ಸು. ನಾವು ನಮ್ಮನ್ನು "ಇರುವೆವು" ಎಂದು ಯಾವಾಗಲೂ ಅರಿತಿರುವೆವು. ಇದು ಸ್ವರೂಪಗತ ಜ್ಞಾನ. ಇದಲ್ಲದೆ ನಾವಲ್ಲದಿರುವುದನ್ನು ಕಾಣಲು ನಮ್ಮಲ್ಲಿ ಜ್ಞಾನವೆನ್ನುವ ಒಂದು ಬೆಳಕಿರುವುದು. ಇದು ಧರ್ಮಭೂತ ಜ್ಞಾನ; ಸಾಮಾನ್ಯವಾಗಿ ನಾವು ಕರೆಯುವ ಜ್ಞಾನವೆನ್ನುವುದೇ ಇದು. ಇದರಿಂದಲೇ ನಮಗೆ ಸಂಸಾರದಲ್ಲಿ ಸುಖದುಃಖಗಳು; ಮೋಕ್ಷದಲ್ಲಿ ಆನಂದ. ನಮ್ಮ ಜ್ಞಾನವೂ ಯಾವಾಗಲೂ ಹೊರಗೇ ಹೋಗುತ್ತದೆ. ಆದ್ದರಿಂದ ನಮ್ಮ ಜ್ಞಾನದಿಂದ ಸ್ವಾಭಾವಿಕವಾಗಿ ನಮ್ಮನ್ನು ನೋಡಿಕೊಳ್ಳಲು ಸಾಧ್ಯವಿಲ್ಲ. ಯೋಗಾಭ್ಯಾಸದಿಂದ ಈ ಜ್ಞಾನದ ಹೊರಗಣ ಪ್ರವಾಹ ತಪ್ಪಿಸಿ ಒಳಗಡೆಗೆ ತಿರುಗಿಸಿದರೂ ಪರಮಾತ್ಮನ ಅನುಗ್ರಹದಿಂದಲೇ ನಮ್ಮನ್ನು ನಮ್ಮ ಜ್ಞಾನದಿಂದ ನೋಡಬಹುದು. **(ಪುಟ ೦೨ ಮತ್ತು ೦೩ ನೋಡಿ)** ಹಾಗೆ ನೋಡಿಕೊಂಡರೆ ನಮ್ಮಲ್ಲಿರುವ ಆನಂದದ ಅನುಭವವು ನಮಗೆ ಬರುವುದು, ಹಾಗೆ ಅನುಭವಿಸಿದರೆ ಆದಕ್ಕೆ ಕೈವಲ್ಯವೆಂದು ಹೆಸರು. ಆಗ ನಾವಲ್ಲದೇ ಬೇರೆ ಯಾವುದೂ ಇರುವುದಿಲ್ಲ. "ನಾನು" ಪ್ರಕಾಶವಸ್ತು; ಆನಂದಮಯ; ಶರೀರ–ಇಂದ್ರಿಯಗಳು–ಮನಸ್ಸು–ಪ್ರಾಣ ಮತ್ತು ಜ್ಞಾನಕ್ಕಿಂತಲೂ ಬೇರೆಯಾದವನು ನಾನು" ಎನ್ನುವ ಜ್ಞಾನ ಮಾತ್ರವಿರುವುದು ಆಚಾರ್ಯರು ಇದನ್ನು "ಪತಿಯಿಂದ ದೂರಳಾದ ಪತ್ನಿಯ ಬಾಳು" ಎಂದಿರುವರು. ಇದು ನಿತ್ಯವಾದುದೆಂದು ತೆಂಗಲೇ ಸಂಪ್ರದಾಯದಲ್ಲಿ ಹೇಳಲಾಗಿದೆ. ಅಂದರೆ ಅವರು ಹೇಳುವಂತೆ ಮುಕ್ತಿಯು ಎರಡುವಿಧ. (೧) ಕೈವಲ್ಯ–ಪತಿವಿಯುಕ್ತ ಪತ್ನೀ ನ್ಯಾಯದಿಂದ. (೨) ಮೋಕ್ಷ ಅಂದರೆ ಪರಮಾತ್ಮಾನುಭವ ವೈಕುಂಠದಲ್ಲಿ. ವಡಗಲೆ ಸಂಪ್ರದಾಯದಲ್ಲಿ, ಕೈವಲ್ಯವು ಪರಮಾತ್ಮ ಸಂಕಲ್ಪದಿಂದ ಕೆಲವು ಕಾಲವಿದ್ದು, ಆದು ಕಳಚಿ ಮೋಕ್ಷ ಅಂದರೆ ಪರಮಾತ್ಮಾನುಭವವು ಸಿಗುವುದು – ಎಂದು ಹೇಳ

ಲಾಗಿದೆ. ತೆಂಗಲೆ ಸಂಪ್ರದಾಯದಲ್ಲೂ ಕೈವಲ್ಯಕ್ಕೆ ಯಾರೂ ಅಪೇಕ್ಷೆಪಡಕೂಡದು ಎನ್ನಲಾಗಿದೆ. ಇದರ ವಿವರ 88ನೇ ಪುಟದಲ್ಲೂ ಇದೆ.

ಪುಟ ೪೦ — ಟಿಪ್ಪಣಿ ೦೩

ಕೈಮುತ್ಯನ್ಯಾಯ— "ಕಿಮುತ" ಎನ್ನುವುದು ಸಂಸ್ಕೃತಪದ; ದೊಡ್ಡವರ ಆಶ್ರಯದಲ್ಲಿ ಚಿಕ್ಕದು ಸಿದ್ಧವಾಗುವನ್ಯಾಯ; "ಆ ದೊಡ್ಡಮನುಷ್ಯರೇ ಬಂದರಂತೆ ನಾವೇನು ಮಹಾ" ಎನ್ನುವಂತೆ ತಿಳಿಯುವುದು ಮತ್ತು ಹೇಳುವುದು ಈ ನ್ಯಾಯದ ಬಲದಿಂದ. ಹಾಗೆ ಇಲ್ಲಿ ಈಶ್ವರ ಭಕ್ತನಿಗೆ ವರುಣದೇವ ಹೆದರಿದ; ಈಶ್ವರನಿಗೂ ಈಶ್ವರನಾದ ಕೃಷ್ಣನಿಗೆ ಅವನು ಹೆದರಿ, ಅವನ ಭಕ್ತೆ ಗೋದೆಗೆ ಹೆದರುವನೆನ್ನುವುದು ಸ್ಪತಃಸಿದ್ಧ.

ಪುಟ ೪೨ — ಟಿಪ್ಪಣಿ ೦೪

ಶ್ರೀಮನ್ನಾರಾಯಣನನ್ನು ಮಾತ್ರ ನಂಬಿ, ಅವನಿಗಾಗಿ ಮಾತ್ರವಿದ್ದು, ಮಿಕ್ಕ ಯಾವ ದೇವತೆಗೂ ಮತ್ತು ರುದ್ರನಿಗೂ ಪೂಜೆ ಸಲ್ಲಿಸದಿರುವುದು ಪಾರಮೈಕಾಂತ್ಯ. ಭಗವಂತನಲ್ಲಿ ಪರಮ ಭಕ್ತರು ಪರಮೈಕಾಂತಿಗಳು. ಪರಮಾತ್ಮನ ಆಜ್ಞೆ ಎನ್ನುವಭಾವದಲ್ಲಿ ಅವನ ತೃಪ್ತಿಗಾಗಿಯೇ ಯಜ್ಞ ಯಾಗಾದಿಗಳನ್ನು ಮಾಡುವರು. ಆಯಾ ದೇವತೆಗಳ ತೃಪ್ತಿಗಾಗಲ್ಲ. ಕರ್ತವ್ಯ ದೃಷ್ಟಿಯಿಂದ ಶಾಸ್ತ್ರೀಯ ಕರ್ಮ ಮಾಡುವರು. ರುದ್ರಭಕ್ತಿಗೆ ಬಹುದೂರವಾದವರು. ಅದರಿಂದ ಇವರಿಗೆ ರುದ್ರನಲ್ಲಿ ದ್ವೇಷವಿದೆ ಅಂದಲ್ಲ. ಶ್ರೀಮನ್ನಾರಾಯಣನ ಭಕ್ತರಿಗೆ ದ್ವೇಷವೆನ್ನುವುದೇ ಇಲ್ಲ. ಒಬ್ಬ ಸತಿಯ ಮಗ್ಗಲುಮನೆ ಮನುಷ್ಯ ಪರಮ ಯೋಗ್ಯನೇನೋ ಅಹುದು. ಆದರೆ ಅವನ ಪೂಜೆ ಸಲ್ಲಾಪಾದಿಗಳಲ್ಲಿ ಅವಳು ತೊಡಗಳು. ಹಾಗೆ ವಿಷ್ಣುಭಕ್ತ. ಪ್ರಪನ್ನನಾದಮೇಲೆ ನಾವು ಪರಮಾತ್ಮನನ್ನು ಮದುವೆಯಾದಂತೆ. ಹಾಗೆ ಸತೀ ಧರ್ಮ ಪರಿಪಾಲನೆಯೇ ಪಾರಮೈಕಾಂತ್ಯ.

ಪುಟ ೪೪— ಟಿಪ್ಪಣಿ ೦೫

ಕಲ್ಪಾದಿಪುರುಷ—ಭಗವಂತ ಶ್ರೀಮನ್ನಾರಾಯಣ; ಅವನ ಅನಿರುದ್ಧ ರೂಪದಿಂದ ಹೊರಟ ನಾಭಿಕಮಲದಿಂದ ಚತುರ್ಮುಖ ಬ್ರಹ್ಮ ಹುಟ್ಟಿದ; ಅವನಿಂದ ರುದ್ರ ಹುಟ್ಟಿದ; ಚತುರ್ಮುಖ ಬ್ರಹ್ಮನಿಗೂ ನಮ್ಮಂತೆಯೇ ನೂರುವರ್ಷ ಆಯಸ್ಸು. ಆದರೆ ಆ ವರ್ಷ ನಮ್ಮ ವರ್ಷದ ಅಳತೆಯಂತಲ್ಲ.

ಕಲಿಯುಗ	...	...	4,32,000	ನಮ್ಮ	ವರ್ಷಗಳು
ದ್ವಾಪರಯುಗ	...	...	8,64,000	,,	,,
ತ್ರೇತಾಯುಗ	...	...	21,96,008	,,	,,
ಕೃತಯುಗ	...	...	17,28,000	,,	,,
			43,20,000		

ನಮ್ಮ 43,20,000 ವರ್ಷಗಳು ಒಂದು ಚತರ್ಯುಗವಾನ; ಈ ಚತುರ್ಯುಗ ಮಾನದಂತೆ 1000 ಚತುರ್ಯುಗವಾದರೆ ಚತುರ್ಮುಖಬ್ರಹ್ಮನಿಗೆ ಹಗಲು, ಮತ್ತೊಂದು ಚತುರ್ಯುಗ 1000ವಾದರೆ ರಾತ್ರಿ. ಅಂದರೆ 2000 ಚತುರ್ಯುಗ ಮಾನ ಒಂದುದಿನ. ಹಾಗೆ 365 ದಿನಗಳಾದರೆ ಅವನಿಗೆ ಒಂದು ವರ್ಷ. ಹಾಗೆ ಅವನಿಗೆ 100 ವರ್ಷ ಆಯಸ್ಸು. ಚತುರ್ಮುಖಬ್ರಹ್ಮನ ರಾತ್ರಿಕಾಲದಲ್ಲಿ ಪ್ರಳಯವಾಗುತ್ತದೆ. ಇದು ಅವಾಂತರ ಪ್ರಳಯ. ಆಗ ಆಲದ ಎಲೆಯಮೇಲೆ ಮಗುವಾಗಿ ಶ್ರೀಮನ್ನಾರಾಯಣನು ಕ್ಷೀರಸಾಗರದಲ್ಲಿದ್ದು ಪ್ರಪಂಚವೆಲ್ಲವನ್ನು ತನ್ನ ಹೊಟ್ಟೆಯಲ್ಲಿ ಕಾಪಾಡುತ್ತಿರುವನು. ಚತುರ್ಮುಖಬ್ರಹ್ಮನಿಗೆ ಹಗಲಾದಾಗ, ಅವನಲ್ಲಿ ಪ್ರದ್ಯುಮ್ನನಾಗಿದ್ದು ಪ್ರಪಂಚಸೃಷ್ಟಿ ಮಾಡಿಸುವನು. ಹೀಗೆ ಅನೇಕ ಅವಾಂತರ ಪ್ರಳಯಗಳೂ ಸೃಷ್ಟಿಯೂ ಆಗುವುವು. ಬ್ರಹ್ಮನ ಆಯಸ್ಸು ತೀರಿತೆಂದರೆ ಆಗ ಮಹಾಪ್ರಳಯವಾಗುವುದು. ಬ್ರಹ್ಮನ 100 ವರ್ಷ ಆಯಸ್ಸಿಗೆ ಒಂದು ಕಲ್ಪ ವೆಂದು ಹೆಸರು. ಆದ್ದರಿಂದ ಶ್ರೀಮನ್ನಾರಾಯಣನೇ ಕಲ್ಪಾದಿಪುರುಷ.

ಪುಟ ೪೫ — ಟಪ್ಪಣಿ ೧೬

ನಿರ್ಹೇತುಕ ಕರುಣೆ—ಪರಮಾತ್ಮನು ಜ್ಞಾನರೂಪನಲ್ಲದೆ ಪ್ರೇಮಸ್ವರ ಪನೂ ಆಗಿರುವನು. 26ನೇ ಪದ್ಯವನ್ನು ನೋಡಿ. ಆದ್ದರಿಂದ ಇವನ ಸ್ವರೂಪ ನಿರೂಪಕಗಳಾದ ಆರು ಗುಣಗಳು ದಯಾರೂಪದಲ್ಲಿ ಯಾವಾಗಲೂ ಇರುವವು. ಆದರೆ ಅದು ಪ್ರಕಟವಾಗುವುದು ಪ್ರಪಂಚದಲ್ಲಿ, ಅದನ್ನು ಅವನು ಹುಟ್ಟಿಸಿದ ಮೇಲೆ. ಇದಕ್ಕೆ ನಿರ್ಹೇತುಕ ಕರುಣೆ ಎಂದು ಹೆಸರು. ಅಂದರೆ ತಾನಾಗಿಯೇ ಸ್ವಾಭಾವಿಕವಾಗಿ ಹರಿಯುತ್ತಿರುವ ಪ್ರವಾಹ; ತಂದೆತಾಯಂದಿರು ಮಕ್ಕಳಮೇಲಿಟ್ಟಿರುವ ವಾತ್ಸಲ್ಯದಂತೆ ಪರಮಾತ್ಮನ ದಯೆ. ಆದರೂ ಇದು ಸಾಮಾನ್ಯ ಕರುಣೆ, ತಂದೆ ಯಾದವನು ತನ್ನ ಎಲ್ಲಾ ಮಕ್ಕಳ ಮೇಲಿಟ್ಟಿರುವ ಅಭಿಮಾನದಂತೆ. ಆದರೆ ಯಾವ ಮಗನು ತಂದೆಯನ್ನೇ ನಂಬಿ ಅವನನ್ನೇ ಆವಲಂಬಿಸಿ ಅವನಿಗಾಗಿಯೇ ಇರುವನೋ ಅವನ ಮೇಲೆ ತಂದೆಗೆ ವಿಶೇಷ ಅಭಿಮಾನ ಹುಟ್ಟುತ್ತದೆ. ಇದರಂತೆ ಯಾವನು ಪರಮಾತ್ಮನಲ್ಲೇ ಮಹಾವಿಶ್ವಾಸವಿಟ್ಟು ಅವನಲ್ಲಿ ಶರಣು ಹೋಗಿ ಅವನಿಗಾಗಿಯೇ

ಇರುವನೋ, ಅವನ ವಿಷಯದಲ್ಲಿ ಪರಮಾತ್ಮನು ವಿಶೇಷ ಕರುಣೆ ತೋರುವನು. ಇದಕ್ಕೆ **ಸಹೇತುಕ ಕರುಣೆ** ಎಂದು ಹೆಸರು. ಆದಕ್ಕಾಗಿಯೇ ಪೂರ್ವಾಚಾರ್ಯರು ಈ ದಯೆಯನ್ನು ಸ್ತೋತ್ರಮಾಡುವಾಗ

ಮುಕುಂದಕರುಣಾಂ ವಂದೇ ಮುಗ್ಧೇಷ್ವಧಿಕವತ್ಸಲಾಂ।
ಸ್ವರೂಪಸಂಸ್ತವಾ ಯಸ್ಯಾ ನಿರ್ಹೇತುಕಸಹೇತುಕಾ ॥

ಎಂದಿರುವರು.

ಪುಟ ೭೩ — ಟಪ್ಪಣಿ ೧೭

ನಿಷ್ಪನ್ನಸಮಾಧಿ—ನಮ್ಮ ಜ್ಞಾನವು ಎರಡು ವಿಧದಲ್ಲಿ ಬೆಳೆಯುವುದು. (1) ಪ್ರಮಾಣದಿಂದ (2) ಯೋಗಾಭ್ಯಾಸದಿಂದ. ಲೌಕಿಕ ಜ್ಞಾನಕ್ಕೆ ಪ್ರತ್ಯಕ್ಷ ಒಂದೇ ಪ್ರಮಾಣ. ಇದರ ಆಧಾರದ ಮೇಲೆ ಊಹೆ ಮಾಡುವಶಕ್ತಿ ಬಂದು ಜ್ಞಾನ ಬೆಳೆಯುತ್ತದೆ. ನಮ್ಮಲ್ಲಿ ವಿಶ್ವಾಸ ಹುಟ್ಟುತ್ತದೆ. ನಮ್ಮ ಹುಟ್ಟಿನ ಹಿಂದೆ, ಸಾವಿನ ಮುಂದೆ ಏನಿರುವುದೆಂದು ಯೋಚನೆ ಬರುತ್ತದೆ. ಇದನ್ನು ಊಹೆಗಿಂತಲೂ ಕಣ್ಣಿನಿಂದ ನೋಡಬೇಕೆನಿಸುತ್ತದೆ. ಇದು ಹೊರಗಣ್ಣಲ್ಲ—ಒಳಗಣ್ಣು. ಅದು ತೆರೆಯಬೇಕಾದರೆ ನಾವು ಯೋಗಾಭ್ಯಾಸ ಮಾಡಬೇಕು. ಇದು ಎಂಟು ಗಿಣ್ಣುಗಳಲ್ಲಿದೆ. (1) **ಯಮ**—ಸಮಾಜದಲ್ಲಿ ಒಳ್ಳೆಯವರಾಗಲು ಬೇಕಾದ ಗುಣಗಳನ್ನು ಅಭ್ಯಾಸ ಮಾಡುವುದು—ಇವು ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹವೆನ್ನುವುಗಳಲ್ಲಿ ಅಡಗಿವೆ. (2) **ನಿಯಮ**—ಇದು ನಮ್ಮ ಸ್ವಂತ ಜೀವನವನ್ನು ವೇದಾಂತಕ್ಕೆ ತಿರುಗಿಸುವ ಗುಣ—ವಿಶೇಷಗುಣ; ಇದು ಶೌಚ, ಸಂತೋಷ, ತಪಃ, ಸ್ವಾಧ್ಯಾಯ, ಈಶ್ವರ ಪ್ರಣಿಧಾನವೆನ್ನುವುಗಳಲ್ಲಿ ಅಡಗಿದೆ. (3) **ಆಸನ**—ಯೋಗಾಸನಗಳ ಅಭ್ಯಾಸ (3) **ಪ್ರಾಣಾಯಾಮ**—ನಮ್ಮ ಉಚ್ಛ್ವಾಸ ನಿಶ್ವಾಸವನ್ನು ನಮ್ಮ ವಶದಲ್ಲಿಟ್ಟುಕೊಳ್ಳಲು ಬೇಕಾದ ಸಾಧನ. (5) **ಪ್ರತ್ಯಾಹಾರ**—ಇಂದ್ರಿಯ ಜಯ; ಈ ಐದೂ ಸೇರಿ ಯೋಗಾಭ್ಯಾಸಕ್ಕೆ ಹೊರಗಿನ ಅಂಗಗಳು. ಇವಾದ ಮೇಲೆ ನಾವು ನಮ್ಮ ಜ್ಞಾನವನ್ನು ಒಳಗಡೆಗೆ ತಿರುಗಿಸಲು ಸಮರ್ಥರಾಗುವೆವು. ಜ್ಞಾನವು ನಮ್ಮೊಳಗೆ ಹೋಗುವಂತಾದಮೇಲೆ ನಾವು (6) **ಧಾರಣ**ಮಾಡಬೇಕು—ಅಂದರೆ ಒಂದೇ ವಿಷಯವನ್ನು ಮನಸ್ಸಿನಲ್ಲಿ ಇಡುವುದಕ್ಕೆ ಅಭ್ಯಾಸ ಮಾಡಬೇಕು (7) ಅದನ್ನೇ ಏಕಾಗ್ರಮನಸ್ಸಿನಿಂದ **ಧ್ಯಾನ**ಮಾಡಬೇಕು; ಕೊನೆಗೆ (8) ಅದರೊಡನೆ ಒಂದಾಗಬೇಕು. ಹೀಗಾಗುವುದಕ್ಕೆ ಸಾಮಾನ್ಯವಾಗಿ **ಸಮಾಧಿ** ಎಂದು ಹೆಸರು. ಆದರೆ ಇದು ಲೌಕಿಕ ವಿಷಯದಲ್ಲಾದರೆ ಅದಕ್ಕೆ **ಸಮಾಪತ್ತಿ** ಎಂದು ಹೆಸರು. ಪರಮಾತ್ಮ ವಿಷಯದಲ್ಲಾದರೆ ಅದು **ಸಮಾಧಿ**. ಮನಸ್ಸೇ ಜ್ಞಾನವೆಂದರಿತಿರುವವರಿಗೆ **ಈ ಸಮಾಧಿ** ಶೂನ್ಯದಂತೆಯೇ; ಬೆಳಕಿನಂತೆ ತನ್ನನ್ನು ತಾನರಿಯದೇ ಇರುವಂತೆಮಾಡುವ ಅಭ್ಯಾಸವಾಗುವುದು. ಮನಸ್ಸು

ಬೇರೆ, ಜ್ಞಾನ ಬೇರೆ ಎನ್ನುವವರಿಗೆ ಸಮಾಧಿಯಲ್ಲಿ ಜ್ಞಾನವುಳಿದು, ನಾವು ನಮ್ಮ ಕಣ್ಣಿನಿಂದ ನೋಡುವಂತೆ ಪರಮಾತ್ಮನನ್ನು ನೋಡುವ ಶಕ್ತಿಯನ್ನು ಹೊಂದುತ್ತೇವೆ. ಇದಕ್ಕೆ **ನಿಷ್ಪನ್ನಸಮಾಧಿ** ಎಂದು ಹೆಸರು.

ಪುಟ ೭೬ — ಟಪ್ಪಣಿ ೧೪

ಕೃತಕೃತ್ಯಭಾವ—ನಾವು ಪ್ರಪಂಚದಲ್ಲಿ ಕೆಲಸ ಮಾಡುತ್ತಲೇ ಇರುವೆವು; ಎಷ್ಟು ಮಾಡಿದರೂ ಇನ್ನೂ ಮಾಡುವುದಿದೆ ಎಂದು ತಿಳಿದಿರುವೆವು. ಹಾಗೆಯೇ ನಾವು ಸತ್ತಮೇಲೆ ಮತ್ತೆ ನಮಗೆ ಜನ್ಮವು ಬರದಂತೆ ಮಾಡಿಕೊಳ್ಳಲು ಏನುಮಾಡ ಬೇಕೆನ್ನುವುದರಲ್ಲಿ ನಿಶ್ಚಯವನ್ನೇ ಹೊಂದುವುದಿಲ್ಲ. "ನಾವು ಈ ಜನ್ಮದಲ್ಲಿ ಒಳ್ಳೆಯವರಾಗಿದ್ದರೆ, ದಾನಧರ್ಮಮಾಡಿದ್ದರೆ ಮುಂದಿನ ಜನ್ಮ ಚೆನ್ನಾಗಿಬರುವುದು" ಎನ್ನುವ ಭಾವವನ್ನೇ ತಾಳಿರುವೆವು. ಇದಕ್ಕೆ ಅಜ್ಞಾನವೇ ಕಾರಣ; ಯಾವುದನ್ನು ಮಾಡಿದರೆ ನಮಗೆ ಈಜನ್ಮವಾದಮೇಲೆ ಮತ್ತೆ ಹುಟ್ಟು ಸಾವಿಲ್ಲದಾಗುವುದೋ ಅದನ್ನು ಅರಿಯದೇ ಹೀಗಿರುವೆವು. ಪ್ರಪತ್ತಿಯ ಸ್ವರೂಪ ತಿಳಿಯದೆ, ಅದರಿಂದ ಮೋಕ್ಷವು ಅಷ್ಟು ಸುಲಭವಾಗಿ ಸಿಕ್ಕೀತೇ ಎನ್ನುವ ನಂಬಿಕೆಯೂ ಇರುವುದಿಲ್ಲ. ವೇದಾಂತದ ತಿರುಳನ್ನು ಚೆನ್ನಾಗಿ ಅರಿತು ಪರಮಾತ್ಮನನ್ನೇ ನಂಬಿ ಅವನಲ್ಲಿ ಶರಣು ಹೋದರೆ ಆಗ ಮನಸ್ಸಿಗೆ ಒಂದು ನೆಮ್ಮದಿ ಬರುವುದು. "ಇನ್ನು ಮೋಕ್ಷಕ್ಕಾಗಿ ಮಾಡಬೇಕಾದ್ದು ಯಾವುದೂ ಇಲ್ಲ" ಎನ್ನುವ ಭಾವ ಬರುತ್ತದೆ. ಇದಕ್ಕೇ **ಕೃತಕೃತ್ಯಭಾವ** ಎಂದು ಹೆಸರು. 10ನೇ ಪದ್ಯದ ಸ್ವಾಪದೇಶ ನೋಡಿ. ರಹಸ್ಯತ್ರಯ ಸಾರ 13ನೇ ಅಧಿಕಾರ ಕೃತಕೃತ್ಯಾಧಿಕಾರವನ್ನು ನೋಡಿ.

ಪುಟ ೯೧ — ಟಪ್ಪಣಿ ೧೯

ಸ್ವರೂಪ ಉಪಾಯ ಪುರುಷಾರ್ಥಾಭಿಜ್ಞಾನ—ಹಿಂದಿನ ಟಪ್ಪಣಿಯಲ್ಲಿ ಹೇಳಿದಂತೆ ಕೃತಕೃತ್ಯಭಾವವನ್ನು ಹೊಂದಿದವನು ಪರಮಾತ್ಮನನ್ನೇ ಯಾವಾಗಲೂ ನೆನೆಯುತ್ತಿರುವನು. ಪರಮಾತ್ಮನು ಅಂತಹವನಲ್ಲಿ ಬಹು ತೃಪ್ತನಾಗಿ ಈ ಜನ್ಮದಲ್ಲೇ ಅವನನ್ನು ಮುಕ್ತಿಗೆ ಯೋಗ್ಯನನ್ನಾಗಿ ಮಾಡುವನೆನ್ನುವುದಕ್ಕೆ ಅನೇಕ ಪ್ರಮಾಣಗಳಿವೆ. ಅವೆಲ್ಲವನ್ನೂ ಸಂಗ್ರಹಿಸಿ ನಿಗಮಾಂತದೇಶಿಕರು ಸ್ವನಿಷ್ಠಾಭಿಜ್ಞಾನವೆನ್ನುವ ಅಧಿಕಾರದಲ್ಲಿ (ರಹಸ್ಯತ್ರಯಸಾರ) ಕೊಟ್ಟಿರುವರು. ಆ ಪರಿಷ್ಕಾರವು ಮೂರು ಕ್ರಮದಲ್ಲಿ ಆಗುವುದು.

I. **ಸ್ವರೂಪಾಭಿಜ್ಞಾನ:**

(1) ಯಾರಲ್ಲಿಯೂ ದ್ವೇಷವಿಲ್ಲದೇ ಪ್ರಪಂಚವನ್ನೇ ಪ್ರೀತಿಸುವಂತಾಗುವುದು;

(2) ಹೀಗೆ ಮಾಡಿದವರು ಆಳ್ವಾರ್ಗಳು ಮತ್ತು ಅವರು ತೋರಿಕೊಟ್ಟ ದಾರಿ, ಎನ್ನುವ ಉಪಕಾರ ಸ್ಮರಣೆ;

(3) ಮನಸ್ಸಿನಲ್ಲಿ ಯಾವ ವಿಧವಾದ ವಿಕಾರವನ್ನೂ ಹೊಂದದಿರುವುದು;

(4) ಯಾವಾಗಲೂ ಸಂತೋಷದಿಂದಿರುವುದು;

(5) ಸರ್ವಭೂತಾನುಕೂಲಕ್ಕೆ ಯೋಗ್ಯವಾದ ಜ್ಞಾನ, ಅದಕ್ಕೆ ಅನುಗುಣವಾದ ದೈನ್ಯಭಾವ;

(6) ಪರಮಾತ್ಮನಲ್ಲಿ ಅನನ್ಯಾರ್ಹಶೇಷತ್ವ ಮತ್ತು ತತ್ಪಾರತಂತ್ರ್ಯ;

(7) ಪರಾಧೀನ ಹಿತಚಿಂತನೆ;

II. **ಉಪಾಯಾಭಿಜ್ಞಾನ:**

(8) ಪರಮಾತ್ಮನಲ್ಲದೆ ತನಗೆ ರಕ್ಷಕರು ಯಾರೂ ಇಲ್ಲವೆನ್ನುವ ನಂಬಿಕೆ;

(9) ವೇದಾಂತದಲ್ಲಿ ಆಸಕ್ತಿ ಹೊಂದಿರುವುದು;

(10) ರಕ್ಷಕನಾದ ಪರಮಾತ್ಮನೊಬ್ಬನನ್ನೇ ಪೂರ್ಣವಾಗಿ ಅವಲಂಬಿಸಿರುವುದು;

(11) ಶರಣಾಗತಿ ಮಾಡಿದಮೇಲೆ ಮೋಕ್ಷಕ್ಕಾಗಿ ಮತ್ತಾವುದನ್ನೂ ಮಾಡದಿರುವುದು;

(12) ನಮಗೆ ಬರುವ ಇಷ್ಟ ಮತ್ತು ಅನಿಷ್ಟಗಳೆಲ್ಲ ಅವನ ಸಂಕಲ್ಪವೇ ಎಂದು ದೃಢಭಾವವುಳ್ಳವನಾಗಿರುವುದು;

(13) ಆನರೂ ಶಾಸ್ತ್ರವಿಹಿತ ಕರ್ಮಗಳು ಅವನ ಆಜ್ಞೆಯೆಂದು ಮಾಡುತ್ತಿರುವುದು;

III. **ಪುರುಷಾರ್ಥಾಭಿಜ್ಞಾನ:**

(14) ಮರಣಕ್ಕೆ ಅಂಜದಿರುವುದು;

(15) ಎಲ್ಲವೂ ಗರಮಾತ್ಮನ ಇಚ್ಛೆಯೆಂದು ನಿಶ್ಚಿಂತನಾಗಿರುವುದು;

(16) ಬಂದಿದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ ಎಂದು ಸಂತೋಷದಿಂದ ಕಾಲಕಳೆಯುವುದು;

(17) ಮೋಕ್ಷಕ್ಕೆ ಹೋಗುವೆನೆಂದು ಯಾವಾಗಲೂ ನೆನೆಯುತ್ತಾ "ಪರಮಾತ್ಮನು ಯಾವಾಗ ಕರೆದೊಯ್ವನೋ" ಎನ್ನುವುದರಲ್ಲಿ ಆಸೆಯಿಂದಿರುವುದು.

ಪುಟ ೯೨ — ಟಿಪ್ಪಣಿ ೨೦

ಜಾಯಮಾನ ಕಟಾಕ್ಷ

ಜಾಯಮಾನಂ ಹಿ ಪುರುಷಂ ಯಂ ಪಶ್ಯೇತ್ ಮಧುಸೂಥನಃ |
ಸಾತ್ವಿಕಃ ಸತು ವಿಜ್ಞೇಯ ಸ್ಸವೈ ಮೋಕ್ಷಾರ್ಥಚಿಂತಕಃ ||

ಭಾ.—ಶಾಂ. 358–73,77

ಟಿಪ್ಪಣಿ 16 ನೋಡಿ. ಅಲ್ಲಿ ಕೊಟ್ಟಿರುವ ಶ್ಲೋಕದ ಅರ್ಥವಿದು. "ಮುಕುಂದನ (ಮುಕುಂ ಮೋಕ್ಷಂ ದದಾತಿ) ಕರುಣೆಗೆ ಶರಣು ಹೋಗುವೆನು; ಅವನಲ್ಲಿ ಮೋಹಗೊಂಡವರಲ್ಲಿ (ಮುಗ್ಧೇಷು) ಆ ಕರುಣೆ ಜಾಸ್ತಿಯಾಗಿರುವುದು; ಅದರ ಸ್ವರೂಪವೇ ನಿರ್ಹೇತುಕ ಅಂದರೆ ಸ್ವಾಭಾವಿಕ ಪ್ರೀತಿ; ಅದರ ಕೀರ್ತಿ ಸಹೇತುಕ ಪ್ರೀತಿ". ತಾಯಿಯ ಪ್ರೀತಿಯಂತೆ ನಿರ್ಹೇತುಕ ಕರುಣೆ. ಇದರಿಂದ ಪರಮಾತ್ಮನು ನಮಗೆ ಶರೀರಕೊಟ್ಟು ಬುದ್ಧಿಕಲಿಯಲು ಅವಕಾಶ ಕಲ್ಪಿಸಿರುವನು. ತಂದೆಯ ಪ್ರೀತಿಯಂತೆ ಸಹೇತುಕ ಕರುಣೆ. ನಾವು ಅವನಲ್ಲಿ ಪ್ರೀತಿ ಮತ್ತು ಭಕ್ತಿ ಯಿಟ್ಟರೆ, ಆಗ ಅವನು ನಮ್ಮ ಮೇಲೆ ವಿಶೇಷ ದೃಷ್ಟಿಯಿಟ್ಟು ನಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುವನು. ಒಂದು ಜನ್ಮದಲ್ಲಿ ನಾವು ಹೀಗೆ ಅವನಲ್ಲಿ ಭಕ್ತಿಯಿಟ್ಟರೆ, ನಮಗೆ ಅನುಕೂಲವಾದ ಮುಂದಿನಜನ್ಮವೆಂತಹುದಾಗಿರಬೇಕೆಂದೂ, ಆ ಭಕ್ತಿಯು ಬೆಳೆಯುವಂತೆ ಸಾತ್ವಿಕವಾಗಿರುವಂತೆಯೂ ಈಗಲೇ ಸಂಕಲ್ಪಿಸುವನು. ಇದೇ ಜಾಯಮಾನ ಅಂದರೆ ಮುಂದೆ ಬರುವ ಕಟಾಕ್ಷ, ದೃಷ್ಟಿ. ಇದಿದ್ದರೇನೇ ಪರಮಾತ್ಮನಲ್ಲಿ ಪ್ರಪತ್ತಿಮಾಡುವ ಮನೋಧರ್ಮವು ಬರುವುದು ಮುಂದಿನ ಜನ್ಮದಲ್ಲಿ.

ಪುಟ ೧೦೧ — ಟಿಪ್ಪಣಿ ೨೧

ಯೋಗದೆಶೆ—ವ್ಯುತ್ಥಾನದೆಶೆ— 17ನೇ ಟಿಪ್ಪಣಿ ನೋಡಿ—ಸಮಾಧಿಯಲ್ಲಿ ಇದ್ದರೆ ಅದಕ್ಕೆ ಯೋಗದೆಶೆಯೆಂದೂ, ಅದು ಕಳಚಿಹೋಗಿ ವ್ಯವಹಾರದಲ್ಲಿ ತೊಡಗುವಂತಾದರೆ ಅದಕ್ಕೆ ವ್ಯುತ್ಥಾನದೆಶೆಯೆಂದೂ ಹೆಸರು.

ಪುಟ ೧೯೪ — ಟಿಪ್ಪಣಿ ೨೨

ಮಧುರಭಾವ—ಭಕ್ತಿಯ ಕೊನೆಯ ಆಕಾರ; ಶಾಶ್ವತವಾಗಿ ಉಳಿಯುವ ಪ್ರೇಮಭಾವ; ಉತ್ತರದೇಶದ ಭಕ್ತಿ ಪಂಥರಲ್ಲಿ ಅದರಲ್ಲೂ ಚೈತನ್ಯ ಸಂಪ್ರದಾಯದಲ್ಲಿ ಭಕ್ತಿಯು ಐದುಪರ್ವದಲ್ಲಿ ಬೆಳೆಯುವುದೆಂದು ಹೇಳಲಾಗಿದೆ. ರಾಗಾತ್ಮಕ ಭಕ್ತಿಯಿಂದ ಪ್ರಾರಂಭವಾಗಿ ತ್ಯಾಗಾತ್ಮಕ ಭಕ್ತಿಯಲ್ಲಿ ನಿಲ್ಲುವ ಜ್ಞಾನಪಾಕವು (1) ಶಾಂತ (2) ದಾಸ್ಯ (3) ಸಖ್ಯ (4) ವಾತ್ಸಲ್ಯ ಮತ್ತು (5) ಮಧುರಭಾವಗಳನ್ನು

ತಾಳುತ್ತದೆ. ಇದರ ವಿಸ್ತಾರವನ್ನು ಹೇಳಲು ಒಂದು ಗ್ರಂಥವೇಬೇಕು. ನಮ್ಮ ಜೀವನವೇ ಜ್ಞಾನಮಯ; ಆ ಜ್ಞಾನಕ್ಕೆ ಸ್ನೇಹವೆನ್ನುವ ಅಂಟು ಯಾವಾಗಲೂ ಸೇರಿರುವುದು. (20 ನೇ ಪದ್ಯದ ವ್ಯಾಖ್ಯಾನನೋಡಿ—ಈ ಜ್ಞಾನವು ಮನಸ್ಸಿನಲ್ಲಿ ಬೆಳೆಯುವುದು. ಜ್ಞಾನವು ಬೆಳೆದಂತೆಲ್ಲಾ ಈ ಸ್ನೇಹವು ಶುದ್ಧವಾಗುವುದು. ವೇದಾಂತ ದೃಷ್ಟಿಯಲ್ಲಿ ನೋಡಿದರೆ ಇದು ಮೂರು ಕ್ರಮದಲ್ಲಿ ಬೆಳೆಯುವುದು (1) ನಾನೇ ಆತ್ಮ ಎನ್ನುವ ಶರೀರಾತ್ಮಭಾವವಿದ್ದು ವೇದಾಂತದಲ್ಲಿ ಆಸೆ ಇರುವವರ ಪ್ರೇಮ ಆಸೆ ಕೂಡಿರುವ ರಾಗಾತ್ಮಕ ಪ್ರೇಮ. ಪ್ರಪಂಚದಲ್ಲಿ ಈ ಪ್ರೇಮವನ್ನೇ ಭಕ್ತಿಯೆಂದು ಎಲ್ಲರೂ ಅರಿತಿರುವರು; ಗುಡಿಗೆ ಹೋಗಿ ಹಣ್ಣುಕಾಯಿ ಮಾಡಿಸುವುದು; ಅರ್ಚನೆಮಾಡಿಸುವುದು; ಅಲಂಕಾರ ಉತ್ಸವಾದಿಗಳಿಗೆ ಧಾರಾಳವಾಗಿ ಹಣ ಖರ್ಚುಮಾಡುವುದು—ಇವೆಲ್ಲರ ಹಿಂದೆ ಇರುವುದು ರಾಗಾತ್ಮಕ ಪ್ರೇಮ (2) ನಾನು ಶರೀರಕ್ಕೆ ಬೇರೆಯವನಾದ ಆತ್ಮ ಎನ್ನುವ ಜ್ಞಾನವು ಬಲಿತಿರುವವರ ಪ್ರೇಮ ಮೊದಲನೆಯ ಭೇದರತಿಗಿಂತಲೂ ಉತ್ತಮವಾದರೂ, ತನ್ನಲ್ಲಿ ಅಭಿಮಾನ ವಿದ್ದು ಪರಮಾತ್ಮನಲ್ಲಿ ಭಕ್ತಿಯು ತ್ಯಾಗಾತ್ಮಕವಾದರೂ ಅದು ಅಳಿಯುವಂತಹದು; (3) ನಾನು ಆತ್ಮ; ಶರೀರಕ್ಕಿಂತಲೂ ಬೇರೆ; ಪರಮಾತ್ಮನಿಗಿಂತಲೂ ಬೇರೆ; ಅವನು ನನ್ನನ್ನು ಪೂರ್ಣವಾಗಿ ವ್ಯಾಪಿಸಿಕೊಂಡಿರುವುದರಿಂದ ಬೇರೆಯೂಅಲ್ಲ; ಅವನಿಲ್ಲದೆ ನಾನಿಲ್ಲ; ನಾನಿಲ್ಲದೆ ಅವನಿರಲಾರ—ಎನ್ನುವ ಭಾವಪೂರ್ತಿಯೇ **ಮಧುರಭಾವ** ಇದು ಯೋಗಾನುಭವದ ಕೊನೆಯ ಪರ್ವದಲ್ಲಿ ಬೆಳೆದುನಿಲ್ಲುವ ಭಾವ. ಒಟ್ಟನಲ್ಲಿ ಶಾಶ್ವತವಾದ ಜ್ಞಾನದೊಡನೆ ಬರುವ ಅಂಟು ಸ್ನೇಹ, ಗೌರವ, ಪೂಜ್ಯತೆ, ಅಭಿಮಾನ ವಾಗಿ ಶೃಂಗಾರದಲ್ಲಿ ತೊಯ್ದು ಕೊನೆಯಲ್ಲಿ ಮಧುರಭಾವದಲ್ಲಿ ನಿಲ್ಲುವುದು.

ಪುಟ ೧೯೫ — ಟಿಪ್ಪಣಿ ೨೩

ಸಂಭೋಗ ವಿಪ್ರಲಂಬ ಶೃಂಗಾರ—21ನೇ ಟಿಪ್ಪಣಿ ನೋಡಿ—ವೇದಾಂತ ಜೀವನವೇ ಶೃಂಗಾರಮಯ; ಕವಿಗಳು ಕಾವ್ಯಗಳಲ್ಲಿ ವರ್ಣಿಸುವ ಶೃಂಗಾರ ಸಾಮಾನ್ಯವಾಗಿ ಮೋಹ, ಶರೀರ ಮೋಹ, ಆತ್ಮ ಮೋಹವಲ್ಲ—ಹಾಗಿದ್ದರೂ ಪತಿಪತ್ನಿಯರು ಯಾವಾಗಲೂ ಒಟ್ಟಿಗಿರುವುದಕ್ಕಿಂತಲೂ ನಡುನಡುವೆ ಬಿಟ್ಟಿದ್ದರೆ ಶೃಂಗಾರವು ಬೆಳೆಯುವುದೆಂದಿರುವರು. ಇದು ಅನುಭವದಮಾತು. ಒಟ್ಟಿಗಿರುವಾಗ ಇರುವ ಪ್ರೇಮ ಸಂಭೋಗ ಶೃಂಗಾರ; ಬಿಟ್ಟಿರುವಾಗಿರುವ ಪ್ರೇಮ ವಿಪ್ರಲಂಬ ಶೃಂಗಾರ. ಆತ್ಮ ಪ್ರೇಮದಲ್ಲೂ ಈ ಎರಡುತೆರನಾದ ಶೃಂಗಾರವುಂಟು. ಯೋಗದಲ್ಲಿ ಪರಮಾತ್ಮನನ್ನು ಅನುಭವಿಸುವುದು ಸಂಭೋಗ ಶೃಂಗಾರ; ವ್ಯುತ್ಥಾನದೆಶೆಯಲ್ಲಿ ಅದಕ್ಕೆ ಮತ್ತೆಮತ್ತೆ ಪಂಬಲಿಸುವುದು ಪ್ರವಿಲಂಬ ಶೃಂಗಾರ. ವೇದದಲ್ಲಿ ನಾನಾವಿಧ ಉಪಾಸನೆಯನ್ನು ಹೇಳಿರುವುದು ಸಂಭೋಗ ಶೃಂಗಾರಕ್ಕಾಗಿ. ಎರಡು ವಿಧ ಉಪಾಸನೆಯ ಮಧ್ಯೆ ಪ್ರವಿಲಂಬ ಶೃಂಗಾರವು ಸ್ವಾಭಾವಿಕವಾಗಿ, ಉಪದೇಶದಲ್ಲಿ ವೇದಾಂತಾನುಸಂಧಾನ

ದಲ್ಲಿ ನಿಂತಿದೆ ವೇದದ ಅನೇಕ ಭಾಗಗಳು. 26 ನೇ ಪದ್ಯವ್ಯಾಖ್ಯಾನ ನೋಡಿ—

ಪುಟ ೨೮೧ — ಟಿಪ್ಪಣಿ ೨೪

ಶಿಂಶುಮಾರ ಚಕ್ರ— ನಕ್ಷತ್ರಮಂಡಲದಲ್ಲಿ ದಕ್ಷಿಣೋತ್ತರವಾಗಿ ಒಂದು ಜ್ಯೋತಿರ್ಮಂಡಲವು ಕಾಣುವುದನ್ನು ಎಲ್ಲರೂ ನೋಡಬಹುದು. ಇದನ್ನು ದಿಟ್ಟಿಸಿ ನೋಡಿದರೆ ಅದು ಮೊಸಳೆ ಆಕಾರದಲ್ಲಿದೆ. ಈಗಿನ ವಿಜ್ಞಾನವು ಇದನ್ನು milky way ಎನ್ನುತ್ತಿದೆ. ನಮ್ಮವರು ಇದನ್ನು ಶಿಂಶುಮಾರಚಕ್ರವೆಂದು ಕರೆಯುವರು. ಶಿಂಶುಮಾರವೆಂದರೆ ಮೊಸಳೆ. ಇದನ್ನು ಪರಾಶರರು ವಿಷ್ಣುಪುರಾಣ II–10 ನೇ ಅಧ್ಯಾಯದಲ್ಲಿ ವರ್ಣಿಸಿರುವರು, ಈ ಚಕ್ರದಿಂದಲೇ ಪ್ರಪಂಚೋತ್ಪತ್ತಿಯೆಂದು ಆಧುನಿಕ ವೈಜ್ಞಾನಿಕರು ಹೇಳುತ್ತಿರುವರು. ನಮ್ಮ ಋಷಿಗಳೂ ಅದನ್ನೇ ಬೇರೆ ರೀತಿಯಲ್ಲಿ ಹೇಳಿರುವರು. ಈ ಚಕ್ರವನ್ನೂ ವ್ಯಾಪಿಸಿಕೊಂಡು ಪರಮಾತ್ಮ ಧರ್ಮ ಪ್ರವರ್ತಕನಾಗಿರುವನು. ಇದನ್ನೇ ವಿಷ್ಣು ಸಹಸ್ರನಾಮಗಳಲ್ಲಿ 437–450 ನಾಮಗಳಲ್ಲಿ ಭೀಷ್ಮರು ವರ್ಣಿಸಿರುವರು.

ಶುದ್ಧಾ ಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
i	1	ಪಂದ್ಯ	ಪದ್ಯ
i	9	ಅಕ್ಷಮ	ಅಕ್ಷಯ
i	10	ಸೂತ್ತಲೂ	ಸುತ್ತಲೂ
i	14	ವಾಖ್ಯಾನ	ವ್ಯಾಖ್ಯಾನ
i	21	ಕನಿತು	ಕಳಿತು
i	22	ಆಂಡಾವರ್ಮ	ಆಂಡವರ್ಮ
ii	5	ಕೊಟ್ಟರು	ಕೊಟ್ಟರು
ii	5	ನಮಗೆ	ನಮಗೇ
ii	8	ಕಬ್ಬಿಗಳ	ಕಬ್ಬಿಗರ
ii	20	ಎಬ್ಬಿಸುಷಂತೆ	ಎಬ್ಬಿಸುವಂತೆ
iv	3	ಅಭಾಸ	ಆಭಾಸ
1	18	ಮಾಸದಲ್ಲಿ	ಮಾನದಲ್ಲಿ
4	26	ಪ್ರೇಮಂಧನಾಗಿ	ಪ್ರೇಮಾಂಧನಾಗಿ
5	19	ಕುಮಾರ್ಕ	ಕುಮರ್ಕ
6	10	ವಾಂ I, 6, 6	ಛಾ I, 6, 6
6	24	(ಇ–ಮಾ)	(ಇ–ಮೂ)
10	9	18	10
11	8	ಶೀಳ್ . . .	ಶೀರ್ . . .
14	24	ಮತ್ಕಾಂತಿ	ಯತ್ಕಾಂತಿ
16	1	ಯಥಾsದನೋ	ಯಥಾsಧನೋ
29	28	ಜೀವನಡಲ್ಲಿ	ಜೀವನದಲ್ಲಿ
36	27	ನಗರೆ	ನಗರೇ
38	20	ಸಂಕೀರ್ತ	ಸಂಕೀರ್ತನ
47	21	ಪ್ಯಾಕರಣ	ವ್ಯಾಕರಣ
49	3	ಅವನ್ನು	ಅದನ್ನು
58	17	ಸ್ವೀಕರಿಸಿನ	ಸ್ವೀಕರಿಸಿದ
69	14	ಅವರೆಲ್ಲರನ್ನೂ	ಅವರೆಲ್ಲರನ್ನೂ

ಪುಟ	ಪಂಕ್ತಿ	ಅಶುದ್ಧ	ಶುದ್ಧ
73	21	ಯಶೋಜಾ	ಯಶೋದಾ
75	17	ನೋದ್ಯರ್ಹ	ನೋದ್ಪರ್ಹ
80	21	ಬಂದು	ಒಂದು
94	18	ಶಿರೈಸ್ತುಂ	ಶರೈಸ್ತು
98	24	ಕೇಳಿದರು	ಕೇಳಿದಳು
100	11	ಕಲೇರತ್ವಾಘಸ್ಯ	ಕಲೇರಘೌಘಸ್ಯ
101	12	ಶುಷ್ಯಜ್ಞಾನವಲ್ಲ	ಶುಷ್ಕಜ್ಞಾನವಲ್ಲ
107	12	ತಾನೇ . . . ತಾನೇ	ತಾನೇ . . .
113	2	ಭಗವತ್ಪಾಗತಂತ್ರ್ಯಾದಿಃ	ಭಗವತ್ಪಾರತಂತ್ರ್ಯಾದಿಃ
129	11	ಕಾರ್ಯ	ಕಾರ್ಯಂ
130	25	ಅಜಯಃ	ಅಜಯ್ಯಃ
137	24	ಹೊರಟ	ಹೊರಟರೆ
138	5	ಮಾಡುತ್ತಿವೆ	ಮಾಡುತ್ತವೆ
138	7	ಎಲೆ; ಗೋಪಿ	; "ಎಲೆ, ಗೋಪಿ
139	16	ಬಂದು	ಒಂದು
139	29	ಸಹಸೌಭನಕ್ತು	ಸಹನೌಭುನಕ್ತು
140	20	ಮದುವಿದ್ವಿಷೇ	ಮಧುವಿದ್ವಿಷೇ
141	1	ಮತ್ತೊಂದರ್ಥದ "	ಮತ್ತೊಂದರ್ಥದಲ್ಲಿ "
144	1	ಯತ್	ಯತಿಃ
144	26	ಪಂಗಯಕ್ಕರ್ಣಣ್ಣನೈ	ಪಂಗಯಕ್ಕಣ್ಣನೈ
144	32	ಕಂಸವದೇವರಿವಿಗೂ	ಕಂಸವಧೆವರಿವಿಗೂ
145	6	ಒಟ್ಟನಲ್ಲಿ	ಒಟ್ಟನಲ್ಲಿ
146	12	ಶಂಗಳ್ಳನೀರ್	ಶಂಗಳ್ಳನೀರ್
165	13	ಇತಿ ಸ್ಮರ	ಇತಿಮಾಂಸ್ಮರ
181	7	ರಾಧವರನ್ನು	ರಾದವರನ್ನು
193	24	ಸುರಭಿ–ವಿಸ್ತೃತ–	ಸುರಭಿ–ದೃಶ್ಯ–ವಿಸ್ತೃತ
194	2	ಟಪ್ಪಣಿ 21	ಟಪ್ಪಣಿ ೨೨
194	25	ಕಾರ್ವಾಸ	ಕಾರ್ಪಾಸ
195	1	ಟಪ್ಪಣಿ 22	ಟಪ್ಪಣಿ ೨೩
219	12	ಉಲಕೀಲ್	ಉಲಕಿನಿಲ್
219	26	ಆನಂದತುಂದಿಲ	ಅನಂದತಂದಿಲ

ಪುಟ	ಪಂಕ್ತಿ	ಅಶುದ್ಧ	ಶುದ್ಧ
223	4	ಶ್ವರಣ್ಣೌ	ಶ್ಚರಣ್ಣೌ
226	24	ಅರ್ಥ	ಅರ್ಥ
229	24	ತೋರಮ್ಮೆಲ	ತೋರೆಮ್ಮೆಲ
230	1	ನಮ್ಮರೇ	ನಮ್ಮವರೇ
230	24	ಪದ್ಯಗಳಲ್ಲ	ಪದ್ಯಗಳಲ್ಲಿ
231	28	ಚಿಲುವೆನ್ನ	ಚೆಲುವನ್ನ
232	10	ಸೌಂದರ್ಯಬಂದು	ಸೌಂದರ್ಯಬಂತು
232	10	ಕಂಬನಿತುಂಬಿದ	ಕಂಬನಿತುಂಬಿತು
232	16	ಏಕೆಃ	ಏಕಃ
232	23	ಹಿರಣ್ಯದಂಷ್ಟ್ರೋ	ಹಿರಣ್ಯದಂಷ್ಟ್ರೋ
233	9	ಪುಡೈಪ	ಪುಡೈಪ್ಪ
233	13	ಪರ್ವತಾತಿವ	ಪರ್ವತಾದಿವ
233	24	ಎಂಬರ್	ಉಂಬರ್
233	30	ಪರಿಸ್ಫುಟರ್	ಪರಿಸ್ಫುಟತ್
234	1	ವೃಷಗಿರಿ	ವೃಷಗಿರೀ
234	2	ದೃಶ್ಯತೆ	ದೃಶ್ಯತೇ
234	12	ದುರ್ದಾಹೃದಯೇ	ದುರ್ದಾಂತಹೃದಯೇ
235	15	ಎದರಿ	ಉದರಿ
235	15	ಮೂರರಿ	ಮೂರಿ
235	24	ನನ್ನ	ನಿನ್ನ
236	1	ಅಲಂಕಾರಶಾಸ	ಅಲಂಕಾರ ಶಾಸ್ತ್ರ
236	2	ಯಾವುದನ್ನೂ	ಯಾವುದನ್ನು
236	3	ಸಾಧ್ಯ	ಸಾಧ್ಯ ?
236	27	ನ	ನಃ
236	27	ಭೋಗ್ಯ	ಭೋಗ್ಯಃ
237	25	ಸ್ರಾಜಾಇತಿ	ಸೃಜಾಇತಿ
237	26	ಪ್ರಜಾಯೇಯೆಂತಿ	ಪ್ರಜಾಯೇಯೇತಿ
238	2	ಮೈತ್ರಾಯಣೀಮೋಪನಿಷತ್ತು	ಮೈತ್ರಾಯಣೀಯೋಪನಿಷತ್ತು.
238	6	ಅನುಪ್ರವಶ್ಯ	ಅನುಪ್ರವಿಶ್ಯ
239	2	ಭಾವಭಾವ್ಯೊ	ಭಾವಭಾವ್ಯೋ

ಪುಟ	ಪಂಕ್ತಿ	ಅಶುದ್ಧ	ಶುದ್ಧ
239	6	ತುಂಬಿದ ಆವರಿಗೆ	ತುಂಬಿತು ಅವರಿಗೆ
239	7	ಅವರಿಗೆ,	ಅವರಿಗೆ ;
240	9	ಪರಿಪಾರೇಣ	ಪರಿವಾರೇಣ
240	15	ಮಾಡುವುಕ್ಕೊ	ಯಾವುದಕ್ಕೊ
240	16	ತೋಚಿದೆ	ತೋರಿತು
241	5	ಕುಡ್ಪೈಮಾ	ಕುಡ್ಪೈಯಾ
241	19	ಅಂದಕ್ಕೆ	ಅದಕ್ಕೆ
241	23	ಯಾಂ ವಂದೋ	ಯಾಂ ವಂದೋಂ
241	25	ಒಲಿದ ಮನಕ್ಕಾಗಿ	ಬಲಿದಮನಕ್ಕಾಗಿ
242	4	ನನ್ನ	ನಿನ್ನ
242	10	ಬಡದೆ	ಒಡದೆ
242	17	ಸೀತಗಾಗಿ	ಸೀತೆಗಾಗಿ
242	26	ವೆರಿಳದಾಯ್	ವೆರಿಂದಾಯ್
243	26	ದೃಷ್ಟ್ವಾವ್	ದೃಷ್ಟ್ವಾವ್
244	18	ನೇ ತ್ಯನ್ಯತ್	ನೇ ತ್ಯನ್ಯತ್
244	21	ಇಮತ್ತಾ	ಇಯತ್ತಾ
245	1	ನೇರನೇತಿ	ನೇತಿನೇತಿ
245	27	ಆಚಾರ್ಯನಂಥ	ಆಚಾರ್ಯನಾದ
246	15	ಮುನ್ನೆಲ	ಯುನ್ನೆಲ
246	17	ಮಾಂ	ಯಾಂ
246	27	ನರುಪ್ಪೆನ್ನ	ನೆರುಪ್ಪೆನ್ನ
248	27	ವಪಾ	ವವ್ಹಾ
248	30	ಅಜಿನೇ	ಆಜನೇ
248	30	ಕಸ್ಮಿ	ತಸ್ಮಿ
249	4	ದೇವರೂ ಪಣ್ಣಾಂ	ದೇವರೂಪಿಣ್ಯಾಂ
248	7	ಮಗನಲ್ಲದಿದ್ದರು	ಮಗನಲ್ಲದಿದ್ದರೂ
249	22	ಸಮಿಸಿದೆನೆಂದು	ನಮಿಸಿದೆನೆಂದು
249	27	ಶ್ರೀವತ್ಸಲಿಕ್ಷ್ಮಂ	ಶ್ರೀವತ್ಸಲಕ್ಷ್ಮಂ
251	2	ಕೆಟ್ಟುಯದು	ಕೇಟ್ಟುಮದು
251	2	ವಾಂಗು ವಸು	ವಾಂಗುವದು
254	9	ಅಲ್ಲಿ	ಅಲ್ಲ

ಪುಟ	ಪಂಕ್ತಿ	ಅಶುದ್ಧ	ಶುದ್ಧ
285	19	ಇತ್ಯಾಲಾಪಾಸ	ಇತ್ಯಾಲಾಪಾನ
254	14	ವಕುಳಾಭರದೇವ	ವಕುಳಾಭರಣ ದೇವ
254	15	ಮಾಲ್ ತೆಯ್ದಿನ್ರ	ಮಾಲ್ ತೆಯ್ದಿನ್ರ
255	8	ಕೊಂಡೆವನನ್ನ	ಕೊಂಡೆವವನನ್ನ
255	9	ಸುದಾರಸಮುರೀಮದ	ಸುಧಾರಸರಳುರೀಮಥ
255	11	ಕಿಮತಿ	ಕಿಮಪಿ
255	12	ಕಂ	ಕಿಂ
255	23	ತದನುಗಾಮಿತ್ವಾರ್	ತದುನುಗಾಮಿತ್ವಾತ್
256	5	ಕವಿಗಳಿದು	ಕವಿಗಳಿಗಿದು
258	13	ಇರುಕ್ಕು	ಇರುಕ್ಕುಂ
260	18	ಮೂರು	ನೂರು
260	20	ಬೇಕೆನುವುದೇ	ಬೇಕೆನ್ನುವುದೇ
261	8	ಮಳುಗಿರುವೆವು	ಮುಳುಗಿರುವೆವು
261	14	ಕೇಟ್ಟಯೇಲ್	ಕೇಟ್ಟೀಯೇಲ್
262	6	ಬಲದ	ಒಲಿದ!
262	7	ಬಲಿಬಾತಳಿನ	ಬಲಿತಬಾಳಿನ
262	23	ಮಗ	ನಮಗೆ
263	11	ನರಾಥಮಾ	ನರಾಥಮಾಃ
263	12	ಯಾಪಹ್ಯತ	ಯಾಪಹೃತ
264	2	ಆದು	ಅದು ಅದುವೇ
265	7	ಸೂದೀ	ಸುಧೀ
265	9	ಹಂತತ್ರತ್ಪಕ್ಷ	ಹಂತ ತ್ವತ್ಪಕ್ಷ
265	16	ನೀನೊಬ್ಬನಲ್ಲಿ	ನೀನೊಬ್ಬನಲ್ಲ
266	9	ಕಾರ್ಚಿ	ಕಾರ್ಚಾ
267	6	ದಯೆಯಿಲ್ಲದ	ದಯೆಯಿಲ್ಲ
269	10	(ಕನಕಾಂಗದಿಲ)	(ಕನಕಾಂಗದೀ)
270	9	ಪಾರುಷಂ	ಪೌರುಷಂ
270	22	ಕಾಣುತ್ತಿತ್ತು	ಕಾಡುತ್ತಿತ್ತು
273	12	ಪ್ರಪನನಾಗಿದ್ದವ	ಪ್ರಪನ್ನನಾಗಿದ್ದವ
274	13	ಇಲ್ಲ	ಇಲ್ಲಿ
274	24	ಪರಭಕ್ತಿ ಭಕ್ತಿ	ಪರಭಕ್ತಿ

ಪುಟ	ಪಂಕ್ತಿ	ಅಶುದ್ಧ	ಶುದ್ಧ
274	25	ಪರಮಭಕ್ತಿ.	ಪರಮಭಕ್ತಿ—
274	26	ಜಿನಿತ	ಜನಿತ
275	23	ಕರವೈಗಳಿ	ಕರವೈಗಳ್
276	13	ಮಾಂ	ಯಾಂ
276	14	ಉಡೈಯೋ	ಉಡೈಯೋಂ
276	15	ಹೊಂದೆರುವೆವು	ಹೊಂದಿರುವೆವು
278	26	ಉಪದೇಕ್ಷಂತಿ	ಉಪದೇಕ್ಷ್ಯಂತಿ
279	29	ಗುತಾ	ಗುರೌ
281	12	ಶಿಂಶುಮಾರಚಕ್ರದಂತೆ	ಶಿಂಶುಮಾರಚಕ್ರದಂತೆ (ಟಿಪ್ಪಣಿ ೨೪)
281	16	ತಿತ್ತಂ	ತಿತ್ತಂ
281	26	ಬಿನ್ನದ	ಚಿನ್ನದ
282	7	ಕೆಟ್ಟುಂ	ಕೇಟ್ಟುಂ
282	25	ನಿಯಚ್ಛಂತಸ್ತನ್ಮಿ	ನಿಯಚ್ಛಂತಸ್ತಸ್ಮಿ
283	4	ಹತಾ	ಹರೌ
283	13	ವಿಪಿತಾನಿ	ವಿಹಿತಾನಿ
283	16	ಹೊಣೆಯಿಲ್ಲದವನಿಗೆ ಮುಪ್ತ ದಾರಿಯಲಿ	ಹೊಣೆಯಿಲ್ಲವನಿಗೆ ಮುಕ್ತಿದಾರಿಯಲ್ಲಿ
284	13	ಕರುಣೆಸಿದನ್ನ	ಕರುಣಿಸದನ್ನು
284	26	ಆಚಾಸಾರ್	ಆಚಾರ್ಯಾತ್
284	28	ತೀತೇ	ನೀತ
284	28	ದೋಧಾದಿ ರೂಪಂ	ಬೋಧಾದಿರೂಪಂ
284	29	ತ್ವದ್ಯೋತೈಕ	ತ್ವದ್ಭೋಗೈಕ
285	3	ಲೇನು	ಲೆಂದು
285	3	ಹಂಬಲಿಸುತಹೆನಯ್ಯ	ಹಂಬಲಿಸುತಿಹೆನಯ್ಯ
285	11	ಬಾಳುನನು	ಬಾಳುವೆನು
285	15	ತವಗಿಸುವುದು	ತವಕಿಸುವುದು
285	15	ನಿರ್ವಾಜ	ನಿರ್ವ್ಯಾಜ
285	18	ಶಕುಶಲಿ	ಕುಶಲಿ
251	14	ಆರುವೆ	ಆರು